ಮೇ ೧೯೭೮

ಕಸ್ತೂರಿ

ವಸಂತ ಸಂಚಿಕೆ




Nestlé
NESCAFÉ
instant coffee
ಸದಾ ಲವಲವಿಕೆಯಿಂದಿರಲು
ನೆಸ್‌ಕಾಫೆ®
100% ಶುದ್ಧವಾದ ಕಾಫಿಯಿಂದ
ತಯಾರಿಸಲ್ಪಟ್ಟ ಏಕಮಾತ್ರ ಇನ್‌ಸ್ಟೆಂಟ್ ಕಾಫಿ
NS/CAS-1/78 KAN

ಕಸ್ತೂರಿ

ವ್ಯವಸ್ಥಾಪಕ ಸಂಪಾದಕ :
ಎಚ್. ಆರ್. ಬಸವರಾಜ್

ಸಂಪಾದಕ :
ಪ. ಸು. ಭಟ್ಟ

ಕಲೆ :
ಕೆ. ಬಿ. ಕುಲಕರ್ಣಿ

ಮುಖಪುಟ :
ರಾಸಲೀಲಾ ಬಸೋಹಲಿ ಶೈಲಿಯಲ್ಲಿ–
ಪ್ರತಿಕೃತಿ: ಕೆ. ಬಿ. ಕುಲಕರ್ಣಿ

ಚಂದಾ ದರ:

೧ ವರ್ಷ	(ಅಂಚೆ ಸೇರಿ)	ರೂ. ೧೫-೦೦
೨ ವರ್ಷ	,,	ರೂ. ೨೫-೦೦
೩ ವರ್ಷ	,,	ರೂ. ೩೪-೦೦
ಅರ್ಧ ವರ್ಷ	,,	ರೂ. ೭-೫೦

KASTURI May 1978

ಬೆಳಕಿಂಡಿ

ಸ್ವಾತಂತ್ರ್ಯ ಸಿಕ್ಕಾಗ ಆಗಿತ್ತು ಮಧ್ಯರಾತ್ರಿ ವರುಷ ಮೂವತ್ತು ಕಳೆದರೂ ಬೆಳಗಾಗಲಿಲ್ಲ ಪೂರ್ತಿ.

–ತಮಿಳು ಮೂಲ: ರಂಗನಾಥನ್

ಸುದೀರ್ಘ ಜೀವನ ಒಳ್ಳೆಯದಾಗಿರಲೇ ಬೇಕೆಂದಿಲ್ಲ; ಆದರೆ ಒಳ್ಳೆಯ ಜೀವನ ನಿಶ್ಚಿತವಾಗಿಯೂ ದೀರ್ಘವಾಗಿರುತ್ತದೆ.

–ಬೆಂಜಮಿನ್ ಫ್ರಾಂಕ್‌ಲಿನ್

ಚಿಕ್ಕಮಕ್ಕಳ ಕೈಲಿ ಚಪ್ಪಲಿಗಿಂತಲೂ ಬಹು ಬೇಗ ಸವೆಯುವ ಪದಾರ್ಥಗಳೆಂದರೆ ತಂದೆ-ತಾಯಿಗಳು ಮಾತ್ರ.

–ಜಾನ್ ಪ್ಲಾಂಪ್

ಕೆಲವರಿಗೆ ಪುಸ್ತಕಗಳನ್ನು ಸಂಗ್ರಹಿಸುವ ಹವ್ಯಾಸ. ಇನ್ನು ಕೆಲವರಿಗೆ ಹಳಗಾಲದ ವಸ್ತುಗಳನ್ನೊ ಅಂಚೆ ಚೀಟಿಗಳನ್ನೊ ಅಥವಾ ಅಪರೂಪವಾದ ಯಾವುದೇ ವಸ್ತುವನ್ನೊ ಸಂಗ್ರಹಿಸುವ ಹವ್ಯಾಸ. ಆದರೆ ಮಧುರ ಸ್ಮೃತಿಗಳನ್ನು ಕಲಿಹಾಕುವ ಹವ್ಯಾಸ ಎಷ್ಟು ಜನರಿಗೆ ಇದ್ದೀತು?

–ಅನಾಮಿಕ

ಅತಿಪ್ರಸರಣದ ಭೀತಿಗೆ ಕಾರಣವೇ ಇಲ್ಲ
ಕಾಗದದ ಅಭಾವಕ್ಕೆ ಎಣೆಯೇ ಇಲ್ಲ.

–ದುರ್ಗಾದತ್ತ 'ದುರ್ಗೇಶ'

ಚಂದಾದಾರರಿಗೆ ಸೂಚನೆ

'ಕಸ್ತೂರಿ' ತಿಂಗಳ ಒಂದವೇ ದಿನಾಂಕದೊಳಗೇ ಪ್ರಕಟವಾಗುವುದು. ತಿಂಗಳ ೫ ನೇ ದಿನಾಂಕದೊಳಗೆ ತಲುಪದೇ ಹೋದರೆ ಚಂದಾದಾರರು ತಮ್ಮ ಟಪಾಲುಕಟ್ಟೆಯಲ್ಲಿ ಮೊದಲು ವಿಚಾರಿಸಿ ಅನಂತರ ನಮಗೆ ತಿಳಿಸಬೇಕು. ಪತ್ರವ್ಯವಹಾರ ಮಾಡುವಾಗ ಚಂದಾ ನಂಬರು ಹಾಕಿರಬೇಕು.

ಈ ಸಂಚಿಕೆಯಲ್ಲಿ

ಪುಸ್ತಕ ವಿಭಾಗ

ಕೆ. ಎಸ್. ನ.


ನನ್ನ ಸಹಕಾರದೊಡನೆ ಡಾ. ವರದರಾಜ ಹುಯಿಲಗೋಳ ಅವರು ಕೆ. ಎಸ್. ನ. ಬಗೆಗೆ ಬರೆದ ಲೇಖನ ಚೆನ್ನಾಗಿ ಬಂದಿದೆ. ಆದರೆ ಅದರಲ್ಲಿ ಒಂದು ತಪ್ಪಿದೆ. ನನ್ನ ತಂದೆಯವರ ವ್ಯಕ್ತಿತ್ವ ರೂಪಿಸುವಲ್ಲಿ ನಮ್ಮ ತಾಯಿಯವರ ತಂದೆಯ (ನಾಡಿಗ ಭೀಮರಾವ್) ಪ್ರಭಾವವೂ ಗಮನಾರ್ಹ. ಆದರೆ ಲೇಖನದಲ್ಲಿ ಒಂದು ಕಡೆ "ನಾಗಮ್ಮನವರ ತಂದೆ" ಎಂದು ಬಂದಿದೆ. ವಾಸ್ತವವಾಗಿ ಇದು "ವೆಂಕಮ್ಮನವರ ತಂದೆ" ಎಂದಿರಬೇಕು. ನನ್ನ ಸಂಬಂಧಿಕರಲ್ಲಿ ಉಟಾಗಬಹುದಾದ ತಪ್ಪು ಕಲ್ಪನೆ ನಿವಾರಿಸಲೆಂದು ಈ ತಿದ್ದುಪಡಿ ಸೂಚಿಸುತ್ತಿದ್ದೇನೆ.

ಬೆಂಗಳೂರು —ಕೆ. ಎನ್. ಹರಿಹರ

ಚತುರ್ವರ್ಣ ಸಮಸ್ಯೆ

ಎನ್. ಎಂ. ಸಿಂಘಿ ಅವರು 'ಸೈನ್ಸ್ ಟುಡೇ'ಯ ಆಗಸ್ಟ್ ೭೭ರ ಸಂಚಿಕೆಯಲ್ಲಿ ಪ್ರಸ್ತುತಪಡಿಸಿದ The Four Colour Conjucture a post-mortem ಎಂಬ ಲೇಖನದಲ್ಲಿ ಚತುರ್ವರ್ಣ ಸಮಸ್ಯೆಯ ಬಗ್ಗೆ ಈ ಮೊದಲೇ ಓದಿದ್ದೆ. ಜಿ. ಟಿ. ನಾರಾಯಣರಾಯರ ಲೇಖನ ಅವೇ ಅಭಿಪ್ರಾಯಗಳನ್ನೇ ಕನ್ನಡದಲ್ಲಿ ಸಮರ್ಥವಾಗಿ ವ್ಯಕ್ತಪಡಿಸುತ್ತದೆ. ಆದರೆ 'ಸೈಂಟಿಫಿಕ್ ಅಮೇರಿಕನ್' ಎಂಬ ಪತ್ರಿಕೆಯ ಎಪ್ರಿಲ್ ೧೯೭೫ರ ಸಂಚಿಕೆಯಲ್ಲಿ 'ಗಣಿತ ಸಮಸ್ಯೆಗಳು' ಎಂಬ ಶಿರೋನಾಮೆಯಡಿ ಎಂ. ಗಾರ್ಡಿನರ್ ಅವರು ಚತುರ್ವರ್ಣ ಪದ್ಧತಿಗನುಗುಣವಾಗಿ ಸಮತಲ ಆಕೃತಿಯೊಂದನ್ನು ಪ್ರಕಟಿಸಿದರು. ಆ ಚಿತ್ರವು ಕೇವಲ ಕುಚೋದ್ಯಕ್ಕಾಗಿ ಅಚ್ಚು ಹಾಕಲ್ಪಟ್ಟಿತ್ತೆಂಬುದಾಗಿ ಮುಂದಿನ ಸಂಚಿಕೆಯಲ್ಲೇ ಪ್ರಚುರಪಡಿಸಲಾಯಿತಾದರೂ, ವಾಸ್ತವಿಕವಾಗಿ ಕೇವಲ ನಾಲ್ಕು ಬಣ್ಣಗಳ ಬಳಕೆಯಿಂದ ಆ ಚಿತ್ರವನ್ನು 'ವರ್ಣರಂಜಿತ'ವಾಗಿ ಮಾಡಲು ಸಾಧ್ಯವಿಲ್ಲವೆನಿಸುತ್ತದೆ. 'ಕಸ್ತೂರಿ'ಯ ವಾಚಕರು ಈ ಬಗ್ಗೆ ಪ್ರಯತ್ನಿಸಿ, ತಮ್ಮ ಅಂತಿಮ ನಿರ್ಧಾರವನ್ನು ಮಂಡಿಸಬಹುದು. ಅಲ್ಲಿಯವರೆಗೆ ಪ್ರತಿಯೊಂದು ವಿಚಾರಕ್ಕೂ ಅಪವಾದವೊಂದಿರುವಂತೆ 'ಚತುರ್ವರ್ಣ ಸಮಸ್ಯೆ'ಗೂ ಅಪವಾದವೊಂದಿದೆಯೆಂಬ ತರ್ಕ ಚಾಲನೆಯಲ್ಲಿರಲಡ್ಡಿಯಿಲ್ಲವಷ್ಟೆ?

ಕೂಡ್ಲಿಗಿ —ಉಡುಪಿ ಅನಂತೇಶರಾವ್



ಗಾರ್ಡಿನರ್ ಚಿತ್ರ

ಬೇರೆಡೆ ಬಂದ ಕಥೆಗಳು

ಎಪ್ರಿಲ್ ಸಂಚಿಕೆಯಲ್ಲಿ ಪ್ರಕಟವಾದ 'ತಿರುವು ಮುರುವು' ಕಥೆ, 'ಸಂಯುಕ್ತ ಕರ್ನಾಟಕ' ಪತ್ರಿಕೆಯಲ್ಲಿ 'ಅತಿಥಿ' ಎಂಬ ಹೆಸರಿನಲ್ಲಿ ಪ್ರಕಟವಾಗಿತ್ತು. ಇಂಥ ಪ್ರಮಾದಕ್ಕೆ ಎಡೆ ಮಾಡಿಕೊಡಬಾರದಾಗಿ ವಿನಂತಿ. ಮತ್ತೊಂದು ಲೇಖನ 'ಕಾಮುಕ ಕರಡಿ'ಯನ್ನು ಈ ಮೊದಲು 'ಕಸ್ತೂರಿ'ಯಲ್ಲಿಯೇ ಓದಿದ ನೆನಪು.

ಗದಗ —ಗಿರಿಧರ ದೇಸಾಯಿ

ಎಪ್ರಿಲ್ 'ಕಸ್ತೂರಿ'ಯಲ್ಲಿ ಬಂದ 'ಇನ್ನೊಬ್ಬ ಶೈಲಾಕ್' ಹಾಗೂ 'ತಿರುವು ಮುರುವು' ಎಂಬ ಎರಡೂ ಕಥೆಗಳು ಈಗಾಗಲೇ ಬೇರೆ ಕಡೆ (ಬಹುಶಃ 'ಪ್ರಪಂಚ'ದಲ್ಲಿ) ಪ್ರಕಟಗೊಂಡದ್ದನ್ನು ನಾನು ಓದಿದ್ದೇನೆ. ಒಮ್ಮೆ ಪ್ರಕಟಗೊಂಡ ಲೇಖನಗಳನ್ನು 'ಕಸ್ತೂರಿ' ಸ್ವೀಕರಿಸುವದರಲ್ಲಿ ಅಭ್ಯಂತರವೇನೂ ಇಲ್ಲವೇ? ಅಥವಾ ತಿಳಿಯದೆಯೇ ಹಾಗಾಗಿದೆಯೆ?

ಕಮತಗಿ —ರೂಪಾ

[‘ಇನ್ನೊಬ್ಬ ಶೈಲಾಕ್’ ಮತ್ತು ‘ತಿರುವು ಮುರುವು’ ಎರಡೂ ‘ಸಂಯುಕ್ತ ಕರ್ನಾಟಕ’ ಸಾಪ್ತಾಹಿಕ ಮಂಜರಿಯಲ್ಲಿ ಬಂದುದು ನಮ್ಮ ಗಮನಕ್ಕೆ ಬಂದಿದೆ. ‘ಅತಿಥಿ’ ಬರುವ ಹೊತ್ತಿಗಾಗಲೇ ‘ಕಸ್ತೂರಿ’ಯ ‘ತಿರುವು ಮುರುವು’ ಪುಟಗಳು ಮುದ್ರಿತವಾಗಿದ್ದುವು. ಆದರೆ ‘ಇನ್ನೊಬ್ಬ ಶೈಲಾಕ್’ ಸಂ. ಕ. ದಲ್ಲಿ ಬಂದುದು ಗೊತ್ತಾದ ನಂತರವೂ ನಾವು ಪ್ರಕಟಿಸಿದ್ದೇವೆ. ಅದಕ್ಕೆ ಕಾರಣ ‘ಕಸ್ತೂರಿ’ ಮೂಲ ಲೇಖಕರಿಂದ ಅನುಮತಿ ಪಡೆದಿದೆಯಾದರೆ ಸಂ.ಕ.ಕ್ಕಾಗಿ ಬರೆದವರು ಮೂಲವನ್ನು ಸ್ಮರಿಸುವ ಗೋಜಿಗೆ ಸಹ ಹೋಗದೆ ಅದು ತಮ್ಮ ಸ್ವಂತ ಕೃತಿಯಂತೆ ಪ್ರಕಟಿಸಿದ್ದಾರೆ.

‘ಕಾಮುಕ ಕರಡಿ’ ಈ ಮೊದಲು ‘ಕಸ್ತೂರಿ’ಯಲ್ಲಂತೂ ಬಂದಿಲ್ಲ.

‘ಕಸ್ತೂರಿ’ ಡೈಜೆಸ್ಟ್ ಆದುದರಿಂದ ಬೇರೆಡೆ ಬಂದ ಲೇಖನಗಳನ್ನು ಖಂಡಿತ ಪುನಃ ಪ್ರಕಟಿಸಬಲ್ಲದು. ಆದರೆ ಸಾಮಾನ್ಯವಾಗಿ ವ್ಯಾಪಕ ಪ್ರಸಾರವುಳ್ಳ ಪತ್ರಿಕೆಗಳಲ್ಲಿ ಬಂದ ಲೇಖನಗಳನ್ನು ‘ಕಸ್ತೂರಿ’ ಮತ್ತೆತ್ತಿ ಪ್ರಕಟಿಸುವುದಿಲ್ಲ.
—ಸಂ.]

ಪರಿಣಾಮಕಾರಿ ಲೇಖನ

ಏಪ್ರಿಲ್ ಸಂಚಿಕೆಯಲ್ಲಿ ‘ವಿಚಾರಿ’ಯವರು ಬರೆದ, ‘ಭ್ರಷ್ಟಾಚಾರ ಸಾಮಾಜಿಕ ದೌರ್ಬಲ್ಯವೆ?’ ಎಂಬ ಲೇಖನಕ್ಕೆ ಈ ಪತ್ರ ಪ್ರತಿಕ್ರಿಯೆ. ಅದರಲ್ಲಿ ಲೇಖಕರು ಸರ್ಕಾರಿ ಯಂತ್ರದ ದುರುಪಯೋಗವನ್ನು ಪ್ರತಿಭಟಿಸಲು ಸೂಕ್ತ ಕರೆ ನೀಡಿದ್ದಾರೆ. ಧನ್ಯವಾದಗಳು.

ಈ ಸಲಹೆಯನ್ನು ಕಾರ್ಯಗತಗೊಳಿಸಲು ಧಾರವಾಡ ನಗರದ ಛಾತ್ರ-ಯುವ ಸಂಘರ್ಷ ವಾಹನಿಯು ಕೆಲ ದಿನಗಳಿಂದ ಪ್ರಯತ್ನಿಸುತ್ತಿದ್ದು, ವ್ಯಾಪಕವಾಗಿ ನಡೆದಿರುವ ಈ ದುರುಪಯೋಗವನ್ನು ಪರಿಣಾಮಕಾರಿಯಾಗಿ ತಡೆಗಟ್ಟುವ ವಿಧಾನಗಳ ಬಗೆಗೆ ಯೋಚನೆ ನಡೆದಿದೆ. ಅದು ಸದ್ಯ ಕಾನೂನಿನ ಅಂಶಗಳ ಪರಿಶೀಲನೆ, ದುರುಪಯೋಗಕ್ಕೊಳಗಾದ ವಾಹನಗಳ ಸಮೀಕ್ಷೆ ಮೊದಲಾದ ಪ್ರಾಥಮಿಕ ಅಂಶಗಳ ಹಂತದಲ್ಲಿದೆ. ಇನ್ನು ಎರಡು ತಿಂಗಳಷ್ಟರಲ್ಲಿ ಈ ದುರುಪಯೋಗವನ್ನು ಪರಿಣಾಮಕಾರಿಯಾಗಿ ತಡೆಗಟ್ಟುವ ಬಗೆಗೆ ನಾವು ಸಂಪೂರ್ಣವಾಗಿ ಆತ್ಮವಿಶ್ವಾಸ ಹೊಂದಿದ್ದೇವೆ. ಏತನ್ಮಧ್ಯೆ ಸಾರ್ವಜನಿಕರು ಹಾಗೂ ಬೇರೆ ಸಾಮಾಜಿಕ ಸಂಸ್ಥೆಗಳ ಸಹಕಾರವನ್ನು ನಿರೀಕ್ಷಿಸುತ್ತೇವೆ.

ಧಾರವಾಡ —ಟಿ. ಎಚ್. ಮಿಸ್ಕಿನ್
ಸಂಯೋಜಕ
ಛಾತ್ರಯುವಸಂಘರ್ಷವಾಹಿನಿ, ಧಾರವಾಡ.

ಮೂಢ ನಂಬಿಕೆಗಳು

ಏಪ್ರಿಲ್ ‘ಕಸ್ತೂರಿ’ ಮೌಲಿಕ ಲೇಖನಗಳನ್ನೊಳಗೊಂಡು ಹೊರಬಂದಿದೆ. ಕುತೂಹಲಕಾರಿಯಾದ ‘ಕಾಮುಕ ಕರಡಿ...’ ಅನುಭವ ಲೇಖನ ನೋಡಿ ಓದಿ ಸೋಜಿಗವಾಯಿತು. ಡಾ. ನಾರಾಯಣ ಮಹಿಷಿ ಅವರ ‘ಕೂದಲಿನಲ್ಲಿ ಇತಿಹಾಸ’ ಒಂದು ಚಿಕ್ಕ ಲೇಖನ. ಈ ಬಗ್ಗೆ ಆಗಲೆ ಸಾಕಷ್ಟು ಶೋಧಗಳಾಗಿದ್ದು ಇನ್ನೂ ವಿಶಾಲವಾಗಿ ಬರೆಯಬಹುದಿತ್ತು. ಡಾ. ಜಿ. ಆರ್. ರಂಗಸ್ವಾಮಯ್ಯನವರ ‘ಮೂರ್ತಿ ಚಿಕ್ಕದಾದರೂ’ ಸ್ವಾರಸ್ಯಕರ ಸುಂದರ ಲೇಖನ. ಇನ್ನು ‘ಲಕ್ವ ಹೊಡೆಯಿತು’ ಒಂದು ಅಪರೂಪವಾದ ಲೇಖನ. ಗಂಭೀರ ಪರಿಸ್ಥಿತಿಯ ಈ ಕಾಯಿಲೆಯ ಬಗ್ಗೆ ಲೇಖಕರು ಸರಳ ಮತ್ತು ಪ್ರೌಢವಾಗಿ ವಿವರಿಸಿದ್ದಾರೆ. ವಿಜ್ಞಾನ ಬೆಳೆದಿದ್ದರೂ ಲಕ್ವ ಹೊಡೆದ ರೋಗಿಗಳು ತಮ್ಮ ಮೂಢ ನಂಬಿಕೆಗಳಿಂದ ದೇವರು, ದೆವ್ವ, ಮಾಟಗಳನ್ನು ನಂಬಿಕೊಂಡು ಆಸ್ಪತ್ರೆಗೆ ಬರದಿರುವುದರಿಂದ ಇಂತಹ ರೋಗಿಗಳು ವಿಜ್ಞಾನದ ಕಣ್ಣಿಗೆ ಬೀಳುವುದು ವಿರಳ. ಇಂತಹ ರೋಗಿಗಳ ಮೂಢನಂಬಿಕೆಯನ್ನು ಬಂಡವಾಳವಾಗಿಟ್ಟುಕೊಂಡು, ಅವರನ್ನು ವಿಜ್ಞಾನದಿಂದ ವಂಚಿಸಿ, ಅವರನ್ನೇ ಶೋಷಿಸುತ್ತಿರುವ ಢೋಂಗಿ ವೈದ್ಯರು ಸಮಾಜದಲ್ಲಿ ದೊಡ್ಡ ಸಂಖ್ಯೆಯಲ್ಲಿದ್ದಾರೆ.

ದಾವಣಗೆರೆ —ಡಾ. ಮಹಬಲರಾಜು ಡಿ. ಕೆ.

ಕಸ್ತೂರಿ

ಸಂಚಿಕೆ : ೯ ಕಸ್ತೂರಿ, ವಸಂತ ಸಂಚಿಕೆ, ಮೇ ೧೯೭೮ ವರ್ಷ : ೨೨

ತೆರೆದ ಹೃದಯ

ಬಹು ಕಾಲದ ಹಿಂದಿನ ಮಾತು. ಒಂದು ರಾಜ್ಯದಲ್ಲಿ ಓರ್ವ ಬಡವನಿದ್ದ. ಆ ರಾಜ್ಯದ ರಾಜನನ್ನು ತನ್ನ ಮನೆಗೆ ಆಹ್ವಾನಿಸಿ ಆತಿಥ್ಯ ನೀಡಬೇಕೆಂದು ಆತನ ಇಚ್ಛೆಯಾಗಿತ್ತು. ರಾಜೋಚಿತವಾದ ಸ್ವಾಗತ ಹಾಗೂ ಆತಿಥ್ಯ ನೀಡುವಷ್ಟು ಆರ್ಥಿಕ ಸ್ಥಿತಿ ಆತನದಿರಲಿಲ್ಲ. ಆದಾಗ್ಯೂ ಆತನು ರಾಜನಿಗೆ ತನ್ನಿಚ್ಛೆಯನ್ನು ನಿವೇದಿಸಿದ. ರಾಜನು ಕೂಡಲೇ ಸಂತಸದಿಂದ ಆ ಬಡವನ ಆತಿಥ್ಯವನ್ನು ಸ್ವೀಕರಿಸಲು ಒಪ್ಪಿದ.

ಆ ಬಡವ ಒಂದು ಚಿಕ್ಕ ಗುಡಿಸಲಲ್ಲಿ ಜೀವಿಸುತ್ತಿದ್ದನೆಂದು ರಾಜನಿಗೆ ತಿಳಿದಿತ್ತು. ಆದ್ದರಿಂದ

ಸಿದ. ಅವರು ರಾಜೋಚಿತ ಸ್ವಾಗತಕ್ಕೆ ಅವಶ್ಯಕವಾದ ಸಕಲ ಸಿದ್ಧತೆಗಳನ್ನೂ ಮಾಡಿದರು. ಅದನ್ನು ನೋಡಿದವರಿಗೆ ಒಬ್ಬ ರಾಜ ಇನ್ನೊಬ್ಬ ರಾಜನಿಗೆ ಸ್ವಾಗತಿಸಲು ಸಿದ್ಧತೆ ನಡೆಸಿದಂತೆಯೆ ಕಾಣುತ್ತಿತ್ತು. ಸಮಯಕ್ಕೆ ಸರಿಯಾಗಿ ರಾಜ ಬಂದು ಬಡವನ ಆತಿಥ್ಯವನ್ನು ಸ್ವೀಕರಿಸಿ ಆತನನ್ನು ಸಂತೃಪ್ತಿಗೊಳಿಸಿದ.

ಸಕಲ ಚರಾಚರರೆಲ್ಲರಿಗೂ ಅಧಿಪತಿಯಾದ ಆ ದಯಾಘನನೂ ಹಾಗೆಯೆ. ನೀವು ಆತನನ್ನು ಸ್ಮರಿಸುವುದೊಂದೇ ತಡ, ಆತ ಮನಸ್ಸಿನ ಕಲ್ಮಶವನ್ನೆಲ್ಲ ತೊಡೆದು ಹಾಕಿ ಶುಭ್ರವಾದ

ಜೀವನ ಅವ್ಯವಸ್ಥಿತವಾಗಿದ್ದರೆ ಅದನ್ನು ಸರಿಯಾಗಿ ವ್ಯವಸ್ಥೆಗೊಳಿಸಿದ ನಂತರವೇ ಹೃದಯ ಸಿಂಹಾಸನದ ಮೇಲೆ ಆರೂಢನಾಗುತ್ತಾನೆ. ಸರಿಯಾದ ದಿಕ್ಕುಗಾಣದಿದ್ದರೆ ಜೀವನಕ್ಕೊಂದು ದಿಕ್ಕನ್ನು ತೋರಿಸಿಯೆ ತೋರಿಸುತ್ತಾನೆ. ಭಗವಂತ ನಿಮಗಾಗಿ ಇಷ್ಟೆಲ್ಲಾ ಮಾಡಲು ಸಿದ್ಧನಾಗಿರುವಾಗ ನೀವು ಆ ಮಹಾಪ್ರಭುವನ್ನು ತೆರೆದ ಹೃದಯದಿಂದ ಸ್ವಾಗತಿಸುವಷ್ಟು ಶ್ರಮವನ್ನಾದರೂ ತೆಗೆದುಕೊಳ್ಳದಿದ್ದರೆ ಹೇಗೆ?

-ರಾಮಕೃಷ್ಣ ಪರಮಹಂಸ

ಭೇದವನರಿಯ...

ಚರ್ಚಿನಲ್ಲಿ ಪ್ರವಚನ ನಡಿದಿತ್ತು. ಕುರುಡರು ಕುಂಟರು, ಬಡವರು ಶ್ರೀಮಂತರು, ಜ್ಞಾನಿಗಳು ಅಜ್ಞಾನಿಗಳು ಹೀಗೆ ಎಲ್ಲರೂ ಪ್ರವಚನವನ್ನು ಏಕಾಗ್ರಚಿತ್ತದಿಂದ ಕೇಳುತ್ತಿದ್ದರು. ಪಾದ್ರಿ ಅವರತ್ತ ಬೊಟ್ಟು ಮಾಡಿ ತೋರಿಸಿ, "ನೋಡಿ, ಬಡವ–ಬಲ್ಲಿದ, ಜಾಣ–ದಡ್ಡ, ಪುಣ್ಯಶಾಲಿ,- ಪಾಪಜೀವಿ ಎಂದೆಲ್ಲಾ ಭೇದಗಳನ್ನು ನಮ್ಮ ಹಾಗೆ ಪರಮಾತ್ಮ ಎಣಿಸುವುದಿಲ್ಲ. ಅವನ ದೃಷ್ಟಿಯಲ್ಲಿ ಎಲ್ಲರೂ ಅಷ್ಟೆ" ಎಂದು ಹೇಳುತ್ತಿದ್ದಾಗ ತನ್ನ ಆಸನದ ಕೆಳಗೆ ಒಂದು ಮೊಂಬತ್ತಿ ಮುರಿದು ಬಿದ್ದಿದ್ದು ಲಕ್ಷ್ಯಕ್ಕೆ ಬಂತು. ಕೂಡಲೆ ಪಾದ್ರಿ ಅದನ್ನೆತ್ತಿಕೊಂಡು ಕಡ್ಡಿ ಗೀರಿ ಹೊತ್ತಿಸುವುದೇ ತಡ, ಮೇಣಬತ್ತಿ, ಜಾಜ್ವಲ್ಯಮಾನವಾಗಿ ಉರಿಯತೊಡಗಿತು. ಮೇಣಬತ್ತಿ ಮುರಿದಿದ್ದರೇನಾಯಿತು, ಅದು ಮೇಣಬತ್ತಿಯೆನ್ನುವುದು ಸುಳ್ಳೆ? ಅದು ಮುರಿದಿದ್ದರೂ ಅಷ್ಟೆ, ಮುರಿಯದಿದ್ದರೂ ಅಷ್ಟೆ. ಈ ದೃಷ್ಟಾಂತ ನನ್ನ ಮೇಲೆ ಅದ್ಭುತವಾದ ಪರಿಣಾಮವನ್ನುಂಟು ಮಾಡಿತು. ವಾಸ್ತವದಲ್ಲಿ ಪರಮಾತ್ಮ-ಕರುಣೆ ದಯೆಗಳ ಆಗರವೇ ಆಗಿದ್ದಾನೆ. ಯಾರೇ ತಮ್ಮ ಹೃದಯಸಂಪುಟವನ್ನು ತೆರೆಯಲಿ, ಆತ ಯಾವ ಭೇದಭಾವವನ್ನೂ ಎಣಿಸದೆ ಕೃಪಾವೃಷ್ಟಿಯನ್ನೇ ಕರೆಯುತ್ತಾನೆ.

ಸ್ವಾಮಿ ರಾಮದಾಸನ್



ಸುಮಾರು ೪೦,೦೦೦ ಜಾತಿಯ ಜೇಡ ಮತ್ತು ನೂರಾರು ಬಗೆಯ ಚೇಳುಗಳು ಭೂಮಿಯಮೇಲೆ ಹರಿದಾಡುತ್ತಿದ್ದು ವಿವಿಧ ಕಾಯಿಲೆಗಳಿಗೆ- ಮುಖ್ಯವಾಗಿ ನರರೋಗಗಳಿಗೆ ಬಹುಪರಿಣಾಮಕರವಾದ ಔಷಧಿಗಳನ್ನು ಒದಗಿಸುತ್ತವೆಂದು ಇತ್ತೀಚೆ ಭಾರತದ ಕೆಲವು ಮಂದಿ ಪ್ರಮುಖ ಹೋಮಿಯೋಪಥಿ ತಜ್ಞರು ನಡೆಸಿದ ಸಂಶೋಧನೆಗಳಿಂದ ಬೆಳಕಿಗೆ ಬಂದಿದೆ.

ಚಿತ್ರಕಥಾಮಾಲಿಕೆ

ಅಂಬಿಕಾತನಯದತ್ತರ
ಕನ್ನಡ ಮೇಘದೂತ

ನಿರೂಪಣೆ: **ದೇಸು**
ಚಿತ್ರಗಳು : ಕೆ. ಬಿ. ಕುಲಕರ್ಣಿ

ತನ್ನ ಒಡೆಯನ ಶಾಪದಿಂದಾಗಿ ಎಲ್ಲ ಶಕ್ತಿವಿಶೇಷಗಳೊಂದಿಗೆ ತನ್ನ ಪ್ರಿಯತಮೆಯನ್ನೂ ಅಗಲಬೇಕಾಗಿ ಬಂದ ಯಕ್ಷನೊಬ್ಬ ರಾಮಗಿರಿಯ ಪುಣ್ಯಾಶ್ರಮಗಳಲ್ಲಿ ವಾಸಿಸುತ್ತಾನೆ. ಶಾಪದ ಈ ಅವಧಿಯಲ್ಲಿ ಆತನನ್ನು ತೀವ್ರವಾಗಿ ಅಲುಗಾಡಿಸಿದ ವಿಷಯ ವಿರಹ. ಎಂತಲೇ ತೀರ ಅಲ್ಪಾವಧಿಯಲ್ಲಿಯೇ ಆತ ತುಂಬ ಸೊರಗಿ ಹೋಗುತ್ತಾನೆ (ಕೆಲವೆ ತಿಂಗಳಲಿ ಚಿನ್ನಕಡಗ ಮೊಳಕೈಗೆ ಸರಿದು ಬಂತು).

ದಿನಗಳು ದಾಟುತ್ತವೆ. ಕಾರಹುಣ್ಣಿಮೆ ಸರಿದಂತೆ ಗಗನದಲ್ಲಿ ಮೋಡಗಳು ಕಾಣತೊಡಗುತ್ತಿವೆ. ಅವನ್ನು ನೋಡುತ್ತಿದ್ದಂತೆ ಯಕ್ಷನಿಗೊಂದು ಆಶೆ; ದೂರವಿರುವ ತನ್ನ ಕೊರಳ ಗೆಳತಿಗೊಂದು ಸಂದೇಶ ಕಳುಹಿಸುವ ಬಯಕೆ. ಎಂತಲೇ ತೀರ ಒಲವಿನಿಂದ, ಉಚಿತ ಸತ್ಕಾರಗಳಿಂದ ಮೋಡವೊಂದನ್ನು

ಬರಮಾಡಿಕೊಳ್ಳುತ್ತಾನೆ. ವಿರಹದ ಲೆಕ್ಕದಲ್ಲಿಯೇ ಜೀವ ಹಿಡಿದುಕೊಂಡಿರುವ ಆತನ (ಮೋಡದ) ಅತ್ತಿಗೆಯನ್ನು (ತನ್ನ ನಲ್ಲೆಯನ್ನು) ನೋಡಿ ಬರಲು ಹೇಳುಸುತ್ತಾನೆ. ದಾರಿಯನ್ನು ವಿವರಿಸುತ್ತಾನೆ (ಹಾದಿ ಹೇಳುವೆನು ಕೇಳು ನಿನಗೆ ಅನುಕೂಲ ಪಯಣಕಾಗಿ.) ದಾರಿಯಲ್ಲಿಯ ಸಕಲ ಗಿರಿ–ಶಿಖರಗಳ, ಹಳ್ಳಿ–ಕೊಳ್ಳಗಳ, ನದಿ–ಸರೋವರಗಳ, ಗುಡಿ–ಗುಂಡಾರಗಳ, ಕ್ಷೇತ್ರ–ಸಂಗಮಗಳ ಸಮಸ್ತ ವರ್ಣನೆ, ವಿವರಗಳನ್ನು ತುಂಬ ಹೃದ್ಯವಾಗಿ ನೀಡುತ್ತಾನೆ. "ಸ್ವರ್ಗದೊಂದು ತುಣುಕನ್ನೆ ತಂದರೋ" ಎನ್ನುವಂತೆ ಒಂದೊಂದೆ ದೃಶ್ಯದ ಎಳೆ ಎಳೆಯನ್ನು ಸೂಕ್ಷ್ಮವಾಗಿ ಚಿತ್ರಿಸುತ್ತಾನೆ. ನಿಸರ್ಗದ ರಮ್ಯತೆಯನ್ನು ಚಿತ್ರಮಯವಾಗಿ ಬಣ್ಣಿಸುತ್ತಾನೆ. ("ಮತ್ತ ಹಂಸಗಳ ಮತ್ತಿನುಲಿವನೇ ಮತ್ತೆ ಎಳೆದು ಬಳಸಿ" "ನೀಲಿಬಣ್ಣ, ನೀನಣ್ಣ, ನವಿಲು ನಲಿದಾವು, ಕುಣಿದು ಕರೆದು") ನಿಸರ್ಗದ ಈ ನಿರಂತರ ಲಾಸ್ಯಗಳ ಪಕ್ಕದಲ್ಲೇ ಇದಕ್ಕೆ ತಕ್ಕ ಪ್ರತಿಸ್ಪಂದನವೀಯುವ ಅಂಗನೆಯರ ನೃತ್ಯವಿನ್ಯಾಸಗಳನ್ನು ಎತ್ತಿ ತೋರಿಸುತ್ತಾನೆ. (ದೇವದಾಸಿಯರು ಹೆಜ್ಜೆ ಹಾಕಿ ನಡುಗೆಜ್ಜೆ ಕುಣಿಸಿ ನವುರಿ) ಹೀಗೆ ವಿಂಧ್ಯದಡವಿಯನ್ನು ದಾಟಿ, ವಿದಿಶೆಗೆ ತೆರಳಿ, ಉಜ್ಜಯಿನಿಯನ್ನು ಒತ್ತರಿಸಿ, ಅವಂತಿಯನ್ನು ಮಿಂಚಿಸಿ, ದೇವಗಿರಿಯಸುನ್ನೇರಿ, ದಳಪುರಿಯನ್ನೀಸಿ, ಬ್ರಹ್ಮಾವರ್ತವನ್ನು ಅನುವರ್ತಿಸಿ, ಗಂಗೆಯಲ್ಲಿ ಮಿಂದು ಅಲಕೆಯವರೆಗೂ ಅಡಹಾಯುವ ಕೃತಿ–ಪ್ರಕೃತಿಗಳೆಲ್ಲದರ ವಿವರಗಳನ್ನೂ ವಿಶದವಾಗಿ ನೀಡುತ್ತಾನೆ.

ಈಗ ಅಲಕೆಯತ್ತ ತನ್ನ ದೃಷ್ಟಿಯನ್ನು ದಾಟಿಸಿ, ಕಣ್ಕಟ್ಟುವಂತೆ ಅಲ್ಲಿಯ ವಿವರಗಳನ್ನು ನೀಡುತ್ತಾನೆ. ಯಕ್ಷ ಮೊದಲ ನೋಟಕ್ಕೇ ಎದ್ದು ಕಾಣುವಂತಹ, ಮುಗಿಲು ಮುಟ್ಟುವ ಮಹಲುಗಳ ವೈಭವ ತೋರಿಸುತ್ತಾನೆ. "ಬಿಳಿ ಹರಳಿನಿಂದ ರಚಿಸಿರುವ ಸೌಧಗಳಲಿ" ಯಕ್ಷರು ತೊಡಗಿರುವ ವಿಧ ವಿಧದ ಕಾಮ–ಕೇಳಿಗಳನ್ನು ಕಾಣಿಸುತ್ತಾನೆ (ಉಟ್ಟ ರೇಸಿಮೆಯ ಸೀರೆ ಸೆಳೆಯೆ ಆತುರದ ಕರಗಳಿಂದ). ಈ ಎಲ್ಲ ಸುಖ ಸಂತೋಷ ಸಮೃದ್ಧಿಗಳ ಮಧ್ಯವಿರುವ ತನ್ನ ಸುಂದರ ಸೌಧವನ್ನು ತಲುಪುತ್ತಾನೆ. ಪಚ್ಚೆಕಲ್ಲು ಮೆಟ್ಟಿಲುಗಳಿರುವ ಅರಣೆಯ ಬದಿಯ ತೋಟದಲ್ಲಿ ತನ್ನ ನಲ್ಲೆ ಸಾಯಂಕಾಲಗಳನ್ನು ಕಳೆಯುತ್ತಿದ್ದ ಬಗೆಯನ್ನು ಬಣ್ಣಿಸುತ್ತಾನೆ (ಆ ಕೋಲಿನಲ್ಲಿ ಕುಣಿಸುವಳು ನವಿಲ ನನ್ನಾಕೆ ಸಂಜೆಯಲ್ಲಿ). ಆದರೆ ಅದು ಹಿಂದಿನ ಚಿತ್ರ. ಈಗ ತಾನು (ಯಕ್ಷ) ಬಳಿಯಿಲ್ಲದಾಗ ಆಕೆ ಹೇಗಿದ್ದಾಳು? ತನ್ನ ನಲ್ಲನನ್ನು ಅಗಲಿರುವ ವಿರಹದ ದಳ್ಳುರಿಯಲ್ಲಿ ಬೇಯುತ್ತಿರುವ ಆಕೆ ಈಗ ಹೇಗೆ ಕಾಣಸಬಹುದು? ಇದಕ್ಕೆ ಉತ್ತರವಾಗಿ ತುಂಬ ದುಃಖಿತಪ್ತಳಾಗಿರಬಹುದಾದ ತನ್ನಾಕೆಯ ಈಗಿನ ಚಿತ್ರವನ್ನು ತೋರಿಸುತ್ತಾನೆ (ಗಲ್ಲದಲ್ಲಿ ಕೈ ಓರೆಮೋರೆ ನಿಡಿಗೂದಲುದ್ದ ಚಿಂತೆ!). ಆಕೆಯ ಶೋಕದ ಒಂದೊಂದು ಚಿತ್ರವನ್ನು ಪದರು ಪದರಾಗಿ ತೋರಿಸುತ್ತಾನೆ. ಪರ್ಯಾಯವಾಗಿ ತನ್ನ ಶೋಕವನ್ನೂ ವಿರಹದ ತನ್ನ ಉಮ್ಮಳವನ್ನೂ ಬಗೆದು ತೆಗೆಯುತ್ತಾನೆ. ಆದರೆ ಕ್ರಮೇಣ ತಾನೇ ಸಾಂತ್ವನವನ್ನು ತಂದುಕೊಳ್ಳುತ್ತಾನೆ. ತನ್ನ ನಲ್ಲೆಗೂ ಸಾಂತ್ವನ ಸಂದೇಶವೀಯಲು ಮೋಡಕ್ಕೆ ಕೇಳಿಕೊಳ್ಳುತ್ತಾನೆ. ಏಕೆಂದರೆ, ಈ ಲೋಕದ ಕೆಳಗು–ಮೇಲುಗಳ ಉಬ್ಬರವಿಳಿತಗಳ ವಿವೇಚನೆ ಆತನಿಗಿದೆ. ಅದನ್ನೆ ಆತ ವಿವರಿಸುತ್ತಾನೆ (ಯಾರು ಬರಿಯ ಸುಖಿ ಬರಿಯ ದುಃಖಿಪಟ್ಟವರು ಲೋಕದಲ್ಲಿ, ದೆಸೆಯು ಕೆಳಗೆ ಮೇಲಾಗಿ ತಿರುಗುವದು ಏಕಚಕ್ರದಲ್ಲಿ). ಅಗಲುವಿಕೆ ಕೂಡುವಿಕೆಗಳ ಆಳವನ್ನು ಅರಹುತ್ತಾನೆ (ಅಗಲಿದಾಗ ತಿನ್ನುವದು ಸ್ನೇಹವೆನ್ನುವರು ಜೀವವನ್ನು, ಕೂಡಿದೊಡನೆ ಅದೆ ಸೂರೆ ಮಾಡುವದು ಪ್ರೇಮಭಾವವನ್ನು). ವಿರಹದ ಪ್ರತಿಯೊಂದು ಬರಡು ಮಗ್ಗಲೂ ಇನ್ನೊಂದು ಬದಿಗೆ ಮಿಲನದ ಮೆರುಗನ್ನೇ ಮೀಟುತ್ತದೆಂಬುದು ಆತನಿಗೆ ಗೊತ್ತು. ಈ ವಿರಹ ಮಿಲನಗಳ ಮಧ್ಯದ ತೀವ್ರ ತುಡಿತವೇ "ಮೇಘದೂತ"ದ ಸಂಪತ್ತು. ✿



‘ಒಬ್ಬ ಯಕ್ಷ ತನ್ನೊಡೆಯನಿಂದ ನಲ್ಲೆಯನು ಅಗಲಿ ಬೆಂದು
ಶಪಿತ ವರುಷವನು ಕಳೆಯಲಾಗದೇ ಮಹಿಮೆ ಕಳೆದುಕೊಂಡು’

‘ಅಗಲಿ ಇದ್ದರೂ ಆಸೆಗೊಂಡಿರಲು ಗಿರಿಯೊಳಂತು ಇಂತು
ಕೆಲವೆ ತಿಂಗಳಲಿ ಚಿನ್ನಕಡಗ ಮೊಳಕೈಗೆ ಸರಿದು ಬಂತು’



'ಎಷ್ಟು ದಿವಸ ಇನ್ನುಳಿದುವೆಂದು ದಿನದಿನವು ಲೆಕ್ಕವಾಗಿ
ಜೀವ ಹಿಡಿದುಕೊಂಡಿರುವ ನಿನ್ನ ಅತ್ತಿಗೆಯ ನೋಡು ಹೋಗಿ'

'ಹಾದಿ ಹೇಳುವೆನು ಕೇಳು ನಿನಗೆ ಅನುಕೂಲ ಪಯಣಕಾಗಿ
ಬಳಿಕ ನನ್ನ ಸಂದೇಶ ಕಿವಿಗೆ ಪರಿಣಮಿಸಲಮೃತವಾಗಿ'



‘ಮುತ್ತ ಹಂಸಗಳ ಮುತ್ತುಸುಲಿವನೇ ಮುತ್ತ ಎಳೆದು ಬಳಸಿ
ಬೆಳಗಿನಲ್ಲಿ ಅರಳಿರುವ ತಾವರೆಯ ಕಂಪಕಳೆಯ ಬೆಳಸಿ’

‘ಕೇಶ–ಧೂಪ ಎಳೆದಾವು ನಿನ್ನ, ಬೆಳಕಂಡಿಯಿಂದ ಹರಿದು
ನೀಲಿಬಣ್ಣ ನೀನಣ್ಣ, ನವಿಲು ನಲಿದಾವು ಕುಣಿದು ಕರೆದು’



‘ದೇವದಾಸಿಯರು ಹೆಜ್ಜೆ ಹಾಕಿ ನಡುಗೆಜ್ಜೆ ಕುಣಿಸಿ ನವುರಿ,
ಬಳ್ಳಿ ತೋಳು ಬಳುಕಾಡೆ ಬೀಸುವರು ರನ್ನ-ಗಾವಚವರಿ
ನಿನ್ನ ಮೊದಲ ಹನಿ ಉಗುರು-ತಾಣ ತಂಗೊಳಿಸೆ ಎದೆಯ ತಾಗಿ
ನೋಟ ಬೀರುವರು ನಿನ್ನ ಕಡೆಗೆ ತುಂತುಂಬಿ ಮಾಲೆಯಾಗಿ’



'ಯಕ್ಷರಲ್ಲಿ, ಬಿಳಿ ಹರಳಿನಿಂದ ರಚಿಸಿರುವ ಸೌಧಗಳಲಿ
[illegible]ಳ್ಕ ನೆರಳೆ ಅರಳಾಗಿ ಹಾಸೆ, ನಲುವೆಣ್ಣ ತೋಳುಗಳಲಿ'

'ಉಟ್ಟ ರೇಸಿಮೆಯ ನೀರಿ ಸೆಳೆಯೆ ಆತುರದ ಕರಗಳಿಂದಾ
ಮುತ್ತ್ ಜರಿಯುಲಿರೆ ಮೊದಲೆ ಸಡಲಿದಾ ಕಟಿಯು ನೀವಿಬಂಧ'



‘ಮರದ, ನಡುವೆ ಬಿಳಿ ಹಾಸುಗಲ್ಲು ಬಂಗಾರ ಕೋಲು ಸಡುಳಿ
ಎಳೆ ಬಿದಿರ ಬಣ್ಣ ಚೆಲೆ ಹರಳಿನಿಂದ ನೆಲೆಗಟ್ಟು ಅದರ ಬುಡಕೆ
ಆ ಕೋಲಿನಲ್ಲಿ ಕುಣಿಸುವಳು ನವಿಲ ನನ್ನಾಕೆ ಸಂಜೆಯಲ್ಲಿ
ಕೈ ತಟ್ಟಿ ಮಾಟ ಬಳೆ ತಾಕಲಾಟ ಥಕಥೈಯ ಥಾಟಿನಲ್ಲಿ’



‘ಗಲ್ಲದಲ್ಲಿ ಕೈ, ಓರೆ ಮೋರೆ, ನಿಡಿಗೂದಲುದ್ದ ಚಿಂತೆ
ಮೋಡ ಮುಸುಕಲಿರೆ ಮಂಕುಗವಿದ ಆ ದೀನ ಚಂದ್ರನಂತೆ’

‘ತೊಟ್ಟು ಸುರಿವ ಕಂಬನಿಯು ತಂತಿಯನೆ ಮಿಡಿಯುತಿಹಳೋ ದೀನೆ
ಮಾಸುಬಟ್ಟೆ ತೊಟ್ಟವಳ ತೊಡೆಯೊಳಿರಬಹುದು ಬಿದ್ದ ವೀಣೆ’



'ಯಾರು ಬರಿಯ ಸುಖ, ಬರಿಯ ದುಃಖಪಟ್ಟವರು ಲೋಕದಲ್ಲಿ
ದೆಸೆಯು ಕೆಳಗೆ ಮೇಲಾಗಿ ತಿರುಗುವದು ಪಥಚಕ್ರದಲ್ಲಿ'

'ಅಗಲಿದಾಗ ತಿನ್ನುವದು ಸ್ನೇಹವೆನ್ನುವರು ಜೀವವನ್ನು
ಕೂಡಿದೊಡನೆ ಅದೆ ಸೂರೆ ಮಾಡುವದು ಪ್ರೇಮಭಾವವನ್ನು'

ಶ್ರೀರಂಗ-ಮಗಳು ಕಂಡಂತೆ


ಈ ಮನುಷ್ಯನನ್ನು ವಿಪುಲವಾಗಿ ಹೊಗಳಿದವರೂ ಇದ್ದಾರೆ, ಸಾಕಷ್ಟು ತೀವ್ರವಾಗಿ ಟೀಕಿಸಿದವರೂ ಇದ್ದಾರೆ; ಆದರೆ ಇವರನ್ನು ಸರಿಯಾಗಿ ಅರ್ಥಮಾಡಿಕೊಂಡವರೆಷ್ಟು ಜನ? ಇಳಿ ವಯಸ್ಸಿನಲ್ಲಿ ಕ್ರಾಂತಿಕಾರಿ ನಾಟಕಕಾರನೆಂದು, ಹಳಬರು ಪ್ರೊ. ಆರ್. ವಿ. ಜಾಗಿರದಾರರೆಂದು, ಎಲ್ಲರೂ ಶ್ರೀರಂಗ, ಆದ್ಯ ರಂಗಾಚಾರ್ಯರೆಂದು ಗುರುತಿಸುವ ಇವರನ್ನು ತೀರ ಹತ್ತಿರದಿಂದ ಕಂಡು ಅನುಭವಿಸಿದ ಕೆಲವೇ ಜನಗಳಲ್ಲಿ ಒಬ್ಬರಾದ ಅವರ ಮಗಳು ಶ್ರೀಮತಿ ಶಶಿ ದೇಶಪಾಂಡೆ ಆತ್ಮೀಯತೆಯಿಂದ ಅರಿತಿದ್ದಾರೆ. ಇಂಗ್ಲೀಷಿನಲ್ಲಿ ಒಳ್ಳೆಯ ಲೇಖಿಕೆಯೆಂದೂ ಕತೆಗಾರ್ತಿಯೆಂದೂ ಹೆಸರು ಮಾಡಿರುವ ಅವರ ಲೇಖನಿಯಿಂದ ಹರಿದುಬಂದ ಚಿತ್ರಣವಿದು.

ಶಶಿ ದೇಶಪಾಂಡೆ

ನಾನು ಬರೆಯತೊಡಗಿದ ಹೊಸತರಲ್ಲಿ ನನ್ನ ಸ್ನೇಹಿತೆಯೊಬ್ಬಳು "ನಿಮ್ಮ ತಂದೆ ನಿನಗಿದರಲ್ಲಿ ನೆರವಾಗುತ್ತಾರೆಯೆ?" ಎಂದು ಕೇಳಿದಳು. ತಮ್ಮ ಮಗಳು ಅಪ್ರಾಮಾಣಿಕವಾಗಿ ಹೆಸರುಗಳಿಸಲು ಅವರು ನೆರವಾಗುತ್ತಾರೆ, ಇಂಥದೊಂದು ಸಂಚಿನಲ್ಲಿ ಅವರು ಪಾಲುಗಾರರಾಗುತ್ತಾರೆ ಎಂಬ ವಿಚಾರ ಎಷ್ಟೊಂದು ಹಾಸ್ಯಾಸ್ಪದವಾಗಿತ್ತೆಂದರೆ ಆ ಕ್ಷಣದಲ್ಲಿ ನಗು ತಡೆದುಕೊಳ್ಳಲು ನನಗಾಗಲಿಲ್ಲ. ಲೇಖಕಿಯಾಗಿ ನನ್ನ ನೆಲೆಯನ್ನು ನಾನೇ ಕಂಡುಕೊಳ್ಳಲಿ ಎಂದು ನನ್ನ ಮೇಲೆ ತಮ್ಮ ಪ್ರಭಾವ ಬೀರಲು ಪ್ರಜ್ಞಾಪೂರ್ವಕವಾಗಿಯೇ ಅವರು ಯತ್ನಿಸಿಲ್ಲವಷ್ಟೇ ಅಲ್ಲ, ನನ್ನ ಕೃತಿಗಳ ಬಗೆಗೆ ಟೀಕೆಯನ್ನಲ್ಲ, ತಮ್ಮ ಅಭಿಪ್ರಾಯವನ್ನು ಕೂಡ ಅವರೆಂದೂ ವ್ಯಕ್ತಪಡಿಸಿಲ್ಲವೆಂಬುದನ್ನು ಈ ಗೆಳತಿಗೆಂತು ತಿಳಿಸಿ ಹೇಳಲಿ? ಆದರೆ ಇದು ಒಂದೇ ಮಾತಿನಲ್ಲಿ ಹೇಳಬೇಕೆಂದರೆ, ವಯಸ್ಸಿಗೆ ಬಂದ ಮಕ್ಕಳ ತಂದೆಯೆಂದು ಅವರನ್ನು ನಾನು ನೋಡುತ್ತಿದ್ದಂತೆಯೇ ಅವರ ದೃಷ್ಟಿಕೋನವೇ ಆಗಿದೆ...... ನಾವು ಮಾಡುವುದರಲ್ಲಿ ತಲೆ ಹಾಕುವುದಂತೂ ಅಸಾಧ್ಯ ಕೋಟಿಯು ಮಾತ್ರೇ, ಆದರೆ ಅವುಗಳ ಬಗ್ಗೆ ತೀರ ಅಪರೂಪಕ್ಕೆಲ್ಲೋ ಒಂದು ಅಭಿಪ್ರಾಯವೋ ಟೀಕೆಯ ಶಬ್ದವೋ ಅವರಿಂದ ಕೇಳಿಬರಬಹುದಷ್ಟೆ. ತಮ್ಮೊಬ್ಬ ಮಿತ್ರನೊಡನೆ ಮಾತಾಡುವಾಗ ಅವರಾಡಿದ ಒಂದು ಮಾತಿನಲ್ಲಿ – "ಅವರಲ್ಲಿ (ಮಕ್ಕಳಲ್ಲಿ) ನಮಗೆ ವಿಶ್ವಾಸವಿರಬೇಕು, ಅವರನ್ನು ನಾವು ಬೆಳೆಸಿರುವ ರೀತಿಯಲ್ಲೂ"– ಅವರ ಜೀವನ ಸಿದ್ಧಾಂತವಡಗಿದೆಯೆಂದೂ ಅವರ ಮನೋಭಾವದ ಹಿನ್ನೆಲೆಯೂ ಅಂತರ್ಗತವಾಗಿದೆಯೆಂದೂ ನನಗನಿಸುತ್ತದೆ. ಇದು ತಂದೆಯೊಬ್ಬನಲ್ಲಿ ಅಪರೂಪದ ಗುಣವೆಂದಾದರೆ, ತೀರ ವಿರಳವಾಗಿಯೇ ಸಾಮಾನ್ಯಕ್ಕೆ ಹೊಂದಿಕೊಳ್ಳುವ ಅವರ ಸ್ವಭಾವದ ಒಂದಂಶ ಮಾತ್ರವೆಂದು ನನಗನಿಸುತ್ತದೆ.

ಹಲವು ಹತ್ತು ರೀತಿಗಳಲ್ಲಿ ನಮ್ಮ ತಂದೆ ಇನ್ನಿತರರ ತಂದೆಯರಿಗಿಂತ ಭಿನ್ನರಾಗಿದ್ದಾರೆಂಬ

ಕಲ್ಪನೆ ಚಿಕ್ಕ ಮಕ್ಕಳಾಗಿದ್ದಾಗಲೇ ನಮಗಿದ್ದಿರಬೇಕು. ಎಲ್ಲರಂತೆ ಮನೆಯಲ್ಲಿ ನಮಗವರು ಕತೆ ಹೇಳುತ್ತಿದ್ದರು, ನಮ್ಮೊಡನೆ ಆಟವಾಡುತ್ತಿದ್ದರು, ನಾವು ತಪ್ಪಿದಾಗ ಶಿಕ್ಷಿಸುತ್ತಿದ್ದರು ಕೂಡ. ಮನೆಯ ಹೊರಗಡೆ ಅವರು ಕಾಲೇಜಿನಲ್ಲಿ ಕಲಿಸುತ್ತಿದ್ದರು. ಕೆಲವೊಮ್ಮೆ ಮನೆಯಲ್ಲಿ ಕೂಡ ನಮಗೆಲ್ಲ ಸಂಸ್ಕೃತ ಹೇಳಿಕೊಡುವಾಗ, ತಾಳ್ಮೆಯಿಂದ ಈ ಕಠಿಣ ಭಾಷೆಯ ಉಚ್ಚಾರ ನಮ್ಮಿಂದ ಸರಿಯಾಗಿ ಆಗುವಂತೆ ನಮ್ಮ ತುಟಿ ನಾಲಿಗೆಗಳ ಚಲನವಲನವನ್ನು ನಿರ್ದೇಶಿಸುತ್ತಿರುವಾಗ ಅವರಲ್ಲಿಯ ಶಿಕ್ಷಕ ಅಲ್ಲಿಗೂ ಬರುತ್ತಿದ್ದ. ಆದರೆ ಇದೆಲ್ಲದರ ಹೊರತಾಗಿ ಅವರು ಮತ್ತೇನೇನೋ ಆಗಿದ್ದರು. ಅವರು ಸಾರ್ವಜನಿಕ ವ್ಯಕ್ತಿಯಾಗಿ ಹಲವಾರು ಸಮಿತಿಗಳ ಸದಸ್ಯರಾಗಿರುತ್ತಿದ್ದರು. ಸಭೆ ಸಮಾರಂಭಗಳಲ್ಲಿ ಭಾಷಣ ಮಾಡಿ ಹಾರ ಗುಚ್ಛಗಳೊಂದಿಗೆ ಮನೆಗೆ ಮರಳುತ್ತಿದ್ದರು, ನಾಟಕಗಳನ್ನು ಬರೆದು, ಆಡಿಸುವ, ಕೆಲವೊಮ್ಮೆ ಅವುಗಳಲ್ಲಿ ಪಾತ್ರ ವಹಿಸುವ ನಾಟಕಕಾರ; ತಾಸು ತಾಸುಗಟ್ಟಲೆ ತಲೆಯನ್ನೂ ಲೆಕ್ಕಣಿಕೆಯನ್ನೂ ಮೇಲೆತ್ತದೆ ಬರೆಯುತ್ತಲೇ ಕೂಡುವ, ನಡು ನಡುವೆ ಬೇಸರ ಕಳೆದುಕೊಳ್ಳಲೋಸುಗ ಬುದ್ಧಿಪ್ರಧಾನವಾದ ಪೇಶನ್ಸ್ ಆಟಗಳಿಗಾಗಿ ಇಸ್ಪೀಟೆಲೆಗಳನ್ನು ಹರವುತ್ತಲೋ ಅಗಾಥಾ ಕ್ರಿಸ್ತೀ, ಅರ್ಲ್ ಸ್ಟ್ಯಾನ್ಲೆ ಗಾರ್ಡನರ್, ಪೀಟರ್ ಚೇನೀ ಮುಂತಾದವರ ಪತ್ತೇದಾರಿ ಕಾದಂಬರಿಗಳನ್ನು ಓದುತ್ತಲೋ ಮನಸ್ಸನ್ನು ಹಗುರಗೊಳಿಸಿಕೊಳ್ಳುವ ಲೇಖಕ. ಈ ಎಲ್ಲ ಅವಸ್ಥೆಗಳಲ್ಲೂ ಅಸಾಮಾನ್ಯವಾದುದೇನೋ, ಉಳಿದವರಿಗಿಂತ ಭಿನ್ನವಾದುದೇನೋ ಈ ಮನುಷ್ಯನಿಗೆ ಅಂಟಿಕೊಂಡಿತ್ತೆಂದು ನಮಗೆಲ್ಲ ಗೊತ್ತಿತ್ತೆಂಬ ಭಾವನೆ ನನ್ನದು. ಆದರೆ ಈ ಅರಿವು ಬಹುಶಃ ನಮಗೇನೂ ಹೆಮ್ಮೆಯ ವಿಷಯವಾಗಿರಲಿಲ್ಲ, ಹೆಚ್ಚಾಗಿ ಆತಂಕಕಾರಿಯೇ ಆಗಿರುತ್ತಿತ್ತು. ಯಾಕೆಂದರೆ ತಾವೂ ಇತರರೆಲ್ಲರಂತೆಯೇ ಇರಬೇಕೆಂಬ ಮಕ್ಕಳ ಸಹಜಪ್ರವೃತ್ತಿಗೆ ನಾವೇನೂ ಹೊರತಾಗಿರಲಿಲ್ಲ. ಅಂತೆಯೆ ನಮ್ಮ ಫೀ ಹಣವನ್ನು ಕಟ್ಟಲು ನಗದಿನ ಬದಲು ನಾವು ಚೆಕ್ಕುಗಳನ್ನೊಯ್ದು ಕೊಡಬೇಕಾಗಿ ಬಂದಾಗ ನಮಗದು ರುಚಿಸುತ್ತಿರಲಿಲ್ಲ. ಆಗ ಪ್ರತಿಯೊಬ್ಬರೂ ನಗದು ಹಣವನ್ನೇ ತರುತ್ತಿದ್ದರಾದರೆ ನಾವೇಕೆ ಬೇಡ, ನಮಗೇಕಾಗುತ್ತಿಲ್ಲ? ಆದರೆ ನಾವು ಮಾತ್ರ ಲಜ್ಜೆಯಿಂದ ತಲೆ ತಗ್ಗಿಸಿ ಚೆಕ್ಕುಗಳನನ್ನೇ ಒಯ್ದುಕೊಡಬೇಕಾಗುತ್ತಿತ್ತು.



ಶಾಲೆಗಳಲ್ಲಿ ಟೈಫಾಯ್ಡ್, ಕಾಲರಾ ಮುಂತಾದವುಗಳ ವಿರುದ್ಧ ಪ್ರತಿಬಂಧಕ ಚುಚ್ಚುಮದ್ದುಗಳನ್ನು ಕೊಡುತ್ತಿದ್ದರಷ್ಟೆ. ಆಗೆಲ್ಲ ಮಕ್ಕಳು ತಂದೆ-ತಾಯಿಗಳಿಂದ ಒಪ್ಪಿಗೆ ಪಡೆದುಕೊಳ್ಳುವ ಪರಿಪಾಠವಿತ್ತು. ಅನೇಕರು ಯಾವ ಯೋಚನೆಯನ್ನೂ ಮಾಡದೆ ಒಪ್ಪಿಗೆಯಿತ್ತುಬಿಡುತ್ತಿದ್ದರು. ಆದರೆ ನಮ್ಮ ತಂದೆ ಮಾತ್ರ ಇಲ್ಲ. ಅವರಿಗೆ ರೋಗಪ್ರತಿಬಂಧಕ ಚುಚ್ಚುಮದ್ದುಗಳಲ್ಲಿ ವಿಶ್ವಾಸವಿಲ್ಲ. ಅದಕ್ಕವರು ತತ್ತ್ವಶಃ ವಿರೋಧಿಯಾಗಿದ್ದರಿಂದ ಅದರಿಂದ ನಮಗೆ ನ...

ಯತಿ ಕೊಡಬೇಕೆಂದು ಚೀಟಿ ಕೊಟ್ಟು ಕಳಿಸುತ್ತಿದ್ದರು. ಇತರರಿಗಿಂತ ಭಿನ್ನವಾಗಿ ನಾವು ಒಡೆದು ಕಾಣುವಂತಾಯಿತಲ್ಲ ಎಂದು ನಮ್ಮನ್ನೆಲ್ಲ ವಿಷಾದದ ಛಾಯೆ ಆವರಿಸುತ್ತಿತ್ತು.

ಇನ್ನೂ ಹಲವು ಭಿನ್ನತೆಗಳು ಅವರಲ್ಲಿವೆ. ಅವರಿಗೆ ಪೂಜೆ, ಪುನಸ್ಕಾರಗಳಲ್ಲಾಗಲಿ, ಧಾರ್ಮಿಕ ಕರ್ಮಾನುಷ್ಠಾನಗಳಲ್ಲಾಗಲಿ ವಿಶ್ವಾಸವಿಲ್ಲದ್ದರಿಂದ ಅವಾವಕ್ಕೂ ನಮ್ಮ ಮನೆಯಲ್ಲಿ ಎಡೆಯಿಲ್ಲ. ಅದರಿಂದಾಗಿ ಇವೆಲ್ಲವುಗಳಿಂದಲೂ ನಾವು ಅಪರಿಚಿತರಾಗಿಯೇ ಉಳಿಯಬೇಕಾಯಿತು. ಅವರು ತಮ್ಮ ಈ ಅವಿಶ್ವಾಸವನ್ನು ಕೃತಿಗಿಳಿಸಿದಾಗ ನಮ್ಮನ್ನೆಲ್ಲ ಅದಕ್ಕಾಗಿ ಮಾನಸಿಕವಾಗಿ ಅಣಿಗೊಳಿಸಿರಬೇಕು. ಕಾಲೇಜು ಪ್ರವೇಶಕ್ಕೆ ಅರ್ಜಿ ಹಾಕಬೇಕಾದಾಗ ಅದರಲ್ಲಿ ಇನ್ನೂ ಅನೇಕ ವಿವರಗಳೊಂದಿಗೆ ನಮ್ಮ ಧರ್ಮ ಮತ್ತು ಜಾತಿಯನ್ನು ಅಲ್ಲಿ ನಮೂದಿಸಬೇಕಿತ್ತು. ಈ ಜಾಗವನ್ನು ಖಾಲಿ ಬಿಟ್ಟುಬಿಡುವಂತೆ ತಂದೆ ನನಗೆ ಸೂಚಿಸಿದರು. ನಾನು ಹಾಗೆ ಮಾಡಿದೆನಾದರೂ ಆ ಜಾಗವನ್ನು ತುಂಬಲೇಬೇಕೆಂದು ಗುಮಾಸ್ತ ಪಟ್ಟು ಹಿಡಿದ. ಧರ್ಮ ಎಂದಿರುವಲ್ಲಿ ಭಾರತೀಯ ಎಂದೂ ಜಾತಿ ಎಂದಿರುವಲ್ಲಿ ಹಿಂದು ಎಂದೂ ಬರೆಯಲು ತಂದೆ ಹೇಳಿದರು. ಅಂದಿನ ಘಟನೆ ನನ್ನ ನೆನಪಿನಲ್ಲಿನ್ನೂ ಹಸಿರಾಗಿಯೇ ಇದೆ. ಆ ಗುಮಾಸ್ತ ನಾನು ಆ ಬಗ್ಗೆ ಗಂಭೀರನಾಗಿರುವೆನೆಂದು ಅರಿವಾಗುವ ವರೆಗೂ ನನ್ನೆಡೆ ನೋಡಿ ನಗುತ್ತಲೇ ಇದ್ದ; ಅನಂತರ ವಾದ ಹಾಕತೊಡಗಿದ. ಸ್ವಭಾವತಃ ನಾನು ಪುಕ್ಕಲು ಜಾತಿಯೇ ಆದರೂ ನಾನು ಅದನ್ನು ಬದಲಿಸಲಾರೆನೆಂದು ಪ್ರತಿವಾದಕ್ಕೆ ಇಳಿದೆ.

ಈಗೀಗ ಹೆಚ್ಚು ಪರಿಪಕ್ವ ಮನಸ್ಸಿನಿಂದ ಅವರನ್ನು ಅರ್ಥ ಮಾಡಿಕೊಂಡಂತೆ ನಾನವರಲ್ಲಿ ತೀರ ಅಪರೂಪದ ಅಂಶವನ್ನು ಗುರುತಿಸಿದ್ದೇನೆ...ಅದೇ ಅವರು ಗಾಂಧೀವಾದಿ ಎಂಬುದು. ಅವರು ಖಾದಿ ಧರಿಸುತ್ತಿಲ್ಲ, ಗಾಂಧೀ ಟೊಪ್ಪಿಗೆಯನ್ನೂ ಹಾಕುವುದಿಲ್ಲ, ಗಾಂಧೀಜಿಯ ಕುರಿತಾಗಲಿ ಗಾಂಧೀವಾದದ ಬಗೆಗಾಗಲಿ ಭಾಷಣ ಮಾಡುವುದಿಲ್ಲ; ಆದರೂ ಅವರು ಗಾಂಧೀವಾದಿ. ಅವರು ಎಂದಿನಿಂದಲೂ ಮೂರ್ತಿಪೂಜೆಯ ವಿರೋಧಿಯೇ ಆಗಿರುವಾಗಲೂ ಅವರ ಪಾಲಿಗೆ ಗಾಂಧೀಜಿ ಮಾತ್ರ 'ಹೀರೊ'ನೇ ಆಗಿದ್ದಾರೆ. ಗಾಂಧೀ ಹತ್ಯೆಯಾದ ಆ ದಿನ –೧೯೪೮ರ ಜನವರಿ ೩೦ ನನ್ನ ನೆನಪಿನಲ್ಲಿ ಅಚ್ಚಳಿಯದೆ ಉಳಿದಿದೆ. ಉಳಿದವರು ಭಯಗ್ರಸ್ತರಾಗಿ ಆಘಾತಗೊಂಡವರಂತೆ ರೇಡಿಯೋದಲ್ಲಿ ಹರಿದುಬರುತ್ತಿದ್ದ ವಾರ್ತೆಯನ್ನು ಕೇಳುತ್ತಿದ್ದರಾದರೆ ಅವರು ಮಾತ್ರ ದೊಡ್ಡದೊಂದು ಟವೆಲಿನಿಂದ ಮುಖ ಮುಚ್ಚಿಕೊಂಡು ಮಗುವಿನಂತೆ ಅಳುತ್ತಿದ್ದರು. ಸಾಮಾನ್ಯವಾಗಿ ಭಾವನಾತ್ಮಕವಲ್ಲದ ಈ ವ್ಯಕ್ತಿಯ ವರ್ತನೆ ನನಗಂತೂ ಅಪೂರ್ವವಾಗಿಯೇ ಕಂಡಿತು. ಅವರೆಂದೂ ಧಾರ್ಮಿಕ ಕಾರಣಗಳಿಗಾಗಿ ಉಪವಾಸ ಮಾಡಿದವರಲ್ಲವಾದರೂ ಗಾಂಧೀಹತ್ಯೆಯ ನಂತರ ಎಷ್ಟೋ ವರ್ಷ ಜನವರಿ ೩೦ರಂದು ಕಟ್ಟುನಿಟ್ಟಾದ ಉಪವಾಸ ಮಾಡುತ್ತಿದ್ದರು.

ತಂದೆಯೆಂದು ಅವರಲ್ಲಿ ಇನ್ನೂ ಒಂದು ಮಹತ್ತರ ಗುಣಾಂಶವನ್ನು ಎತ್ತಿ ಹೇಳಲೇಬೇಕು. ನಮ್ಮ ಮೇಲೆ ಯಾವುದೇ ರೀತಿಯ ನಿರ್ಬಂಧಗಳಾಗಲಿ ಒತ್ತಾಯಗಳಾಗಲಿ ಎಂದೂ ಇರಲಿಲ್ಲ. ನಾನಾಗಲಿ ನನ್ನ ಅಕ್ಕನಾಗಲಿ ನಾವು ಸ್ತ್ರೀಯರೆಂಬ ಕಾರಣಕ್ಕಾಗಿಯೇ ನಿರ್ಬಂಧಿಸಲ್ಪಡದಂಥ ಸ್ವಾತಂತ್ರ್ಯವನ್ನು ಅನುಭವಿಸಿದೆವು. ವಾಚನದಲ್ಲೂ ನಮಗೆ ಪೂರ್ತಿ ಸ್ವಾತಂತ್ರ್ಯವಿತ್ತು. ನಾನಿನ್ನೂ ಬಾಲಿಕೆಯಾಗಿದ್ದಾಗ ಶಾಲಾ ಬಾಲಿಕೆಯರು ಸಾಮಾನ್ಯವಾಗಿ ಮೆಚ್ಚುವ ಸಾಹಸ ಹಾಗು ಭಾವಪ್ರಧಾನವಾದ ಕತೆಗಳನ್ನು ಓದುವುದರೊಟ್ಟಿಗೆಯೆ ಡಿಕೆನ್ಸ್ ಮತ್ತು ಟಾಲ್‌ಸ್ಟಾಯ್‌ರ ಕಾದಂಬರಿಗಳನ್ನೂ ಓದಿದ್ದೆ, ಮಾತ್ರವಲ್ಲ, 'ಲೇಡಿ ಚ್ಯಾಟರ್ಲೀಸ್ ಲವರ್' ಕೂಡ ಓದಿ ಮುಗಿಸಿದ್ದೆ. ಕೊನೆಯದನ್ನು ಆಗ ಅದು ನಿಷೇಧಿಸಲ್ಪಟ್ಟಿರಲಿದ್ದವಾದ್ದರಿಂದ ನಾನು ಓದಬಲ್ಲವಳಾಗಿದ್ದೆ. ಆದರೆ ನನಗೆ ಅದು ಅಷ್ಟೇನೂ ಅರ್ಥವಾಗಲಿಲ್ಲ.

ಅವರ ವಿಚಾರಸರಣಿ ಸಾಮಾನ್ಯಕ್ಕೆ ವ್ಯತಿರಿಕ್ತವೆಂಬುದಕ್ಕೆ ನನ್ನ ಮನಸ್ಸಿನಲ್ಲಿ ಮಾಸದೆ ಉಳಿ

ದಿರುವ ಒಂದು ಸಂಗತಿ ನನ್ನ ಓದಿಗೆ ಸಂಬಂಧಿಸಿದಂತೆ ಒಮ್ಮೆ ಅಕಸ್ಮಾತ್ ಅವರಾಡಿದ ಒಂದು ಮಾತು. "ಸಾಹಿತ್ಯದಲ್ಲಿ ಇವಳ ಅಭಿರುಚಿ ನಿಮಗಿಂತಲೂ ಉಚ್ಚ ಮಟ್ಟದ್ದಾಗಿದೆ" ಎಂದೊಮ್ಮೆ ನಮ್ಮ ತಾಯಿ ತಮಾಷೆಯಿಂದ ನುಡಿದಾಗ ತಂದೆ ತಟ್ಟನೆ ಉತ್ತರಿಸಿದ್ದರು, "ಅದು ಇರಬೇಕಾದುದು ಹಾಗೆಯೇ. ನಮ್ಮ ಮಕ್ಕಳು ನಮಗಿಂತಲೂ ಉತ್ತಮರೇ ಆಗಿರಬೇಕು" ಎಂದು. ಒಂದು ವಿಷಯದಲ್ಲಿ ಅವರು ತಮ್ಮ ಅಧಿಕಾರವನ್ನು ನಡೆಸಿದರು. ಅಂಥ ಪ್ರಸಂಗಗಳೇ ತೀರ ಕ್ವಚಿತ್ತಾಗಿ ಬರುತ್ತಿದ್ದುದರಿಂದ ಅದು ನನಗೆ ಸ್ಪಷ್ಟವಾಗಿ ನೆನಪಿದೆ. ನಾನು ಫ್ರೆಂಚನ್ನು ನನ್ನ ದ್ವಿತೀಯ ಭಾಷೆಯಾಗಿ ತೆಗೆದುಕೊಳ್ಳುತ್ತೇನೆಂದಾಗ ಅಲ್ಲ, ಅದು ಸಂಸ್ಕೃತವೇ ಆಗಬೇಕೆಂದು ಅವರು ಅಧಿಕಾರವಾಣಿಯಿಂದ ಹೇಳಿದರು. ನನ್ನ ಗೆಳತಿಯರಲ್ಲಿ ಹೆಚ್ಚಿನವರು ಫ್ರೆಂಚನ್ನೇ ತೆಗೆದುಕೊಂಡಿದ್ದರಾದ್ದರಿಂದ ನಾನು ಮನಸ್ಸಿಲ್ಲದ ಮನಸ್ಸಿನಿಂದ ಸಂಸ್ಕೃತಕ್ಕೆ ಶರಣು ಹೋಗಬೇಕಾಯಿತು. ಅದರ ಪರಿಣಾಮವೆಂದರೆ ಅದರಲ್ಲಿ ನನ್ನ ಪ್ರಗತಿ ಕುಂಟುತ್ತಲೇ ನಡೆಯಿತು. ನಾನು ಇಂಟರ್ ಆರ್ಟ್ಸ್‌ನಲ್ಲಿದ್ದಾಗ ಮಾತ್ರ ಅವರು ತಮ್ಮ ಸಹಾಯಹಸ್ತ ನೀಡಲು ಮುಂದಾದರು. ಒಬ್ಬ ಒಳ್ಳೆಯ ಶಿಕ್ಷಕ ಏನು ಮಾಡಬಲ್ಲನೆಂಬುದು ನನಗೆ ಆಗ ಮನವರಿಕೆಯಾಯಿತು. ಪರೀಕ್ಷೆಯಲ್ಲಿ ನನಗೆ ಉತ್ತಮ ಮಾರ್ಕುಗಳು ಬಂದವು ಮಾತ್ರವಲ್ಲ, ಅದುವರೆಗೆ ನೀಸ್ಸತ್ತ್ವವೂ ಮೃತವೂ ಆಗಿ ತೋರುತ್ತಿದ್ದ ಭಾಷೆ ಜೀವಂತವೂ ಉಜ್ವಲವೂ ಆಗಿ ಗೋಚರಿಸತೊಡಗಿತು.

ಆದರೆ ಅವರ ಹೃದಯಕ್ಕೆ ತೀರ ಸಮೀಪವಾಗಿರುವುದು ರಂಗಭೂಮಿಯೆಂಬುದು ಸುಸ್ಪಷ್ಟವೇ ಆಗಿತ್ತು. ಕೆಲವೊಮ್ಮೆ ರಂಗತಾಲೀಮುಗಳು ಮನೆಯಲ್ಲೇ ನಡೆಯುತ್ತಿದ್ದವು.




ಸುವಾಸಿತ ಹಾಗೂ ಸ್ವಾದಿಷ್ಟ
ಮುಖಶುದ್ಧಿಗಾಗಿ
CHAMAN
SWEET, DELICIOUS AND FRAGRANT.
STAR COMPANY, 36, Kapileshwar, BELGAUM.
ಚೆಮನ್
ಚಮನ್ ಇದು ಅತ್ಯಂತ ಸ್ವಾದಿಷ್ಟ ಹಾಗೂ ರುಚಿಕರವಾದ ಚೂರ್ಣವಾಗಿದೆ. ಇದನ್ನು ಸೇವಿಸುವದರಿಂದ ಬಾಯಿಯು ಸುವಾಸಿತವಾಗುತ್ತದೆ.
ಚಮನದಲ್ಲಿ ಏನೆಲ್ಲ ಇದೆ?
ಈ ಚಮನದಲ್ಲಿ ಜೇಷ್ಠಮಧು, ಕೇಶರ, ಏಲಕ್ಕಿ. ಲವಂಗ, ಪತ್ರಿ, ಜಾಜಿಕಾಯಿ, ಬಡೆಸೋಪ್, ಮೆಂಥಾಲ್‌ಗಳಂಥ ಅನೇಕ ಬಗೆಯ ಸುಗಂಧಿತ ಹಾಗೂ ರುಚಿಕರ ವಸ್ತುಗಳು ಒಳಗೊಂಡಿರುವವು. ಅದಕ್ಕೆಂದೇ ಇದು ಚಿಕ್ಕಮಕ್ಕಳಿಂದ ವೃದ್ಧರವರೆಗೆ ಎಲ್ಲರಿಗೂ ಅಚ್ಚುಮೆಚ್ಚು.
ಸ್ಟಾರ್ ಕಂಪನಿ, ಬೆಳಗಾಂವ್

ಆಗ ಮಾತ್ರ ಅವರಲ್ಲಿನ ತೀರ ವಿಭಿನ್ನ ವ್ಯಕ್ತಿತ್ವ ನಮಗೆಲ್ಲ ಒಡೆದು ಕಾಣುತ್ತಿತ್ತು. ಅವರು ಅದರಲ್ಲಿ ಪೂರ್ತಿ ತನ್ಮಯರಾಗಿರುತ್ತಿದ್ದರಲ್ಲದೆ, ಇತರರೂ ತಮ್ಮಂತೆಯೆ ಏಕಾಗ್ರ ಚಿತ್ತರಾಗಿರಬೇಕೆಂದು ಬಯಸುತ್ತಿದ್ದರು. ತಮ್ಮ ಅಪೇಕ್ಷೆಯ ಮಟ್ಟಕ್ಕೆ ಇತರರು ಬಾರದಿದ್ದಾಗ ಅವರು ತಾಳ್ಮೆಯನ್ನೆಲ್ಲ ಕಳೆದುಕೊಂಡುಬಿಡುತ್ತಿದ್ದರು. ಆದರೆ ಒಂದು ವೈಚಿತ್ರ್ಯವೆಂದರೆ ಕೆಲವೊಮ್ಮೆ ಸಿಟ್ಟಿಗೇಳಬೇಕಾದಂಥ ಸಂದರ್ಭಗಳಲ್ಲೂ ಭಾರಿ ತಾಳ್ಮೆಯೇ ಅವರಲ್ಲಿ ವ್ಯಕ್ತವಾಗುತ್ತಿತ್ತು. ಇತ್ತೀಚೆ ಸಂಸ್ಕೃತ 'ಶಾಕುಂತಲ'ದ ರಂಗತಾಲೀಮನ್ನವರು ಮಾಡುತ್ತಿದ್ದಾಗ ಅದರ ಕಾರಣ ನನಗೆ ಮನದಟ್ಟಾಯಿತು. ಕಾಪಟ್ಯ ನಿಷ್ಕಾಪಟ್ಯಗಳಲ್ಲಿಯ ಅಂತರವನ್ನು ಅವರು ಬಲು ಸೂಕ್ಷ್ಮವಾಗಿ ಗುರುತಿಸುತ್ತಾರೆ.

ಅವರು ವೈಪರೀತ್ಯಗಳ ವಿಚಿತ್ರ ಮಿಶ್ರಣವಾಗಿದ್ದಾರೆ. ಅಪೂರ್ವ ಸಮಯನಿಷ್ಠರೂ (ಮನೆಯಲ್ಲಿಯ ವಾಚು, ಟೈಂಪೀಸುಗಳನ್ನೂ ಸದಾಕಾಲ ಸರಿಯಾದ ಸಮಯ ತೋರಿಸುವಂತೆಯೇ ಇಟ್ಟಿರಲಾಗುತ್ತದೆ.) ಚಿಕ್ಕ ಪುಟ್ಟ ವಿಷಯಗಳಲ್ಲೂ ತೀರ ತಾಳ್ಮೆಯಿಲ್ಲದವರಾಗಿಯೂ ತೋರುವ ಅವರು ಅತಿ ಒತ್ತಡದ ಪ್ರಸಂಗಗಳಲ್ಲಿ ಹಾಗು ಗಂಭೀರ ವಿಷಯಗಳಲ್ಲಿ ಸಹನೆಯೇ ಮೈವೆತ್ತಂತಿರುತ್ತಾರೆ. ಕೆಲವರೊಂದಿಗೆ ತಾಸುಗಟ್ಟಲೆ ಮಾತಾಡಬಲ್ಲ ವಾದರೆ ಹೆಡ್ಡರನ್ನಾಗಲಿ ತಲೆಚಿಟ್ಟು ಹಿಡಿಸುವಂತೆ ಮಾತಾಡುವವರನ್ನಾಗಲಿ ಕಂಡರೆ ಅವರಿಗೆಷ್ಟೂ ಆಗದು. ಕೆಲ ವಿಷಯಗಳಲ್ಲಿ ಭಾರಿ ವ್ಯವಹಾರಚತುರರಾಗಿಯೂ ಗೆರೆಗೆರೆಯನ್ನೂ ಸೂಕ್ಷ್ಮವಾಗಿ ಗಮನಿಸಬಲ್ಲವರೂ ಆಗಿ ಕಂಡು ಬಂದರೆ ಮತ್ತೆ ಕೆಲವು ವಿಷಯಗಳಲ್ಲಿ ತೀರ ಅನ್ಯಮನಸ್ಕರಾಗಿ ತೋರುತ್ತಾರೆ. ಈ ಕಾರಣದಿಂದಾಗಿಯೋ ಏನೋ ಅವರು ಮೇಲಿಂದ ಮೇಲೆ ಕಿಸೆಗಳ್ಳರಿಗೆ ಸುಲಭವಾಗಿ ಬಲಿಯಾಗುತ್ತಾರೆ. ಇವರನ್ನು ಕಂಡೊಡನೆಯೇ ಕಿಸೆಗಳ್ಳರು ತಮ್ಮ ತಕ್ಷಣದ ಬಲಿಪಶುವೆಂದು ನಿರ್ಧರಿಸಿಬಿಡುತ್ತಾರೆಂದು ನಮ್ಮ ತಾಯಿ ಹೇಳುತ್ತಿರುತ್ತಾರೆ.

ಚಿಕ್ಕ ಮಕ್ಕಳಾಗಿದ್ದಾಗಲೇ ನಾವೆಲ್ಲ ಅವರ ಕ್ರಿಕೆಟ್ – ಪ್ರೇಮವನ್ನು ಮೈಗೂಡಿಸಿಕೊಂಡೆವು. ಅಂತೆಯೆ ನಿರ್ಣಾಯಕ ಕ್ರಿಕೆಟ್ ಪಂದ್ಯ ಪ್ರಾರಂಭವಾಯಿತೆಂದರೆ ಅದನ್ನು ನೋಡುವುದಕ್ಕೋ ಕಾಮೆಂಟರಿ ಕೇಳುವುದಕ್ಕೋ ನಮ್ಮ ಇಡೀ ಕುಟುಂಬವೇ ಮುಕುರುತ್ತದೆ. ಇಂದು ನಮ್ಮಲ್ಲಿ ಕ್ರಿಕೆಟ್ಟಿನ ಆಕರ್ಷಣೆ ಮೊದಲಿನಷ್ಟು ಉಳಿದಿಲ್ಲವಾದರೆ ಅವರ ಮೊಮ್ಮಕ್ಕಳಿಬ್ಬರೂ ಈಗವರ ಜೊತೆಗಾರರು. ಮೊನ್ನೆ ಭಾರತ ಆಸ್ಟ್ರೇಲಿಯ ನಿರ್ಣಾಯಕ ಸರಣಿ ನಡೆದಿದ್ದಾಗ ಅಜ್ಜ–ಮೊಮ್ಮಕ್ಕಳು ಕೋಳಿ ಕೂಗುವ ಮುನ್ನವೇ ಎದ್ದು ಮೂವರೂ ಅಷ್ಟೇ ಆಸ್ಥೆಯಿಂದ ಕಾಮೆಂಟರಿ ಕೇಳುವುದರಲ್ಲಿ ಮಗ್ನರಾಗಿರುತ್ತಿದ್ದರು.

ಈ ಮನುಷ್ಯ ಯಾರೊಂದಿಗೂ ಬೆರೆಯುವ ವ್ಯಕ್ತಿಯೂ ಅಲ್ಲ, ಇವರನ್ನು ಅರಿಯುವುದೂ ಸುಲಭಸಾಧ್ಯವಲ್ಲವೆಂಬ ಪ್ರತೀತಿಯಿದೆ. ಆದರೆ ಸ್ವಪ್ರಜ್ಞೆಯಿಲ್ಲದ ನೇರ ಮನಸ್ಸಿನ ಚಿಕ್ಕ ಮಕ್ಕಳು ಮಾತ್ರ ಇವರನ್ನು ಸುಲಭವಾಗಿ ತಲಪಬಲ್ಲರು. ಬಗೆ ಬಗೆಯ ಕತೆಗಳನ್ನು ಹೇಳುವ, ಹಾಸ್ಯ ಚಟಾಕಿಗಳನ್ನೆಬ್ಬಿಸುವ ಮತ್ತು ಅಭಿನಯಿಸುವ ಈ ಅಜ್ಜ ಮೊಮ್ಮಕ್ಕಳಿಗೆ ತುಂಬ ಪ್ರಿಯ ಆಕರ್ಷಣೆಯೆಂದರೆ ಆಶ್ಚರ್ಯಪಡಬೇಕಿಲ್ಲ. ತಮ್ಮ ಈ ಒಂದು ಗುಣ ಎಳೆಯುವರೊಂದಿಗೆ ಸುಲಭ ಸಂಪರ್ಕ ಸಾಧಿಸಬಲ್ಲ ಗುಣ–ದಿಂದಾಗಿಯೇ ಅವರು ಅಪರ ವಯಸ್ಸಿನಲ್ಲೂ, ಪೂರ್ತಿ ಭಿನ್ನ ಮೌಲ್ಯಗಳನ್ನೇ ಪ್ರತಿನಿಧಿಸುವ ಇಂದಿನ ಈ ಜಗತ್ತಿನಲ್ಲಿ ಯಾವುದೋ ಯುಗಕ್ಕೆ ಸೇರಿದವರಾಗಿ ಕಾಣುವುದಿಲ್ಲ. ಬದಲು ಇಂದವರನ್ನು ನೋಡಿದಾಗ ಪ್ರತಿಯೊಂದನ್ನೂ ವ್ಯಂಗ್ಯಭಾವದಿಂದ ವೀಕ್ಷಿಸುತ್ತ ಆನಂದಿಸುವ ನಿರ್ಲಿಪ್ತ ಪ್ರೇಕ್ಷಕನನ್ನು ಕಂಡ ಅನುಭವವಾಗುತ್ತದೆ.

✡

ಸಾಹಿತಿಗಳಿಗೆ ವಿಮರ್ಶಕನೊಬ್ಬನ ಕೆಲವು ಪ್ರಶ್ನೆಗಳು

‘ಕಸ್ತೂರಿ’ ವಸಂತಸಂಚಿಕೆಯ ಒಂದು ಪರಿಪಾಠವೆಂದರೆ ನಾಡಿಗೆ, ನಾಡಿನ ವಿಚಾರವಂತರಿಗೆ ಜ್ವಲಂತವೆನಿಸಬಹುದಾದಂಥ ಸಮಸ್ಯೆಯೊಂದನ್ನೆತ್ತಿಕೊಂಡು ಹಲವು ಮಹನೀಯರಿಗೆ ಆ ಕುರಿತ ಪ್ರಶ್ನೆಗಳನ್ನು ಕಳಿಸಿ ನಂತರ ಆ ಪ್ರಶ್ನೆಗಳನ್ನೂ ಉತ್ತರಗಳನ್ನೂ ಪ್ರಕಟಿಸುವುದು. ಇದನ್ನು ಬರಿ ಒಂದು ಸಂಪ್ರದಾಯವೆಂಬ ದೃಷ್ಟಿಯಿಂದ ಮಾಡುತ್ತಿರದೆ ಎಷ್ಟೋ ಸಲ ಇದು ಹೀಗೆಯೇ ಎಂದು ನಿಖರವಾಗಿ ಹೇಳಲು ಸಾಧ್ಯವಾಗದಿರಬಹುದಾದಂಥ ಸಮಸ್ಯೆಗಳಿಗೆ ಶಾಬ್ದಿಕ ರೂಪು ಕೊಟ್ಟು ವಿಚಾರವೇತ್ತರಿಂದ ಉತ್ತರಗಳನ್ನು ಪಡೆದು ಓದುಗರಿಗೆ ಆರೋಗ್ಯಪೂರ್ಣ ಆಹಾರವೊದಗಿಸುವ ಹವ್ಯಾಸ ನಮ್ಮದು.

ನಮ್ಮ ಈ ಸಲದ ಪ್ರಯತ್ನದಲ್ಲಿ ಇರುವ ಒಂದು ಅಂತರವೆಂದರೆ ಕವಿಯಾಗಿ, ವಿಮರ್ಶಕನಾಗಿ ಕನ್ನಡದಲ್ಲಿ ಹೆಸರು ಮಾಡಿಕೊಂಡಿರುವ ಶ್ರೀ ದೇಶಪಾಂಡೆ ಸುಬ್ಬರಾಯರು ಈ ಪ್ರಶ್ನೆಗಳನ್ನು ನಿಯೋಜಿಸಿದ್ದಾರೆ. ಅವರ ಗಂಭೀರ ಚಿಂತನೆಯ ವಿಷಯವಾದ ಈ ಪ್ರಶ್ನೆಗಳನ್ನು ಅವರು ಮುಂಬರುವ ತಮ್ಮ ಒಂದು ಕೃತಿಯಲ್ಲಿ ಇನ್ನೂ ಆಳವಾಗಿ ಚರ್ಚಿಸಲಿದ್ದಾರೆ. ಈ ವಿಚಾರವೇದಿಕೆಯಲ್ಲಿ ಭಾಗವಹಿಸಿ ಸಹಕರಿಸಿದ ಎಲ್ಲ ಸಾಹಿತಿಗಳಿಗೂ ‘ಕಸ್ತೂರಿ’ ಕೃತಜ್ಞ.

—ಸಂಪಾದಕ

ಪ್ರಶ್ನೆಗಳು

೧) ಲೇಖಕನ ‘ಅಭಿವ್ಯಕ್ತಿಸ್ವಾತಂತ್ರ್ಯ’ ಕುರಿತಂತೆ ಇತ್ತೀಚೆಗೆ, ವಿಶೇಷವಾಗಿ ತುರ್ತುಪರಿಸ್ಥಿತಿಯ ಮುಕ್ತಾಯದ ನಂತರ, ತುಂಬ ಒತ್ತುಕೊಟ್ಟು ಚರ್ಚಿಸಲಾಗುತ್ತಿದೆ. ಆದರೆ ತುರ್ತು ಪರಿಸ್ಥಿತಿಗಿಂತ ಮುಂಚೆಯಾದರೂ ನಮ್ಮ ಕನ್ನಡ ಲೇಖಕರು ಈ ‘ಅಭಿವ್ಯಕ್ತಿಸ್ವಾತಂತ್ರ್ಯ’ವನ್ನು ಅದರ ಸಂಪೂರ್ಣ ಅರ್ಥ ಮತ್ತು ವ್ಯಾಪ್ತಿಯಲ್ಲಿ ಎಷ್ಟರಮಟ್ಟಿಗೆ ಶಕ್ತಿಶಾಲಿಯಾಗಿ ಬಳಸಿಕೊಂಡಿದ್ದಾರೆ? ಇಂದು ಕೂಡ ಹೊಟ್ಟೆಪಾಡಿಗಾಗಿ ಒಂದಿಲ್ಲೊಂದು ‘ವ್ಯವಸ್ಥೆ’ಯ ಅಂಗಕ್ಕೆ ಅಧೀನವಾಗಿ ಕೆಲವಾದರೂ ಕಠೋರ ನಿಯಮಗಳಿಗೆ ಬದ್ಧರಾದ ನಮ್ಮ ಬಹುಪಾಲು ಕನ್ನಡ ಲೇಖಕರು ಎಷ್ಟರಮಟ್ಟಿಗೆ ಈ ಅಭಿವ್ಯಕ್ತಿಸ್ವಾತಂತ್ರ್ಯವನ್ನು ಪೂರ್ಣ ಪ್ರಭಾವಶಾಲಿಯಾಗಿ ಉಪಯೋಗಿಸಿಕೊಳ್ಳಬಲ್ಲರು, ಉಪಯೋಗಿಸಿಕೊಳ್ಳುತ್ತಿದ್ದಾರೆ?

೨) ಹೊಟ್ಟೆಪಾಡಿಗಾಗಿ ಯಾವುದಾದರೊಂದು 'ವ್ಯವಸ್ಥೆ'ಯಲ್ಲಿ ದುಡಿಯುವವನ 'ಅಭಿವ್ಯಕ್ತಿ' ಒಂದು ಹಂತದವರೆಗೆ ಮಾತ್ರವೇ ನಿಖರ ಮತ್ತು ಸ್ಪಷ್ಟವಾಗಿರುತ್ತದೆಯ- ಲ್ಲವೆ? ಎಂದರೆ ಯಾವುದೇ ಒಂದು 'ವ್ಯವಸ್ಥೆ' ನೀಡುವ ಎಲ್ಲ ಬಗೆಯ 'ಸೌಲಭ್ಯ-ಸೌಕರ್ಯ' ಗಳನ್ನು ಧಿಃಕ್ಕರಿಸಿ 'ಪೂರ್ತಿ ತನ್ನ ಸ್ವಂತ ಕಾಲುಗಳ ಮೇಲೆ ನಿಂತವನು' ಮಾತ್ರ ಈ ಅಭಿವ್ಯಕ್ತಿಸ್ವಾತಂತ್ರ್ಯವನ್ನು ಪೂರ್ಣ ಸತ್ವದೊಂದಿಗೆ ಬಳಸಿಕೊಳ್ಳಬಲ್ಲನೆ? ಆದರೆ ಇತ್ತೀಚೆ ಪ್ರವರ್ಧಮಾನವಾಗುತ್ತಿರುವ ಕೆಲವು ವ್ಯಾಖ್ಯೆ-ವಿಶ್ಲೇಷಣೆಗಳ ಪ್ರಕಾರ ಆಸ್ತಿಯ ವೈಯುಕ್ತಿಕ ಒಡೆತನ ನಷ್ಟವಾಗಿ, ಅದು ಒಟ್ಟು ಸಮಾಜಕ್ಕೆ (ಸರಕಾರಕ್ಕೆ) ಸೇರಿದ್ದೆಂದಾ- ದರೆ, ಇತರರಂತೆಯೇ ಸಾಮಾನ್ಯ ವ್ಯಕ್ತಿಯೂ ಆದ ಬರಹಗಾರ ಇಂತಹ ಒಂದಿಲ್ಲೊಂದು ಸ್ವರೂಪದ 'ವ್ಯವಸ್ಥೆ'ಯ, 'ಮರ್ಜಿ-ಮುಲಾಜು'ಗಳ ಮಡಿಲಲ್ಲೇ ಇದ್ದುಕೊಂಡು ಬರೆಯುವುದಾದಲ್ಲಿ ಅವನಿಂದ ಎಷ್ಟರಮಟ್ಟಿಗೆ ಅರ್ಥಪೂರ್ಣ, ಸತ್ಯನಿಷ್ಠುರ ಮತ್ತು ಆರೋಗ್ಯಪೂರ್ಣ ಬರವಣಿಗೆ ಸಾಧ್ಯ?

೩) ಸಾವಿರಾರು ವರ್ಷಗಳ 'ಜಾತಿಭೂಯಿಷ್ಠ' ಪರಿಸರ ಮತ್ತು ಬದುಕುಗಳಿಂದಾಗಿ ಪ್ರತಿಯೊಂದು 'ಜಾತಿ'ಯ ವ್ಯಕ್ತಿಯೂ ಕೆಲವೊಂದು ವಿಶಿಷ್ಟ ಜೀವನಕ್ರಮ ಮತ್ತು ಭಾಷಾವೈವಿಧ್ಯವನ್ನು ರೂಢಿಸಿಕೊಂಡು ಬಂದ ದೇಶ ಇದು. ಬರಹಗಾರರೂ ಇದಕ್ಕೆ ಹೊರತಲ್ಲ. ಹಳ್ಳಿಗಳ ವಾತಾವರಣದಲ್ಲಿ ಇಂದಿಗೂ ಜೀವಂತವಾಗಿರುವ ಜಾತಿಮೂಲ ಪರಿಸರಗಳಿಂದಾಗಿ ಇದು ಹೆಚ್ಚು ಅನಿವಾರ್ಯವಾದರೆ, ನಗರಗಳ ವಾತಾವರಣದಲ್ಲಿ ನಿಕಟ ಬಳಕೆಗಳು ತೀರ ಕ್ವಚಿತ್ತಾಗಿರುವ ಯಾಂತ್ರಿಕತೆ, ಅಪರಿಚಿತತೆಗಳಿಂದಾಗಿ ಇದು ಹೆಚ್ಚು ಅಪರಿಹಾರ್ಯವಾಗುತ್ತದೆ. ಈ ಅಂಶಗಳು ಬರಹಗಾರನಿಗೆ ಇತರ ಜಾತಿಗಳ ಜೀವನಕ್ರಮ ಮತ್ತು ಭಾಷಾವೈವಿಧ್ಯವನ್ನು 'ಪರಿಚಯ'ದ ಮಟ್ಟಿಗೆ ಮಾತ್ರ ಉಳಿಸಿ- ಬಿಟ್ಟು ಆಯಾ 'ಪರಿಸರ ಮತ್ತು ಬದುಕು'ಗಳ ಗಾಢ ಆತ್ಮೀಯತೆಯಿಂದ ಮತ್ತು ಅಥೆಂಟಿಸಿಟಿಯಿಂದ ಆತನನ್ನು ವಂಚಿತನನ್ನಾಗಿ ಮಾಡುತ್ತವಲ್ಲವೆ? ಇದರ ನೇರ ಪರಿ- ಣಾಮವಾಗಿ, ಬರಹಗಾರ ತನ್ನ ಜೀವನಕ್ರಮ ಮತ್ತು ಭಾಷೆಗಳನ್ನು ದಾಟ ಇತರ 'ಬದುಕು'ಗಳ ಬಗ್ಗೆ ಬರೆಯಲೆತ್ನಿಸಿದಾಗ ಅಲ್ಲಿ ಕೃತ್ರಿಮತೆ ಅನಿವಾರ್ಯವಾಗಿ ಕಂಡು ಬರುತ್ತದೆ. ಈ ಕೃತ್ರಿಮತೆಯನ್ನು ನಿವಾರಿಸುವುದು ಹೇಗೆ? ಹೊಸ ಆರ್ಥಿಕ ವ್ಯವಸ್ಥೆ ಮತ್ತು ಔದ್ಯೋಗೀಕರಣಗಳು ನಿರ್ಮಿಸಿದ 'ವರ್ಗಸಮಾಜ' ನೀಡುತ್ತಿರುವ ಜೀವನ- ಕ್ರಮಗಳು, 'ಜಾತಿಮೂಲ ಸಮಾಜ'ಗಳು ನೀಡುವ ಜೀವನಕ್ರಮಕ್ಕಿಂತ ಭಿನ್ನವಾಗಿವೆ. ಈ 'ವರ್ಗಸಮಾಜ'ಗಳು ನೀಡುವ ಅನುಭವಗಳು, ಪರಿಸರಗಳು ನಿಜಕ್ಕೂ ಒಂದು ಹೊಸ ಜೀವನಕ್ರಮವನ್ನು, ಬದುಕಿನ ವ್ಯವಸ್ಥೆಯನ್ನು ನೀಡುವಷ್ಟು ಗಾಢವಾಗಿವೆಯೆ? ಹಾಗಿಲ್ಲವಾದಲ್ಲಿ ಯಾವುದೇ ವ್ಯವಸ್ಥೆಯಲ್ಲೂ ಒಂದಿಲ್ಲೊಂದು ಬಗೆಯ 'ಸೀಮಿತತೆ' ನಮ್ಮ ಬರಹಗಾರನಿಗೆ ಮತ್ತು ಆತನ 'ಅಭಿವ್ಯಕ್ತಿ'ಗೆ ಅನಿವಾರ್ಯವೆ?

ಈ ಪ್ರಶ್ನೆಗಳ ಹಿನ್ನೆಲೆಯಲ್ಲಿ ಹುಟ್ಟುವ ಒಂದು ಮುಖ್ಯ ಪ್ರಶ್ನೆಯೆಂದರೆ, ನಮ್ಮ ದೇಶದ ಒಟ್ಟು ಸಮಾಜದ, ಸಮುದಾಯದ ಇಡಿಯ ಜನತೆಯ ಒಟ್ಟು ಬದುಕನ್ನು ಕುರಿತು ಒಂದೇ ಒಂದು ಅಥೆಂಟಿಕ್ ಕೃತಿಯನ್ನು ಬರೆಯುವುದೇ ಇಲ್ಲಿ ಅಸಾಧ್ಯವೆ? ಸಾಧ್ಯವಿದ್ದರೆ ಹೇಗೆ?

(೨೬ನೇ ಪುಟಕ್ಕೆ ಮುಂದುವರಿದಿದೆ)

ಇವರು ಉತ್ತರಿಸಿದ್ದಾರೆ

ಡಾ. ರಂ. ಶ್ರೀ ಮುಗಳಿ, ಪ್ರಾ. ಪ್ರಂ. ಆಚಾರ್ಯ, ಡಾ. ಹಾ. ಮಾ. ನಾಯಕ, ಡಾ. ಜಿ. ಎಸ್. ಶಿವರುದ್ರಪ್ಪ.

ಡಾ. ರಂ. ಶ್ರೀ. ಮುಗಳಿ

೧. ತುರ್ತುಪರಿಸ್ಥಿತಿಗಿಂತ ಮುಂಚೆ ಈ ಶತಮಾನದಲ್ಲಿ ಪರಕೀಯರ ಆಳಿಕೆಯಿಂದ ಉಂಟಾದ ನಿರ್ಬಂಧ, ಪರಕೀಯರ ಆಳಿಕೆ ಮುಗಿದು ಸ್ವಕೀಯರ ಆಳಿಕೆ ಸುರುವಾದ ಮೇಲೆ ಪ್ರಜಾಪ್ರಭುತ್ವ ಪದ್ಧತಿಯ ಹೊಸ ಪ್ರಯೋಗದಲ್ಲಿ ಹಾಕಲಾದ ನಿರ್ಬಂಧ ಮತ್ತು ಭಯೋತ್ಪಾದನೆ ಇವೆಲ್ಲವೂ ವಿಚಾರವಂತರಿಗೆ ತುರ್ತುಪರಿಸ್ಥಿತಿಗಿಂತ ಕಡಿಮೆ ಕಠೋರವಾದ ಆದರೂ ದಿಟವಾದ ವಿಷಮವಾತಾವರಣವನ್ನು ಉಂಟುಮಾಡಿದ್ದವು. ಈ ವಾತಾವರಣದಲ್ಲಿ ಯಾರೇ ಆಗಲಿ, ತಾವು ಹೇಗಾದರೂ ಮಾಡಿ ಬದುಕಬೇಕು, ಮುಂದೆ ಬರಬೇಕು ಎಂಬ ವ್ಯಾವಹಾರಿಕಸೂತ್ರವನ್ನೇ ಮುಖ್ಯವಾಗಿ ಅನುಸರಿಸುತ್ತಾರೆ. ಲೇಖಕರು ಕೂಡ ಇದರಿಂದ ಹೊರತಾಗಲಾರರು. ಕೆಲವು ಅಪವಾದಗಳನ್ನು ಬಿಟ್ಟರೆ ಕನ್ನಡ ಲೇಖಕರು ಈ ವಾತಾವರಣದ ಒತ್ತಡಕ್ಕೆ ಒಳಗಾಗಿಯೇ ಬರವಣಿಗೆಯನ್ನು ಮಾಡುತ್ತ ಬಂದಿದ್ದಾರೆ. ಅವರು ಸಂಭಾವ್ಯ ಪರಿಣಾಮದ ಭೀತಿಯಿಲ್ಲದೆ ನೇರವಾಗಿ ಕಟುಸತ್ಯವನ್ನು ಸಾರಿ ತಮ್ಮ ಅಭಿವ್ಯಕ್ತಿಸ್ವಾತಂತ್ರ್ಯವನ್ನು ಬಳಸಿದ್ದು ಕಡಿಮೆ. ಆದರೆ ಕಾವ್ಯ, ಕಥೆ, ನಾಟಕ, ವ್ಯಂಗ್ಯವಿನೋದ ಮುಂತಾದ ಕಲಾತ್ಮಕ ಸಾಧನಗಳಿಂದ ಅದನ್ನು ಯಶಸ್ವಿಯಾಗಿ ಬಳಸಿದ್ದಾರೆ. ಅದು ಎಲ್ಲರಲ್ಲಿಯೂ ಅಷ್ಟೇ ಶಕ್ತಿಶಾಲಿಯಾಗಿತ್ತು ಎಂದು ಹೇಳಲು ಬಾರದು. ಅಭಿವ್ಯಕ್ತಿಸ್ವಾತಂತ್ರ್ಯದ ಸಂಪೂರ್ಣ ಅರ್ಥ ಮತ್ತು ವ್ಯಾಪ್ತಿ ಎಂದರೇನು ಎಂಬುದು ಸ್ಪಷ್ಟವಿಲ್ಲ. ಸ್ವಾತಂತ್ರ್ಯವು ಸ್ವಯಂ ಸ್ವೀಕೃತವಾದ ಶಾಸನಕ್ಕೆ ಒಳಪಟ್ಟಿರಬೇಕು, ಯಾವುದೇ ವಿಧಿನಿಷೇಧವಿಲ್ಲದ ಸ್ವೈರತ್ವವಾಗಬಾರದು. ಎಂಥ ಸಂಪೂರ್ಣ ಅರ್ಥದಲ್ಲಿಯೂ ಅಭಿವ್ಯಕ್ತಿಸ್ವಾತಂತ್ರ್ಯವು ತಾನೇ ಹಾಕಿಕೊಂಡ ಸದಭಿರುಚಿಯ ಮತ್ತು ಸಂಸ್ಕೃತಿಯ ಗೆರೆಗಳನ್ನು ದಾಟಬಾರದು. ಮುಕ್ತ ಮನಸ್ಸಿನ ಬರವಣಿಗೆ ಅಂದರೆ ವಿಕೃತ ಮನಸ್ಸಿನ ಪ್ರಕಟನೆಯಾಗಬಾರದು. ಸೃಜನಶೀಲ ಕೃತಿಗಳಲ್ಲಿಯೂ ಅಭಿವ್ಯಕ್ತಿಸ್ವಾತಂತ್ರ್ಯದ ಹೆಸರಿನಲ್ಲಿ ಇಂಥ ಬರವಣಿಗೆ ಕೆಲವೆಡೆಗೆ ಬಂದಿದೆ. ಕೆಲವು ವಿಮರ್ಶಕರಿಂದ ಅದಕ್ಕೆ ಮೆಚ್ಚುಗೆಯೂ ದೊರೆತಿದೆ. ಇಷ್ಟೇ ಯಾಕೆ, ಅದನ್ನು ಅಟ್ಟಕ್ಕೇರಿಸಿಯೂ ಆಗಿದೆ.

'ಇಂದು ಕೂಡ ಹೊಟ್ಟೆಪಾಡಿಗಾಗಿ "ವ್ಯವಸ್ಥೆ"ಯ ಅಂಗಕ್ಕೆ ಅಧೀನವಾಗಿ ಕೆಲವಾದರೂ ಕಠೋರನಿಯಮಗಳಿಗೆ ಬದ್ಧರಾದ ನಮ್ಮ ಬಹು ಪಾಲು ಕನ್ನಡ ಲೇಖಕರು ಎಷ್ಟು ಮಟ್ಟಿಗೆ ಈ ಅಭಿವ್ಯಕ್ತಿಸ್ವಾತಂತ್ರ್ಯವನ್ನು ಪೂರ್ಣಪ್ರಭಾವಶಾಲಿಯಾಗಿ ಉಪಯೋಗಿಸಿಕೊಳ್ಳಬಲ್ಲರು, ಉಪಯೋಗಿಸಿಕೊಳ್ಳುತ್ತಿದ್ದಾರೆ?' ಈ ಪ್ರಶ್ನೆಯು ಪೂರ್ವಾರ್ಧದ ಒಕ್ಕಣೆಯಿಂದ

ಪುಟ ೨೪ ರಿಂದ ಬಂದದ್ದು

೪) ನಮ್ಮಲ್ಲಿ ಲಲಿತ ಸಾಹಿತ್ಯ ಎಷ್ಟೇ ವಿಪುಲ ಪ್ರಮಾಣದಲ್ಲಿ ಸೃಷ್ಟಿಯಾಗುತ್ತಿದ್ದರೂ ಸಾಮಾಜಿಕವಾಗಿ ನಿಜಕ್ಕೂ ಗಾಢವಾದ ಮತ್ತು ಆಳವಾದ, ವಿಚಾರಾತ್ಮಕ, ವಿಮರ್ಶಾತ್ಮಕ ಮತ್ತು ಮೂಲಭೂತವಾಗಿ ಸಂಶೋಧನಾತ್ಮಕ ತಳಪಾಯದ ಬರಹಗಳು ತೀರ ಕಡಿಮೆ ಸಂಖ್ಯೆಯಲ್ಲಿ ಸೃಷ್ಟಿಯಾಗುತ್ತಿರುವುದಕ್ಕೆ ಕಾರಣವೇನು? ವಿಶ್ವವಿದ್ಯಾನಿಲಯಗಳಂಥ ಉನ್ನತ ಮಟ್ಟದ ಸಂಸ್ಥೆಗಳ ಮೂಲಕ ಬರುವ ಬರಹಗಳಲ್ಲಿ (ಮೌಲ್ಯಾತ್ಮಕವಾಗಿ) ಈ ಕೊರತೆ ತೀವ್ರವಾಗಿ ಎದ್ದು ಕಾಣುವುದಲ್ಲ? ಇಂಥ ಅವಸ್ಥೆಗೆ ನಮ್ಮ ಬರಹಗಾರರಲ್ಲಿರಬಹುದಾದ ಕೊರತೆ ಕಾರಣವೊ? ನಮ್ಮ ಪ್ರತಿಭೆಯ ಮಟ್ಟವೇ ತೀರ ಕುಬ್ಜವಾದದ್ದೊ? ಇಲ್ಲವೆ ಇದಕ್ಕೆ ಅನುಕೂಲವಾದ ಅಭ್ಯಾಸ, ಶ್ರಮ, ಪ್ರಾಮಾಣಿಕತೆ, ಸಿದ್ಧತೆ, ಮಾರ್ಗದರ್ಶನಾದಿಗಳು ಸಾಲವೆ? ಈ ಬಗೆಯ ನಿರಾಶಾಮಯ ವಾತಾವರಣಕ್ಕೂ ನಮ್ಮ ಸಂಸ್ಕೃತಿ, ಸಂಸ್ಕಾರ, ಪರಿಸರಕ್ಕೂ ಎಲ್ಲಿಯಾದರೂ ಸಂಬಂಧವಿದೆಯೆ? ಇದ್ದರೆ ಎಲ್ಲಿ? ಹೇಗೆ?

ಹಿಂದಿನ ಪುಟದಿಂದ ಬಂದದ್ದು

ಇವರು ಉತ್ತರಿಸಿದ್ದಾರೆ

ಪ್ರಶ್ನೆ ಕೇಳುವವರ ಉತ್ತರ ಸೂಚಿತವಾಗಿದೆ, ಉತ್ತರಿಸುವವರ ಅಭಿವ್ಯಕ್ತಿಸ್ವಾತಂತ್ರ್ಯಕ್ಕೆ ಮಿತಿ ಹಾಕಿದಂತಾಗಿದೆ! ನಾವು ಹಿಂದೆ ಹೇಳಿದಂತೆ ಕನ್ನಡ ಲೇಖಕರು ಇಂದೇನು ಹಿಂದೇನು, ಹೊಟ್ಟೆಪಾಡಿನ ಬದುಕಿನ ಸೂತ್ರಕ್ಕೆ ಒಳಗಾಗದೆ ವಿಧಿಯಿಲ್ಲ. ಲೇಖನವನ್ನೇ ಅವಲಂಬಿಸಿ ಬದುಕಿರುವ ಲೇಖಕರು ಕಡಿಮೆ. ಅಂಥವರು ಕೂಡ ತಮ್ಮ ವಾಚಕರ ಬೇಕುಬೇಡಗಳನ್ನು ಗಮನಿಸಬೇಕಾಗುತ್ತದೆ. ಕನ್ನಡ ಪುಸ್ತಕಗಳನ್ನು ಕೊಂಡು ಓದುವ ವಾಚಕರ ಸಂಖ್ಯೆಯು ತೀರ ಕಡಿಮೆ. ಒಟ್ಟಿನಲ್ಲಿ ಪ್ರಚಲಿತ ಸಾಮಾಜಿಕ ರಾಜಕೀಯ ವ್ಯವಸ್ಥೆ ಇಂದು ಅವ್ಯವಸ್ಥೆಯಾಗಿರುವಾಗ ಸರ್ಕಾರಿ, ಖಾಸಗಿ ಸಂಸ್ಥೆಗಳಲ್ಲಿ ಉದರ ನಿರ್ವಾಹಕ್ಕಾಗಿ ಕೆಲಸ ಮಾಡುವ ಲೇಖಕರು ಅವುಗಳ ಕಠೋರನಿಯಮಗಳಿಗೆ ಬದ್ಧರಾಗದೆ ಗತಿಯಿಲ್ಲ, ಬದ್ಧರಾಗದಿದ್ದರೆ ಬೀದಿ ಪಾಲಾಗದೆ ಗತಿಯಿಲ್ಲ. ಅವರು ತಮ್ಮ ಅಭಿವ್ಯಕ್ತಿಸ್ವಾತಂತ್ರ್ಯವನ್ನು ಪ್ರಭಾವಶಾಲಿಯಾಗಿ ಉಪಯೋಗಿಸಿಕೊಳ್ಳಲಾರರು. ಆದರೆ ಅಭಿವ್ಯಕ್ತಿಯಲ್ಲಿ ಪ್ರಚಾರಾತ್ಮಕ ಎಂಬುದಿದೆ, ಸೃಜನಾತ್ಮಕ ಎಂಬುದಿದೆ. ಮೊದಲನೆಯದನ್ನು ಅವರು ಮಾಡದೆ ಹೋಗಬಹುದು, ಆದರೆ ಎರಡನೆಯದನ್ನು ಅವರು ಮಾಡಬಲ್ಲರು. ಕೆಲವರು ಹೀಗೆ ತಮ್ಮ ಅಭಿವ್ಯಕ್ತಿಸ್ವಾತಂತ್ರ್ಯವನ್ನು ಬಳಸಿಕೊಳ್ಳುತ್ತಿದ್ದಾರೆ. ನಿಜವಾಗಿ ಸರ್ವದೃಷ್ಟಿಯಿಂದಲೂ ಅಭಿಪ್ರಾಯ ಮತ್ತು ಅಭಿವ್ಯಕ್ತಿಗಳ ಸ್ವಾತಂತ್ರ್ಯವನ್ನು ಸ್ವಯಂ ಸ್ಫೂರ್ತವಾಗಿ ಒದಗಿಸಿಕೊಡುವ ಸಮಾಜ ರಚನೆಯಾಗುವ ವರೆಗೆ, ಅದರ ಪರಿಸರದವ ಅಭಿವ್ಯಕ್ತಿಸ್ವಾತಂತ್ರ್ಯದ ವಿವೇಕಯುತವಾಲ್ಲಿ ಉಪಯೋಗವನ್ನು ಮಾಡುವ ಲೇಖಕರು ಹೆಚ್ಚಾಗುವವರೆಗೆ ಇಂದಿನ ವಾತಾವ[illegible] ಇಂದಿನ ಅಭಿವ್ಯಕ್ತಿ ಗೊಂದಲದಲ್ಲಿಯೆ ನಡೆಯುತ್ತದೆ.

೨. ಮೊದಲನೆಯವರ ಉತ್ತರದಲ್ಲಿಯೆ ಇದಕ್ಕೆ ಉತ್ತರವಿದೆ. ಒಂದಿಲ್ಲೊಂದು ಸ್ವರೂಪದ "ವ್ಯವಸ್ಥೆ"ಯ "ಮರ್ಜಿಮುಲಾಜು" ಗಳ [illegible] ಇಟ್ಟುಕೊಂಡು ಬರೆಯು[illegible]

ಬರಹಗಾರನು ಅರ್ಥಪೂರ್ಣ, ಸತ್ಯನಿಷ್ಠುರ ಮತ್ತು ಆರೋಗ್ಯಪೂರ್ಣ ಬರವಣಿಗೆಯನ್ನು ಮಾಡಲಾರ. ಪ್ರಜಾಸತ್ತಾತ್ಮಕ ಪದ್ಧತಿಯ ಸಮಾಜರಚನೆಯಲ್ಲಿದ್ದ ಕೆಲಮಟ್ಟಿನ ಅಭಿಪ್ರಾಯಸ್ವಾತಂತ್ರ್ಯವು ಕೂಡ ಪ್ರಶ್ನೆ ಕೇಳುವವರು ಕಲ್ಪಿಸಿದ ಸುವತಾವಾದೀ ಸಮಾಜ ರಚನೆಯಲ್ಲಿ ಅರ್ಥಹೀನವಾಗುತ್ತದೆ. ಈ ಬಗೆಯ ಸಮಾಜರಚನೆಯಿಂದ ನಿಜವಾಗಿ ಜನಜೀವನ ಉತ್ತಮಗೊಂಡರೆ ಲೇಖಕನು ಕೆಲ ಕಾಲ ಸ್ವಯಂಸ್ಫೂರ್ತಿಯಿಂದ ಅದನ್ನು ಎತ್ತಿಹಿಡಿಯಬಹುದು. ಆದರೆ ಅದರಲ್ಲಿ ದೋಷಗಳು ಎದ್ದು ಕಂಡಂತೆ ಅವನ್ನು ಹೇಳಲಾರದೆ ಅವನು ಕಸಿವಿಸಿಪಡುವನು ಇಲ್ಲವೆ ಹೇಳಿ ಪರಿಣಾಮಕ್ಕೆ ಎದೆಗೊಡುವನು.

೩. ಜಾತಿಭೂಯಿಷ್ಠಪರಿಸರ ಮತ್ತು ಬದುಕು ನಮ್ಮ ದೇಶದಲ್ಲಿ ಇಂದು ರಾಜಕೀಯ ಚದುರಂಗದಾಟಕ್ಕೆ ಒಳಗಾಗಿ ಇದ್ದುದಕ್ಕಿಂತ ಹೆಚ್ಚು ಜಟಿಲವಾಗಿದೆ. ಇದೆಲ್ಲದರ ಸ್ವಂತ ನಿಕಟಪರಿಚಯ ಯಾವ ಬರಹಗಾರನಿಗೂ ಸಾಧ್ಯವಿಲ್ಲ. ಯಾವೊಂದು ಜಾತಿಯ ಅಥವಾ ವರ್ಗದ ಬರಹಗಾರ ತನ್ನ ಸೀಮಿತ ಅನುಭವದ ಕಕ್ಷೆಯಿಂದ ಹೊರಬಂದು ಸಹಾನುಭೂತಿಯಿಂದ, ತಾದಾತ್ಮ್ಯದಿಂದ ಸಾಧ್ಯವಿರುವಷ್ಟು ತನ್ನ ಅನುಭವವನ್ನು ವಿಸ್ತಾರಗೊಳಿಸಿಕೊಳ್ಳಬೇಕು, ಕಲ್ಪನಾಶಕ್ತಿಯಿಂದ ಸಾಕ್ಷಾತ್ಕರಿಸಿಕೊಳ್ಳಬೇಕು. ಆಗ ಅವನು ಸರ್ವಸಾಕ್ಷಿಯಾಗಿ, ಸಮರ್ಥವಾಗಿ ನಿರೂಪಿಸಬಲ್ಲ. ಹೀಗಾದರೆ ಅಥೆಂಟಿಸಿಟಿ ಅಥವಾ ನೈಜತೆಯಿಂದ ವಂಚಿತನಾಗಬೇಕಾಗಿಲ್ಲ. ಇತರ ಬದುಕುಗಳನ್ನು ಕುರಿತು ಬರೆಯುವ ಮೊದಲು ಹೆಚ್ಚಿನ ತಿಳಿವಳಿಕೆಯನ್ನು ಪಡೆದರೆ ಅದು ಕೃತ್ರಿಮವಾಗುವುದಿಲ್ಲ. ಯಾರಿಗೆ ಎಲ್ಲ ಅನುಭವ ಸ್ವಂತಕ್ಕಿರುತ್ತದೆ? ವಿದೇಶೀಯ ಲೇಖಕರು ಕೂಡ ನಮ್ಮ ದೇಶದ ಜೀವನದ ಬಗ್ಗೆ ಸಮರ್ಥವಾಗಿ ಬರೆದಿಲ್ಲವೇ? ಬರಹಗಾರನ ಅನುಭವ ಮತ್ತು ಅಭಿವ್ಯಕ್ತಿಗಳಲ್ಲಿ ಸೀಮಿತತೆ ಅವನ ಆತ್ಮತುಷ್ಟಿಯಿಂದ ಬರುತ್ತದೆ. ಅದೇನು ಅನಿವಾರ್ಯವಲ್ಲ. ಒಟ್ಟು ಬದುಕನ್ನು ಕುರಿತು ಒಂದೇ ಒಂದು ಅಥೆಂಟಿಕ್ ಕೃತಿಯನ್ನು ಬರೆಯುವುದು ಅಸಾಧ್ಯವಲ್ಲ, ಪ್ರತಿಭೆ–ಪರಿಶ್ರಮ, ಪರಿಪಕ್ವತೆಗಳಿಂದ ಸಾಧ್ಯ. ಆತುರ, ಅಲ್ಪತುಷ್ಟಿಗಳಿಂದ ಸಾಧ್ಯವಿಲ್ಲ.

೪. ಲಲಿತಸಾಹಿತ್ಯ ವಿಪುಲ ಪ್ರಮಾಣದಲ್ಲಿ ಸೃಷ್ಟಿಯಾಗುತ್ತಿದ್ದರೂ ಸಾಮಾಜಿಕವಾಗಿ ನಿಜಕ್ಕೂ ಗಾಢವಾದ ಮತ್ತು ಆಳವಾದ ವಿಚಾರಾತ್ಮಕ ವಿಮರ್ಶಾತ್ಮಕ ಮತ್ತು ಮೂಲಭೂತವಾಗಿ ಸಂಶೋಧನಾತ್ಮಕ ತಳಪಾಯದ ಬರಹಗಳು ತೀರ ಕಡಿಮೆಯ ಸಂಖ್ಯೆಯಲ್ಲಿ ಸೃಷ್ಟಿಯಾಗುತ್ತಿವೆ ಎಂಬುದು ಒಂದು ಕಾಲಕ್ಕೆ ಸತ್ಯವಾಗಿತ್ತು. ಇಂದು ಹಾಗೆ ಹೇಳಲು ಬರುವದಿಲ್ಲ, ಹೆಚ್ಚಿನ ಸಂಖ್ಯೆಯಲ್ಲಿ ಅವು ಬರುತ್ತಿಲ್ಲ ಎನ್ನಬಹುದು. ಇದಕ್ಕೆ ಕಾರಣ ನಮ್ಮ ವಿದ್ಯಾಭ್ಯಾಸ ವ್ಯವಸ್ಥೆಯಲ್ಲಿ ಸ್ವಂತ ವ್ಯಾಸಂಗ, ವಿಚಾರ ವಿಮರ್ಶೆ, ಮೂಲಶೋಧನೆ ಇವುಗಳಿಗಿಂತ ಗಿಳಿಪಾಠಕ್ಕೆ ಮತ್ತು ಪರೀಕ್ಷೆಯಲ್ಲಿ ತೇರ್ಗಡೆ ಇವಕ್ಕೆ ದೊರೆತಿರುವ ಅವಾಸ್ತವ ಮಹತ್ವ. ನಮ್ಮ ಸೃಜನಶೀಲ ಬರಹಗಾರರು ಕಂಡ ತಮ್ಮ ಜ್ಞಾನವನ್ನು, ವಿಚಾರಸಂಪತ್ತಿಯನ್ನು ಹೆಚ್ಚಿಸಿಕೊಂಡಿರುವುದು ಕಡಿಮೆ. ಅವರ ಪ್ರತಿಭೆಯ ಮಟ್ಟ "ತೀರ ಕುಬ್ಜ"ವೆಂದು ಸರ್ವಸಾಮಾನ್ಯವಾಗಿ ಹೇಳುವುದು ಅವರಿಗೆ ಅನ್ಯಾಯ ಮಾಡುತ್ತದೆ. ಅವರು ತಮ್ಮ ಪ್ರತಿಭೆಯ ಪ್ರಕಾಶನವನ್ನು ವ್ಯುತ್ಪತ್ತಿಯ ಒತ್ತಾಸೆಯಿಲ್ಲದೆ ಮಾಡಲು ಹೋಗುವುದರಿಂದ ಅವರ ಕೃತಿಗಳಲ್ಲಿ ಕುಬ್ಜತೆ ಕೆಲವು ಸಲ ಎದ್ದು ಕಾಣುತ್ತದೆ. ಕವನ, ಕತೆ, ಕಾದಂಬರಿಗಳನ್ನು ಸುಲಭವಾಗಿ ಬರೆದು ಪ್ರಕಟಿಸಿಬಿಡಬಹುದು ಎಂಬ ಪ್ರವೃತ್ತಿ ಲೇಖಕರಿಗೂ ವಾಚಕರಿಗೂ ಅಹಿತಕರ. ಬಲ್ಲವರು ಅವರಿಗೆ ಅಭ್ಯಾಸ, ಶ್ರಮ, ಪ್ರಾಮಾಣಿಕತೆ ಮುಂತಾದವುಗಳ ಆವಶ್ಯಕತೆಯನ್ನು ಮಂದಟ್ಟುಮಾಡಿಕೊಡಬೇಕು, ಉತ್ತಮ ಮಾದರಿಗಳನ್ನು ಅವರ ಮುಂದಿರಿಸಬೇಕು. ಅಭಿವ್ಯಕ್ತಿಸ್ವಾತಂತ್ರ್ಯವನ್ನು ಉಪಯೋಗಿಸುವುದಕ್ಕಿಂತ ಕೆಲವು ಕಾಲ ಲೇಖಕರು ಅಭಿವ್ಯಕ್ತಿ ಮಾಡದಿರುವ ಸ್ವಾತಂತ್ರ್ಯವನ್ನು ಉಪಯೋಗಿಸಬೇಕು.

ಪಾ. ವೆಂ. ಆಚಾರ್ಯ

೧. ನಿಮ್ಮ ಪ್ರಶ್ನೆಗಳೇ ಉತ್ತರಗರ್ಭಿತವಾಗಿವೆ. ಅಭಿವ್ಯಕ್ತಿಸ್ವಾತಂತ್ರ್ಯವನ್ನು ಧಾಡಶಿಯಾಗಿ ಉಪಯೋಗಿಸಲಿಲ್ಲ ಎಂಬುದರಿಂದಲೇ ತುರ್ತುಪರಿಸ್ಥಿತಿ ಹೇರಿ ಪೂರಾ ಬಾಯಿ ಮುಚ್ಚಿಸುವುದು ಸಾಧ್ಯವಾಯಿತು ಎಂಬ ತಿರುವು ಮುರುವು ಉತ್ತರವನ್ನೇ ಕೊಡಬೇಕೆನ್ನಿಸುತ್ತದೆ. ಆದರೆ "ಹೊಟ್ಟೆಪಾಡು", "ವ್ಯವಸ್ಥೆಯ ಅಧೀನತೆ" ಇವೇ ಅಭಿವ್ಯಕ್ತಿಯ ಅಸ್ವಾತಂತ್ರ್ಯಕ್ಕೆ ಕಾರಣ ಎನ್ನುವುದು ಕಷ್ಟ. ಸ್ವಾತಂತ್ರ್ಯವನ್ನು "ಉಪಯೋಗಿಸಬಲ್ಲರು, ಉಪಯೋಗಿಸಿಕೊಳ್ಳುತ್ತಿದ್ದಾರೆ?" ಎಂಬ ನಿಮ್ಮ ಶಂಕೆಗಳಿಗೆ "ಉಪಯೋಗಿಸಿಕೊಳ್ಳಲು ಆತುರರಾಗಿದ್ದಾರೆ?" ಎಂಬ ನನ್ನದೊಂದು ಶಂಕೆಯನ್ನೂ ಸೇರಿಸಿಕೊಳ್ಳಿ.

೨. "ವ್ಯವಸ್ಥೆ" ಮತ್ತು "ಹೊಟ್ಟೆಪಾಡು" ಸರ್ವತ್ರ ಇದ್ದದ್ದು. ಅದರಿಂದಲೇ ಅಭಿವ್ಯಕ್ತಿ ಅನಿಖರ, ಅಸ್ಪಷ್ಟ ಆಗಬೇಕಿಲ್ಲ. ಅನಿಖರ ಅಸ್ಪಷ್ಟ ಅಭಿವ್ಯಕ್ತಿ ಅನಿಖರ ಮತ್ತು ಅಸ್ಪಷ್ಟ ಆಲೋಚನೆಯಿಂದಲೂ ಹುಟ್ಟುತ್ತದೆ. ಆಲೋಚನೆಯಿಂದ ಹೊರಪಟ್ಟ ನಿಷ್ಪತ್ತಿಗಳ ಬಗ್ಗೆ ಉತ್ಕಟವಾದ ಕಳಕಳಿ ಇಲ್ಲದ್ದರಿಂದಲೂ ಹುಟ್ಟುತ್ತವೆ. ಸ್ವತಂತ್ರ ಜೀವನೋಪಾಯ ಸ್ವತಂತ್ರವಾಗಿ ಹಂಗಿಲ್ಲದೆ, ಬದುಕುವಷ್ಟು ಆಸ್ತಿಯ ಹಕ್ಕು ಕಾನೂನು ಮೂಲಕ ಅನುಲ್ಲಂಘ್ಯವಾಗಿರುವುದು ಸ್ವತಂತ್ರ ಅಭಿವ್ಯಕ್ತಿಗೆ ಅನಿವಾರ್ಯ ಎಂಬ ಅಭಿಪ್ರಾಯಕ್ಕೆ ನನ್ನ ಒಪ್ಪಿಗೆ ಇದೆ. ಆದರೆ ಅದೊಂದೇ ಸಾಲದು. "ನ್ಯಾಯ ಪಥಾತ್ ಚಲಿತೇನ ಲಭ್ಯ" ಎಂಬುದು ಅಭಿವ್ಯಕ್ತಿಗೂ ಅನ್ವಯಿಸುತ್ತದೆ. ಹೊಟ್ಟೆಯ ಚಿಂತೆ ಬೇರೆ; ಹೊಟ್ಟೆಗಾಗಿ ಚಿಂತನೆ ಬೇರೆ; ಹೊಟ್ಟೆಯಿಂದಲೇ ಚಿಂತನೆ ಮಾಡುವುದು ಬೇರೆ.

೩. ಜಾತಿಭೂಯಿಷ್ಠ, ವರ್ಗಭೂಯಿಷ್ಠ ಇತಿಮಿತಿಗಳ ಸಂಗಡ ನಮ್ಮ ದೇಶದ ಇತರ ರಂಗಗಳಲ್ಲಿರುವಂತೆ ಸಾಹಿತ್ಯದಲ್ಲಿ ಕೂಡ ಇರುವ ಸ್ವೈರ ಜಿಜ್ಞಾಸೆ, ಕುತೂಹಲ, ಚಿಂತನೆಗಳ ಅಭಾವವೂ ಮಿತಿಗಳನ್ನು ಕಲ್ಪಿಸಿದೆ. ಎಮಿಲಿ ಜೋಲಾ ತನಗೆ ಅಪರಿಚಿತವಾದ ಕಾರ್ಮಿಕರ ಜೀವನದ ಬಗ್ಗೆ ಕಾದಂಬರಿ ಬರೆಯಬೇಕೆನಿಸಿದಾಗ ಫ್ರಾನ್ಸಿನ ಗಣಿ ಪ್ರದೇಶದಲ್ಲಿ ಆರು ತಿಂಗಳು ತಳವೂರಿ ತಿಳಿದುಕೊಂಡು Germinal ಕಾದಂಬರಿ ಬರೆದನಂತೆ. ಕಾರಂತರು "ಕುಡಿಯರ ಕೂಸು" ಬರೆಯುವ ಮುಂಚೆ ಆ ಗಿರಿಜನರ ಜೀವನವನ್ನು ನೇರವಾಗಿ ಅಭ್ಯಸಿಸಿದರು. ಅನುಭವದ ಸೀಮೆ ಬೆಳೆದಷ್ಟು ಅಭಿವ್ಯಕ್ತಿಯ ಸೀಮೆ ಬೆಳೆಯುತ್ತದೆ. ಅನುಭವಕ್ಕೆ ಪ್ರಚೋದಕವಾದದ್ದು ಆಸಕ್ತಿ. "ಇಷ್ಟರಿಂದ ನಡೆಯುತ್ತೆ, ಹೆಚ್ಚೇಕೆ ಒದ್ದಾಡಬೇಕು?" ಎಂಬುದು ಅನುಭವ ಸಂಗ್ರಹಕ್ಕೆ ಹಿತವಲ್ಲ. ಅಥೆಂಟಿಕ್ ಕೃತಿ ಬೇಕಾದರೆ ಅಥೆಂಟಿಕ್ ನಂಬಿಕೆ ಬೇಕು, ಅದಕ್ಕೆ ಅಥೆಂಟಿಕ್ ಆಲೋಚನೆ. ಈಚೆಗೆ "ಅನಿಸಿಕೆ" ಎಂಬ ಶಬ್ದ ಬಹಳ ಜನಪ್ರಿಯವಾಗುತ್ತಿದೆಯಲ್ಲ, ಈ ಶಬ್ದವೇ ನಮ್ಮ ಬಗ್ಗೆ ತುಂಬಾ ಕಥೆ ಹೇಳುವುದಿಲ್ಲವೆ? ಅಸ್ಪಷ್ಟ ಆಲೋಚನೆಯೇ ಅನಿಸಿಕೆ ತಾನೆ? ಆಲೋಚನೆ ನಂಬಿಕೆಗಳಿಗಿಂತ ಅನಿಸಿಕೆಗೆ ಆನಿಸಿ ನಿಂತವರಿಗೆ, ಇರುವುದಕ್ಕಿಂತ ಇದ್ದಂತೆ ತೋರಿಸಿಕೊಳ್ಳುವುದರಲ್ಲಿ ಸುಖ ಕಾಣುವವರಿಗೆ ಅಥೆಂಟಿಸಿಟಿ ಹೇಗೆ ಬಂದೀತು?

೪. ನನಗೆ ತೋರುವ ಮಟ್ಟಿಗೆ ನಮ್ಮ ಸಂಸ್ಕೃತಿ ನಾಗರಿಕತೆಗಳು ಬಹುಕಾಲ ಕೊಳಚೆಯಾಗಿದ್ದ ಅವಸ್ಥೆಯಲ್ಲಿ ಅತ್ಯಂತ ಯಶಸ್ವಿಯಾದ ಯುರೋಪಿಯನ್ ಅಥವಾ ಇಂಗ್ಲೀಷ್ ಸಂಸ್ಕೃತಿಯ ದೃಢಪ್ರವೇಶವಾದದ್ದರಿಂದ ಒಂದು ಮಾನಸಿಕ ವಿಸ್ಮಯದ ಸ್ಥಿತಿಗೆ ನಾವು ಒಳಗಾಗಿದ್ದೇವೆ. ವಿಸ್ಮಿತನಾದವನು ಅಪ್ರತಿಭನಾಗಿರುತ್ತಾನೆ. ಈ ಅಪ್ರತಿಭಾವಸ್ಥೆಯಲ್ಲಿ ನಾವು ಯಶಸ್ವಿ ಪಾಶ್ಚಾತ್ಯ ಮಾದರಿಯನ್ನು ತಾರಕವೆಂದು ಭಾವಿಸುತ್ತಿದ್ದೇವೆ. ಪಾಶ್ಚಾತ್ಯ ಅಸ್ಥಿಪಂಜರವಿಲ್ಲದೆ ಪಾಶ್ಚಾತ್ಯ ರಕ್ತ ಮಾಂಸ ಚರ್ಮಗಳನ್ನು ತೊಡಲು ಯತ್ನಿಸುತ್ತೇವೆ. "ಬ್ರಾಹ್ಮಣ (ಅಂದರೆ ವಿದ್ಯಾವಂತ) ವರ್ಗದ ಪಾಶ್ಚಾತ್ಯೀಕರಣ ಇದರ ಒಂದು ಆವಿರ್ಭಾವ. ಈ ಅವಸ್ಥೆ ಬೇಗನೆ ದಾಟಿ ಹೋಗಿ ನಮ್ಮದೇ ಪರಿಸರಕ್ಕಾಗಿ ನಾವು ಆಲೋಚಿಸಲೇಬೇಕಾಗುವ ಸ್ಥಿತಿ ಬಂದೀತು. ಅಷ್ಟರಲ್ಲಿ ಬಹುಶಃ

ಪಾಶ್ಚಾತ್ಯ ನಾಗರಿಕತೆ ತನ್ನ ಧಾಡಸಿ ಅವಸ್ಥೆಯನ್ನು ದಾಟಿ ಆತ್ಮವಿಮರ್ಶೆ ಮತ್ತು ಅನಿಶ್ಚಯದ ಸ್ಥಿತಿಗೆ ಬಂದು ಅದರ ಮಾಯಕ ಶಕ್ತಿ ಕಳೆದೀತು ಮತ್ತು ನಮ್ಮ ಕಾಲ ಬುಡವನ್ನು ನೋಡಿಕೊಳ್ಳಲು ನಮಗೆ ಸಾಧ್ಯವಾದೀತು. ನಮ್ಮ ಪ್ರತಿಭೆಯು ಹುಟ್ಟು ಖಂಡಿತ ಕುಬ್ಜವಲ್ಲ. ಯಾವ ಜನಾಂಗದ್ದೂ ಕುಬ್ಜವಲ್ಲ. ಅದು ತನ್ನ ಮಾರ್ಗವನ್ನು ಕಂಡುಕೊಳ್ಳಲೇಬೇಕು.

ಡಾ. ಹಾ. ಮಾ. ನಾಯಕ

೧. ಕನ್ನಡ ಲೇಖಕರಿಗೆ ಯಾವಾಗಲೂ ಅಭಿವ್ಯಕ್ತಿಸ್ವಾತಂತ್ರ್ಯ ದುರ್ಲಭವಾಗಿರುವುದು ನನ್ನ ಗಮನಕ್ಕೆ ಬಂದಿಲ್ಲ. ಶಕ್ತಿ ಇಲ್ಲದವನಿಗೆ ಸ್ವಾತಂತ್ರ್ಯ ಇದ್ದೂ ಪ್ರಯೋಜನವಿಲ್ಲ.

೨. ಸತ್ಯನಿಷ್ಠುರವಾದ ಅರ್ಥಪೂರ್ಣ ಬರವಣಿಗೆಗೆ ನೀಡಬಲ್ಲ ಲೇಖಕ ಯಾವ "ವ್ಯವಸ್ಥೆ"ಗಾಗಲಿ "ಮರ್ಜಿ ಮುಲಾಜು"ಗಳಿಗಾಗಲಿ ಸಲಾಂ ಹಾಕಬೇಕಿಲ್ಲ. ಅಶಕ್ತರಾದವರು ಮಾತ್ರ ಕೃಪಾಶ್ರಯಗಳಲ್ಲಿ ಬೆಳೆಯುತ್ತಾರೆ.

೩. ಪ್ರತಿಯೊಬ್ಬ ಲೇಖಕನಿಗೂ ಒಂದಲ್ಲ ಒಂದು ಬಗೆಯ ಸೀಮಿತಗಳೂ ಇದ್ದೇ ಇರುತ್ತವೆ. ಎಲ್ಲ ಸೀಮಿತಗಳನ್ನೂ ದಾಟಿದ ಲೇಖಕರು ವಿಶ್ವಸಾಹಿತ್ಯದಲ್ಲಿಯೇ ಇಲ್ಲ. ಸೀಮಿತಗಳನ್ನು ದಾಟಲು ಯತ್ನಿಸುವ ಪ್ರಯತ್ನದಿಂದ ಮಾತ್ರ ಲೇಖಕ ತನ್ನತನವನ್ನು ತೋರಬಲ್ಲ.

ಒಂದೇ ಒಂದು ಕೃತಿಯಲ್ಲಿ – ಅದು ಎಷ್ಟೇ ಅಥೆಂಟಿಕ್ ಆಗಿದ್ದರೂ ಕೂಡ ಮುಗಿದು ಹೋಗುವಷ್ಟು ಬಡವಾದುವಲ್ಲ ನಮ್ಮ ದೇಶ, ಸಮಾಜ.

೪. ಸುಲಭದಲ್ಲಿ ಖ್ಯಾತಿ ಗಳಿಸುವ, ಕ್ರಮೇಣ ಆಚಾರ್ಯರಾಗುವ ಅವಕಾಶವಿರುವ ನಮ್ಮ ಪರಿಸರದಲ್ಲಿ ಇದಕ್ಕಿಂತ ಹೆಚ್ಚಿನದೇನನ್ನೂ ಸದ್ಯಕ್ಕೆ ನಾನು ನಿರೀಕ್ಷಿಸುವುದಿಲ್ಲ. ನಮ್ಮಲ್ಲಿ ನಿಜವಾದ ಪ್ರತಿಭಾವಂತರ, ಕ್ರಮಶೀಲರ ಪ್ರಾಮಾಣಿಕ ಕೊರತೆ ಇರುವುದು ನಿಜ. ಅವಕಾಶಗಳು ಕೆಲವರದೇ ಆಗಿರುವುದು ಇದಕ್ಕೊಂದು ಕಾರಣ.

ಡಾ. ಜಿ. ಎಸ್. ಶಿವರುದ್ರಪ್ಪ

೧.೨. ತನ್ನ ಒಳಗಿನ ಅನುಭವಗಳನ್ನು, ಆಲೋಚನೆಗಳನ್ನು, ಅನಿಸಿಕೆಗಳನ್ನು ತಕ್ಕ ಭಾಷಾ ಮಾಧ್ಯಮದ ಮೂಲಕ ಸಂವಹನ ಸಾಧ್ಯವನ್ನಾಗಿಸುವ ಕ್ರಿಯೆಯನ್ನು "ಅಭಿವ್ಯಕ್ತಿ" ಎಂದು ಹೇಳಬಹುದು. ಈ ಅಭಿವ್ಯಕ್ತಿ ಸಾಹಿತಿಯಾದವನ ಪಾಲಿಗೆ ಒಂದು ಸಹಜವೂ, ಸ್ವತಂತ್ರವೂ ಮತ್ತು ಅನಿವಾರ್ಯವೂ ಆದ ವ್ಯಾಪಾರ. ಇದು, ಅವನು ಯಾರನ್ನು ಕೇಳಿಯೂ ಮಾಡುವಂಥದಲ್ಲ; [ಸ್ವಯಂಪ್ರೇರಣೆಯಿಂದ, ಸುತ್ತಣ ಜನದೊಂದಿಗೆ ಸಂವಾದವನ್ನು ಸ್ಥಾಪಿಸಿಕೊಳ್ಳುವ ಉದ್ದೇಶದಿಂದ ಸಂಭವಿಸುವಂಥದು. ಇದನ್ನೇ ನಾವು ಸಾಹಿತಿಗಿರುವ ಅಭಿವ್ಯಕ್ತಿಸ್ವಾತಂತ್ರ್ಯ ಅನ್ನಬಹುದು. ಆದರೆ ಕೆಲವು ಸಂದರ್ಭಗಳಲ್ಲಿ ಅಥವಾ ಪರಿಸರಗಳಲ್ಲಿ ಸಾಹಿತಿಗೆ ತನಗೆ ಅನಿಸಿದ್ದನ್ನು ನೇರವಾಗಿ, ನಿರಾತಂಕವಾಗಿ ಹೇಳಲು ಸಾಧ್ಯವಾಗದಂತಹ ಸ್ಥಿತಿ ಪ್ರಾಪ್ತವಾಗುವುದುಂಟು. ಆದುದರಿಂದ ಲೇಖಕನಾದವನು ತನ್ನ ಅಭಿವ್ಯಕ್ತಿಸ್ವಾತಂತ್ರ್ಯವನ್ನು ಕುರಿತು ಆತಂಕಗೊಳ್ಳುವುದು, ವ್ಯಗ್ರನಾಗುವುದು, ಆತನ ಅಭಿವ್ಯಕ್ತಿಸ್ವಾತಂತ್ರ್ಯಕ್ಕೆ ಅವಕಾಶವಿಲ್ಲದಂತಹ ಸಂದರ್ಭಗಳಲ್ಲಿ ಮಾತ್ರ. ಸಾಮಾನ್ಯ ಇದೆ: ಲೇಖಕ

ನಿಗೆ ಅಭಿವ್ಯಕ್ತಿಸ್ವಾತಂತ್ರ್ಯವೆಂಬುದು ಸ್ವತಃ ಸ್ಸಿದ್ಧವಾದುದದ್ದು. ಆದರೆ ಕೆಲವು ವೇಳೆ, ತಾನು ಹೇಳಬೇಕಾದುದನ್ನು ಹೇಳಲಾಗದಂತಹ ಪರಿಸ್ಥಿತಿಗಳಲ್ಲಿ ಆತನಿಗೆ ತನ್ನ ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ನಿರ್ಬಂಧಗೊಳಿಸಿದ ಅನುಭವ ವಾಗುತ್ತದೆ.

ಇಂತಹ ಪರಿಸ್ಥಿತಿ ಪ್ರಾಪ್ತವಾಗುವುದು ಮುಖ್ಯವಾಗಿ ತನ್ನನ್ನು ಪ್ರತ್ಯಕ್ಷವಾಗಿಯೋ ಪರೋಕ್ಷವಾಗಿಯೋ ನಿಯಂತ್ರಿಸುವ ಬಹಿ ರಂಗದ ಪ್ರಭುಶಕ್ತಿಯ ಧೋರಣೆಗಳನ್ನು ಅವನು ಪ್ರತಿಭಟಿಸತೊಡಗಿದಾಗ ಈ ನಿಯಂತ್ರಣ ಎರಡು ರೀತಿಯದಾಗಿರ ಬಹುದು: ಒಂದು, ತನ್ನ ಪರಿಸರದ ಪ್ರಭುಶಕ್ತಿಯ ಅಥವಾ ಆಳುವ ವರ್ಗದ ಧೋರಣೆಗಳು, ಲೇಖಕನಾದವನು ತನ್ನ ಮುಖವಾಣಿಯಾಗಬೇಕೆಂದು ಅನೇಕ ಬಗೆಯ ಆಸೆ ಆಮಿಷಗಳನ್ನೊಡ್ಡಿ ಒಲಿಸಿಕೊಳ್ಳುವ ಸ್ವರೂಪದವುಗಳಾದಾಗ, ಇಲ್ಲವೆ ಆಳುವ ವರ್ಗದ ಧೋರಣೆಗಳು ರಾಷ್ಟ್ರಜೀವನದ ಮೂಲಭೂತ ಹಕ್ಕುಗಳಿಗೆ ಸ್ವಾತಂತ್ರ್ಯಕ್ಕೊ ಅಥವ ಆತ್ಮಗೌರವಕ್ಕೊ ಆಘಾತ ಕರವಾಗಿ ಪರಿಣಮಿಸಿದಾಗ. ಈ ಪರಿ ಸ್ಥಿತಿಯಲ್ಲಿ ಆಳುವ ವರ್ಗದ ಧೋರಣೆ ಗಳೊಂದಿಗೆ ಒಂದು ಬಗೆಯ ಒಡಂಬಡಿಕೆ ಯನ್ನು ಮಾಡಿಕೊಂಡು, ಎಂಥ ಪರಿಸ್ಥಿತಿ ಯನ್ನೂ ತಮ್ಮ ಕೀರ್ತಿ ಲಾಭಗಳಿಗೆ ಬಳಸಿ ಕೊಳ್ಳುವ ಚತುರರಾದ ಲೇಖಕರ ಪಾಲಿಗೆ "ಅಭಿವ್ಯಕ್ತಿಸ್ವಾತಂತ್ರ್ಯ" ಅನ್ನುವುದು ಒಂದು ಸಮಸ್ಯೆಯೇ ಆಗುವುದಿಲ್ಲ; ಹಾಗೆಯೆ ಕೇವಲ ಸೌಂದರ್ಯನಿಷ್ಠ ಅಥವಾ ಅಧ್ಯಾತ್ಮನಿಷ್ಠ ಕೃತಿ ರಚನೆಗಳ ಮೂಲಕ ಸಮಕಾಲೀನತೆ ಯನ್ನು ಮೀರಿ ನಿಲ್ಲುವ ಧೋರಣೆಯುಳ್ಳ ಲೇಖಕರ ಪಾಲಿಗೂ ಅಭಿವ್ಯಕ್ತಿಸ್ವಾತಂತ್ರ್ಯ ಅನ್ನುವುದು ಅಂತಹ ಸಮಸ್ಯೆಯಾಗಲಾರದು. ಆದರೆ ಇದು ನಿಜವಾಗಿಯೂ ಸಮಸ್ಯೆಯಷ್ಟೇ ಅಲ್ಲ, ಎದುರಿಸಬೇಕಾದ ಸವಾಲೂ ಆಗು ವುದು, ತನ್ನ ಪರಿಸರದ ಆಳುವ ವರ್ಗದ ಧೋರಣೆಗಳನ್ನು (ಇದು ರಾಜಕೀಯ, ಧಾರ್ಮಿಕ ಸಾಮಾಜಿಕ ಹಾಗೂ ನೈತಿಕ ಸ್ವರೂಪದ್ದೂ ಆಗಿರಬಹುದು) ಸಕಾರಣವಾಗಿ ಪ್ರಶ್ನಿಸುವ, ಪ್ರತಿಭಟಿಸುವ, ಮತ್ತು ಅದರೊಂದಿಗೆ ಒಡಂ ಬಡಿಕೆ ಮಾಡಿಕೊಳ್ಳಲು ಒಪ್ಪದ ಸಾಹಿತಿಗಳಿಗೆ ಮಾತ್ರ. ತನ್ನ ಅಭಿವ್ಯಕ್ತಿಸ್ವಾತಂತ್ರ್ಯದ ಬಗ್ಗೆ ಕಾಳಜಿಯುಳ್ಳ ಲೇಖಕ ಇಂಥ ಹೊತ್ತಿನಲ್ಲಿ ಎರಡು ವಿಧಾನಗಳನ್ನು ಅನುಸರಿಸುತ್ತಾನೆ: ಒಂದು ತಾನು ಹೇಳಬೇಕಾದ್ದನ್ನು ಯಾವ ಮುಲಾಜೂ ಇಲ್ಲದೆ ಧೈರ್ಯವಾಗಿ ಹೇಳು ವುದು; ಮತ್ತು ಅದರ ಪರಿಣಾಮಗಳನ್ನು ಅನು ಭವಿಸುವುದು. ಇನ್ನೊಂದು ಹೇಳಬೇಕಾದ್ದನ್ನು ಹೇಳುವುದಕ್ಕೆ ತನ್ನ ಅಭಿವ್ಯಕ್ತಿಯ ತಂತ್ರವನ್ನೇ ಬದಲಾಯಿಸಿಕೊಳ್ಳುವುದು. ಈ ವಿಧಾನದಿಂದಲೇ ವಿಡಂಬನೆ, ದೃಷ್ಟಾಂತಕಾವ್ಯ . (ಅಲಿಗರಿ) ಇತ್ಯಾದಿಗಳು ವಿಶೇಷವಾಗಿ ಹುಟ್ಟಿಕೊಳ್ಳುವುದು.

ಹೊಟ್ಟೆಪಾಡಿಗಾಗಿ ಯಾವುದಾದರೊಂದು ವ್ಯವಸ್ಥೆಗೆ ಬದ್ಧರಾದ ಲೇಖಕರಿಗೆ ಅಭಿವ್ಯಕ್ತಿ ಸ್ವಾತಂತ್ರ್ಯ ಎಲ್ಲಿದೆ? ನಮ್ಮ ಮುಕ್ಕಾಲು ಪಾಲು ಲೇಖಕರು ಈ ಸ್ಥಿತಿಯಲ್ಲಿಲ್ಲವೆ? ಹೀಗಿರುವಾಗ ಅಭಿವ್ಯಕ್ತಿಸ್ವಾತಂತ್ರ್ಯ ಎಂಬ ಮಾತಿನ ಅರ್ಥವೇನು? ಅನ್ನಬಹುದು ಕೆಲ ವರು. ನಿಜ; ಹೊಟ್ಟೆಪಾಡಿಗೆ ಯಾವುದೇ ವ್ಯವಸ್ಥೆಯನ್ನು ಹಾಡಿ ಹೊಗಳುವ ಲೇಖಕರಿಗೆ ಯಾವತ್ತೂ ಕೊರತೆಯಿಲ್ಲ. ಯಾಕೆಂದರೆ ಅವ ರಿಗೆ ಅದರಿಂದ ಕ್ಷೇಮ –ಲಾಭಗಳೆರಡೂ ಇವೆ. ಆದರೆ ಹೊಟ್ಟೆಪಾಡಿಗಾಗಿ ಯಾವುದೇ ವ್ಯವ ಸ್ಥೆಗೆ ಬದ್ಧರಾದ ಲೇಖಕರೆಲ್ಲ ಹೀಗೇ ಇರು ತ್ತಾರೆಂದು ತಿಳಿಯಬಾರದು. ಧೈರ್ಯ ವಿದ್ದವರು ಅಂತಃಸ್ಸಾಕ್ಷಿಗೆ ಬೆಲೆ ಕೊಡು ವವರು, ಯಾವುದೇ ವ್ಯವಸ್ಥೆಯನ್ನು ಯಾವ ಕಾರಣಗಳಿಗಾಗಿ ಪ್ರತಿಭಟಿಸಬೇಕು ಎಂಬ ವಿವೇಚನೆಯುಳ್ಳವರು, ಖಂಡಿತವಾಗಿಯೂ ಅಭಿವ್ಯಕ್ತಿಸ್ವಾತಂತ್ರ್ಯವನ್ನು ಒಂದು ಮೌಲ್ಯ ಎಂದು ಉಳಿಸಿಕೊಳ್ಳಬಲ್ಲರು. ಅಲ್ಲದೆ ಅಭಿ ವ್ಯಕ್ತಿಸ್ವಾತಂತ್ರ್ಯ ಅಂದರೆ ಸ್ವಚ್ಛಂದಾಭಿ ವ್ಯಕ್ತಿಯಲ್ಲ, ಅದಕ್ಕೂ ಕೆಲವು ಮಿತಿಗಳಿವೆ ಮತ್ತು ಅದೊಂದು ಜವಾಬ್ದಾರಿಯುತ ವಾದ ಕ್ರಿಯೆ ಎಂಬುದನ್ನೂ ಮರೆಯಬಾರದು.

೩. ಸಾವಿರಾರು ವರ್ಷಗಳ "ಜಾತಿ ಘೂಯಿಷ್ಠ" ಪರಿಸರ ಮತ್ತು ಬದುಕುಗಳಿಂದಾಗಿ ಪ್ರತಿಯೊಂದು ಜಾತಿಯೂ ತನ್ನದೇ ಆದ ಜೀವನ ಕ್ರಮ ಹಾಗೂ ಭಾಷಾವೈವಿಧ್ಯಗಳನ್ನು ರೂಢಿಸಿಕೊಂಡು ಬಂದ ದೇಶ ಇದು. ಅಕ್ಷರ ಜ್ಞಾನದ ಸವಲತ್ತುಗಳು ಯಾವುದೋ ಒಂದು ನಿರ್ದಿಷ್ಟ ಜಾತಿ(ಇಲ್ಲಿ ವರ್ಗ ಎಂಬ ಮಾತನ್ನು ಬೇಕೆಂದೇ ಬಳಸಿಲ್ಲ; ಭಾರತೀಯ ಪರಿಸರದಲ್ಲಿ ಪಾಶ್ಚಾತ್ಯರಲ್ಲಿಯಂತೆ "ವರ್ಗ"ಗಳಿಲ್ಲ, ಜಾತಿಗಳಿವೆ)ಯವರಿಗೆ, ಅನೇಕ ಐತಿಹಾಸಿಕ ಕಾರಣಗಳಿಂದಾಗಿ ದಕ್ಕಿದ ಹಾಗೂ ಸೀಮಿತವಾಗಿದ್ದ ಕಾಲದ ಸಾಹಿತ್ಯ ಧೋರಣೆಗಳಿಗೂ ಇದೀಗ ಶಿಕ್ಷಣ ಸೌಲಭ್ಯಗಳ ಕಾರಣದಿಂದ ಹೊಸದಾಗಿ ಬಾಯಿ ಪಡೆದ ಜಾತಿಗಳ ಜನ ಸಾಹಿತ್ಯಾಭಿವ್ಯಕ್ತಿಯನ್ನು ಸಾಧಿಸಿಕೊಳ್ಳುತ್ತಿರುವ ಇಂದಿನ ಸಾಹಿತ್ಯಕ ಧೋರಣೆಗಳಿಗೂ ಮೂಲಭೂತವಾದ ವ್ಯತ್ಯಾಸವಿದೆ ಎಂಬುದನ್ನು ನಾವು ಗಣನೆಗೆ ತೆಗೆದುಕೊಳ್ಳಬೇಕಾಗಿದೆ. ಹಿಂದೆ ಅನಕ್ಷರಸ್ಥರೇ, ಅತ್ಯಧಿಕ ಸಂಖ್ಯೆಯಲ್ಲಿದ್ದ ಕಾಲದಲ್ಲಿ ಬರೆಯುತ್ತಿದ್ದ ಲೇಖಕ, ತಾನೇ ಸಮಸ್ತ ಜನತೆಯ ಅನುಭವಗಳನ್ನು ಆಶೋತ್ತರಗಳನ್ನು ಪ್ರತಿನಿಧಿಸುತ್ತಿದ್ದೇನೆ ಎಂದು ತಿಳಿದುಕೊಂಡಿದ್ದರೆ ಅದು ಆ ಕಾಲಕ್ಕೆ ಅಸಹಜವೂ ಅಲ್ಲ, ಅಂತಹ ತಪ್ಪೂ ಅಲ್ಲ. ಆದರೆ ಯಾವುದೇ ಒಬ್ಬ ಲೇಖಕ, ಹಿಂದಿನಂತೆಯೆ ಇಂದೂ ಭಾವಿಸತೊಡಗಿದರೆ, ಅದು ತೀರಾ ಅನುಚಿತವಾಗುತ್ತದೆ. ಯಾಕೆಂದರೆ ವಿವಿಧ ಜಾತಿಯ ಜನವಿರುವ ಸಾಮಾಜಿಕ ಪರಿಸರದಲ್ಲಿ ಯಾವುದೇ ಒಂದು ಜಾತಿಗೆ ವಿಶಿಷ್ಟವಾದ ಅನುಭವಗಳನ್ನು, ಆಯಾ ಜಾತಿಗಳ ಇತಿಹಾಸದ ಒಂದು ಭಾಗವಾಗದವನು, ಅದರ ವೇದನೆ ಸಂವೇದನೆಗಳನ್ನು ಅನುಭವಿಸದವನು, ತಾನು ಲೇಖಕನಾಗಿರುವ ಕಾರಣದಿಂದಲೇ ಅಭಿವ್ಯಕ್ತಿಸಬಲ್ಲೆ ಎಂದು ತಿಳಿದುಕೊಳ್ಳುವುದು ಸರಿಯಾದುದಲ್ಲ. ನಿದರ್ಶನಕ್ಕೆ ಸಹಸ್ರಾವಧಿ ವರ್ಷಗಳ ಕಾಲ, "ಮೇಲು ಜಾತಿ"ಯವರಿಂದ ತುಳಿತಕ್ಕೆ ಈಡಾಗಿ ಅಮಾನವೀಯವಾದ ಅವಮಾನ, ಹಿಂಸೆ, ಹೀನಾಯಗಳಿಗೆ ಒಳಗಾದ, ದಲಿತ ವರ್ಗದ ಅಥವಾ ದಲಿತ ಸಮಾಜದ ಅನುಭವಗಳನ್ನು ಶಿಷ್ಟ ಜಾತಿಯ ಲೇಖಕನೊಬ್ಬನು, ಸಮರ್ಥವಾಗಿ ಅಭಿವ್ಯಕ್ತಿಸಬಲ್ಲನೆಂಬ ಬಗ್ಗೆ ನನಗೆ ತೀರಾ ಸಂದೇಹಗಳಿವೆ. ಹಾಗಾದರೆ, ಶಿಷ್ಟ ವರ್ಗದ ಲೇಖಕರು, ಇಂಥ ದಲಿತರ ಬಗ್ಗೆ ಬರೆದಿಲ್ಲವೆ; ಹಾಗೆ ಬರೆದದ್ದು ಸಾಹಿತ್ಯವಾಗಿಲ್ಲವೆ ಎಂದು ಪ್ರಶ್ನಿಸಬಹುದು. ನಿಜ, ಬರೆದಿದ್ದಾರೆ, ಬರೆದದ್ದು ಸಾಹಿತ್ಯವಾಗಿದೆ, ಒಪ್ಪುತ್ತೇನೆ; ಆದರೆ ಅದೇ ದಲಿತ ವರ್ಗದಿಂದ ಬಂದವನು, ತನ್ನ ಜಾತಿಯ ಅನುಭವಗಳನ್ನು ತಾನೇ ಅಭಿವ್ಯಕ್ತಿಸಿದಾಗ, ಅದರಲ್ಲಿ ಕಾಣಿಸುವ, ಮೊಟ್ಟಮೊದಲನುಭವದ ಸಾಚಾತನ ನೋವು, ಆಕ್ರೋಶ ಇತ್ಯಾದಿಗಳು ಶಿಷ್ಟ ವರ್ಗದವರು, ದಲಿತನ ಬದುಕನ್ನು ಕಲ್ಪನೆಯಿಂದ ಅನುಭವಿಸಿ ಬರೆದ ಬರಹಗಳಲ್ಲಿ ಅಷ್ಟಾಗಿ ಇರಲಾರದು ಎಂಬುದನ್ನು ಮರೆಯಬಾರದು. ಅಷ್ಟೇ ಅಲ್ಲ, ಆಯಾ ಜಾತಿಯವರ ಸಂವೇದನೆಗಳು, ಅವನವನ ಭಾಷೆಯಲ್ಲಿ ಸಂಭವಿಸುವಾಗ ಕಂಡುಬರುವ ಭಾಷಾಲಯ ಕೂಡಾ, ಅದಕ್ಕೆ ಸಂಬಂಧಿಸದ ಶಿಷ್ಟ ಜಾತಿಯವನ ಬರೆಹದಲ್ಲಿ ಕಾಣಿಸಿಕೊಳ್ಳಲಾರದು. ಸಾಹಿತ್ಯಕ್ಕೆ ಸಮಗ್ರತೆ ಬರುವುದು, ಇದುವರೆಗೂ ತಮ್ಮ ಸಾಚಾ ಅನುಭವಗಳಿಗೆ ಬಾಯಿ ಕೊಡಲಾಗದಿದ್ದ, ಸಮಾಜಿಕ ಸ್ತರಗಳ ವ್ಯಕ್ತಿಗಳು, ಬದಲಾದ ಇಂದಿನ ಪರಿಸರದಲ್ಲಿ ತಮ್ಮ ತಮ್ಮ ಅಭಿವ್ಯಕ್ತಿಯನ್ನು ಸಾಧಿಸಿಕೊಂಡಾಗ. ಇಂಥ ಸಂದರ್ಭದ ಅವರ ಅಭಿವ್ಯಕ್ತಿಗಳಲ್ಲಿ ಒಂದು ಬಗೆಯ ಕುದಿತ, ರೊಚ್ಚು ಇತ್ಯಾದಿಗಳು ಇರುವುದು ಸಹಜ ಮತ್ತು ಐತಿಹಾಸಿಕವಾಗಿ ಸಮರ್ಥನೀಯ ಕೂಡ. ಅಂಥದನ್ನು ಕೇವಲ ಕಲಾತ್ಮಕ ಮಾನದಂಡದಿಂದಷ್ಟೇ ನೋಡದೆ, ಸಾಂಸ್ಕೃತಿಕವಾಗಿ ಅದು ಎಷ್ಟರ ಮಟ್ಟಿಗೆ ಅರ್ಥಪೂರ್ಣವಾಗಿದೆ ಎನ್ನುವುದನ್ನು ನೋಡುವ ಸಹನೆ ನಮ್ಮಲ್ಲಿ ಬರಬೇಕಾಗಿದೆ, ಹಾಗಲ್ಲದೆ ಅಂಥದು, ಸಾಹಿತ್ಯವೇ ಅಲ್ಲ ಅನ್ನುತ್ತ, ತಾವೇ ಶತಶತಮಾನಗಳಿಂದ ಸಾಹಿತಿಗಳಾಗಿರುವ ಕಾರಣ, ಮತ್ತು ಅಂದಿಗೂ ಇಂದಿಗೂ ಎಲ್ಲ ಜನವರ್ಗದ ಸಂವೇದನೆಗಳಿಗೆ ಮಾಧ್ಯಮವಾಗಿದ್ದೇವೆ

ಎಂಬ ಭ್ರಮೆಯಿಂದ, ಎಲ್ಲ ಸನ್ಮಾನ ಗೌರವಗಳೂ ಸದಾಕಾಲ ತಮಗೇ ತಮ್ಮ ಅದ್ಭುತ ಕಲಾತ್ಮಕತೆಗಾಗಿ ಸಲ್ಲಬೇಕೆಂಬ ಪುರೋಹಿತಶಾಹೀ ಸಾಹಿತ್ಯಕ ಧೋರಣೆಗಳನ್ನು ಕನಿಕರಿಸಬೇಕಾಗಿದೆ.

ನಮ್ಮ ದೇಶದ ಒಟ್ಟು ಸಮುದಾಯದ, ಇಡಿಯ ಜನತೆಯ ಒಟ್ಟು ಬದುಕನ್ನು ಕುರಿತು ಒಂದೇ ಒಂದು ಅಥೆಂಟಿಕ್ ಕೃತಿಯನ್ನು ಯಾರೂ ಬರೆಯಲಾರರು. ಯಾರೂ ಬರೆದೂ ಇಲ್ಲ. ಬರೆಯುವುದಕ್ಕೆ ಸಾಧ್ಯವೂ ಇಲ್ಲ. ಇಡಿಯ ಜನತೆಯ ಒಟ್ಟು ಬದುಕನ್ನು ಅದರ ವಿವಿಧ ಸಾಮಾಜಿಕ ಸ್ತರಗಳಿಂದ ಎಷ್ಟರಮಟ್ಟಿಗೆ ಬೇರೆ ಬೇರೆಯ ಅನುಭವದ ಅಭಿವ್ಯಕ್ತಿಗಳು ಸಾಧ್ಯವಾಗುತ್ತವೋ, ಅವುಗಳೆಲ್ಲವನ್ನೂ ಕೂಡಿಸಿಕೊಂಡು ನೋಡಬೇಕಾಗುತ್ತದೆ.

೪. ಲಲಿತ ಸಾಹಿತ್ಯಕ್ಕೆ ಹೋಲಿಸಿದರೆ, ಆಳವಾದ ವಿಚಾರಾತ್ಮಕ, ವಿಮರ್ಶಾತ್ಮಕ ಹಾಗೂ ಸಂಶೋಧನಾತ್ಮಕ ಬರೆಹಗಳ ಸಂಖ್ಯೆ ಕಡಮೆಯಾಗಿರುವುದು ತೀರಾ ಸಹಜ. ಈ ಪರಿಸ್ಥಿತಿಗೆ ಆಯಾ ಅಭಿವ್ಯಕ್ತಿ ಮಾಧ್ಯಮಗಳಿಗೆ ಅಗತ್ಯವಾದ ಮಾನಸಿಕ ಶಕ್ತಿ–ಸಾಮರ್ಥ್ಯಗಳೇ ಕಾರಣ. ಸೃಜನಶೀಲ ಸಾಹಿತ್ಯಕ್ಕಿಂತ ಬೇರೆಯಾದ ಬೌದ್ಧಿಕತೆ, ಅನ್ವೇಷಣಾಸಾಮರ್ಥ್ಯ, ವಿಶೇಷವಾದ ಅಧ್ಯಯನ ಇತ್ಯಾದಿ "ಶ್ರಮ"ಗಳನ್ನು ವಿಮರ್ಶೆ ಹಾಗೂ ಸಂಶೋಧನಾ ಕಾರ್ಯಗಳು ಒಳಗೊಳ್ಳುತ್ತವೆ. ಅಲ್ಲದೆ ಸಂಶೋಧನೆಯ ಬಗ್ಗೆ ಇರುವ ಕೆಲವು "ರಿಜಿಡ್" ಆದ ಕಲ್ಪನೆಗಳೂ ಅದನ್ನು ಕೈಕೊಳ್ಳುವ ಅನೇಕರು ಹಿಂಜರಿಯುವಂತೆ ಮಾಡಿರಬಹುದು. ಸೃಜನ ಸಾಹಿತ್ಯಕ್ಕಿರುವ ಆಕರ್ಷಣೆ ಹಾಗೂ ಜನಪ್ರಿಯತೆ, ಕೂಡಾ ಬಹುಮಂದಿ ಸೃಜನ ಸಾಹಿತ್ಯದ ಕಡೆ ಒಲಿಯಲು ಒಂದು ಕಾರಣವಿರಬಹುದು. ಸಂಶೋಧನೆ ಕೂಡಾ "ಜಡ"ವೆನ್ನಿಸದೆ ಜೀವಂತವಾದ ಒಂದ ಅಭಿವ್ಯಕ್ತಿ ಕ್ರಮವೆನ್ನುವುದನ್ನು ತೋರಿಸಲು ಸಾಧ್ಯವಾದಾಗ ಸಂಶೋಧನೆ ಅನ್ನುವುದು ಒಂದು ನಿಷ್ಠುರ ಹಠಯೋಗದಂತೆ ಭಾಸವಾಗುವ ಭಯ ದೂರವಾದೀತು.

ಆದರೂ ನಮ್ಮಲ್ಲಿ ಬಂದಿರುವ, ಬರುತ್ತಿರುವ ವಿಮರ್ಶೆ ಹಾಗೂ ಸಂಶೋಧನೆಯ ಕೃತಿಗಳು ಸತ್ವದಲ್ಲಿ ಕಡಿಮೆಯಾಗಿವೆ ಎಂದೇನೂ ನನಗೆ ತೋರುತ್ತಿಲ್ಲ. ಈಗ ಸಂಶೋಧನೆಯ ಕ್ಷೇತ್ರದಲ್ಲಿ ಕೆಲಸ ಮಾಡುತ್ತಿರುವ ಡಾ. ಎಲ್. ಬಸವರಾಜು, ಡಾ. ಟಿ. ವಿ. ವೆಂಕಟಾಚಲ ಶಾಸ್ತ್ರಿ, ಡಾ. ಚಿದಾನಂದ ಮೂರ್ತಿ, ಮತ್ತು ಡಾ. ಕಲಬುರ್ಗಿಯಂಥವರ ಸಾಧನೆ, ಹಿಂದಿನ ತಲೆಮಾರಿನ ವಿದ್ವಾಂಸರ ಸಾಧನೆಗಿಂತ ಕಡಮೆ ಮಟ್ಟದ್ದೇನೂ ಆಗಿಲ್ಲ; ಕೆಲವು ದೃಷ್ಟಿಗಳಿಂದ, ಅವರಿಗಿಂತ ಬೇರೆಯಾದ ದೃಷ್ಟಿಕೋನಗಳನ್ನು, ಆಯಾಮಗಳನ್ನು ಇವರು ತಂದುಕೊಡುತ್ತಿದ್ದಾರೆ. ಇನ್ನು ವಿಮರ್ಶೆ ಕೂಡಾ ವೈವಿಧ್ಯಮಯವಾಗಿ ಬೆಳೆದಿದೆ, ಗುಣದಲ್ಲಿ ಮಾತ್ರವಲ್ಲ, ಬಂದಿರುವ ಕೃತಿಗಳ ಸಂಖ್ಯೆಯಿಂದಲೂ. ಕರ್ನಾಟಕದ ಮೂರೂ ವಿಶ್ವವಿದ್ಯಾಲಯಗಳು ಕನ್ನಡ ವಿಮರ್ಶೆ ಹಾಗೂ ಸಂಶೋಧನೆಯ ದಿಕ್ಕಿನಲ್ಲಿ ಮಾಡಿರುವ ಕೆಲಸ ಎಷ್ಟೊಂದು ಹೊಸ ರೀತಿಯದೂ, ಸಾಕಷ್ಟು ಮೌಲಿಕವಾದದ್ದೂ ಎಂಬುವನ್ನು ಗಮನಿಸುವ ಔದಾರ್ಯ ನಮ್ಮಲ್ಲಿ ಬೆಳೆಯಬೇಕಾಗಿದೆ.

ಅರಿಕೆ: ಈ ಸಲ ನಮ್ಮ ಪ್ರಶ್ನೆಗಳಿಗೆ ಸಾಹಿತಿಗಳಿಂದ ಉತ್ತೇಜನಕರ ಪ್ರತಿಕ್ರಿಯೆ ಬಂತು. ಆದರೆ ಈಗಾಗಲೇ ನಮ್ಮೆಡೆಗೆ ಬಂದಿರುವ ಉತ್ತರಗಳಲ್ಲಿ ಕೆಲವನ್ನು ಜೂನ್ 'ಕಸ್ತೂರಿ'ಯಲ್ಲಿ ಪ್ರಕಟಿಸಲೆಂದು ಉಳಿಸಿಕೊಳ್ಳಬೇಕಾಗಿಬಂದಿದೆ. ಅದಕ್ಕಾಗಿ ಈ ಮಹನೀಯರೆಲ್ಲರ ಕ್ಷಮೆ ಕೋರುತ್ತೇವೆ. ಮುಂದಿನ ಸಂಚಿಕೆಯಲ್ಲಿ ಶ್ರೀಗಳಾದ ಪಿ. ಲಂಕೇಶ್, ಚನ್ನವೀರ ಕಣವಿ, ಚಂದ್ರಶೇಖರ ಪಾಟೀಲ, ಸುಬ್ರಾಯ ಚೊಕ್ಕಾಡಿ, ಸಿದ್ಧಲಿಂಗ ಪಟ್ಟಣಶೆಟ್ಟಿ, ಗೌರೀಶ ಕೈಕಿಣಿ ಮತ್ತು ಬನ್ನಂಜೆ ಗೋವಿಂದಾಚಾರ್ಯರ ಉತ್ತರಗಳು ಪ್ರಕಟವಾಗುತ್ತವೆ.

–ಸಂಪಾದಕ

ನಾಟಕ

ಎಂ. ಎಸ್. ಕೆ. ಪ್ರಭು

ಸಾರ್ವಜನಿಕ ರಸ್ತೆಯಲ್ಲಿ

ಪಾತ್ರಗಳು :	ರಾಜಣ್ಣ	ಪೋಲೀಸ್
	ರಾಜಿ	ನಾಲ್ಕು ವ್ಯಕ್ತಿಗಳು
	ವಿಶ್ವನಾಥ	ಫೋಟೋಗ್ರಾಫರ್
	ಗೌರಮ್ಮ	

ಚಡ್ಡಿ, ಬನೀನ್ ಮಾತ್ರ ಧರಿಸಿರುವ ರಾಜಣ್ಣ ಹಾಸಿಗೆಯಿಂದ ಮೆಲ್ಲಗೆ ಹೊದಿಕೆ ಸರಿಸಿ, ಶಬ್ದವಾಗದಂತೆ ಜಾಗರೂಕತೆಯಿಂದ ಮೇಲೇಳುತ್ತಾನೆ. ಮಂದವಾದ ಬೆಳಕಿನಲ್ಲಿ ಅವನ ಹೆಂಡತಿ ರಾಜಿ, ಮಗಳು ರತ್ನ, ಮಗ ವಿಶ್ವನಾಥ ಮತ್ತು ತಾಯಿ ಗೌರಮ್ಮ ಅವನ ಸುತ್ತ ಮಲಗಿರುವದು ಕಾಣಿಸುತ್ತದೆ. ಅವರನ್ನೆಲ್ಲಾ ಒಮ್ಮೆ ಸೂಕ್ಷ್ಮವಾಗಿ ಪರೀಕ್ಷಿಸಿ, ಅವರಿಂದ ಏನೂ ಅಪಾಯವಿಲ್ಲವೆಂದು ಖಚಿತಪಡಿಸಿ ಕೊಂಡು ತನ್ನ ತಲೆದಿಂಬಿನಡಿಯಿಂದ ಒಂದು ಸಿಮೆಂಟ್ ಚೀಲವನ್ನು ಹೊರಗೆಳೆಯುತ್ತಾನೆ. ಅನಂತರ ಮೆಲ್ಲನೆ ನಡಿಗೆ ಹಾಕುತ್ತಾ ಮೂಲೆಯಲ್ಲಿದ್ದ ದೊಡ್ಡ ಉಕ್ಕಿನ ಪೆಟ್ಟಿಗೆಯ ಬಾಗಿಲು ತೆಗೆದು ಅದರೊಳಗಿಂದ ಶರ್ಟು, ಪ್ಯಾಂಟು, ಪಂಚೆ, ಟವೆಲ್, ಲಂಗೋಟಿ, ದುಪಟಿ, ಪೈಜಾಮು, ಜುಬ್ಬ, ಬನೀನು, ಸೀರೆ, ಕುಪ್ಪಸ, ಲಂಗ, ಲಾಡಿ, ಬೆಲ್ಟ್, ಉಡುದಾರ, ಹರಕು ಬಟ್ಟೆಯ ತುಂಡುಗಳು, ಲೋಟ, ಚೊಂಬು, ಉದ್ಧರಣೆ, ಗಿಂಡಿ, ಸೌಟು, ಚಮಚ, ಬಾಣಲೆ, ತಟ್ಟೆ, ದೀಪ, ಬಾಟಲುಗಳು, ಪೆನ್ಸಿಲ್, ಕಾಗದಗಳು, ಪುಸ್ತಕಗಳು, ಹಳೇ ಕ್ಯಾಲೆಂಡರ್ ಗಳು, ಪಂಚಾಂಗಗಳು, ದೊಣ್ಣೆ, ಹಗ್ಗ, ಚಾಕು, ಬಲ್ಬುಗಳು, ಚಪ್ಪಲಿಗಳು, ಚೆಂಡು, ಬುಗುರಿ ಮುಂತಾದ ಆಟದ ಸಾಮಾನುಗಳು, ಕಟ್ಟು ಹಾಕದ ಫೋಟೋಗಳು, ಆಲ್ಬಮ್, ಮಾಸಿದ ಹೂವಿನ ಹಾರ ಮುಂತಾದ ವಿವಿಧ ಪದಾರ್ಥಗಳನ್ನು ಆತುರಾತುರವಾಗಿ ಸಿಮೆಂಟ್ ಚೀಲಕ್ಕೆ ತುಂಬಿ, ತುರುಕಿ ಭರ್ತಿ ಮಾಡುತ್ತಾನೆ. ಚೀಲ ತುಂಬಿ ಮತ್ತೇನೂ ಹಿಡಿಸದಾದಾಗ ಬಲವಂತವಾಗಿ ಅದುಮಿ ತುರುಕುತ್ತಾನೆ. ಕಡೆಗೆ

ಇನ್ನೇನೂ ಮಾಡಲು ಸಾಧ್ಯವೇ ಇಲ್ಲವೆಂದು ಮನವರಿಕೆಯಾಗಿ ಚೀಲದ ಬಾಯನ್ನು ಕಟ್ಟಿ ಎಳೆದು ಬಾಗಿಲಿಗೆ ತಂದಿಟ್ಟು, ಗೂಟದಲ್ಲಿದ್ದ ಶರ್ಟ್, ಪ್ಯಾಂಟು ಧರಿಸಿ, ಭಾರವಾದ ಚೀಲವನ್ನು ಪ್ರಯಾಸದಿಂದ ಮೇಲೆತ್ತಿ] ಬೆನ್ನ ಮೇಲಿಟ್ಟುಕೊಂಡು ನಿಧಾನವಾಗಿ, ಆದರೆ ಕಾತುರದಿಂದ ಹೆಜ್ಜೆಹಾಕುತ್ತಾ ಬಾಗಿಲು ತೆರೆದು ಒಮ್ಮೆ ಹಿಂತಿರುಗಿ] ಮನೆಯಲ್ಲಿ ಮಲಗಿದ್ದವರನ್ನೆಲ್ಲಾ ನೋಡುತ್ತಾನೆ. ಒಮ್ಮೊಮ್ಮೆಗೇ ಬೆಳಕು ಪ್ರಖರವಾಗಿ ನಿದ್ರಿಸುತ್ತಿದ್ದವರ ಮೇಲೆ ಬಿದ್ದು ಅವರೆಲ್ಲಾ ಸ್ಪಷ್ಟವಾಗಿ ರಾಜ್ಯನಿಗೆ ಗೋಚರಿಸುತ್ತಾರೆ. ಬೆನ್ನ ಮೇಲೆ ಮೂಟೆ ಹೊತ್ತ ಅವನು ಅವರನ್ನೆಲ್ಲಾ ನೋಡುತ್ತಾ ಬಾಗಿಲು ತೆರೆದು ಹೊರಕ್ಕೆ ಹೆಜ್ಜೆಯಿಡುತ್ತಾನೆ. ಕತ್ತಲು.

೨

ಪೋಲೀಸ್ ಸ್ಟೇಷನ್.

ಒಬ್ಬ ಪೋಲೀಸ್ ಅಧಿಕಾರಿ. ಅವನ ಮುಂದೆ ರಾಜಿ ಕುರ್ಚಿಯಲ್ಲಿ] ಕೂತಿದ್ದಾಳೆ.

ಪೋಲೀಸ್: ನಿಮ್ಮ ಮದುವೆಯಾಗಿ ಎಷ್ಟು ವರ್ಷ ಆಯ್ತು?

ರಾಜಿ: ಊಂ......ಇಪ್ಪತ್ತು.

ಪೋ: ಈ ಮೊದಲು ಹೀಗೇನಾದರೂ ಆಗಿತ್ತೇ?

ರಾ: ಹೀಗೆ. ಅಂದ್ರೆ......ಇಲ್ಲ......ಆದ್ರೆ.

ಪೋ: ಆದ್ರೆ ? ಏನಾಗಿತ್ತು?

ರಾ: ಏನೂ ಇಲ್ಲ......ಒಮ್ಮೆ ಮಾತ್ರ...... ಉಹುಂ. ಏನೂ ಆಗಿಲ್ಲ.

ಪೋ: ಮಿಸ್ಟರ್ ಈಗ್ಲೇ ಹೇಳಿದೀನಿ...... ನೀವು ಏನೋ ಮುಚ್ಚಿಡ್ತಿದೀರಿ.

ರಾ: ಏನೂ ಮುಚ್ಚಿಟ್ಟಿಲ್ಲ.

ಪೋ: ನನಗೆ ಸಂಶಯ.

ರಾ: ನಿರಾಧಾರವಾದದ್ದು.

ಪೋ: ಆಮೇಲೆ ನಿಮ್ಮ ಯಜಮಾನರು ಸಿಕ್ಕದೆ ಇದ್ರೆ ತಪ್ಪು ನಮ್ಮದಲ್ಲ.

ರಾ: ನಮ್ಮದೇ?

ಪೋ: ನಮಗೆ ಸಂಪೂರ್ಣ ಸಹಕಾರ ಕೊಡ ಕೊಡದಿದ್ರೆ. ನಿಮ್ಮ ರಾಯನ್ನ ನಾವು ಕಂಡುಹಿಡಿಯೋಕೆ ಸಾಧ್ಯವಾಗದೆ ಇರ ಬಹುದು......ಹೇಗೆ. ಒಮ್ಮೆ ಏನೋ



ಆಗಿರಬೇಕು, ಇಂಥದು, ಜ್ಞಾಪಿಸಿಕೊಳ್ಳಿ. ನಮ್ಮ ಹತ್ತಿರ ಹೇಳೋಕೆ ನಾಚಿಕೆಪಟ್ಕೋಬಾರದು. ನಾವು ನಿಮ್ಮ ಸಹಾಯಕ್ಕೇ ಇರೋದು...... ನಿಮ್ಮ ಪರಿವಾರಾನ ಯಥಾ ಪ್ರಕಾರ ಪ್ರತಿಷ್ಠಾನ ಮಾಡೋದೇ ನಮ್ಮ ಕರ್ತವ್ಯ. ನಮ್ಮ ಹತ್ತಿರ ನೀವು ಏನನ್ನೂ ಮುಚ್ಚಿಡಬಾರದು.

ರಾ: ಏನೂ ಇಲ್ಲ......ನಮ್ಮ ಮೊದಲ ಮಗು ಹುಟ್ಟಿದಾಗ......

ಪೋ: ಹಾಂ; ಹಾ, ಹೇಳಿ ಏನಾಯ್ತು...

ರಾ: ಅವರು ಮೂರು ದಿನ ಮನೇಗೆ ಬರಲಿಲ್ಲ. ಅಷ್ಟೆ. ಆಮೇಲೆ ಬಂದ್ರು. ಎಲ್ಲಾ ಸರಿಹೋಯ್ತು ಅನ್ನಿ.

ಪೋ: ಎಲ್ಲಿಗೆ ಹೋಗಿದ್ರು ಆಗ?

ರಾ: ಫ್ಯಾಕ್ಟರೀಲಿ ಒ. ಟಿ. ಮಾಡ್ತಿದ್ರಂತೆ.

(ಪೋಲೀಸ್ ತಕ್ಷಣ ತನ್ನ ನೋಟ್‌ಬುಕ್ಕಿನಲ್ಲಿ ಬರೆದುಕೊಳ್ಳುತ್ತಾನೆ.)

ಪೋ: ಬಹಳ ಉಪಕಾರವಾಯ್ತು. ಮತ್ತೇನಾದ್ರೂ ಹೇಳೋದಿದ್ಯಾ?

ರಾ: ......ಉಹುಂ......ಮತ್ತೇನೂ ಇಲ್ಲ.

ಪೋ: ಚೆನ್ನಾಗಿ ಜ್ಞಾಪಿಸಿಕೊಳ್ಳಿ ... ಎರಡನೇ ಮಗು ಹುಟ್ಟಿದಾಗ?

ರಾ: ಆಗ ಆ ತರಹ ಏನೂ ಆಗಲಿಲ್ಲ, ಆದ್ರೆ......

ಪೋ: ಹಾಂ! ನಂಗೊತ್ತು ಏನಾದ್ರೂ ಜರುಗಿರಬೇಕು ಹೇಳಿ, ಹೇಳಿ **(ನೋಟ್ ಬುಕ್, ಪೆನ್ ಸಿದ್ಧ ಮಾಡಿಕೊಂಡು ಅವಳನ್ನೇ ದಿಟ್ಟಿಸುತ್ತಾನೆ.)**

ರಾ: ಎರಡು ದಿನ ಒಂದೇ ಸಮನೆ ನಿದ್ರೆ ಮಾಡಿದ್ರು......ನಲವತ್ತೆಂಟು ಗಂಟೆ.



ಪ್ರೋ: ವಿಚಿತ್ರ. ಅದೂ ಬಹಳ ಮುಖ್ಯವಾದ ಸಂಗತಿ. (ಬರೆದುಕೊಳ್ಳುತ್ತಾನೆ) ನೀವೇನೂ ಚಿಂತಿಸಬೇಡಿ. ನೀವು ಈಗ.... ಒದಗಿಸಿರೋ ಮಾಹಿತಿಯಿಂದ ನಮಗೆ ಬಹಳ ಸಹಾಯವಾಗುತ್ತೆ. ಆದಷ್ಟು ಬೇಗ...

(ಅವನು ಮಾತು ಮುಗಿಸುವ ಮೊದಲೇ ಗೌರಮ್ಮ ಒಳಗೆ ಬರುತ್ತಾಳೆ. ರಾಜ ಹೊರಗೆ ಹೋಗುತ್ತಾಳೆ.)

ಗೌರಮ್ಮ: ನಮ್ಮ ಮಗು ಚಿಕ್ಕ ಹುಡುಗ ಇದ್ದಾಗ...

ಪ್ರೋ: ಏನಾಯ್ತು? ಘಾತ ಆಗಿತ್ತೆ? ನಾಯಿಕೆಮ್ಮು ಬಂದಿತ್ತೆ? ಬಾಲಗ್ರಹವೇ?

ಗೌ: ಸ್ವಲ್ಪ ನಿಧಾನವಾಗಿ. ಎಲ್ಲಾ ಹೇಳ್ತೀನಿ ಒಂದೊಂದಾಗಿ. ಚಿಕ್ಕ ಮಗುವಾಗಿದ್ದಾಗ ಯಾವಾಗ್ಲೂ ನನ್ನ ಸೆರಗು ಕಚ್ಚಿಕೊಂಡೇ ಇರ್ತಿದ್ದ. ಎಲ್ಲಾದ್ರೂ ತಪ್ಪಿಸಿಕೊಂಡು ಬಿಟ್ಟೇನು ಅನ್ನೋ ಭಯ. ಪಾಪ! ಜೂಟಾಟ ಆಡೋವಾಗ್ಲೂ ಅಷ್ಟೆ. ಯಾವಾಗ್ಲೂ ಅಜ್ಜಿಯಾಗಿರ್ತಿದ್ನೇ ವಿನಾ, ಓಡ್ತಾ ಇರ್ಲಿಲ್ಲ. ಹಿಡೀತಾ ಇರ್ಲಿಲ್ಲ.

ಪ್ರೋ: ನೀವೇನು ಮಾಡಿದ್ರಿ ಅದಕ್ಕೆ?

ಗೌ: ನಾವೇನು ಮಾಡೋದು? ಒಂದು ತಾಯಿತ ಕಟ್ಟಿಸಿದ್ವಿ.

ಪ್ರೋ: ಹೋಗ್ಲಿ ಬಿಡಿ, ಮೊಮ್ಮಕ್ಕಳು ಎಲ್ಲಾ ಚೆನ್ನಾಗಿದಾರಾ?

ಗೌ: ಏನೋ ಇದಾರೆ, ಒಂಥರಾ. ಮುಂದೆ ಬೆಳೆದು ದೊಡ್ಡೋರಾದ್ಮೇಲೆ ತಾನೇ ನಿಜವಾದ ಬುದ್ಧಿ ತಿಳಿಯೋದು.

ಪ್ರೋ: ಹೌದ್ಹೌದು, ಹದಿನಾರಾಣೆ ಸತ್ಯ.

ಗೌ: ಈಗ ನೋಡಿ, ರಾಜ ಹೀಗ್ಮಾಡ್ತಾನೆ ಅಂತ ಯಾರಿಗೆ ತಾನೆ ಗೊತ್ತಿತ್ತು?

ಪ್ರೋ: ಗೊತ್ತಿದ್ರೆ ಮೊದಲೇ ಕ್ರಮ ತೆಗೆದುಕೊಳ್ಳಬಹುದಾಗಿತ್ತು.

ಗೌ: ಈಗ ತಡವಾಯ್ತು ಅಂತೀರಾ?

ಪ್ರೋ: ಹಾಗೆಲ್ಲಿ ಅಂದೆ? ನಮ್ಮ ಕೆಲಸದಲ್ಲಿ [illegible] ನಿಮ್ಮ [illegible] ಕಾರ ಬೇಕು. ಎಲ್ಲಾ ವಿಷಯಗಳನ್ನೂ ಸ್ವಲ್ಪವೂ ಮುಚ್ಚಿಡದೆ ತಿಳಿಸಬೇಕು. ನಾವು ಕರೆದಾಗ ಹಾಜರಾಗಬೇಕು (ಪೋಲೀಸನ ಪ್ರತಿ ಮಾತಿಗೂ ಗೌರಮ್ಮ ಸಮ್ಮತಿಸೂಚಕವಾಗಿ ತಲೆದೂಗುತ್ತಾಳೆ.) ಮತ್ತೇನಾದ್ರೂ ಹೇಳೋವಂಥ ವಿಷಯ ಇದ್ಯಾ?

ಗೌ: ಇನ್ನೂ ಏನೇನು ಸಾಮಾನುಗಳು ಹೋಗಿವ್ಯೋ ಸರಿಯಾಗಿ ನೋಡಿಕೊಂಡಿಲ್ಲ.

ಪ್ರೋ: ಮನೇಗೆ ಹೋಗಿ ನೋಡಿ. ಪಟ್ಟಿ ಬರೆದು ತಂದುಕೊಡಿ.

ಗೌ: ಹೂಂ, ಹಾಗೇ ಮಾಡ್ತೀನಿ. ನೀವು ಸಹಾಯ ಮಾಡಿದ್ರೆ ಮಾತ್ರ ನಾವು ಬದುಕ್ತೀವಿ.

ಪ್ರೋ: ನೀವೇನೂ ಯೋಚನೆ ಮಾಡಬೇಡಿ. ಎಂಥೆಂಥಾ ಕೇಸುಗಳನ್ನು ನೋಡಿದೀವಿ. ಇದ್ಯಾವ ಮಹಾ ಗನಂಧಾರಿ ಕೇಸು!

ಗೌ: ನಿಮಗೆ ದೊಡ್ಡದಲ್ಲದಿರಬಹುದು. ನಮ್ಮನೇಲಿ ಇದೇ ಮೊದಲು ಹೀಗಾಗ್ತಾ ಇರೋದು; ನಮಗೆ ಇದೇ ಅಗಾಧ.

ಪ್ರೋ: ಒಳ್ಳೇದು, ನೋಡೋಣ, ನಮ್ಮ ಕೈಲಾದದ್ದನ್ನೆಲ್ಲಾ ಮಾಡ್ತೀವಿ.

ಗೌ: ನಮ್ಮ ಕಷ್ಟ ನಿಮಗೆ ಅರ್ಥವಾಗುತ್ತೆ ಅಂತ ತಿಳಕೊಂಡಿದೀವಿ. ನನಗೋ ವಯಸ್ಸಾಯ್ತು. ಯಾವತ್ತೂ ಮನೆ ಬಿಟ್ಟು ಹೊರಗೆ ಹೋದೋಳಲ್ಲ. ಇನ್ನೂ ಮೊಮ್ಮಕ್ಕಳು... ಓದ್ತಾ ಇದಾರೆ. ಕೆಲಸಕ್ಕೆ ಹೋಗೋ ವಯಸ್ಸಲ್ಲ. ಬೇಡ, ಹೋಗ್ಲೀ ಅಂತಂದ್ರೆ ಕೆಲ್ಸ ಎಲ್ಲಿ ಸಿಕ್ಕಬೇಕು?

ಪ್ರೋ: ಹೌದು, ಬಹಳ ಕಷ್ಟ. ಅರ್ಥವಾಗುತ್ತೆ.

ಗೌ: ನನ್ನ ಸೊಸೆ ನೋಡಿದ್ರಲ್ಲ, ಅವಳ ಸ್ಥಿತಿ (ಮೆಲುದನಿಯಲ್ಲಿ) ಮೂರು ತಿಂಗಳು ತುಂಬಿದೆ. ...

ಪ್ರೋ: ಹೌದಾ? ನಾನು ಅದನ್ನೆಲ್ಲಾ ಗಮನಿಸಲೇ ಇಲ್ಲ. ಬಹಳ ಮುಖ್ಯವಾದ ಅಂಶ. ಗೊತ್ತೇ ಆಗಲಿಲ್ಲ, ನೋಡಿ. (ಬರೆದುಕೊಳ್ಳುತ್ತಾನೆ.)

ಗೌ: ಈಗ ಕಾಣದ [illegible]

ಅದೇನು ಫ್ಯಾಶನ್ನೋ ನಾ ಬೇರೆ ಕಾಣೆ… ಮುಚ್ಚಿಟ್ಕೋತಾರೆ. …ನಮ್ಮ ಕಾಲದಲ್ಲಿ ನಾವೆಲ್ಲಾ ಹೇಗೆ ಇದ್ದ್ವಿ.

ಪೋ : ಅಂತೂ ವಿಷಯ ತಿಳೀತಲ್ಲ. ಸಧ್ಯ …ಅದು ಮಚ್ಚೆ. ಯಾರೂ ಮುಚ್ಚಿಟ್ಕೊ ಬಾರದು ಅಂತ ಅವನಿಗೆ ಎಚ್ಚರಿಕೆ ಕೂಡ ಕೊಟ್ಟಿದ್ದೆ.

ಗೌ : ಹಾಂ ಮತ್ತೊಂದು ವಿಷಯ.

ಪೋ : ಹೇಳಿ ಹೇಳಿ (ಬರೆಯಲು ಸಿದ್ಧನಾಗಿದ್ದಾನೆ.)

ಗೌ : ಹೈಸ್ಕೂಲಿನಲ್ಲಿ ಎಸ್ಸೆಲ್ಸಿ ಓದುವಾಗ ಒಂದಿನ…

ಪೋ : ಹೂಂ……ಹೇಳಿ……

ಗೌ : ಒಂದು ರಾತ್ರಿ……ಮಧ್ಯರಾತ್ರೀಲಿ ಎದ್ದು ಸ್ಕೂಲಿಗೆ ಹೊರಟ್ಬಿಟ್ಟ.

ಪೋ : ಆಮೇಲೆ ?

ಗೌ : ಆಮೇಲೆ… ನಮಗೆಚ್ಚರ ಆಗಿ ಎಲ್ಲಿ ಹೋದ್ನಪ್ಪಾ ಅಂತ ಪರದಾಡ್ತಾ ಲಾಟೀನ್ ಹಿಡಕೊಂಡು ಬೀದಿ ಎಲ್ಲಾ ಅಲೀತಿದ್ದಾಗ ಬೆಳಿಗ್ಗೆ ನಗ್ತಾ ವಾಪಸ್ ಬಂದ. ಎಲ್ಲಿ ಹೋಗಿದ್ಯೋ ಅಂತ ಕೇಳಿದ್ರೆ ಮಾತಿಲ್ಲ. ಕತೆ ಇಲ್ಲ. ಸೀದಾ ಹೋಗಿ ಹಾಸಿಗೆ ಮೇಲೆ ಉರುಳಿ ಮುಸುಕು ಹಾಕ್ಕೊಂಡುಬಿಟ್ಟ. ಅಯ್ಯೋ ದೇವ್ರೇ ಇದೇನ್ ಗ್ರಾಚಾರ ಅಂತ ನಾವೆಲ್ಲಾ ನಿದ್ದೆ ಬರದೆ ಹೊರಳಾಡಿದ್ವಿ ಆ ರಾತ್ರಿ ಎಲ್ಲಾ.

ಪೋ : (ಬರೆದುಕೊಳ್ಳುತ್ತಾ) ನಿದ್ದೆ ಬರದೆ ಹೊರಳಾಡಿದ್ರಿ… ಬಹಳ ಸ್ವಾರಸ್ಯವಾಗಿದೆ…

ಗೌ : ಇನ್ನೂ ಇದೆ, ಕೇಳಿ…

(**ಪೋಲೀಸ್ ಗಡಿಯಾರ ನೋಡಿಕೊಂಡು ಅವಳತ್ತ ತಿರುಗುತ್ತಾನೆ.**)

ಪೋ : ಹೂಂ, ಹೇಳಿ……

ಗೌ : ಬೆಳಗ್ಗೆ ಎದ್ದಾಗ ಪುನಃ ಕೇಳ್ದೆ… ಆಗ್ಲೂ ಬಾಯಿ ಬಿಡಲಿಲ್ಲ…ಹೋಗ್ಲಿ, ಸ್ಕೂಲ್‌ಗಾದ್ರೂ ಹೊರಡು. ಅಂತ ಬೈದೆ. ಹೋಗ್ತೀನಿ ಅಂತ ಹೊರಟ. ಪುಸ್ತಕ ತೊಗೊಂಡು ಹೋಗೋ ಬದಲು… ಟೋಪಿ ಹಾಕ್ಕೊಳ್ತೀನೋ……ಬೆಂಗಾಲಿ ನಲ್ಲಿ ಹೋಗಬಾರ್ದು ಅಂತ ಮನಸ್ಸು ಬಡಕೊಂಡಿದೀನಿ…ಅಂತ ನಾನು ಬರೆದ್ದು ಇಟ್ಟೋದನ್ನು ತಲೆ ಮೇಲೆ ಹಾಕ್ಕೊಳ್ಳಿ 'ಎಲ್ಲಾ ಸ್ಕೂಲ್ ಹಾಸ್ಟೆಲ್ ಇಟ್ಟುಬಿಟ್ಟು ಬಂದಿದೀನಿ ನಿನ್ನೇ ರಾತ್ರೀನೆ…ಅಂತ ಬರೆದು ಹೋದ

ಪೋ : ತುಂಬಾ ಇಂಟರೆಸ್ಟಿಂಗ್ ಆಗಿದೆ… ಹೂಂ… ಆಮೇಲೆ?

ಗೌ : ಸಾಯಂಕಾಲ ಅವನು ಮನೆಗೆ ಬಂದಾಗ ತಲೇಮೇಲೆ ಟೋಪಿ. ಕೈಯಲ್ಲಿ ಬ್ಯಾಗು. ಕಾಲಲ್ಲಿ ಚಪ್ಲಿ…ನಮಗೆಲ್ಲಾ ತುಂಬಾ ಸಂತೋಷ ಆಗಿ, ಅದೇ ವೇಷದಲ್ಲಿ ಅವನ ಫೋಟೋ ತೆಗೆಸಿದ್ವಿ. ಕಟ್ಟು ಹಾಕಿ ಗೋಡೇ ಮೇಲೆ ನೇತು ಹಾಕಿದ್ವಿ.

ಪೋ : ಹೌದಾ…ಬಹಳ ಸಂತೋಷ. ಆ ಫೋಟೋ ಕೊಡಿ ನನ್ನ ಹತ್ತಿರ.

ಗೌ : ಇಲ್ಲಾಂತ ಕಾಣುತ್ತೆ.



ಪ್ರೋ : ಇನ್ನೊಂದು ಸಲ ಹುಡುಕಿ... ಆ ಫೋಟೋ ಸಿಕ್ಕಿದ್ರೆ ನಿಮ್ಮ ಮಗ ಸಿಕ್ಕಿದ ಹಾಗೇ ಅಂತ ತಿಳಕೊಳ್ಳಿ.

ಗೌ : ಆಗ್ಲಿ...ಇನ್ನೊಂದ್ಸಲ ಹುಡುಕ್ತೀನಿ.

(ಹೋಗುತ್ತಾಳೆ.)

(ರತ್ನ ಒಳಗೆ ಬರುತ್ತಾಳೆ.)

ರತ್ನ : ಅವರು ನಮ್ಮ ತಂದೆ ಸಾರ್...ನಮಗೆ ಅವರನ್ನು ಕಂಡ್ರೆ ಬಹಳಾ ಪ್ರೀತಿ ಸಾರ್...

ಪ್ರೋ : ಅವರಿಗೆ ನಿಮ್ಮನ್ನು ಕಂಡ್ರೆ?

ರ : ಅದೆಲ್ಲಾ ಯಾಕೆ ಸಾರ್ ಈಗ... ನಾನು ಬೀಎಸ್ಸಿ ಫೈನಲ್‌ನಲ್ಲಿದ್ದೀನಿ... ಎಕ್ಸಾಮ್ ಫೀ ತುಂಬಿಲ್ಲ ಇನ್ನೂ. ಟ್ವೆಂಟಿಥರ್ಡ್ ಲಾಸ್ಟ್ ಡೇಟ್ ಸಾರ್.

ಪ್ರೋ : ಐಯಾಮ್ ಸೋ ಸಾರಿ...ಮಿಸ್...?

ರ : ರತ್ನ ಸಾರ್ ನನ್ನ ಹೆಸರು, ಮಿಸ್ ರತ್ನ...ಸಂಗೀತ ಕಲೀಬೇಕು ಅಂತ ತುಂಬಾ ಆಸೆ ಸಾರ್...ನಮ್ಮಪ್ಪನ ಹತ್ತಿರ ಹೇಳ್ತಾ ಇದ್ದೆ ಸಾರ್...ಆಗ್ಲಿ ಅಂದಿದ್ರು...ಬೀಎಸ್ಸಿ ಮುಗಿದ ಮೇಲೆ ಎಂಎಗೆ ಹೋಗ್ಬೇಕೂಂತಿದ್ದೆ. ಫಿಲಾಸಫಿ ಅಥವಾ ಸೈಕಾಲಜಿ ಅಥವಾ ಸೋಷಿಯಲ್ ವರ್ಕ್...ತುಂಬಾ ಕಷ್ಟ ಪಟ್ಟು ಓದ್ತೀನಿ ಮನೇಲಿ...ಕಾಲೇಜ್‌ನಲ್ಲಿ ಯಾವಾಗ್ಲೂ ನಾನೇ ಫಸ್ಟ್...ಹೈಯರ್ ಸ್ಟಡೀಸ್‌ಗೆ ಸ್ಟೇಟ್ಸ್‌ಗೆ ಹೋಗಬೇಕೂಂತ ನನ್ನ ಫ್ರೆಂಡ್ಸು, ಪ್ರೊಫೆಸರುಗಳು ಎಲ್ರೂ ಬಲವಂತ ಮಾಡ್ತಾ ಇದಾರೆ ಸಾರ್...

ಪ್ರೋ : ನೀವು ಒಪ್ಪಿಕೊಂಡು ಬಿಟ್ಟಿದೀರ?

ರ : (ತಲೆ ತಗ್ಗಿಸಿ, ತಪ್ಪೊಪ್ಪಿಕೊಳ್ಳುವಂತೆ) ಹೂಂ ಸರ್.

ಪ್ರೋ : (ಚಿಂತಾಕ್ರಾಂತನಾಗಿ) ಹೂಂ...

(ಬಂದು ರತ್ನಳ ಕುರ್ಚಿಯ ಹಿಂದೆ ನಿಲ್ಲುತ್ತಾನೆ.)

ಮದುವೆ ವಿಚಾರ ಏನಾದ್ರೂ ಮಾಡಿದೀರ?

(ರತ್ನ ತಲೆ ತಗ್ಗಿಸಿ ನಿಂತಿರುತ್ತಾಳೆ ಮಾತನಾಡುವುದಿಲ್ಲ.)

ಪ್ರೋ: ನೀವು ಹೀಗೆ ಮಾತಾಡದೆ ನಿಂತುಕೊಂಡು ಬಿಟ್ರೆ ನಿಮ್ಮ ತಂದೆ ಸಿಕ್ತಾರೆ ಅಂತ ತಿಳಕೊಂಡಿದೀರ? ನಮ್ಮ ಜೊತೆ ಕೋಆಪರೇಟ್ ಮಾಡಬೇಕು. ...

ರ : ಆಗಲಿ ಸಾರ್.

(ಪೋಲೀಸು ತನ್ನ ಕುರ್ಚಿಯತ್ತ ಬರುತ್ತಾನೆ.)

ಪ್ರೋ : ವೆರಿ ಗುಡ್ (ಬರೆದುಕೊಳ್ಳುತ್ತಾನೆ) ಮತ್ತೇನಾದ್ರೂ ಹೇಳೋದಿದ್ಯಾ?

ರ : (ಸ್ವಲ್ಪ ತಲೆ ಎತ್ತಿ) ಸ್ಟೇಟ್ಸ್‌ಗೆ ಹೋದಾಗ ಸಾಧ್ಯವಾದರೆ ಕಾಂಟಿನೆಂಟ್ ಟೂರ್ ಮಾಡಬೇಕೂಂತಿದೀನಿ ಸಾರ್.

ಪ್ರೋ : ನಿಮ್ಮ ಪರಿಚಯದೋರು ಯಾರಾದ್ರೂ ಇದಾರ ಅಲ್ಲಿ?

ರ : ಇಲ್ಲ ಸಾರ್. ಹೋದ ಮೇಲೆ ಪರಿಚಯ ಮಾಡ್ಕೋಬೇಕೂಂತಿದೀನಿ.

ಪ್ರೋ: ಆ ಫೋಟೋ ವಿಷಯ ನಿಮಗೇನಾದರೂ ಗೊತ್ತಾ? ನಿಮ್ಮ ತಂದೆ ಸ್ಕೂಲ್ ಬ್ಯಾಗ್ ಹಿಡಿದು ಟೋಪಿ, ಚಪ್ಪಲಿ ಹಾಕ್ಕೊಂಡು ತೆಗೆಸಿಕೊಂಡಿದ್ದು?

ರ : ಹೌದು ಸಾರ್, ಆ ಥರ ಫೋಟೋ ಒಂದು ನಡುಮನೆ ಗೋಡೆ ಮೇಲಿತ್ತು. ಅಪ್ಪಾರದ್ದೋ ಅಂತ ಅಂದ್ಕೊಂಡಿದ್ದು.

ಪ್ರೋ : ಅದು ನಿಮ್ಮ ತಂದೇದು. ನೀವು ಈ ವಿಚಾರ ತಿಳಕೊಂಡಿರಬೇಕಿತ್ತು.

ರ : ಐಯಾಮ್ ಸಾರಿ ಸಾರ್...

ಪ್ರೋ : ಎಲ್ಲಿದೆ ಈಗ?

ರ : ಬಹುಶಃ ಅವರೇ ತಗೊಂಡು ಹೋಗಿರಬೇಕು. ಬೆಳಗ್ಗೆ ನೋಡ್ದಾಗ ಗೋಡೆ ಮೇಲೆ ಬಿಳೀ ಚೌಕ ಕಾಣಿಸ್ತಿತ್ತು.

ಪ್ರೋ : ನಾವು ಮೊದಲು ಆ ಫೋಟೋ ಸಂಪಾದಿಸಬೇಕು.

ರ : ಇನ್ನೊಂದ್ಸಲ ಮನೇಲಿ ಹುಡುಕ್ತೀನಿ ಸಾರ್; ಸಿಕ್ಕಿದ್ರೆ ತಕ್ಷಣ ತಂದುಕೊಟ್ಟು ಬಿಡ್ತೀನಿ.

ಪ್ರೋ : [illegible]

ರ : ಇಲ್ಲ ಸಾರ್. (ಹೋಗುತ್ತಾಳೆ)

(ವಿಶ್ವನಾಥ ಪ್ರವೇಶಿಸಿ ಮೌನವಾಗಿ ನಿಲ್ಲುತ್ತಾನೆ.)

ಪೋ : ಅದೇನು ಹೇಳೋದಿದ್ಯೋ ಬೇಗ ಬೇಗ ಹೇಳಿ ಮುಗಿಸು.

ವಿಶ್ವನಾಥ : ಏನೂ ಇಲ್ಲ.

ಪೋ : ಅಂ! ಏನೂ ಇಲ್ಲ...ಮತ್ತೆ ಯಾಕೆ ಬಂದೆ ಇಲ್ಲಿ?

ವಿ : ನೀವು ಕರೆಸಿದಿರಿ ಅಂತ ಬಂದೆ... ನಮ್ಮಜ್ಜಿ, ಅವ್ವ. ಅಕ್ಕ ಎಲ್ಲರೂ ಹೇಳಿಕೆ ಕೊಟ್ಟಾಯ್ತಲ್ಲ?

ಪೋ : ಆದ್ರೆ ನಿನ್ನ ಹೇಳಿಕೇನೂ ಬೇಕು. ನೀನೇ ನಮ್ಮ ಮುಖ್ಯ ಸಾಕ್ಷಿ.

ವಿ : ನನಗೇನೂ ಗೊತ್ತಿಲ್ಲ.

ಪೋ : ನೋಡಪ್ಪ, ಹೀಗೆಲ್ಲಾ ಪೆದ್ದುಪೆದ್ದಾಗಿ ಮಾತಾಡಿದ್ರೆ ಪ್ರಯೋಜನವಿಲ್ಲ.

ವಿ : ನನಗೆ ಬಹಳ ಸಂತೋಷವಾಗಿದೆ.

ಪೋ : ಆ ಫೋಟೊ ವಿಚಾರ ಏನಾದ್ರೂ ಗೊತ್ತಾ?

ವಿ : ಅದನ್ನು ನಮ್ಮಪ್ಪ ತಗೊಂಡು ಹೋಗಿರಬಹುದು.

(ಪೋಲೀಸ್ ಬರೆದುಕೊಳ್ಳುತ್ತಾನೆ.)

ಪೋ: ಬೇರೆ ಏನಾದ್ರೂ ಹೇಳೋದಿದ್ಯಾ?



ವಿ: ಅವರ ಪಾಡಿಗೆ ಅವರನ್ನ ಬಿಡಬಹುದೂಂತ ಕಾಣುತ್ತೆ.

ಪೋ: ಏ, ಏನಯ್ಯಾ ನೀನು ಹೇಳೋದು?

ವಿ: ಶ್ರೀಮಾನ್ ರಾಜಣ್ಣನವರನ್ನು ದುಡುಕುವ ಕ್ರಮವನ್ನು ತಾವು ತೆಗೆದುಕೊಳ್ಳಬೇಕಾಗಿಲ್ಲವೆಂದು ಅರ್ಜಿದಾರನ ನಮ್ರ ವಿನಂತಿ.

ಪೋ: ಮತ್ತೆ? ನಿನ್ನ ತಾಯಿ. ಅಕ್ಕ. ಅಜ್ಜಿ...?

ವಿ: ನನಗೊತ್ತು...ಆದ್ರೂ ನಮ್ಮಪ್ಪನ್ನ ನಾವು ಅವನೂ ಒಬ್ಬ ಮನುಷ್ಯ ಅಂತ ನೋಡಬೇಕು......ನೀವು ಬರೆದುಕೋಬೇಕು ಈ ಮಾತ್ನ.

ಪೋ: ನಾನು ಏನು ಮಾಡಬೇಕು ಅಂತ ಹೇಳಬೇಕಾಗಿಲ್ಲ...

ವಿ. ಆದ್ರೂ ಮುಖ್ಯ ವಿಷಯ ಅಂತ ಹೇಳ್ತಾ ಇದೀನಿ...ಅವನೂ ಒಬ್ಬ ಮನುಷ್ಯ ಅಂತ...ದಯವಿಟ್ಟು ಬರಕೊಳ್ಳಿ...

ಪೋ: (ಎದ್ದು ರಂಗದ ಮೇಲೆ ಸುತ್ತಾಡುತ್ತಾ) ಅದು ಹೇಗೆ ಸಾಧ್ಯ, ಅಂತೀನಿ?

ವಿ: ಪ್ಲೀಸ್......

ಪೋ: ಇಲ್ಲಿ ನೋಡಪ್ಪ. ನಾನು ಅನಾವಶ್ಯಕವಾಗಿ ನಿನಗೆ ತೊಂದರೆ ಕೊಡೋಕೆ ಇಷ್ಟಪಡೋದಿಲ್ಲ...ನಿಮ್ಮ ಮನೆಯವರು ಇದುವರೆಗೆ ನಮಗೆ ತುಂಬಾ ಸಹಕಾರ ನೀಡಿದಾರೆ. ನೀನೂ ಕೂಡ ಅವರ ಹಾಗೆ ಮಾಡಿ ನಿಮ್ಮ ಮನೆತನಕ್ಕೆ ಒಳ್ಳೆ ಹೆಸರು ತರಬೇಕೊಂತ ನನ್ನ ಅಪೇಕ್ಷೆ.

ವಿ: (ಅಳುತ್ತಾನೆ) ಹಾಗಾದ್ರೆ ನೀವು ಬರೆದು ಕೊಳ್ಳೋದಿಲ್ಲ? ನಿಮಗೆ ನನ್ನ ಭಾಷೆ ಅರ್ಥವಾಗೋದಿಲ್ಲ?

(ಪೋಲೀಸ್ ಅಧಿಕಾರಿ ಕಪಾಟಿನಲ್ಲಿದ್ದ ಒಂದು ದಪ್ಪ ಪುಸ್ತಕವನ್ನು ತೆಗೆದು ಹಾಳೆಗಳನ್ನು ತಿರುವಿ ಮಧ್ಯ ಭಾಗದಲ್ಲಿ ಹಾಳೆಯ ಮೇಲೆ ಬೆರಳನ್ನೋಡಿಸುತ್ತಾ ಓದುತ್ತಾನೆ.)

ಪೋ: ..."ಯಾರಿಗೇ ಆಗಲಿ ಇದರಿಂದ ತಪ್ಪಿಸಿಕೊಳ್ಳುವ ಹಕ್ಕಿಲ್ಲ. ಹಾಗೇನಾದರೂ

ಮಾಡಲು ಪ್ರಯತ್ನಪಟ್ಟಲ್ಲಿ ಅಥವಾ ಮಾಡಿದಲ್ಲಿ ಅದು ಅತ್ಯಂತ ಹೇಯವಾದ ಅಪರಾಧವಾಗುತ್ತದೆ. ಸರ್ವೇಜನಾಃ ಸುಖಿನೋಭವಂತು ಎಂಬ ಧ್ಯೇಯ ವಾಕ್ಯವನ್ನು ಯಾವುದೇ ಸಂದರ್ಭದಲ್ಲೂ ಎತ್ತಿ ಹಿಡಿಯಬೇಕಾದುದು ಪ್ರತಿಯೊಬ್ಬರ ಕರ್ತವ್ಯವಾಗಿದೆ. ವ್ಯಕ್ತಿ ತನ್ನ ಕರ್ತವ್ಯವನ್ನು ಅರಿತುಕೊಂಡು..."

(ವಿಶ್ವನಾಥನತ್ತ ತಿರುಗಿ ನೋಡುತ್ತಾ) ನೋಡಿದ್ರಾ?

ವಿ : ಆದ್ರೆ ನನ್ನ ಮಾತು ನಿಮಗೆ ಅರ್ಥವಾಗಿಲ್ಲ...

(**ಪೋಲೀಸ್ ಮತ್ತೊಂದು ಪುಸ್ತಕವನ್ನು ತೆಗೆದು ಓದುತ್ತಾನೆ.**)

ಪೋ : "ವಿಧೇಯತೆ ಮಾನವ ಬೆಳೆಸಿಕೊಂಡು ಉಳಿಸಿಕೊಂಡು ಬಂದಿರುವ ಒಂದು ಉತ್ಕೃಷ್ಟವಾದ ಮೌಲ್ಯ. ಒಂದು ರೀತಿಯಲ್ಲಿ ಈ ಮೌಲ್ಯ ತಾಯಿ ಮೌಲ್ಯ. ಉಳಿದ ಮೌಲ್ಯಗಳನ್ನು ಪಾಲಿಸಬೇಕಾದರೆ, ಅರ್ಥವತ್ತಾಗಿ ಪೋಷಿಸಬೇಕಾದರೆ. ತಳಹದಿ ವಿಧೇಯತೆ. ನಾಯಿಗಳು ಈ ಪಾಠವನ್ನು ಮನುಷ್ಯನಿಂದ ಕಲಿತಿವೆಯೆಂಬುದು ಪ್ರಾಣಿಮನೋವಿಜ್ಞಾನದ ಸತ್ಯ, ಮನುಕುಲದ ಹೆಮ್ಮೆ. ಈ ಮೌಲ್ಯದ ಆಶ್ರಯವಿಲ್ಲದೆ ಸಮಾಜ, ಧರ್ಮ, ಸಂಸ್ಕೃತಿ, ನಾಗರಿಕತೆ, ಕಲೆ, ವಿಜ್ಞಾನ, ಇತಿಹಾಸ, ಭೂಗೋಳ, ವಿದ್ಯಾಭ್ಯಾಸ, ಕೃಷಿ, ನಗರನೈರ್ಮಲ್ಯ, ರಾಜಕೀಯ, ಸಮೂಹ ಸಂಸ್ಕೃತಿ, ಪುರಾಣ... ಯಾವುದೂ ಬದುಕಿಗೆ ಅರ್ಥ ನೀಡಲು ಅಸಮರ್ಥವಾಗಿ ಬದುಕು ಬರಡಾಗಿ..."

(**ಓದುತ್ತಿರುವ ಪುಸ್ತಕವನ್ನು ಮೇಜಿನ ಮೇಲೆ ಓರಣವಾಗಿಟ್ಟು ಕಪಾಟಿನಿಂದ ಮತ್ತೊಂದು ಪುಸ್ತಕವನ್ನು ಎತ್ತಿಕೊಂಡು ಪೇಜು ತಿರುವುತ್ತಿರುತ್ತಾನೆ.**)

ವಿ : "ವ್ಯಕ್ತಿಗಳು ನಡೆಯಲು ಸಾರ್ವಜನಿಕ ರಸ್ತೆಗಳನ್ನು ಮಾಡಲಾಗಿದೆ. ಜನ ದಿಕ್ಕೆಟ್ಟು ಭ್ರಾಂತರಾಗದೆ ಪರಂಪರೆ ಮುಂದುವರಿಯಬೇಕಾದರೆ ಈ ದಾರಿಗಳಲ್ಲಿ ನಡೆಯಬೇಕು. ದಾರಿ ತಪ್ಪದೆ ನಡೆದರೆ ಸರ್ವರಿಗೂ ನೆಮ್ಮದಿ ಕಟ್ಟಿಟ್ಟ ಬುತ್ತಿ. ಇದನ್ನು ಬಿಟ್ಟು ಮನಸ್ಸು ಬಂದಂತೆ ನಡೆದು ವ್ಯವಸ್ಥೆಯನ್ನು ಸಡಿಲುಗೊಳಿಸುವ ಪ್ರವೃತ್ತಿ ಸರ್ವಥಾ ಖಂಡನೀಯ. ನಮ್ಮ ಪೋಲೀಸ್ ಇಲಾಖೆಯ ದಕ್ಷ ಆಡಳಿತ ಇಂತಹ ಅನಾರೋಗ್ಯಕರವಾದ ಬೆಳವಣಿಗೆಯನ್ನು ನಿರ್ಮೂಲ ಮಾಡುವ ಗುರುತರವಾದ ಜವಾಬ್ದಾರಿಯನ್ನು ಹೊತ್ತಿದೆ. ಈ ಕಾರ್ಯದಲ್ಲಿ ಸತ್ಪ್ರಜೆಗಳು ಇಲಾಖೆಗೆ ಎಲ್ಲಾ ಬಗೆಯ ಸಹಕಾರ ಪ್ರೋತ್ಸಾಹಗಳನ್ನು ಕೊಡತಕ್ಕದ್ದು, ಹಾಗೆ ಮಾಡದಿದ್ದಲ್ಲಿ ಶಿಕ್ಷಾರ್ಹ ಅಪರಾಧವೆಂದು ಪರಿಗಣಿಸಿ ಸೂಕ್ತ ಕ್ರಮವನ್ನು ಸಂಬಂಧಪಟ್ಟವರ ಮೇಲೆ ಕೈಗೊಳ್ಳಲು ಇಲಾಖೆಗೆ ಎಲ್ಲಾ ಅಧಿಕಾರವೂ ಇದೆ. ಅದೂ ಅಲ್ಲದೆ......"

ಪೋ : (**ವಿಶ್ವನಾಥನನ್ನು ತದೇಕ ದೃಷ್ಟಿಯಿಂದ ನೋಡುತ್ತಾ, ಕೈಲಿದ್ದ ಪುಸ್ತಕವನ್ನು ಮುಚ್ಚಿ ಮೇಜಿನ ಮೇಲೆ ಒಗೆದು**) ಛೇಪ್ ಛೇಪ್... ನೀನು ನಮ್ಮ ಇಲಾಖೆಗೆ ಸೇರಿದರೆ ತುಂಬಾ ಪ್ರಯೋಜನವಾಗುತ್ತೆ.

ವಿ: ಯಾರಿಗೆ?

ಪೋ: ಇಷ್ಟೆಲ್ಲಾ ಬುದ್ಧಿವಂತನಾಗಿದ್ರೂ ನಿನ್ನ ಪಕ್ರತನ ಮಾತ್ರ ಸಹಿಸಿಕೊಳ್ಳೋದು ಕಷ್ಟ.

(**ರಾಜಿಯ ಪ್ರವೇಶ. ಪೋಲೀಸ್ ಮತ್ತು ವಿಶ್ವನಾಥ ಇಬ್ಬರೂ ಅವಳನ್ನು ನೋಡುತ್ತಾ ತಮ್ಮ ಮಾತುಗಳನ್ನು ನಿಲ್ಲಿಸುತ್ತಾರೆ. ರಾಜಿಯ ಉಬ್ಬಿದ ಹೊಟ್ಟೆ ಎದ್ದು ಕಾಣಿಸುತ್ತದೆ.**)

ರಾ: ಕ್ಷಮಿಸಬೇಕು, ಏನೋ ತಿಳೀದೆ ಮಾಡಿದ್ದು ಅಪರಾಧ...

ಪೋ: ನಾನು ನಿಮಗೆ ಮೊದಲೇ ಎಚ್ಚರಿಕೆ ಕೊಟ್ಟಿರಲಿಲ್ಲಾ? ಏನೂ ಮುಚ್ಚಿಟ್ಟುಕೊಳ್ಳಬೇಡೀಂತ?

ರಾ: ಹೌದು.....ಆದ್ರೆ.....ಆದ್ರೆ......ನಿಮಗೆ ಮೋಸ ಮಾಡಬೇಕೂಂತ ಹಾಗೆ ಮಾಡಲಿಲ್ಲ.

ಪೋ: ಮತ್ತೆ ಯಾಕೆ ಮೊದಲೇ ತಿಳಿಸಲಿಲ್ಲ?

ರಾ: ...... [illegible] ಹೋಗೋಣಾಂತ

೧೫೩ ನೇ ಪುಟ ನೋಡಿರಿ

ಕರ್ನಾಟಕದ [illegible] ಆಟಿಕೆಗಳು

ಸಂತೋಷಕುಮಾರ ಗುಲ್ವಾಡಿ

ಕ್ರೀಡೆ ಮಾನವನ ಮೂಲಭೂತ ಹವ್ಯಾಸ. ಅವನ ಸೃಜನಾತ್ಮಕ ವಿಚಾರ, ಆಸೆ, ಭಯ, ಆನಂದ ಮೊದಲಾದ ಭಾವನೆಗಳ ಬಿಡುಗಡೆ. ಅನುಭವಗಳಿಗೆ ಸಹಜವಾದ ಒತ್ತು ಕೊಡುವ ಅಭಿವ್ಯಕ್ತಿ. ಅವನ ಭಾವಕ್ರಿಯೆಗೆ ಲಯ ಕೊಡುವ ಕಾಲಕ್ಷೇಪ. ಮನೋರಂಜನ, ತಾದಾತ್ಮ್ಯತೆ, ಶಿಕ್ಷಣಗಳಿಗೆ ಪೂರಕ. ಎಂದೇ ಆಟ ಎಂಬುದು ಸಾರ್ವಕಾಲಿಕ ಮತ್ತು ಸಾರ್ವದೇಶಿಕ ಸಾಧನ.

ಆಟವಾಡಲು ಮಾನವನು ರಚಿಸಿ, ರೂಪಿಸಿದ ವಸ್ತುಗಳು ಅಸಂಖ್ಯ. ಆದಿ ಮಾನವನಿಂದ ಅಣು-ಯುಗದ ಮಾನವನವರೆಗಿನ ಬೆಳವಣಿಗೆ, ಪ್ರಗತಿಗಳನ್ನು ಈ ಆಟಿಕೆಗಳಿಂದ ಗುರುತಿಸಬಹುದು. ನಮ್ಮ ವಿಚಾರ-ವಿಕಾಸ-ವಿಹಾರಗಳ ಹಂತಹಂತಗಳ ಅರಿವಿಕೆಯನ್ನು ತಿಳಿದುಕೊಳ್ಳಬಹುದು. ವಾಸ್ತವಿಕ ಜಗತ್ತಿನಿಂದ ಭ್ರಾಮಕ ಜಗತ್ತಿಗೆ ಸಾಗಿಸಿ ನಮ್ಮನ್ನೊಯ್ಯು. ಅಲ್ಲಿ ಹಗುರವಾಗಿ ಹಾರಿ ಕೆಲ ಕಾಲ ವಿಹರಿಸುವಂತೆ ಮಾಡುವ ಈ ಆಟಿಕೆಗಳದ್ದೇ ಒಂದು ಅದ್ಭುತ ಜಗತ್ತು. ಕನಸಿನ ಲೋಕಕ್ಕೆ ಆಕರ್ಷಣೆ. ಕಲ್ಪನೆಗಳನ್ನು ಗರಿಗೆದರಿಸುವ ಆಟಿಕೆಗಳು ಮಾನವನ ಸಂಸ್ಕಾರ, ಸಂಸ್ಕೃತಿಗಳಲ್ಲಿ ಮಹತ್ವದ ಪಾತ್ರಗಳನ್ನು ವಹಿಸುತ್ತ ಬಂದಿವೆ. ಬೆಳೆಯುವ ಮಕ್ಕಳಿಗೆ ಚಾಲನೆ ಕೊಟ್ಟು, ಅಲ್ಲಿ ಸುಂದರ ಜಗತ್ತೊಂದನ್ನು ಸೃಷ್ಟಿಸಿ, ಉಲ್ಲಾಸಗೊಳಿಸುವ ಈ ಸಾಧನಗಳು ಇತ್ತೀಚೆಗೆ ಮನಶ್ಶಾಸ್ತ್ರಜ್ಞರ ಗಮನವನ್ನು ಸೆಳೆದಿವೆ. ಅವುಗಳ ಮೂಲಕ ಶಿಕ್ಷಣ ಕೊಡುವ





ಮಕ್ಕಳ ಮನಸ್ಸನ್ನು ತಿದ್ದುವ ಹೊಸ ವಿಧಾನವೇ ಆವಿಷ್ಕಾರವಾಯಿತು. (ಮೊಂಟೆಸೋರಿ ಶಿಕ್ಷಣ ಕ್ರಮ) ಆಡುತ್ತ, ಹಾಡುತ್ತ ತನ್ನತನದ ಅರಿವಿಲ್ಲದ ಕಲಿಯುವ ಈ ವಿಧಾನ [illegible] ಭಾರತದಲ್ಲಿ ಪ್ರಾಚೀನ ಕಾಲದಲ್ಲೂ ಬಳಕೆಯಲ್ಲಿತ್ತು.

ಆಟದ ವಸ್ತುಗಳ ಬಣ್ಣ, ಆಕಾರ, ಆಕರ್ಷಣೆ [illegible] ಬೀರುತ್ತವೆ. ಬಯಲಿಗೆ [illegible] ಮಗುವೊಂದು ತನ್ನ ಗೊಂಬೆಗೆ [illegible] ಮುಗ್ಧ ಸುಖಕರ ದೃಶ್ಯ ಇನ್ನೊಂದಿರಲಾರದು. [illegible] ಆಟಿಕೆಗಳು [illegible] ಸಾಯಸ, [illegible] ಗಳು ಪೂರಕವಾಗುತ್ತವೆ. ಮಗುವಿನ [illegible] ಪ್ರತಿಕ್ರಿಯೆ, ಗುಣಗಳನ್ನು ತಿಳಿದುಕೊಳ್ಳಲು [illegible] ವಸ್ತುಗಳು ಉತ್ತಮ ಮಾಧ್ಯಮವಾಗುತ್ತವೆ.

ಜಗತ್ತಿನ ಅನಂತ ಪ್ರಾಚೀನ ಸಂಸ್ಕೃತಿ ಕೇಂದ್ರಗಳಲ್ಲೂ ಅಲ್ಲಿಯ ಜನರ ಜೀವನದ ಮೇಲೆ ಬೆಳಕು ಬೀರಲು ಸಹಾಯಕವಾಗುವಂತೆ ದೊರೆತ ವಸ್ತುಗಳಲ್ಲಿ ಆಟಿಕೆಗಳೂ ಮುಖ್ಯವಾಗಿವೆ. ಕಲ್ಲು, ಮಣ್ಣು, [illegible] ಬೆಲೆ ಬಾಳುವ ಮುತ್ತು, ರತ್ನಗಳಿಂದ ತಯಾರಿಸಿದ ಆಟದ ಸಾಮಾನುಗಳು ಹೊಸ ಪ್ರಪಂಚವನ್ನೇ ತೆರೆದು ತೋರಿಸಿವೆ. ಮಾನವನ ಆಕೃತಿಗಳಲ್ಲದೆ [illegible] ಆಗಿನ ಜನಜೀವನದ ಪ್ರತಿಬಿಂಬಗಳಾಗಿ [illegible].

ಭಾರತೀಯ ಸಾಹಿತ್ಯದಲ್ಲಿ ಆಟದ ವಸ್ತುಗಳ ಉಲ್ಲೇಖ ಋಗ್ವೇದ ಕಾಲದಿಂದಲೂ ಉಪಲಬ್ಧವಿದೆ. [illegible] ಗೊಂಬೆಗಳನ್ನು ಪ್ರತೀಕಗಳನ್ನಾಗಿ ಉಪಯೋಗಿಸುತ್ತಿದ್ದರೆನ್ನುವ ಪ್ರಸ್ತಾಪವಿದೆ. ಮೊಹೆಂಜೊದಡೊ, ಹರಪ್ಪಗಳ ಅವಶೇಷಗಳಲ್ಲಿ ದೊರೆತ ಮಣ್ಣಿನ ಆಟಿಕೆಗಳು ಆಧುನಿಕರಿಗೆ [illegible] ಕಂಡಿವೆ. [illegible]









ಗಾಡಿ, ಹಂದಿ, ಎತ್ತು ಮೊದಲಾದುವಲ್ಲದೆ ೨೦ನೆಯ ಶತಮಾನದ್ದೆನ್ನಲಾದ 'ಯೋಯೋ' ಎಂಬ ಆಟದ ವಸ್ತುವೂ ಅಲ್ಲಿತ್ತು. ಇದರ ಪ್ರತಿಕೃತಿಯೊಂದು ಮುಂಬಯಿಯ ಪ್ರಿನ್ಸ್ ಆಫ್ ವೇಲ್ಸ್ ಮ್ಯೂಸಿಯಂನಲ್ಲಿದೆ. ಕೆಲವು ಆಟಿಕೆಗಳು ಆಗ ಆಟಕ್ಕಾಗಿಯೇ ಇದ್ದುವು. ಇನ್ನು ಕೆಲವು ಪೂಜೆ ಅಥವಾ ಇನ್ನಾವುದೋ ಧಾರ್ಮಿಕ ವಿಧಿಗಾಗಿ ಇಟ್ಟಿರುವುದು ಎಂದು ಕಲ್ಪಿಸಲಾಗಿದೆ.

ಆವೆಮಣ್ಣಿನಿಂದ ಆಟಿಕೆಗಳನ್ನು ತಯಾರಿಸಿ ಅವನ್ನು ಬೇಯಿಸುವ ಕ್ರಮ ಸುಮಾರು ೫೦೦೦ ವರ್ಷಗಳಷ್ಟಾದರೂ ಹಳೆಯದು. ಮೊಹೆಂಜೊದಾರೊ, ಹರಪ್ಪ, ಲೋಥಲ್‌ಗಳಲ್ಲಿ ಅಲ್ಲದೆ ಪಾಟ್ನಾ, ಮಥುರಾ, ಕೌಶಾಂಬಿ ಮೊದಲಾದ ಪ್ರದೇಶಗಳಲ್ಲೂ ವಿವಿಧ ಆಟಿಕೆಗಳು ದೊರೆತಿವೆ. ಇವನ್ನೆಲ್ಲ ಅಲ್ಲಲ್ಲಿ ವಸ್ತುಸಂಗ್ರಹಾಲಯದಲ್ಲಿ ಪ್ರದರ್ಶನಕ್ಕೆ ಇಡಲಾಗಿದೆ. ಮಣ್ಣಿನ ಜೊತೆ ಬಂಗಾರದ ಆಟಿಕೆಗಳೂ ಬಳಕೆಗೆ ಬಂದುವು. ಕುಶಾನರ ಕಾಲದ ಮಣ್ಣಿನ ಆಟಿಕೆಗಳು ಅಂದವಾಗಿದ್ದು ಅವುಗಳಿಗೆ ಮೂರು ಆಯಾಮಗಳಿದ್ದುವು. ಗುಪ್ತರ ಕಾಲದ ಆಟದ ವಸ್ತುಗಳು ತುಂಬ ಸುಂದರವಾಗಿ ಆಕರ್ಷಕವಾಗಿದ್ದುವು. ತುಸು ನೀಳವಾಗಿರುವ ಈ ಆಟದ ವಸ್ತುಗಳಲ್ಲಿ ಸ್ತ್ರೀವಿಗ್ರಹ ಹಾಗೂ ಪ್ರಾಣಿಗಳ ಶಿರವಿನ್ಯಾಸಕ್ಕೆ ಪ್ರಾಶಸ್ತ್ಯ. ಕುತ್ತಿಗೆಯ ಬಳಿ ತೂತು ಕೊರೆದು ನೇತಾಡಿಸಲು ಇಲ್ಲವೆ ಎಳೆದೊಯ್ಯಲು ವ್ಯವಸ್ಥೆ ಮಾಡಲಾಗುತ್ತಿತ್ತು.

ಮಧ್ಯಯುಗಗಳಲ್ಲಿ ಮರದ ದೊಂಬೆ ಆಟಿಕೆಗಳನ್ನು ಮಾಡುವುದು ಇನ್ನೊಂದು ಹಂತದ ಬೆಳವಣಿಗೆ. ಇದು ಬಹುಶಃ ಇಸ್ಲಾಂನಿಂದ ಮತ್ತು ಹಾಕ್ಕಿಕೆ ಆರಂಭವಾದದ್ದು. ಕೌಶಾಂಬಿಯಲ್ಲಿ ಮರದ ದೊಂಬೆ ಮಾಡಿದ ಸುಂದರ ಚಿತ್ರಗಳಿರುವ ಕೆಲವು ಮಾದರಿಗಳು ದೊರೆತಿವೆ.

ಭಾರತೀಯ ಆಟಿಕೆಗಳ ವೈಶಿಷ್ಟ್ಯ ಅವುಗಳ ಮಾಟ ಆಕರ್ಷಣೆ. ಇದಕ್ಕೆ ನಿದರ್ಶನವೆಂದರೆ ಆಟ ಪಾಡುವ ಉಲ್ಲೇಖ ಕಾಳಿದಾಸನ 'ಅಭಿಜ್ಞಾನ ಶಾಕುಂತಲ'ದಲ್ಲಿದೆ. 'ಕುಮಾರಸಂಭವ'ದಲ್ಲಿ ಚಿಕ್ಕ ಪಾರ್ವತಿಯು ಗಂಗೆಯ ತಟದಲ್ಲಿ ತನ್ನ ಗೆ





ಯರೊಂದಿಗೆ ಆಟಿಕೆಗಳೊಂದಿಗೆ ಆಡಿದ ಚಿತ್ರ ಹೀಗಿದೆ–

ಮಂದಾಕಿನೀ ಸೈಕತವೇದಿಕಾಭಿಃ
ಸಾ ಕಂದುಕೈಃ ಕೃತ್ರಿಮಪುತ್ರಕೈಶ್ಚ ।
ರೇಮೇ ಮುಹುರ್ಮಧ್ಯಗತಾ ಸಖೀನಾಂ
ಕ್ರೀಡಾರಸಂ ನಿರ್ವಿಶತೀವ ಬಾಲ್ಯೇ!

(ಮಂದಾಕಿನಿಯ ತೀರದಲ್ಲಿ ಪಾರ್ವತಿಯು ಬಾಲಸುಲಭ ಕ್ರೀಡೆಯ ಸವಿಯುತ್ತಾ ಮೈಮರೆಯುತ್ತ, ಚೆಂಡು, ಗೊಂಬೆ ಮೊದಲಾದ ಆಟವಸ್ತುಗಳಿಂದ ತನ್ನ ಸಖಿಯರೊಂದಿಗೆ ಆಟ ವಾಡುತ್ತಿದ್ದಳು.)

ಬಾಣಭಟ್ಟನ 'ಕಾದಂಬರಿ'ಯಲ್ಲಿ ಜೋಡಿ ಚಕ್ರವಾಕ ಹಾಗೂ ಇತರ ಅನೇಕ ಗೊಂಬೆಗಳಿ ರುವ ವಿವರಣೆಯಿದೆ. 'ಕಥಾಸರಿತ್ಸಾಗರ'ದಲ್ಲಿ ಹಲವು ಆಟಗಳ ವರ್ಣನೆಯಿದೆ. ಅದರಲ್ಲಿ ಮರದ ಹಾರುವ ಆಟದ ವಸ್ತುಗಳ ಉಲ್ಲೇಖವೂ ಇದೆ. ಕೆಲವು ಆಟಿಕೆಗಳು ಒತ್ತಿದೊಡನೆ ಹಾರುತ್ತವೆ, ಜಿಗಿದು ನರ್ತಿಸುತ್ತವೆ, ಹಾಡುತ್ತವೆ.

ಪ್ರತಿಯೊಂದನ್ನೂ ಧಾರ್ಮಿಕ ರೂಪದಲ್ಲಿ ಸಮನ್ವಯಗೊಳಿಸುವ ಭಾರತೀಯ ಪರಂಪರೆ ಯಲ್ಲಿ ಆಟಿಕೆಗಳೂ ಸೇರಿವೆ. ಅನೇಕ ಧಾರ್ಮಿಕ ಕಾರ್ಯಗಳಲ್ಲಿ ಆಟಿಕೆಗಳು ಅವಿಭಾಜ್ಯ ಅಂಗವಾಗಿ ಬಿಟ್ಟಿವೆ. ಉದಾಹರಣೆಗೆ ಕರ್ನಾಟಕ, ತಮಿಳು ನಾಡು, ಆಂಧ್ರಗಳಲ್ಲಿ ದಸರೆಯ ಗೊಂಬೆಗಳನ್ನು ಜೋಡಿಸುವ ಸಂಪ್ರದಾಯ. ಉತ್ತರ ಪ್ರದೇಶದಲ್ಲಿ ನಾಗಪಂಚಮಿಯ ದಿನ ಗೊಂಬೆಗಳ ಮೆರವಣಿಗೆ ಮಾಡುವ ಪದ್ಧತಿಯಿದೆ. ಇವನ್ನು ಗೊಂಬೆಗಳ ಜಾತ್ರೆ ಅನ್ನುತ್ತಾರೆ. ಕೊನೆಯ ದಿನ ಈ ಗೊಂಬೆ ಗಳನ್ನು ವಿಸರ್ಜಿಸಲಾಗುತ್ತದೆ. ಗುಜರಾತ್ ಮತ್ತು ಬಂಗಾಳಗಳಲ್ಲಿ ಮಕ್ಕಳು ತಮ್ಮ ಆಟದ ಸಾಮಾನು ಗಳನ್ನು ಶೃಂಗಾರಾತ್ಮಕವಾಗಿ ಜೋಡಿಸಿ ಪ್ರದರ್ಶಿಸುವ ಬಯಲು ದರ್ಶಿನೆ. ಮಹಾರಾಷ್ಟ್ರ, ಉತ್ತರ ಪ್ರದೇಶ, ಪಂಜಾಬ, ರಾಜಸ್ಥಾನಗಳಲ್ಲಿ ನಡೆ ಯುವ ಗೊಂಬೆಗಳ ವಿವಾಹ ಒಂದು ಅದ್ಭುತ ರಸ ಪ್ರಸಂಗ. ಲಗ್ನಕಾಲದಲ್ಲಿ ಹಲವು ಬಗೆಯ ಆಟಿಕೆ ಗಳನ್ನು ವಧುವಿಗೆ ಉಡುಗೊರೆ ಕೊಡುವ ಸಂಪ್ರ ದಾಯವೂ ಕೆಲವೆಡೆ ಇದೆ.

ಅಲ್ಲದೆ ಭಾರತೀಯ ಆಟಿಕೆಗಳು ಸ್ಥಳೀಯ ಮಣ್ಣಿನ ಜನಜೀವನದ ಪ್ರತೀಕಗಳು. ಆಯಾ ಪ್ರದೇಶದ ಪ್ರಕೃತಿ, ಅದರಲ್ಲಿ ವ್ಯಕ್ತಿ. ಅಂದರೆ ಅಲ್ಲಿ ಜನ, ವೃತ್ತಿಗಳೆಲ್ಲಾ ಆಟಿಕೆಯಲ್ಲಿ ಕಾಣಸಿಗುತ್ತವೆ. ಅನೇಕ ಆಟಿಕೆಗಳಿಗೆ ಆಯಾ ಪ್ರದೇಶದ ಹೆಸರು.



ಪ್ರಭಾವಗಳಿವೆ. ಕೆಲವು ಐತಿಹಾಸಿಕ ಪ್ರಾಚೀನತೆ ಯನ್ನು ಸೂಚಿಸುತ್ತವೆ. ಉದಾಹರಣೆಗೆ ಬಂಗಾ ಳದ ಮರದ ಆಟಿಕೆಗಳನ್ನು [illegible]. ರಾಜಸ್ಥಾನದವುಗಳನ್ನು [illegible] ಮಹಾರಾಷ್ಟ್ರದವುಗಳನ್ನು [illegible] [illegible]. [illegible] ಈಸ್ಟ್ ಇಂಡಿಯಾ ಕಂಪನಿಯ [illegible] ಪಾಶ್ಚಾತ್ಯರ? [illegible]. [illegible] ಆಟಿಕೆಗಳು ದೊರೆಯುತ್ತವೆ. ಮೈಸೂರಿನ? [illegible] ಆಟಿಕೆಗಳು [illegible] ಅಶೋಕನ ಸ್ಮೃತಿ ಸೂಚಕ. ಮಥುರೆಯ ಆಟಿಕೆ ಗಳಲ್ಲಿ ಕೃಷ್ಣ, ಗೋಪಿಯರೇ ಮುಖ್ಯ. ಅಲ್ಲಿಯ ಪ್ರಾಣಿ, ಪಕ್ಷಿ, ಹಣ್ಣುಹಂಪಲುಗಳು ಅದ್ವಿತೀಯ. ರಾಜಸ್ಥಾನದಲ್ಲಿ ಮೀರಾಬಾಯಿಯ ಮತ್ತು [illegible] ಗೊಂಬೆ.

ನಮ್ಮ ದೇವದೇವತೆಗಳೂ ಆಟದ ಸಾಮಾನು ಗಳ ಮೇಲೆ ತಮ್ಮ ಪ್ರಭಾವ ಬೀರಿವೆ. ಕೃಷ್ಣ, ರಾಮ, ಶಿವ, ಹನುಮಂತ ಇವರ ಪ್ರಭಾವ [illegible]. [illegible] ಆಟದ ಸಾಮಾನು ತಯಾರಿಯ ಹಲವು ಕೇಂದ್ರಗಳು ಗುಡಿಕೈ ಗಾರಿಕೆಯ ಕ್ಷೇತ್ರಗಳು. ಲಕ್ನೋ, ಮಥುರಾ, ಆಗ್ರಾ, ಕಲ್ಕತ್ತಾ, ಕೃಷ್ಣನಗರ, [illegible], ಹೈದರಾಬಾದ್, ಚೆನ್ನಪಟ್ಣ, ಒರಿಸ್ಸಾ, ಕೊಂಡ ಪಲ್ಲಿ, [illegible], ಸಾವಂತವಾಡಿ ಮೊದಲಾಗಿ [illegible] ಭಾರತೀಯ ಆಟಿ ಕೆಗಳು ನೂರಾರು ವರ್ಷಗಳಿಂದ ಕುಟುಂಬವಾಗಿ ತಯಾರಿಸಲ್ಪಡುತ್ತಿವೆ.

ಒಂದು ಅಂದಾಜಿನಂತೆ ಸುಮಾರು ೨೫ ಲಕ್ಷ ಕುಟುಂಬಗಳಿಗೆ ಗುಡಿಕೈಗಾರಿಕೆಯ ಆಟದ ಸಾಮಾನುಗಳು ಜೀವನಕ್ಕೆ ದಾರಿ ಮಾಡಿಕೊಟ್ಟಿವೆ. ಆದರೆ ಯಂತ್ರಯುಗ, ಮುಖ್ಯವಾಗಿ ಅಗ್ಗದ ಪ್ಲಾಸ್ಟಿಕ್, ಭಾರತೀಯ ಆಟಿಕೆಗಳ ಮೂಲವನ್ನೇ ಕಿವುಚಿಬಿಟ್ಟಿವೆ. ಈ ಕಲಾತ್ಮಕ ಗುಡಿಕೈಗಾರಿಕೆ ಅದರ ಜಾನಪದ ಸೌಂದರ್ಯ ಮತ್ತು ನಿರ್ಮಾಣ ಮಾಡುತ್ತಿರುವ ಕುಟುಂಬಗಳೇ ನಾಮಾವಶೇಷ ವಾಗುತ್ತಿವೆ.

ಭಾರತದ ಮಕ್ಕಳಿಗೆ ಒಳ್ಳೆಯ ಆಟದ ಸಾಮಾನು ಗಳ ಕೊರತೆಯಿದೆ. ದೊರೆಯುವ ಆಟಿಕೆಗಳ ಗುಣಮಟ್ಟ ಚೆನ್ನಾಗಿಲ್ಲ. ಬಾಳ್ವಿಕೆ ಬರುವುದಿಲ್ಲ. ಇದಕ್ಕೆ ಯಾರು ಕಾರಣ? ಇನ್ನೂ ವಿದೇಶೀ ಆಟಿಕೆ ಗಳ ಮೋಹಕ್ಕೊಳಗಾಗಿ, ಮಾನಸಿಕ ಗುಲಾಮ ರಾಗಿರುವ ತಂದೆತಾಯಿಗಳು ಭಾರತೀಯ ಆಟಿಕೆಗಳ ಸರಳ ಸೌಂದರ್ಯ, ಅದರ ಹಿನ್ನೆಲೆಯಾಗಿರುವ ಗ್ರಾಮೀಣ ಅರ್ಥವ್ಯವಸ್ಥೆಗಳನ್ನು ತಿಳಿದುಕೊಳ್ಳಲು ಪ್ರಯತ್ನಿಸಿಲ್ಲ. ಒಟ್ಟಿನಲ್ಲಿ ನಮ್ಮ ಮಕ್ಕಳಿಗೆ ಸರಿಯಾದ ಶಿಕ್ಷಣವಿಲ್ಲ ಮಾತ್ರವಲ್ಲ, ಆಟದ ಸಾಮಾನುಗಳೊಂದಿಗೆ ಅವರು ಜೀವನವನ್ನು ಅನುಭವಿಸುವ ಬಾಲ್ಯದ ಖುಷಿ, ಮನೋರಂಜನೆ, ಆನಂದಗಳಿಂದಲೂ ಅವರನ್ನು ವಂಚಿತರನ್ನಾಗಿ ಮಾಡುತ್ತಿದ್ದೇವೆ. ✡

ರೇಖಾಚಿತ್ರಗಳು : ಸಂಸ್ಕೃತಿಕೋಶ

ಪುಟ: ೪೧ ಸೌರಾಷ್ಟ್ರದ ಅಂಬಾರಿ.

ಪುಟ: ೪೨ (ಮೇಲೆ) ಬಂಗಾಲದ ಜಗನ್ನಾಥ, (ಕೆಳಗೆ) ರಾಜಸ್ಥಾನದ ಡೋಲಾರಾಣಿ ಕುಣಿಯುವ ಗೊಂಬೆ.

ಪುಟ: ೪೩ (ಎಡಕ್ಕೆ) ಮಹಾರಾಷ್ಟ್ರದ ತಕೀ, (ಬಲಕ್ಕೆ ಮೇಲೆ) ವಿಶಾಖಾಪಟ್ಟಣದ ಕುದುರೆ ಸವಾರ, (ಎಡಕ್ಕೆ ಕೆಳಗೆ) ವಿಜಯವಾಡದ ಗಾರುಡಿಗ.

ಪುಟ: ೪೪ ಬನಾರಸದ ದನ-ಕರು.

ಪುಟ: ೪೫ (ಮೇಲೆ) ಮೊಹೆಂಜೋದಾರೋವಿನ ಮಣ್ಣಿನ ಹಂದಿ, (ಕೆಳಗೆ) ನಾಗಾರ್ಜುನ ಕೊಂಡದ ಆಟಿಕೆ.



ಎಂದಿನಂತೆ ಅಂದು ಮಧ್ಯಾಹ್ನ ನಾನು ಮನೆಗೆ ಬರುತ್ತಿದ್ದಂತೆಯೆ ನನ್ನ ಆರು ವರ್ಷದ ಮಗಳು ಕಿರಣಳ ಸಂಭ್ರಮ ಹೇಳತೀರದು. ತಾನೊಂದು ದೊಡ್ಡ ಕಾರ್ಯಮಾಡಿದ ಹೆಮ್ಮೆ ಅವಳ ಮುಖದಲ್ಲಿ ಮಿನುಗುತ್ತಿತ್ತು.

ಕೆಲವು ದಿನಗಳಿಂದ ನಮ್ಮ ಮನೆಯ ಮಾಡಿನೊಳಗೆ ಒಂದು ಅಳಿಲು ಸೇರಿಕೊಂಡು ಗದ್ದಲವಮಾಡುತ್ತಿತ್ತು. ಅಂದು ಅದು ತನ್ನ ಮರಿಯನ್ನೂ ಕರೆತಂದಿತ್ತು. ಮಾಡದ ಜಂತಿಯ ಮೇಲೆ ಓಡಾಡುವಾಗ ಆ ಮರಿ ಆಯ ತಪ್ಪಿ ರಪ್ಪನೆ ಕೆಳಗೆ ಬಿತ್ತು. ನೋವಾಗಿ ವಕ ವಕ ಬಾಯಿ ಬಿಡಹತ್ತಿತ್ತು. ನನ್ನ ಮಗಳ ಆಟ ನಿಂತಿತು. ಅದರ ಹತ್ತಿರ ಕುಳಿತು ನೋಡತೊಡಗಿದಳು. ತಾಯಿ ಅಳಿಲು ಮರಿಯ ಮೇಲಿನ ಪ್ರೀತಿಯಿಂದಲೂ, ಹೆದರಿಕೆಯಿಂದಲೂ ಕೆಳಗಿಳಿಯದೇ ಅಲ್ಲೇ ಅತ್ತಿಂದಿತ್ತ ಓಡಾಡುತ್ತಾ ಚಿಂವ್ ಚಿಂವ್ ಎಂದು ಚೀರತೊಡಗಿತು. ನನ್ನ ಮಗಳು ತನ್ನ ತಾಯಿಯ ಸೂಚನೆಯಂತೆ ಒಂದು ರಟ್ಟಿನ ಮೇಲೆ ಆ ಮರಿಯನ್ನು ಜಾರಿಸಿಕೊಂಡು ಮನೆಯ ಮುಂದಿರುವ ಮಾವಿನ ಮರದ ಕೆಳಗೆ ಬಿಟ್ಟುಬಂದು ಬಾಗಿಲ ಮರೆಯಲ್ಲಿ ನಿಂತು ನೋಡತೊಡಗಿದಳು. ಒಂದೆರಡು ಕ್ಷಣದಲ್ಲೇ ಕೆಳಗಿಳಿದು ಬಂದ ತಾಯಿ ಅಳಿಲು ಆ ಮರಿಯನ್ನು ತನ್ನ ಬಾಯಲ್ಲಿ ಮೆಲುವಾಗಿ ಕಚ್ಚಿ ಎತ್ತಿಕೊಂಡು ಮರವೇರಿ ಗೂಡು ಸೇರಿತು. ಮರಿಯನ್ನು ತಾಯಿಯೊಂದಿಗೆ ಸೇರಿಸಿದ ಸಂತೃಪ್ತಿ, ಹೆಮ್ಮೆ ನನ್ನ ಮಗಳಲ್ಲಿ ಮೂಡಿತ್ತು. ಅದೇ ಅವಳಿಗೊಂದು ಮಹತ್ಕಾರ್ಯವಾಗಿತ್ತು!

ಮತ್ತೆ ಎಂಟು ದಿನ ಅಳಿಲಿನ ಸದ್ದಿರಲಿಲ್ಲ. ಮತ್ತೊಂದು ದಿನ ಮರಿಯೊಡನೆ ಅಳಿಲಿನ ಗದ್ದಲ ಪುನಃ ಪ್ರಾರಂಭವಾಯಿತು. ಅಂದೂ ಮರಿ ಕೆಳಗೆ ಬಿತ್ತು. ಮತ್ತೆ ನನ್ನ ಮಗಳ ಕಾರ್ಯಭಾರ ನಡೆಯಿತು. ಹಿಂದಿನಂತೆಯೇ ಆ ಅಳಿಲು ತನ್ನ ಮರಿಯನ್ನೆತ್ತಿಕೊಂಡು ಬಾಲ ಕುಣಿಸುತ್ತಾ ಒಯ್ದಿತು. ಹೀಗೆ ಮೂರು ನಾಲ್ಕು ಸಾರಿ ನಡೆಯಿತು. ಇನ್ನೊಂದು ದಿನ ನಾನು ಮನೆಗೆ ಬರುವ ಹೊತ್ತಿಗೆ ನನ್ನ ಮಗಳು ಹಾಲ್‌ನ ಬಾಗಿಲು ಹಾಕಿ ಕಾಯುತ್ತ ಕುಳಿತಿದ್ದಳು. ಅಂದೂ ಆ ಮರಿ ಕೆಳಗೆ ಬಿದ್ದಿತ್ತು. ತಾಯಿಯು ಅರಚುತ್ತಿತ್ತು. ತನ್ನ ಸಾಹಸವನ್ನು ಅಂದು ನನಗೆ ತೋರಿಸಬೇಕೆಂದು ನನ್ನ ಮಗಳು ಆ ಮರಿಯನ್ನು ಹೊರಗೆ ಸಾಗಿಸಿರಲಿಲ್ಲ. ಮರಿ ಈಗ ಚಿಂವ್ ಚಿಂವ್ ಎಂದು ಕೂಗುವಷ್ಟು ದೊಡ್ಡದಾಗಿತ್ತು. ಬಿದ್ದ ನೋವಿಗೆ ತಾಯಿಯ ದನಿಗೆ ಇದೂ ಮಾರ್ದನಿ ಕೊಡುತ್ತಿತ್ತು. ನಾನು ಬಂದೊಡನೆ ನನ್ನ ಮಗಳು ಕಾರ್ಯಪ್ರವೃತ್ತಳಾದಳು. ರಟ್ಟಿನ ಮೇಲೆ ಮರಿಯನ್ನು ಜಾರಿಸಿ ಎಚ್ಚರಿಕೆಯಿಂದ ಹೊರಗೊಯ್ದು ಮಾವಿನ ಮರದಡಿ ಬಿಟ್ಟು ಬಾಗಿಲ ಮರೆಯಲ್ಲಿ ನಿಂತು, ನನ್ನನ್ನೂ ನಿಲ್ಲಿಸಿ ಮುಂದಿನ ಚಮತ್ಕಾರವನ್ನು ನೋಡಲು ನನಗೆ ಸೂಚನೆ ಕೊಟ್ಟಳು. ತಾಯಿ ಅಳಿಲು ಕಿರುಚುತ್ತ ಗೋಡೆಯಿಂದ ಕೆಳಗಿಳಿದು ಬರುತ್ತಿದ್ದಂತೆ ಗಕ್ಕನೆ ನಿಂತು ಮತ್ತೂ ಜೋರಾಗಿ ಆಕ್ರಂದನ ಪ್ರಾರಂಭಿಸಿತು. ಇತ್ತ ಮರಿಯೂ ಅರಚುತ್ತಿತ್ತು. ನನ್ನ ಮಗಳ ಕುತೂಹಲ ತೀವ್ರವಾಯಿತು. ಇನ್ನೇನು ತಾಯಿ ಬರುತ್ತದೆ ಅದನ್ನೆತ್ತಿಕೊಳ್ಳುತ್ತದೆ, ಮರವೇರುತ್ತದೆ ಎಂಬ ನಿರೀಕ್ಷೆಯಲ್ಲಿ ನಾವು ತುದಿಗಾಲ ಮೇಲೆ ನಿಂತಿದ್ದೆವು. ಆದರೇನು ಎಲ್ಲೋ ಹೋಗಿದ್ದ ಪಕ್ಕದ ಮನೆ ಕರಿ ನಾಯಿ ನುಗ್ಗಿ ಬಂದು ಆ ಮರಿಯ ಗೋಣನ್ನು ತನ್ನ ಹಲ್ಲುಗಳಿಂದ

ಅಮುಕಿ ಹಿಡಿದೇಬಿಟ್ಟಿತು. ಈಗ ಕಾಯಿಗಿಂತಲೂ ಜೋರಾಗಿ ಕೇವಲ ಒಂದೇ ಕ್ಷಣ ಮರಿ ಆಕ್ರಂದಿಸಿತು. ನಂತರ ನೀರವ, ನಿಶ್ಚಲ. ಮರಿಯ ತಲೆ ಬಾಲಗಳು ಜೋತುಬಿದ್ದವು. ನಮ್ಮ ಕೂಗಿಗೆ ನಾಯಿಯು ಆ ಮರಿಯ ಶವವನ್ನು ಬಿಟ್ಟೋಡಿತು.

ಕಿರಣಳು, "ಅಪ್ಪಾ ಮರಿಯನ್ನು ಬಿಡಿಸು, ಬಿಡಿಸು," ಎಂದು ನನ್ನನ್ನು ಹಿಡಿದು ಜೋರಾಗಿ ಅಳತೊಡಗಿದಳು. ಇತ್ತ, ಮರಿಯ ಹತ್ತಿರ ಬರಲಂಜಿದ ಆ ತಾಯಿ ಪಾರಿವಿನ ಮರದ ಕೊಂಬೆಯ ತುದಿಯಲ್ಲಿ ಕುಳಿತು ಅದು ಸತ್ತದ್ದನ್ನು ಕಂಡು ಚೀರಾಟ ನಡೆಸಿಯೇ ಇತ್ತು. ಇಷ್ಟೆಲ್ಲ ಒಂದು ಕ್ಷಣದಲ್ಲಿ ನಡೆದುಹೋಗಿತ್ತು. ಆ ಮಧ್ಯಾಹ್ನ ನನ್ನ ಕಿರಣಳಿಗೆ ಊಟ ಮಾಡಿಸಲು ನಮ್ಮಿಂದ ಸಾಧ್ಯವಾಗಲೇ ಇಲ್ಲ.

–ಎಸ್. ನಾರಾಯಣಭಟ್

ನಗರದ ಬ್ಯಾಂಕೊಂದರಲ್ಲಿ ೩೦೦ ರೂಪಾಯಿಗಳ ಚೆಕ್ಕೊಂದನ್ನು ಎನ್‌ಕ್ಯಾಷ್ ಮಾಡಿಸಿ, ಮನೆಗೆ ಅರ್ಜೆಂಟಾಗಿ ಹೋಗಬೇಕಾಗಿದ್ದರಿಂದ, ಅವಸರದಿಂದ ಓಡುತ್ತ ಸಿಟಿ ಬಸ್ಸಿಗೆ ಬಂದು ಒಳಗೆ ಕುಳಿತುಕೊಂಡೆ. ನನ್ನ ಹಿಂದಿನಿಂದ, ಸುಮಾರು ೨೦-೨೫ ರ ಸುಂದರ ಸ್ತ್ರೀಯೊಬ್ಬಳು ಬಂದು ನನ್ನ ಪಕ್ಕದಲ್ಲಿಯೇ ಕುಳಿತುಕೊಂಡಳು. ಕೆಲವು ನಿಮಿಷ ಸುಮ್ಮನಿದ್ದು ನಂತರ ಯಾವ ಸಂಕೋಚವೂ ಇಲ್ಲದೆ ನನ್ನೊಡನೆ ಮಾತಿಗೆ ಪ್ರಾರಂಭಿಸಿದಳು. ಸುಸಂಸ್ಕೃತಳೆಂದು ಮಾತಿನಿಂದ ಗೊತ್ತಾಗುತ್ತಿತ್ತು. ಇದ್ದಕ್ಕಿದ್ದಂತೆ 'ಒಂದೇ ನಿಮಿಷ ಬಂದೆ' ಎನ್ನುತ್ತ ತನ್ನ ಹ್ಯಾಂಡ್ ಕರ್ಚೀಫ್‌ನ್ನು ಸೀಟಿನ ಮೇಲಿಟ್ಟು ಕೆಳಗಿಳಿದು ಹೋದಳು.

ಡ್ರೈವರ್ ಬಂದು ಮೋಟಾರ್ ಶುರು ಮಾಡಿದನು. ನನ್ನ ವಿನಂತಿಯ ಮೇರೆಗೆ ಇನ್ನೂ ಕೆಲ ಸಮಯ ಅವಳಿಗಾಗಿ ಕಾಯ್ದು, ನಂತರ ವಿಧಿಯಿಲ್ಲದೆ ಬಸ್ಸನ್ನು ಚಲಿಸಿದ ಕಂಡಕ್ಟರ್ ಎಲ್ಲರಿಂದ ಹಣ ತೆಗೆದುಕೊಂಡ. ಟಿಕೆಟ್ ಕೊಡುತ್ತಾ ನನ್ನ ಹತ್ತಿರ ಬಂದಾಗ, ಪ್ಯಾಂಟ್ ಜೇಬಿಗೆ ಕೈ ಹಾಕಿದರೆ ನನ್ನ ಮನಿಪರ್ಸ್ ಮಾಯವಾಗಿತ್ತು. ಇದು ಆ ಯುವತಿಯದೇ ಆಟವೆಂದು ಕೂಡಲೇ ಹೊಳೆಯಿತು. ವಿಷಯ ತಿಳಿದು ಸಹಪ್ರಯಾಣಿಕರಲ್ಲಿ ಕೆಲವರು ವಿಷಾದ ವ್ಯಕ್ತಪಡಿಸಿದರೆ ಇನ್ನು ಕೆಲವರು ನಾನು ಅಪರಿಚಿತ ಸ್ತ್ರೀಯೊಂದಿಗೆ ಅಷ್ಟು ಸಲಗೆಯಿಂದ ವ್ಯವಹರಿಸಿದ್ದಕ್ಕೆ ನನ್ನನ್ನೇ ಮೂದಲಿಸಿದರು. ಅಂತೂ ಹಿಪ್ ಪಾಕೆಟ್‌ನಲ್ಲಿದ್ದ ಚಿಲ್ಲರೆ ಕೊಟ್ಟು ಟಿಕೆಟ್ ಕೊಂಡುಕೊಂಡೆ.

ಸ್ಟಾಪ್ ಬಂದ ಕೂಡಲೇ ಬಸ್ಸಿನಿಂದಿಳಿದು, ಮಳೆ ಜಿನುಗುತ್ತಿದ್ದರಿಂದ, ಛತ್ರಿ ಬಿಡಿಸಿದೆ. ನನ್ನ ಮನಿಪರ್ಸ್ ಛತ್ರಿ ಒಳಗೆ ಸುರಕ್ಷಿತವಾಗಿ ಸಿಕ್ಕಿ ಹಾಕಿಕೊಂಡಿತ್ತು. ಅನ್ಯಾಯವಾಗಿ ಒಬ್ಬ ಯುವತಿಯ ಮೇಲೆ ಸಂಶಯಪಟ್ಟದ್ದಕ್ಕೆ ಮತ್ತು ನನ್ನ ಸಹಪ್ರಯಾಣಿಕರು ಅವಳ ಬಗ್ಗೆ ಅನುಚಿತವಾಗಿ ಮಾತಾಡಿದ್ದನ್ನು ನೆನೆಸಿಕೊಂಡು ನನ್ನ ಮನಸ್ಸು ಮಮ್ಮಲ ಮರುಗಿತು. ಪಾಪ, ಅವಳೇ ತನ್ನ ಹ್ಯಾಂಡ್ ಕರ್ಚೀಫ್‌ನ್ನು ಬಿಟ್ಟು ಹೋಗಿದ್ದಳು!

–ಸೀತಾರಾಮ ರಾ. ಭಟ್ಟ

ಈ ಶತಮಾನದ ಆದಿಭಾಗದಲ್ಲಿ ಪ್ರಕಟವಾದ ಕನ್ನಡ ಗದ್ಯದ ಮಾದರಿಯಿದು. ೬೬ ವರ್ಷಗಳ ಹಿಂದೆ ೧೯೧೨ ರಲ್ಲಿ ಕನ್ನಡ 'ನುಡಿಗನ್ನಡಿ'ಕಾರ ದಿ. ವಾ. ಪ್ರ. ಪೂಜಾರರು ಬರೆದ ಲೇಖನ 'ವಾಗ್ಭೂಷಣ'ದಲ್ಲಿ ಪ್ರಕಟವಾಯಿತು. ಅವರ ಸಮರ್ಥ ಶೈಲಿಯನ್ನಲ್ಲದೆ ಪಾಂಡಿತ್ಯದ ಪ್ರಗಲ್ಭತೆಯನ್ನೂ ಇಲ್ಲಿ ಕಾಣಬಹುದು,

ಪೌರ್ವಾತ್ಯರ ಪ್ರಾಚೀನ ಯಂತ್ರವಿದ್ಯೆಯು

ವಾ. ಪ್ರ ಪೂಜಾರ

ಆಧುನಿಕ ಯಂತ್ರಶೋಧದಿಂದ ಜಗತ್ತಿನಲ್ಲಿ ಯುಗವೇ ಬದಲಿಸಿರುವದು. ಪಾಶ್ಚಾತ್ಯ ಪಂಡಿತರು ಮಾಡಿದ ಯಂತ್ರಶೋಧಗಳನ್ನು ನೋಡಲು ವಿಶ್ವಾಮಿತ್ರ ಮಹರ್ಷಿಯು ಹಿಂದೆ ಮಾಡಿದ ನೂತನಸೃಷ್ಟಿಯ ಕಥೆಯು ಸುಳ್ಳಿರಬಹುದೆಂದು ನಮ್ಮ ಮನಸ್ಸಿನಲ್ಲಿ ಎಂದೂ ಬರುವದಿಲ್ಲ. ಪಾಶ್ಚಾತ್ಯರ ಯಂತ್ರಕೌಶಲ್ಯದ ಪ್ರಕಾಶವು ಜಗತ್ತಿನಲ್ಲಿ ಹಬ್ಬಿದ ಹಾಗೆಲ್ಲ ಭರತಖಂಡದ ಕಳೆದುಹೋದ ಜ್ಞಾನರತ್ನಗಳು ಬೈಲಿಗೆ ಬಂದು ಮಿನುಗುತ್ತಿರುವವು. ಭರತಖಂಡವು ಅಧೋಗತಿಯ ಆಳವಾದ ಕೂಪದಲ್ಲಿ ಬೀಳಲು ಅದರಲ್ಲಿಯ ಜ್ಞಾನರತ್ನಗಳು ಅಜ್ಞಾನದ ದಟ್ಟವಾದ ಕತ್ತಲಲ್ಲಿ ಕಾಣಿಸದಂತಾದವು. ಪಾಶ್ಚಾತ್ಯರ ಜ್ಞಾನಪ್ರಭೆಯಿಂದ ಆ ಕತ್ತಲೆಯು ಅವರವು ದೂರವಾದಂತಾದ್ದರಿಂದ ಆ ಜ್ಞಾನರತ್ನಗಳು ಈಗೀಗ ಸಿಕ್ಕಹತ್ತಿವೆ. ಅವುಗಳ ಮಾಹಾತ್ಮ್ಯವು ಯಾವ ಪ್ರಕಾರವಿರುವದೆಂಬುದನ್ನು ಇಲ್ಲಿ ಸ್ವಲ್ಪ ಆಲೋಚಿಸುವ.

ಮೇಲೆ ನಾವು ವಿಶ್ವಾಮಿತ್ರ ಮಹರ್ಷಿಯ ನೂತನಸೃಷ್ಟಿಯ ಉಲ್ಲೇಖವನ್ನು ಮಾಡಿರುವೆವಷ್ಟೆ? ಅವನ ಸೃಷ್ಟಿಯು ಈಶ್ವರಸೃಷ್ಟಿಯಿಂದ ಬೇರೆಯಾಗಿ ಕಾಣದೆ ಅದರ ಒಂದು ಅಂಗವಾಗುವಷ್ಟು ಮಟ್ಟಿಗೆ ಸೃಷ್ಟಿನಿಯಮವನ್ನು ಅನುಸರಿಸಿತ್ತು. ವಿಶ್ವಾಮಿತ್ರನ ನೂತನ ಸೃಷ್ಟಿಯಂಥ ಸೃಷ್ಟಿಯನ್ನು ಮಾಡುವುದಕ್ಕೆ ಪಾಶ್ಚಾತ್ಯ ಯಂತ್ರಶಾಸ್ತ್ರಜ್ಞರಿಗೆ ಇನ್ನೂ ಅನೇಕ ಯುಗಗಳು ಹೋಗಬೇಕಾಗುವದು. ಅಂಥ ಮಹಾನುಭಾವನ ಸುದ್ದಿಯನ್ನು ಬಿಟ್ಟು ನಾವು ಈಗ ಸ್ವಲ್ಪ ಹೆಚ್ಚು ಕಡಿಮೆ ಈಗಿನ ಪಾಶ್ಚಾತ್ಯ ಯಂತ್ರಶಿಲ್ಪಿಗಳಷ್ಟು ಯಂತ್ರಶಾಸ್ತ್ರಜ್ಞಾನವುಳ್ಳ ಬೇರೊಬ್ಬ ಪೌರ್ವಾತ್ಯನ ವೃತ್ತಾಂತವನ್ನು ಇಲ್ಲಿ ವರ್ಣಿಸುವೆವು. ಪೌರ್ವಾತ್ಯ ಯಂತ್ರಜ್ಞರಲ್ಲಿ 'ಮಯ'ನಾದವನಂಥ ಯಂತ್ರಶಾಸ್ತ್ರಜ್ಞನು ಇನ್ನೊಬ್ಬನಿರಲಿಲ್ಲ. ಪುರಾಣಗಳಿಂದ ಅವನು ಶ್ರೇಷ್ಠನಾದ ಬಡಿಗನಿದ್ದನೆಂದು ನಾವು ಬಲ್ಲೆವು. ಅವನ ಯಂತ್ರಶಿಲ್ಪದ ಪರಿಚಯವನ್ನು ಮಾಡಿಕೊಳ್ಳುವುದಕ್ಕಾಗಿ ಈ ಪ್ರಸಂಗದ ಅವತರಣ ಮಾಡಿರುವೆವು. ಪ್ರಸಿದ್ಧವಾದ ಕಥಾಸರಿತ್ಸಾಗರವೆಂಬ ಗ್ರಂಥದಿಂದ ಈ ವಿವರವನ್ನು ಮುಖ್ಯವಾಗಿ ಸಂಗ್ರಹಿಸಿರುವೆವು. ಕಥಾಸರಿತ್ಸಾಗರದಲ್ಲಿ ಮಯನು ಯಂತ್ರಶಿಲ್ಪದ ಮೊದಲನೆಯ ಶೋಧಕನೆಂದು ವರ್ಣನೆಯಿರು-

ವನು. ಸೂರ್ಯಪ್ರಭ ಲಂಬಕದ ೧ನೆಯ ತರಂಗದಲ್ಲಿ ಚಂದ್ರಪ್ರಭರಾಜನ ಮಗನಾದ ಸೂರ್ಯಪ್ರಭನು ಮಯನ ಬಳಿಯಲ್ಲಿಯೇ ಯಂತ್ರವಿದ್ಯೆಯನ್ನು ಕಲಿತನೆಂದು ಹೇಳಿದೆ.

ಏವಂ ಮಯೇನಾಭಿಹಿತೋ ರಾಜಾ
ಚಂದ್ರಪ್ರಭೋಽಬ್ರವೀತ್ ।
ಧನ್ಯಾಃ ಸ್ಮಃ ಪುಣ್ಯವಾನೇಷ ಯಥೇಚ್ಛಂ
ನೀಯತಾಮಿತಿ ॥೩೩॥
ತತಸ್ತಮಾಮಂತ್ರ್ಯ ನೃಪಂ
ತದನುಜ್ಞಾನಮಾಶುತಮ್ ।
ಸೂರ್ಯಪ್ರಭಂ ಸಸಾಮಾತ್ಯಂ ಪಾತಾಲಂ
ನೀತವಾನ್ ಮಯಃ ॥೩೪॥
ತತ್ರೋಪದಿಷ್ಟವಾಂಸ್ತಸ್ಯ ಸ ತಪಾಂಸಿ
ತಥಾ ಯಥಾ ।
ರಾಜಪುತ್ರಃ ಸಸಾಮಾತ್ಯೋ ವಿದ್ಯಾಃ
ಶೀಘ್ರಮಸಾಧಯತ್ ॥೩೫॥
ವಿಮಾನಸಾಧನಂ ತಸ್ಯೈ
ತಥೈವೋಪದಿದೇಶ ಸಃ ।
ಏನ ಭೂತಾಸನಂ ನಾಮ ಸ
ವಿಮಾನಮುಪಾರ್ಜಯತ್ ॥೩೬॥
ತದ್ವಿಮಾನಾಧಿರೂಢಂ ತಂ ಸಿದ್ಧವಿದ್ಯಂ
ಸಮಂತ್ರಿಕಂ ।
ಸೂರ್ಯಪ್ರಭಂ ಸ ಪಾತಾಲಾನ್ಮಯಃ
ಸ್ವಪುರಮಾನಯತ್ ॥೩೭॥

ಹಿಂದೆ ಹೇಳಿದಂತೆ ಮಯನು ಚಂದ್ರಪ್ರಭನಿಗೆ ಹೇಳಲು ಅವನು, “ನಾವು ಧನ್ಯರು, ಈ ಪುಣ್ಯವಂತನಾದ ಮಗನನ್ನು ಬೇಕಾದತ್ತ ಕರೆದುಕೊಂಡು ಹೋಗು” ಎಂದು ಮಯನಿಗೆ ಹೇಳಿದನು. ಆಮೇಲೆ ಮಯನು ಅರಸನ ಒಪ್ಪಿಗೆಯನ್ನು ಪಡೆದ ಸೂರ್ಯಪ್ರಭನನ್ನು ಮಂತ್ರಿಗಳೊಡನೆ ಶೀಘ್ರವಾಗಿ ಪಾತಾಳಕ್ಕೆ ಒಯ್ದನು. ಅಲ್ಲಿ ಮಯನು ರಾಜಪುತ್ರನೂ ಅವನ ಮಂತ್ರಿಗಳೂ ಶೀಘ್ರವಾಗಿ ವಿದ್ಯೆಗಳನ್ನು ಸಾಧಿಸುವಂತ ಉಪದೇಶ ಮಾಡಿದನು. ಮತ್ತು ಅವನಿಗೆ ವಿಮಾನವಿದ್ಯೆಯನ್ನು ಉಪದೇಶಿಸಿದನು. ಆ ಉಪದೇಶದಿಂದ ಅವನು ಭೂತಾಸನವೆಂಬ ಒಂದು ವಿಮಾನವನ್ನು ಸಿದ್ಧ ಮಾಡಿದನು. ಮಂತ್ರಿಗಳೊಡನೆ ವಿದ್ಯೆಯನ್ನು ಸಾಧಿಸಿದ ಆ ಸೂರ್ಯಪ್ರಭನನ್ನು ಅದೇ ವಿಮಾನದಲ್ಲಿ ಏರಿಸಿ ಮಯನು ಅವನ ಪಟ್ಟಣಕ್ಕೆ ಕರೆದೊಯ್ದನು.

ಕಥಾಸರಿತ್ಸಾಗರದಿಂದ ಮಯನ ಚರಿತ್ರವು ಸ್ವಲ್ಪ ಮಟ್ಟಿಗೆ ಗೊತ್ತಾಗುವದು. ಅವನು ಮೊದಲು ಅನಾರ್ಯ ಸಂಪ್ರದಾಯದವನಿದ್ದನು. ಬಳಿಕ ಅನಾರ್ಯತನವನ್ನು ಬಿಟ್ಟು ಆರ್ಯರಿಗೆ ಶರಣು ಹೋದನು. ಆರ್ಯರಿಂದ ಉತ್ಸಾಹಿತನಾಗಿ ಇಂದ್ರನ ಸಭೆಯನ್ನು ನಿರ್ಮಿಸಿದನು. ಇದರಿಂದ ಅನಾರ್ಯರು ಆರ್ಯಪಕ್ಷದವನೆಂದು ಇವನ ಮೇಲೆ ಸಿಟ್ಟಾದರು. ಈ ಅನಾರ್ಯರ ಅಂಜಿಕೆಯಿಂದ ಮಯನು ವಿಂಧ್ಯ ಪರ್ವತದಲ್ಲಿ ಅನಾರ್ಯರಿಗೆ ದುರ್ಭೇದ್ಯವಾಗಿಯೂ ವಿಚಿತ್ರ ಚಾತುರ್ಯದಿಂದ ಘಟಿತವಾಗಿಯೂ ಇರುವ ಒಂದು ನಗರವನ್ನು ಕಟ್ಟಿಕೊಂಡು ಅಲ್ಲಿ ವಾಸವಾಗಿದ್ದನು. ಆ ನಗರವೇ ಮೇಲೆ ಪಾತಾಲವೆಂದು ವರ್ಣಿತವಾದಂತೆ ತೋರುತ್ತದೆ. ಮಯನ ಈ ಚರಿತ್ರವು ಕೆಳಗಿನ ಶ್ಲೋಕದಲ್ಲಿ ಕಾಣುವದು:

ಅಸ್ತಿ ತ್ರಿಜಗತಿ ಖ್ಯಾತೋ ಮಯೋ
ನಾಮ ಮಹಾಸುರಃ ।
ಆಸುರಂ ಭಾವಮುತ್ಸೃಜ್ಯ ಶೌರಿಂ ಸ
ಶರಣಂ ಶ್ರಿತಃ ॥೧೨॥
ತೇನ ದತ್ತಾಭಯಶ್ಚಕ್ರೇ ಸ ಚ
ವಜ್ರಭೃತಃ ಸಭಾಮ್ ।
ದೈತ್ಯಾಶ್ಚ ದೇವಪಕ್ಷೋಽಯಮಿತಿ
ತಂ ಪ್ರತಿ ಚುಕ್ರುಧುಃ ॥೧೩॥
ತದ್ಭಯಾತ್ತೇನ ವಿಂಧ್ಯಾದ್ರೌ
ಮಾಯಾ ವಿವರ ಮಂದಿರಂ।
ಅಗಮ್ಯಮಸುರೇಂದ್ರಾಣಾಂ
ಬಹ್ವಾಶ್ಚರ್ಯ ಮಯಂ ಕೃತಂ ॥೧೪॥

(ಕ. ಸ., ಮದನಮಂಚುಕಾ ಲಂ. ತ. ೩)

ಕಥಾಸರಿತ್ಸಾಗರದ, ಹಿಂದೆ ಹೇಳಿದ ಮದನಮಂಚುಕಾ ಲಂಬಕದಲ್ಲಿ ಮಯನ ಮಗಳಾದ

ಸೋಮಪ್ರಭೆಯೆಂಬವಳು ಕಲಿಂಗಸೇನೆ ಎಂಬವಳಿಗೆ ಕಟ್ಟಿಗೆಯಿಂದ ಮಾಡಿದ ಯಂತ್ರದ ಬೊಂಬೆಗಳ ವರ್ಣನೆಯನ್ನು ತೋರಿಸಿದಳೆಂದು ವರ್ಣಿಸಲ್ಪಟ್ಟಿದೆ. ಆ ಯಂತ್ರದ ಗೊಂಬೆಗಳ ವರ್ಣನೆಯನ್ನು ನೋಡಲು, ಮಯನು ಯಂತ್ರಶಾಸ್ತ್ರದಲ್ಲಿ ಪಾರಂಗತನಿದ್ದನೆಂದು ತಿಳಿದುಬರುತ್ತದೆ. ಇಲ್ಲಿ ನಾವು ಆ ಆಶ್ಚರ್ಯಕಾರಕ ವರ್ಣನೆಯನ್ನು ಉದ್ಧರಿಸಿ ಬರೆಯುತ್ತೇವೆ:

ಇತ್ಯುಕ್ತ್ವಾ ದರ್ಶಯತ್ತಸ್ಯೈ
ಪ್ರೋದ್ಘಾಟ್ಯ ಬಹುಕೌತುಕಾಃ ||೧೮||
ಸೋಮಪ್ರಭಾ ಕಾಷ್ಠಮಯೀಃ
ಸ್ವಮಾಯಾ ಯಂತ್ರಪುತ್ರಿಕಾಃ |
ಕೀಲಕಾಹತಿ ಮಾತ್ರೇಣ ಕಾಚಿದ್ಗತ್ವಾ
ವಿಹಾಯಸಾ |
ತದಾಜ್ಞಯಾ ಪುಷ್ಪಮಾಲಾಮಾದಾಯ
ದ್ರುತಮಾಯಯೌ ||೧೯||
ಕಾಚಿತ್ತಥೈವ ಪಾನೀಯಮಾನಿನಾಯ
ಯದೃಚ್ಛಯಾ |
ಕಾಚಿನ್ನನರ್ತ ಕಾಚಿಚ್ಚ
ಕಥಾಲಾಪಮಥಾಕರೋತ್ ||೨೦||

(ಕ. ಸ., ಮದನಮಂಚುಕಾ ಲಂ. ತ. ೩)

(ಸೋಮಪ್ರಭೆಯು ಈ ಪ್ರಕಾರ ಮಾತಾಡಿ ಕಟ್ಟಿಗೆಯಿಂದ ಮಾಡಿದ ಯಂತ್ರದ ಗೊಂಬೆಗಳನ್ನು ಹೊರತೆಗೆದು ಅವುಗಳ ಅನೇಕ ಪ್ರಕಾರದ ಕಾಕುಶಗಳನ್ನು ತೋರಿಸಹತ್ತಿದಳು. ಒಂದು ಗೊಂಬೆಯು ಕೀಲನ್ನು ಒತ್ತಿದೊಡನೆ ಆಕಾಶ ಮಾರ್ಗದಿಂದ ಗಮನ ಮಾಡಿ ಅವಳ ಆಜ್ಞಾನುಸಾರವಾಗಿ ಹೂಮಾಲೆಯನ್ನು ತೆಗೆದುಕೊಂಡು ಶೀಘ್ರವಾಗಿ ಬಂದಿತು. ಇನ್ನೊಂದು ಗೊಂಬೆಯು ಸ್ವೇಚ್ಛೆಯಾಗಿ ನೀರನ್ನು ತೆಗೆದುಕೊಂಡು ಬಂದಿತು. ಮತ್ತೊಂದು ಗೊಂಬೆಯು ಕುಣಿಯಿತು. ಬೇರೊಂದು ಗೊಂಬೆಯು ಮಾತನಾಡತೊಡಗಿತು.)

ಅದರ ಮುಂದೆ ಇನ್ನೂ ಆಶ್ಚರ್ಯಕಾರಕ ವರ್ಣನೆಯು ಕಂಡುಬರುವದು.

ತತಃ ಸೋಮಪ್ರಭಾವಾದೀದ್ರಾ
ಜನ್ಯೇತಾನ್ಯನೇಕಧಾ |
ಮಾಯಾಯಂತ್ರಾದಿ ಶಿಲ್ಪಾನಿ
ಪಿತ್ರಾಸೃಷ್ಟಾನಿ ಮೇಪುರಾ ||೪೧||
ಮಯಾಚೇದಂ ಜಗದ್ಯಂತ್ರಂ
ಪಂಚಭೂತಾತ್ಮಕಂ ತಥಾ |
ಯಂತ್ರಾಣ್ಯೇತಾನಿ ಸರ್ವಾಣಿ ಶೃಣ್ವೇತಾನಿ
ಪೃಥಕ್ ಪೃಥಕ್ ||
ಪೃಥ್ವೀಪ್ರಧಾನಂ ಯಂತ್ರಂ ಯದ್ದ್ವಾರಾದಿ
ಪಿದಧಾತಿತತ್ |
ಪಿಹಿತಂ ತೇನ ಶಕ್ನೋತಿ
ನಚೋದ್ಘಾಟಯಿತುಂ ಪರಃ ||
ಆಕಾರ ಸ್ತೋಯಯಂತ್ರೋತ್ಥಃ ಸಜೀವ
ಇವ ದೃಶ್ಯತೇ |
ತೇಜೋಮಯಂತು ಯದ್ಯಂತ್ರಂ
ತದ್ಜ್ವಾಲಾಃ ಪರಿಮುಂಚತಿ ||
ವಾತಯಂತ್ರಂ ಚ ಕುರುತೇ ಚೇಷ್ಟಾ
ಗತ್ಯಾಗಮಾದಿಕಾಃ |
ವ್ಯಕ್ತೀಕರೋತಿಚಾಲಾಪಂ
ಯಂತ್ರಮಾಕಾಶ ಸಂಭವಂ ||
ಮಯಾ ಚೈತಾನ್ಯವಾಪ್ತಾನಿ ತಾತಾತ್
ಕಿಂತ್ವಮೃತಸ್ಯ ಯತ್ |
ರಕ್ಷಕಂ ಚಕ್ರಯಂತ್ರಂ ತತ್ತಾತೊ
ಜಾನಾತಿ ನಾಪರಃ ||

(ಕ. ಸ., ಮದನಮಂಚುಕಾ ಲಂ. ತ. ೩)

ಆ ಬಳಿಕ ಸೋಮಪ್ರಭೆಯು ಕಲಿಂಗಸೇನೆಯು ತಂದೆಯಾದ ಕಲಿಂಗದತ್ತನಿಗೆ ಹೇಳಿದಳು: "ರಾಜನೇ ಈ ಕೌಶಲ್ಯರಚಿತವಾದ ಎಲ್ಲ ಯಂತ್ರಗಳನ್ನು ನಮ್ಮ ತಂದೆಯು ಬಹಳ ದಿವಸಗಳ ಹಿಂದೆ ನಿರ್ಮಿಸಿದ್ದಾನೆ. ಈ ಪೃಥ್ವೀರೂಪವಾದ ಯಂತ್ರವು ಪಂಚಭೂತಾತ್ಮಕವಾಗಿರುವಂತೆ ಈ ಯಂತ್ರಗಳೆಲ್ಲ ಪಂಚಭೂತಗಳ ಗುಣಗಳುಳ್ಳವು. ಅವುಗಳಲ್ಲಿ ಪ್ರತಿಯೊಂದರ ವರ್ಣನೆಯನ್ನು ಕೇಳಬೇಕು. ಇವುಗಳಲ್ಲಿ ಪೃಥ್ವಿತತ್ವ ಘಟಿತವಾದ ಯಂತ್ರವು ಬಾಗಿಲು ಮೊದಲಾದ್ದನ್ನು ಮುಚ್ಚಿದರೆ ಆ ಬಾಗಿಲನ್ನು ಯಾರೂ ತೆರೆಯಲು ಸಮರ್ಥರಾಗುವದಿಲ್ಲ. ಜಲ

ಯಂತ್ರದ ಆಕಾರವು ಸಜೀವದಂತೆ ತೋರುವುದು. ತೇಜೋಮಯಯಂತ್ರವು ಅಗ್ನಿ ಜ್ವಾಲೆಗಳನ್ನು ಹೊರಗೆಡಹುವದು. ವಾಕ್ ಯಂತ್ರವು ಗಮನ, ಆಗಮನ, ಮೊದಲಾದ ಕಾರ್ಯಗಳನ್ನು ಮಾಡುವದು. ಆಕಾಶ ಯಂತ್ರವು ಮಾತಾಡುವದು. ನಾನು ಈ ಯಂತ್ರಗಳನ್ನೆಲ್ಲ ತಂದೆಯಿಂದ ತಿಳಿದುಕೊಂಡಿರುವೆನು. ಆದರೆ ಅಮೃತರಕ್ಷಕವಾದ ಚಕ್ರಯಂತ್ರವೆಂಬುದು ಮಾತ್ರ ನಮ್ಮ ತಂದೆಗಲ್ಲದೆ ಬೇರೆ ಯವರಿಗೆ ತಿಳಿದಿಲ್ಲ."

ಈ ಸ್ಥಲದಲ್ಲಿ ಹೇಳಿದ ಪೃಥ್ವಿಯಂತ್ರ, ಜಲಯಂತ್ರಗಳಂಥ ಯಂತ್ರಗಳು ಈ ಕಾಲದಲ್ಲಿ ಉಂಟು. ತೇಜೋಮಯಯಂತ್ರವು ಈ ಕಾಲದ ಗ್ಯಾಸ್ ಮತ್ತು ಇಲೆಕ್ಟ್ರಿಕ್ ಲಾಯಿಟ್ ಇವುಗಳ ಯಂತ್ರದಂತೆ ಇತ್ತೆಂದು ತೋರುತ್ತದೆ. ವಾಕ್‌ಯಂತ್ರವು ಈ ಕಾಲದ ಸಾಯಕಲ್, ಮೋಟಾರ್ ಮೊದಲಾದವುಗಳಂತೆ ಇರಬಹುದೆಂದು ತೋರುವದು. ಮತ್ತು ಆಕಾಶಯಂತ್ರವು ಹೊಸದಾಗಿ ಪ್ರಚಾರದಲ್ಲಿ ಬಂದ ಫೋನೋಗ್ರಾಫಿನಂತೆ ಇರಬಹುದೆಂದು ಸ್ಪಷ್ಟವಿದೆ. ಚಕ್ರಯಂತ್ರವು ಯಾವ ತರದ್ದಿತ್ತೆಂಬುದು ಗೊತ್ತಾಗದಿದ್ದರೂ ಅದೊಂದು ಗಾಲಿಯ ಯಂತ್ರ(Wheeled Machine) ವಿತ್ತೆಂದು ತೋರುವದು. ಅದು ಈ ಕಾಲದ ಇಲೆಕ್ಟ್ರಿಕ್ ಅಥವಾ ಗ್ಯಾಲ್‌ವನಿಕ್ ಬ್ಯಾಟರಿ (Galvanic Battery)ಯಂತೆ ನಿತ್ಯವಾಗಿ ನವಶಕ್ತಿಯನ್ನು ಕೊಡುವ ವಿದ್ಯುದ್ಯಂತ್ರವಿರಬಹುದೆಂದು ತೋರುವದು.

ಕಥಾಸರಿತ್ಸಾಗರದಲ್ಲಿರುವ ವಿಮಾನ ಯಂತ್ರದ ವಿಸ್ತಾರವಾದ ವರ್ಣನೆಯನ್ನು ನೋಡಲು ಒಂದಾನೊಂದು ಸಮಯದಲ್ಲಿ ಈ ಯಂತ್ರ ವಿದ್ಯೆಯ ಚರ್ಚೆಯು ಚೆನ್ನಾಗಿ ಆಗಿತ್ತೆಂದೂ ಈ ಯಂತ್ರವು ವಿಶೇಷವಾಗಿ ಪ್ರಚಾರದಲ್ಲಿತ್ತು ಎಂದೂ ಕಂಡುಬರುತ್ತದೆ. ಈ ಸಂಬಂಧದ ಕೆಲವು ಸ್ಥಲಗಳನ್ನು ಉದ್ಧರಿಸಿ ಬರೆಯುತ್ತೇವೆ. ಅದರಿಂದ ನಾವು ಹೇಳಿದ್ದು ಸತ್ಯವೆಂದು ತೋರುವದು.

ಗತ್ವಾ ತಂ ಯಂತ್ರತಕ್ಷಾಣಂ ವದ
ಪ್ರಾಣಧರಂ ಮಹತ್ ।
ವ್ಯೋಮಗಾಮಿ ವಿಮಾನಂ ನಃ
ಪ್ರಸ್ಥಾನಾಯೋಪಕಲ್ಪಯ ॥೨೨೪॥

(ಕ. ಸ., ರತ್ನಪ್ರಭಾ ಲಂ. ತ. ೯)

"ಹೋಗಿ, ಆ ಯಂತ್ರಶಿಲ್ಪಿಯಾದ ಪ್ರಾಣಧರನನ್ನು ಕುರಿತು ನಮ್ಮ ಪ್ರಯಾಣಕ್ಕೆ ಅನುಕೂಲವಾದ ಒಂದು ದೊಡ್ಡ ವಿಮಾನವನ್ನು ಸಿದ್ಧಮಾಡಿಕೊಡು," ಎಂದು ಹೇಳಿದನು.

ಮೇಲಿನ ವರ್ಣನೆಯಿಂದ ವಿಮಾನಯಂತ್ರವೆಂಬುದು ಐಂದ್ರಜಾಲಿಕ ವ್ಯಾಪಾರವಿರದೆ. ಅದೊಂದು ಮೇಲ್ತರದ ಶಿಲ್ಪವಿತ್ತೆಂದೂ ಅದನ್ನು ಚೆನ್ನಾಗಿ ಕಲಿತು ಪಾರಂಗತರಾದವರಿಗೆ ಈ ಕಾಲದ ಯಂತ್ರಶಿಲ್ಪಿಗಳಿಗೆ "ಮೆಕ್ಯಾನಿಕ್" (Mechanic) ಎಂದು ಹೇಳುವಂತೆ "ಯಂತ್ರತಕ್ಷ"ರೆಂದು ಹೇಳುತ್ತಿದ್ದರೆಂದೂ ತೋರುವದು.

ಆ ವಿಮಾನಯಂತ್ರಗಳನ್ನು ಯಾವ ಸಾಧನದಿಂದ ನಡೆಸುತ್ತಿದ್ದರೆಂಬುದನ್ನೂ ಅದರ ವೇಗವು ಎಷ್ಟು ಇತ್ತೆಂಬುದನ್ನೂ ಕೆಳಗಿನ ವರ್ಣನೆಯಿಂದ ತಿಳಿಯುಬಹುದು.

ವಾತಯಂತ್ರ ವಿಮಾನಂಚ
ತನ್ಮಯಾ[illegible]ಹ ಮಂಕ್ಷುಯತ್ ।
ಯೋಜನಾಷ್ಟಾಶತೀಂ ಯಾತಿ [illegible]ತ್ರ[illegible]ತ್ರ
ಕೀಲಕರ್ಮ ॥[illegible]॥
ಆರುಹ್ಯ ಸ್ವಸ್ಯ ತೇನಸ್ಮಿನ್ ವಾತಯಂತ್ರ
ವಿಮಾನಕೇ ।
ದ್ರುತಂ ತತೋ ಗತೋಭೂವಂ
ಯೋಜನಾನಾಂ ಶತದ್ವಯಮ್ ॥೪೪॥

(ಕ. ಸ., ರತ್ನಪ್ರಭಾ ಲಂ. ತ, ೯)

ಇದರಿಂದ ವಿಮಾನಯಂತ್ರವು ವಾಯುವಿನ ಸಹಾಯದಿಂದ ನಡೆಯುತ್ತಿದ್ದರಿಂದ ಅದಕ್ಕೆ "ವಾತಯಂತ್ರ ವಿಮಾನ"ವೆಂಬ ಹೆಸರು ಬಂದಿರಬಹುದೆಂದು ತೋರುತ್ತದೆ. ಈಗಿನ ಬೆಲೂನ್ ಯಂತ್ರವನ್ನು ಹೇಗೆ ತಪ್ತ ವಾಯುವಿನಿಂದ ಇಲ್ಲವೆ ಲಘುಭಾಷ್ಪದಿಂದ (heated air or light air) ತುಂಬಿ ಹಾರಿಸುವಂತೆ ವಾತಯಂತ್ರ [illegible]

ಮೊದಲಾದ್ದರಿಂದ ಯಂತ್ರ ಕಾರ್ಯವು ಕೀಲಕದಿಂದ ನಿಯಮಿತವಾಗುತ್ತಿತ್ತು. ಒಂದು ಸಾರೆ ಗತಿ ಕೊಟ್ಟ ವಿಮಾನವು ಇನ್ನೂರು ಗಾವುದದಿಂದ ಎಂಟು ನೂರು ಗಾವುದದ ವರೆಗೆ ಹೋಗುತ್ತಿತ್ತು. ಈ ರೀತಿಯಲ್ಲಿ ವೇಗ ಕ್ರಮವಿತ್ತೆಂದು ಕೆಳಗಿನ ಶ್ಲೋಕದಿಂದ ತಿಳಿಯುವದು:

ಪ್ರೇರಿತೇನ ಪುನಸ್ತೇನ ವಿಮಾನೇನ
ಖಗಾಮಿನಾ ।
ತತೋಽಪಿ ಯೋಜನ
ಶತದ್ವಯಮನ್ಯದಗಾಮಹಮ್ ॥೪೫॥

(ಕ. ಸ., ರತ್ನಪ್ರಭಾ ಲಂ. ತ. ೯)

(ಮುಕ್ತವ್ಯೋಮಗಾಮಿಯಾದ ವಿಮಾನಕ್ಕೆ ಗತಿ ಕೊಡಲು ನಾವು ಮತ್ತೆ ಇನ್ನೂರು ಯೋಜನ ಹೋದೆವು.)

ಆ ಕಾಲದ ವಿಮಾನಯಂತ್ರದಲ್ಲಿ ಸಾವಿರಾರು ಜನರು ಕುಳಿತುಕೊಳ್ಳುವದಕ್ಕೆ ಅವಕಾಶವಿತ್ತೆಂದು ತೋರುವದು:

ವ್ಯಜಿಜ್ಞಪಚ್ಚ ಸುಮಹದ್ವಿಮಾನಂ
ಕೃತವಾಸ್ಮಿ ಮೆ ।
ಯನ್ಮಾನುಷ ಸಹಸ್ರಾಣಿ
ವಹತ್ಯದ್ಯಾವಹೇಲಯಾ ॥

(ಕ. ಸ., ರತ್ನಪ್ರಭಾ ಲಂ. ತ. ೯)

(ಯಂತ್ರತಕ್ಷನು ರಾಜನಿಗೆ ಇಂತು ವಿಜ್ಞಾಪಿಸಿದನು. ನಾನು ಒಂದು ದೊಡ್ಡ ವಿಮಾನವನ್ನು ಸಿದ್ಧಪಡಿಸಿರುವೆನು. ಅದು ಈಗ ಸಾವಿರ ಜನರನ್ನು ಅನಾಯಾಸವಾಗಿ ಹೊರುವದು.)

ವಿಮಾನಕ್ಕೆ ಗತಿ ಕೊಡುವದು ಸ್ವಾಧೀನದಲ್ಲಿ ಇದ್ದಂತೆ ಗತಿಯನ್ನು ಪ್ರತಿಬಂಧಿಸುವದಾದರೂ ಸ್ವಾಧೀನವಾಗಿತ್ತು. ಇದಕ್ಕೆ ಕಥಾಸರಿತ್ಸಾಗರದಲ್ಲಿಯೇ ಆಧಾರವುಂಟು. ಹಿಂದೆ ಹೇಳಿದ ದೊಡ್ಡ ವಿಮಾನವನ್ನು ಈ ಪ್ರಕಾರ ಇಳಿಸಿದ ವರ್ಣನೆಯನ್ನು ಕೆಳಗೆ ಕೊಡುತ್ತೇವೆ:

ತತ್ರಾಂಬರಾದಶಂಕಿತಮವತೀರ್ಣಮ್
ವರ ವಿಮಾನವಹನಂ ತಮ್ ।
ಸಾನುಚರಂ ನವ ವಧ್ವಾಯುಕ್ತಂ
ದೃಷ್ಟ್ವಾ ವಿಸ್ಮಿಸ್ಮಿಯೇ ಜನಾಃ ॥೨೪೨॥

(ಕ. ಸ. ರತ್ನಪ್ರಭಾ ಲಂ. ತ. ೯)

(ಅಲ್ಲಿ ಒಮ್ಮೆಲೇ ಆಕಾಶದಿಂದ ಇಳಿದು ಬಂದ ಅನುಚರರಿಂದೂ ಹೊಸ ಹೆಂಡತಿಯಿಂದೂ ಕೂಡಿದ ಆ ವಿಮಾನಚಾರಿಯನ್ನು ನೋಡಿ ಜನ ಬೆರಗಾಯಿತು.)

ಈ ಪ್ರಕಾರ ದೊಡ್ಡ ವಿಮಾನವು ಅನೇಕ ಜನರೊಡನೆ ಇಳಿದರೂ ಯಾರ ಮನಸ್ಸಿನಲ್ಲಿಯೂ ವಿಪತ್ತಿನ ಸಂಶಯವು ಹುಟ್ಟಲಿಲ್ಲವೆಂದು ಹೇಳಿದ್ದರಿಂದ ಇಳಿಸುವಿಕೆಯು ಸ್ವಾಧೀನವಾಗಿತ್ತೆಂದು ತೋರುವದು.

ಈ ಸುಯಂತ್ರಿತವಾದ ವಿಮಾನವು ಈ ಕಾಲದ ಏರ್‌ಶಿಪ್ಪಿನಂತೆ (Airship) ರಾಜರಿಗೆ ಹೊಸದೊಂದು ಶಕ್ತಿಯ ಮತ್ತು ಸಂಪತ್ತಿಯ ಆಶೆಯನ್ನುಂಟುಮಾಡಿತ್ತೆಂದು ಹೇಳಬಹುದು.

ದೃಷ್ಟ್ವಾ ವಿಮಾನ ವಾಹನ ಸೂಚಿತ
ಭವಿತವ್ಯ ಖಚರ ಸಾಮ್ರಾಜ್ಯಮ್ ।
ತಂ ಸೋಭ್ಯನಂದತೆಸುತಂ ರಾಜಾ
ಚರಣಾನತಂ ವಧೂಸಹಿತಂ ॥೨೪೪॥

(ಕ. ಸ., ರತ್ನಪ್ರಭಾ ಲಂ. ತ. ೯)

(ವಿಮಾನವಾಹನದ ಸಹಾಯ್ಯದಿಂದ ಮುಂದೆ ಗಗನಚಕ್ರವರ್ತಿಯಾಗಬಹುದಾದ ಸಪತ್ನೀಕನಾದ ಮಗನು ನಮಸ್ಕರಿಸಲು ರಾಜನು ಅಭಿನಂದಿಸಿದನು.)

ಹಿಂದೆ ಹೇಳಿದ ಸೂರ್ಯಪ್ರಭನು ಮಯನಿಂದ ವಿಮಾನವಿದ್ಯೆಯನ್ನು ಪೂರ್ಣವಾಗಿ ಕಲಿತು ಆಕಾಶ ರಾಜ್ಯದಲ್ಲಿ ಚಕ್ರವರ್ತಿಯಾದುದಲ್ಲದೆ ವಿಮಾನ ಸಹಾಯ್ಯದಿಂದ ದಿಗ್ವಿಜಯಕ್ಕೆ ಹೊರಟು ಚೀನ ದೇಶದ ವರೆಗೆ ಹೋಗಿದ್ದನೆಂಬುದು ಕಥಾಸರಿತ್ಸಾಗರದಿಂದ ತಿಳಿದುಬರುತ್ತದೆ.

ಸೋಽಥ ಸೂರ್ಯಪ್ರಭೋ
ವಿದ್ಯಾಪ್ರಭವಾತ್ಸಚಿವೈಃ ಸಹ

ನಾನಾ ದೇಶಾತ್ ವಿಮಾನೇನ ಸದಾ
ಬಭ್ರಾವ ಲೀಲಯಾ ॥೪೦॥
ಅನ್ಯೇದ್ಯುಶ್ಚ ವಿಮಾನೇನ
ಸಹಸೂರ್ಯಪ್ರಭಾಯುಯುಃ ।
ಚಂದ್ರಪ್ರಭಾದ್ಯಾಃ ಸರ್ವೇತೇ
ಚೀನದೇಶಂ ಸಪೌರವಾ ॥೧೭೫॥
(ಕ. ಸ., ರತ್ನಪ್ರಭಾ ಲಂ. ತ. ೧)

(ಬಳಿಕ ಆ ಸೂರ್ಯಪ್ರಭನು ವಿಮಾನ ವಿದ್ಯೆಯ ಪ್ರಭಾವದಿಂದ ಅನೇಕ ದೇಶಗಳನ್ನು ಅನಾಯಾಸವಾಗಿ ತಿರುಗಾಡಿದನು. ಒಂದು ದಿನ ಸೂರ್ಯಪ್ರಭನೊಡನೆ ಆ ಚಂದ್ರಪ್ರಭ ಮೊದಲಾದವರು ವಿಮಾನದಿಂದ ಚೀನ ದೇಶಕ್ಕೆ ಹೋದರು.)

ಈಗಿನ ಪಾಶ್ಚಾತ್ಯ ಜಗತ್ತಿನಲ್ಲಿರುವ ಏರ್ ಶಿಪ್ಪಿಗೂ, ಮೇಲೆ ಹೇಳಿದ "ವರವಿಮಾನ ವಾಹನ"ಕ್ಕೂ ವಿಸ್ತಾರದಲ್ಲಿಯೂ, ಉದ್ದೇಶದಲ್ಲಿಯೂ ಇರುವ ಪೂರ್ಣವಾದ ಹೋಲಿಕೆಯನ್ನು ನೋಡಿ ನಮ್ಮ ದೇಶದವರು ಅತ್ಯಂತ ಚಮತ್ಕೃತರಾಗುವರೆನ್ನುವದಕ್ಕೆ ಸಂದೇಹವಿಲ್ಲ. ಮತ್ತು ಇದುವರೆಗೆ ಪಾಶ್ಚಾತ್ಯ ಶಾಸ್ತ್ರಜ್ಞರು ಬಹು ಪ್ರಯಾಸಪಟ್ಟರೂ ಪೂರ್ಣವಾಗಿ ಸಾಧ್ಯವಾಗದ ವಿಮಾನ ವಿದ್ಯೆಯಲ್ಲಿ ನಮ್ಮವರು ಪಾರೀಣತೆಯನ್ನು ಹೊಂದಿದ್ದರೆಂದು ಒಂದು ವಿಧವಾಗಿ ಗರ್ವಿತರಾಗುವದಕ್ಕೂ ಸಂದೇಹವಿಲ್ಲ. ಈ ವಿಮಾನಯಂತ್ರಗಳನ್ನು ಅರಸರು ಉಪಯೋಗಿಸುತ್ತಿದ್ದರೆಂದೂ ಅವಕ್ಕೆ ವಿಶೇಷವಾದ ವೆಚ್ಚವು ಬೇಕಾಗುತ್ತಿತ್ತೆಂದೂ ಸ್ಪಷ್ಟವಾಗಿ ತೋರುವದು.

ಈ ಮುಂದಿನ ಅವತರಣದಲ್ಲಿ ಪೌರ್ವಾತ್ಯ ಯಂತ್ರವಿದ್ಯೆಯ ಸಂಪೂರ್ಣತೆಯ ಕುರಿತು ಒಂದು ಅದ್ಭುತವಾದ ವಿವರಣವನ್ನು ಕೊಡುವೆವು. ನರವಾಹನದತ್ತನೆಂಬ ರಾಜಪುತ್ರನು ರಾಜಪುತ್ರಿಯಾದ ಕರ್ಪೂರಿಕೆಯನ್ನು ಮದುವೆ ಮಾಡಬೇಕೆಂದು ಕರ್ಪೂರಸಂಭವ ನಗರದ ಅನುಸಂಧಾನ ಮಾಡುತ್ತ ಮಾಡುತ್ತ ಸಮುದ್ರ ತೀರದಲ್ಲಿ ಒಂದು ಆಶ್ಚರ್ಯಕಾರಕ ಸ್ಥಳಕ್ಕೆ ಬಂದನು. ಆ ಸ್ಥಳವು ಇವನ ಕಣ್ಣಿಗೆ ಒಂದು ಸಮೃದ್ಧಶಾಲಿಯಾದ ನಗರವೆಂದು ತೋರಿದರೂ ಅಲ್ಲಿಯ ನಿವಾಸಿಗಳೆಲ್ಲ ಕಾಷ್ಠಯಂತ್ರಗಳಿಂದ ಮಾಡಲ್ಪಟ್ಟವರೆಂದು ಕಂಡುಬಂತು. ಆದರೆ ಜೀವವುಳ್ಳವರಂತೆ ಇರುವ ಇವರ ವ್ಯವಹಾರವನ್ನು ನೋಡಿ ಇವನಿಗೆ ಬಹಳ ಆಶ್ಚರ್ಯವಾಯಿತು. ಇವನು ಅಂಗಡಿ ಬೀದಿಯಲ್ಲಿ ಬರುತ್ತ ಕಾಷ್ಠಮಯರಾದ ವ್ಯಾಪಾರಗಳನ್ನೂ ಗಿರಾಕಿಗಳನ್ನೂ ನೋಡಿದನು. ಈ ಗೊಂಬೆಗಳು ಮಾತಾಡದಿರುವದು ಒಂದಲ್ಲದೆ ನಿರ್ಜೀವವೆಂದು ತಿಳಿಯುವ ಬೇರೆ ಉಪಾಯ ಇದ್ದಿಲ್ಲ. ಇವನು ಮುಂದೆ ಅರಮನೆಯ ಸಮೀಪಕ್ಕೆ ಬಂದು ಕಾಷ್ಠಮಯವಾದ ಆನೆ, ಕುದುರೆ, ಕಾಲಾಳುಗಳನ್ನು ಕಂಡನು. ಬಾಗಿಲಲ್ಲಿ ದ್ವಾರಪಾಲಕರೂ ಕಾಷ್ಠನಿರ್ಮಿತರೇ ಇದ್ದರು.

ಇಂದ್ರಿಯಗಳಿಗೆಲ್ಲ ಅಧಿಷ್ಠಾತೃರೂಪವಾದ ಚೈತನ್ಯವಿರುವಂತೆ ಈ ಎಲ್ಲ ಜಡ ಮೂರ್ತಿಗಳ ಚಲನವಲನ ಮಾಡಿಸುವ ಒಬ್ಬ ಶಿಷ್ಟಾಚಾರಸಂಪನ್ನನಾದ ಮನುಷ್ಯನು ಅಲ್ಲಿ ರತ್ನಸಿಂಹಾಸನದ ಮೇಲೆ ಕುಳಿತಿದ್ದನು. ಈ ಮನುಷ್ಯನು ಕಾಂಚೀನಗರದ ಮಯಶಾಸ್ತ್ರಪಾರಂಗತನಾದ ಒಬ್ಬ ಶಿಲ್ಪಿಯು. ಅಲ್ಲಿಯ ಅರಸನ ಕೋಪವಾದ್ದರಿಂದ ತನ್ನನ್ನು ರಕ್ಷಿಸಿಕೊಳ್ಳುವದಕ್ಕಾಗಿ ವಿಮಾನದಿಂದ ಇಲ್ಲಿ ಬಂದು ವಾಸವಾಗಿದ್ದನು. ಆ ಸ್ಥಳವು ನಿರ್ಜನವಾದ್ದರಿಂದ ವಿನೋದಕ್ಕಾಗಿ ಹಿಂದೆ ಹೇಳಿದ ಯಂತ್ರದ ಗೊಂಬೆಗಳನ್ನು ಮಾಡಿ ಅವುಗಳ ಮಧ್ಯದಲ್ಲಿ ತಾನು ರಾಜನಂತೆ ಕುಳಿತುಕೊಂಡು ತನ್ನ "ರಾಜ್ಯಧರ" ನಾಮವನ್ನು ಅನ್ವರ್ಥವಾಗಿ ಮಾಡಿಕೊಂಡಿದ್ದನು. ಹಿಂದೆ ಹೇಳಿದ ನರವಾಹನದತ್ತನು ಮಂತ್ರಿಪರಿಜನರೊಡನೆ ಅಲ್ಲಿಗೆ ಬರಲು ಆ ರಾಜಧರನು ಮಾಡಿದ ಆತಿಥ್ಯದ ಪ್ರಕಾರವು ಆಶ್ಚರ್ಯದಲ್ಲಿಯೂ ಆಶ್ಚರ್ಯವು. ಉತ್ತಮವಾದ ಆಹಾರ ಸಾಮಗ್ರಿಯು ಯೋಚಿಸಿದ ಕೂಡಲೇ ತನ್ನಷ್ಟಕ್ಕೆ ತಾನೇ ಸಮೀಪಕ್ಕೆ ಬರಹತ್ತಿತು. ಊಟ ಮುಗಿದೊಡನೆ ಅದೃಶ್ಯನಾದ ಯಾವನೊ ಒಬ್ಬನಿಂದ ಆ ಸ್ಥಳವು ತೊಳೆಯಲ್ಪಟ್ಟಿತು. ಪರಿಚಾರಕರು ಯಾರೂ ತಿರುಗಾಡುವದು ಕಂಡುಬರಲಿಲ್ಲ. ಇದೇ ಮೇರೆಗೆ ತಾಂಬೂಲದಾನವೂ ಜರುಗಿಸಲ್ಪಟ್ಟಿತು.

ಪ್ರವಿಶ್ಯ ತತ್ರ ವಿಪಣೀ ಮಾರ್ಗೇಣ ಸ
ದದರ್ಶ ಚ ।
ಕಾಷ್ಠಯಂತ್ರಮಯಂ ಸರ್ವಂ
ಚೇಷ್ಟಮಾನಂ ಸಜೀವವತ್ ॥೧೦॥
ವಣಿಗ್ವಿಲಾಸಿನೀ ಪೌರಜನಂ ಜನಿತ
ವಿಸ್ಮಯಮ್ ।
ವಿಜ್ಞಾಯಮಾನಂ ನಿರ್ಜೀವ ಇತಿ
ವಾಗ್ವಿರಹಾತ್ಪರಮ್ ॥೧೧॥
ಕ್ರಮಾಚ್ಚ ಗೋಮುಖ ಸಖಃ
ಸೋಂತಿಕಂ ರಾಜ ವೇಶ್ಮನಃ ।
ಪ್ರಾಪ ತಾದೃಶಮೇವಾತ್ರ ಹಸ್ತ್ಯಶ್ವಾದಿ
ವಿಲೋಕಯನ್ ॥೧೨॥

ವಿವೇಶ ಚಾಸ್ಯ ಸೌವರ್ಣ ಪುರಮುಸ್ತ್ಯಕ
ಶೋಭಿನಃ ।
ಅಭ್ಯಂತರಂ ಸ ಸಚಿವಃ ಸಾಶ್ಚರ್ಯೋ
ರಾಜ ಸದ್ಮನಃ ॥೧೩॥
ತತ್ರ ಯಂತ್ರ ಪ್ರತೀಹಾರ ವಾರನಾರೀ
ಪರಿಶ್ರಿತಮ್ ।
ಜಡಾನಾಂ ಸ್ಪಂದನೇ ಹೇತುಂ ತೇಷಾಂ
ಚೇತನಮೇಕಕಮ್ ॥೧೪॥
ಇಂದ್ರಿಯಾಣಾಮಿವಾತ್ಮಾನ-
ಮಧಿಷ್ಠಾತೃತಯಾ ಸ್ಥಿತಮ್ ।
ರತ್ನಸಿಂಹಾಸನಾಸೀನಂ ಭವ್ಯಂ
ಪುರುಷಮೈಕ್ಷತ ॥೧೫॥

ತೇನ ಯಂತ್ರ ಮಯೋತ್ಪ್ರಾಯಂ ಜನಃ
ಸರ್ವಃ ಕೃತೋ ಮಯಾ ॥೫೮॥
ಇತೀಹಾಗತ್ಯ ತಕ್ಷಾಪಿ ದೇವೈಕಾಕೀ
ಕರೋಮ್ಯಹಮ್ ।
ರಾಜೇಂದ್ರ ಲೀಲಾಯಿತುಂ ರಾಜ್ಯ-
ಧರೋ ನಾಮ ವಿಧೇರ್ವಶಾತ್ ॥೫೯॥
ತದ್ದೇವ ನಿರ್ವೃತೇಽಮುಷ್ಮಿನ್
ಭವಂತೋದ್ಯ ಪುರೇ ದಿನಮ್ ।
ವಿಶ್ರಾಮ್ಯಂತು ಯಥಾಶಕ್ತಿ ಪರಿಚರ್ಯಾ
ಪರೇ ಮಯಿ ॥೬೦॥

*

ಬುಭುಜೆ ತತ್ರ ಚಾಹಾರಾನ್
ಧ್ಯಾತೋಪಸ್ಥಿತಾನ್ ಶುಭಾನ್ ।
ತೇನ ರಾಜ್ಯ ಧರೇಣಾಗ್ರಸ್ಥಿತೇನ ಸ
ಸಮಂತ್ರಿಕಃ ॥೬೩॥
ತತಃ ಕೇನಾಪ್ಯದೃಷ್ಟೇನ
ಪ್ರಮೃಷ್ಟೋ ಹಾರ ಭೂಮಿಕಃ ।
ಅನು ತಾಂಬೂಲ ಭೋಗಂ ಸ ತಸ್ಥಾ
ಪಿತಾಸವಃ ಸುಖಮ್ ॥೬೪॥

(ಕ. ಸ., ರತ್ನಪ್ರಭಾ ಲಂ. ತ. ೭)

ರಾಜ್ಯಧರನ ಈ ವ್ಯವಸ್ಥೆಯೆಲ್ಲ ವಿದ್ಯುದ್ಯಂತ್ರಗಳಿಂದ ತಿರುಗಿಸಲ್ಪಡುತ್ತಿತ್ತೆಂದು ತೋರುತ್ತದೆ. ಮನುಷ್ಯಸಂಪರ್ಕವಿಲ್ಲದೆ ಭೋಜನಪಾತ್ರಗಳನ್ನು ಕ್ರಮವಾಗಿ ಹಾಕುವದು ಮತ್ತು

ಭೋಜನವು ಮುಗಿದೊಡನೆ ಕ್ರಮವಾಗಿ ಆ ಸ್ಥಳದಿಂದ ಒಯ್ಯುವದು ಈ ಕಾರ್ಯಗಳು ಈಗ ಅಮೇರಿಕದಲ್ಲಿ ವೈದ್ಯುತಿಕ ಯಂತ್ರಗಳಿಂದ ಮಾಡಿಸಲ್ಪಡುತ್ತಿರುವಂತೆ ಪುಸ್ತಕಗಳ ಮುದ್ರಣ, ಹೊಲಿಗೆ, ಕಟ್ಟುವುದು, ಮೊದಲಾದ ಕಾರ್ಯಗಳು ಹಸ್ತಸ್ಪರ್ಶವಿಲ್ಲದೆ ಯಂತ್ರಗಳಿಂದ ಸಾಗಿಸಲ್ಪಡುತ್ತಿರುವದನ್ನು ಬಹುಜನರು ಬಲ್ಲರು. ಇದರಿಂದ ರಾಜ್ಯಧರನ ಕೌಶಲದಲ್ಲಿ ಯಾವದೂ ಅಸಂಭವವಿಲ್ಲವೆಂದು ತೋರುವುದು. ರಾಜ್ಯಧರನಿಗೆ ಪ್ರಾಣಧರನೆಂಬ ಒಬ್ಬ ಸೋದರನಿದ್ದನು. ಅವನೂ ವಿಚಕ್ಷಣಶಿಲ್ಪಿಯಿದ್ದನು. ಈ ಪ್ರಾಣಧರನೇ ಹಿಂದೆ ಹೇಳಿದ ದೊಡ್ಡ ವಿಮಾನಯಂತ್ರವನ್ನು ನಿರ್ಮಿಸಿದ ಪ್ರಾಣಧರನು. ಇವರಿಬ್ಬರೂ ಮಯಶಾಸ್ತ್ರಪಾರಂಗತರಿದ್ದರು.

ತಸ್ಯ ರಾಷ್ಟ್ರೇ ನೃಪಸ್ಯಾತಾಂ ತಕ್ಷಣೌ
ಭ್ರಾತರಾವುಭೌ ।
ಮಯಪ್ರಣೀತ ದಾರ್ವಾದಿ
ಮಯಾತಂತ್ರವಿಚಕ್ಷಣಾ ॥


ಧರ್ಮರಾಜನ ಮಹಾಸಭೆಯನ್ನು ನಿರ್ಮಿಸಿದ್ದು, ಅದನ್ನು ಒಂದು ಸ್ಥಳದಿಂದ ಅವನ ರಾಜಧಾನಿ ಸ್ಥಾನಕ್ಕೆ ಒಯ್ದದ್ದೂ ಮಯನ ಆಶ್ಚರ್ಯಕಾರಕ ಕೃತಿಗಳಲ್ಲಿ ಒಂದಾಗಿರುವದು. ಈ ಕಾಲದಲ್ಲಿ ಇಟ್ಟಿಗೆಗಳಿಂದ ಕಟ್ಟಿದ ಮನೆಗಳನ್ನು ಕಿತ್ತಿ ಬೇರೆ ಸ್ಥಳದಲ್ಲಿ ಸ್ಥಾಪಿಸುವದಕ್ಕಾಗಿ ನಿರ್ಮಿಸಲ್ಪಟ್ಟ ಯಂತ್ರದಂತೆ (Hydraulic Machine) ಒಂದು ಪ್ರಕಾರದ ಯಂತ್ರವನ್ನು ಮಾಡಿ ಅದರ ಸಹಾಯದಿಂದ ಮಯನು ಸಭಾಗೃಹವನ್ನು ಸ್ಥಾನಾಂತರಕ್ಕೆ ಒಯ್ಯುವ ಸಂಭವ ಉಂಟೆಂದು ತೋರುತ್ತದೆ.

ಈ ಎಲ್ಲ ವಿವರಣೆಯಿಂದ ಮಯನು ಯಂತ್ರಶಾಸ್ತ್ರದ ಪ್ರವರ್ತಕನೆಂದು ತಿಳಿದು ಬರುತ್ತದೆ. ಇವನಿಗೆ ಪೌರ್ವಾತ್ಯ ಜಗತ್ತಿನ ಎಡಿಸನ್ ಎಂದು ಹೇಳಬಹುದು.

ಇಂತು ಯಂತ್ರಶಾಸ್ತ್ರದಲ್ಲಿ ಪಾರೀಣತೆಯನ್ನು ಹೊಂದಿದ ಭರತಖಂಡವನ್ನು ಘೋರವಾದ ಅಜ್ಞಾನಾಂಧಕಾರದಲ್ಲಿ ಕೆಡಹಿದ ಕಾಲಪುರುಷನ ಮಹಿಮೆಯು ಅದ್ಭುತವಾದದ್ದು.

"ಕಾಲಾಯ ತಸ್ಮೈ ನಮಃ"

('ಕಸ್ತೂರಿ'ಗಾಗಿ ಸಂಗ್ರಹ: ಡಾ. ಶ್ರೀನಿವಾಸ ಹಾವನೂರ)





ಸಂಸಾರ

ಈಶ್ವರಚಂದ್ರ

ಸಂಸಾರ ಕೋಳಿ ಕೂಗುವ ಮೊದಲೇ ಎದ್ದು ಲಾಯಕ್ಕೆ ಬಂದ. ಕುದುರೆಗೆ ಹುಲ್ಲು ಹಾಕಬೇಕು, ನೀರು ಕುಡಿಸಬೇಕು, ಬೆನ್ನು ನೀವಬೇಕು, ಬಾಲ ತುರಿಸಬೇಕು ಎಂದು ಅವನ ಕೈ ಚಡಪಡಿಸುತ್ತಿತ್ತು. ಆದರೆ ಲಾಯದಲ್ಲಿ ಕುದುರೆ ಇರಲಿಲ್ಲ. ಇಷ್ಟು ಮುಂಜಾವಿನಲ್ಲಿ ಎಲ್ಲಿ ಹೋಯಿತು, ಯಾರು ಬಿಟ್ಟು ಕೊಂಡು ಹೋದರು ಅಥವಾ ಕಳ್ಳರು ಹೊಡೆದು ಕೊಂಡು ಹೋದರೋ ಎಂದು ಅವನಿಗೆ ಒಂದು ಕ್ಷಣ ಯೋಚನೆಯಾಯಿತು. ಅವನಿಗೆ ಉತ್ತರ ಕೊಡುವವರು ಯಾರೂ ಇರಲಿಲ್ಲ. ಲಾಯ ಖಾಲಿ ಯಾಗಿತ್ತು. ಕುದುರೆಯು ಮೆಲುಕಾಟದ ಶಬ್ದ ವಾಗಲಿ ಮುಸುಗ್ಗರೆಯುವ ಉಸಿರಾಟವಾಗಲಿ ಕೇಳಿಸಲಿಲ್ಲ. ವೀರು ಎಂದು ಕೂಗಿದ. ಎಲ್ಲಿಂದಲೂ ಪ್ರತಿಕ್ರಿಯೆ ಬರಲಿಲ್ಲ. ಏನಾಗಿರಬಹುದು ಎಂದು ಕೊಂಡು ಕಳ್ಳರು ಒಯ್ದಿದ್ದರೆ ನಾಯಿ ಏಕೆ ಬೊಗಳ ಲಿಲ್ಲ ಎಂದು ಯೋಚಿಸುತ್ತಾ ಅದನ್ನು ಕಟ್ಟಿಹಾಕಿದ್ದ ಜಾಗಕ್ಕೆ ಬಂದ. ಅಲ್ಲಿ ಸರಪಳಿ ಮಾತ್ರ ಇತ್ತು. ಸತ್ಯೂ ಎಂದು ಕೂಗಿದ. ಕುರೋ ಕುರೋ ಎಂದ. ಬಾಲ ಗುಂಡಾಡಿಸುತ್ತ ಓಡಿಬರಬೇಕಾಗಿದ್ದ ನಾಯಿ ಪತ್ತೆಯೇ ಇಲ್ಲ. ವೀರು ಜೊತೆಗೆ ಇದೂ ಎಲ್ಲಿ ಪಾಲಾಗಿ ಹೋಯಿತೋ ಎಂದುಕೊಳ್ಳುತ್ತಾ ಕೆಮ್ಮಿ, ಕಫ ಉಗುಳಿ ಪಾರಿವಾಳದ ಗೂಡಿಗೆ ಕೈ ಹಾಕಿದ. ಹಿಕ್ಕೆ ಕೈಗೆ ಅಂಟಿಕೊಂಡಿತು. ಥೂ ಇದರ ಎಂದು ಖಾಲಿಗೂಡಿನಲ್ಲಿ ಕೈ ಆಡಿಸಿ ಖಾಲಿ ಕೈ ಹೊರತೆಗೆದ. ನುಗ್ಗೀ ಮರ, ಪೇರಲ ಮರದ ಕಡೆಗೆ ಕಣ್ಣಾಡಿಸಿ ಮಸುಕು ಬೆಳಕಿನಲ್ಲಿ ಶಾಂತಿ ಕಂಡೀತೇನೋ ಎಂದು ಕಣ್ಣಗಲಿಸಿ ನೋಡಿ, ಶಾಂತೀ ಎಂದು ಕೂಗು ಹಾಕಿದ. ಪ್ರತಿಧ್ವನಿಯೂ ಬರಲಿಲ್ಲ.

ಸಂಸಾರನಿಗೆ ಬಹಳ ಬೇಸರವಾಯಿತು. ಬೆಳಗ್ಗೆ ಎದ್ದ ಕೂಡಲೇ ವೀರುಗೆ ಹುಲ್ಲು–ನೀರು ಕೊಟ್ಟು, ಸತ್ಯೂ ಬೆನ್ನು ತುರಿಸಿ, ಶಾಂತಿಗೆ ನೀರು ಕುಡಿಸಿ ಹಾರಿ ಬಿಡುವುದು ಅವನ ಅಭ್ಯಾಸ. ಈಗ ಒಂದೇ ಸಲ ಮೂರೂ ನಾಪತ್ತೆ. ಎಲ್ಲೋ ಓಡಿಹೋಗಿವೆ, ಅವು ದೂರ ಹೋಗುವುದರಲ್ಲಿ ಹುಡುಕಿಕೊಂಡು ಬರಬೇಕು ಎಂದು ಸಂಸಾರ ನಿರ್ಧರಿಸಿದವನೆ ಒಳಗೆ ಹೋಗಿ ಒಂದು ಚೀಲದಲ್ಲಿ ನಾಲ್ಕು ರೊಟ್ಟಿ ಹಾಕಿ ಕೊಂಡು ಊರುಗೋಲು ತೆಗೆದುಕೊಂಡು, ಎಕ್ಕಡ ಮೆಟ್ಟಿ ಹೊರಗೆ ಹೊರಟ. ಕುದುರೆ ಹೆಜ್ಜೆಗಾಗಿ ಧೂಳು ನೆಲದಲ್ಲಿ ಹುಡುಕಬಹುದು; ನಾಯಿ ಹೆಜ್ಜೆಯೂ ಕಾಣಬಹುದು. ಆದರೆ ಪಾರಿವಾಳದ ರೆಕ್ಕೆ ಬೀಸನ್ನು ಆಕಾಶದಲ್ಲಿ ಗುರುತಿಸುವುದು ಹೇಗೆ?

ಆದೀಗ ಬೆಳಕು ಹರಿಯತೊಡಗಿತ್ತು. ಸಸಾರ ಒಂದು ದಿಕ್ಕು ಹಿಡಿದು ಕೋಲು ಊರುತ್ತಾ ಹೆಜ್ಜೆ ಹಾಕತೊಡಗಿದ. ಸೂರ್ಯ ಎರಡಾಳು ಮೇಲೇರುವ ಹೊತ್ತಿಗೆಲ್ಲಾ ಒಂದು ಚಿಕ್ಕ ಊರು ಸಿಕ್ಕಿತು. ಅದರ ಹೆಸರು ಏನೆಂದು ಅವನಿಗೆ ಗೊತ್ತಿರಲಿಲ್ಲ. ಏಕೆಂದರೆ ಅವನು ತನ್ನ ಎಪ್ಪತ್ತು ವರ್ಷದ ಜೀವನದಲ್ಲಿ ಒಂದು ಸಲವೂ ತನ್ನ ಊರು ಬಿಟ್ಟು ಹೊರಗೆ ಹೊರಟವನಲ್ಲ.

ಆ ಊರಿನಲ್ಲಿ ಆಗ ತಾನೆ ಚಟುವಟಿಕೆ ಪ್ರಾರಂಭವಾಗಿತ್ತು. ರಸ್ತೆಯಲ್ಲಿ ಜನ ಓಡಾಡುತ್ತಿದ್ದರು. ಗುಡಿಸಲ ಮುಂದೆ ಹಲ್ಲುಜ್ಜಿ ಬಾಯಿ ಮುಕ್ಕಳಿಸಿ ಉಗುಳುತ್ತಿದ್ದರು. ಸಸಾರ ಯಾರನ್ನಾದರೂ ಕೇಳಬೇಕು ಎಂದು ಸುತ್ತಲೂ ನೋಡಿದ. ಯಾರೂ ಅವನನ್ನು ಗಮನಿಸಿದಂತೆ ಕಾಣಲಿಲ್ಲ. ಸಸಾರ ಒಬ್ಬನ ಹತ್ತಿರ ಹೋಗಿ, ಒಂದು ಕುದುರೆ ನೋಡಿದ್ರಾ? ಎಂದ. ಅವನು ಬಾಯಿ ಮುಕ್ಕಳಿಸುತ್ತಲೇ ಇದ್ದ. ಸಸಾರ ಮತ್ತೂ ಹೇಳಿದ: ಹಣೆ ಚಿಕ್ಕಿ ಹೂಬಾಲದ ಕುದುರೆ. ಕರೀ ಕುದುರೆ. ಒಳ್ಳೆ ಎತ್ತರವಾಗಿತ್ತು. ನಿನ್ನೆ ರಾತ್ರಿ ಎಲ್ಲೋ ಮನೆಯಿಂದ ಓಡಿಹೋಗಿದೆ. ಈ ಕಡೆ ಏನಾದ್ರೂ ಬಂದಿತ್ತಾ? ನೀವೇನಾದ್ರೂ ನೋಡಿದ್ರಾ? ಬಾಯಿ ಮುಕ್ಕಳಿಸುತ್ತಿದ್ದ ಮನುಷ್ಯ ಉಗುಳಿ ಕರೀ ಹಲ್ಲು ಪ್ರದರ್ಶಿಸಿ ಏನು ಎನ್ನುವಂತೆ ನೋಡಿದ. ಅವನಿಗೆ ಸಸಾರನ ಮಾತು ಅರ್ಥವಾದಂತೆ ಕಾಣಲಿಲ್ಲ. ಸಸಾರನಿಗೂ ಹಾಗೇ ಅನ್ನಿಸಿತು. ಮತ್ತೆ ಎಲ್ಲ ಹೇಳಿದ. ಆ ಮನುಷ್ಯ ಅದಕ್ಕೆ ಏನೋ ಹೇಳಿದ. ಆದರೆ ಆ ಭಾಷೆ ಸಸಾರನಿಗೆ ಅರ್ಥವಾಗಲಿಲ್ಲ. ಆ ಮನುಷ್ಯ ಒಂದೇ ಸಮನೆ ಏನೋ ಹೇಳಿ ಕೊನೆಗೆ ಇನ್ನೊಬ್ಬನ ಹತ್ತಿರ ಕಳಿಸಿದ. ಅವನೂ ಎಲ್ಲ ಕೇಳಿ ಏನೋ ಹೇಳಿದ. ಸಸಾರನಿಗೆ ಮತ್ತೆ ಅರ್ಥವಾಗಲಿಲ್ಲ. ಇಬ್ಬರೂ ಭಾಷೆಯನ್ನು ಬಿಟ್ಟು ಅಭಿನಯಕ್ಕೆ ಇಳಿದರು. ಸಸಾರ, ಕುದುರೆ ಎಂದು ಅಂಗಿಕಾಭಿನಯದಿಂದ ವಿವರಿಸುತ್ತಿದ್ದರೆ ಹಳ್ಳಿಯ ಮನುಷ್ಯ ಹಸು ಎಂದು ಅರ್ಥಮಾಡಿಕೊಳ್ಳುತ್ತಿದ್ದ. ಕೊಂಬು ಇಲ್ಲದ ಪ್ರಾಣಿ ಎಂದಾಗ ಕತ್ತೆ ಎಂದೂ ಅಂದುಕೊಂಡ. ಕೊನೆಗೆ ಏನೂ ಬಗೆಹರಿಯಲಿಲ್ಲ. ಸಸಾರ ನಿರಾಶೆಯಿಂದ ಕೈ ಚೆಲ್ಲಿ ಮುಂದೆ ಹೋದ. ಅವನಿಗೆ ಕುದುರೆ ಹೋದ ದಿಕ್ಕು ಬೇಕಾಗಿತ್ತು. ಆರಂಭದಲ್ಲೇ ದಿಕ್ಕಿನ ಆಯ್ಕೆಯಲ್ಲಿ ತಪ್ಪು ಮಾಡಿಬಿಟ್ಟರೆ ಮುಂದೆಲ್ಲಾ ತಪ್ಪುಗಳೇ.

ಸ್ವಲ್ಪ ದೂರಕ್ಕೆಲ್ಲಾ ಇನ್ನೊಂದು ಹಳ್ಳಿ ಸಿಕ್ಕಿತು. ಸಸಾರನಿಗೆ ಸ್ವಲ್ಪ ಸಂತೋಷವಾಯಿತು. ಇಲ್ಲಾದರೂ ತನಗೆ ಬೇಕಾದ ಮಾಹಿತಿ ಸಿಗಬಹುದು ಎಂದುಕೊಂಡು ಸಸಾರ ಆ ಹಳ್ಳಿಯ ಬೀದಿಗಳಲ್ಲಿ ಉತ್ಸಾಹದಿಂದ ಹೆಜ್ಜೆ ಹಾಕತೊಡಗಿದ.

ಸ್ವಲ್ಪ ಹೊತ್ತಿನಲ್ಲೇ ಅವನು ನಿರಾಶೆಯನ್ನು ಎದುರಿಸಬೇಕಾಯಿತು. ಬಿಟ್ಟು ಹೋದ ಊರಿನಂತೆ ಆ ಹಳ್ಳಿ ಕಾಣಿಸುತ್ತಿತ್ತು. ಬೀದಿಯಲ್ಲಿ ಜನಗಳೇ ಓಡಾಡುತ್ತಿರಲಿಲ್ಲ. ಎಲ್ಲ ಮನೆಯ ಬಾಗಿಲುಗಳೂ ಮುಚ್ಚಿದ್ದವು. ಒಳಗೂ ಜನ ಜೀವಿಸುವ ಸೂಚನೆ ಕಾಣಲಿಲ್ಲ. ಎಲ್ಲಾದರೊಂದು ಚೂರು ಜೀವ ಸಂಚಾರ ಇದೆಯೇನೋ ಎಂದು ಸಸಾರ ಊರಲ್ಲೆಲ್ಲಾ ಅಡ್ಡಾಡಿದ. ಆ ಸತ್ತ ಹಳ್ಳಿಯ ರಾವುಗಟ್ಟಿದ ವಾತಾವರಣ ಅವನಿಗೆ ಉಸಿರು ಕಟ್ಟಿಸಿತು. ಒಳಗೇ ಸಣ್ಣಗೆ ಭೀತಿ ಕವರುತ್ತಾ, ಸಸಾರನ ಹೆಜ್ಜೆಗಳು ಅಸ್ಥಿರವಾಗತೊಡಗಿದವು. ಈ ಮಧ್ಯೆ, ಬೀದಿಗಳನ್ನು ಪ್ರವೇಶಿಸುತ್ತಿದ್ದಂತೆಯೇ ಯಾರೋ ತಿರುವುಗಳಲ್ಲಿ ಮರೆಯಾಗುತ್ತಿರುವಂತನಿಸತೊಡಗಿತು. ಅಲ್ಲದೆ ಮನೆಗಳ ಅರೆತೆರೆದ ಕಿಟಿಕಿಗಳಿಂದ ಯಾರೋ ಗುಟ್ಟಾಗಿ ಅವನ ಚಲನವಲನಗಳನ್ನೇ ದಿಟ್ಟಿಸುತ್ತಿರುವಂತೆ ಗುಮಾನಿ ಬರತೊಡಗಿತು. ಯಾರೋ ತನ್ನನ್ನು ಹಿಡಿದು ಹಾಕಲು ಸನ್ನಾಹ ಮಾಡುತ್ತಿದ್ದಾರೆ ಎಂದು ಅನುಮಾನವಾಗಿ ಇಲ್ಲಿಂದ ಆದಷ್ಟು ಬೇಗ ತಪ್ಪಿಸಿಕೊಂಡು ಹೋಗಬೇಕೆಂದು ಚಡಪಡಿಸುತ್ತಾ ದಾಪುಗಾಲು ಹಾಕತೊಡಗಿದ. ರಸ್ತೆಗಳು ಮುಗಿಯದೆ ತಿರುತಿರುಗಿ ಊರೊಳಗೇ ಸುರುಳಿಕೊಳ್ಳುತ್ತಾ ದಿಗ್ಭ್ರಮೆಗೊಂಡ. ಓಡಿ ಓಡಿ ಕೊನೆಗೆ ಊರ ಹೊರಗೆ ಬಂದು ಏದುಸಿರು ಬಿಡುತ್ತಾ ಒಂದು ಕಲ್ಲಿನ ಮೇಲೆ ಕೂತು ಸ್ವಲ್ಪ ಸುಧಾರಿಸಿಕೊಂಡ. ಏನು ವಿಚಿತ್ರದ ಊರು ಎಂದುಕೊಂಡು ತಿರುಗಿ ನೋಡಿದ. ಊರಿರಲಿಲ್ಲ.

ಸಸಾರ ಓಡತೊಡಗಿದ. ಮುದಿ ಕಾಲುಗಳು ಅವನ ಮನಸ್ಸಿನ ವೇಗದಲ್ಲಿ ತೊಡರು ಹಾಕಿಕೊಳ್ಳುತ್ತಿದ್ದವು. ಓಡಿಓಡಿ ಒಂದು ಬಾವಿಯ ಹತ್ತಿರ ಬಂದ. ಹಿಂದೆ ಯಾವಾಗಲೋ ಅಲ್ಲಿ ಊರಿದ್ದ ನೆನಪಿಗೆ ಗುರುತಾಗಿ ಹಾಳು ನೆಲಬಾವಿ ಅಲ್ಲಿ ಬಾಯಿ ಬಿಟ್ಟುಕೊಂಡಿತ್ತು. ಮೆಲ್ಲಗೆ ಒಳಗೆ ಇಳಿದು ಮಟ್ಟಿ

ಯಲ್ಲಿ ಸೋಸಿಕೊಂಡು ನೀರು ಕುಡಿದ. ಹತ್ತಿರ ದಲ್ಲೇ ನೇರಳೆ ಹಣ್ಣುಗಳು ಬಿದ್ದಿದ್ದವು. ಆರಿಸಿಕೊಂಡು ತಿಂದ. ಮರದ ಕೆಳಗೇ ಪಂಚೆ ಹಾಸಿಕೊಂಡು ಚೀಲ ತಲೆದಿಂಬಾಗಿಟ್ಟುಕೊಂಡು ಮಲಗಿಬಿಟ್ಟ. ನಿದ್ದೆ ಚೆನ್ನಾಗಿ ಬಂತು.

ತಲೆಯ ಹತ್ತಿರ ಒಂದು ಮರಕುಟಿಗ ಹಕ್ಕಿ ಜೋರಾಗಿ ಕೂಗಿದ್ದರಿಂದ ಸಸಾರನಿಗೆ ಥಟ್ಟನೆ ಎಚ್ಚರ ವಾಯಿತು. ಆಗಲೇ ಸಂಜೆಯಾಗಿತ್ತು. ಎಷ್ಟು ಹೊತ್ತು ಮಲಗಿಬಿಟ್ಟೆ ಎಂದು ಬೈದುಕೊಳ್ಳುತ್ತಾ ಎದ್ದು ಸಸಾರ ಬಟ್ಟೆಕೊಡವಿ ಲಗುಬಗೆಯಿಂದ ಚೀಲದಲ್ಲಿ ತುಂಬಿಕೊಂಡು ಒಂದು ಕಾಲುದಾರಿ ಹಿಡಿದು ನಡೆಯತೊಡಗಿದ. ಕತ್ತಲಾಗುವುದ ರೊಳಗೆ ಒಂದು ಊರು ಸೇರಿಕೊಳ್ಳಬೇಕು ಎಂದು ಅವನ ಮನಸ್ಸು ತಪತಪಿಸತೊಡಗಿತು. ಅದಕ್ಕೆ ಸರಿಯಾಗಿ ದೂರದಲ್ಲಿ ಮಂಕುದೀಪಗಳು ಗುಂಪಾಗಿ ಕಾಣಿಸಿಕೊಂಡವು. ಸಸಾರ ಆಸೆಯಿಂದ ಆ ಕಡೆಗೇ ಬೇಗ ಬೇಗ ನಡೆಯತೊಡಗಿದ.

ಈ ಊರು ತನ್ನ ಊರಿನ ಹಾಗೇ ಆತ್ಮೀಯ ವಾಗಿ ಕಂಡಿತು. ಜನಗಳೂ ಆಪ್ತರಾಗಿ ಕಂಡರು. ಒಂದಿಬ್ಬರು ವಿಶ್ವಾಸದಿಂದ ಮಾತಾಡಿಸಿದರು. ಸಸಾ ರನ ಕುದುರೆ, ನಾಯಿ, ಪಾರಿವಾಳದ ಕಥೆ ಕೇಳಿದರು. ತಾವು ಅವನ್ನು ಕಂಡಿಲ್ಲ, ಆದರೆ ಕಂಡವರು ಯಾರಾ ದರೂ ನಮ್ಮ ಊರಿನಲ್ಲಿ ಇರಬಹುದು, ಬನ್ನಿ ಕೇಳೋಣ ಎಂದು ಕರೆದುಕೊಂಡು ಮನೆ ಮನೆಗೆ ಹೋದರು. ಬರುಬರುತ್ತಾ ಸಸಾರನ ಹಿಂದೆ ಒಂದು ದೊಡ್ಡ ಗುಂಪೇ ಆಯಿತು. ಅವರಲ್ಲಿ ಯಾರಿಗೂ ಸಸಾರನ ಪ್ರೀತಿಯ ಪ್ರಾಣಿಗಳ ಬಗೆಗೆ ಗೊತ್ತಿರ ಲಿಲ್ಲ. ಆದರೆ ಹೇಗಾದರೂ ಮಾಡಿ ಅವನಿಗೆ ಸಹಾಯ ಮಾಡಬೇಕು ಎಂಬ ತೀವ್ರವಾದ ಅನು ಕಂಪ ಉಳ್ಳವರಾಗಿದ್ದರು. ಇಡೀ ಊರಿನಲ್ಲಿ ಸಸಾ



ರನಿಗೆ ಬೇಕಾದ ವಿಷಯ ತಿಳಿದ ಒಬ್ಬ ಮನುಷ್ಯ ಇದ್ದ. ಆದರೆ ಅವನು ಕುರುಡ. ಊರ ಮುಂದೆ ಗುಡಿಯ ಕಟ್ಟೆಯ ಮೇಲೆ ಅವನು ಬೆಳಗ್ಗೆ ಕೂತಿದ್ದಾಗ ಇದ್ದಕ್ಕಿದ್ದ ಹಾಗೇ ಎಲ್ಲಿಂದಲೋ ಕುದುರೆಯ ಹೆಜ್ಜೆಯ ಸದ್ದು ಕೇಳಿತು. ತಮ್ಮ ಊರಿಗೆ ಕುದುರೆ ಏರಿ ಬರುವವರು ಯಾರು ಎಂದು ಅವನು ಯೋಚಿಸುವಷ್ಟರಲ್ಲೇ ಕುದುರೆ ಅವನೆದುರಿಗೆ ದೌಡಾಯಿಸಿ ಹೋಯಿತು. ಅದು ಒಂದು ಆಶ್ಚರ್ಯದ ಘಟನೆಯಾಗಿದ್ದರೂ ದಿನದ ಕೊನೆಯ ಹೊತ್ತಿಗೆ ಮರೆತೇ ಹೋಯಿತು. ಈಗ ವಿಚಾರಿಸಿದ ಮೇಲೆ ನೆನಪಾಯಿತು ಎಂದು ಕುರುಡ ವಿವರಿಸಿದ. ಅವನು ಖುರಪುಟದ ಜೊತೆಗೆ ನಾಯಿಯ ಬೊಗಳಾಟವನ್ನಾದರೂ ಕೇಳಿದ್ದನೇ, ಪಾರಿವಾಳದ ರೆಕ್ಕೆಯ 'ರಿವ್ವ'ನ್ನು ಆಲಿಸಿದ್ದನೆ? ಕುರುಡನಿಗೆ ಅದು ಏನೂ ಕೇಳಿರಲಿಲ್ಲ. ಇದಕ್ಕಿಂತಲೂ ಹೆಚ್ಚಿಗೆ ನೆರವಾಗಲು ಸಾಧ್ಯವಾಗಲಿಲ್ಲವಲ್ಲ ಎಂದು ಕುರುಡ ದುಃಖಿಸಿದ. ಸಸಾರನೇ ಅವನನ್ನು ಸಮಾಧಾನ ಮಾಡಬೇಕಾಯಿತು. ಅನಂತರ ಕುರುಡ ಯಾವ ದಿಕ್ಕಿಗೆ ಮುಖ ಮಾಡಿ ಕುಳಿತಿದ್ದ, ಸದ್ದು ಯಾವ ಕಡೆಯಿಂದ ಬಂದು ಯಾವ ಕಡೆಗೆ ಹೋಯಿತು ಎಂದು ವಿಚಾರಿಸಲಾಗಿ, ಕುರುಡ ತನಗೆ ದಿಕ್ಕೆಲ್ಲಿ ಗೊತ್ತು ದೇವರೇ ಎಂದ. ಅವನನ್ನು ಗುಡಿಗೇ ಕರೆದುಕೊಂಡು ಹೋಗಿ ಅವನು ದಿನಾ ಕೂಡುವ ಕಡೆಯಲ್ಲಿ ಕೂಡಿಸಿ, ಕುದುರೆಯ ಹೆಜ್ಜೆಯ ಸದ್ದು ಮಾಡಿ ದಿಕ್ಕು ನಿರ್ಣಯ ಮಾಡಲಾಯಿತು. ನಾಲ್ಕು ಜನ ಉತ್ಸಾಹಿಗಳು ಸಸಾರನೊಡನೆ . ಅದನ್ನು ಹುಡುಕಹೊರಡಲು ಆಗಲೇ ಮುಂದಾದರು. ಸಸಾರ ಬಲವಂತದಿಂದ ಅವರನ್ನು ತಡೆದು, ಆ ದಿನ ಅಲ್ಲೇ ತಂಗಿ, ಅವರಿತ್ತ ಆತಿಥ್ಯ ಸ್ವೀಕರಿಸಿ ಮರು ದಿನ ಬೆಳಗ್ಗೆ ಅವರು ಕಟ್ಟಿಕೊಟ್ಟ ಬುತ್ತಿ ಹಿಡಿದುಕೊಂಡು ಕುದುರೆ ನಡೆದ ದಾರಿ ತುಳಿಯತೊಡಗಿದ.

ಮೂರು ಹಗಲು ಮೂರು ರಾತ್ರಿ ಪ್ರಯಾಣ ಮಾಡಿದ ಮೇಲೆ ಇನ್ನೊಂದು ಸಣ್ಣ ಊರು ಸಿಕ್ಕಿತು. ಅದನ್ನು ಸೇರುವವರೆಗೂ ದಾರಿಯುದ್ದಕ್ಕೂ ಎಲ್ಲೂ ಕುದುರೆಯ ಸುಳುವು ಕಾಣಲಿಲ್ಲ. ಸಣ್ಣ ಊರಿನ ಜನ ಸಸಾರನನ್ನು ಸಂತೋಷದಿಂದ ಸ್ವಾಗತಿಸಿದರು. ಅವನಿಗೆ ಅಲ್ಲೊಂದು ಆಶ್ಚರ್ಯ ಕಾದಿತ್ತು. ಆ ಊರಿನಲ್ಲಿ ಎಲ್ಲರೂ ಮುದುಕರೇ– ಮುದುಕಿಯರೇ. ತರುಣರು, ಮಕ್ಕಳು ಎನ್ನುವವರು ಯಾರೂ ಇರಲಿಲ್ಲ. ತನ್ನನ್ನು ಸಂತೋಷದಿಂದ ಅವರು ಸ್ವಾಗತಿಸಿದ್ದಕ್ಕೆ ತಾನೂ ಅವರಂತೆ ಮುದುಕ ಎನ್ನುವುದೇ ಕಾರಣವಿರಬೇಕು ಎಂದು ಸಸಾರ ಶಂಕಿಸಿದ. ಇದು ಮುದುಕರೂರು ಹೇಗಾಯಿತು ಎಂದು ಪ್ರಶ್ನಿಸಿದಾಗ ಅವರ ಕಣ್ಣುಗಳು ತೇವವಾದವು. ತರುಣ ತರುಣಿಯರೆಲ್ಲಾ ಯುದ್ಧಕ್ಕೆ ಹೋದರು. ಮಕ್ಕಳು ರೋಗ ಬಂದು ಸತ್ತರು. ಉಳಿದವರು ತಾವು ಮುದಿ ಗೊಡ್ಡುಗಳು ಎಂದರು. ಮತ್ತೆ ಅವರ ಕಣ್ಣುಗಳು ಹನಿಗೂಡಿದವು. ತಮ್ಮಲ್ಲಿ ದಿನಾ ಒಬ್ಬರು ಸಾಯುತ್ತಿದ್ದಾರೆಂದೂ, ದಿನಾ ಒಬ್ಬರ ಸಂಸ್ಕಾರ ಮಾಡುತ್ತಿರುವುದಾಗಿಯೂ ತಿಳಿಸಿದರು. ಇದೇ ವೇಗದಲ್ಲಿ ಸಾಗಿದರೆ ಇನ್ನು ಒಂದು ವರ್ಷದಲ್ಲಿ ಊರು ಖಾಲಿಯಾಗುತ್ತದೆಂದು ಅಳಲು ತೋಡಿಕೊಂಡರು. ಅದನ್ನು ನಿವಾರಿಸಲು ಸಸಾರನ ಬಳಿ ಏನಾದರೂ ಉಪಾಯವಿದೆಯೆ? ಸಸಾರ ಇಂಥ ಸಮಸ್ಯೆಯನ್ನು ಎಂದೂ ಎದುರಿಸಿದವನಲ್ಲ. ಅವನಿಗೆ ಉತ್ತರ ಹೊಳೆಯಲಿಲ್ಲ. ತನ್ನ ಅಸಹಾಯಕತೆಯನ್ನು ವಿನಮ್ರವಾಗಿ ವಿನಂತಿಸಿಕೊಂಡ. ಪರಿಹಾರ ಹೊಳೆಯದಿದ್ದರೆ ಹೋಗಲಿ. ತಮ್ಮ ನಡುವೆ ಒಬ್ಬನಾಗಿ ಉಳಿದು ಸಮಾಧಾನವನ್ನಾದರೂ ಹೇಳಿ ಎಂದು ಕೇಳಿಕೊಂಡರು. ಆ ಮಾತು ಭಯ ಹುಟ್ಟಿಸಿತು. ದಿನಾ ಒಬ್ಬರು ಸಾಯುವ ಊರು. ಯೌವನವೇ ಇಲ್ಲದ ಊರು. ಮೃತ್ಯು ದತ್ತು ತೆಗೆದುಕೊಂಡ ಊರು. ತಾನು ಅಲ್ಲಿದ್ದರೆ ಒಂದು ದಿನ, ವರ್ಷ ಕಳೆಯುವುದರಲ್ಲಿ ಒಂದು ದಿನ, ಸಾವು ಕಟ್ಟಿಟ್ಟದ್ದು ಅಥವಾ ಅದು ಕೊನೆಗೇ ಬಂದರೂ ದಿನಾ ಒಂದು ಸಾವನ್ನು ನೋಡಬೇಕಲ್ಲ? ಏನು ಹೇಳಬೇಕೆಂದು ಸಸಾರ ಯೋಚಿಸುತ್ತಾ ನಿಂತ. ಅವರ ದೀನ ಮುಖಗಳನ್ನು ನೋಡಿದರೆ, ವ್ಯಾಕುಲ ತುಂಬಿದ ಕಣ್ಣುಗಳನ್ನು ನೋಡಿದರೆ ಅಲ್ಲೇ ಉಳಿದುಬಿಡಲೇ ಅನ್ನಿಸುತ್ತಿತ್ತು. ಆದರೆ ಅದೂ ಸಾಧ್ಯವಾಗುವಂತಿರಲಿಲ್ಲ. ತಾನು ಕಣ್ಮರೆಯಾದ ತನ್ನ ಪ್ರೀತಿಯ ಸಾಕು ಪ್ರಾಣಿಗಳನ್ನು ಹುಡುಕಿಕೊಂಡು ಬಂದಿರುವುದನ್ನು ತಿಳಿಸಿ ಅವನ್ನು ಹುಡುಕುವುದು ತನ್ನ ಸದ್ಯದ ಕೆಲಸ ಎಂದು ಸ್ಪಷ್ಟಪಡಿಸಿದ. ಅವನ್ನೇನಾದರೂ ಅವರು ನೋಡಿದ್ದಾರೆಯೆ? ಇಬ್ಬರು ಮುದುಕರು

ನೋಡಿದ್ದರು. ಒಂದು ದಿನ ಸಂಜೆ ಅವರು ಅರಳೀ ಕಟ್ಟೆಯ ಮೇಲೆ ಹುಲಿ–ಕುರಿ ಆಡುತ್ತಾ ಕುಳಿತ್ತಿದ್ದರು. ಆಗ ಎಲ್ಲಿಂದಲೋ ರೆಕ್ಕೆ ಬೀಸುವ ಸದ್ದು ಕೇಳಿಸಿತು. ಇಬ್ಬರೂ ತಲೆ ಎತ್ತಿ ಆಕಾಶ ನೋಡಿದರು. ಒಂದು ಸುಂದರವಾದ ಬಿಳೀ ಪಾರಿವಾಳ ರೆಕ್ಕೆ ಬೀಸುತ್ತಾ ತೇಲಿ ಬರುತ್ತಿತ್ತು. ಅದು ಸದ್ದಿಲ್ಲದ ಹಾಗೆ ರೆಕ್ಕೆ ಬೀಸುತ್ತಿದ್ದರೂ ತಮ್ಮ ಕಿವಿಯಲ್ಲೆ ಬೀಸಣಿಗೆಯಿಂದ ಗಾಳಿ ಬೀಸುತ್ತಿರುವಂತೆ ಭಾಸವಾಗುತ್ತಿತ್ತು. ತಮ್ಮಂಥ ಕಿವುಡರಿಗೂ ಕೇಳಬೇಕಾದರೆ ಅದು ಎಂಥ ನಯವಾಗಿ ಬೀಸುತ್ತಿದೆಯೋ ಅನ್ನಿಸುತ್ತಾ, ಇತ್ತೀಚೆಗೆ ಇಂಥ ಚೆಲುವಾದ ಒಂದು ಜೀವಂತ ಅಥವಾ ನಿರ್ಜೀವ ವಸ್ತುವನ್ನು ತಾವು ನೋಡೇ ಇಲ್ಲವಲ್ಲ ಎಂದು ಮಾತನಾಡಿಕೊಳ್ಳುವಾಗ ಪಾರಿವಾಳ ಊರನ್ನೆಲ್ಲಾ ಒಂದು ಸುತ್ತು ಹೊಡೆದು ಮತ್ತೆ ಎಲ್ಲಲ್ಲೋ ಹಾರಿಹೋಯಿತು. ಯಾವ ಕಡೆಗೆ ಹಾರಿ ಹೋಯಿತು? ಸಸಾರ ಕಾತರನಾಗಿ ಕೇಳಿದ. ಜೋಲು ಬಿದ್ದ ಕೈಯನ್ನು ಎತ್ತಿ ಒಬ್ಬ ಮುದುಕಿ ಆಕಾಶದಲ್ಲಿ ಬೆರಳು ಕೆದರುತ್ತಾ, ಅಗೋ ಅಗೋ ಅಗೋ ಅಲ್ಲಿ ಕಾಣುತ್ತಾ ರೆಕ್ಕೆ ತೆರೆತೆರೆಯಾಗಿ ಸರಿದು ಹೋದ ಗುರುತು? ಎಂದ. ಸಸಾರ ಆ ಕಡೆ ನೋಡಿದ. ನಿಜವಾಗಲೂ ಅಲ್ಲಿ ಹತ್ತಿಯನ್ನು ಹರಡಿದಂತೆ ನವಿರಾಗಿ ಪಾರಿವಾಳದ ರೆಕ್ಕೆ ಬೀಸಿದ ಗುರುತುಗಳು ಒತ್ತೊತ್ತಾಗಿ ಹರಡಿಕೊಂಡಿದ್ದವು.

ಮದುಕರೂರು ದಾಟಿದ ಎರಡು ದಿನಕ್ಕೆ ಸಸಾರ ನಾಯಿಯ ಬೊಗಳುವಿಕೆಯಿಂದ ತುಂಬಿ ಹೋಗಿದ್ದ ಒಂದು ಊರಿಗೆ ಬಂದ. ಆ ಊರಿನ ಅರ್ಧಕ್ಕರ್ಧ ಜನ ನಾಯಿಯ ಹಾಗೆ ಬೊಗಳುತ್ತಿದ್ದರು. ಉಳಿದರ್ಧ ಜನ ತಾವೂ ಹಾಗೆ ಬೊಗಳಲು ತುಂಬ ಆಸೆಯಿಂದ ಕಾದಿದ್ದವರಂತೆ ಕಂಡರು.

ಹೌದು. ಒಂದು ಕರೀ ನಾಯಿ ಇಲ್ಲಿಗೆ ಬಂದಿತ್ತು. ಬಂದ ದಿನ ತುಂಬ ಸೌಮ್ಯವಾಗಿತ್ತು. ಎಲ್ಲರ ಮನೆಯಲ್ಲೂ ಹಾಕಿದ್ದು ತಿಂದು ಸುಖವಾಗಿ ಓಡಾಡುತ್ತಾ, ಮರದ ಕೆಳಗೆ ಮಲಗಿ ನಿದ್ದೆ ಮಾಡಿ ಕನಸು ಕಾಣುತ್ತಿತ್ತು. ಒಂದು ದಿನ ಯಾರೋ ಅದರ ಮುಖಕ್ಕೆ ಬಟ್ಟೆ ಹಾಕಿ ಹಿಡಿಯಲು ಹೋದರು.



ಕಚ್ಚಿತು. ಹೊಡೆದರು. ಮತ್ತೆ ಕಚ್ಚಿತು. ಬೆಳಗಿನಿಂದ ರಾತ್ರಿಯವರೆಗೂ ಊರಿನ ಅರ್ಧದಷ್ಟು ಜನರಿಗೆ ನಾಯಿ ಕಚ್ಚಿಬಿಟ್ಟಿತು. ಈಗ ಅವರೆಲ್ಲಾ ನಾಯಿಗಳಂತೆಯೇ ಕೂಗುತ್ತಿದ್ದಾರೆ. ಅವರ ಬಣ್ಣ ಕೂಡ ಆ ನಾಯಿಯ ಬಣ್ಣದ ಹಾಗೆ ಕಪ್ಪಾಗುತ್ತಿದೆ. ನಾಯಿ ಪರಾರಿಯಾಗಿದೆ.

ಅದು ತನ್ನ ನಾಯಿ ಎಂದು ಹೇಳುವ ಧೈರ್ಯವಾಗಲಿಲ್ಲ ಸಸಾರನಿಗೆ. ಹಾಗಾದರೆ ಸತ್ಯೂಗೆ ಹುಚ್ಚು ಹಿಡಿಯಿತೇ ಎಂದು ಯೋಚನೆಯಾಯಿತು. ಅದು ನಿಜವಾಗಿದ್ದರೆ ಈ ವೇಳೆಗೆ ಹುಚ್ಚು ಉಲ್ಬಣಿಸಿ ಅದು ಸತ್ತಿರಬೇಕು ಅಥವಾ ಒಂದು ಪಕ್ಷ ಅದು ಸಿಕ್ಕಿದರೂ ತನ್ನನ್ನೇ ಕಚ್ಚಿಬಿಟ್ಟರೆ? ಯಾರಾದರೂ ಅದನ್ನು ಕೊಲ್ಲದೆ ಬಿಟ್ಟಿರುತ್ತಾರೆಯೇ? ಕೊಲ್ಲಬೇಕಾದ ಸಂದರ್ಭ ತನಗೇ ಒದಗಿದರೆ? ತಾನು ಅನ್ನ ನೀರು ಹಾಕಿ ಬೆಳೆಸಿದ ಮುಗ್ಧ ಪ್ರಾಣಿಯನ್ನು ತಾನೇ ಕಲ್ಲಿನಿಂದ ಕೊಲ್ಲುವುದೆ? ಯೋಚನೆಗಳಿಂದ ಸಸಾರನ ತಲೆ ಬಿಸಿಯಾಯಿತು. ನಾಯಿ ಹುಚ್ಚು ಬಂದವರು ಕಚ್ಚಿದರೆ ಕಚ್ಚಿಸಿಕೊಂಡವರಿಗೂ ಹುಚ್ಚು ಎಂದು ನೆನಪಾಯಿತು. ಸಸಾರ ಸರಸರ ಊರು ಬಿಟ್ಟ. ಇನ್ನೆರಡು ಮೂರು ದಿನಗಳಲ್ಲಿ ವಾಯೂರಿನ ಚಿತ್ರ ಹೇಗಾದೀತೆಂದು ಕಲ್ಪಿಸಿಕೊಳ್ಳಲಾರದವನಾದ. ಒಬ್ಬೊಬ್ಬರಾಗಿ ಎಲ್ಲರಿಗೂ ನಾಯಿ ಹುಚ್ಚು ವ್ಯಾಪಿಸಿಕೊಂಡು ಬಿಡುತ್ತದೆಯೆ? ಎಲ್ಲರೂ ಒಂದೇ ಸಮನೆ ಬೊಗಳತೊಡಗುತ್ತಾರೆಯೆ? ನಾಯಿಯಂತೆಯೇ ಕಪ್ಪಾಗಿ ವಿಕಾರವಾಗಿ ಹೋಗುತ್ತಾರೆಯೇ ? ಅದನ್ನೆಲ್ಲಾ ಕಲ್ಪಿಸಿಕೊಳ್ಳುವ ವಿಫಲ ಪ್ರಯತ್ನದಲ್ಲಿ ಸಸಾರ ಮುಂದೆ ಪ್ರಯಾಣ ಬೆಳೆಸಿದ.

ಮರು ಹಗಲು ಒಂದು ಊರು ಸಿಕ್ಕಿತು. ಅಲ್ಲಿನ ಜನ ಬಹಳ ತರಾತುರಿಯಲ್ಲಿದ್ದರು. ಎಲ್ಲರೂ ಯಾವುದೋ ಮಹತ್ವದ ಕೆಲಸಕ್ಕೆ ಹೊರಟವರಂತೆ ಈಗಾಗಲೇ ಸಮಯ ಮೀರಿ ಹೋದಂತೆ, ಬೇಗ ಹೋಗಿ ಸೇರಬೇಕು ಎಂಬಂತೆ ಸರಪರ ಓಡಾಡುತ್ತಿದ್ದರು. ಕೆಲವರು ಯಾವುದೋ ಪರೀಕ್ಷೆಗೆ ಹೊರಟವರಂತೆ ಆತಂಕ ತುಂಬಿದವರಾಗಿದ್ದರು. ಇನ್ನು ಕೆಲವರು, ಯಾರೋ ತಮ್ಮನ್ನು ಬೆನ್ನಟ್ಟಿಕೊಂಡು ಬರುತ್ತಿರುವಂತೆಯೂ ತಾವು ಹೋಗುವವರಂತೆಯೂ ಕಂಡುಬರುತ್ತಿದ್ದರು. ಸಸಾರ ಒಂದು ರಸ್ತೆಯ ಬದಿಗೆ ಬಂದು ಒಬ್ಬೊಬ್ಬರನ್ನು ನಿಲ್ಲಿಸಲು ಪ್ರಯತ್ನಿಸಿದ. ಆದರೆ ಜನ ಅವನ ಇರುವನ್ನೂ ಗಮನಿಸದೆ ತಮ್ಮ ಪಾಡಿಗೆ ತಾವು ಹೋಗುತ್ತಿದ್ದರು. ಸಸಾರ ಕೈ ಹಿಡಿದು ನಿಲ್ಲಿಸಿದರೂ ತರಾತುರಿಯಿಂದ ಬಿಡಿಸಿಕೊಂಡು ಬೇಗ ಬೇಗ ಹೋಗುತ್ತಿದ್ದರು. ಸಸಾರ ಈ ಜನ ಪ್ರವಾಹವನ್ನು ಸುಮ್ಮನೆ ನೋಡುತ್ತಾ ನಿಂತ. ಜನ ಎಲ್ಲಿಂದಲೋ ಬರುತ್ತಲೇ ಇದ್ದರು. ಎಲ್ಲಿಗೋ ಹೋಗುತ್ತಲೇ ಇದ್ದರು. ಬರುವವರು ಎಲ್ಲಿಂದ ಬರುತ್ತಾರೆ ಎಂದು ಗೊತ್ತಾಗುತ್ತಿರಲಿಲ್ಲ. ಹೋಗುವವರು ಎಲ್ಲಿಗೆ ಹೋಗುತ್ತಾರೆ ಎಂದು ಗೊತ್ತಾಗುತ್ತಿರಲಿಲ್ಲ. ಕೆಲವು ಸಲ ನೋಡಿದರೆ ಸ್ವಲ್ಪ ಹೊತ್ತಿನ ಹಿಂದೆ ತನ್ನನ್ನು ದಾಟಿ ಹೋದವರೇ ಮತ್ತೆ ಸುತ್ತಿಕೊಂಡು ಬಂದಂತೆ ಕಾಣುತ್ತಿತ್ತು. ಮತ್ತೆ ನೋಡಿದರೆ, ಇವರು ಅವರಲ್ಲ, ಇವರೇ ಬೇರೆ ಎನ್ನುವ ಹಾಗೆ ಕಾಣುತ್ತಿತ್ತು. ಇದು ಏನು ಎಂದು ಅರ್ಥವಾಗದೆ ಸಸಾರ ದಿಗ್ಭ್ರಮೆಯಲ್ಲಿ ನಿಂತುಬಿಟ್ಟ. ಯಾವ ಮನುಷ್ಯನನ್ನು ಹಿಡಿದರೆ ಉತ್ತರ ಸಿಗಬಹುದು ಎಂದು ಜನರ ಮಧ್ಯೆ ಹುಡುಕತೊಡಗಿದ. ಕೆಲವರನ್ನು ನೋಡಿದರೆ ಇವರು ಉತ್ತರ ಕೊಡಲಾರರು ಎನ್ನಿಸುತ್ತಿತ್ತು. ಮತ್ತೆ ಕೆಲವರನ್ನು ನೋಡಿದರೆ, ಇವರಾದರೆ ಆಗಬಹುದು ಎನ್ನಿಸುತ್ತಿತ್ತು. ಆದರೆ ಅಷ್ಟರಲ್ಲಿ ಅವರು ಮುಂದೆ ಹೋಗಿಬಿಡುತ್ತಿದ್ದರು. ಈ ಸಲ ಒಂದು ಕೆಲಸ ಮಾಡಿದ. ಸ್ವಲ್ಪ ದೂರ ಇದ್ದಾಗಲೇ ಒಬ್ಬ ಆಸಾಮಿಯನ್ನು ಆರಿಸಿಕೊಂಡ. ಆತ ಹತ್ತಿರ ಬರುತ್ತಿದ್ದ ಹಾಗೇತಾನೂ ಜನ ಪ್ರವಾಹದಲ್ಲಿ ಸೇರಿಕೊಂಡು ಆತನ ಕೈ ಹಿಡಿದುಕೊಂಡ. ಆಸಾಮಿಗೆ ಆಶ್ಚರ್ಯವಾಗಲಿಲ್ಲ. ಸಹಜವ್ಯಾಪಾರವೇನೋ ಅದು ಅನ್ನುವಂತೆ ಸಸಾರನನ್ನು ಕರೆದುಕೊಂಡು ಹೊರಟ. ಅವರ ವೇಗದಲ್ಲಿ ಹೆಜ್ಜೆ ಹಾಕಲು ಸಸಾರನಿಗೆ ಕಷ್ಟವಾಗುತ್ತಿತ್ತು. ಆದರೂ ನಡೆಯುತ್ತಾ, ನೀವೆಲ್ಲಾ ಎಲ್ಲಿಗೆ ಹೊರಟಿದ್ದೀರಿ ಇಷ್ಟು ಗಡಿಬಿಡಿಯಿಂದ ಎಂದ. ಹೋಗುವ ಜಾಗಕ್ಕೆ ಎಂದು ಉತ್ತರ ಬಂತು. ಬಂದದ್ದು? ಹೊರಟ ಜಾಗದಿಂದ. ಸಸಾರನಿಗೆ ಬಗೆಹರಿಯಲಿಲ್ಲ. ಅವರ ವ್ಯವಹಾರ

ಕೊಂಡು, ನನ್ನ ದಾರಿ ನಾನು ಹಿಡಿದು ಬಿಡೋಣ ಅಷ್ಟೆ ಎಂದು ಕಥೆ ಆರಂಭಿಸಿದ. ಕಥೆಯೆಲ್ಲಾ ಕೇಳಿ ಆಸಾಮಿ ಹೇಳಿದ: "ಇದೇನು ಹೊಸ ಕಥೆಯಲ್ಲ. ಸುಮಾರು ನೂರು ವರ್ಷದ ಹಿಂದೆ ಹೀಗೇ ಒಬ್ಬ ಮುದುಕ ಈ ಊರಿಗೆ ಕುದುರೆ, ನಾಯಿ, ಪಾರಿವಾಳ ಹುಡುಕಿಕೊಂಡು ಬಂದಿದ್ದ. ಊರಿನ ಜನ ಹುಡುಕಿಕೊಟ್ಟರು. ಆದರೆ ಮುದುಕ ಜನರಿಗೆ ಮೋಸಮಾಡಿ ಅವನ್ನು ಕರೆದುಕೊಂಡು ಹೋಗಲು ಪ್ರಯತ್ನಪಟ್ಟಾಗ ಅವು ಕಲ್ಲಾಗಿಬಿಟ್ಟವು. ಗುಡೀ ಮುಂದಿನ ಕೊಳದ ಪಕ್ಕದಲ್ಲಿ ಈಗಲೂ ಅವು ಕಲ್ಲಾಗಿ ನಿಂತಿವೆ. ನೋಡು ಹೋಗಿ. "ಇಷ್ಟು ಹೇಳಿ ಆಸಾಮಿ ಕೈ ಬಿಡಿಸಿಕೊಂಡು ಮುಂದೆ ಹೋದ. ಸಸಾರ ತಬ್ಬಿಬ್ಬಾಗಿ ನಿಂತಿರುವಾಗಲೇ ಆ ಆಸಾಮಿಯ ಹಸಿರಂಗಿ ಗುಂಪಿನಲ್ಲಿ ಕರಗಿ ಕಣ್ಮರೆಯಾಯಿತು.

ಸಸಾರ ನೇರವಾಗಿ ಗುಡಿಯ ಬಳಿಗೆ ಬಂದ. ಗೋಪುರ ದೂರದಿಂದಲೇ ಕಾಣುತ್ತಿತ್ತು. ಅಲ್ಲಿಗೆ ಏರುವುದು ಅವನಿಗೆ ಕಷ್ಟವಾಗಲಿಲ್ಲ. ಆಸಾಮಿ ಹೇಳಿದ ಹಾಗೆ ಅದರ ಮುಂದೆ ಒಂದು ಕೊಳವೂ ಇತ್ತು. ಕೊಳದ ದಂಡೆಯ ಮೇಲೆ ಒಂದು ಕುದುರೆ ನಿಂತಿತ್ತು. ಪಕ್ಕದಲ್ಲಿ ಒಂದು ನಾಯಿ ಮುಖವೆತ್ತಿ ಕುದುರೆಯ ಮೇಲೆ ಕುಳಿತಿದ್ದ ಪಾರಿವಾಳವನ್ನೇ ನೋಡುತ್ತಿತ್ತು. ಸಸಾರ ಹತ್ತಿರ ಹತ್ತಿರ ಎದೆ ಧಡಗುಟ್ಟಿಸುತ್ತಾ ಬಂದ. ಅವೆಲ್ಲಾ ಚಲನೆಯಿಲ್ಲದೇ ತಟಕ್ಕನೆ ಸ್ತಬ್ಧವಾಗಿ ನಿಂತುಬಿಟ್ಟಿದ್ದವು. ಸಸಾರ ಅವುಗಳ ಮೈಯನ್ನೆಲ್ಲಾ ತಡವಿ ತಡವಿ ನೋಡಿದ. ಹೌದು. ಅನುಮಾನವೇ ಇಲ್ಲ. ಅವೆಲ್ಲಾ ಅವನ ಪ್ರಾಣಿಗಳೇ. ಹಣೆ ಚಿಕ್ಕಿ ಹೂ ಬಾಲದ ವೀರು, ಕಪ್ಪು ಸತ್ತು, ಬಿಳೀ ಶಾಂತಿ ಎಲ್ಲ ಅವನವೇ. ಆದರೆ ಆಸಾಮಿ ಹೇಳಿದ್ದ ಅವು ನೂರು ವರ್ಷದ ಹಿಂದೆ ಬಂದು ಇಲ್ಲಿ ಕಲ್ಲಾದವು ಎಂದು. ಆಸಾಮಿಯ ನೂರು ವರ್ಷಕ್ಕೂ ತನ್ನ ನೂರು ವರ್ಷಕ್ಕೂ ಏನೋ ವ್ಯತ್ಯಾಸ ಇರಬೇಕು ಎಂದು ತರ್ಕಿಸಿದ. ಆದರೆ ಇವನ್ನು ಹುಡುಕಿಕೊಂಡು ಒಬ್ಬ ಮುದುಕನೂ ಬಂದಿದ್ದ ಎಂದು ಆಸಾಮಿ ಹೇಳಿದ್ದ. ಆದರೆ ತಾನು ಇದೇ ಮೊದಲ ಸಾರಿಯಲ್ಲವೇ ಊರು



ಬಿಟ್ಟು ಬಂದಿರುವುದು?

ಸಸಾರನಿಗೆ ಎಲ್ಲ ಏಕೋ ಬಹಳ ನಿಗೂಢವಾಗು ತ್ತಿರುವಂತೆ ತೋರಿತು. ಕುದುರೆಯನ್ನು ಅಲ್ಲಾಡಿಸಲು ನೋಡಿದ. ಅದು ಕೆಳಗಿನ ಬಂಡೆಗೆ ಭದ್ರವಾಗಿ ಅಂಟಿಕೊಂಡಿತ್ತು, ಅಥವಾ ಬಂಡೆಯಿಂದಲೇ ಮೇಲೇರಿ ಬಂದಂತೆ ಅಚಲವಾಗಿ, ಅಖಂಡವಾಗಿ, ದೃಢವಾಗಿ ನಿಂತಿತ್ತು. ಪಾರಿವಾಳ ಕೈಗೆತ್ತಿಕೊಳ್ಳಲು ನೋಡಿದ. ಅದು ಕುದುರೆಯೊಡನೆ ಅವಿನಾ ಸಂಬಂಧ ಬೆಳೆಸಿತ್ತು. ನಾಯಿಯೂ ಹೀಗೇ ನೆಲಕ್ಕೆ ಭದ್ರವಾಗಿ ಅಂಟಿಕೊಂಡಿತ್ತು. ಅವುಗಳ ಬಗೆಗೆ ಏನಾದರೂ ವಿವರ ಕೇಳಬೇಕು ಎಂದು ನೋಡಿದ. ಸುತ್ತ ಮುತ್ತ ಯಾರೂ ಕಾಣಲಿಲ್ಲ. ಗಡಿಬಿಡಿಯಿಂದ ಹೋಗುತ್ತಿದ್ದವರೆಲ್ಲಾ ಎಲ್ಲೋ ಮಾಯವಾಗಿದ್ದರು. ಹೋದದ್ದೆಲ್ಲಾ ಮುಗಿಯಿತೇನೋ ಅನ್ನಿಸಿತು. ಒಮ್ಮೆಲೇ ತಾನು ಭೂಮಿಯ ಕೊನೆಗೆ ಬಂದು ಬಿಟ್ಟಿದ್ದೇನೇನೋ ಎಂದು ಅನುಮಾನವಾಯಿತು. ತಾನು ಯಾವ ಲೋಕಕ್ಕೆ ಸೇರಿದವನು? ಕೇಳಿ ಖಾತರಿ ಮಾಡಿಕೊಳ್ಳಲೂ ಯಾರೂ ಆಚೆ ಈಚೆ ಕಾಣಲಿಲ್ಲ. ಬಂದ ದಾರಿ ಹಿಡಿದು ಹಿಂತಿರುಗುವುದೋ ಅಥವಾ ಮುಂದೆ ಮುಂದೆ ಹೋಗುವುದೋ ಗೊತ್ತಾಗಲಿಲ್ಲ. ಮುಂದೆ ಹೋಗುವುದಕ್ಕೆ ಬೇರೆ ಏನೂ ಗುರಿಯೂ ಇರಲಿಲ್ಲ.

ಸಸಾರ ಸುಮ್ಮನೆ ಹಿಂತಿರುಗಿದ. ಬಂದ ದಾರಿಯ ಗುರುತು ಇದ್ದೊ ಇಲ್ಲದೆಯೋ ಮೂಕ ಬಸವನ ಹಾಗೆ ಒಂದೇ ಸಮನೆ ನಡೆಯುತ್ತಾ ದೀರ್ಘ ಪಯಣವನ್ನು ಆರಂಭಿಸಿದ. ರಾತ್ರಿ ತಂಗುತ್ತಾ ಹಗಲು ನಡೆಯುತ್ತಾ ಎಷ್ಟೋ ದಿನ, ವಾರ, ತಿಂಗಳು, ವರ್ಷ ನಡೆದು ಕೊನೆಗೆ ತನ್ನ ಊರಿಗೆ ಬಂದ. ತನ್ನ ಮನೆಗೆ ಬಂದ. ಮನೆಯವರು ಸಸಾರನನ್ನು ಇಷ್ಟು ದಿನ ಎಲ್ಲಿಗೆ ಹೋಗಿದ್ದೆ ಎಂದು ಕೇಳಿದರು. ಸಸಾರ, ನಮ್ಮ ಕುದುರೆ, ನಾಯಿ, ಪಾರಿವಾಳ ಹುಡುಕುವುದಕ್ಕೆ ಎಂದ. ನಮ್ಮ ಮನೆಯಲ್ಲಿ ಯಾವಾಗ್ಲೂ ಕುದುರೆ, ನಾಯಿ, ಪಾರಿವಾಳ ಸಾಕಿರಲಿಲ್ಲ ಎಂದು ಉತ್ತರ ಬಂತು. ✡



ನಗೆಚುಳ್ಳಿ

ಚಹದಂಗಡಿಯಲ್ಲಿದ್ದ ಇಬ್ಬರಲ್ಲಿ ಜಗಳ ಪ್ರಾರಂಭವಾಯಿತು. ಜಗಳ ಹೆಚ್ಚಾದಾಗ ಒಬ್ಬನು ಮಧ್ಯೆ ಪ್ರವೇಶಿಸಿ ಅವರನ್ನು ಬೇರ್ಪಡಿಸುತ್ತಾ ಹೇಳಿದ:

"ಸುಮ್ಮನಿರಿ. ಇದು ಚಹದಂಗಡಿ, ವಿಧಾನಸಭೆಯಲ್ಲ"

*

ಪತ್ನಿ: ಇಂಥ ಕಳ್ಳ ಸೇವಕನನ್ನೇಕೆ ನೇಮಿಸಿದಿರಿ?

ಪತಿ: ಏಕೆ ಏನಾಯಿತು?

ಪತ್ನಿ: ನಾವು ಅಶೋಕ ಹೋಟೆಲ್‌ನಿಂದ ಕದ್ದು ತಂದ ಸ್ಟೀಲ್ ಗ್ಲಾಸುಗಳನ್ನು ಕದ್ದೊಯ್ದಿದ್ದಾನೆ.

*

ಬಟ್ಟೆ ಅಂಗಡಿಯೊಂದರ ಮುಂದಿದ್ದ ಬೋರ್ಡಿನಲ್ಲಿ ಹೀಗೆ ಬರೆಯಲಾಗಿತ್ತು:

"ನಮ್ಮ ಅಂಗಡಿಯಲ್ಲಿ ಕಾಲಿರಿಸಿದ ೧೫ ನಿಮಿಷಗಳೊಳಗಾಗಿ ಬಟ್ಟೆಗಳನ್ನು ಖರೀದಿಸುವ 'ಮಹಿಳಾ ಗ್ರಾಹಕ'ರಿಗೆ ಶೇ. ೨೫ ರಷ್ಟು ಕಮೀಶನ್ ನೀಡಲಾಗುವುದು"

*

"ನನ್ನ ಚಿತ್ರ ನಿಮಗೆ ಹೇಗೆನಿಸಿತು?" ಚಿತ್ರ ನಿರ್ಮಾಪಕ ಕೇಳಿದ.

"ಎಂಥಾ ಚಿತ್ರ ತಯಾರಿಸಿದ್ದೀ. ಸೆನ್ಸಾರ್ ಕತ್ತರಿಗೆ ಒಳಗಾಗೋ ಒಂದು ದೃಶ್ಯಾನೂ ಅದರಲ್ಲಿಲ್ಲವಲ್ಲ" ಎಂದ ಸೆನ್ಸಾರ್ ಬೋರ್ಡ್‌ನ ಸದಸ್ಯ.

*

"ಇಂದು ನಾವು 'ದಾರಿ'ಯಲ್ಲಿ ಆಟವಾಡದೆ ಮನೆಯಲ್ಲೇ ಆಡೋಣ" ಎಂದ ಕಿಟ್ಟು.

"ಏಕೆ?" ಎಂದು ಕೇಳಿದರು ಆತನ ಮಿತ್ರರು.

"ನಮ್ಮಪ್ಪ ಈ ದಿನ ದಾರಿಯಲ್ಲಿ ಕಾರು ನಡೆಸುವುದನ್ನು ಕಲಿಯುತ್ತಾರೆ, ಅದಕ್ಕೆ" ಎಂದುತ್ತರಿಸಿದ ಕಿಟ್ಟು.

*

ಜೈಲರನು ಕೈದಿಯೊಬ್ಬನನ್ನು ಕೇಳಿದ:

"ನಿನ್ನ ಸಂಬಂಧಿಕರ್ಯಾರೂ ನಿನಗೆ ಪತ್ರ ಬರೆಯೊಲ್ಲವೇ?"

"ಅವರೆಲ್ಲಾ ಇದೇ ಜೈಲಲ್ಲಿ ಇದ್ದಾರೆ ಸಾರ್" ಎಂದನಾ ಕೈದಿ.

*

"ಹೆಂಗಸರ ಬಾಯನ್ನು ಮುಚ್ಚಿಸಲು ಯಾರಿಂದ ಸಾಧ್ಯ?" ಲೋಕಾಭಿರಾಮವಾಗಿ ಆತ ಹೇಳಿದಾಗ...

ಈತ ತಟ್ಟನೆ ನುಡಿದ: "ದಂತ ವೈದ್ಯರಿಂದ."

*

ಕಿರಾಣಿ ವರ್ತಕನೊಬ್ಬನು ತನ್ನ ಮಗನನ್ನು ಕಳುಹಿಸಿ ಒಂದು ಕಿಲೋ ತುಪ್ಪ ತರಿಸಿದ.

ತುಪ್ಪ ಕಿಲೋಗಿಂತ ಕಡಿಮೆ ಇದ್ದುದನ್ನು ಗಮನಿಸಿ ಸಿಡಿಮಿಡಿಗೊಂಡ ವರ್ತಕ ತುಪ್ಪ ಮಾರುವ ಹೆಂಗಸಿನ ಬಳಿಗೆ ಹೋಗಿ, "ತುಪ್ಪ ಕಿಲೋಗಿಂತ ಕಡಿಮೆ ಇದೆಯಲ್ಲ, ಯಾಕೆ?" ಎಂದು ಕೇಳಿದ.

"ನನ್ನ ಬಳಿ ಕಿಲೋ ಕಲ್ಲಿಲ್ಲವಾದ್ದರಿಂದ ನಿಮ್ಮ ಅಂಗಡಿಯಿಂದ ತಂದ ಕಿಲೋ ಸಕ್ಕರೆಯಿಂದಲೆ ತುಪ್ಪ ತೂಗಿ ಕಳಿಸಿದೆ" ಎಂದು ಆಕೆ ನುಡಿದಾಗ ಕಿರಾಣಿ ವರ್ತಕ ಮರುನುಡಿಯದೆ ಹೊರಟುಹೋದ.

*

ವಿದ್ಯಾರ್ಥಿಯೊಬ್ಬನ ತುಂಟಾಟಗಳಿಂದ ಬೇಸತ್ತಿದ್ದ ಶಿಕ್ಷಕರೊಬ್ಬರು ಆತನನ್ನು

ಕುರಿತು, "ನಾಳೆ ನಿನ್ನ ತಂದೆಯನ್ನು ಕರೆದುಕೊಂಡು ಬಾ" ಎಂದರು.

"ಹಾಗಾದರೆ ಐದು ರೂ. ಕೊಡಿ ಸಾರ್" ಎಂದನಾ ವಿದ್ಯಾರ್ಥಿ. ಶಿಕ್ಷಕರು ಕೆರಳಿ "ಏಕೆ?" ಎಂದು ಕೇಳಿದರು.

"ನನ್ನ ತಂದೆ ಡಾಕ್ಟರು. ಫೀಜಿಲ್ಲದೆ ಎಲ್ಲಿಗೂ ಬರೋಲ್ಲ ಸಾರ್" ಎಂದನಾ ವಿದ್ಯಾರ್ಥಿ.

*

ಓರ್ವ ಮಹಿಳೆ ಪತ್ರಿಕಾಲಯಕ್ಕೆ ಹೋಗಿ ಕಳೆದುಹೋದ ತನ್ನ ಬಿಳಿ ನಾಯಿಯನ್ನು ಹುಡುಕಿ ಕೊಟ್ಟವರಿಗೆ ೧೦೦ ರೂ. ಬಹುಮಾನವನ್ನು ನೀಡಲಾಗುವದೆಂಬ ಜಾಹೀರಾತನ್ನು ಕೊಟ್ಟಳು.

ಮರುದಿನ ಆಕೆಯ ಜಾಹೀರಾತು ಪ್ರಕಟವಾಗುವುದಿರಲಿ, ಆ ಪತ್ರಿಕೆಯೇ ಪ್ರಕಟವಾಗಲಿಲ್ಲ. ಅದನ್ನು ಗಮನಿಸಿದ ಆ ಮಹಿಳೆ ಪತ್ರಿಕಾಲಯಕ್ಕೆ ಹೋಗಿ ವಿಚಾರಿಸಿದಾಗ, ಸಿಪಾಯಿ ಹೇಳಿದ:

"ಸಂಪಾದಕ ವರ್ಗದವರೆಲ್ಲ ಒಂದು ಬಿಳಿ ನಾಯಿಯನ್ನು ಹುಡುಕಲು ಹೋಗಿದ್ದಾರೆ. ಆದ್ದರಿಂದ ಇಂದಿನ ಸಂಚಿಕೆ ಪ್ರಕಟವಾಗಿಲ್ಲ."

*

"ಸಾರ್ ನಾನು 'ವೀರಯೋಧ'ನೊಬ್ಬನ ಮಗ. ನನ್ನನ್ನು ಸೈನ್ಯಕ್ಕೆ ಭರತಿ ಮಾಡಿಕೊಳ್ಳಿರಿ. ದ್ವಿತೀಯ ಜಾಗತಿಕ ಯುದ್ಧದಲ್ಲಿ ನನ್ನ ತಂದೆ ಶತ್ರುವಿನ ಕಾಲನ್ನು ಕತ್ತರಿಸಿದ್ದ" ಎಂದು ನುಡಿದ ವೀರಯೋಧನ ಮಗ ಹೆಮ್ಮೆಯಿಂದ.

"ಕಾಲನ್ನೇಕೆ ಕತ್ತರಿಸಿದ? ತಲೆಯನ್ನು ಕತ್ತರಿಸಲಾಗಲಿಲ್ಲವೆ?" ಸೈನ್ಯಾಧಿಕಾರಿ ಕೇಳಿದ.

"ತಲೆಯನ್ನು ಮೊದಲೇ ಕತ್ತರಿಸಲಾಗಿತ್ತು ಸಾರ್" ಎಂದನಾ ವೀರಯೋಧನ ಮಗ.

*

ರಮೇಶ: ನಮ್ಮ ಗಣಿತ ಶಿಕ್ಷಕರು ಬಹಳ ಒಳ್ಳೆಯವರು ಕಣೋ.

ಗಿರೀಶ: ಹಾಗೋ! ಅದ್ಹೇಗೆ?

ರಮೇಶ: ಅವರ ಕ್ಲಾಸಿದ್ದಾಗ ಸದಾ ನನ್ನನ್ನು ಹೊರಗಟ್ಟುತ್ತಾರೆ.

*

ಗಾಯಕ: ನನ್ನ ಹಾಡು ಹೇಗಿತ್ತು?

ಶ್ರೋತೃ: ನೀವು ರೇಡಿಯೋದಲ್ಲಿ ಹಾಡಿದ್ದರೆ ಚೆನ್ನಾಗಿತ್ತು.

ಗಾಯಕ: ಏಕೆ?

ಶ್ರೋತೃ: ಆಗ ರೇಡಿಯೋವನ್ನು ಬಂದು ಮಾಡಬಹುದಿತ್ತು.

*

ವಿದ್ಯಾರ್ಥಿ: ಮಾಡದ ಕಾರ್ಯಕ್ಕೆ ಶಿಕ್ಷಿಸಬಹುದೇ ಸಾರ್?

ಶಿಕ್ಷಕ: ಶಿಕ್ಷಿಸಬಾರದು.

ವಿದ್ಯಾರ್ಥಿ: ನಾನು ಈ ದಿನ ಹೋಮ್‌ವರ್ಕ್ ಮಾಡಿಲ್ಲ ಸಾರ್.

*

ಮಂತ್ರಿ: ನೀವಿನ್ನು ಚಿಂತಿಸಬೇಕಿಲ್ಲ. ನಿಮ್ಮ ಬಗ್ಗೆ ಕಳಕಳಿಯಿಂದ 'ಸಾಹಿತ್ಯ' ರಚಿಸಲು ಈಗಾಗಲೇ ಕೆಲ ಲೇಖಕರಿಗೆ ಸೂಚಿಸಿದ್ದೇನೆ.

ದಲಿತರು: ಸ್ವಾಮಿ, ನಮಗೆ ಸಾಹಿತ್ಯ ಬೇಕಿಲ್ಲ. ಬದುಕಲು ರೊಟ್ಟಿ, ಬಟ್ಟೆ, ಹಟ್ಟಿಗಳ ಅವಶ್ಯಕತೆಯಿದೆ.

*

ನಾಟಕ ಥಿಯೇಟರಿನ ಎದುರಿನ ಬೋರ್ಡಿನಲ್ಲಿ ಹೀಗೆ ಬರೆಯಲಾಗಿತ್ತು:

"ಜನಾಗ್ರಹದ ಮೂಲಕ ಇನ್ನೆರಡೇ ಪ್ರದರ್ಶನಗಳುಂಟು."





ಉರಿಯುವ ಕೊಳ್ಳಿ ಹಿರಿದು, ಕೆಂಡದ ರಾಶಿಯನ್ನು ನೀರೊಲೆಗೆ ಈಚೆಗೆ ಬಾಚಿ, ಅದನ್ನು ತಟ್ಟಿ ಮಟ್ಟ ಮಾಡಿ ಆ ರಾಶಿಯ ಮೇಲೆ ಯಾಂತ್ರಿಕವಾಗಿ ಹರಳೆಣ್ಣೆ ತುಂಬಿದ ಹಿತ್ತಾಳೆ ಬಟ್ಟಲನ್ನಿಟ್ಟಳು. ಕೊತ ಪೊತ ಕುದಿಯೊ ಎಣ್ಣೇಲಿ ಅಯ್ಯನ ಮೊಕ ಎದ್ದು ಬಿದ್ದು ಅಲ್ಲಾಡಿ ಚೆಲ್ಲಾಡಿ ಕಂಡೂ ಕಾಣದಂಗೆ ಮೂಡಿತು. ಸ್ವಾಮಸ್ವಾಮಾರ ಇಷ್ಟೊತ್ತಿಗೆ ಗೆಲ್ಲ ಅಯ್ಯ ಎಣ್ಣೆ ಒತ್ತಿಸಿಕೊಂಡು ಮೀಣಕ್ಕೆ ಕುಂತುಕೊ ಬೇಕು. ಅಯ್ಯನ ಮೀಣ ಅಂದರೆ ನಮ್ಮ ಸುತ್ತಿಗೆ ಹೆಸರುವಾಸಿ. ತುಟಿ ಮ್ಯಾಗಿನ ಹೊದೆ ಮೀಸೆ, ಎದೆ ಮ್ಯಾಗಿನ ಕೂದಲ ಜೊಂತೆ ಹಣ್ಣು ಮೆಟ್ಟಿ ನರೆಯುತ್ತಿದ್ದರೂ ಬೆನ್ನು ಬಗ್ಗಿಸದೆ ಅಯ್ಯ ನಡೀತಿದ್ದ ರೀವಿ ನೋಡಿ, ಅವನ ದ್ರುಡ ಕಾಯಕ್ಕೆ ಪ್ರತಿ ಸ್ವಾಮಾರ ತಪ್ಪದೆ ಅವನು ಮಾಡ್ತಿದ್ದ ಎಣ್ಣೆ ಮೀಣವೆ ಕಾರಣ ಅಂತ ಜನ ಆಡಿಕೊಳ್ಳುತ್ತಿದ್ದರು.

ಅಯ್ಯನಿಗೆ ಎಣ್ಣೆ ಒತ್ತೋವರಲ್ಲಿ ಅವಳ ಕೈ ಬಿದ್ದೇ ಹೋಯ್ತಿತ್ತು. ನೀನು ಹಸ್ತ ಕೊಟ್ಟು ತಿಕ್ಕಿದರೆ ನನ್ನ ಮೈ ಕೈ ನೋವೆಲ್ಲ ಮಾಯವಾಯ್ತದೆ. ಹೀಗಂದು ಮೊಕ ತಿರುಗಿಸಿ ಎಣ್ಣೆ ತುಂಬಿದ ಕಣ್ಣಲ್ಲಿ ಒಂದು ತರಾ ನೋಡಿ ನಿನ್ನ ಬುಟ್ಟರೆ ಯಾರೂ ಹಿಂಗೆ ತಿಕ್ಕಕ್ಕಿಲ್ಲ; ನಿನ್ನ ಅವನ ರಟ್ಟೇಲು ಸಕುತಿ ಇಲ್ಲಿಲ್ಲ ಅಂದಾಗ, ಸತ್ತೋದವಳ ಸುದ್ದಿ ಈಗ್ಯಾಕೆ ಅಂತಿದ್ದ ಹಾಗೇನೆ ಮಂತೆ

ಚದುರಂಗ

ಇಂತ ದೊಡ್ಡ ಘಟದೊಂದಿಗೆ ಇಪ್ಪತ್ತು ವರುಸದ ಮೇಲ್ಪಟ್ಟು ಚಾಳಾಟ ಮಾಡೋದು ಅಂದರೆ ಸಾಮಾನ್ಯವ? ಅನ್ನಿಸಿ ಫಕ್ಕನೆ ಬಂದ ನಗುವನ್ನು ಸೆರಗಿನ ತುದಿಯಿಂದ ಅದುಮಿದಳು. ನಂಗೂ ತಿಕ್ತಾ ಇದ್ದರೆ ಸುರುಜುಗಳ್ಲಿನ ಮ್ಯಾಲೆ ಹಸ್ತ ಉಜ್ಜಿದಂಗಾಗೋದು. ನೀರಂತು

ಗಣ ಗಣ ಕಾದಿರಬೇಕು. ಆ ಕುದಿಯೋ ನೀರನ್ನ ಬಿತ್ತಾಳೆ ಕೊಳದಪ್ಪಲೇಲಿ ಮೊಗೆ ಮೊಗೆದು ಭುಜ, ತೊಡೆ, ತಲೆ ಮ್ಯಾಲೆಲ್ಲ ದಪ್ಪಡಿ ದುಪ್ಪಡಿ ಸುರಿಯೋವಾಗ ಅವಳ ಅಂಗೈ ಮುಂಗೈ ಪೂರ್ತ ಪೊಪ್ಪಳೆ, ಸ್ನಾನ ಮುಗಿಸಿ ಏಳ ಬೇಕಾದರೆ ಅಯ್ಯನ ಮುಯ್ಯಿ ಹಬೆ ಆಡಬೇಕು. ಟುವಲ್ನಲ್ಲಿ ಏರಿಸಿ ಮನಗಿದರೆ ಕಲ್ಯಾಣಿಕೆ ಕಂಬಳಿ ಹೊದಿಕೆನಾಕಾದರೂ ಆಗಲೇಬೇಕು. ತಾನು ಅರ್ಧ ಮುಕ್ಕಾಲು ಗಂಟೆ ಒತ್ಕೊಂಡು ತಬ್ಕೊಂಡು ಕುಂತಿರಬೇಕು. ಎದ್ದಾಗ ಹಾಸಿಗೆ, ದುಪಟಿ ಪೂರ್ತ ಒದ್ದೆ ಮುದ್ದೆ. ಹೊರಗೆ ಹಟ್ಟಿ ಬಾಗಿಲ ಮುಂದುಗಡೆ ಬೀದಿ ಕಸ ಗುಡಿಸಿ ಹರವಿದ ಹರಳು ಕಾಯಿಗಳು ಪಟ್ ಪಟ್ ಪಟ್ ಸಿಡಿದ ಸದ್ದು ಅವಳನ್ನು ಎಚ್ಚರಗೊಳಿಸಿತು. ಎಣ್ಣೆಯ ಬಟ್ಟ ಲನ್ನು ಕೆಂಡದಿಂದ ಇಳುಕಿ ಮೇಲೆದ್ದಾಗಲೂ ಅಯ್ಯನ ಸಪ್ಪ ಅವಳೊಳಗೆ ಜಗ್ಗಾಡಿ ನಡು ಮನೆಯ ತೊಲೆಯ ಮೇಲಿದ್ದ ಸೆಬ್ಬೆಯನ್ನೆಳೆದು ಹೊರ ನಡೆದಳು.

ಹರಳು ಕಾಯಿಗಳ ಮುಂದೆ ಕುಕ್ಕರಗಾಲಿನಲ್ಲಿ ಕುಂತು - ಅಡಿಕೆ ಸೆಬ್ಬೇಲಿ ಬಡೀತ ಇದ್ದಂಗೆ ಹರಳು ಕಾಯಿಗಳ ಮುಸುಕು ಬಿಚ್ಚಿಕೊತ್ತ ಇತ್ತು. ಅವ್ವ ಬದುಕಿರೊವರೆಗೆ "ಎದೆಗುಂಟ ಬೆಳೆದು ನಿಂತವಳೆ ಮಗಳು. ಇನ್ನೂ ಲಗ್ನ ಮಾಡಕ್ಕಿಲ್ಲವ?" ಅಂತಿದ್ಲು. "ಮಾಡಾನ ಮಾಡಾನ ಸರ್ಯಾದ ವರ ಬರಲಿ" ಅಂತ ಮಾತು ಹಾರಿಸ್ತ ಇದ್ದ ಅಯ್ಯ. ಅವ್ವನ ತಮ್ಮನಿಂದ ಹಿಡಿದು ಯಾವು ಯಾವೋ ವರಗಳು ಬಂದುವು. ಒಂದ ನ್ನೂ ಅಯ್ಯ ಹಾಯಿಗೊಡಲಿಲ್ಲ. ಯಾಕೆ ಹೀಗೆ?... ಅಯ್ಯ ಇನ್ನೂ ಗಟ್ಟಿ ಮುಟ್ಟಾಗೆ ಅವ್ನೆ! ಈಗಲೂ ಯಾವುದಾದರೂ ಹೆಣ್ಣ ಕೂಡಾವಳಿ ಮಾಡಿಕೊಂಡರೆ ಯಾರಾರು ಬ್ಯಾಡ ಅಂದಾರಾ?... ಉಹುಂ. ಅದು ಸಾಧ್ಯ ಆಗಕ್ಕಿಲ್ಲವಂತೆ. ಮಾಡಿಕೊಂಡರೆ ಅಯ್ಯನ ಮಾನ ಮುಕ್ಕಾಯ್ತಂದಂತೆ. ಯಾರಾದರೂ ಆ ಮಾತೆತ್ತಿದರೆ ಇಷ್ಟಿಷ್ಟಗಲ ಕಣ್ಣು ಮರಳಿಸಿ "ಯಾವ ಸೀಮೆ ಮಾತಾಡ್ತೀರಯ್ಯ?" ಅಂತ ದು ದಬ್ಬ ಹಾಕಿದರೆ ಅಂತು, ಮಗನೋರೆಲ್ಲ ಗಪ್‌ಚುಪ್ ಅಯ್ತಿದ್ದರು. ನಂಗೂ ಅಯ್ಯನೆ ಕಂಡರೆ ಭಯವೆ– ಮೀಣ ಮಾಡಿಸೊ ಒಂದು ಟೀಂ ಬುಟ್ಟು! ಒಂದೊಂದು ಸಲ ಅವನು ತುಟಿ ಪಿಟಕ್ ಅನ್ನದೆ ಮೊಗಮ್ಮಾಗಿ ಬೀಡಿ ಸೇದುತಾ ಎದಿರು ಗೋಡೇನೇ ನೋಡ್ತಾ ಯಾವ ಮಾತಿಗೂ ಅ್ಹ ಅನ್ನದೇನೆ ಉ್ಹ ಅನ್ನದೇನೆ ಕುಂತಾಗ ಇವನು ದಿಟವಾಗು ನನ್ನ ಅಯ್ಯನ? ಅಂತ ಸಂಸಯು ಬಂದದ್ದುಂಟು. ಅವಳೂ ಅವನ ಚರ್ಯೇನ ಸೂಸ್ಮ ಆಗಿ ಪರಿಗಣಿಸಿದ್ಲು. ತನಗೇನಾದರೂ ಬೇಕಾದರೆ ಅಯ್ಯ ಚೆಂದ ಚೆಂದಾಗಿ ಮಾತಾಡೋ ಅರ ಗಿಣಿ. ಇಲ್ಲ ಅಂದರೆ, ನಾಲಗೇನೆ ಆಡದೆ ಇರೊ ಮೂಗ–ರುಸಿ!

ಎದ್ದೋಗಿ ಅಡುಗೆ ಕೋಣೆಯಿಂದ ಮರದ ಮಣೆ ತಂದು ಬಡಿದ ಹರಳು ಕಾಯಿಗಳ ಮೇಲಿಟ್ಟು, ಎರಡು ಕೈಗಳ ಮೇಲೂ ತನ್ನ ದೇಹದ ಭಾರವನ್ನೆಲ್ಲ ಹಾಕಿ ಮುಷ್ಟಿಯಿಂದ ಉಜ್ಜಿದಳು. ಹರಳು ಕಾಯಿಗಳ ಮುಸುಕು ಕಳಕೋತ ಕಳಕೋತ ಅವಳ ಒಳಗೂನು ಏನೇನೋ ಉಜ್ಜುತ್ತಾ ಉಜ್ಜುತ್ತಾ ಹೋಯ್ತು. ಸಂಕ್ರಾಂತಿ ಬಂತು. ಅಂದರೆ ಮಾತ್ರ ಅಯ್ಯ ನಿಗೆ ಬಲು ಖುಷಾಮತ್ತು. ಪೊತ್ತು ರವರವ ಅಂತಿದ್ದ ಹಂಗೇನೆ ದನ ಕರ ಎತ್ತುಗಳನ್ನೆಲ್ಲ ಕೆರೆ ಅಂಗಳಕ್ಕೆ ಅಟ್ಟಿಕೊಂಡೋಗಿ, ಚಾರು ಪಾರಿಗೆ ತಿಕ್ಕಿ ತಣ ತಣ ಅನ್ನಿಸಿ, ಹೊಡಕೊಂಡು ಬಂದು ಮೇವು ಹಾಕಿ ಕೊಟ್ಟಿಗೇಲಿ ನಿಲ್ಲಿ ಸ್ತಿದ್ದ. ಸ್ವಾಮಿ ನೆತ್ತಿಯಿಂದ ವಸಿ ದೂರ ಜಿಗಿದ ಮೇಲೆ ಎಣ್ಣೇಲ್ಲೊ ಹಾಲಿನಲ್ಲೊ ಕಲಸಿ ಕೆಂಪು, ಹಸಿರು, ನೀಲಿ ಇಂಥ ತರಾವರಿ ಬಣ್ಣಗಳ ಕೊಂಬಿಗೆ ಗೊರಸಿಗೆ ಬಳೀತಿದ್ದ. ಬಣ್ಣ ಬಣ್ಣದ ಬ್ಯಾಗಡೆ ಕತ್ತರಿಸಿ, ಗೋಂದು ಹಚ್ಚಿ, ಕೊಂಬುಗಳಿಗೆ ಅಂಟಿಸಿ, ಸುಂಗಾರ ಮಾಡ್ತಿದ್ದ. ಕೊಂಬಿನ ತುದಿಗೆ ಬೆಳ್ಳಿಯ ಗುನ್ನಂಪ ಟ್ಟಿ ಅಲಂಕಾರ ಬೇರೆ. ಆ ಗೋವುಗಳಿಗೆಲ್ಲ ಅರಿಸಿನ ಕುಂಕುಮ ಹಚ್ಚೋದು ಕೊಂಬ ಹಣೆ ಕೊರಳಿಗೆ ಕಣಗಿಲೆ, ಕೆಕ್ಕೆ, ಚೆಂಡು ಹೂವು ಗಳ ಮಾಲೆ ಹಾಕೋದು, ಆರತಿ ಮಾಡಿ ರತ ನೀರ ಆ ಗೋವುಗಳ ಪಾದಕ್ಕೆ ಭುಜಗಳಿಗೆ ಹಚ್ಚೋದು, ಗಂಧದ ಕಡ್ಡಿ ಧೂಪ ಹಾಕೋದು,

ತನ್ನ ಕೆಲಸ. ಎಲ್ಲ ಮುಗಿದ ಮ್ಯಾಲೆ ಬೇಯಿಸಿದ ಕಿಚಡಿ ಅನ್ನ ಪಾಯಸ ಎರಡನೂವೆ ಮೀಲಾಯಿಸಿ ಉಂಡೆ ಕಟ್ಟಿ ಅವೆಲ್ಲಕೂ ತಿನ್ನಿಸ್ತಾ ಇದ್ದ. ಬಾಳೆ ಹಣ್ಣ ಅಯ್ಯ ತಿನ್ನಿಸ್ತಾ ಇದ್ದ. ಸಂಜೆ ದನೀಗೆ ಕಿಚ್ಚಾಯಿಸೋದು ಆಗ ಅಯ್ಯ ಬ್ಯಾರೆ ಮನುಸನೆ ಆಯ್ತಿದ್ದ. ನಿಂತ ತಾವು ನಿಲ್ಲದೆ ಅಲ್ಲಿಂದಿಲ್ಲಿಗೆ ಇಲ್ಲಿಂದಲ್ಲಿಗೆ ತಿರುಗಾಡಿ, ಗೋವುಗಳಿಗೆಲ್ಲ ಒಂದೊಂದಾಗಿ ಪರೀಕ್ಷೆಮಾಡಿ, ನನ್ನ ಕಡೀಕೆ ತಿರುಗಿ, “ಸುಂಗಾರ ಸರೋಯ್ತು?” ಅಂತ ನೂರು ಸಲ ಕೇಳಬೇಕು. ಅದೆ ತನ್ನ ಸ್ವಂತ ಮಗಳೂವೆ ವಡವೆ ವಸ್ತು ಹಾಕ್ಕೊಂಡು ಸುಂಗಾರವಾಗಿ ಇರಲಿ ಅಂತ ಯಾಕೆ ಅನ್ನಿಸಲಿಕ್ಕಿಲ್ಲ ಅಯ್ಯನಿಗೆ? ಅವನ ದನಗಳ ಮಾತ್ರ ಎಲ್ಲಾರು ನೋಡಿ ಸಂತೋಸಪಡಬೇಕು. ಅದೆ ತನ್ನ ಮಗಳ್ನ ಮಾತ್ರ ಯಾರಾರು ಕಣ್ಣೆತ್ತಿ ನೋಡಿದರೆ, ಅಯ್ಯನ ಕಣ್ಣಲ್ಲಿ ಯಾಕೆ ಕೆಂಡಾನೆ ಉದುರಬೇಕು? ದೊಡ್ಡ ಕೆರೆ ಓಣೀಲಿ ಎಳ್ಳು ಕಡ್ಡಿ, ನೆಲ್ಲು ಹುಲ್ಲಿನ ಕಂತೆಗಳ ಅಡ್ಡಡ್ಡಾಗಿ ಹರಡಿ ಬೆಂಕಿ ಹಾಕಿದ್ದರು. ಸೊಂಟದೆತ್ತರ ಉರಿ ಎದ್ದು, ಉಳಿದ ಗೋವುಗಳು ಬೆದರಿ ಓಮ್ಮೆಟ್ಟಿದಾಗ ಅಯ್ಯನ ಸಾವಿರ ರೂಪಾಯಿ ಜೋಡಿನೇ ಮೊದಲು ಜ್ವಾಲೆ ಹಾರಿದ್ದು. ಆ ಅಯ್ಯ ಹ್ಹಾ ಅಂದದ್ದು ಅಂದದ್ದೇ, ಹೋ ಅಂದದ್ದು ಅಂದದ್ದೇ, ಬೇಸ್ ಬೇಸ್ ಅಂದದ್ದು ಅಂದದ್ದೆ. ಒಟ್ನಲ್ಲಿ ಸಂಕ್ರಾಂತಿ ಅಂತ ಹಬ್ಬದಲ್ಲಿ ನನ್ನ ಅಯ್ಯನ ಕುಸಿ ನೋಡಬೇಕು.

ಸಂಕ್ರಾಂತಿ ಅಂದ ಕೂಡಲೆ ತಾನು ಹತ್ತು ಹನ್ನೊಂದು ವರ್ಸದೋಳು ಆಗಿದ್ದಾಗ ಬಂದ ಸಂಕ್ರಾಂತೀದೆ ನೆಪ್ಪು. ಗೋವುಗಳ, ಕೊಟ್ಟಿಗೆ. ಗೊಂತಿನಿಂದ ಬಿಚ್ಚಿ ಓತ್ತಲಲ್ಲಿ ಕಟ್ಟಾಕ್ತ ಇದ್ದೆ ಒಂದು ಹೋರಿಗರ ದಕ್ಕದೆ ತುಂಟಾಟ ಆಡ್ತ ಇತ್ತು. ಕಾಚಿ ಕಡ್ಡೀಲಿ ಒಂದೇಟು ಬಿಗಿದು ಒಕ್ಕಡೆ ತಿರುಗಿದೆ. ಅದ್ಯಾವ ಮಾಯದಲ್ಲೊ ಕಾಣೆ ಚಂಗನೆ ನೆಗೆದು ಬಂದು ಕುಂಡಿ ಕೆಳಗೆ ಗುದ್ದಿ ಬಿಡ್ತು.” “ಅವ್ವಣ್ಣೆ” ಅಂತ ಕಿರುಚಿಕೊಂಡು ಬಿದ್ದೆ. ಅಡಿಗೆ ಕ್ವಾಣೇಲಿ ಮೊಸರು ಕಡೀತ ಇದ್ದ ಅವ್ವ. “ಏನಾಯ್ತವ್ವ?” ಕೂಗಿಕೊಂಡು ಓಡಿಬಂದು ಕರೀಗೆ ನಾಕು ಬಿಗಿದು ಕಟ್ಟಾಕಿ ನನ್ನ ತಾವಿಗೆ ಬರೊ ಹೊತ್ತಿಗೆ, ಎದ್ದು ನಿಂತುಕೊಂಡು ಅಳ್ತಾ ಇದ್ದೆ... ಮಂಡಿ ತರಚೋಗಿ ರಕ್ತ ಸೋರಿತ್ತು. ಅಲ್ಲೆ ಒಂದಿಷ್ಟು ಮಣ್ಣು ತಕ್ಕೊಂಡು, ಸ್ಸ್ ಸ್ಸ್ ಕಲ್ಲು ಮಂಟೇನೆಲ್ಲ ತೆಗೆದುಹಾಕಿ, ಅಂಗೈನಲ್ಲಿ ಒಣಗಾಮ್ಮಿ, ಉರುಟಿ, ಕಪ್ಪೇಕೆ ಉಜ್ಜಿಕೊಂಡ ಕುಂಕುಮದಂತ ಮೆದು ಮಣ್ಣು ಮಂಡಿಗಾಯಕ್ಕೆ ಮೆತ್ತಿ, “ಹೋರಿಗರು ಹತ್ತಿರ ಹುಷಾರಾಗಿರಬೇಕು ಕಂದವ್ವ, ಯಾವ ಟೇಂನಲ್ಲಿ ಅದಕೆ ತಲೆ ಕೆಟ್ಟು ಗುದ್ದಕ್ಕೆ ಬತ್ತದೋ ಹೇಳಕ್ಕೆ ಬರಕ್ಕಿಲ್ಲ” ಕೆನ್ನೆ ಮುದ್ದಿಸಿ “ಅಳಬ್ಯಾಡ ಕಂದ” ಅಂದು ಒಳಕ್ಹೋದ್ಲು. ನಾನು ಕಣ್ಣೀರೊತ್ತಿಕೊಂಡು. ಎಣ್ಣೆಸೀಟಿ, ಕುಂಟುತಾ ಕೊಟ್ಟಿಗೆ ಒಳಕೆ ಕಾಲಿಟ್ಟದ್ದುಂಗೆ ಎರಡು ತೊಡೆ ಮಧ್ಯದಲ್ಲಿ ಮುಲ ಮುಲ ಅಂದಂಗಾಗಿ ಚೆಲ್ಲನೆ ಏನೊ ಸುರಿದು ತೊಡೆಯೆಲ್ಲ ತಣ್ಣಗಾದ ಗಾಂದಗಾಯ್ತು. ಬೆಚ್ಚಿ, ಹೋರಿಗರು ಗುದ್ದಿದ ಪೆಟ್ಟಿಗೆ ಒಳಗಡೇನು ಗಾಯ ಆಗಿರಬೇಕು ಅಂದುಕೊಂಡು ಗೋಡೆ ಮರೆಗೋಗಿ ಲಂಗ ಎತ್ತಿ ನೋಡಿಕೊಂಡೆ. ನಾನು ಎಣಿಸಿದ್ದು ದಿಟ ಅನ್ನಿಸ್ತು. ಎರಡು ತೊಡೆ ಮಧ್ಯದಲ್ಲಿ ಗಾಯ ಆದಂಗಾಗಿ ರಕ್ತ ತೊಟ್ಟು ತೊಟ್ಟಾಗಿ ಸುರೀತಿತ್ತು. ಕೈಕಾಲೆಲ್ಲ ತಣ್ಣಗಾಗಿ ಕುಕ್ಕನೆ ಕುಂತು “ಅವ್ವಣೆ, ಕೆಟ್ಟೆ” ಅಂತ ಬಾಯಿ ಬಡಕೊಂಡು ಚೀರಿದೆ. “ಯಾಕವ್ವ, ಮತ್ತೇನವ್ವ ಆಯ್ತು? ಅಂತ ಒಂದೇ ಉಸುರಿಗೆ ಓಡಿ ಬಂದ್ಲು ಅವ್ವ. ಅವಳ ಜೊತೆಗೆ ಉಪ್ಪನೊ ಮೆಣಸಿನ ಕಾಯಿನೊ ಈಸಿಕೊಂಡು’ ಹೋಗಕ್ಕೆ ಬಂದಿದ್ದ. ಊರೊಳಗಿನ ಇನ್ನೊಬ್ಬ ಹೆಂಗಸೂ ಇದ್ಲು. ಅವ್ವ ನನ್ನ ತಬ್ಬಿಕೊಂಡು ಸಂತರಿಸ್ತ ಎದಿರಿಕೊಬ್ಯಾಡ, ಏನೂ ಆಗಲಿಕ್ಕಿಲ್ಲ. ಒಂದೆರಡು ಜಿನ, ಮಂಡಿಗಾಯ ಮಾದೋಯ್ತದೆ,”ಅಂದ್ಲು. ಊರೊಳಗಿನ ಹೆಂಗಸು, “ಅದಕ್ಯಾಕೆ ಇಷ್ಟು ಪರಿ ಪಾಟ್ಲು ಮಾಡಾದು ಈ ಹೆಣ್ಣು. ತಾಳು ವಸಿ ದತ್ತೂರಿ ಕೊನೆ ಮುರಿಕೊಂಬುಂದು ಅದರ ಹಾಲು ಸವರುತೀನಿ ಲಾಜಾದಲ್ಲಿ ವಾಸಿಯಾಗೋಯ್ತದೆ” ಅಂದು ದತ್ತೂರಿ ಗಿಡ ಹುಡುಕ್ಕೊಂಡು ಓತ್ತಲಿಗೆ ಹೋದ್ಲು. ನಾನು ಮಾತ್ರ ಅಳು ನಿಲ್ಲಿಸದೆ ದುಕ್ಕಡಿಸಿ ದುಕ್ಕಡಿಸಿ ಅಳ್ತಾ “ಮಂಡಿ ಗಾಯದ್ದಲ್ಲ ಕಣವ್ವ...” ಅಂತ ರಾಗ ದೊಡ್ಡದು ಮಾಡಿದೆ. ಅವ್ವ“ಮಂತೆ?’

ಅಂತ ಹುಬ್ಬೆ ತೆರೆದು ತೊಡೆ ಒಳಗಡೆ ಗಾಯ ಆಗಿ ರಕ್ತ ಸೋರ್‍ತಾ ಅದೆ..." ಅಂದೆ. ಈಗ ಮಾತ್ರ ಅವ್ವನ ಮೊಕ ಕಂಗೆಟ್ಟಿತು. ಗಾಬರಿಯಾಗಿ ಎಲ್ಲಿ ನೋಡಾನ ಅಂತ ಲಂಗ ಎತ್ತಿದ್ಲು. ನಾನು ಅವಳ ಮೊಕಾನೆ ಹೆದರಿ ಹೆದರಿ ನೋಡ್ತಾ ಇದ್ದೆ. ತೊಡೆ ರಕ್ತ ನೋಡಿದ ಕೂಡಲೆ ಅವಳ ಮೊಕದಲ್ಲಿದ್ದ ಗಾಬರಿಯೆಲ್ಲ ಹೊಂಟೋಗಿ ಅದರ ಜಾಗದಲ್ಲಿ ನಗೆ ತುಂಬಿಕೊಂಡು "ಅದು ಗಾಯದ ರಕ್ತ ಅಲ್ಲ ಕಣೆ. ನೀನು ಮೈ ನೆರೆದಿದ್ದೀ. ಅದರದು ರಕ್ತ" ಅಂದು ಕೆನ್ನೆ ಹಿಂಡಿದ್ಲು. ಅಷ್ಟರಲ್ಲಿ ದತ್ತೂರಿ ಕೊನೆ ಕಿತ್ತುಕೊಂಡು ಇನ್ನೊಬ್ಬ ಹೆಂಗಸು ಬಂದು "ಎಲ್ಲವ್ವ ಲಂಗ ಎತ್ತವ್ವ, ಮಂಡಿಗೆ ಈ ಹಾಲು ಸವರ್‍ತೀನಿ" ಅಂತಿದ್ದ ಹಂಗೆ ಅವ್ವ ಅವಳ ಕಿವೀಲಿ ಗುಟ್ಟಾಗಿ ಸುದ್ದಿ ಹೇಳಿದ್ಲು. ಆ ಹೆಂಗಸು ಬಾಯಿ ಅಸ್ಟಗಲ ತಕ್ಕೊಂಡು "ಹೌದಾ...?" ಅಂತ ಹಿಗ್ಗೋಗಿ ನಟಿಗೆ ತೆಗೆದು ಇದಕ್ಕೆ ಯಾರಾರು ಅತ್ತಾರೇನೆ, ಸಂತೋಸ ಪಡಬೇಕು," ಆ ಅಂದು ಅವ್ವನ ಕಡೀಕೆ ತಿರುಗಿ, "ಹೂ, ಇನ್ನು ನೆರೆದ ಮಗಳ ಗುಡ್ಲಿಗೆ ಕುಂದರಿಸಲಿಕ್ಕೆ ಲಡಿ ಮಾಡಿ" ಅಂದ್ಲು... ಹಂಗಾರೆ ಇದು ಗಾಯ ಅಲ್ಲ. ತಾನು ಮೈನೆರೆದಿದ್ಲು! ಮೈ ನೆರೆಯೋದು ಅಂದರೆ ಎರಡು ತೊಡೆ ಸಂದೀಲು ರಕ್ತ ಸುರಿಯೋದು ಅಂತ ಗೊತ್ತೆ ಇರನಿಲ್ಲ. ಅವ್ವ ಆದರು ಹೇಳಬಾರದಾಗಿತ್ತು? ಮೂರು ತಿಂಗಳ ಹಿಂದೆ ತನ್ನ ಜೊತೆಗಾತಿ ಕೆಂಪಿ ಮೈ ನೆರೆದಿದ್ಲು. ಅವಳ್ನ ಹಂಗಂದರೇನೆ ಅಂತ ಕೇಳಿದರೆ ನನ್ನ ಕುಟ್ಟಿ ಹೇಳಬ್ಯಾಡದಾ? ಸುಮ್ಮಕೆ ನಕ್ಕು ಬಿಡಾದ?

ಒಳಗಿನಿಂದ ಮೊರ ತಂದು ಮುಸುಕು ಕಳಚಿದ ಹರಳು ಬೀಜಗಳನ್ನು ಕೇರಲು ಶುರುಮಾಡಿದಳು. ಹಟ್ಟಿ ಕೆಲಸ, ಹೊಲದ ಕೆಲಸ, ಹಂಗು ಹಿಂಗು ಎಳೆಂಟು ವರುಷ ಉರುಳಿ ಹೋಗಿತ್ತು. "ಸಣ್ಣಿಗೆ ಓತಿಕ್ಯಾತನ ಹಂಗಿದ್ದೋಳು ದುಂಡುದುಂಡಗೆ ಕಡಿದು ತಿಸ್ಕೊ ಹಂಗಿದ್ದೀಯಲ್ಲೆ?"— ಓಂಕಾರಮ್ಮ ತಬ್ಬಿಕೊಂಡು ಮುತ್ತನ್ನೆ ಕೊಟ್ಟುಬಿಟ್ಟಳು. ಥೂ, ಹಾಳಾದೋಳು, ಸೀರೆ ಸೆರಗಿನಿಂದ ತಾನು ಕೆನ್ನೆ ಒರಸಿದು ಒರಸಿದೆ. "ಹೂ. ನಾ ಮುತ್ತುಕೊಟ್ಟರೆ ಎಂಜಲು. ಅದೇ ಒಬ್ಬ ಹರೇದ ಹೈದ ಕೊಟ್ಟಿದ್ದರೆ?... ಕಣ್ಣು ಮಿಟುಕಿಸಿ ನಕ್ಕಿದ್ದಳು. ಓಂಕಾರಮ್ಮ. ಪಾತಾಯಿ ಓಂಕಾರಮ್ಮ! ತಾಯಿ ಗರ್ಭದಿಂದ ಈಚೆ ಪತನ ಆಗೋವಾಗಲೆ ಕಣ್ಣು ಕೂರ್ತ ನಗ ತುಂಬಿಕೊಂಡು ಹುಟ್ಟಿರಬೇಕು.! ಅವಳು ಸುಮ್ಮಕೆ ಇದ್ದರೂವ ಕಣ್ಣು ನಗು ನಗ್ತ ಇರೋಹಂಗೆ ಕಾಣ್ತದೆ. ಬಲು ಕ್ಯಾತೆ ಕಣ್ಣು. ಆದರೆ ಅಯ್ಯ ಎದುರಿಗಿದ್ದಾಗ ಮಾತ್ರ ಆ ನಗ ಅದ್ಯಾವ ಲೋಕಕ್ಕೆ ಮಂಗರ ಮಾಯ ಆಗೋದೊ ನಾ ಬ್ಯಾರೆ ಕಾಣೆ. ನಮ್ಮ ಹಟ್ಟಿಗೆ ಯಾವಾಗಲಾರು ಗಾಳಿ ಬೀಸಿದಂಗೆ ಬರೋದುಂಟು. ಆ ವ್ಯಾಳಾದಲ್ಲಿ ಅಯ್ಯ ಇದ್ದರೆ ದೀವಿಗೆ ಕೆಡಿಸಿದಂಗೆ ಪಸಕ್ಕನೆ ನಗ ಅವಳ ಮೊಕದಿಂದ ನೀಗಿ! ಓಂಕಾರಮ್ಮ ನಮ್ಮ ಸುತ್ತಿನೋಳಲ್ಲ. ಧಾರವಾಡದ ಸೀಮೆಯೋಳು. ಅವಳು ಯಾವ ಜಾತಿಯೋಳೋ ಆ ಮಹಂಕಾಳಿ ನಮ್ಮ ಪಟ್ಟಲಗಮ್ಮನಿಗೇ ಗೊತ್ತು. ಅಗಲವಾದ ಹಣೆಗೆ ಮೂರು ಪಟ್ಟನ್ನೂ ಒತ್ತಿ ಈಬೂತಿ ಕಟ್ಟು ಹಾಕೋದು ಕಂಡು ಲಿಂಗಾಯಿತರೋಳು ಅನ್ನೋರುಂಟು; ಜಂಗಮರೋಳು ಅಂದೋರೂ ಉಂಟು; ಎಲ್ಲಮ್ಮ ತಾಯಿಗೆ ಬಸವಿ ಬಿಟ್ಟೋಳು ಅನ್ನೋರೂ ಉಂಟು. ನಾನು ಹುಟ್ಟೋಕೆ ಮುಂಚೆನೇ ಈ ಊರಿಗೆ ಬಂದೋಳಂತೆ. ಅವಳ ಇಚಾರ ಹೆಚ್ಚಾಗಿ ಯಾರೂ ಮಾತಾಡ್ತಾನೆ ಇರನಿಲ್ಲ. ಜಂಡಿಸಿ ಕೇಳಿದರೆ "ಅವಳಾ?" ಅಂತ ನಕ್ಕು ಹೊಂಟೋಗೋರು. ನಮ್ಮವ್ವ ಮಾತ್ರ ಆ ಹಲ್ಲಂಡೆ ಹಾದರಗಿತ್ತಿಯಾ?" ಅನ್ನೋಳು. ನಂಗೊಂದು ಅರ್ಥ ಆಯ್ತಾ ಇರನಿಲ್ಲ. ಆದರೆ ಅವಳು ಮೊಕದಮ್ಯಾಲೆ ನಗ ಆಡಿಸ್ತ ಬಂದಾಗ, ಅವಳ ತಬ್ಬಿಕೊಂಡು ಮುತ್ತು ಕೊಡಲಾ ಅನ್ನಿಸಿದ್ದು ಸಟೆಯಲ್ಲ. ಆಗಲೆ ಇಳಿ ವಯಸ್ಸು. ಆದರೂ ಉದ್ದಾದ ತಲೆಕೂದಲ ಎಣೆಗಂಟು ಹಾಕಿ ಬಂದರೆ, ಅವಳ ತುರುಬು ನೋಡಕ್ಕೇ ಒಂದು ಚೆಂದ. ಆದರೂ ನಮ್ಮ ಹಟ್ಟಿಗೆ ಅವಳು ಬಂದರೆ ಅಜುಬಾಜುದೋರೆಲ್ಲ ಒಂದು ತರಾ ನೋಡೋರು. ಅವಳು ಹೋಗೋವರೆಗೂ ಅಯ್ಯ ಕಾರೆ ಮುಳ್ಳಿನ ಮ್ಯಾಲೆ ಕುಂತವನ ಹಂಗೆ ಆಡೋನು!

ಕೇರಿದ ಬೀಜಗಳನ್ನು ಒಳಗೆ ತಂದು ನೀರಿನಲ್ಲಿ ನೆನೆ ಹಾಕಿ ಅಂಗಳದ ಮೂಲೆಗಿದ್ದ ಒಲೆಗೆ

ಉರಿ ಹಾಕಲು ಹೋದಾಗ ಬೂದಿ ರಾಶಿ ಮೇಲೆ ಬಿಚಾರ ಅಡ್ಡಿ ಅಸ್ಪದ ಇಲ್ಲದೆ ಪವಡಿಸಿದ್ದ ಕರಿಯುನನ್ನು ಪಚ ಪಚ ಅಂತ ತಿವಿದರೂ ಮಿಸು ಕಾಣದೆ ಬಿದ್ಕೊಂಡು ಚಂಡಿಮಾಡಿದಾಗ ಕೂಸಿ ನಂತೆ ಅದನ್ನೆತ್ತಿ ಹೊರ ಹಾಕಿದಳು. ಅದು ಪುನಾ ಒಂದು ಕಾಲು ನೆಕ್ಕುತ್ತಿದ್ದ ಹಾಗೆ ಸೌದೆ ಸೀಳುಗಳನ್ನು ಒಲೆಗೆ ತುರುಕಿ, ಸೀಮೆ ಎಣ್ಣೆ ಸುರಿದು ಕಡ್ಡಿ ಗೀರಿ ದಿಗ್ ಅನ್ನಿಸಿದಾಗ ಕರಿಯು ಬೆಚ್ಚಿ ಹಿಂದಕ್ಕೆ ನೆಗೆಯಿತು. ತನಗು ಒಳಗೆ 'ಹಂಸ' ಹಾರಿದ ಹಾಗಾಯ್ತು. "ಇನ್ನೆಷ್ಟು ದಿನ ಹೀಗೆ ಒಂಟಿ ಬಾಳುವೆ ಮಾಡೀಯೆ?" ಊರಿನಲ್ಲಿ ಒಬ್ಬರಲ್ಲ ಒಬ್ಬರು ಪುಸಲಾಯಿಸುತ್ತ ಇದ್ದರು. ಒಲೆ ಮೇಲೆ ಹಂಡೆ ಇಟ್ಟು ಹರಳು ಬೀಜಗಳನ್ನು ಅದರೊಳಗೆ ಸುರಿದು ಬೇಯಿ ಸುತ್ತ ಇದ್ದ ಹಾಗೆ, ಪೊರಕೆ ಇನ್ನೂ ಸಮೀಪ ತೆಗೆದುಕೊಂಡು ಹೋಗಿ ಮುಸ್ಸಾಗಿ ಉರಿ ಕಿತ್ತು ಕೊಳ್ಳುವವರೆಗೆ ಊದುತ್ತಲೆ ಇದ್ದಳು. ಹೊಗೆ ಯಿಂದ ಕಣ್ಣು ತೆಗೆದು ನೋಡಿದಾಗ ತಲೆಗೆ ಎಣ್ಣೆ ಹಾಕಿ ಮೀಣ ಮಾಡಲು ಒಲೆ ಅರಗಿಗೆ ಇಡಗಿದ್ದ ಎಣ್ಣೆ ಬಟ್ಟಲು ದೃಷ್ಟಿಗೆ ಬಿದ್ದು, ಅಯ್ಯೋ ಇನ್ನೆಂತ ಮೀಣ, ಆಗಲೇ ಯಾಪಾಟಿ ಟೇಂ ಆಗದೆ? ಅಂತ ಅನ್ನಿಸಿ. ಆರಿ ಹೋದ ಎಣ್ಣೆ ಬಟ್ಟಲನ್ನು ಎತ್ತಿಕೊಂಡು ಹೋಗಿ ಕ್ವಾಣೆ ಚಡಿಯಲ್ಲಿಟ್ಟು ಪುನಾ ಬಂದು ಒಲೆ ಉರುಬಿದಳು. ಉರುಬಿದಾಗ ಹಿಂದಕೆ [illegible] ಅಲುಗಾಡುತ್ತ ಇದ್ದ ಉರಿಯಲ್ಲಿ ಹಿಂದೆ ನಡೆ ದದ್ದು ಏನೇನೋ ಕಂಡ ಹಾಗಾಯ್ತು. ಪ್ರತಿ ದೀವಳಿಗೆಗೆ ಬರುತ್ತಿದ್ದಂಗೆ ಈ ಸಲದ ದೀವ ಳಿಗೇಲೂ ಅಕ್ಕ ಭಾವ ಬಂದರು. ಜೊತೆಗೆ ಅವರ ಎರಡು ಕೂಸುಗಳೂ ಬಂದಿದ್ವೊ ಒಂದಕ್ಕೆ ಐದು, ಇನ್ನೊಂದಕ್ಕೆ ಒಂದೂವರೆ, ದೊಡ್ಡದು ಹೆಣ್ಣು, ಚಿಕ್ಕದು ಗಂಡು. ಹಟ್ಟಿ ಬಾಗಿಲಲ್ಲಿ ಅವರ ಗಾಡಿ ಬಂದು ನಿಂತಾಗ ತಾನು ಹಟ್ಟಿ ಮುಂದಿನ ಎರಡು ಗೋಡೆ ಗೂಡಿನಲ್ಲೂ ಹಣತೆ ಕತ್ತಿಸ್ತ ಇದ್ದಳು. ಗಾಡಿಯಿಂದ ಇಳೀತ ಇದ್ದಂಗೆ ಗಂಡು ಕೂಸು, "ತಿಕ್ಕಮ್ಮ...ತಿಕ್ಕಮ್ಮ" ತೊದಲ್ತ ಕವಕನೆ ಬಂದು ತಬ್ಬಿಕೊತ್ತು. ನಾನು ಅದ್ನ ತತ್ತುಕೊಂಡು ಕೆನ್ನೆ ಕಚ್ಚಿ ಮುದ್ದಾ

ಡಿದೆ ಬಾವ ಅಕ್ಕನ ಕಡೀಕೆ ತಿರುಕ್ಕೊಂಡು ನೋಡೆ, ನಿನ್ನ ತಂಗಿಗೆ ಪೈಕಳು ಅಂದರೆ ಎಷ್ಟಾಸೆ-ತ್ಯಾಗ [illegible] ಅಂದು ನಾಚಿಸಿದ. ಬಾವ ಯಾವಾಗಲೂ [illegible] ನೆವದಲ್ಲಿ ಸವದಲ್ಲಿ ನನ್ನ ಮಾತಾಡಿಸ್ತ ಇರಬೇಕು. ಚಿಕ್ಕೋಳಾಗಿದ್ದಾಗ ಜಡೆ ಹಿಡಿದುಕೊಂಡು ತುಯ್ಯೋದು, ತೊಡೆ ಮ್ಯಾಲೆ ಕುಂಡರಿಸಿಕೊಂಡು ಕೆನ್ನೆ ಚಿವುಟೋದು, ಮುತ್ತು ಕೊಡೋದು, "ಮೊದಲೆ ನಿನ್ನ ನೋಡಿದ್ರೆ ನಿನ್ನ ಅಕ್ಕನ ಬದಲು ನಿನ್ನನ್ನೆ ಮದ್ವೆ ಆಯ್ತಿದ್ದೆ" ಅನ್ನೋದು! ಈಗ ಅವಳು ಬೆಳೆದು ದೊಡ್ಡೋಳಾಗಿರೋದರಿಂದ ಅವಳ ಮಯ್ಯಿ ಮುಟ್ಟಕ್ಕೆ ಆಗಕ್ಕಿಲ್ಲ; ಮಾತ ನಲ್ಲಾರು ಮುಟ್ಟಿಕೊಳ್ಳಾನ ಅಂತ ಆಸೆ. ತನ್ನ ಪಾಡಿಗೆ ತಾನು ಇದ್ದರೂವೆ ಹಂಗೆ ಹಿಂಗೆ ಲೊಟ್ಟೆ ಲೊಸಗು ಅಂತ ಬೆಂಟೆಕೊಂಡು ಬೆಂಟೆಕೊಂಡು ಮಾತಾಡಿಸ್ತಾನೆ ಇರಬೇಕು. ಅಕ್ಕನಿಗೆ ಇದೊಂದೂ ಸೇರ್ತಾನೆ ಇರನಿಲ್ಲ. "ಅವಳ ತಂಟೆ ನಿಮಗ್ಯಾಕೆ? ಸುಮ್ಕಿರಿ"– ಅಂತ ಸಿಡುಕಿದ್ರೂವೆ ಬಾವ ಘಂಟ. ತೀಟೆ ಮಾಡ್ತಾನೆ ಇರೋನು. ಹಬ್ಬದೂಟ ಆದ ಮ್ಯಾಲೆ ಎಲಡಿಕೆ ಜಗೀತ ಅಯ್ಯನ ಕುಟ್ಟೆ ತನ್ನ ಲಗ್ನದ ಸುದ್ದಿ ಎತ್ತಿದ್ದ. ಅಕ್ಕನೂ [illegible] ಕಂಬಕ್ಕೆ ಒರಕ್ಕೊಂಡು ಅಯ್ಯನಿಗೆ [illegible] ಕೊಡ್ತ ಮಧ್ಯ ಮಧ್ಯ [illegible] ಒಗ್ಗರಣೆ ಹಾಕ್ತಿದ್ಲು. ಹೊದ ಹೊದಲ್ಲು ಹ್ಹಾ ಹ್ಹೂ ಅರ್ದ ಮಾತು ಮುಕ್ಕಾಲು ಮಾತು ಆಡ್ತ ಇದ್ದ, ಅಯ್ಯ ಕಡೀಕೆ "ಈ ಸಮ್ಮಂದ ಸುತರಾಂ ನಂಗೊಪ್ಪಿಗೆ ಇಲ್ಲ. ಒಂದು ಮನೆಗೆ ಅಕ್ಕ-ತಂಗಿ ಇಬ್ಬರನ್ನೂ ಕೊಡಕ್ಕೆ ನಂಗೆ ಮನಸ್ಸಿಲ್ಲ. ಈ ಮಾತ ಹೋದ ಸಲಾನೆ ನಿಮಗೆ ಹೇಳನಿಲ್ಲವ?" ಕಡ್ಡಿ ಕತ್ತರಿಸಿದಂಗೆ ಹೇಳಿದ. ಈ ಸಲ ಮಾತ್ರ ಅಯ್ಯನ ಮಾತು ನಂಗೆ ಒಪ್ಪಿಗೆ ಆಗಿತ್ತು. ನನ್ನ ಬಾವನ ತಮ್ಮ ಸುದ್ದಾಂಗ ಪೋಲಿಯಂತೆ. ಇಸ್ಪೀಟು ಹುಚ್ಚು. ವಸಿ ದುಡ್ಡು ಕಳೆದಿದ್ದಾನವ್ವ– ಅಂತ ಯಾವಾಗ್ಲೊ ಒಂದು ಸರ್ತಿ ಕಾಣದೆ ಅಕ್ಕನೆ ಅಂದದ್ದುಂಟು. ಆಗ ಒಂಟಿ ಮರದಂಗೆ ಬಾಳುವೆ ಮಾಡೇನೆ ಹೊರತು ಅಂತೋನ ಜಪ್ಪಯ್ಯ ಅಂದರು ಮಾಡಿಕೊಳ್ಳಲಿಕ್ಕಿಲ್ಲ ಅಂತ ನನ್ನ ಮನಸೂ ಕಲ್ಲಾಯ್ತು. ರಾತ್ರೆ ಎಲ್ಲಾರ ಒಬ್ಬಟ್ಟಿನ

ಊಟ ಉಂಡು ಮಲಕ್ಕೊಂಡರು. ಮಡಿಕೆ, ಸೊಟಗ ತೊಳೆದು, ಹಾಲಿನ ಗಡಿಗೆಗೆ ಹೆಪ್ಪಾಕಿ, ಅದ್ನ ನೆಲುವಿನ ಮ್ಯಾಲೆ ತೂಗಾಕಿ, ತಾನೂ ಬಂದು ಉರುಳಿಕೊಂಡಿದ್ಲು. ಬ್ಯಾಗನೆ ನಿದ್ದೆ ಬಂದಿತ್ತು. ಒಂದು ಹೊತ್ನಲ್ಲಿ ಮಯ್ಯಿಮ್ಯಾಲೆ ಬಾರ ಬಿದ್ದಂಗಾಯ್ತು. ಎದೆ ಹಿಸುಕಿದಂದಾಯ್ತು. ಹೆದರಿ ಹೆಪ್ಪಳಿಸಿ ಹೋದೆ. ಕಿರುಚಕ್ಕೆ ಬಾಯೆ ಬತ್ತ ಇಲ್ಲ! ಹಂಗು ಸಕುತಿ ಎಲ್ಲ ಕೂಡಿಸಿ ಅಕ್ಕ ಅಕ್ಕ ಅಂತ ಕೂಗಿದ್ದು ಬಯಕ್ಕೆ ಗಂಟಲಲ್ಲೆ ಗೊಳಗೊಳ ಅಂದಿರಬೇಕು. ದಸಕ್ಕನೆ ನನ್ನ ಮಯ್ಯಿ ಮ್ಯಾಗಿನ ಬಾರ ಇಳುಕಿದಂಗಾಗಿ ಯಾರೊ ಓಡೋದಂಗಾಯ್ತು. ನಾನೂ ಕಣ್ಣು ಬಿಚ್ಚಕ್ಕಾಗದೆ ಏಳಕ್ಕಾಗದೆ ಹಂಗೆ ಬಿದ್ದಿದ್ದೆ. ವಸಿ ಹೊತ್ನಲ್ಲೆ ಅಕ್ಕನೂ ಅವ್ವಣೆ–ಅವ್ವಣೆ ಅಂತ ಕೂಗಿದ್ಲು. ಬಾವ ಬೆಂಕಿ ಕಡ್ಡಿ ಗೀರಿ, "ಯಾಕೆ, ಏನಾಯ್ತು?" ಅಂತ ಕೇಳಿದ. "ಯಾರೋ ಮಯ್ಯಿ ಮ್ಯಾಲೆ ಬಂದು ಬಿದ್ದಂಗಾಯ್ತು." ಅಂತ ನಡನಡಗ್ತ ಅಂದ್ಲು. ಬಾವ ನಗ್ತ "ಒಳ್ಳೆ ಗೆಣಕಾತಿ, ಇದಕ್ಕೆಲ್ಲ ಬಯ ಬೀಳೋದ?... ಅಲ್ನೋಡು, ಅಲ್ಲಿ ಹೋಯ್ತಾ ಅದಲ್ಲ ಕರಿ ಕೊತ್ತಿ–ಅದೆ ಇರಬೇಕು, ನಿನ್ನೆದೆ ಮ್ಯಾಲೆ ಬಂದು ಕುಂತಿದ್ದು" ಅಂದ. "ಎಲ್ಲಿ, ಕೊತ್ತಿ ಕಾಣ್ತಾನೆ ಇಲ್ಲ!" ಅಂದ್ಲು. "ಅಲ್ನೋಡು ನಡುಮನೆ ಅಡ್ಡ ಗೋಡೆ ಮ್ಯಾಲ ಕಡೆದು ಅಡಿಗೆ ಕ್ವಾಣೆಗೆ ದಾಟುತಾ ಅದೆ" ಅಂತ ಬಾವ ಸಮಜಾಯಿಸಿ ಕೊಟ್ಟಾಗ "ಇಲ್ಲ, ನಂಗೆ ಕಾಣ್ತಾನೆ ಇಲ್ಲ" ಅಕ್ಕ ಅಂತಾ ಇದ್ಲು. ನಿಂಗೊಳ್ಳೆ ಬ್ರಾಂತು ಇಲ್ಲಿ ಇನ್ನೇನು ಬರಕ್ಕೆ ಸಾಧ್ಯ? ನಿಂಗಸ್ಟು ಭಯ ಆದ್ರೆ ನಾನೇ ನಿನ್ನ ಮಗ್ಗಲಿಗೆ ಬತ್ತೀನಿ ತಾಳು" ಅಂದ ಭಾವ ಮಕ್ಕಳ್ನ ದಾಟಿಕೊಂಡು ಅವಳ ಹತ್ತಿರ ಹೋದ ಸದ್ದು. ಆಮ್ಯಾಕೆ ಅವರಿಬ್ಬರೂ, ಛೆ, ಥೂ– ನಾಚಿಗ್ಗೆಟ್ಟೋರು... ತಾನಿಲ್ಲೆ ಮಲಗಿದ್ರೂವೆ...ಸರಿ, ತನ್ನ ಮ್ಯಾಲೆ ಬಂದು ಬಿದ್ದಿದ್ದು, ಆಮ್ಯಾಕೆ ಅಕ್ಕನ ಮ್ಯಾಲೆ ಹೋಗಿ ಬಿದ್ದಿದ್ದು ಗೌರಕ್ಕನ ಹಟ್ಟಿ ಕರಿ ಕೊತ್ತಿನೆ ಅಂತ ಅದ್ಯಾವ ಖಾತ್ರಿ? ಕರಿ ಕೊತ್ತೀನೆ ಆಗಿದ್ರೆ, ಅಕ್ಕನಿಗೆ ಕಾಣಬೇಕಾಗಿತ್ತಲ್ಲ? ಅತ್ವಾ ಇದರಲ್ಲಿ ಏನಾರ ಮೋಸ ಇದೆಯ? ಬಾವನ ಮ್ಯಾಲೆ ಯಾಕೊ ಅನುಮನಸು ಬಂತು. ಅವನು ನನ್ನ ತಾವಿಗೆ ಬಂದು ನಾ ಗಲಾಟೆ ಮಾಡಿದೆ ಅಂತ ಅಕ್ಕನ ಮ್ಯಾಕ್ಕೊ ಹೋಗಿ, ಕರಿ ಕೊತ್ತಿ ಅಂತ ನಾಟಕ ಮಾಡಿರಬೌದ?... ಹಂಗಿದ್ದರೆ ಅಕ್ಕನಿಗೆ ಬಾವನ ಬಾರಕ್ಕೂ ಕೊತ್ತಿ ಬಾರಕ್ಕೂ ಗೊತ್ತಾಗದೆ ಇರತಿತ್ತ?... ಅಕ್ಕನೆ ಇದ್ದಾಗ ಬಾವ ತನ್ನ ತಾವಕೆ ಯಾಕೆ ಬರಬೇಕು ಅಂತೀನಿ? ಅವಳಿಗೆ ಯಾವ ಮಹಾವಯಸು?... ನಂಗೆ ಒಂದೈದು ವರುಷ ದೊಡ್ಡೋಳೇನೊ... ಒಂದೂ ಅರ್ಥವಾಗದೆ ಮನಸು ಆಕಡಿಂದ ಈ ಕಡೀಕೆ, ಈ ಕಡಿಂದ ಆ ಕಡೀಕೆ ವಾಲಾಡಿ ವಾಲಾಡಿ ಬೆಳಗು ಮೂಡಿತು.

ಹರಳು ಬೀಜ ಚೆನ್ನಾಗಿ ಬೆಂದು, ದದ್ದಾಗಿ, ಬಿರುಕು ಬಿರುಕಾದಾಗ, ಅದನ್ನು ನೀರು ಸಹಿತ ಮಕರಿಗೆ ಸುರಿದು, ನೀರೆಲ್ಲ ಸೋರಿದ ಮೇಲೆ, ಚಾಪೆ ಹಾಸಿ, ಬಿಸಲಿಗೆ ಪುನಾ ಒಣಗಿ ಹಾಕಿದಳು. ಆ ದೀವಳಿಗೆ ಕಳೆದು ಅಕ್ಕ ಬಾವ ಮಕ್ಕಳು ಎಲ್ಲಾರು ಪುನಾ ಊರಿಗೆ ಹೊರಟು ಹೋದ ಬಳಿಕ ತನ್ನ ಮನಸ್ಸು ಮಂತು ಆಡಿದ ಮಜ್ಜಿಗೆ ಹಾಗೆ ಆಗಿತ್ತು. ನಾಕು ದಿನ ಬಿಸಲಿನಲ್ಲಿ ಚೆಂದಾಗಿ ಒಣಗಿದ ಮೇಲೆ ಅದನ್ನು ಒಳಕಲ್ಲಿನಲ್ಲಿ ಹಾಕಿ, ನೀರು ತಕ್ಕಳಿಸಿಕೊಂಡು ತಕ್ಕಳಿಸಿಕೊಂಡು ಒಳಕೆಯಲ್ಲಿ ಕುಟ್ಟಿ, ಮೊರದಲ್ಲಿ ಕೊಚ್ಚಿ, ಆ ಹರಳು ಹುಡಿಯನ್ನು ಮುದ್ದೆ ಮಾಡಿ, ಮರುಳು ನೀರಿಗೆ ಹಾಕಿ, ಪುನಾ ಬೇಯಿಸುವುದಕ್ಕೆ ಇಟ್ಟಳು. ಅದು ನೀರೊಳಗೇ ಬೆಂದು, ನೀರು ವಸಿ ವಸಿಯಾಗಿ ಸುಂಡುತ್ತಾ ಇತ್ತು. ಮಟ ಮಟ ಮಂಗಳವಾರ ಊರು ಬುಟ್ಟು ಹೋಗಬ್ಯಾಡ ಅಂದರೂವೆ ಒಂದು ಜೊತೆ ಗಿಡ್ಡಗಳ್ನ ನೋಡಿಕೊಂಬತ್ತೀನಿ ಅಂತ, ಅಯ್ಯ ಆ ಕಾಡಳ್ಳಿಗ್ಗೆ ಹೋದ್ದು, ನಮ್ಮ ಹಟ್ಟಿಗೆ ಮಿತ್ತಾಯ್ತು. ಆ ಹಳ್ಳೀಲಿ ತೆಳ್ಳತೆಳ್ಳಗೆ ಪ್ಲೇಗ್ ಉಪದ್ರ ಕಾಣಿಸಿಕೊಂಡದ್ದ ಆ ಹಳ್ಳಿ ಜನ ಮುಚ್ಚಿ ಮೊಗಂ ಮಾಡಿದ್ರಿಂದ. ಹೊರಗಿನ ಜನ ಮೋಸ ಹೋದ್ರು. ಅದರಲ್ಲಿ ನಮ್ಮಯ್ಯನೂ ಒಬ್ಬ. ಅಲ್ಲಿಂದ ಬತ್ತಾನೆ, ಜೊರ ಹೊತ್ತುಗೊಂಬಂದ. ಗಂಜಿ ಕಾಯಿಸಿ ಕೊಟ್ಲು. ರಾತ್ರಿ ಪೂರಾ ಪ್ಲೇಗಿನ ಇಲಿ ಒದ್ದಾಡೊ ಹಂಗೆ ಅತ್ತಿಂದಿತ್ತಾಗಿ ಇತ್ತಿಂದತ್ತಾಗಿ ಹೊರಳಾಡುತ್ತ ಇದ್ದ. ಅಂಗತ್ತ ಮಲಕ್ಕೊಂಡರೂ ಆಗದು.



ಹೊಕಾಡೆ ಮಲಕ್ಕೊಂಡರೂ ಆಗದು' ಎದ್ದು ಕುಂತರೂ ಆಗದು. ಸಿಬ್ರಿ ಸಿಬ್ರಿ. ಬೆಳಿಗ್ಗೆ ಊರು ಎದ್ದೇಳ್ತಿಂಗೆ ಅದೇನೋ ಗಜ್ಜುಗದ ದಪ್ಪಕ್ಕೆ ಗಂಟು ಕಂಕುಳಲ್ಲಿ ಕಾಣಿಸಿಕೊಂಡು ಅಯ್ಯ ಎಡದ ಕೈನ್ನ ಎತ್ತಕ್ಕಾಗದೇನೆ ನರಳಾಡೋದು ಕಂಡು, ಕ್ವಾಟೆ, ಆಚೆಗಿದ್ದ ಪಂಡಿತರ ಕರಕೊಂಬಂದು ತೋರಿಸಿದೆ. ಕೆಂಪಗೆ ಗದಗದ ಅಂತಿದ್ದ ಗಂಟ ಪರೀಕ್ಷೆ ಮಾಡಿದ ಪಂಡಿತರು "ಇದು ಕಂಕುಳ ಕುರ ಅನ್ನೋ ಹಂಗೆ ಕಾಣಿಸೋದಿಲ್ಲ. ಪ್ಲೇಗಿನ ಗಡ್ಡೆ ಅಂತಾನೆ ತೋರ್ತದೆ. ನಾಳೆವರೆಗೂ ಕಾದು ನೋಡೋಣ. ಸದ್ಯಕ್ಕೆ ಒಂದು ಔಷಧ ತರ್ತೀನಿ, ತಾಳು" ಅಂದು ತಮ್ಮ ಪಟ್ಟಿಗೆ ಹೋಗಿ ಅದೆಂತದ್ದೊ ಬೇರು ತಂದು ಗಂಧದ ಕಲ್ಲ ಈಸುಕೊಂಡು ಅವರಲ್ಲೆ ತೇದರು. "ಹುಂ. ತಕ್ಕೊಮ್ಮ. ಆ ಗಂಟಿಗೆ ಈ ಲೇಪ ಹಾಕು. ನಾಳೆ ಹೊತ್ತಿಗೆ ಕರಗಿದರೂ ಕರಗಬಹುದು" ಅಂದರು. ಆ ಪ್ರಕಾರ ನಾನು ಲೇಪ ಹಾಕಿದೆ. ಮಾರನೆ ಬೆಳಿಗ್ಗೆ ಗಂಟು ಇನ್ನೂ ವಸಿ ದಪ್ಪಾಗಿ ರಂಗು ರಂಗಾಗಿತ್ತು. ಅಯ್ಯನಿಗೆ ಎಡದ ತೋಳೆತ್ತೋದು ಇನ್ನೂ ಕಷ್ಟ ಆಯ್ತು. ಪಂಡಿತರು ಬಂದು ನೋಡಿ ಇದು ಪ್ಲೇಗಿನ ಗಡ್ಡೇನೆ ಅಂತ ತೀರ್ಮಾನ ಮಾಡಿದರು. ನಂಗೆ ಆಕಾಸ ಭೂಮಿ ಎರಡೂ ಒಂದಾದಂಗೆ ಆಯ್ತು. ಅಯ್ಯನ್ನ ಹೆಂಗಾರ ಮಾಡಿ ಉಳಿಸಿ ಪಂಡಿತರೆ ಅಂತ ಗ್ವಾಗರೆದು ಅವರ ಕಾಲುಕಟ್ಟಿದೆ. "ಹೆದರಿಕೊಳ್ಳಬೇಡ. ನಿಮ್ಮ ತಂದೆ ಉಳಿಸೋಕೆ ನನ್ನ ಶಕ್ತಿ ಮೀರಿ ಪ್ರಯತ್ನ ಮಾಡ್ತೀನಿ" ಅಂತ ತಲೆ ಸವರಿ, ಅದ್ಯಾವುದೋ ಬ್ಯಾರೆ ಜಾತಿ ಬೇರ ತಕ್ಕೊಂಬಂದು ತೇಯಕ್ಕೆ ಮುಟ್ಟಿಕೊಂಡರು. ನಾನು ಪಕ್ಕದಲ್ಲೆ ಕುಂತು ಕಣ್ಣೀರು ಸುರಿಸ್ತಿದ್ದೆ. ತೇಯ್ತಾ ತೇಯ್ತಾ ಪಂಡಿತರು ಕತ್ತೆತ್ತಿ ನೋಡಿ, "ಅಯ್ಯೋಪ. ದೇವರಿದ್ದಾನೆ" ತಮ್ಮ ಸಲ್ಯಂದ ಕಣ್ಣೀರೊತ್ತಕ್ಕೆ ಬಂದರು. ನಾಚಿಕೆ ಆಗಿ ಮೊಕ ತಿರುಗಿಸಿದೆ, ಆದರೂವೆ ನನ್ನೊಳಗಡೆ ಎಲ್ಲೊ ವಸಿ ಸಮಾಧಾನ ಆದಂಗಿತ್ತು. ಆ ಕೆಟ್ಟ ಹೊತ್ನಲ್ಲಿ ಪಂಡಿತರು ದ್ಯಾವರಂಗೆ ಕಂಡರು. ಗಂಧ ಗಟ್ಟಿ ಆಯ್ತಾ ಬಂತು. "ಹುಂ, ತಕ್ಕೊಂಹೋಗಿ

[illegible]" ಅಂದರು. [illegible]ಗೆ [illegible] ಮೂಗಿ. ಅಯ್ಯ ಲೇಪ ಹಾಕಿಸಿಕೊಳ್ಳಕ್ಕೆ ವಲ್ಲ. ನಾ [illegible] ಬಿಡುವಲ್ಲೆ. ಯಾವಾಗ್ಲು ಅವನ ಸವಾ ಚಾರಾನೆ ಇಷ್ಟು. ಬೀಜವ ಹೋರಿ [illegible] ಕೊಂಡು ಬಂದರೂವೆ ಹಕೋಟಿ ಮಾಡಕ್ಕೆ ಸಕ್ತಿ ಇರೊ ಗಂಡು. ಹಂಗೇನೆ--ನೆಗಡಿ, ಕೆಮ್ಮಲು, ತಲೆನೋವು, ಸಣ್ಣದಾಗಿ ಪುಟ್ಟದಾಗಿ ವಸಿ ಯತ್ವಾಸ ಆದರೂವೆ ಕೈಕಾಲು ಬುಟ್ಟು ಕುಂತು ಕೊಳೊ ಕೂಸು. ಗಂಟು ಮುಟ್ಟುಬೊಡವಲ್ಲ. ಬಾಯಿ ಬಡಿಯೋನು. ಪಂಡಿತರೆ ಬಂದು ಕುಂತು "ಹಾಕಿಸಿಕೊಳಪ್ಪ. ಎಲ್ಲರಿಗೂ ಬುದ್ಧಿ ಹೇಳೋ ನೀನೆ ಹೀಗೆ ಆಡಿದರೆ ಹೇಗೆ?... ಸ್ವಲ್ಪ ಲೇಪ ಹಾಕಿದ ಮೇಲೆ ನೋಡು. ಹಾಯಾಗಿ [illegible] ಗಾಗುತ್ತೆ" ಅಂತ ಬಿನ್ನಾಣವಾಗಿ ಹಾ[illegible]ದ ಮ್ಯಾಲೇನೆ ಅವನು ಲೇಪ ಹಾಕಿಸಿಕೊಂಡದ್ದು.

ದಿನದಿಂದ ದಿನಕ್ಕೆ ಕಂಕುಳ ಗಂಟು ಕೆದರಿ ಕೆಕ್ಕರಿಸಿ ಬಲವಾಗುತ್ತ ಬಂತು. ಪಂಡಿತರೂ ಕೂಡ ಹಗಲು ಅನ್ನದೆ ರಾತ್ರಿ ಅನ್ನದೆ ದುಡಿ ದರು. ಆದರೂವೆ ಗಂಟು ಒಡೆಯೋದಾಗಲಿ ಇಮರೋದಾಗಲಿ [illegible]. ಗಂಟು [illegible] ತರು ತರಾವರಿ ಬೇರುಗಳ [illegible] ಹೊತ್ತುಗೊಂಬಂದರು. ಲೇಪ [illegible] ದೀಪ ಮಾತ್ರ ಇನ್ನೂ ಕತ್ತಿಸಿದಂಗೆ ಇತ್ತು. ಆ ಕತ್ತಲಲ್ಲೇ ಮೋಡ ತುಳಕಾಡಿ ಮನೆ ಅಂಗಳಕ್ಕೆಲ್ಲ ಮಳೆ ಕೇರಕ್ಕೆ ಸುರು ಆಯ್ತು. ಪಂಡಿತರು ಬಟ್ಟಲಿಗೆ ಹಾಕಿಕೊಟ್ಟ ಗಂಧ ತೆಗೆದುಕೊಂಡು ಹೋಗಿ ತನ್ನ ತಂದೆಯ ಪಕ್ಕ ದಲ್ಲಿ ನಿಂತು ಮೆತುವಾಗಿ "ಅಯ್ಯ–ನಾನು ಕನಯ್ಯ ಔಸ್ದ ತಂದಿವ್ನಿ" ಅಂದರೂ ಅವನಿಗೆ ಎಚ್ಚರಾಗ ಲಿಲ್ಲ. [illegible] ಇವನಿಗೆ [illegible]ಲ್ಲಿ. ಎದ್ದು ಬಿಡ್ತಾನೆ ಅಂತ ಪೆಟ್ಟಿ ಮೇಲೆ ಪೆಟ್ಟಿ ಇಟ್ಟು ಹಿಂದಕ್ಕೆ ಬಂದಳು. ಪಂಡಿತರು [illegible] ಇದ್ದರು. "ಪಂಡಿತರೇ, ನೀವಿನ್ನು ನಿದ್ದೆ ಕೆಡೋದು ಬ್ಯಾಡ. ನಂಗೂ ಗೊತ್ತಾಗದೆ–ಯಾವ ಬೇರ ಯಾವಾಗ ತೇಯಬೇಕು ಅಂತ. ಇನ್ನು ನಿಮ್ಮ ಹಟ್ಟಿಗೋಗಿ" ಅಂತಿದ್ದ ಹಾಗೆ ದೊಡ್ಡದಾಗಿ ಆಕಳಿಕೆ ಬಂತು. "ಮೂರು ದಿನದಿಂದ ನಿನಗೂ ನಿದ್ದೆ ಇಲ್ಲ. ಮೊದಲು ನೀನು ಮಲಗುಹೋಗ. ಕೂತುಕಡೆಯೇ ಹೇಗೋ ನಾನು ಅಷ್ಟಷ್ಟು ನಿದ್ರೇ ಸಂಪಾದಿಸಿದೀನಿ" ಅಂದ ಪಂಡಿತರು, ಸುಮ್ಮನೆ ನಿಂತವಳನ್ನು ಒಂದು ತರಾ ನೋಡಿ "ಹೋಗವ್ವ" ಅಂತ ಮಾತನ್ನೆ ಮುದ್ದಿಸೋ ಹಾಗೆ ಅಂದರು. ಅವರು ನೋಡಿದ್ದು ಅಂದದ್ದು ಎಲ್ಲವೂ ಯಾಕೋ ಅವಳಿಗೆ ಅನುಮಾನ ನಿಂತೇ ಅವಳು ಯೋಚಿಸಿದಳು. ನಮ್ಮ ಪಟ್ಟಿಗೆ ಕಾಲಿಟ್ಟ ದಿನದಿಂದ ಅವರ ಬಾಯಿ ಆಡ್ತಿದ್ದ ಮಾತೆಲ್ಲ ಮಗಳೆ– ಮಗಳೆ. ಕಣ್ಣು ಮಾಡ್ತಿದ್ದ ಚಾಷ್ಟ್ಯ ಎಲ್ಲ ಬ್ಯಾರೆ–ಬ್ಯಾರೆ! "ಹೋಗವ್ವ. ಬೇಕಾದಾಗ ನಾನೆ ಬಂದು ಎಳಿಸ್ತೀನಿ" ಇನ್ನೂ ಸುಣುಪಾಗಿ ಮಾತು ಸವರಿ ಅಂದರು. ನಾವು ಕ್ವಾಟೆ ಒಳಗಿರೊ ಜನವೇ ಒಂದು ತರಾ, ಅಂದು ಕೊತ್ತ ನಡುಮನೆ ಕತ್ತಲ ಅತ್ತಾಗಿ ಇತ್ತಾಗಿ ತಳ್ಳಿ ಕೊಂಡು ಹೋಗಿ ಚಾಪೇನೂ ದಿಂಬನೂ ತಡ ಕಾಡ್ತಿದಂಗೆ ಹಿಂದಿನಿಂದ ಬೆಳಕು ಹರಿದಿದ್ದರಿಂದ ಹೆದರಿ, ಚಕ್ಕನೆ ತಿರುಗಿ, "ಅವ್ವಣೆ" ಅಂತ ಕೂಗಿದ್ಲು ಹೊಸಲಲ್ಲಿ ದೀವಿಗೆ ಹಿಡಿದು ನಿಂತಿದ್ದ ಪಂಡಿ ತರು "ಅಂಜಬೇಡ, ನಾನೆ" ಅಂದಾಗ ಅವರ ಮೂತಿ ಇನ್ನೂ ಅಗಲವಾಗಿ ಅವರ ಮೂಗು ಇನ್ನೂ ಚೂಪಾಗಿ ಪದ್ದಿನ ಹಾಗೆ ಕಂಡು, ಸ್ವಾಲೆ ಬಿಚ್ಚುತ್ತಾ ಇದ್ದಾಗ ಪಸಕ್ಕನೆ ಯಾರೊ ಒಳಗೆ ಬಂದಂಥ ಅನುಭವವಾಗಿ ಎದೆ ಡಬ್ ಡಬ್ ಡಬ್ ತಮಟೆ ಬಾರಿಸಲು ಶುರುವಾಯಿತು. ಮಳೆ ತಕ್ಕಳಿಸುತ್ತಿದ್ದಂಗೆ ಅಂಗಳದಲ್ಲಿ ಗುಡುಗು, ಮಿಂಚು. ಅದರ ಮುಂಬಿ ನಲ್ಲೆ ಅವರು ಸಾವಕಾಶವಾಗಿ ಹಿಂದಿರುಗಿ ಹೋದದ್ದು ಕಂಡು ಸಮಾಧಾನವಾಗಿ ಚಾಪೆಯ ಮ್ಯಾಲೆ ಮೈಯೊಡ್ಡಿ ಕಣ್ಮುಚ್ಚಿದಳು. ಮಳೆ ಸ್ವಲ್ಪ ಜೋರಾಗಿ ಅವರ ಸದ್ದಿನಲ್ಲಿ ಇಷ್ಟು ದಿನ ಗೋಳು ಹುಯ್ಯುವ ಅಯ್ಯನ ಕಾಯಿಲೆ

ಈಗ ಎಲ್ಲೊ ದೂರದಲ್ಲಿ ತೇಲಾಡ್ತ ಇತ್ತು. ಇಷ್ಟು ದಿನ ನಿದ್ದೆ ಕೆಟ್ಟಿದ್ದರೂ ಈ ದಿನ ಯಾಕೊ ನಿದ್ದೆ ಹತ್ತಾ ಇಲ್ಲ. ಕಣ್ಣು ತಟಕ್ಕನೆ ಬಿಚ್ಚಿ, ತಟಕ್ಕನೆ ಮುಚ್ಚಿ, ಮತ್ತೆ ಬಿಚ್ಚಿದಾಗ ಹೊರಗೆ ತೊಟ್ಟಿಯ ಕಂಬದ ಸನಿಯದಲ್ಲಿದ್ದ ದೀವಿಗೆ ನಂದಿ ಹೋಗಿ ಕಣ್ಣಿಗೆ ಕತ್ತಲೆ ತುಂಬಿತು. ಅಂಗಳದ ಮಳೆಯ ಮ್ಯಾಲಿಂದ ಬೀಸಿದ ಗಾಳಿ ಕಲ್ಕುಣಿಕೆ ಕಂಬಳಿಯೊಳಗೂ ನುಸಿದು ಸ್‌ಸ್‌ಸ್ ನಡುಗಿಸಿತು. ಕೈಕಾಲು ಕೊಕ್ಕರಿಸಿ ಮಲಗುವಂತೆ ಮಾಡಿತು. ಕತ್ತಲೇಲಿ ಪುನಾ ಎದ್ದು ಇನ್ನೊಂದು ಕಂಬಳಿ ತಕ್ಕೊಂಬಂದು ಹೊದಿಯೋಕೂ ಬೇಸರ.

ಯಾವಾಗಲೊ ನಿದ್ದೆ ಬಂದಿರಬೇಕು. ನಿದ್ದೇಲಿ ಅವ್ವ ಹೇಳ್ತಾ ಇದ್ದ ಕಥೆಯ ರಾಜಕುಮಾರಿ ತಾನೆ ಆದಂಗೆ ಕನಸು. ಪಟ್ಟೆ ಸೀರೆ ಉಟ್ಟು, ವಜ್ರದ ವಾಲೆ ಜುಮುಕಿ ಕೈ ತುಂಬ ಬಂಗಾರದ ಬಳೆ ತೊಟ್ಟು ಹೂದೋಟದಲ್ಲಿ ಓಡಾಡ್ತ ಇದ್ದಾಗ, ಅಷ್ಟು–ರಾಜಕೊಮಾರ ಬಿಳಿ ಕುದುರೆ ಮ್ಯಾಲೆ ಕುಂತು ಬಂದೇ ಬುಟ್ಟ! ರಾಜಕುಮಾರ ಕುದುರೆಯಿಂದ ಇಳಿದ!... ತನ್ನ ಹತ್ತಿರಕ್ಕೆ ಬತ್ತಾ ಅವನೆ... ಬಂದ!... ತಬ್ಬಿಕೊಂಡ......" "ನಾನೆ ನಾನೆ ಹೆದರಿಕೊ ಬೇಡ." ಕುಪ್ಪಸದ ಗುಂಡಿ ಬಿಚ್ಚಿ ಒಳಗಡೆ ಕೈಯಾಡಿಸುತ್ತಿದ್ದ ಪಂಡಿತರು ನಯವಾಗಿ ಹೇಳಿದರು. ಬೆಚ್ಚಿ ಎಚ್ಚರವಾದರೂ ಯಾವುದೊ ಲೋಕದಿಂದ ಇನ್ಯಾವುದೊ ಲೋಕಕ್ಕೆ ಬಂದು ಬಿದ್ದವಳಂತೆ ಆಗಿತ್ತು ಅವಳ ಸ್ಥಿತಿ. ತನ್ನ ದೇಹದ ಮೇಲೆ ಅವಳ ಹತೋಟಿ ತಪ್ಪಿದಂತಿತ್ತು. ಅಂಗಳದ ನಾಕೂ ಮೂಲೆಯ ಸೂರುಗಳಿಂದ ಸುರಿಯೊ ದೊಡ್ಡೊಡ್ಡ ಮಳೆ ಸದ್ದು. "ಅಯ್ಯ..." ತೊದಲಿದಳು. "ನಾನೆ ಲೇಪ ಹಾಕಿ ಬಂದೆ. ಮಲಗಿ ಎಚ್ಚರವೆ ಇಲ್ಲ" ಪಂಡಿತರು ಅಂದಾಗ ಬೇರಿನ ವಾಸನೆಯ ಚುಂಗು ಮೊಕಕ್ಕೆ ಲಗ್ಗೆ ಹಾಕಿತು. ಕ್ರಮೇಣ ಆ ಚುಂಗು ಮಾಯವಾಗಿ, ಅವಳು ಮತ್ತೆ ಕನಸಿನ ರಾಜಕುಮಾರಿಯೆ ಆಗಿದ್ದಳು. ಆಮ್ಯಾಲೆಲ್ಲ ಕೀಲು ಕುದುರೆ ಮ್ಯಾಲೆ ಕುಂತೇ ಸವಾರಿ....

ಹಟ್ಟಿ ಮುಂದಿನ ಕದ ತೆಗೆದು ಪಂಡಿತರು ಹೊರ ಬೀಳುವ ವ್ಯಾಳ್ಯಕ್ಕೆ ಮಳೆಯ ರಭಸ ಕಮ್ಮಿಯಾಗಿ ದಾರದ ಹಾಗೆ ಸಣ್ಣಗೆ ಬೀಳುತ್ತಿತ್ತು. ಜಗುಲಿಯಿಂದ ನಾಕು ದಾಟಿನ ಕತ್ತಲೆ ಆಚೆಗೆ ಅವರು ಕಾಣಲಿಲ್ಲ. ಅವಳು ಯಾಕೊ ತಟಕ್ಕನೆ ನಕ್ಕಳು. ಏಕೆಂದು [illegible] ಊಟ ಮಾಡದೆ ಇದ್ದರೂ ಇವತ್ತು ಯಾಕೊ ಹೊಟ್ಟೆ [illegible] [illegible]. ಅವಾಗನೆ ಅಯ್ಯನ ಕಂಕುಳ ಗಂಟು, ಪಂಡಿತರು ತೇಯುತ್ತಿದ್ದ ಗಂಧ, ತಾನು ಗಂಟಿಗೆ ಹಾಕಿದ್ದ ಲೇಪ, ಎಲ್ಲ ಮರೆತುಹೋದಂತಾಗಿತ್ತು. ಎಣ್ಣೆ ಮೀಣ ಮಾಡಿ ತಲೆ ಕೂದಲು ಒಣಗಿಸಲಿಕ್ಕೆ ಬಿಚ್ಚಿ ಬೆನ್ನು ಮ್ಯಾಲೆ ಹರಡಿ ಬಿಸಿಲಿನಲ್ಲಿ ಹಿಂದೆ ನಿಂತುಕೊತ್ತ ಇದ್ದಂಗೆ, ರಾತ್ರಿ ಅನ್ನೋ ದನ್ನೂ ಮರೆತು, ಜಗುಲಿ ಹಂತ ಇಳಿದು ಹೋಗಿ ಮಳೇಲಿ ನಿಂತುಕೊಂಡಳು. ಸಣ್ಣ ಎರಚಲು ಮೊಕದ ಮ್ಯಾಲೆ ಚೆಲ್ಲಿದಾಗ ಕುಣಿದಾಡೊ ಹಾಗಾಗಿ, ನಾಲಗೆ ಚಾಚಿ, ಮಳೆ ಹನಿ ಕುಡಿಯೊ ಆಟ ಆಡಿದ್ಲು.

ಹಟ್ಟಿ ಒಳಗೆ ಬಂದಾಗ ಕರಿಯ ಮುಂಗಾಲಿಗೆ ತೊಡರಿ ಬೀಳೋ ಹಂಗಾಗಿತ್ತು. ಮಳೆ ನಿಲ್ಲುತಾ ಬರ್ತಿದ್ದು ಅಯ್ಯನ ನರಳಾಟ ಈಗೀಗ ಕೇಳಕ್ಕೆ ಮುಟ್ಟಿಕೊತ್ತು. ಗ್ನಾನ ಎಲ್ಲೊ ಹೋದೋನಂಗೆ ಬಿದ್ದಿದ್ದ. ತೋಳು ಹಿಗ್ಗಲಿಸಿ ಉಪಾಯವಾಗಿ ಕಂಕುಳು ನೋಡಿದಳು. ಗಂಟಿನ ಮೇಲಿನ ಗಂಧ ಆರಿತ್ತು. ಅಯ್ಯನ ಮೊಕಾನೆ ಹಸಿ ಹೊತ್ತು ನೋಡ್ತಿದ್ದು "ಸಮ್ಮ ಕೈಲೇನದೆ?" ದೊಡ್ಡದಾಗಿ ಉಸಿರು ಬಿಟ್ಟು "[illegible], ಗಂಧ[illegible] [illegible] [illegible] ಹಾಕಾನ" ಅಂದು ಕೊಳ್ಳುತ್ತ ನಡೆದಳು.

ಕೊಂಟು ಬಿದ್ದ ಹಾಗೆ ಬಿದ್ದಿದ್ದರೂವೆ, ಅವನ ಒಳಗಡೆ ಏನೇನೋ ಆಯ್ತ ಇರಬೇಕು. ಅವಳು ಬಂದು ಲೇಪ ಹಾಕಲಿಕ್ಕೆ ಸುರು ಮಾಡಿಕೊಂಡ ಹಂಗೆ, ತನ್ನೊಂದಿಗೆ ತಾನೆ ಏನೇನೋ ಮಾತಾಡಿಕೊತ್ತ ಇದ್ದ. ತುಟಿ ಅಲುಗಾಡ್ತ ಇತ್ತು. ಮಾತು ಹೊರಕ್ಕೆ ಒತ್ತಿಕೊಂಡು ಬಂದಂಗೆ ಆಗೋದು ತುಟಿ ಮ್ಯಾಲೆ ಹರಿದಾಡಿ ನಿಂತೋಗೋದು. ಸಾಯೊ ಹೊತ್ನಲ್ಲಿ ಅಯ್ಯನಿಗೆ ಒಂದಿನ ನೆಪ್ಪೆಲ್ಲ


ಉಕ್ಕಿರಬೇಕು.... ಆ ಗಳಿಗೇಲಿ ಅವಳ ಮನಸ್ಸಿನಲ್ಲಿ ಅವ್ವ ಅಂದಿದ್ದ ಮಾತು ನೆಪ್ಪಾಯ್ತು. ಆಗ ಅಯ್ಯನಿಗೆ ಒಳ್ಳೆ ಪ್ರಾಯವಂತೆ. ನೆಲ ಗುದ್ದಿದರೆ ನೀರು ಚಿಮ್ಮೋದು– ಹಂಗಿದ್ದನಂತೆ. ಹೆಂಡತಿ ರೋಗಿಷ್ಟೆ. "ಮುಟ್ಟಿದರೆ ಮುನಿಗಿಡ ಇಲ್ವ?–ಹಂಗಿದ್ದೆ–ಒಂದು ರಾತ್ರಿ ವಂದಿಗೆ ಮನಗಿದ್ರೆ, ಮೂರು ತಿಂಗಳು ಹಿಡೀತಿತ್ತು. ಮತ್ತೆ ನಾನು ರಿಪೇರಿ ಆಗಕ್ಕೆ" ಅಂದಿದ್ಲು ಅವ್ವ... ಅಯ್ಯ ನರಳಿದಂಗಾಯ್ತು... ಲಗ್ನ ಆಗೋವಾಗಲೆ ಇಂತಾ ಮಜಬೂತ ಗಂಡಿಗೆ ಈ ಪೀಚು ಹೆಣ್ಣ? ಅಂತ ಜನ ಆಡಿಕೊಂಡರೂವೆ, ತನ್ನ ಅಯ್ಯನ ಅಯ್ಯ ಒಂದಿಷ್ಟು ಬಂಗಾರಕ್ಕೆ ಬೀಗಿ ಅವ್ವನ್ನ ಸೊಸೆ ಮಾಡಿಕೊಂಡಿದ್ದನಂತೆ... ಈ ಮಾತು ಅಯ್ಯನೆ ತನ್ನ ಕುಟ್ಟೆ ಹೇಳಿದ್ದ... ಅಯ್ಯಾ ಯಾಕೊ ಇನ್ನೂ ಗಟ್ಟ್ಯಾಗಿ ನರಳಿದಂಗಾಯ್ತು...... "ಅಂತಾದರಾಗು, ತುಂತುಂಬಿಕೊಂಡಿರೊ ಎರಡು ದಮ್ಮು ಹೆತ್ತು ಕೊಟ್ಯಲ್ಲ!" ಅಂತ ಅವಳಿಗೆ ಶಾಬಾಸುಗಿರಿ ಕೊಟ್ಟಿದ್ದನಂತೆ ಅಯ್ಯ! ಅದರೊಂದಿಗೇಯ "ಹಾಸಿಗೆ ಸುಕ ನನ್ನ ಹಣೇಲಿ ಬರೀನಿಲ್ಲ, ಇದಿಯಮ್ಮ" ಅಂತ ಒದ್ದುಕೊತ್ತಿದ್ದನಂತೆ! ಇಂತ ವ್ಯಾಳ್ಯಾದಾಗ ಓಂಕಾರಿ ಧಾರವಾಡ ಸೀಮೆಯಿಂದ ಬಂದು ನಮ್ಮೂರಿನೊಳಗೆ ಅಂಗಡಿ ಬಿಚ್ಚಿದ್ಲಂತೆ. ಆ ಸೀಮೆ ಎಮ್ಮೆಗಳಂಗೆ ಕಟ್ಟುಮಸ್ತಾಗಿದ್ಲಂತೆ. ಅಂಗಡಿಗೆ ಬೀಡಿ ತಕ್ಕಳವ ಅಂತ ಅಯ್ಯ ಹೋದರೆ, ಸುಮ್ಮ ಸುಮ್ಮಕೆ ನಗೋಳಂತೆ. ಒಂದು ರಾತ್ರಿ ಗಿರಾಕಿಗಳೆಲ್ಲ ಹೊಂಟೋಗಿ ಅಂಗಡಿ ಕದ ಮುಚ್ಚೋವರೆಗೂ ಅಯ್ಯ [illegible]ತಿದ್ದನಂತೆ. ಓಂಕಾರಮ್ಮ [illegible] [illegible] ಒಳಕ್ಕೆ ಬಾ ಅಂದ್ಲಂತೆ. [illegible] [illegible] [illegible]– ಅವಿಕೆ ಮಡಿಸಿ ಕೊಟ್ಟು ಮ್ಯಾಲೆ ನಗು ನಗ್ತಾ [illegible]ಗೆ ಬಿಟ್ಟಿದ್ಲಂತೆ... "ಇನ್ನೆಲ್ಲ ನಾಚಿಕೆಯಿಲ್ಲದೆ ನಿನ್ಮುಂದೆ ನನ್ನ ಕುಟ್ಟಿ ಹೇಳಿದ[illegible]" ನರಳಾಡಿಕೊಂಡು ಹೇಳಿದ್ಲು ಅವ್ವ... [illegible] ಮುಚ್ಚಿ ತೆಗೆದಾಗ [illegible]ವಾಗಿ ಕಣ್ಣು ತೆರೆದ ಅಯ್ಯ [illegible] ಹಾಕ್ತಿದ್ದ ತನ್ನನ್ನೆ ದುರ್ರುಗಿ ನೋಡಿದ. ತಾನೂ ಅಯ್ಯನ್ನ ನೋಡಿದಳು. ಹಂಗಿದ್ದೋನು ಹಂಗಾಗಿ ಹೋದವನೆ ಅತ್ತ ಕಣ್ಣು ತುಂಬ ನೀರು ತುಂಬಿಕೊತ್ತು. ಆ ಪಂಡಿತರ ಔಸ್ದ ಗಂಟ ದಿನದಿಂದ ದಿನಕ್ಕೆ ದಪ್ಪ ಮಾಡ್ತಿದ್ದರೆ ಹೊರತು, ಈ ಗಂಟು ಮಾತ್ರ ಚಿಂಕರಾನು ಕರಗನೇ ಇಲ್ಲ... ಅವಳ ಹೊಟ್ಟೇಲಿ ಸಂಕಟ ಬೆಂಕಿ ಕತ್ತಿಸಿದಂತೆ ಉರಿಯಕ್ಕೆ ಮುಟ್ಟಿಕೊತ್ತು... ಅಯ್ಯ ಕಣ್ಣು ಮಿಟುಕಿಸದೆ ನೋಡ್ತಾನೆ ಇದ್ದ. ಅವನ ದ್ರುಷ್ಟಿ ನನ್ನ ಒಳಗಡೆ ಏನ್ನೊ ತಡಕಾಡೊ ಹಂಗಿತ್ತು. ತಾನು ಸತ್ತರೆ ಮಗಳ ಗತಿ? ಅಂತ ಯೋಚ್ನೆ ಇರಬೌದ? ಹೆಂಡತಿ ಸತ್ತ ಮ್ಯಾಲೆ ತನ್ನ ಸೌಕರ್ಯಕ್ಕೆ ಯಾರೂ ಇಲ್ಲ ಅಂತ ಆ ನೆಪ ಈ ನೆಪ ಹಾಕಿ, ಹರೇದ ಹೆಣ್ಣ ಲಗ್ನ ಮಾಡದೆ ಹಟ್ಟೀಲೆ ಕಟ್ಟಾಗಿದ್ದು ತನ್ನದೆ ತೆಪ್ಪು ಅಂತ ಅನ್ನಿಸ್ತ ಇರಬೌದ?... ಅಯ್ಯನ ಕಣ್ಣಲ್ಲಿ ನೀರು ಸುರಿಯೋದ ಕಂಡು, ಗಂಟಿಗೆ ಗಂಧ ಸವರುತಾನೆ ಸೆರಗಿನಿಂದ ಒತ್ತಿದಳು. ಯಾಕೆ, ಏನು ಗೊತ್ತಾಗದೆ ಇದ್ದರೂ ಅವಳ ಕಣ್ಣಲ್ಲೂ

ನೀರು ತುಳಕಿ ಕೆನ್ನೆಯ ತ್ಯಾವ ಮೂಡಿತು. ಅಯ್ಯನ ಮೋರೇನೇ ನೋಡ್ತಿದ್ದಂಗೆ ಅಯ್ಯ ಇಲ್ಲವೇ ಇಲ್ಲ, ಹಟ್ಟಿಗೆಲ್ಲ ತಾನೊಬ್ಬಳೆ ಅನ್ನಿಸಿ ಕಣ್ಣಿಗೆ ಕತ್ತಲೆ ತುಂಬಿಕೊಂಡು ಜೀವ ನಡುಗಿತು....

ಸ್ವಾಮಿ ಮಾರುದ್ದ ಬಂದರೂವೆ ಪಂಡಿತರೂ ಇನ್ನೂ ಬಂದಿರಲಿಲ್ಲ. ತಾನೆ ಗಂಧ ತೇಯಕ್ಕೆ ಸುರು ಮಾಡಿದಳು. ಬಟ್ಟಲಿಗೆತ್ತಿ ಲೇಪ ಹಾಕ್ತಿದ್ದಾಗ ಅವರು ಬಂದರು. ನಾಡಿ ಹಿಡಿದು ನೋಡಿ, ಜ್ವರ ಕುದ್ದು ಹೋಗ್ತಾ ಇದೆ, ಅಂದರು. ಹಿಂದಿನ ದಿನಕ್ಕಿಂತ ಈ ದಿನ ಅಯ್ಯನ ಮೊಕ ಸೋರಿಹೋಗಿತ್ತು. ಕಣ್ಣು ಗಾಜಿನಂತಾಗಿ ಜೀವ ಹೋದಂಗಿತ್ತು. ಅವೊತ್ತು ರಾತ್ರಿ ಕಳೆಯೋದರೊಳಗೆ ಗಂಟಲಲ್ಲಿ ನೀರು ಕೂಡ ಇಳಿಯೋದು ಕಷ್ಟ ಆಯ್ತು. ಹೀಗಿದ್ರೂ ಇನ್ನೊಂದು ಹಗಲು, ಇನ್ನೊಂದು ರಾತ್ರಿ ಕಳೆದರೂ ಆ ಜೀವ ಕುಟುಕ್ ಕುಟುಕ್ ಅಂತಾ ಇತ್ತು. ಬೆಳಗಿನ ಜಾವ ನಮ್ಮ ಹಟ್ಟಿ ಕೋಳಿ ಕೂಗ್ತಿದ್ದಂಗೆ, ಇತ್ತಲಾಗಿ ನಮ್ಮಯ್ಯನ ದೊಡ್ಡ ಜೀವ ಹೊಂಟೋಗಿತ್ತು. ನಮಯ್ಯನಿಗೆ ಅಂಟಿದ ಪ್ಲೇಗು ಊರಿನಲ್ಲಿ ಇನ್ನೂ ಆರು ಜನಕ್ಕೆ ತಗುಲಿ ಅವರಲ್ಲಿ ಇಬ್ಬರು ಸತ್ತರೂ ಊರಿಗೆ ಅದಕಿಂತ ಹೆಚ್ಚಿನ ಹಾನಿ ಆಗಲಿಲ್ಲ.

ಅಕ್ಕ ಬಾವ ಬಂದರು, ನೆಂಟರು ಇಷ್ಟರು ಬಂದರು. ಕರ್ಮ ಕಳೆದುಕೊಂಡು ಒಬ್ಬೊಬ್ಬರಾಗಿ ಹೊಂಟರು. ಅಕ್ಕ ಮಾತ್ರ ವಸಿಕಾಲ ನನ್ನ ತಾವೆ ಉಳಿದ್ಲು. ತಿಂಗಳಿಗೆ ತಾನು ಸರಿಯಾಗಿ ಮುಟ್ಟಾಗದೆ ಇದ್ದದ್ದು ತಿಳಿದು ಅಕ್ಕ ಗಾಬರಿಯಾದ್ಲು. ನಡೆದದ್ನ ಮುಚ್ಚು ಮರೆಯಿಲ್ಲದೆ ಹೇಳಿದೆ. ಹಟ್ಟಿ ಮರ್ವಾದೆ ಕಳೆದುಬಿಟ್ಟೆಯಲ್ಲ ಅಂತ ಪ್ರಲಾಪ ಮಾಡಿದ್ಲು. ಓಂಕಾರಮ್ನ ಹಿಡಿದು ಔಸ್ದ ಕೊಡಿಸಿದ್ಲು. ಪಿಂಡ ಜಗ್ಗಲಿಲ್ಲ. ನಾಕು ತಿಂಗಳವರೆಗೂ ಮಾಡೋ ಪ್ರಯತ್ನ ಎಲ್ಲ ಮಾಡಿದ್ಲು. ಸಫಲ ಆಗನಿಲ್ಲ. ಗಂಡ ಬ್ಯಾರೆ ಪಾತ್ರೆಂದ ಪ್ಯಾಲೆ ಹಿಟ್ಟು ಬೇಯಿಸಲಿಕ್ಕೆ ಯಾರೂ ಇಲ್ಲ, ಸಣ್ಣ ಮಗೀಗೆ ಕಾಯ್ಲೆ, ಬ್ಯಾಗ ಬಂದು ಬಿಡು, ಅಂತ ಕಾಗದ ಬರೆಸಿ ಹಾಕ್ತಾನೆ ಇದ್ದ. ಊರಿನೋರಿಗೆ ಹೆಂಗೂ ಗೊತ್ತಾಗಿ ಪಂಡಿತರು ರಾತ್ರೋ ರಾತ್ರಿ ಪರಾರಿಯಾಗಿದ್ದರು. ಕೊನೆಗೆ ಅಕ್ಕ ಅವಳ ಕೊರಳು ತಬ್ಬಿಕೊಂಡು ಅತ್ತು "ನನ್ನ ಈ ಸ್ಥಿತೀಲಿ ಬಿಟ್ಟು ಹೋಗಲೇ ಬೇಕಾಗದೆ. ಏನವ್ವ ಮಾಡಲಿ?... ಓಂಕಾರಮ್ಮನಿಗೆ ಹೇಳಿ ಬುಟ್ಟು ಹೋಯ್ತೀನಿ... ಅವಳು ನೋಡಿಕೊತ್ತಾಳೆ. ಹೆರಿಗೆ ಹೊತ್ತಿಗೆ ಕಂಡ್ತ ಬತ್ತೀನಿ. ಚಿಂತೆ ಮಾಡಬ್ಯಾಡ. ಏನ ಬೇಕಾದ್ರು ಅನ್ನಲಿ. ಮನಸ್ಸಿಗೆ ಹಚ್ಚಿಕೊಬ್ಯಾಡ" ಅಂದು ಗಾಡಿ ಹತ್ತಿದಾಗ ತನ್ನ ಕಣ್ಣಲ್ಲಿ ಕೋಡಿ ಹರಿದಿತ್ತು. ಸುಂಡುತಾ ಇರೊ ನೀರ್ನ, ಅಡಿಗೆ ಹಚ್ಚೇಲ್ಲಿ ತಿರುವುತಾ ಇದ್ದಳು. ನೀರೆಲ್ಲ ಸುಂಡಿದ ಬಳಿಕ, ಎಣ್ಣೆ ನೆಸಕೊಂಡು ಅರಿಶಿನ ಬಣ್ಣವಾಗಿ ಪಾಕ ತೇಲಿತು. ಮಡ್ಡಿ ತಳದಲ್ಲೇ ಉಳೀತು. ಆ ಎಣ್ಣೇನ ಬೋಗುಣಿಗೆ ಬಸಿಕೊಂಡಳು. ಬಸಿದ ಎಣ್ಣೇನ ತಿರುಗ ಉರಿ ಮಾಡಿ ಒಲೆ ಮ್ಯಾಲೆ ಇಟ್ಟು ಮರಳಿಸಿದಳು. ಸ್ವಾಯಕ್ಕೆ ಮೊಕ ಮೈ ಕೈಯೆಲ್ಲ ಬೆವತಿತ್ತು. ಗಂಡಾದರೆ ನನ್ನ ಜೀವ ತೇದು ದೊಡ್ಡದು ಮಾಡ್ತೀನಿ ಅಂತ ಒಲೆ ಮುಂದೆ ಕುಂತು ಸ್ವಲ್ಪ ಗಟ್ಟಿಯಾಗೆ ಅಂದುಕೊಂಡಾಗ, ಅದೇ ತಾನೆ ಹಟ್ಟಿ ಒಳಗಡೆ ಬಂದ ಓಂಕಾರಮ್ಮ "ಹೆಣ್ಣಾದರೇನಂತೆ ನಂಗೆ ಕೊಟ್ಟು ಬಿಡು. ನಾ ಸಾಕೊತ್ತೀನಿ" ಅನ್ನೋದ?... ಸುಂಡಿ, ಸುಂಡಿ, ಎಣ್ಣೆ ಮುಂದವಾಗ್ತ ಇತ್ತು. ಅಡಿಕೆ ಹಚ್ಚೇಲಿ ಚೆಂದಾಗಿ ತಿರುವಿ, ಬಂದು ಎಣ್ಣೆ ಚೊಟ್ನ ಬೆಂಕಿಗೆ ಹಾಕಿದಳು. ಬೆಂಕಿ ದೀಪದಂಗೆ ಕತ್ತಿಕೊತ್ತು. ಸರಿಯಾದ ಹದ ಅಂದಳು, ಹಿಂದಿನಿಂದ ಓಂಕಾರಮ್ಮ ಕಾಲು ನೆಕ್ತಿದ್ದ ಕರಿಯನ್ನ ಪಕ್ಕಕ್ಕೆ ಜಾಡಿಸಿ, ಎಣ್ಣೆ ಪಾತ್ರೆ ಇಳುಕಿ, ಮೂಗು ಸೊರ ಸೊರ ಅಂತಿದ್ದ ಹಂಗೇನೆ ಒಂದು ಗಡಿಗೆಗೆ ತುಂಬಿಟ್ಟಳು. ✿





ನಿಮ್ಮ ಶಬ್ದಭಾಂಡಾರ ಬೆಳೆಯಲಿ

ಶಬ್ದಭಾಂಡಾರವು ಹಣದ ಭಾಂಡಾರಕ್ಕಿಂತಲೂ ಅಮೂಲ್ಯವಾಗಿದೆ.

ಇಲ್ಲಿ ಪ್ರತಿ ತಿಂಗಳೂ ಕೆಲವು ಶಬ್ದಗಳನ್ನು ಪರಿಚಯ ಮಾಡಿಕೊಡಲಾಗುವುದು. ಆಯಾ ಶಬ್ದದ ಮುಂದೆ ನಾಲ್ಕು ಅರ್ಥಗಳನ್ನು ಕೊಟ್ಟಿದೆ. ಅವುಗಳಲ್ಲಿ ಒಂದು ಮಾತ್ರ ಸರಿಯಾಗಿರುತ್ತದೆ. ನಿಮಗೆ ಸರಿಯೆನಿಸಿದ ಅರ್ಥವನ್ನು ಮೊದಲು ಆರಿಸಿಕೊಳ್ಳಿರಿ. ಆಮೇಲೆ ಇದರ ಬೆನ್ನಿನ ಪುಟ ನೋಡಿರಿ. ಅಲ್ಲಿ ಸರಿಯಾದ ಅರ್ಥವನ್ನು ವಿವರಿಸಿದೆ.

೧. **ಕಟ್ಟಾಣಿ**
(ಅ) ಬಲವಾದ ಮೊಳೆ (ಆ) ಅಣೆಕಟ್ಟಿನಿಂದ ನೀರು ಬಿಡುವ ತೂಬು (ಇ) ಕಠೋರವಾದ ಅಪ್ಪಣೆ (ಈ) ಅತಿ ಶ್ರೇಷ್ಠ

೨. **ಘಟಾನುಘಟಿ**
(ಅ) ಮಡಿಕೆ ಮಾರಿಸುವವ (ಆ) ಮೆಟ್ಟಿಲು ಸಾಲು (ಇ) ಮದುವೆಯ ದಲಾಲ (ಈ) ಬಹಳ ಸಮರ್ಥ

೩. **ಕ್ವಾಥ**
(ಅ) ಕಷಾಯ (ಆ) ಮುಂಗಾಣದಿರುವಿಕೆ (ಇ) ಮುಂದೆಲ್ಲಿ? (ಈ) ಬಿಲಪಿತ್ತು

೪. **ಖುಲಾಯಿಸು**
(ಅ) ಮುಗಿಸಿಬಿಡು (ಆ) ತೆರೆ (ಇ) ಕೇಡುಮಾಡು (ಈ) ಬೆಳಗಾಗು

೫. **ಖುಲ್ಲತನ**
(ಅ) ನಿರ್ವಂಚನೆ (ಆ) ಗುಟ್ಟುಬಿಡುವ ಸ್ವಭಾವ (ಇ) ಅಲ್ಪತನ (ಈ) ಅರಳುವಿಕೆ

೬. **ಕಾಟಕಾಯಿ**
(ಅ) ಕಾಡಿನಲ್ಲಿ ಬೆಳೆದ ಕಾಯಿ (ಆ) ದರೋಡೆ (ಇ) ಬಲ (ಈ) ಕಸುಗಾಯಿ

೭. **ಕುಮ್ಮಕ್ಕು**
(ಅ) ಬೆಂಬಲ (ಆ) ಹೊಲದ ಸಮೀಪದ ಗುಡ್ಡ (ಇ) ಬೆವರಿಕೆ (ಈ) ಜಡ್ಡು ಬಿದ್ದ ಕೆಮ್ಮು

೮. **ಗಂಡೂಷ**
(ಅ) ಮುಂಜಾವ (ಆ) ಬಾಯಿ ಮುಕ್ಕಳಿಸುವುದು (ಇ) ತುರಿಕೆ (ಈ) ಸಾಲ ಮುಳುಗಿಸುವುದು

೯. **ಚಿರಾಗತ**
(ಅ) ಒಂದು ಕಹಿ ವನಸ್ಪತಿ (ಆ) ಸತ್ತುಹೋದ (ಇ) ಹಳೆಯ (ಈ) ಬಹಳ ಕಾಲದ ನಂತರ ಬಂದ

೧೦. **ವೇಣಿ**
(ಅ) ಹೆಣೆದ ಜಡೆ (ಆ) ಕೊಳಲು (ಇ) ಪಿಟೀಲು (ಈ) ಜೋಳಂಗುಡ್ಡ

೧೧. **ಬುಲಾವಣೆ**
(ಅ) ವಂಚನೆ (ಆ) ಕರೆ (ಇ) ದರ್ಪ (ಈ) ಮಾತುಕತೆ

೧೨. **ಬಿಟ್ಟಿ**
(ಅ) ಗುಡ್ಡ (ಆ) ಬಿರುಸು (ಇ) ಪ್ರೇಮ (ಈ) ಕೂಟ

'ಶಬ್ದ ಭಂಡಾರ'ದ ಸರಿಯಾದ ಅರ್ಥಗಳು

೧. **ಕಟ್ಟಾಣಿ** (ಈ) ಅತಿ ಶ್ರೇಷ್ಠವಾದದ್ದು. ಬೆಲೆಯುಳ್ಳದ್ದು, ಉತ್ತಮ ಮುತ್ತುಗಳ ಸರ. ಉದಾ– ಅದೊಂದು ಕಟ್ಟಾಣಿ ಹುಡುಗಿ. [ದೇಶ್ಯ–ಕಡು = ಅತಿಯಾಗಿ, ಅಣಿ = ಮೇಲ್ತರದ್ದು].

೨. **ಘಟಾನುಘಟಿ** (ಈ) ಬಹಳ ಸಮರ್ಥ, ತುಂಬಾ ಬುದ್ಧಿವಂತ, ಗಟ್ಟಿಗ. ಸಾಮಾನ್ಯವಾಗಿ ಬಹುವಚನದಲ್ಲಿ ಪ್ರಯೋಗ. ಉದಾ– ಘಟಾನುಘಟಿ ವಿದ್ವಾಂಸರೆಲ್ಲ ಅವನ ಮುಂದೆ ಮಣ್ಣು ಮುಕ್ಕಿದರು. [ಪ್ರಾದೇಶಿಕ].

೩. **ಕ್ವಾಥ** (ಅ) ಕಷಾಯ, ಯಾವುದೊಂದು ಔಷಧ ವನಸ್ಪತಿಯನ್ನು ಕುದಿ ಕುದಿಸಿ ತಯಾರಿಸಿದ ಕಾಥೆ; ಪೀಥೆ, ಕಾಥ [ಸಂ. ಕ್ವಥ = ಕುದಿ].

೪. **ಖುಲಾಯಿಸು** (ಅ) ತೆರೆ, ವಿಕಾಸ ಹೊಂದು, ಅರಳು, ಉತ್ಕರ್ಷ ಹೊಂದು. ಉದಾ– ಅದೃಷ್ಟ ಖುಲಾಯಿಸಿತು. [ಹಿಂದಿ,ಮರಾಠಿ,ಖುಲ್ = ತೆರೆ,ಅರಳು].

೫. **ಖುಲ್ಲತನ** (ಇ) ಅಲ್ಪತನ, ಕ್ಷುದ್ರಬುದ್ಧಿ ನೀಚತನ. ಉದಾ– ಖುಲ್ಲತನ ಬೇಡಿನ್ನು [ಸಂ. ಕ್ಷುಲ್ಲ].

೬. **ಕಾಟಕಾಯಿ** (ಅ) ದರೋಡೆ, ಸುಲಿಗೆ ಕೊಳ್ಳೆ, ದಂಗೆ. [ಮರಾಠಿ].

೭. **ಕುಮ್ಮಕ್ಕು** (ಅ) ಬೆಂಬಲ, ಪ್ರೋತ್ಸಾಹ, ಒತ್ತಾಸೆ, ಹೆಚ್ಚಾಗಿ ಕೆಟ್ಟ ಅರ್ಥದಲ್ಲಿ. ಉದಾ– ಈ ಕೆಲಸಕ್ಕೆ ಬೇರೊಬ್ಬರ ಕುಮ್ಮಕ್ಕು ಇದೆ. [ಹಿಂದುಸ್ತಾನಿ, ಕುಮ್ಮಕ್].

೮. **ಗಂಡೂಷ** (ಅ) ಬಾಯಿ ಮುಕ್ಕಳಿಸುವುದು, ಬಾಯಲ್ಲಿ ನೀರು ತುಂಬಿಕೊಳ್ಳುವುದು, ಬಾಯಿ ತೊಳೆದುಕೊಳ್ಳುವುದು. ಉದಾ–ಗಂಡೂಷ ವಿಧಿಯನ್ನು ಮುಗಿಸಿ, [ಸಂಸ್ಕೃತ].

೯. **ಚಿರಾಗತ** (ಈ) ಬಹಳ ಕಾಲದ ಮೇಲೆ ಬಂದ. ಉದಾ– ಚಿರಾಗತವಾದ ಸಂಪತ್ತು. [ಸಂ. ಚಿರ = ಬಹುಕಾಲ, ಆಗತ = ಬಂದ].

೧೦. **ವೇಣಿ** (ಅ) ಜಡೆ, ಹೆಣೆದುಕೊಂಡದ್ದು; ಹೆಳಲು; ಪಂಕ್ತಿ, ಸಾಲು; ನದಿಗಳ ಸಂಗಮ. ಉದಾ. ನಾಗವೇಣಿ–ಹಾವಿನಂತೆ ಹೆಳಲುಳ್ಳವಳು [ಸಂಸ್ಕೃತ.]

೧೧. **ಬುಲಾವಣೆ** (ಅ) ಕರೆಯುವಿಕೆ, ಬರುವಂತೆ ಹೇಳಿಕಳಿಸುವುದು. ಉದಾ– ಕೂಡಲೇ ಬುಲಾವಣೆ ಹೋಯಿತು. [ಹಿಂದುಸ್ತಾನಿ. ಬುಲಾನಾ = ಕರೆಯುವುದು].

೧೨. **ಬೆಟ್ಟೆ** (ಅ) ಬಿರುಸು. ಕೆಳ ದರ್ಜೆಯದು, ಗಟ್ಟಿ, ಕೀಳು ಲೋಹಗಳ ಮಿಶ್ರಣ ಇರುವ ಉತ್ತಮ ಲೋಹ. ಉದಾ– ಬೆಟ್ಟೆ ಅಡಿಕೆ, ಬೆಟ್ಟೆ ಚಿನ್ನ [ದೇಶ್ಯ].

ನಿಮ್ಮ ಶಬ್ದಶಕ್ತಿಯ ತರಗತಿ

ನೀವು ಎಷ್ಟು ಶಬ್ದಗಳಿಗೆ ಅರ್ಥ ಊಹಿಸಿದ್ದು ಸರಿಯಾಗಿದೆಯೆಂದು ಎಣಿಸಿ ಕೆಳಗಿನಂತೆ ನಿಮ್ಮ ಶಬ್ದಶಕ್ತಿಯ ತರಗತಿಗಳನ್ನು ತಿಳಿಯಿರಿ.

೬—೮ ಸರಿಯಿದ್ದರೆ	...	ಸಾಧಾರಣ
೯—೧೦ "	...	ಉತ್ತಮ
೧೧—೧೨ "	...	ಅತ್ಯುತ್ತಮ

ಬೆರಣಿಯ ಮೇಲೆ ಭಿತ್ತಿಪತ್ರ

ರಾ. ಶಿ.

ಬೆಳಗಾಮಿನಿಂದ ಬೆಂಗಳೂರಿಗೆ ಹೋಗುವ ಕುಲುಕುಲು ಬಸ್ಸಿನಲ್ಲಿ ಹೊರಟಿದ್ದೆ. ಬೆಳಗಾಮಿನಲ್ಲಿ ಕನ್ನಡದ ಹೋರಾಟ ನಡೆಸಲು ಅದಷ್ಟು ಹಣವನ್ನು ಬೆಂಗಳೂರಿನಿಂದ ಸಂಗ್ರಹಿಸಲು ಹೊರಟಿದ್ದೆ. ಬೆಳಗಾಮಿನ ನನ್ನ ದೋಸ್ತಿಗಳು ಇಂಥದೇ ನೆಪ ಹೂಡಿ ಬೊಂಬಾಯಿಗೆ ಹೋಗಿದ್ದರು. ಅವರ ಸಲಹೆಯ ಮೇರೆಗೇ ನಾನೂ ಹೊರಟಿದ್ದು.

ಒಂದು ತಾಸು ಆಗುವಷ್ಟರಲ್ಲಿ ಕುಲುಕುವ ಬಸ್ಸಿನ ವೇಗವು ಕಡಿಮೆಯಾಯಿತು. ಅರೆಕ್ಷಣದಲ್ಲಿ ಸಿಡಿಲು ಹೊಡೆದ ಶಬ್ದ ಆಯಿತು. ನಮ್ಮ ಮೇಲೆ ಯಾಕಪ್ಪಾ ಆನಂದಮಾರ್ಗಿಗಳೋ ಪ್ರೊಟೆಸ್ಟರೋ ಸಿಡಿಮದ್ದನ್ನು ಅಪವ್ಯಯ ಮಾಡುತ್ತಾರೆ? ಎಂದು ಬೆರಗಾದೆ. ಆದರೆ ಬಸ್ಸಿನ ಟೈರು ಸಿಡಿದಿದ್ದವು! ಅದೂ ಎರಡು ಟೈರುಗಳು; ಒಡ ಹುಟ್ಟಿದವು ಅಂತ ಕಾಣುತ್ತೆ, ಒಂದು ಬಿರಿದಾಗ ಇನ್ನೊಂದೂ ಬಿರಿಯಿತು. "ಬೆಳಗಾಮ್ ಡಿಪೋಗೆ ಫೋನ್ ಮಾಡಿ ರಿಲೀಫ್ ಬಸ್ ತರಸ್ತೀವಿ. ಸ್ವಲ್ಪ ಹೊತ್ತು ಕಾಯಬೇಕಾಗುತ್ತೆ. ಎರಡು ಕಿಲೋಮೀಟರ್ ದೂರ ನಡೆದು ಪೋಲೀಸ್ ಔಟ್ ಪೋಸ್ಟಿನಿಂದ ಫೋನ್ ಮಾಡುತ್ತೇನೆ" ಎಂದ ಕಂಡಕ್ಟರು. ಇಲ್ಲಿ ಸುಮ್ಮನೇ ಕೂತಿರುವ ಬದಲು, ವಾಕಿಂಗ್ ಆದಹಾಗೆ ಆಗುತ್ತೆ; ನಿನ್ನ ಜತೆಗೆ ನಾನೂ ಬರ್ತೀನಿ ಎಂದೆ. ಅವನೊಡನೆ ನಾನೂ ಹೊರಟೆ.

ಒಂದು ಹತ್ತಿಪ್ಪತ್ತು ಮಾರು ನಡೆದಿರಬಹುದು;



ಗ್ರಾಮವೊಂದು ಪಕ್ಕದಲ್ಲಿ ಕಾಣಿಸಿತು. "ಇಲ್ಲಿ ಒಳ್ಳೆ ಕಾಫಿ ಸಿಗುತ್ತೆ ಸಾರ್, ಬೆಳಗಿನಿಂದ ನಾಷ್ಟಾ ಆಗಿಲ್ಲ. ಅದನ್ನು ಇಲ್ಲಿ ಮುಗಿಸಿಕೊಂಡು ಹೋಗೋಣ" ಎಂದ ಕಂಡಕ್ಟರು. "ಆಗಲಪ್ಪ" ಎಂದೆ, ಎಷ್ಟು ನಾಷ್ಟಾ ಆದರೂ ತಡೆದುಕೊಳ್ಳಬಲ್ಲೆ. ಬಸ್ಸಿನಲ್ಲಿ ಬಿದ್ದಿದ್ದ ಪ್ರಯಾಣಿಕರ ಪಾಡು ಕಟ್ಟಿಕೊಂಡು ನನಗೇನು? ಕಂಡಕ್ಟರಿಗೇ ಅವರ ಯೋಚನೆ ಇಲ್ಲದಾಗ! ಗ್ರಾಮಕ್ಕೆ ಹೋದೆವು. ಎದುರಿನಲ್ಲೇ ತಡಿಕೆ ಹೋಟಲು ಕಾಣಿಸಿತು. ಹತ್ತಿರ ಹೋದಾಗ ಕೊಚ್ಚೆಯ ಬಚ್ಚಲು ಹೋಟಲ ಪಕ್ಕದಲ್ಲೇ ಇದ್ದುದು ತಿಳಿಯಿತು. ಈ ನೊಣಗಳ ಜತೆ ತಿಂಡಿಗೆ ಕಾದಾಡುವುದು ನನಗೆ ಅಸಹ್ಯ ಎನ್ನಿಸಿತು. ಆ ಹೊತ್ತಿಗೆ ನನ್ನ ಬೆನ್ನ ಮೇಲೆ ಯಾರೋ ಅಂಗೈ ಅಪ್ಪಳಿಸಿದರು. "ಯಾವನೋ ಅದು, ಏನು ಕೆಲಸವೋ ನಿನಗೆ?" ಅಂತ ಹಿಂದಿರುಗಿದೆ. ಮುಷ್ಟಿ ಬಿಗಿ ಮಾಡಿ ಎರಡು ದುಡುಗೋಣ ಅಂತ ಕೈ ಎತ್ತಿದೆ. ಹಿಂದೆ ನೋಡಿದ ಮೇಲೆ ಮುಷ್ಟಿ ಸಡಿಲ ಮಾಡಿದೆ. ಬೆನ್ನಿಗೆ ಅಪ್ಪಳಿಸಿದ ವ್ಯಕ್ತಿ ಹೆಂಗಸು. ದಢೂತಿ



ಹೆಂಗಸು. ಚಿರಪರಿಚಿತಳಾಗಿದ್ದ ಅಂಬುಜಮ್ಮ. ಬೆಂಗಳೂರು ಕಾಲೇಜಿನಲ್ಲಿ ಓದುತ್ತಿದ್ದಾಗ ಇಬ್ಬರೂ ಸಹಪಾಠಿಗಳು. "ಅರೆ! ಇದೇನೇ ಅಂಬುಜಂಭ, ಈ ಕುಗ್ರಾಮದಲ್ಲಿ ಏನು ಮಾಡ್ತಾ ಇದ್ದೀಯೇ? ಇದು ನಿನ್ನ ತೌರೂರಾ, ಅಥವಾ ಗಂಡನೂರಾ?" ಎಂದು ಕೇಳಿದೆ. ಕಾಲೇಜಿನಲ್ಲಿ ಅವಳ ಗಂಡುಬೀರಿತನವನ್ನೂ ಜಬರ್ದಸ್ತನ್ನೂ ನೋಡಿ ಅಂಬುಜಂಭ ಎಂದು ನಿಕ್‌ನೇಮ್ ಮಾಡಿದ್ದೆವು. ಬಿ.ಎ. ಪ್ಯಾಸು ಮಾಡಿದಳು. ನಂತರ ಅವಳ ಭವಿಷ್ಯವೇನಾಯಿತೋ ನನಗೆ ತಿಳಿದಿರಲಿಲ್ಲ. ನಪಾಸಾದ ಕಾರಣ ನಾನು ಅದೂ ಇದೂ ದಲ್ಲಾಳಿ ಕೆಲಸಗಳನ್ನು ಮಾಡಿಕೊಂಡು ಹೊಟ್ಟೆ ಹೊರೆದುಕೊಳ್ಳುತ್ತಿದ್ದೆ. ಕಡೆಗೆ ರಾಜಕೀಯ ಪುಢಾರಿಯಾಗಿ ಕತ್ತಲಲ್ಲಿ ಮರೆಯಾಗಿ ವ್ಯವಹಾರಗಳಲ್ಲಿ ಕೈಯಾಡಿಸಿ, ಒಡಿಗೈ ಸಂಪಾದನೆಯನ್ನು ಗಿಟ್ಟಿಸಿಕೊಳ್ಳುತ್ತಿದ್ದೆ. ದೇವರು ದಯಾಮಯನಾಗಿದ್ದ ನನಗೆ. ನನ್ನ ಪರ ಅವ ಪಕ್ಷಪಾತಿ! "ಅಲ್ಲ್ರೀ, ತಾಯಪ್ಪ ಅಲ್ಲವೇನ್ರೀ, ಅಷ್ಟು ವರ್ಷಗಳಾದರೂ ಇದ್ದ ಹಾಗೇ ಇದೀರಲ್ಲ್ರೀ, ಮೋಸದ ಕಳೆ ಮುಖದಲ್ಲಿ ಆಗಿದ್ದಾಗಿಯೇ ಇದೆಯಲ್ಲ್ರೀ! ಸ್ವಲ್ಪವೂ ಬದಲಾಯಿಸಿಲ್ಲ. ನೀವು ಯಾಕೆ ಬಂದ್ರಿ ಈ ಗ್ರಾಮಕ್ಕೆ!?" ಎಂದಳು ಅಂಬುಜಂಭ.

"ನೀನು ನಾಷ್ಟಾ ಮಾಡಿ ಬಾ, ಈಕೆಯ ಜತೆಯಲ್ಲಿ ಸ್ವಲ್ಪ ಮಾತನಾಡುವುದಿದೆ," ಎಂದು ಕಂಡಕ್ಟರನಿಗೆ ಹೇಳಿದೆ. ಬಸ್ಸಿನ ಹತ್ತಿರ ಕಾಯುತ್ತೇನೆಂದೂ ಹೇಳಿದೆ. ನಂತರ ಅಂಬುಜಂಭಳ ಜತೆಗೆ ಅವಳ ಮನೆಗೆ ಹೋದೆ. ಹತ್ತು ನಿಮಿಷಗಳ ನಡಿಗೆ ಅಷ್ಟೆ! ಆ ಕಡೆ ಮತ್ತು ಈ ಕಡೆ ದೊಡ್ಡ ಸಣ್ಣ ಪುಟ್ಟ ಬಂಡೆಗಳು. ಅವುಗಳ ಮೇಲೆ ಬೆರಣಿಗಳನ್ನು ತಟ್ಟಿದ್ದರು. ನೋಡುಕ್ಕೆ ಒಂದು ತರಹಾ ಚೆನ್ನಾಗಿಯೇ ಇತ್ತು. ಅಂಬುಜಂಭನ ಮನೆಯಲ್ಲಿ ಆಕೆಯ ಗಂಡ ತಾನೊಬ್ಬನೇ. ಕಾಫಿಯನ್ನು ತಂದುಕೊಟ್ಟ. "ನಮ್ಮ ಮನೆಗೆ ನೀವು ಬಂದುದು ನಮ್ಮ ಸುಕೃತ ಅಂದ. ಕಾಫಿ ಕುಡಿದು ಮುಗಿಸಿದಳು. ಅಂಬುಜಂಭ. "ಇವರ ಹತ್ರ ಮಾತಾಡ್ತಾ ಇರಿ. ಸ್ವಲ್ಪ ಕೆಲಸ ಇದೆ. ಹತ್ತು ಹದಿನೈದು ನಿಮಿಷದಲ್ಲಿ ಮುಗಿಸಿಬಿಟ್ಟು ಬರ್ತೀನಿ," ಅಂತ ಹೇಳಿ ಆಕೆ ಹೊರಕ್ಕೆ ಹೋದಳು.

"ನಮ್ಮಾಕೆಯ ಕಾಲೇಜು ಗೆಳೆಯರಂತೆ. ಈಗ

ಏನ್ಮಾಡಿಕೊಂಡು ಇದೀರಿ?" ಎಂದು ಅವ ಕುಶಲೋಪರಿ ಪ್ರಾರಂಭಿಸಿದ. "ತಾಯಪ್ಪ ಅಂತ ಹೆಸರಂತೆ, ತುಂಬಾ ಸಾಧು ಸ್ವಭಾವದವರಂತೆ," ಎಂದ. "ಗ್ರಾಮದ ಹೋಟಲಿನ ಹತ್ತಿರ ತಾಯಪ್ಪನನ್ನು ಕಂಡ ಹಾಗೆ ಆಯಿತು. ಹೋಗಿ ಕರಕೊಂಡು ಬರ್‍ತೀನಿ. ಬೇಗ ತಿಂಡಿ ಕಾಫಿ ಮಾಡಿಡಿ ಅಂತ ಹೇಳಿ ಓಡಿದಳು. ಚಿಕ್ಕ ಬಂಡೆ ಹತ್ತಿರ ಇದ್ದಾಗ ನಿಮ್ಮನ್ನು ನೋಡಿದಳಂತೆ. ಯಾವ್ಯಾವುದಾದರೂ ಯೋಜನೆ ಹೊಳೆದರೆ ತತ್‌ಕ್ಷಣ ಮಾಡೇಬಿಡ್ತಾಳೆ, ಸುತ್ತು ಮುತ್ತಲಿನ ಗ್ರಾಮಗಳ ಹೆಂಗಸರೆಲ್ಲರೂ ಈಕೆ ಹೇಳಿದ ಹಾಗೆ ಕೇಳ್ತಾರೆ. ಬಿ.ಎ. ಅಮ್ಮ ನಮ್ಮನ್ನು ಎಷ್ಟು ಸದರದಿಂದ ಮಾತಾಡಿಸ್ತಾಳೆ. ನಮ್ಮ ನೆರವಿಗೆ ಬರ್‍ತಾಳೆ! ಅಂತ ಅವರೆಲ್ಲಾ ಇವಳು ಹೇಳಿದ ಹಾಗೆ ಕುಣೀತಾರೆ. ಅದರಿಂದಲೇ ನೆರೆ ಹೊರೆಯ ಗ್ರಾಮದ ಮೀಸೆ ಹೊತ್ತ ಗಂಡಸರೂ ಕೂಡ ಅಮ್ಮಾವ್ರೆ ಅಂತ ಗೌರವ ತೋರಿಸ್ತಾರೆ. ಎದುರಿಗೆ ಏನೂ ಮಾತನಾಡುವುದಿಲ್ಲ. ಚುನಾವಣೆ, ವೋಟು, ಇವುಗಳ ಕಾಲದಲ್ಲಿ ಪಕ್ಷದ ನಾಯಕರುಗಳೆಲ್ಲಾ ಇವಳನ್ನು ಒಲಿಸಿಕೊಳ್ಳಲು ಆಸೆ ಆಮಿಷಗಳನ್ನು ತೋರಿಸಿ ಒದ್ದಾಡ್ತಾರೆ. ಇವಳೂ ಬಹಳ ಚೂಟಿ, ಈ ಟೋಪಿ ಮೇಲೆ ಆ ಟೋಪಿನ ಹಾಕಿ, ಮಾಟಗಾತಿ ಇಬ್ಬರಿಗೂ ಚಳ್ಳೆ ಹಣ್ಣು ತಿನ್ನಿಸ್ತಾಳೆ. ನೋಡಿ ತಾಯಪ್ಪ, ಬಂಡೆಗಳ ಮೇಲೆಲ್ಲಾ ಬೆರಣಿ ನೋಡಲಿಲ್ವೇ, ಅವುಗಳ ಹೋಲ್ಸೇಲ್ ವ್ಯಾಪಾರಮಾಡ್ತಾಳೆ. ನೀವು ನಂಬ್ತೀರೋ ಇಲ್ಲವೋ, ವರ್ಷಕ್ಕೆ ಮೂರು ಸಾವಿರ ರೂಪಾಯಿಗಳು ಈ ಬಾಬತ್ತಿನಿಂದಲೇ ಗಳಿಸ್ತಾಳೆ. ತಾಲ್ಲೂಕಾದಲ್ಲಿನ ಪಟೇಲನ ಮಗ ಇವಳನ್ನು ಮದುವೆಯಾಗಲು ಒಪ್ಪಲಿಲ್ಲವಂತೆ. ಅವನ ಮೇಲೆ ಸೇಡು ತೀರಿಸಿಕೊಳ್ಳುಕ್ಕೋ ಏನೋ, ಇಡೇ ಊರಿನ ಕುಳವಾರನ ಮಗ, ನನ್ನನ್ನು ಮದುವೆ ಆದಳು. ಪಟೇಲನ ಮಗ ಪೇಟೆಗೆ ಹೋಗಿ ಹೋಟಲಲ್ಲಿ ಸರ್ವರ್ ಕೆಲಸ ಮಾಡಿಕೊಂಡಿದ್ದಾನೆ. ಇಲ್ಲಿದ್ದದ್ದನ್ನೆಲ್ಲಾ ಕಳಕೊಂಡು ಹೋಗೋ ಹಾಗೆ ಹಳ್ಳಿ ಹೆಣ್ಣುಗಳನ್ನು ಯಾರಿಗೂ ತಿಳಿಯದಂತೆ ಎತ್ತು ಕಟ್ಟಿದಳು ಅಂತ ಗುಸುಗುಸು. ಚಾಡಿ ಮಾತುಗಳನ್ನು ನಾನೇಕೆ ನಂಬಲಿ? ನಾನು ಹಾಯಾಗಿದ್ದೇನೆ," ಎಂದು ನನ್ನ ಉತ್ತರಕ್ಕೆ ಕಾಯದೆ ಒಂದೇ ಸಮನೆ ಒದರಿದ. ಪಾಪ! ಇಷ್ಟು ಸಲೀಸಾಗಿ, ಬಾಯಿ ತುಂಬಾ ಮಾತನಾಡುಕ್ಕೆ ಇದೇ ಮೊದಲ ಅವಕಾಶವೇನೋ? ಅಯ್ಯೋ ಅನ್ನಿಸ್ತು.

ಅಷ್ಟು ಹೊತ್ತಿಗೆ ಅಂಬುಜಂಭ ಹಿಂದಿರುಗಿದಳು. "ಬೇಜಾರಾಗ್ಲಿಲ್ವ ತಾಯಪ್ಪ! ನನ್ನ ವಹಿವಾಟ



ನ್ನೆಲ್ಲಾ ಹೇಳಿದರು ತಾನೇ. ಅದನ್ನೆಲ್ಲ ಹೇಳುಕ್ಕೆ ಬಹಳ ಖುಷಿ ಅವರಿಗೆ—ಅವರೂ ತುಂಬಾ ಸಹಾಯ ಮಾಡ್ತಾರೆ. ಅದನ್ನು ಹೇಳಿಕೊಳ್ಳುಲ್ಲ ಅಷ್ಟೇ. ಗ್ರಾಮದ ಬಳಿಗೆ ಹೋಗೋಣ ಬಾ, ಅಲ್ಲಿಗೆ ನನ್ನ ಸ್ಕೂಟರ್ ಬಂದಿರುತ್ತೆ. ಬಸ್ ನಿಂತ ತಾವಿಗೆ ಕರ ಕೊಂಡು ಹೋಗ್ತೀನಿ. ಮಾತಾಡ್ತಾ ಹೋಗೋಣ, ನನ್ನ ಬಾರುಬಾರೆಲ್ಲಾ ತಿಳಿದಿರಬೇಕು. ಈಗ ನೀ ಏನ್ಮಾಡ್ತಾ ಇದಿ? ಎಷ್ಟು ಜನ ಮಕ್ಕಳು? ಯಾವ ಊರಲ್ಲಿದ್ದೀ? ಎಲ್ಲಾ ಹೇಳು," ಅಂತ ನನ್ನ ಕರ ಕೊಂಡು ಗ್ರಾಮದ ಬಳಿಗೆ ಕಾಲು ಹಾಕಿದಳು. "ರಾಜಕೀಯ ಪ್ರಧಾರಿಯಾಗಿ ಬೆಂಗಳೂರಿನಲ್ಲಿ ಸ್ವಲ್ಪ ದಿವಸ ಒದ್ದಾಡಿದೆ. ಎದುರು ಪಕ್ಷದವರು ಕೈಕಾಲು ಮುರೀತಾರೆ ಅಂತ ತಿಳೀತು. ತಲೆ ಮರೆಸಿಕೊಂಡು ಬೆಳಗಾಮಿಗೆ ಬಂದು ಸೇರಿಕೊಂಡೆ. ಯಾರ ಪರಿ ಚಯವೂ ಇದ್ದಿಲ್ಲ." ಮಾತು ನಿಂತಿತು. "ಅರೆ! ಇತ್ತ ಬಂದಾಗ ಬಂಡೆ ಮೇಲೆ ಬೆರಣಿ ತಟ್ಟಿತ್ತು. ಈಗ ನೋಡಿದರೆ ಚುನಾವಣಾ ಭಿತ್ತಿಪತ್ರ!—ಏನು ಮಾಯಾಮಂತ್ರ!" ಎಂದು ಉದ್ಗರಿಸಿದೆ. "ಒಣಗಿದ ಬೆರಣೀನೆಲ್ಲಾ ಬಿಡಿಸಿಕೊಂಡು ಹೋದರು. ಹೋದ ಬಾರಿ ಚುನಾವಣೆಯಲ್ಲಿ



ಮಿಕ್ಕಿ ಹೋಗಿದ್ದ ಹಸು–ಕರು ಭಿತ್ತಿಪತ್ರಗಳನ್ನು ಅಚ್ಚಿನ ಮೇಲೆ ಹಾಕಿಸಿದ್ದೆ. ಈ ಸರ್ತಿ ಚುನಾವಣೆಯ ಸುದ್ದಿ ಹೊರಬಿದ್ದಾಗ ಒಂದು ಯೋಚನೆ ಬಂತು. ಆ ಭಿತ್ತಿಪತ್ರಗಳನ್ನೇ ತಿರುಗಿ ಬಳಸುವುದು. ಹಸು–ಕರುವಿನ ಮೇಲೆ ಬೆರಣಿ ತಟ್ಟುವುದು. ಭಿತ್ತಿಪತ್ರದ ಹಳೆಯ ಚಿತ್ರಕ್ಕೆ ಭರ್ಜರಿ ಮೀಸೆ ಬಿಡಿಸುವುದು. ನಮ್ಮೋರು ಬಲು ಚಾಲೂಕು. ಚಿತ್ರದ ಮೇಲೆ ಮೀಸೆಯನ್ನು ಎಷ್ಟು ಭರ್ಜರಿಯಾಗಿ ಬಿಡಿಸಿದ್ದಾರೆ ಅಂತ ನೀನೇ ನೋಡು," ಎಂದಳು ಜಂಭದಿಂದ ಅಂಬುಜಮ್ಮ. ನೋಡಿದೆ. ದಿಟ್ಟಿಸಿ ನೋಡ್ತಾನೇ ಇದ್ದೆ. ಕರಡು ಕಾಗದದ ಭಿತ್ತಿಪತ್ರ. ವರ್ಣರಂಜಿತ ಚಿರಪರಿಚಿತ ಹೆಣ್ಣುಮಗಳ ಚಿತ್ರ. ಹೆಣ್ಣುಮಗಳಿಗೆ ಭರ್ಜರಿ ಮೀಸೆ ಮೂಡಿಸಿದ್ದಾರೆ. ಒಂದೊಂದು ಚಿತ್ರದಲ್ಲೂ ಒಂದೊಂದು ತರಹ ಮೀಸೆ. ಒಂದರಲ್ಲಿ ಗಿರಿಜಾ ಮೀಸೆ, ಇನ್ನೊಂದರಲ್ಲಿ ಚಾಪ್ಲಿನ್ ಮೀಸೆ, ಮತ್ತೊಂದರಲ್ಲಿ ಚೀನೀಯರ ಇಳಿ ಮೀಸೆ, ಮಗುದೊಂದರಲ್ಲಿ ಕಸಿ ಮಾಡಿದ ಪಟ್ಟೆ ಮೀಸೆ, ತರಹಾವಾರಿ ಮೀಸೆಗಳು!! ಹಸು–ಕರುಗಳಿಗೆ ಸಗಣಿ ಮೆತ್ತಿಬಿಟ್ಟಿದ್ದಾರೆ. ಇದನ್ನು ನೋಡಿದರೇನೇ ನಗು ಬರುವಂತಿತ್ತು. ಆಗ ನನ್ನ ಮುಖಾ ತನ್ನ ಕಡೆಗೆ ಅಂಬುಜಂಭಮ್ಮ ತಿರುಗಿಸಿದಳು. "ತಾಯಪ್ಪ! ಸರಿಯಾಗಿ ನೋಡಿದೆಯಲ್ಲಾ! ನೋಡಿದವರೆಲ್ಲಾ ನಗ್ತಾರೆ ಅಂತ ಖಂಡಿತವಾಯ್ತಲ್ಲ! ಎದುರು ಪಕ್ಷದ ಮಂದಿ ಈ ಭಿತ್ತಿಪತ್ರಗಳನ್ನು ಕಂಡು ಖುಷಿ ಪಡ್ತಾರಲ್ಲ. ಇಂತಹ ಭಿತ್ತಿಪತ್ರಗಳು ಹತ್ತು ಸಾವಿರ ಇದೆ. ಎಲ್ಲವೂ ಮೀಸಾಲಂಕೃತವಾಗಿದೆ. ಯಾವ ಗೋಡೆ ಮೇಲಾದರೂ ರಾತ್ರೋ ರಾತ್ರಿ ಹಚ್ಚಬಹುದು. ಹಸು–ಕರು ಇದ್ದ ಕಡೆ ಸಗಣೀನ ಸಾರಿಸಬಹುದು. ಬೆಂಗಳೂರಿಗೆ ಹೋಗಿ ಪ್ರಚಾರಕ್ಕೆ ಹಣ ಗಿಟ್ಟಿಸೋದು ತುಂಬಾ ಕಷ್ಟ. ಅದೂ ನಿನ್ನ ಕುಪ್ರಸಿದ್ಧಿ ಇದ್ದಂತಹವನಿಗೆ. ಆದ ಕಾರಣ ಇಂತಹುದು ಒಂದು ಹತ್ತು ಭಿತ್ತಿಪತ್ರಗಳ ಸುರುಳಿಯನ್ನು ಕೊಡುತ್ತೇನೆ. ಬೆಳಗಾಮಿಗೆ ತೊಗೊಂಡು ಹೋಗು. ವಿಷಯವನ್ನು ಎದುರು ಪಕ್ಷದ ನಾಯಕರಿಗೆ ಗುಟ್ಟಾಗಿ ತಿಳಿಸು. ಭಿತ್ತಿಪತ್ರಗಳಿಗೆ ನಾಲ್ಕೈದು ಸಾವಿರ ರೂಪಾಯಿ ಕಡಿಮೆ ಕೇಳಬೇಡ. ನಾಲ್ಕು ಅಥವಾ ಆರು ತಾಲ್ಲೂಕುಗಳಲ್ಲಿ ಭಿತ್ತಿಪತ್ರಗಳನ್ನು ಹಂಚುತ್ತೇನೆ ಎಂದು ಹೇಳು. ನೂರು ಭಿತ್ತಿಪತ್ರ

ಗಳ ವಿತರಣೆ ಮತ್ತು ಪ್ರದರ್ಶನಕ್ಕೆ ಐವತ್ತು ರೂಪಾಯಿ ಕೂಲಿ ಕೇಳು. ಗೋಡೆಗೆ ಅಂಟಿಸುವ ಮತ್ತು ಸಗಣಿ ಹಚ್ಚುವ ಕೂಲಿಯಾಳುಗಳನ್ನು ಇಲ್ಲಿಂದ ಕಳಿಸಿಕೊಡುತ್ತೇನೆ. ಸಿಮೆಂಟ್ ಲಾರಿಯವರು ನನಗೆ ಚೆನ್ನಾಗಿ ಗೊತ್ತು. ಲಾರಿ ಮೂಲಕ ಗಂಡು-ಹೆಣ್ಣು ಆಳುಗಳನ್ನು ಕಳಿಸುತ್ತೇನೆ. ಹತ್ತು ಸಾವಿರ ಭಿತ್ತಿಪತ್ರಗಳನ್ನು ವಿತರಣೆ ಮಾಡಿ. ಇಪ್ಪತ್ತು ಸಾವಿರ ಅಂತ ಲೆಕ್ಕ ಬರೆಯುವುದು ನಿನಗೆ ಕಷ್ಟವಾಗುಲ್ಲ. ಒಟ್ಟು ಎಷ್ಟು ಬೇಕಾದರೂ ಗಿಟ್ಟಿಸಿಕೋ. ನನಗೆ ಭಿತ್ತಿಪತ್ರಗಳಿಗಾಗಿ ನಾಲ್ಕು ಸಾವಿರ ಕೊಡಬೇಕು. ಮೀಸೆ ಮೂಡಿಸಿದ್ದಕ್ಕೆ ನನ್ನ ಗಂಡನಿಗೆ ಒಂದು ಸಾವಿರ ಕೊಡಬೇಕು," ಎಂದು ಅಂಬುಜಂಭ ಹೇಳಿದಳು.

ಸೈ ಅಂದೆ. ಆ ವೇಳೆಗೆ ಗ್ರಾಮದ ಹೋಟಲ ಬಳಿ ಬಂದಿದ್ದೆವು. ಬೈಸಿಕಲ್ ರಿಪೇರಿ ಅಂಗಡಿಯಿಂದ ಸ್ಕೂಟರನ್ನು ಹೊರತೆಗೆದಳು, ಮಾದರಿ ಭಿತ್ತಿಪತ್ರಿಕೆಗಳ ಸುರುಳಿಯನ್ನು ನನ್ನ ಕೈಯಲ್ಲಿಟ್ಟಳು. ಸ್ಕೂಟರ್ ಸ್ಟಾರ್ಟ್ ಮಾಡಿ, ಪಿಲಿಯನ್ ಮೇಲೆ ನಾನು ಕೂತ ಮೇಲೆ ಬಸ್ ನಿಂತಿದ್ದೆಡೆಗೆ ಫಟ್ ಫಟ್ ಮಾಡಿದಳು. ಟೈರ್ ಬಿರಿದ ಬಸ್ಸು ಅಲ್ಲೇ ನಿಂತಿತ್ತು. ಆದರಿಂದ ನನ್ನ ಸಾಮಾನನ್ನು ಇಳಿಸಿಕೊಂಡೆ. ಬೆಳಗಾವಿಗೆ ಹೋಗುತ್ತಿದ್ದ ಲಾರಿಯನ್ನು ಅಂಬುಜಮ್ಮ ನಿಲ್ಲಿಸಿದಳು. ಆದರಲ್ಲಿ ನನ್ನ ಕೂರಿಸಿ, "ಆದಷ್ಟು ಬೇಗ ಹಣ ತಂದು, ಭಿತ್ತಿಪತ್ರಗಳನ್ನು ತೊಗೊಂಡು ಹೋಗು," ಎಂದು ಹೇಳಿ ಬೈಬೈ ಮಾಡಿದಳು.


ಬೆಳಗಾವಿನಲ್ಲಿ ಭಿತ್ತಿಪತ್ರಗಳ ಮಾದರಿಯನ್ನು ಗುಟ್ಟಿನಲ್ಲಿ ಇತರ ಪಕ್ಷದ ನಾಯಕರಿಗೆ ತೋರಿಸಿದೆ. ಅವರಿಗೆ ತುಂಬಾ ಖುಷಿಯಾಯಿತು. ಇಂತಿಂಥಾ ತಾಲ್ಲೂಕಾದಲ್ಲಿ ಐನೂರು ಆರು ನೂರು ಭಿತ್ತಿಪತ್ರ ಅಂಟಿಸಿ ಸಗಣಿ ಶೃಂಗಾರ ಮಾಡಿಸು. ಮುಂಗಡ ಹಣಕ್ಕಾಗಿ ಹತ್ತು ಸಾವಿರ ಕೊಡುತ್ತೀವಿ. ನಲ್ವತ್ತೂ ತಾಲ್ಲೂಕಾಗಳಲ್ಲಿ ಹಚ್ಚಿದ ಮೇಲೆ, ಮೂವತ್ತು ಸಾವಿರ ಕೊಡ್ತೀವಿ. ನಮ್ಮ ಪಕ್ಷ ಗೆದ್ದರೆ ಬಹುಮಾನ ಆಲಾಯಿದಾ ಎಂದರು. ಒಪ್ಪಿದೆ.

ಮೂರು ದಿನಗಳಲ್ಲಿ ಅಂಬುಜಂಭಳನ್ನು ಭೇಟಿಯಾದೆ. ವರದಿ ಒಪ್ಪಿಸಿದೆ. ನಂತರ ಅಂಬುಜಂಭನ ನೇತೃತ್ವದಲ್ಲಿ ಕಾರ್ಯಾರಂಭ ಮಾಡಿದೆ.



ಬಸ್‌ಸ್ಟ್ಯಾಂಡುಗಳ ಬಳಿ, ರೈಲ್ ನಿಲ್ದಾಣದ ಬಳಿ, ಹಾಯ್‌ಸ್ಕೂಲುಗಳ ಬಳಿ ಹಲವಾರು ಊರುಗಳಲ್ಲಿ ಹಠಾತ್ತನೆ ಭಿತ್ತಿಪತ್ರಗಳು ಪ್ರತ್ಯಕ್ಷವಾದವು. ಎದುರು ಪಕ್ಷದ ನಾಯಕರು ಹಿರಿ ಹಿಗ್ಗಿದರು. ಹಣವನ್ನು ಕೊಡುವುದಕ್ಕೆ ಮುಂಚೆ ಬೇಕಾದರೆ ನಿನಗೆ ಟಿಕೆಟ್ ಕೊಡುತ್ತೇವೆ. ಬಲು ಶಹಣೆ ಇದ್ದೀಯೆ ಎಂದರು. ಟಿಕೆಟ್ ಬೇಡ. ರೂಪಾಯಿ ಕೊಡಿ. ಬಹುಮಾನಾನೂ ಈಗಲೇ ಕೊಟ್ಟರೆ ಓಟುಗಳನ್ನು ಕೊಳ್ಳಲೆತ್ನಿಸುತ್ತೇನೆ ಎಂದೆ. ಅವರಿಗೂ ನಂಬಿಕೆ ಹುಟ್ಟಿತ್ತು. ಒಟ್ಟು ನಲವತ್ತೈದು ಸಾವಿರವನ್ನು ಗೋಣಿ ಚೀಲದಿಂದ ತೆಗೆದುಕೊಟ್ಟರು.

ಕಾಲೇಜು ಗೆಳತಿ ಅಂಬುಜಂಭ ಅನಿರೀಕ್ಷಿತವಾಗಿ ಸಿಕ್ಕಿ ಸಲಹಾ-ಹಸ್ತ ನೀಡಿದ್ದರಿಂದ ಇನ್ನೊಂದು ಚುನಾವಣೆಯ ತನಕ ಸಂಸಾರ ತಳ್ಳಬಹುದು ಎಂಬ ಧೈರ್ಯ ಬಂದಿದೆ. ನನ್ನ ಮರಾಠೀ ಹೆಂಡತಿಗನಕ ಹಸು, ಕರು, ಸಗಣಿ ಮೇಲೆ ತುಂಬಾ ಭಕ್ತಿ ಹುಟ್ಟಿದೆ.



ರಾಮನ ಸವಾರಿ ಸಂತೆಗೆ ಹೋದದ್ದು

ಕೆ. ಸದಾಶಿವ

"ಕೇಳಸ್ತ, ಪಾರ್ವತಿ, ಬೇಗ ಒಂದಿಷ್ಟು ಕಾಫಿ, ಕಷಾಯ ಮಾಡು ನೋಡುವ. ಸಂತೆ ಎಂದಾಗ ಅಬೂ ಬ್ಯಾರಿ ಬಂದಾನಷ್ಟೆ. ದುಡ್ಡು ಪಾವತಿ ಮಾಡುವ ಯೋಚನೆ ಇಲ್ಲದಿದ್ದರೂ ಹೆಡಿಗೆ ಹೆಡಿಗೆ ಮಾತು ಆಡುವದಕ್ಕೇ ಸಂತೆ. ಈ ಬ್ಯಾರಿ, ಪರ್ಬುಗಳ ಸಹವಾಸವೇ ಬೇಡವಪ್ಪ ಎಂದವನು ನಾನು. ಆದರೆ ಅಚ್ಚುತಯ್ಯ ಬಿಟ್ಟರಷ್ಟೆ. ಮಧ್ಯಸ್ಥಿಕೆ ಮಾಡಿ ಹಣ ಕೊಡಿಸಿದ. ಈಗ ಅದೇ ಅಚ್ಯುತಯ್ಯ..."

ಅಜ್ಜ ಸಂತೆ ಮಾತೆತ್ತಿದ್ದನ್ನು ಕೇಳಿಯೇ ರಾಮ ತಕತಕ ಕುಣಿದಾಡಿದ. ಆಗಲೇ ಅವನ ವರಾತ ಪ್ರಾರಂಭವಾದದ್ದು. ಪಾರ್ವತಿಯ ಸೆರಗು ಹಿಡಿದೇ ಓಡಾಡಿದ. "ಅಮ್ಮ, ಅಮ್ಮ" ಅಂತ ನಾಲ್ಕು ನಾಲ್ಕು ಸತಿ ಕೊರಳು ಉದ್ದ ಮಾಡಿ ಹೇಳಿದ. "ಎಂಥದು ಮಾಣಿ ನಿಂದು ಬೆಳಗ್ಗಾತ ಎದ್ದು? ಇಶ್ಯಪ್ಪ" ಎಂದು ಸಿಟ್ಟು ಮಾಡಿಕೊಂಡೇ ಅಗ್ಗಿಷ್ಟಿಕೆ ಮೇಲೆ ಕಾಫಿಗೆ ನೀರಿಟ್ಟಳು.

ಒಳ ಕೋಣೆಯಿಂದ ಪಾರ್ವತಿಯ ತಾಯಿ—ಕಲ್ಯಾಣಿ ಉಗ್ಗುಸನ ದನಿಯಲ್ಲೇ "ಹೌದ ಪಾರ್ವತಿ. ಸಂತೆ ಮಾಣಿಯದು? ಯಾಕೆ ಬಯ್ಯುತ್ತಿದ್ದಿ. ಇವತ್ತು ಸಂತೆಯಲ್ಲವೆ? ಕಳುಹಿಸಬಾರದೆ? ಶೆಟ್ರ ಮಕ್ಕಳು ಹೇಗೂ ಅಂಗಡಿ ಬಿಡಲು ಹೋಗುತ್ತಾರಷ್ಟೆ. ಅವರೊಟ್ಟಿಗೆ ಹೋಗುವುದಲ್ಲ. ಅವರೂ ಆ ಕಡೆ ಹೋಗುವವರು. ಬರುವಾಗ ಮಾಣಿಯನ್ನು ಕರೆತನ್ನಿ ಎಂದರೆ ಕೂಡದು ಎನ್ನಲಾರರಷ್ಟೆ" ಎಂದಳು.

ರಾಮನಿಗೆ ಖುಷಿಯಾಯಿತು. ಚಂಗನೆ ಅಜ್ಜಿಯ ಕೋಣೆಗೆ ಓಡಿದ. ಅವಳು ಅವನನ್ನು ಸಂತೈಸುವುದು, "ಆಯಿತು ಮಗು. ಸುಮ್ಮನಿರ ಬಾರದೆ ಒಮ್ಮೆ. ಮೈಗೊಂದಿಷ್ಟು ನೀರು ಹಾಕಿ ಕಳುಹಿಸು ಎಂದು ಹೇಳುತ್ತೇನೆ ಅವಳಿಗೆ" ಎನ್ನುವುದು ಪಾರ್ವತಿಗೂ ಕೇಳಿಸಿತು. ಅಲ್ಲಿಂದ ಮತ್ತೆ ಅಮ್ಮನ ಕಾಲ ಬುಡಕ್ಕೆ ಓಡಿ ಬಂದ. "ಅಮ್ಮ ಅಮ್ಮ" ಎಂದು ಗೊಣಗಿದ. "ಆಯಿತು ಮಾಣಿ. ನಂಗೆ ಕಾಫಿ ಮಾಡುವಷ್ಟಾದರೂ ಪುರುಸೊತ್ತು ಕೊಡುತ್ತೀಯಷ್ಟೆ. ಮತ್ತೆ ಅಪ್ಪಯ್ಯ ಹೊತ್ತಾಯಿತೆಂದು ಸಿಟ್ಟಾದಾರು," ಎಂದಳು ಸಿಟ್ಟಿನಲ್ಲಿ. ರಾಮ ಮಲಗುವ ಕೋಣೆಗೆ ಚಿಮ್ಮಿದ. ಕಾಲಮಣೆಯನ್ನು ಗೋಡೆಗೆ ತಳ್ಳಿ, ಅದರ ಮೇಲೆ ನಿಂತು, ಕೈಕಾಲು ಕೊರಳು ಉದ್ದ ಮಾಡಿ ತೂಗುಮಣೆಯ ಮೇಲೆ ಇದ್ದ ತನ್ನ ವಸ್ತ್ರ ಎಳೆಯಲೆತ್ನಿಸಿದ. ಕಾಲಮಣೆ ಜಾರಿ ಅಂಗಾತ ಬಿದ್ದ. ಮೇಲಿಂದ ಬಟ್ಟೆ ಬರೆಯೆಲ್ಲ ಮೈ ಮೇಲೆ ಮಗುಚಿಕೊಂಡವು. ಹೋ ಎಂದು ಚೀರಿದ ಹೊಡೆತಕ್ಕೆ ಪಾರ್ವತಿ, ಮಂಜಯ್ಯ ಓಡಿ ಬಂದರು. ಕಲ್ಯಾಣಿ ಮಲಗಿದ್ದಲ್ಲಿಂದಲೇ "ಮಾಣಿಗೆ ಏನಾಯಿತು?" ಎಂದು ನಾಲ್ಕು ಬಾರಿ ಸೊರಗಿದ ಸ್ವರದಲ್ಲೇ

ವಿಚಾರಿಸಿದಳು. "ನನಗೆ ಸಾವು ಆದರೂ ಏಕೆ ಬಾರದು. ಈ ಮಾಣಿಯಿಂದ ನನಗೆ ಆಗದು" ಎನ್ನುತ್ತ ಕೂಗಿಕೊಂಡೇ ಪಾರ್ವತಿಯು ಅವನನ್ನು ನೆಲದಿಂದ ಎತ್ತಿದಳು. ಕುಂಡೆಯ ಮೇಲೆ ಬಾರಿಸಿಯೂ ಬಾರಿಸಿದಳು. "ಹೌದ ಪಾರ್ವತಿ ಯಾಕೆ ಹಾಗೆ ಜಪ್ಪುತ್ತಿ? ಅವಕ್ಕೆ ತಿಳಿಯುತ್ತದ ? " ಎಂದು ಅಜ್ಜ ಅಮ್ಮನಿಗೆ ಅಂದ ಮಾತಿಂದ ಉತ್ತೇಜನಗೊಂಡ ರಾಮ ಮತ್ತಷ್ಟು ಜೋರಾಗಿ ವಾಲಗ ಊದಿದ. ಕೋಣೆಯಿಂದ ಕಲ್ಯಾಣಿ. "ಏನಾಯಿತು, ಏನಾಯಿತು" ಎಂದು ಕೇಳಿಯೇ ಕೇಳಿದಳು. "ಎಂಥದೂ ಆಗಿಲ್ಲ ನೀನು ಸುಮ್ಮನೆ ಮಲಗಬಾರದೆ" ಎಂದರು ಮಂಜಯ್ಯ.

ರಾಮನದು ಲೆಕ್ಕಕ್ಕೊಂದು ಸ್ನಾನವೂ ಆಯಿತು. ಹಸಿವು ಎಂದು ರಾಗಮಾಲಿಕೆಯು ಪ್ರಾರಂಭವಾಯಿತು. ಹಿಂದಿನ ದಿನ ಮಾಡಿದ್ದ ಮಣ್ಣಿ ಉಳಿದದ್ದು ತನ್ನ ಪುಣ್ಯವೆಂದುಕೊಂಡಳು ಪಾರ್ವತಿ. ಎರಡು ಮೂರು ಹೋಳು ಅವನ ಕೈಗೆ ಇತ್ತಳು. ಪೂರ್ತಿ ತಿನ್ನುವಷ್ಟು ಪುರುಸೊತ್ತು ಅವನಿಗೆಲ್ಲಿದೆ. ಇಷ್ಟು ಹೊಟ್ಟೆಗಾದರೆ ಅಷ್ಟು ಮುಖಕ್ಕೆ ಆಯಿತು. ಅಮ್ಮನಿಂದ ಬೈಯಿಸಿಕೊಂಡದ್ದೂ ಆಯಿತು.

ಊರಿನ ಗುಡ್ಡದ ಮೇಲಿನ ಶಾಲೆಗೆ ವಾರಕ್ಕೊಂದೇ ದಿನ ರಜೆಯಷ್ಟೆ. ಅದೂ ರವಿವಾರ. ಹಾಗಾಗಿ ಶಾಲೆಗೆ ಕರೆದೊಯ್ಯಲು ಬರುವ ಸುಟ್ಟ ಮೋರೆಯ ಸೀತುವಿನ ಕಾಟವೂ ಇಲ್ಲ. ಮತ್ತೆ ಅದೇ ದಿನ ಸಂತೆಮಾಳದಲ್ಲಿ ಸಂತೆ. ಶಾಲೆಯಲ್ಲಿ ಕಾಲುಮಣೆಯ ಮೇಲೆ ಕೂತು ಅ, ಆ, ಇ, ಈ, ತಿದ್ದುವುದಕ್ಕಿಂತ ಇದೆಷ್ಟು ಚಂದ ಎನಿಸದಿರುತ್ತದೆಯೇ ರಾಮನಿಗೆ.

ಮಂಜಯ್ಯ ಪಾರ್ವತಿ ಕೊಟ್ಟ ಕಷಾಯ ಕುಡಿದು ಕೆರವನ್ನು ಕಾಲಿಗೆ ಸಿಕ್ಕಿಸಿಕೊಂಡು ಅಂಗಳ ದಾಟಿದ್ದೂ ಆಯಿತು.

ಪಾರ್ವತಿ ಮತ್ತೆ ಮತ್ತೆ ರಾಮನ ದಿರಿಸನ್ನು ಸರಿಪಡಿಸಿದಳು. ರಾಮನಿಗೆ ಎಂಥದೋ ನೆನಪಾಗಿ ಅವಳಿಂದ ಬಿಡಿಸಿಕೊಂಡು ಅಜ್ಜಿಯ ಕೋಣೆಗೆ ಓಡಿದ. "ಏನು ಮಗು, ಏನು?" ಎನ್ನುವುದು, "ನನ್ನ ದಿಂಬಿನಡಿ ಏನುಂಟು? ಎಂದು ಕೈ ಹಾಕುತ್ತಿದ್ದಿ" ಎನ್ನುವುದು ಕೇಳುತ್ತಿದೆ. "ಬರುತ್ತೀಯೋ ಇಲ್ಲವೋ ಒಮ್ಮೆ" ಆಕಳಿಗೆ ಕಲಗಚ್ಚು ಕೊಡಬೇಕು ನಾನು. ಒಂದು ಸರ್ತಿ ನೀನು ಹೊರಡು ಫಾರಾಯ ಸಂತೆಗೊ ಪಂತೆಗೊ" ಎಂದು ಪಾರ್ವತಿ ಕೂಗಿ ಕರೆದಳು. ಇಷ್ಟಗಲ ಮೋರೆ ಮಾಡಿಕೊಂಡು ಓಡಿ ಬಂದ. ಚಡ್ಡಿಯ ಕಿಸೆ ಬಾತುಕೊಂಡಿತ್ತು, ಸಣ್ಣ ಕಪ್ಪೆಯನ್ನು ನುಂಗಿದ ದೊಡ್ಡ ಕಪ್ಪೆಯ ಹೊಟ್ಟೆಯ ಹಾಗೆ. "ಕಿಸೆಯಲ್ಲಿ ಏನು?" ಎಂದು ಕೈ ಹಾಕಿದಳು ಪಾರ್ವತಿ. ನಗು ಬಂತು. ಒಂದೋ ಎರಡೋ ಗೋಲಿ. ಅಜ್ಜಯ್ಯನ ಖಾಲಿ ನಶ್ಯದ ಡಬ್ಬಿ. ಅದರೊಳಗೆ ಟೊಣಟೊಣ ಎನ್ನುವ ಬಳಪದ ತುಣುಕುಗಳು, ಮೊಳೆಯಿಲ್ಲದ ಬುಗುರಿ. ತಗಡಿನದೊಂದು ಪೀಪಿ. "ಇದೆಲ್ಲೀದು" ಎಂದಳು. "ಅಪ್ಪು ಕೊಟ್ಟದ್ದು" ಎಂದ. "ಹೌದು– ಅಪ್ಪು ಕೊಟ್ಟಾನಲ್ಲವೆ. ನೀನೇ ಎತ್ತಿಕೊಂಡು ಬಂದಿರಬೇಕು" ಎಂದು ಬೈದಳು. "ಇಲ್ಲ ಅಮ್ಮ ಅವನೇ ಮತ್ತೆ ಕೊಟ್ಟದ್ದು" ಎಂದು ಒಮ್ಮೆ ಊದಿ ಕಿಸೆಗೆ ಹಾಕಿದ. ಎಂಥ ಸುಡುಗಾಡೋ ಎಂದು ಗೊಣಗಿ ಹಣೆಯಿಂದ ಅವನ ಕೂದಲನ್ನು ಸರಿ ಮಾಡುವಷ್ಟರಲ್ಲಿ ಶೆಣೈ ಮನೆ ಅಪ್ಪು ಬಾಗಿಲಿಗೆ ಬಂದ. "ಸಂತೆಗೆ ಕರೆದುಕೊಂಡು ಹೋಗುತ್ತೀಯಷ್ಟೆ?" ಎಂದು ಕೇಳಿದಳು. "ಅದಕ್ಕೇ ಬಂದದ್ದು" ಎಂದ ಅಪ್ಪು.

ಇಬ್ಬರೂ ಹೊರಟು ನಿಂತರು. ಪಾರ್ವತಿ ಸೊಂಟದ ಬಾಳೇಕಾಯಿಯಿಂದ ಕಾಸು ತೆಗೆದು ಒಬ್ಬೊಬ್ಬರ ಕೈಗೂ ಎರಡೆರಡು ಪಾವಾಣೆಯಿತ್ತಳು. "ಕೌಂಟು ಪದಾರ್ಥ ಕೊಡಿಸಬೇಡ ರಾಮನಿಗೆ" ಎಂದಳು. "ಆಯಿತು" ಎಂದ ಅಪ್ಪು ರಾಮನ ಕೈ ಹಿಡಿದು ಜಗುಲಿಗೆ ಬಂದ.

ಅಂತೂ ಇಂತೂ ಸುಮಾರು ಹತ್ತು ತಾಸಿಗೆ ರಾಮನ ಸವಾರಿ ಹಿರಿಯ ಸಂಗಡಿಗ ಅಪ್ಪುವಿನೊಟ್ಟಿಗೆ ಸಂತೆಗೆ ಹೊರಟಿತು. ಮೊನ್ನೆ ಮೊನ್ನೆಯಷ್ಟೇ ಪರದೂರಿನಿಂದ ಬಂದಿದ್ದ ಮಂಜಯ್ಯನ ಅಕ್ಕ ಕಾವೇರಿ ಕೊಡಿಸಿದ್ದ ರಬ್ಬರಿನ ಪಂಪು ಶೂ ಕಾಲಿಗೆ, ಮೈಸೂರಿನ ಚಕ್ಕನ ಚಡ್ಡಿ ಮಕಮಲ್ಲು ಕೋಟು. ಕೋಟಿನ ಕಾಲರು ಮುಚ್ಚಿ ಅಂಗಿಯ ಕಾಲರು . ಮಂಡೆಗೆ ನಕ್ಕಿ

ಬಡಿಸಿದ ಮಕಮಲ್ಲಿನ ಟೊಪ್ಪಿಗೆ. ಕಿಸೆಯಲ್ಲಿ ಎರಡು ಪಾವಣೆ. ಇನ್ನೇನು ಬೇಕು ರಾಮನ ಸಂತಸಕ್ಕೆ?

ಸಂತೆಮಾಳ ಹತ್ತಿರ ಹತ್ತಿರ ಬರುತ್ತಿದ್ದಂತೆ ಇಬ್ಬರ ಉತ್ಸಾಹಕ್ಕೂ ಎಣೆ ಇಲ್ಲದಂತಾಯಿತು. "ರಾಮ, ಸಂತೆಯಲ್ಲಿ ನಿನಗೆ ಏನೆಲ್ಲ ಬೇಕು ಎನ್ನುವುದು ಈಗಲೇ ಹೇಳು. ಮತ್ತೆ ಅಲ್ಲಿ ರಂಪ ಮಾಡುವುದು ಬೇಡ, ಕಳೆದ ಸರ್ತಿಯ ಹಾಗೆ" ಎಂದು ಅಪ್ಪು ಎಚ್ಚರಿಸಿದ. ಏನು ಬೇಡ ರಾಮನಿಗೆ? ಬತ್ತಾಸು, ಸೀ ಖಾರದ ಕಡ್ಡಿ, ಚೆಂಡು, ಇವಂತೂ ಬೇಕೇ ಬೇಕಷ್ಟೆ. ಸಾಧ್ಯವಿದ್ದರೆ ಕಾಮತನ ಅಂಗಡಿಯಲ್ಲಿ ಗೋಲಿ ಬಜೆ. ಅಮ್ಮನಿಗೆ ತಿಳಿದರೆ? ಆದರೇನಂತೆ? ಅಪ್ಪು ಕೊಡಿಸಿಯೇ ಕೊಡಿಸುತ್ತಾನೆ. ಕಳೆದ ಸರ್ತಿಯೂ ಕೊಡಿಸಿದ್ದನಷ್ಟೇ. ಕಾಮತನ ಅಂಗಡಿಯಲ್ಲಿ ಮತ್ತೊಂದು ಆಕರ್ಷಣೆಯೂ ಉಂಟು ಅವನಿಗೆ. ದೊಡ್ಡದೊಂದು ಪಾತ್ರೆಯಲ್ಲಿ ಕೊಣ ಕೊಣ ಸದ್ದು ಬರುತ್ತದಲ್ಲ. ಅದನ್ನು ಕೇಳುವುದೇ ಚಂದ. ಆದರೆ ಆ ಪಾತ್ರೆ ಯಾಕೆ ಹಾಗೆ ಸದ್ದು ಮಾಡುತ್ತದೆ ಎಂಬ ಆಶ್ಚರ್ಯವೂ ಉಂಟು. ಒಮ್ಮೆ ಅಪ್ಪುಗೆ ಆ ಪ್ರಶ್ನೆಯನ್ನು ಹಾಕಿಯೂ ಹಾಕಿದ. "ಪಾತ್ರೆಯೊಳಗೆ ನೀರು ಉಂಟಲ್ಲ, ಅದರೊಳಗೆ ಬಿಲ್ಲೆ ಹಾಕಿರುತ್ತಾರೆ" ಎಂದ ಅಪ್ಪು. "ಬಿಲ್ಲೆ ಯಾಕೆ ಹಾಕುತ್ತಾರೆ?" ಎಂದು ಇವನದು ಮರುಪ್ರಶ್ನೆ. "ಯಾಕೆ ಅಂದರೆ?" ಅದು ಅಪ್ಪುಗೂ ತಿಳಿಯದು. ಆದರೆ ರಾಮನ ಮುಂದೆ ತನ್ನ ಅಜ್ಞಾನವನ್ನು ಬಹಿರಂಗಪಡಿಸುವುದು ಉಚಿತವೆ? "ನೀನಿನ್ನೂ ಚಿಕ್ಕವ; ದೊಡ್ಡವನಾದ ಮೇಲೆ ನಿನಗೆ ಅರ್ಥವಾಗುತ್ತದೆ" ಎಂದು ಅವನು ತನಗಿಂತ ಚಿಕ್ಕವ ಎನ್ನುವುದನ್ನು ತೋರಿಸಿ ಅವನ ಬಾಯಿ ಮುಚ್ಚಿಸಲೆತ್ನಿಸಿದ್ದಾನೆ. "ದೊಡ್ಡವ ಎಂದರೆ ನಿನ್ನಷ್ಟು?" ಎಂದು ಕೇಳಿದ ರಾಮ. "ಹೌದು ; ನೀನು ಬಾಯಿ ಮುಚ್ಚು" ಎಂದು ಹಿರಿಯನಂತೆ ವರ್ತಿಸಿದ ಅಪ್ಪು. ಬಾಯಿ ಮುಚ್ಚಿದರೆ ಏನು? ಮನಸ್ಸು ಮುಚ್ಚಿರಲಾರದಷ್ಟೆ. ಸಂತೆಯಲ್ಲಿ ದೊರೆಯಬಹುದಾದ ಯಾವತ್ತೂ ವಸ್ತು ಒಡವೆಗಳ ಬಗ್ಗೆ ರಾಮನ ವಿಚಾರಲಹರಿ ಹರಿದಿದೆ. ಜೊತೆಯಲ್ಲಿ ಅದು ಏನು, ಇದು ಏನು, ಯಾಕೆ, ಎಲ್ಲಿಂದ, ಹೇಗೆ ಇತ್ಯಾದಿ ಪ್ರಶ್ನೆಗಳನ್ನೂ ಕೇಳುತ್ತಿದ್ದಾನೆ. ಅಪ್ಪು ಹಿರಿಯನಾದರೇನಂತೆ–ಅವನಿಗೆಲ್ಲಿದೆ ವ್ಯವಧಾನ, ರಾಮನ ಕುತೂಹಲಗಳಿಗೆ ಸಮಜಾಯಿಷಿ ಕೊಡಲು. ಮತ್ತೊಮ್ಮೆ ಗದರಿಸಿಯೂ ಆಯಿತು. ಅದಕ್ಕೆ ಕಾರಣವೂ ಇಲ್ಲದಿಲ್ಲ. ರಾಮನ ತಾಯಿ ಎರಡು ಪಾವಾಣೆ ಕೊಟ್ಟದ್ದು ಸರಿಯಷ್ಟೆ. ಆದರೆ ರಾಮನಿಗಿಂತ ಹಿರಿಯನಾದ ಅವನಿಗೆ ಅದು ಯಾತಕ್ಕೆ ಬಂದೀತು? ಮನೆಯಿಂದ ಹೊರಡುವಾಗಲೇ ಅಕ್ಕನನ್ನು ಪುಸಲಾಯಿಸಿ ಅರ್ಧ ಆಣೆಯ ಎರಡು ಬಿಲ್ಲೆ ತೆಗೆದುಕೊಂಡಿದ್ದಾನೆ. ತಾಯಿಯ ಹತ್ತಿರ ಕೇಳಿ ಅರ್ಧ ಆಣೆಯಾದರೆ, ಕೇಳದೆಯೇ ಜೇರಿಗೆ ಡಬ್ಬದಿಂದ ಒಂದೆರಡು ನಾಣ್ಯ ಹಾರಿಸಿದ್ದಾನೆ. ಲೆಕ್ಕ ಮಾಡಿದವರು ಯಾರು? ಒಟ್ಟು ಅಷ್ಟು ಹಣ ಅವನ ಚಡ್ಡಿ ಕಿಸೆಯಲ್ಲಿ ಝುಣಝುಣಗುಟ್ಟುತ್ತಿದೆ. ಅದನ್ನು ಹೇಗೆ ಹೇಗೆ ವಿಲೇವಾರಿ ಮಾಡುವುದೆಂಬುದೇ ಅವನ ಚಿಂತೆ. ಒಂದು ಪಾವಾಣೆಯಲ್ಲಿ ಕಾಮತನ ಹೋಟೆಲಿನಲ್ಲಿ ಸಜ್ಜಿಗೆ ಬರುತ್ತದಷ್ಟೆ. ಒಂದಿಷ್ಟು ಹಲ್ಲು ಕಿಸಿದರೆ ನೆಂಚಿಕೊಳ್ಳಲು ಒಂದು ಪಕ್ಕೋಡವೋ ಮತ್ತೊಂದೋ ಕೊಟ್ಟಾನು. ಕೊಡದೇ ಏನು? ತಮ್ಮ ಅಂಗಡಿಯಲ್ಲಿ ಬೆಲ್ಲ ಸಾಬೂನು ಎಂತ ಸಾಲ ಕೊಂಡೊಯ್ಯುವುದಿಲ್ಲವೆ ಅವನು? ಅಂಬಾಣ ಈ ಸರ್ತಿಯೂ ಅಂಗಡಿಯಿಟ್ಟಿದ್ದರೆ ಸಣ್ಣ ರಾಗ ಮಾಲಿಕೆಯನ್ನು ಕೊಳ್ಳಲಿಕ್ಕೇ ಬೇಕು. ಹೀಗವನ ವಿಚಾರಲಹರಿ ಹರಿಯುವಾಗ ಈ ಹಾಳು ರಾಮ ಅದೇನು, ಇದೇನು ಎಂದು ಕೇಳಿದರೆ ಅವನಿಗೆ ಸಿಟ್ಟು ಬಾರದೆ ಮತ್ತೇನು ಬಂದೀತು? ಹಾಗೂ ಹೀಗೂ ಸಂತೆ ಮೈದಾನಕ್ಕೆ ಬಂದದ್ದೂ ಆಯಿತು. ಬಿಸಿಲು ನೆತ್ತಿಗೇರಿರುವಾಗ ರಾಮನಿಗೆ ನೀರಡಿಕೆಯಾಗಿ, ಅಪ್ಪುಗೆ ಹಾಗೆಂದು ಹೇಳಿದ. "ಹಾಗಿದ್ದರೆ ಷರಬತ್ತು ಕುಡಿಯುವ" ಎಂದು ಷರಬತ್ತು ಅಂಗಡಿಗೆ ರಾಮನನ್ನು ಒಯ್ದ. ಅಲ್ಲಿ ನೋಡಿದರೆ ಏನನ್ನುವುದು? ನಮೂನೆ ನಮೂನೆ ಬಣ್ಣದ ಷರಬತ್ತಿನ ಬಾಟಲುಗಳ ಸಾಲು ಸಾಲು. ಮೇಲೆ ಲಿಂಬೆ

ಹಣ್ಣು. ಬದಿಯಲ್ಲಿ ಕೊಯ್ ಟಸ್ ಎಂದು ಸದ್ದು ಮಾಡುವ ಸೋಡ ಕೊಡುವಾತ. "ಯಾವು ದಾದೀತು?" ಎಂದು ಅಪ್ಪು ಕೇಳಿದ. ಯಾವ ಬಣ್ಣದ್ದೆಂದು ಹೇಳುವುದು? ಕೊಡುವುದಾದರೆ ಎಲ್ಲ ಬಣ್ಣದ್ದೂ ಚಂದವೇ. "ಯಾವುದು ಬೇಗ ಹೇಳಿ" ಎಂದಳು ಅಂಗಡಿಯಾಕೆ. ನೇರಳೆ ಬಣ್ಣದ ಕಡೆ ಬೆರಳು ಮಾಡಿದ ರಾಮ. ಆಕೆ ಗಾಜಿನ ಲೋಟವೊಂದನ್ನು ಬಾನಿಯ ನೀರಿಗೆ ಅದ್ದಿ ತೆಗೆದು ಅದಕ್ಕೊಂದಿಷ್ಟು ಬೆಲ್ಲದ ಪಾಕ ಹೊಯ್ದಳು. ನೇರಳೆಗಿಂತ ಕೆಂಪು ಚಂದವೆನಿಸ ಬೇಕೆ ರಾಮನಿಗೆ? "ಅದು ಆದೀತು" ಎಂದ. "ಹೇ ಮಕ್ಕಳೇ ಆದೀತು ನೀವು" ಎಂದು ಗೊಣಗಿ ಕೆಂಪು ಬಣ್ಣದ ನೀರನ್ನು ಪಾಕಕ್ಕೆ ಹೊಯ್ದ ಳು. ತಂಪು ಬೀಜ ಒಂದು ಚಮಚ ಹಾಕಿ ದಳು. ಚಮಚದಿಂದ ಗ್ಲಾಸಿನೊಳಗೆ ಟೊಣ ಟೊಣ ಮಾಡಿ ಮುಂದೆ ಚಾಚಿದಳು. ಆ ಬದಿ ಘೋರದವನು ಎದೆಯ ಮೇಲೆ ಸೋಡಾ ಬಾಟ ಲನ್ನು ಇಟ್ಟು, ಹೆಬ್ಬೆರಳಿನಿಂದ ಗೋಲಿ ಅಮುಕಿ ಟೊಂಯ್ ಎಂದು ಸದ್ದು ಮಾಡಿ ದಾಗ ರಾಮನ ಗಮನ ಅತ್ತ ಸೆಳೆಯಬೇಕೆ? ಬಾಟಲಿನಿಂದ ನೊರೆ ಉಕ್ಕಿ ಉಕ್ಕಿ ಬಂದಾಗ ಇದ್ಯಾವುದೂ ಬೇಡ. ಅದೇ ಆದೀತು ಎನಿಸಿ ಹಟ ಮಾಡಿದ. "ಕುಡಿ ಮಹರಾಯ ಒಮ್ಮೆ ನಿನ್ನನ್ನು ಕರೆದು ತಂದದ್ದೆ ಆಗಲಿಲ್ಲ ನೋಡು" ಎಂದು ಅಪ್ಪು ಏರು ಸ್ವರದಲ್ಲಿ ಹೇಳಿದಾಗ ವಿಧಿಯಿಲ್ಲದೆ ಆಕೆ ಕೊಟ್ಟದ್ದನ್ನು ಕುಡಿದ. ಕುಡಿದ ಎಂದರೆ ಏನು? ಅರ್ಧಕ್ಕರ್ಧ ಕೋಟಿನ ಮೇಲೆ ಚೆಲ್ಲಿತು. ಒಂದಿಷ್ಟು ಮಾತ್ರ ಹೊಟ್ಟೆಗೆ ಹೋಯಿತು. ಬಾಯಿ, ಗಲ್ಲ, ಕೋಟಿನ ಮುಂ ಭಾಗವೆಲ್ಲ ಕೆಂಪುಮಯ. "ಪಾವಾಣೆ ಬರಲಿ" ಎಂದಳು. "ಕೊಡು" ಎಂದ ಅಪ್ಪು. ರಾಮ ನಿಗೆ ಅಳುವೇ ಬಂದಿತು. ಅಪ್ಪುಗೆ ಕೋಪ ಬಾರದಿರುತ್ತದೆಯೆ? "ನೀನೊಂದು..." ಎಂದು ಏನೋ ಗೊಣಗಿ ತನ್ನ ಕಿಸೆಯಿಂದಲೇ ಹಣ ತೆತ್ತು ರಾಮನನ್ನು ದರದರ ಎಳೆದುಕೊಂಡು ಹೋದರೆ "ಬಾಟಲಿನಲ್ಲಿ ಗೋಲಿ ಹ್ಯಾಗೆ ಹಾಕುತ್ತಾರೆ?" ಎಂದು ಕೇಳುವುದೆ ಈ ಹಾಳು ರಾಮ? "ಒಮ್ಮೆ ಬಾಯಿ ಮುಚ್ಚಿ ಬಾ ನೀನು" ಎಂದ ಅಪ್ಪು.

ಮುಂದೆ ಇನ್ನೊಂದು ಬೇರೆಯೇ ಪ್ರಪಂಚ ಎದುರಾಗಬೇಕೆ ಈ ಮಕ್ಕಳಿಗೆ? "ಮುಂಬಯಿ ಪಟ್ಣ ನೋಡು", "ಪಟ್ಣದ ಸೂಳೆ ನೋಡು" ಎಂದು ಗೆಜ್ಜೆಯ ತಾಳಕ್ಕೆ ರಾಗವನ್ನು ಮೇಳೈಸಿ ಹಾಡುತ್ತಿದ್ದವನ ಸುತ್ತ ಹತ್ತಾರು ಮಕ್ಕಳು ನಿಂತಿದ್ದರು. ಮಕ್ಕಳೇ ಏನು ಕೆಲವು ಗೌಡ ಗೌಡತಿಯರೂ ಅವನು ಹೇಳುತ್ತಿದ್ದ ಪದಕ್ಕೆ ನಾಚದವರಂತೆ ನಿಂತಿದ್ದರು. ಮತ್ತೆ ಇಂಥೆಲ್ಲ ಜಾತ್ರೆಯೇ ಅಲ್ಲಿರುವಾಗ ರಾಮನಿಗೆ ಅದೇನು ಎನ್ನುವ ಕುತೂಹಲ ಕೆರಳದಿರುತ್ತದೆಯೆ? ಕುತೂಹಲ ಹಟವಾಗಲು ಎಷ್ಟು ವೇಳೆ ಬೇಕಾ ದೀತು? ಹಟ ಸಾಧಿಸದೆ ಇದ್ದಾಗ ಇರುವ ಒಂದೇ ಒಂದು ಸಾಧನವೆಂದರೆ ಅಳುವಷ್ಟೆ. ಅಪ್ಪು ರಾಮನನ್ನೇ ಏನು–ರಾಮನ ಸಂತಾನ ವನ್ನೇ ಶಪಿಸಿದ. ಹಾಗೆ ನೋಡಿದರೆ ಅವನಿಗೂ ಅದನ್ನು ನೋಡುವ ಆಸೆಯುಂಟು. ಹಿಂದೊಮ್ಮೆ ನೋಡಿಯೂ ನೋಡಿದ್ದಾನೆ. ಅಂದ ಮಾತ್ರಕ್ಕೆ ಇನ್ನೊಂದು ಪಾರಿ ನೋಡಬಾರದೆಂದೇನಿಲ್ಲವಲ್ಲ. "ಆದೀತು ಮಹರಾಯ ನೋಡು" ಎಂದ ರಾಮನಿಗೆ. ರಾಮ ಎರಡು ಕಣ್ಣಿಗೂ ಕೈ ಮರೆ ಮಾಡಿ ಇಣಕಿ ಭೂತಕನ್ನಡಿಯಲ್ಲಿ ನೋಡಿದಾಗ ಆ ಸಣ್ಣ ಡಬ್ಬದೊಳಗೆ ವಿಸ್ಮಯದ ಪ್ರಪಂಚ ವನ್ನೇ ಕಂಡ. ಓಹೋ ಹೋ ಎಂದು ನಕ್ಕ. ಮುಗಿಯಿತು. ಬಾ ಎಂದರೆ ಬರುತ್ತಾನೆಯೇ? "ಇನ್ನೊಂದು ಚೂರು, ಇನ್ನೊಂದು ಚೂರು" ಎಂದು ಕುಣಿದ. ನಡಿ ನಡಿ ಎನ್ನುತ್ತ ಅವನನ್ನು ಎಳೆದು ತಾನೂ ಒಮ್ಮೆ ನೋಡಿದ ಅಪ್ಪು.

ಡಬ್ಬದೊಳಕ್ಕೆ ನೋಡಿದ ಮೇಲಂತೂ ಪ್ರಶ್ನೆಯ ಸುರಿಮಳೆಯೇ ಉದ್ದಕ್ಕೂ. ಡಬ್ಬ ದೊಳಕ್ಕೆ ಹೆಂಗಸೊಂದು ಬಂತಲ್ಲ, ಹ್ಯಾಗೆ ಬಂ ತು, ಮುಂಬೈ ಎಂದರೇನು, ಸೂಳೆ ಎಂದರೇನು ಎಂಥದು–ಇತ್ಯಾದಿ ಇತ್ಯಾದಿ, ಹಾಳು ಪಿರಿಪಿರಿ ಎನ್ನಿಸಿತು ಅಪ್ಪುಗೆ.

ಬತ್ತಾಸಿನ ಅಂಗಡಿ ದೂರದಿಂದಲೇ ನೋಡಿದ ಅಪ್ಪು, "ರಾಮ, ಈಗ ನನ್ನ ಮಾತು ಕೇಳ ಲಿಕ್ಕೇ ಬೇಕು ನೀನು. ನಿನ್ನ ಅಮ್ಮ ಕೊಟ್ಟ ಪಾವಾಣೆಯುಂಟಲ್ಲ, ಅದನ್ನು ಇಲ್ಲಿ ಕೊಡು. ನಿನಗೆ



ಎಂಥದು ಬೇಕೋ –ಬತ್ತಾಸೊ, ಬೆಂಡೋ ಕೊಡಿಸುತ್ತೇನೆ. ನೀನು ಪಾವಾಣಿ ಕೊಡದಿದ್ದರೆ ನಿನಗೆ ಯಾವುದೂ ಇಲ್ಲ. ತಿಳಿಯಿತಷ್ಟೇ?" ಎಂದು ಎಚ್ಚರಿಸಿದ. "ಆಯಿತು" ಎಂದ ರಾಮ. ಕಿಸೆಗೆ ಕೈ ಹಾಕಿದ. ಅಲ್ಲಿ ಇಡೀ ವಿಶ್ವವೇ ತುಂಬಿದೆ ಯಷ್ಟು ಗೋಲಿ ಗಜ್ಜುಗ ಎಂದು. ಆ ವಿಶ್ವದಲ್ಲಿ ಪಾವಾಣಿ ಸುಲಭವಾಗಿ ಸಿಕ್ಕುವುದೇ? ರಸ್ತೆಯ ಬದಿಯಲ್ಲೇ ಹಾಸುಗಲ್ಲಿನ ಪಕ್ಕ ನಿಂತರು. ರಾಮ ಶತ ಪ್ರಯತ್ನ ಮಾಡಿದ, ಪಾವಾಣಿ ತೆಗೆಯಲು. ಅದು ಸಿಗದಿರಲು "ಬಿಲ್ಲೆ ಇಲ್ಲ" ಎಂದು ಘೋಷಿಸಿದ. "ಪಚ್ಚ ಆಯಿತು ಮಹರಾಯ. ಇಷ್ಟು ಬೇಗ ಅದು ಹೋಗುವುದಾದರೂ ಎಲ್ಲಿಗೆ? ಎಂದು ತಲೆಗೆ ಕೈ ಹೊತ್ತ ಅಪ್ಪು ಒಂದು ಉಪಾಯ ಸೂಚಿಸಿದ. "ಕಿಸೆಯಲ್ಲಿ ಏನೇನೋ ಉಂಟಲ್ಲ. ಅವೆಲ್ಲ ತೆಗೆದರೆ ಬಿಲ್ಲೆ ಸಿಕ್ಕೀತು." ರಾಮನಿಗೆ ಸರಿಯೆನಿಸಿತು. ಒಂದೊಂದಾಗಿ ಕಿಸೆಯೊಳಗಿನ ಸರಕನ್ನು ಹೊರಗೆ ತೆಗೆದು ಕಲ್ಲಿನ ಮೇಲೆ ಹರಡಿದ. ಮೊಳೆಯಿಲ್ಲದ ಬುಗುರಿ ಮಹಾ ಪ್ರಯಾಸದಿಂದ ಹೊರಕ್ಕೆ ಬಂತು ಮೊದಲು. ನಂತರ ಬಂದದ್ದು ಅಜ್ಜಿಯ ನಶ್ಯದ ಡಬ್ಬಿ. ಟೊಣ ಟೊಣ ಎನ್ನುತ್ತ. ಆದಾದ ಮೇಲೆ ಬಂದದ್ದು……

ಮೋಸವಾದದ್ದು ಇಲ್ಲಿಯೇ. ಗಳಿಗೆಯಲ್ಲಿ ಗುಟ್ಟು ರಟ್ಟಾಗಿಯೇ ಹೋಗಬೇಕೆ? "ಹೋ, ನನ್ನದನ್ನು ಕದ್ದಿಲ್ಲವೇ ನೀನು?" ಎನ್ನುತ್ತ ಅಪ್ಪು ಗಬಕ್ಕನೆ ಕಿತ್ತುಕೊಂಡ ಪೀಪಿಯನ್ನು ರಾಮನಿಂದ. "ಅಯ್ಯೋ ಅದು ನಂದು" ಎಂದು ಒದರಿದ ರಾಮ. "ಹ್ಯಾಗೆ ನಿಂದು ಆದೀತು? ನೆನ್ನೆ ನಮ್ಮನೆಗೆ ಬಂದವನು ಒಮ್ಮೆ ಊದುವೆ ಎಂದು ತೆಗೆದುಕೊಂಡವನು ಕೊಟ್ಟೆಯ ಮತ್ತೆ?"

ಎಂದು ಅಪ್ಪುವಿನ ಸವಾಲು. "ಅಯ್ಯೋ ಅದು ನಂದು, ಅಮ್ಮ ಕೊಡಿಸಿದ್ದು" ಎನ್ನುವುದು ರಾಮನ ಉತ್ತರ ಅಳುವಿನೊಂದಿಗೆ. "ಅದು ನಂದೇ" ಎಂದು ಕಿಸೆಗೆ ಸೇರಿಸಿದ ಅಪ್ಪು. ದುಃಖ ಉಕ್ಕಿ ಬಂದು ಕೈಕಾಲು ಒದರಿದ ರಾಮ. ನಾಲ್ಕು ಮಕ್ಕಳು ಸೇರಿದರು. ಒಂದಿಬ್ಬರು ಹಿರಿಯರೂ ಬಂದರು. ಹಿರಿಯನಿಗೆ ಬೈದರು, ಒಬ್ಬರು. ಕಿರಿಯನಿಗೆ ಹೆದರಿಸಿದರು ಇನ್ನೊಬ್ಬರು. ರಾಮ ಅಪ್ಪುವಿನ ಕೈ ಹಿಡಿದು ಜಗ್ಗಿಸಿದ್ದಾನೆ. ಅಪ್ಪು ಕೋಪದಿಂದ ಕೈ ಝಾಡಿಸಿದ್ದಾನೆ. ಈ ಗೊಂದಲದಲ್ಲಿ ಅಪ್ಪುಗೆ ಹೇಗೋ ಒಂದು ಪೆಟ್ಟು ಬಿತ್ತು. ಕೋಪದಲ್ಲಿ ಅವನು ರಾಮನ ಬೆನ್ನಿಗೆ ಗುದ್ದಿದ. ರಾಮ ದಪ್ಪ ದೊಂದು ಕಲ್ಲೆತ್ತಿಕೊಂಡ. ಅಷ್ಟರಲ್ಲಿ ಯಾರೋ ಪುಣ್ಯಾತ್ಮರು ಅವನ ಕೈ ಹಿಡಿದು ಕಲ್ಲನ್ನು ಕೆಳಕ್ಕೆ ಹಾಕಿದರು. ಜಗಳಕ್ಕೆ ಕಾರಣವೇನೆಂದು ಕೇಳಿದರು. ಅಪ್ಪು ಸವಿವರವಾಗಿ ಪೀಪಿಯ ಕಥೆ ಹೇಳಿದ. "ಅಲ್ಲ ಅದು ನಂದು" ಎಂದು ನಡು ನಡುವೆ ರಾಮ ಬಾಯಿ ಹಾಕಿದ. ಅತ್ತ. ಮಕ್ಕಳ ಜಗಳಕ್ಕೆ ಪುರಾವೆ ತರುವುದು ಎಲ್ಲಿಂದ? ಅತ್ತವರು ಗೆಲ್ಲುವುದು ನ್ಯಾಯವಷ್ಟೆ. ಹಿರಿ ಕಿರಿ ಯರ ಜಗಳದಲ್ಲಿ ಕಿರಿಯರ ಕಡೆಗೇ ಮತ ವಷ್ಟೆ. ಗಂಡಸು ಹೆಂಗಸು ಜಗಳವಾಡಿದರೆ ಹೆಂಗಸಿಗಲ್ಲದೆ ಗಂಡಸಿಗೆ ಯಾರು ನ್ಯಾಯ ಕೊಡುತ್ತಾರಂತೆ? ಅಪ್ಪುವಿನ ಮಾತೇ ಸುಳ್ಳು ಎಂದು ತೀರ್ಮಾನಿಸಿದರು ಆ ಹಿರಿಯರು, ರಾಮನಿಗೆ ಪೀಪಿ ದೊರೆಯಿತು. ಅಪ್ಪುಗೆ ನಾಲ್ಕು ಬೈಗುಳದ ಮಾತೂ ಆಯಿತು. ಸತ್ಯ ದೇ ಸುಳ್ಳಾದಾಗ ಮೈ ಪರಚಿಕೊಳ್ಳುವುದಲ್ಲದೆ ಮತ್ತೇನುಂಟು? ಹಿರಿಯರು ಕೇಸು ಫೈಸಲ್ಲು ಮಾಡಿ ಮುಂದೆ ಹೊರಟರು. ಅಪ್ಪುವಿನ ಮುಖಕ್ಕೆ ರಾಮ ಪೀಪೀ ಊದಿದ. ಮತ್ತೆ ಕದನ ಪ್ರಾರಂಭ. "ಮನೆಗೆ ಬಾ, ಅಪ್ಪಯ್ಯನ ಹತ್ತಿರ ಹೇಳುವೆ" ಎಂದ ಅಪ್ಪು. ರಾಮ ಸುಮ್ಮನಿರುತ್ತಾನೆಯೇ? "ನಾನೂ ನನ್ನ ಅಪ್ಪಯ್ಯ ನೊಟ್ಟಿಗೆ ಹೇಳುವೆ" ಎಂದ ಅವನಿಗೆ ಅಣಕಿಸು ಸುತ್ತ. ಅಪ್ಪುಗೆ ತಮಾಷೆಯೆನಿಸಿತು. "ನಿನಗೆ ಅಪ್ಪಯ್ಯ ಎಲ್ಲುಂಟೋ!" ಎಂದು ಗಟ್ಟಿಯಾಗಿ ನಕ್ಕ.

ಅದೇ ಸಮಯಕ್ಕೆ –

"ನಿಮ್ಮ ಅಪ್ಪಯ್ಯ ಕೂಗುತ್ತಿದ್ದಾರೆ. ಒಡೆ ಯರೆ" ಎಂದು ಹೆಗ್ಗಡತಿಯೊಬ್ಬಳು ಅವನ ತೋಳು ಹಿಡಿದು ಕರೆದಳು. ತಿರುಗಿ ತಲೆಯೆತ್ತಿ ನೋಡಿದ ರಾಮ, ಆ ಅಪರಿಚಿತ ಹೆಂಗಸಿನ ಕಡೆ. ಒಂದು ಘಳಿಗೆ ಕಂಗಾಲಾದ. "ನಿಮ್ಮ ಹೆಸರು ರಾಮ ಅಲ್ಲವೆ?" ಎಂದು ಕೇಳಿ ಖಚಿತಪಡಿಸಿ ಕೊಂಡಳು. "ಎಲ್ಲಿ?" ಎಂದು ಕೇಳಿದ ರಾಮ. "ಓ ಅಲ್ಲಿ ಬಟ್ಟೆಯಂಗಡಿಯಲ್ಲಿ" ಎಂದಳು. "ಯಾವ ಬಟ್ಟೆ ಅಂಗಡಿ?" ಎಂದ. "ಓ ಅಲ್ಲಿ, ಬನ್ನಿ ಹೋಗುವ" ಎಂದಳು. ಬಟ್ಟೆಯಂಗಡಿ ಎಂದ ಮೇಲೆ ಅಲ್ಲಿ ತನಗೆ ಲಾಭ ಉಂಟಷ್ಟೆ. ಅಪ್ಪು ಒಟ್ಟಿಗೆ ಕಾದ ಜಗಳ ಮರೆತೇ ಹೋ ಯಿತು. ಅಷ್ಟೇ ಏನು? ಅಪ್ಪು ಅಲ್ಲಿ ನಿಂತಿ ದ್ದಾನೆಂಬುದೂ ಮರೆತು ಹೋಗಿರಲಿಕ್ಕೇ ಸಾಕು. ಅವಳ ಸೆರಗಿಗೆ ಅಂಟಿಕೊಂಡು ಹೊರಟ. "ತೊಲಗಿತು ಶನಿ ಮಹರಾಯ, ಇನ್ನು ಅವ ನುಂಟು, ಅವನ ಅಜ್ಜ ಉಂಟು" ಎಂದು ಅಪ್ಪು ತನ್ನ ತಂದೆಯ ಅಂಗಡಿ ಕಡೆ ಓಡಿದ.

"ಎಲ್ಲಿ ಮತ್ತೆ ಅಪ್ಪಯ್ಯ?" ಎಂದು ಪದೇ ಪದೇ ಕೇಳಿದ ರಾಮ. "ಓ ಇಲ್ಲೇ ಇಲ್ಲೇ ಬನ್ನಿ ಒಡೆಯರೇ" ಎನ್ನುತ್ತ ಅವನ ತೋಳು ಹಿಡಿದುಕೊಂಡೇ ಮುಂದೆ ನಡೆದಳು ಹೆಗ್ಗಡತಿ. ಅವಳು ಇಲ್ಲೇ ಇಲ್ಲೇ ಎಂದು ತೋರಿಸಿದ ಅಂಗಡಿಯೂ ಸಿಕ್ಕಿತು. ಅಂಗಡಿಯೊಳಕ್ಕೆ ಕಾಲಿಟ್ಟ ಕೂಡಲೇ ರಾಮನ ಕಣ್ಣು ಅಪ್ಪಯ್ಯನನ್ನು ಹುಡುಕಿತು, ಹತ್ತಾರು ಗಿರಾಕಿಗಳ ನಡುವೆ. ಆದರೆ ಅವರೆಲ್ಲಿದ್ದಾರೆ ಅಲ್ಲಿ? ಅಂಗಡಿಯ ದೊಂದು ಮುರುಕು ಖುರ್ಚಿಯಲ್ಲಿ ಕೂತಿ ದ್ದವನ ಕಡೆ ತೋರಿಸಿ "ನೋಡು ಅಲ್ಲಿ ನಿನ್ನ ಅಪ್ಪಯ್ಯ" ಎಂದಳು ಹೆಗ್ಗಡತಿ. ಅದು ಹೇಗೆ ಅಪ್ಪಯ್ಯ ಆದೀತು? ಒಂದು ಘಳಿಗೆ ಯಾಕೋ ಗೊಂದಲಮಯವಾಯಿತು. ಹೆದರಿಕೆ. ನಗು. "ಅಯ್ಯೋ ಅಪ್ಪಯ್ಯ ಅವರಲ್ಲ ಥೂ" ಎಂದ ಮುದ್ದಾಗಿ ನಗುತ್ತ, ಹೆಗ್ಗಡತಿಗೆ ಏನೂ ತಿಳಿಯದು ಎನ್ನುವ ಧಾಟಿಯಲ್ಲಿ. ಅವನು ಹಾಗೆ ಅಂದದ್ದು ಕೇಳಿಯೇ ಖುರ್ಚಿಯಲ್ಲಿ ಕೂತಿದ್ದ



ಆಸಾಮಿ ಧಡಕ್ಕನೆ ಎದ್ದ. ತಲೆಯಲ್ಲೊಂದು ಮಸಿ ಹಿಡಿದಿದ್ದ ಬಿಳಿ ಟೊಪ್ಪಿಗೆ. ಅದರ ಹಿಂದೆ ಕಾಣುವ ಕುಚ್ಚಿನ ಗಂಟು. ಕಿವಿಯಲ್ಲಿ ಒಂಟಿ. ಕಿವಿಯ ಮೇಲೆ ಗೊಂಡೆ ಹೂವು. ಕೈಯಲ್ಲೊಂದು ಕೊಡೆ. ಮೊಣಕಾಲಿನ ವರೆಗೆ ಮಾತ್ರವಿದ್ದ ಕಚ್ಚೆ ಬಿಗಿದ ಪಾಣಿ ಪಂಚೆಯಂತಿದ್ದ ಧೋತ್ರ. ಒಂದು ಕಾಲಿಗೆ ಬೆಳ್ಳಿ ಬಳೆ. ದಪ್ಪ ಚರ್ಮದ ಚಡಾವು. "ಬಾ ಮಗು" ಎಂದೂ ಅವನು ಕೂಗಿದ. ರಾಮ, ಅವನ ಪಕ್ಕದಲ್ಲಿದ್ದ ಹೊಸ ವಸ್ತ್ರಗಳ ರಾಶಿಯನ್ನು ನೋಡಿದ. "ಇದು ನಿಂಗೆ" ಎಂದ ಅವನು. ಬಾ ಎಂದು ಮೂರು ಮೂರು ಬಾರಿ ಕೂಗಿದ. "ಹೋಗಿ ಒಡೆಯರೇ" ಎಂದು ಹೆಗ್ಗಡತಿ ಬೆನ್ನ ಹಿಂದಿನಿಂದ ನೂಕಿದಳು. ಮಂತ್ರಮುಗ್ಧನಾದಂತೆ, ಆಮೆ ಹೆಜ್ಜೆಯಿಡುತ್ತ ಮುಂದು ಮುಂದಕ್ಕೆ ಹೋದ ರಾಮ. ಕಣ್ಣು ಪಿಳಿ ಪಿಳಿ ಬಿಡುತ್ತ ಅವನ ಮುಂದೆ ನಿಂತ. ಆತನೇ ಮುಂದೆ ಬಂದು ಅವನ ಕೈ ಹಿಡಿದು ನಡೆಸಿಕೊಂಡು ಹೋಗಿ ಖುರ್ಚಿಯಲ್ಲಿ ಕೂರಿಸಿದ. "ಈ ಬಟ್ಟೆಯೆಲ್ಲ ನಿಂಗೆ ಗೊತ್ತುಂಟ?" ಅಂದ. "ಚೆನ್ನಾಗುಂಟ?" ಎಂದು ಕೇಳಿದ. ಹೂಂ ಎನ್ನುವಂತೆ ತಲೆಯಾಡಿಸಿದ ರಾಮ. "ನನ್ನ ಮಗನೇ?" ಎಂದು ತಬ್ಬಿಕೊಂಡ ಅವನು. ರಾಮನ ಗಲ್ಲವೆತ್ತಿ ಅವನ ಕಣ್ಣನ್ನೇ ದೃಷ್ಟಿಸಿದ. ಒರಟು ಕೈ ಎನಿಸಿದರೂ ರಾಮನಿಗೆ ಏಕೋ ಖುಷಿಯಾಯಿತು. ಮತ್ತು ಯಾಕೆ ಅಷ್ಟು ದೊಡ್ಡವರ ಕಣ್ಣಲ್ಲಿ ನೀರು ಬರುತ್ತಿದೆಯಲ್ಲ ಎಂದು ವಿಸ್ಮಯವೂ ಆಯಿತು. ಅಳುವೂ ಬಂತು. ಹೊರ ನಿಂತಿದ್ದ ಹೆಗ್ಗಡತಿಯ ಕಣ್ಣಲ್ಲೂ ನೀರೂರಬೇಕೆ ?

ಇವೆಲ್ಲ ಐದು ಹತ್ತು ಮಿನಿಟುಗಳಲ್ಲಿ ನಡೆದು ಹೋದ ವ್ಯಾಪಾರವಷ್ಟೆ. ಹೆಗ್ಗಡತಿಗೆ ವಸ್ತ್ರದ ಗಂಟು ಕಟ್ಟಿಕೊಳ್ಳುವಂತೆ ಹೇಳಿಯೂ ಆಯಿತು. ರಾಮನನ್ನು ಎತ್ತಿ ಹೆಗಲ ಮೇಲೆ ಹೇರಿಕೊಂಡು. ಅಂಗಡಿಯಿಂದ ಹೊರಕ್ಕೆ ನಡೆದೂ ಆಯಿತು. ಆಚೆ ಕಡೆಯಿರುವ ಬತ್ತಾಸು ಅಂಗಡಿಯಲ್ಲಿ ಬೆಂಡು ಅದು ಇದು ಎಂದು ದೊಡ್ಡ ಪೊಟ್ಟಣವೇ ಸಿದ್ಧವಾಯಿತು. ರಾಮನ ಹಾಲು ಮುಖ ಇಷ್ಟಗಲವಾಗದಿರುತ್ತದೆಯೆ? "ನಂಗೆ" ಎಂದು

ಹೆಗಲ ಮೇಲಿಂದಲೇ ಹಿರಿಯನ ಮುಖಕ್ಕೆ ಕೈ ಚಾಚಿದ. "ಇದು ನಿನಗಲ್ಲದೆ ಮತ್ಯಾರಿಗೆ ಮಾಣಿ" ಎನ್ನುತ್ತ ಪೊಟ್ಟಣದ ಒಂದು ಬದಿಯಲ್ಲಿ ತೂತು ಮಾಡಿ ಎರಡೆರಡು ಸೀಬಾರದ ಕಡ್ಡಿಯನ್ನು ಎಳೆದು ಅವನ ಕೈಗೆ ಕೊಟ್ಟ. ಒಂದು ಕಾಲು ಎದೆಯ ಕಡೆ, ಒಂದು ಕಾಲು ಬೆನ್ನ ಕಡೆ ಹಾಕಿ ಹಿರಿಯನ ತಲೆ ಹಿಡಿದುಕೊಂಡು ಹೊರಟ ರಾಮನಿಗೆ ಕುದುರೆ ಸವಾರಿ ಮಾಡುತ್ತಿದ್ದಂತೆ ಅನಿಸದಿರುತ್ತದೆಯೆ? ಹೇಳಿಯೂ ಹೇಳಿದ– "ನೀನು ಕುದುರೆಯಂತೆ ನಾನು ಮೇಲೆ ಕೂತಿದ್ದೇನಂತೆ" ಎಂದು. ಹೈ ಹೈ ಎಂದು ನಡು ನಡುವೆ ಕಾಲಿಂದ ಬೆನ್ನನ್ನು ಎದೆಯನ್ನು ಒದೆಯುತ್ತಲೂ ಇದ್ದಾನೆ. ಸಣಕಲು ಮುದ್ದು ಕಾಲಿನ ಒತ್ತುವಿಕೆ ಹಿರಿಯನಿಗೆ ಹಿತವಾಗಿ ಕಂಡಿತು. ಅಷ್ಟು ದೂರ ಹೋದ ಮೇಲೆ ಹಿರಿಯ ಹೆಗ್ಗಡತಿಗೆ ಏನೋ ಹೇಳಿದ. ಅವಳು "ಆಯಿತು" ಎಂದು ಬೇಗ ಬೇಗ ಮುಂದೆ ನಡೆದಳು. ತನ್ನ ಮನೆ ಇರುವುದು ಆಚೆ ಕಡೆ ಅಲ್ಲವೆ. ಮತ್ತೆ ಹೋಗುತ್ತಿರುವುದು ಎಲ್ಲಿಗೆ? ಎನಿಸಿತು ರಾಮನಿಗೆ. "ಮನೆಗೆ ಹೋಗುವ" ಎಂದ. "ಮನೆಗೇ ಹೋಗುತ್ತಿರುವುದಲ್ಲವೆ?" ಎಂದ ಹಿರಿಯ. ಸಂತೆಮಾಳದ ಸೆರಗಿನಂಚಿಗೆ ಹೋಗಿ ಗಣಪಕಾಯಿ ಮರದಡಿಯಲ್ಲಿ ರಾಮನನ್ನು ಇಳಿಸುವುದಕ್ಕೂ, ಅವನಿದ್ದಲ್ಲಿಗೆ ಜೋಡು ಎತ್ತಿನ ಕಮಾನು ಗಾಡಿ ಬರುವುದಕ್ಕೂ ಒಂದೇ ಆಯಿತು. ಹಿರಿಯ ರಾಮನನ್ನು ಎತ್ತಿ ಗಾಡಿಯ ಹಿಂದಿಂದ ಒಳಕ್ಕೆ ಚಾಚಿದ. ಹೆಗ್ಗಡತಿ ಅವನನ್ನು ಒಳಕ್ಕೆ ಎಳೆದುಕೊಂಡಳು. ರಾಮನಿಗೆ ಈಗ ನಿಜಕ್ಕೂ ಭಾರೀ ಅಳು ಬಂತು. ಹಿರಿಯ ಗಾಡಿ ಹತ್ತಿ "ಬೇಗ" ಎಂದ. ಎತ್ತು ಕೊರಳ ಗಂಟೆ ಝುಣಝುಣಿಸುತ್ತ ಮುಸುರೆ ಹಳ್ಳದ ಮೂಲಕ ಸೀತೂರು ಕಡೆ ಧಾವಿಸಿತು, ಕೆಂಪು ಧೂಳೆಬ್ಬಿಸುತ್ತ.

ಗಾಡಿಯಲ್ಲಿ ಕೂರುವುದು ಖುಷಿಯಾದರೂ ಪರಕೀಯರೊಟ್ಟಿಗೆ ಎಲ್ಲಿಗೆ ಹೋಗುವುದೆಂದು ಎಣಿಸಿಯೇ ರಾಮ ಬಿಕ್ಕಿ ಬಿಕ್ಕಿ ಅತ್ತ, ಅಮ್ಮ, ಅಪ್ಪಯ್ಯ ಎನ್ನುತ್ತ. ಹೆಗ್ಗಡತಿ ತನ್ನ ತೊಡೆಯ ಮೇಲೆ ಅವನನ್ನು ಕೂರಿಸಿಕೊಂಡು "ಅಳುವುದು ಬೇಡ ಒಡೆಯರೆ" ಎಂದು ಸಂತೈಸುತ್ತ, ಪೊಟ್ಟಣದಿಂದ ತಿನಿಸನ್ನು ತೆಗೆದು ಕೊಟ್ಟಳು. ಬತ್ತಾಸು ಕಂಡ ಕೂಡಲೇ ಅವನ, ಅಳು ನಿಂತರೂ, ಬಿಕ್ಕುವುದು ನಿಲ್ಲಲಿಲ್ಲ. ಅವನ ಕೋಟಿನ ಮೇಲೆ ತುಟಿಯ ಬದಿಯಲ್ಲಿ ಕೆಂಪು ನೋಡಿ "ಇದೆಂಥದು" ಎಂದಳು. "ಅಲ್ಲಿ ಪರಬತ್ತು ಕುಡಿದದ್ದು" ಎಂದ ರಾಮ. "ಎಷ್ಟು ಚಂದ ಗೊತ್ತ ಅದು. ನೀನೂ ಕುಡಿದಿದ್ದೀಯಾ" ಎಂದೂ ಕೇಳಿದ. ಅವಳು ನಕ್ಕಳು. ಹಿರಿಯನೂ ನಕ್ಕ. ಗಾಡಿಯ ಓಲಾಟದಿಂದ ಬೆನ್ನಿಗೆ ಕಮಾನು ತಾಕಿ ನೋವಾಯಿತು. ಘಳಿಗೆಯಲ್ಲಿ ಸುಖವೆಲ್ಲ ಮಾಯವಾಗಿ "ನಂಗೆ ಪೆಟ್ಟು ಬಿತ್ತು" ಎಂದು ಬೊಬ್ಬೆ ಹಾಕಿದ. "ಎಲ್ಲಿಗೆ ಹೋಗುತ್ತಿರುವುದು" ಎಂದು ಕೇಳಿದ. "ನಮ್ಮ ಮನೆ ಇಲ್ಲಿ ಅಲ್ಲ" ಎಂದೂ ಹೇಳಿದ. "ನಿಮ್ಮ ಮನೆಗೇ ಹೋಗುತ್ತಿರುವುದು ಒಡೆಯರೆ. ಇವರು ಯಾರು ಗೊತ್ತುಂಟಲ್ಲ ನಿಮ್ಮ ಅಪ್ಪಯ್ಯ ಅಲ್ಲವ" ಎಂದಳು. ಹಿರಿಯನ ಮುಖ ನೋಡಿದ ರಾಮ. "ಇದು ನನ್ನ ಅಪ್ಪಯ್ಯ ಅಲ್ಲವೇ ಅಲ್ಲ" ಎಂದ ರಾಮ. "ನಾನೇ ನಿನ್ನ ಅಪ್ಪಯ್ಯ" ಎಂದ ಹಿರಿಯ. "ಉಹುಂ ಮನೆಯಲ್ಲುಂಟು ನನ್ನ ಅಪ್ಪಯ್ಯ. ಮನೆಗೆ ಹೋಗೋಣ ಮತ್ತೆ" ಎಂದು ಹಟ ಹಿಡಿದ. "ಅಳುವುದೇಕೆ ಮಾಣಿ, ನಾನೇ ನಿನ್ನ ಅಪ್ಪಯ್ಯ. ಅಲ್ಲಿರುವುದು ನಿನ್ನ ಅಮ್ಮ ಉಂಟಲ್ಲ, ಅವಳ ಅಪ್ಪಯ್ಯ" ಎಂದ ಹಿರಿಯ. ರಾಮನಿಗೆ ಮತ್ತೆ ಗೊಂದಲವಾಯಿತು. "ಮತ್ತೆ ನಂಗೆ ಅಪ್ಪಯ್ಯ ಇಲ್ಲಾಂತೆ. ಅಪ್ಪು ಹೇಳಿದ" ಎಂದ. ಹಿರಿಯ ಹೆಗ್ಗಡತಿಯನ್ನು ಹೆಗ್ಗಡತಿ ಹಿರಿಯನನ್ನು ನೋಡಿದರು. "ಅವನಿಗೆ ಹೊಡೆಯುವ ಸುಮ್ಮನಿರು." ರಾಮನಿಗೆ [illegible]ಯಾಯಿತು.

ಹೆಗ್ಗಡತಿ ಹಿರಿಯ ಏನೇನೋ ಮಾತಾಡಿದರು. ನಡು ನಡುವೆ ಪಾರ್ವತಿ, ಮಂಜಯ್ಯ, ಅಜ್ಜಿ ಮುಂತಾದ ಪದಗಳೆಲ್ಲ ಬಂದುದರಿಂದ ಅದು ತನ್ನ ಮನೆಯವರಿಗೇ ಕುರಿತದ್ದು ಎನಿಸಿದರೂ ಒಟ್ಟು ಮಾತಿನ ತಲೆಬುಡ ಅರ್ಥವಾಗುತ್ತದೆಯೇ? ಕಣ್ಣು ಪಿಳಿ ಪಿಳಿ ಬಿಡುತ್ತ ಒಮ್ಮೆ ಹಿರಿಯನ ಕಡೆ, ಮತ್ತೊಮ್ಮೆ ಹೆಗ್ಗಡತಿಯ ಕಡೆ ಹೊರಳಿ ನೋಡುತ್ತಿದ್ದಾನೆ.



ಜೊತೆ ಜೊತೆಯಲ್ಲೇ ತಿನಿಸಿನ ಪೊಟ್ಟಣದ ಕಡೆಯೂ ದೃಷ್ಟಿಬಿಟ್ಟಿದ್ದಾನೆ.

ಹಾಳ್ಗಡಿ ದಾಟಿ ಎಡಕ್ಕೆ ಗಾಡಿ ತಿರುಗಿತು. ಗಾಡಿಯ ಜೋರಾಟದಿಂದ ರಾಮನಿಗೆ ನಿದ್ದೆಯೂ ಬಂತು. ಹೆಗ್ಗಡತಿಯ ತೊಡೆಯ ಮೇಲೆ ಮಲಗಿದ. ಬತ್ತಾಸಿನ ತುಣುಕು ಬಾಯಿಯಲ್ಲೇ ಇದ್ದಿತಾದ್ದರಿಂದ ಒಂದು ಬದಿಯಿಂದ ಜೊಲ್ಲು ಲೋಳಿ ಲೋಳಿಯಾಗಿ ಹರಿಯಿತು. ಅವನಿಗೆ ಎಚ್ಚರವಾದೀತೆಂಬ ಹೆದರಿಕೆಯಿಂದ ಹೆಗ್ಗಡತಿ ಅದನ್ನು ಒರೆಸದೇ ಬಿಟ್ಟಳು. ಜೊಲ್ಲು ತುಟಿಯಿಂದ ಹರಿದು ಅವಳ ಸೀರೆ ತೇವವಾಯಿತು. "ಎಷ್ಟು ಚೆಂದದ ಮಗು ಒಡೆಯರೇ" ಎಂದಳು ಹಿರಿಯನಿಗೆ–ರಾಮನ ತಲೆಯನ್ನು ನೇವರಿಸುತ್ತ. ಬಂಡಿ ಹಾಗೊಮ್ಮೆ ಹೀಗೊಮ್ಮೆ ಜೋಲಾಡುತ್ತ ಹೋಗುತ್ತಿದ್ದರೆ ಎತ್ತುಗಳ ಕೊರಳ ಮಣಿಗಳು ಗಿಲಿಕಿಯಾಡಿಸುತ್ತಿವೆ.

ಗಾಡಿಯೊಮ್ಮೆ ದಪ್ಪ ಕಲ್ಲೊಂದರ ಮೇಲೆ ಏರಿ ಇಳಿದಿದ್ದರಿಂದ ರಾಮನಿಗೆ ಎಚ್ಚರಿಸಿದಂತಾಯಿತು. ತಟಕ್ಕನೆ ಕಣ್ಣು ಬಿಟ್ಟು ಅಮ್ಮ ಎಂದು ಚೀರಿ ಹೆಗ್ಗಡತಿಯ ಮುಖ ನೋಡಿದ. ಹಿರಿಯನ ಮುಖ ನೋಡಿದ. ಯಾವುದೋ ಹೊಸ ಲೋಕದಲ್ಲಿರುವಂತೆನಿಸಿ "ಅಮ್ಮ ಎಲ್ಲಿ ಅಮ್ಮ" ಎಂದು ಅತ್ತ. ಅವನಿಗೆ ಮತ್ತಷ್ಟು ತಿನಿಸು ಕೊಟ್ಟು ಅಳು ನಿಲ್ಲಿಸಬೇಕಾದರೆ ಇಬ್ಬರಿಗೂ ಸಾಕುಸಾಕಾಯಿತು. "ನನಗೆ ಭಯವಾಗುತ್ತದೆ

ಒಡೆಯರೆ" ಎಂದಳು ಹೆಗ್ಗಡತಿ ಹಿರಿಯನನ್ನು ಕುರಿತು.

ರಾಮನಿಗೆ ಎಚ್ಚರವಾದ ಮೇಲೆ ಒಂದೋ ಎರಡೋ ಫರ್ಲಾಂಗು ಹೋಗಿರಬಹುದು. ಗಾಡಿ. ಹಿಂದಿಂದ ಪಾಂ ಪಾಂ ಎನ್ನುತ್ತ ಮೋಟಾರು ಕಾರೊಂದು ಬಂತು. ರಾಮ ಅದನ್ನೇ ನೋಡುತ್ತಿದ್ದಾನೆ. ಮೋಟಾರು ಬಂಡಿಯನ್ನು ಹಾಯ್ದು ರಸ್ತೆಗೆ ಅಡ್ಡವಾಗಿ ನಿಂತಿತು. ಗಾಡಿಯವ ಹಗ್ಗವನ್ನು ಬಲವಾಗಿ ಎಳೆದ. ಎತ್ತುಗಳು ನಿಂತವು ಬುಸ್ ಬುಸ್ ಉಸಿರಾಡುತ್ತ. ಕೊರಳಿನ ಘಂಟೆಗಳು ಕೊಣ ಕೊಣ ಎಂದುವು. ರಾಮನಿಗೆ ಅಜ್ಜನ ಮೋರೆ ಕಂಡಿತು. ಚಂಗನೆ ಎದ್ದು ನಿಂತು, "ಅಪ್ಪಯ್ಯ ನಾನು ಇಲ್ಲೀ" ಎಂದು ಕೂಗಿದ ಜಂಭದಿಂದ. "ಏನು ಮಾಡುತ್ತೀರಿ ಒಡೆಯರೆ ಈಗ?" ಎಂದಳು ಹೆಗ್ಗಡತಿ. ಹಿರಿಯನಿಗೆ ಈ ಸಮಯದಲ್ಲಿ ಕೋಪ ಬಾರದಿರುತ್ತದೆಯೇ? "ನಿನ್ನ ಬಾಯಿ ಒಮ್ಮೆ ಮುಚ್ಚಲಿ ಮಹರಾಯಗಿತ್ತಿ" ಎಂದು ಕೆರಳಿ ಅಲ್ಲಾಡದೇ ಕೂತ. ರಾಮ "ನಾನು ಇಳಿಯುತ್ತೇನೆ" ಎಂದು ಗಾಡಿಯ ತುದಿಗೆ ಓಡಿದ. ಹೆಗ್ಗಡತಿ ಎಳೆದುಕೊಂಡಳು ಅವನನ್ನು.

ಮಂಜಯ್ಯ, ಸೀತಾರಾಮ, ಅಂಗಡಿಯ ಸದಾನಂದಭಟ್ಟರು, ಮೋಟಾರಿನ ಒಡೆಯ ಶೀನಪ್ಪ, ಭಟ್ಟರ ಆಳು ಶಂಭು, ಎಲ್ಲ ಪರಿಚಯದ ಮುಖಗಳು. ರಾಮನಿಗೆ ಖುಷಿಯೋ ಖುಷಿ. "ಅಪ್ಪಯ್ಯ ನಾನು ಇಲ್ಲಿದೀನಿ" ಎಂದು ಕೂಗಿದ ಬತ್ತಾಸು ಕಚ್ಚುತ್ತ.

"ಇಳಿಸು ಅವನನ್ನು" ಎಂದು ಘರ್ಜಿಸಿದರು ಮಂಜಯ್ಯ.

"ಅದು ಎಷ್ಟಕ್ಕೂ ಆಗದು" ಗಾಡಿಯೊಳಗಿಂದಲೇ ಉತ್ತರಿಸಿದ ಹಿರಿಯ.

"ಅಬ್ಬಾ ನಿನ್ನ ಸೊಕ್ಕೇ! ನಿನ್ನ ಕೊರಳು ಕಿಂಪ್ಪಿಯೇನು ತಿಳಿಯಿತಾ. ಇಳಿಸು ಅವನನ್ನು ಮೊದಲು!"

"ನೋಡುವ—ಹೇಗೆ ಅವನನ್ನು ಕೊಂಡೊಯ್ಯುತ್ತೀರೆಂದು" ಎಂದವನೇ ಹಿರಿಯ ಗಾಡಿಯಿಂದ ಟಮ್ಮ ಕೆಳಕ್ಕೆ ನೆಗೆದ.

"ಏನು ನನ್ನನ್ನು ಹೊಡೆಯಲು ಬರುತ್ತೀಯಾ? ನನ್ನನ್ನು ಮುಟ್ಟಿದ್ದೇ ಆದರೆ ನಿನ್ನ ಹೆಣ ಇಲ್ಲಿ ಬೀಳುವುದೇ ಸಮ" ಎಂದರು ಮಂಜಯ್ಯ.

ಇಬ್ಬರೂ ಒಬ್ಬರಿಗೊಬ್ಬರು ಇದಿರಾದರು. ಸದಾನಂದಭಟ್ಟರು ಕೂಡಲೇ ಇಬ್ಬರ ನಡುವೆ ನಿಂತರು.

"ಅಪ್ಪಯ್ಯ ನಾನು ಬರುವೆ" ಎಂದು ರಾಮ ಹೆಗ್ಗಡತಿಯ ಹಿಡಿತದಿಂದ ಬಿಡಿಸಿಕೊಳ್ಳಲೆತ್ನಿಸಿದ. ಅವಳಿಗೆ ಏನು ಮಾಡಬೇಕೆಂದು ತೋಚಿದ್ದರಲ್ಲವೆ. ಕಂಡ ಕಂಡ ದೈವಗಳನ್ನು ಸ್ಮರಿಸುತ್ತ ಅವನನ್ನು ಗಟ್ಟಿಯಾಗಿ ಹಿಡಿದುಕೊಂಡಳು. ರಾಮ ಮಿಲಿ ಮಿಲಿ ಒದ್ದಾಡಿದ. "ಬಿಡು, ನಂಗೆ ಬಿಡು. ನಾನು ಹೋಗುತ್ತೇನೆ" ಎಂದು ಕೂಗಿದ. ಅವಳು ಸಮಾಧಾನ ಮಾಡಲೆತ್ನಿಸುತ್ತಿದ್ದಾಳೆ. ಪೊಟ್ಟಣದಿಂದ ಎರಡೆರಡು ನಮೂನೆ ತಿನಿಸು ಅವನ ಮೂತಿಗೆ ಒತ್ತಿದ್ದಾಳೆ. ಅವನು ಅದನ್ನು ಕಿತ್ತುಕೊಂಡಿದ್ದೂ ಆಯಿತು. ಬಿಡು ನಾನು ಹೋಗುವೆ ಎನ್ನುವ ರಾಗ ಮಾತ್ರ ನಿಲ್ಲಲಿಲ್ಲ.

"ರಸ್ತೆಯಲ್ಲಿ ನಿಂತು ನಿಮ್ಮ ಪಂಚಾಯತಿ ಬೇಡ. ಹೇಳಿ ಕೇಳಿ ನಿಮ್ಮ ಮಾವ ಅಲ್ಲವೆ ಅವರು. ನಿನಗೆ ಹೇಳುತ್ತಿರುವುದು ಶಿವರಾಮ" ಎಂದರು ಸದಾನಂದಭಟ್ಟರು.

"ಯಾರು? ಇವರೇ ನನ್ನ ಮಾವ? ಛೆ!" ಎನ್ನುತ್ತ ಹಲ್ಲು ಮುಡಿಕಚ್ಚಿದ ಶಿವರಾಮ. "ಇವರು ಆ ಬೇವರ್ಸಿ ಪಾರ್ವತಿಯ ಅಪ್ಪ. ಅದಕ್ಕೆಂದೇ ಅಲ್ಲವೆ ಅವಳನ್ನು ಇಟ್ಟುಕೊಂಡದ್ದು ಮನೆಯಲ್ಲಿ. ಆಯಿತು ಅವಳು ನಿಮ್ಮ ಮಗಳಷ್ಟೆ. ಇವನು ನನ್ನ ಮಗ. ಅವನ ಮೇಲೆ ನಿಮಗೇನು ಹಕ್ಕು ಉಂಟು? ನನ್ನ ನೆತ್ತರು ಚೆಲ್ಲಿಯಾದರೂ ಸರಿಯೇ, ಅವನು ಹೇಗೆ ನಿಮ್ಮೊಟ್ಟಿಗೆ ಹೋಗುವನು ನೋಡುವೆ."

ರಾಮನಿಗೆ ಈ ಹಿರಿಯರ ಕದನದ ತುದಿಬುಡ ಅರ್ಥವಾಗಲಿಲ್ಲ. ಕಿಸೆಯಲ್ಲಿ ಬುಗುರಿ ಪಿಂಸೆ ಕೊಟ್ಟದ್ದರಿಂದ ಅದನ್ನು ತೆಗೆಯಲು ಕೈ ಹಾಕಿದ. ಪೀಪಿ ಕೈಗೆ ಸಿಕ್ಕಿತು. ಮುಖವರಳಿತು. "ಇಲ್ಲಿ ನೋಡು ಪೀಪೀ. ನಂದು ಇದು ಗೊತ್ತುಂಟೆ" ಎನ್ನುತ್ತ ಹೆಗ್ಗಡತಿಯ ಮೂತಿಗೆ ಚಾಚಿದ. ಊದು ಎಂದು ಬಲವಂತ ಮಾಡಿದ ಹೆದರಿಕೆಯಲ್ಲಿಯೂ ನಗು ಬಾರದಿರುತ್ತದೆಯೇ

ಅವಳಿಗೆ. "ನನ್ನಿಂದಾಗದು. ನೀವೇ ಊದಿಯಪ್ಪ" ಅಂದಳು. "ಅಯ್ಯೋ. ನಿಂಗೆ ಬರುವುದಿಲ್ಲ. ನೋಡು ನಾನು ಊದುತ್ತೇನೆ" ಎನ್ನುತ್ತ ಕೊರಳಿನ ನರ ಉಬ್ಬಿಸಿ, ಕೆನ್ನೆ ಉಬ್ಬಿಸಿ ಗಟ್ಟಿಯಾಗಿ ಊದಿದ. ಪೀ ಪೀ ಪೀ ಎಂದು ಹಾಗೆ ಮಾಡುವಾಗಲೇ ಜಿಂಕೆಯ ಹಿಂಡೊಂದು ಗುಡ್ಡ ಇಳಿದು ರಸ್ತೆಯ ಮೇಲೆ ಕಿವಿ ನೇರ ಮಾಡಿಕೊಂಡು ಶಿಲೆಯಂತೆ ನಿಂತು ರಾಮನ ಗಮನ ಸೆಳೆದವು. "ಅಯ್ಯೋ ಅಲ್ಲಿ ನೋಡು, ಅಲ್ಲಿ ನೋಡು" ಎನ್ನುತ್ತ ಹೆಗ್ಗಡತಿಯ ಮೂತಿ ತಿವಿದು ತೋರಿಸಿದ. ಒಂದೇ ಒಂದು ಮಿನಿಟು. ಮರುಗಳಿಗೆಯಲ್ಲಿ ಅವು ಮಾಯವಾದುವು. ಆಚೆ ಬದಿಯ ಇಳಿಜಾರಿನ ಬಿದಿರು ಕಾಡಿನೊಳಕ್ಕೆ ಹೊಕ್ಕುವು. "ಜಿಂಕೆ ನಿಮ್ಮಲ್ಲುಂಟ?" ಎಂದ. ಅವಳ ಎದೆಯಲ್ಲಿ ಅವಲಕ್ಕಿ ಕುಟ್ಟುತ್ತಿರುವಾಗ ಅವನ ಮುಗ್ಧ ಪ್ರಶ್ನೆಗಳಿಗೆ ಏನುತ್ತರ ಕೊಟ್ಟಾಳು.

ಒಮ್ಮೆ ಸ್ವರವೇರಿಸಿ ಬೊಬ್ಬೆಯಿಟ್ಟ ಶಿವರಾಮು "ನನ್ನ ಹೆಣ ಇಲ್ಲಿ ಬಿದ್ದ ನಂತರವೇ ಅವನನ್ನು ಕೊಂಡೊಯ್ಯುವುದು ನೀವು." ಮತ್ತೆ ಸದಾನಂದ ಭಟ್ಟರು, ಶೀನಪ್ಪ ಎಲ್ಲ ಮುಂದಾದರು. ಮಂಜಯ್ಯ ದಡಬಡ ಗಾಡಿಯ ಹಿಂದಕ್ಕೆ ಬಂದರು. "ಅವನನ್ನು ಇಲ್ಲಿ ಕೊಡು ಇವಳೆ" ಎಂದರು ಅಧಿಕಾರವಾಣಿಯಿಂದ. "ನೀನು ಕೊಟ್ಟಿದ್ದೇ ಆದರೆ ನಿನ್ನ ಹೆಣ ಬಿದ್ದೀತು, ತಿಳಿಯಿತಾ" ಎಂದ ಶಿವರಾಮು. ಪಾಪದ ಹೆಂಗಸು ಮಾಡುವುದಾದರೂ ಏನು ಈ ಗೊಂದಲದ ನಡುವೆ? ರಾಮ ಚಂಗನೆ ಹಾರಿದ. ಅವಳು ಸರಕ್ಕನೆ ತಿರುಗಿ ಅವನ ಕೈ ಹಿಡಿದಳು. ಕೆಳಗಿಂದ ಮಂಜಯ್ಯ ಅವನ ಮತ್ತೊಂದು ರಟ್ಟೆ ಹಿಡಿದು ಜಗ್ಗಿಸಿದರು. ಈಗ ನಿಜಕ್ಕೂ ರಾಮನಿಗೆ ನೋವಾಯಿತು. "ಅಪ್ಪಯ್ಯೋ ನೋವಾಗುತ್ತೆ" ಎಂದು ಅತ್ತ. ಶಿವರಾಮು ಓಡಿ ಬಂದು ಮಾವನ ಕೈ ಹಿಡಿದು ಎಳೆದ. ಮಿಕ್ಕವರೂ ಓಡಿ ಬಂದರು. ಯಾರು ಇಳಿಸಿದರೋ ಏನು ಆಯಿತೋ ಒಂದೂ ಅರ್ಥವಾಗಲಿಲ್ಲ ರಾಮನಿಗೆ. ಅಂತೂ ಅವನು ನೆಲದಲ್ಲಿ ಹಿರಿಯರ ಕಾಲು ಸಂದಿಯಲ್ಲಿ ಸಿಕ್ಕಿ ಹಾಕಿಕೊಂಡ. ತಲೆ ಎತ್ತಿ ನೋಡಿದರೆ ಘೋರ ಘೋರ ತೊಡೆಗಳು, ಗಲ್ಲಗಳು–ಕಾಣುತ್ತಿವೆ ಅವನಿಗೆ. ಅಮ್ಮ ಹೇಳುತ್ತಿದ್ದ ರಾಕ್ಷಸರ ತುಣುಕು ತುಣುಕಾಗಿ ಹೆದರಿಸಿದವು. ಅಮ್ಮ ಅಮ್ಮ ಎಂದು ನರಳಿದ. ಅಪ್ಪಯ್ಯ ಎಂದು ನಡುಗಿದ. ಶಂಭು ಅವನನ್ನು ಹೊರಕ್ಕೆಳೆದು ದೂರ ಕೊಂಡೊಯ್ದು ಸಂತೈಸಲೆತ್ನಿಸುತ್ತಿದ್ದಾನೆ. ರಾಮ ನಿಜಕ್ಕೂ ಗಡ ಗಡ ನಡುಗುತ್ತಿದ್ದಾನೆ. ಅವರು ಯಾಕೆ ಹಾಗೆ ಮಾಡುತ್ತಿದ್ದಾರೆ ಎಂದು ಕೇಳುತ್ತಿದ್ದಾನೆ.

ಹತ್ತಾರು ಮಿನಿಟುಗಳೇ ಸಂದಿರಬಹುದು. ಮಂಜಯ್ಯ ಬಂದವರೇ ಶಂಭುವಿನ ಹೆಗಲಿಂದ ರಾಮನನ್ನು ಕಸಿದುಕೊಂಡು ನೇರ ಮೋಟಾರಿನತ್ತ ಸಾಗಿದರು. ಅವನನ್ನು ಒಳಕ್ಕೆ ಹೊತ್ತು ಹಾಕಿದರು. ಗಾಡಿಯ ಪಕ್ಕದಿಂದ ಶಿವರಾಮು ಏನೇನೋ ಕೂಗಾಡಿದ. ಸ್ಥಾನ ಪಲ್ಲಟದಿಂದ ರಾಮ ಗಾಬರಿಗೊಂಡ.

ಮೋಟಾರಿನಲ್ಲಿ ಎಲ್ಲರೂ ಕೂತರು. ಮೋಟಾರು ಮರಳಿ ಊರಿನ ಕಡೆ ಹೊರಟಿತು. ಮೋಟಾರುಕಾರಿನ ಮೆತ್ತನೆಯ ದಿಂಬು ಗಾಡಿಯ ಹುಲ್ಲಿನ ಹಾಸಿಗೆಗಿಂತ ಹಿತವಾಗಿ ಕಂಡಿತು ರಾಮನಿಗೆ. ರಾಮ ಹಿಂದುಗಡೆ ಗಾಜಿಂದ ನೋಡಿದ. ಗಾಡಿ, ಹೆಂಗಸು, ಹಿರಿಯ ಎಲ್ಲ ದೂರ ದೂರವಾದರು. ಸಣ್ಣ ಸಣ್ಣಗಾದರು, ಒಂದು ತಿರುವಿನಲ್ಲಿ, ಎಲ್ಲರೂ ಮಾಯವಾದರು. ಗಾಡಿ ಮರೆಯಾದ ಕೂಡಲೇ ರಾಮನಿಗೆ ಬತ್ತಾಸು ಬೆಂಡಿನ ಪೊಟ್ಟಣ ನೆನಪಿಗೆ ಬರುವುದೇ? "ಅಯ್ಯೋ ಅಲ್ಲಿ ಬತ್ತಾಸು ಉಂಟು" ಎಂದ. "ಸುಮ್ಮನೆ ಕೂರು ಒಮ್ಮೆ" ಎಂದರು ಅಜ್ಜ. "ಸಂತೆಯಲ್ಲಿ ಕೊಡಿಸುತ್ತೀಯಾ?" ಎಂದು ಕೇಳಿದ. "ಆಯಿತಪ್ಪ ನೀನು ಜಾಣ. ಸುಮ್ಮನಿರು." ಎಂದರು ಸದಾನಂದಭಟ್ಟರು. "ನಾವು ಹೋಗುವುದೆಲ್ಲಿಗೆ?" ಎಂದು ಕೇಳಿದ. "ಮನೆಗೆ" ಎಂದು ಉತ್ತರ ಬಂದಿತು, ಯಾರಿಂದಲೋ. "ಅಪ್ಪಯ್ಯ, ಅಪ್ಪಯ್ಯ, ಅವರ ಮನೆಯಲ್ಲಿ ಜಿಂಕೆಯುಂಟಂತೆ. ಅಪ್ಪಯ್ಯ ನಂಗೂ ಕೊಡಿಸುತ್ತೀಯಾ?" ಎಂದು ಕೇಳಿದ ಅವರ ಗಲ್ಲ ಹಿಡಿದು. "ಸುಮ್ಮನೆ ಕೂರು ಮಾಣಿ" ಎಂದರು ಮಂಜಯ್ಯ ಸಿಟ್ಟಿನಿಂದ. ಸಪ್ಪೆಯಾದ ರಾಮ "ಗಾಡಿಗಿಂತ ಇದೇ ಚೆಂದವಪ್ಪ" ಎಂದ. ಇನ್ನೂ ಏನೇನೋ ಹೇಳಿದ.

ಯಾರ ಮನಸ್ಸಿಗೆ ಶಾಂತಿಯುಂಟು ಅವನ ಮಾತು ಕೇಳಲು?"

"ಹೌದ ಮಂಜಯ್ಯ, ಈಗೊಮ್ಮೆಯೇನೋ ಗೆದ್ದುದಾಯಿತು ನೀನು, ಮುಂದೇನು?" ಎಂದರು ಸದಾನಂದಭಟ್ಟರು. ಬೆಳಗ್ಗಿನಿಂದ ನಡೆದ ಘಟನೆಗಳು, ಅದರ ಬೆನ್ನಿಗೇ ಹಿಂದೆ ನಡೆದದ್ದು, ಮುಂದೆ ನಡೆಯಬಹುದಾದ್ದು, ಈ ಯಾವತ್ತೂ ಸಂಗತಿಗಳು ಮಂಜಯ್ಯನನ್ನು ಒಂದೇ ಮಿನಿಟಿನಲ್ಲಿ ಕುಗ್ಗಿಸಿಬಿಟ್ಟವೆ. ಜೊತೆಯಲ್ಲಿ "ಲಗ್ನ ಮಾಡಿಕೊಟ್ಟ ಮಗಳನ್ನು ಮನೆಯಲ್ಲಿ ಇರಿಸಿಕೊಂಡಿರುವುದು ನಿಮಗೆ ಚಂದವಾಗಿ ಕಾಣುತ್ತಿದೆಯಲ್ಲವೆ ? " ಎಂದು ಚುಚ್ಚಿ ಮಾತಾಡಿದ್ದು ನೆನಪಾಗಿ "ಮೂರು ಕಾಸಿನ ಹೆಂಗಸು ನನಗನ್ನುವಂತೆ ಆಯಿತಲ್ಲವೆ ? ಅಬ್ಬ ಆ ಹೆಣ್ಣಿನ ಸೊಕ್ಕೆ?!" ಎಂದರು. ಅಪ್ಪಯ್ಯ ಅಪ್ಪಯ್ಯ ಎಂದು ಏನೋ ಹೊಸ ವಿಷಯವೇ ಹೇಳಲು ಹೊರಟ ರಾಮು. ಅವರು ಅದಕ್ಕೆ ಗಮನ ಕೊಟ್ಟರಲ್ಲವೇ ? ಅವನ ಮನಸ್ಸು ಚಂಚಲವಾಗಿ ಓಡಿಯಾಯಿತು. ಪೀಪೀ ನೆನಪಿಗೆ ಬಂತು. ಕಿಸೆಯಿಂದ ಪೀಪಿ ತೆಗೆದು ಜೋರಾಗಿ ಊದಿದ. "ಎಂಥದು ಮಾಣಿ ನಿಂದು ಕರೆಕರೆ" ಎಂದರು ಮಂಜಯ್ಯ. ಅವನು ಪೆಚ್ಚಾದ. ಆದರೆ ಹೇಳಿದ ಮಾತು ಕೇಳುವ ವಯಸ್ಸೇ ? ಸಣ್ಣಗೆ ಊದೇ ಊದಿದ. ಶಿವರಾಮ ತಮ್ಮ ಅಂಗಡಿಗೆ ಬಂದದ್ದು, ರಾಮನನ್ನು ಹೊತ್ತುಕೊಂಡು ಹೋದದ್ದು, ತಾವು ಅವನನ್ನು ಹಿಂಬಾಲಿಸಿದ್ದು ಮೊದಲುಗೊಂಡು ಎಲ್ಲವನ್ನೂ ಹೇಳಿದರು ಸದಾನಂದಭಟ್ಟರು. "ಅಷ್ಟು ಉಪಕಾರ ಮಾಡಿದೆಯಲ್ಲ ಸದಾನಂದ ನೀನು" ಎಂದರು ಮಂಜಯ್ಯ. ಮೋಟಾರು ಸಂತೆಮಾಳವನ್ನೂ ಹಾದು ಹೋದಾಗ ರಾಮು, ಅಪ್ಪಯ್ಯ ಅಪ್ಪಯ್ಯ ಎಂದು ಕುಸು ಕುಸು ಮಾಡಿದ, ಅದು ದಾಟಿತಲ್ಲ ಎಂಬ [illegible].

ಮೋಟಾರು ಪಾಂ ಪಾಂ ಎನ್ನುತ್ತ ಮನೆಯ ಮುಂದೆ ನಿಂತಿತು. ರಾಮು ನೋಡಿದ. ಮುಂದೆ ಜಾತ್ರೆಯೇ ಸೇರಿದೆ. ಎಲ್ಲರೂ ಒಟ್ಟಿಗೆ "ಬಂದರು ಬಂದರು" ಎಂದರು. ಮೋಟಾರಿನಿಂದ ಒಬ್ಬೊಬ್ಬರಾಗಿ ಇಳಿದರು. "ಇಳಿ ಮಾಣಿ" ಎಂದರು ಮಂಜಯ್ಯ. ಅಷ್ಟು ಚೆಂದದ ಮೋಟಾರು ತ್ಯಜಿಸಲು ಮನಸ್ಸು ಬಂದೀತೆ? ಆದರೆ ಅಷ್ಟೊಂದು ಜನ ತನ್ನ ಕಡೆಗೇ ನೋಡುತ್ತಿದ್ದುದರಿಂದ ಹೆಮ್ಮೆಯುಂಟಾಗಿ ಮೆಲ್ಲನೆ ಇಳಿದ. ಗುಂಪೊಡೆದು ಪಾರ್ವತಿ ಓಡಿ ಬಂದು ಅವನನ್ನು ಎತ್ತಿ ಮುದ್ದಾಡಿ ಹಿಸುಕಿ ಅತ್ತಳು. "ಎಲ್ಲಿ ಹೋದದ್ದು ಚಿನ್ನ ನೀನು. ನನ್ನ ಜೀವ ನಿಂತದ್ದೇ ಹೆಚ್ಚಲ್ಲವೆ" ಎನ್ನುತ್ತ. ಅಮ್ಮನನ್ನು ಕಂಡು ಮನಸ್ಸು ಅರಳಿದರೂ ದೇಹಕ್ಕೆ ಅವಳು ಕೊಡುತ್ತಿದ್ದ ಹಿಂಸೆಯಿಂದ ನೋವಾಗಿ "ಬಿಡು ಬಿಡು" ಎಂದು ಮಿಸುಕಾಡಿದ. ತಾಯಿ ಮಕ್ಕಳು ಮುಂದಾಗಿ ಮಿಕ್ಕವರೆಲ್ಲಾ ಹಿಂದಾಗಿ ಮನೆಯೊಳಕ್ಕೆ ಹೋದರು. ಒಳಕೋಣೆಯಿಂದ ಕಲ್ಯಾಣಿ "ಬಂದಿತೆ? ಮಗು ಬಂದಿತೆ? ಅವರು ಬಂದರೆ?" ಎಂದು ಏನೇನೋ ಒದರಿದಳು. ಜನಗಳ ನಡುವೆ ನಿಂತಿದ್ದ ಅಪ್ಪು ರಾಮನನ್ನು ಕೂಗಿದ. ಅವನೊಟ್ಟಿಗೆ ಹೋಗಬೇಕೆನ್ನಿಸಿತು. ಆದರೆ ಪೀಪಿಯ ಪ್ರಕರಣ ನೆನಪಾಗಿ "ಹೇಗೋ ನೀನೊಬ್ಬ" ಎಂದ–ಮುಖ ಕಡುಬು ಮಾಡಿಕೊಂಡು. ತಾಯಿಯ ಸೊಂಟದಿಂದ.

"ಅಪ್ಪಯ್ಯ ಎಲ್ಲಿ ಸಿಕ್ಕಿದ ಇವನು ? ನೀನು ಹೋದದ್ದಾದರೂ ಎಲ್ಲಿಗೆ?" ಎಂದು ಹತ್ತಾರು ಪ್ರಶ್ನೆ ಹಾಕಿದಳು ಪಾರ್ವತಿ.–ಗೋಡೆಗೆ ಒರಗಿ ಕೂರುತ್ತ.

"ಹೋಗಿದ್ದೆ ಸುಡುಗಾಡಿಗೆ" ಎಂದರು ಮಂಜಯ್ಯ ಧೋತರವನ್ನು ಬಿಸುಟು, ತೂಗುಮಂಚದ ಮೇಲೆ ಕೂರುತ್ತ.

ನಿಂತಿದ್ದವರು ಒಬ್ಬೊಬ್ಬರಾಗಿ ತಮ್ಮ ತಮ್ಮ ಕಾರ್ಯಭಾರದ ನೆನಪಾಗಿ ಕಾಲ್ತೆಗೆದರು ಅಲ್ಲಿಂದ. ಉಳಿದವರೆಂದರೆ ಸದಾನಂದಭಟ್ಟರೊಬ್ಬರೇ. ನಡೆದಿದ್ದೆಲ್ಲವನ್ನೂ ಒಂದೆರಡು [illegible] ದರು ಅವರು. ತೊಡೆಯಲ್ಲಿ ಕೌಂಚಿ ಮಲಗಿದ್ದ ಮಗನ ಕಂಗಾಲಾದ ಮುಖವನ್ನು [illegible] ನೋಡಿ "ಅಯ್ಯೋ ಮಗುವೇ?" ಎಂದು ಅತ್ತಳು. ರಾಮನೂ ಬಿಕ್ಕಿದ.

ತಾಯಿ ಮಕ್ಕಳ ಅಳುವು ಸ್ವಲ್ಪ ಕಮ್ಮಿಯಾದಾಗ ಸದಾನಂದಭಟ್ಟರು ಹೇಳಿದರು

"ಒಮ್ಮೆ ಹೀಗೆ ಮಾಡಿದನು. ಮುಂದೆ ಏನೂ ಮಾಡಿಯಾನು ನಿನ್ನ ಅಳಿಯ. ಅದಕ್ಕೆಂದೇ ಹೇಳು ವುದು–ನಿಮ್ಮ ನಿಮ್ಮ ಹಟದಲ್ಲಿ..."ಮಂಜಯ್ಯ ನಡುವೆ ಬಾಯಿ ಹಾಕಿದರು. "ಹೌದು. ಬೇವರ್ಸಿ ಹೆಗ್ಗಡತಿಯೂ ಅದೇ ಮಾತಲ್ಲವೇ ಅಂದದ್ದು? ಈಗ ನೀನೂ ಅದೇ ಧಾಟಿಯಲ್ಲಿ ಮಾತನಾಡುತ್ತಿ. ನಾನು ಮಾಡಬೇಕು ಏನು?–ಅದಾದರೂ ಹೇಳ ಬಹುದಲ್ಲ? ಅವರ ಸ್ವರದಲ್ಲಿ ಬೇಸರಿಕೆಯಿತ್ತು, ಸಿಟ್ಟಿತ್ತು. ಆದರೆ ಅದರಿಂದ ಭಟ್ಟರಿಗೆ ಬೇಸರಿ ಕೆಯೂ ಆಗಲಿಲ್ಲ ಸಿಟ್ಟೂ ಬರಲಿಲ್ಲ. ಬದಲು ಹೇಗೂ ಪಾರ್ವತಿ ಎದುರಿಗೇ ಇದ್ದಾಳೆ. ಮಲ ಗುವ ಕೋಣೆಯಲ್ಲಿ ಅವಳ ತಾಯಿಯೂ ಇದ್ದಾಳೆ. ತನ್ನ ಮಾತು ಅವಳಿಗೂ ಕೇಳಿಸೀತು. ಕೇಳಿಸುವುದೊಳಿತು ಎನಿಸಿ,

"ನಿನ್ನದೇ ತಪ್ಪೆಂದು ನಾನು ಹೇಳಿದ್ದೆ ಮಂ ಜಯ್ಯ? ನಿನ್ನ ಸಂಸಾರದ ಬಗ್ಗೆ ಎಂದೂ ಪಾರ್ವ ತಿಯ ಎದುರು ನಾನು ಮಾತನಾಡಿದವನಲ್ಲ. ಈ ಹೊತ್ತು ಎಲ್ಲ ಅನಿಷ್ಟಗಳೂ ಆಗಿವೆಯಷ್ಟೆ. ಅದರಿಂದಾಗಿ ನಾಲ್ಕು ಮಾತನಾಡುವ ಎಂದು ಎಣಿಸಿದೆ. ಪಾರ್ವತಿ ನನ್ನನ್ನು ತಪ್ಪು ಎಣಿಸ ಲಾರಳು. ಎಷ್ಟೆಂದರೂ ನಾನು ಎತ್ತಿ ಆಡಿ ಸಿದ ಕೂಸಲ್ಲವೇ ಅವಳು. ನಿಜ ಹೇಳಬೇಕೆಂದರೆ ಅವಳ ಲಗ್ನದ ನಂತರ ಅವಳನ್ನು ಸಮನಾಗಿ ನೋಡಿದ್ದೆಂದರೆ ಇಂದೇ ಅಲ್ಲವೇ? ಎಷ್ಟು ಘೋರ ಇದ್ದವಳು ಹೀಗೆ ಆಗಿದ್ದಾಳಲ್ಲ ಎಂದು ನನಗೆ ನಿಜಕ್ಕೂ ನೋವಾಗುತ್ತಿದೆ ನೋಡು" ಎನ್ನುವಾಗ ನಿಜಕ್ಕೂ ಪಾರ್ವತಿ ಬಿಕ್ಕಿ ಬಿಕ್ಕಿ ಅತ್ತಳು "ನನ್ನ ಕರ್ಮ, ನನ್ನ ಕರ್ಮ" ಎಂದು. ಯಾಕಮ್ಮ ಎನ್ನುತ್ತ ಗಾಬರಿಯಿಂದ ರಾಮನೂ ಅತ್ತ.

"ಬಾ ಮಗು–ಒಮ್ಮೆ ನೋಡುತ್ತೇನೆ ನಿನ್ನನ್ನು" ಎಂದು ಒಳಗಿಂದ ಅಜ್ಜಿ ಕೂಗುತ್ತಲೇ ಇದ್ದಾಳೆ. ಆದರೆ ರಾಮನಿಗೆ ಈಗ ಆ ಕತ್ತಲು ಕೋಣೆ ಯೆಂದರೆ ಏಕೋ ಹೆದರಿಕೆಯಾಗಿ "ಉಹು" ಎನ್ನುತ್ತ ತಾಯಿಯ ತೊಡೆಯ ಮೇಲೆ ಗಟ್ಟಿ ಯಾಗಿ ಕೂತಿದ್ದಾನೆ.

ಸದಾನಂದಭಟ್ಟರು ತಮ್ಮ ಮಾತಿನ ಸರಣಿ ಯನ್ನು ಬಿಡದೆ ಹೇಳಿದರು. "ಅಲ್ಲ, ಮಂಜಯ್ಯ ನಿನ್ನ ಈ ಮನೆಯಲ್ಲಿ ಯಾರು ಸುಖಿಗಳಾಗಿ ದ್ದಾರೆ ಇವತ್ತು. ಹೇಳು ನೋಡುವ. ನಿನ್ನ ಹೆಂಡತಿ ಹಾಸಿಗೆ ಹಿಡಿದವಳು. ಇನ್ನು ಪಾರ್ವ ತಿಯ ಗತಿ ಹೀಗೆ. ಇವೆಲ್ಲ ನೋಡುತ್ತ ನಿನ್ನ ಮನಸ್ಸು ಏನು ಮರವೇ, ಖುಷಿಪಡಲು? ಬೇಡ, ನಮ್ಮಗಳ ಮಾತೇ ಬೇಡ. ನನಗೂ ನಿನಗೂ ತ್ರಾಣ ಬರುತ್ತಿಲ್ಲವಷ್ಟೆ. ಯಮ ರಾಯ ಬಾ ಎಂದಾಗ ನಾವು ಹೊರಡಲು ಸಿದ್ಧರಾಗಬೇಕಷ್ಟೆ. ನಂತರದ ಮಾತು ಯೋಚಿಸು. ಪಾರ್ವತಿಯ ಗತಿ ಏನಾದೀತು? ಈ ರಾಮನ ಭವಿಷ್ಯವೇನಾದೀತು? ನಾಳೆ ಅವನು ದೊಡ್ಡ ವನಾಗುತ್ತಿದ್ದ ಹಾಗೆ ನಿಮಗೆಲ್ಲ ಅವನ ತಾಯಿಗೂ ಶಪಿಸಬಾರದಷ್ಟೇ?" ಅವರು ರಾಮನ ಕಡೆಗೆ ಬೆರಳು ಮಾಡಿ ಈ ಮಾತೆಲ್ಲ ಆಡುವಾಗ ಅವನಿಗೆ ತನ್ನನ್ನೇ ಕುರಿತು ಅವರೆಲ್ಲ ಏನೋ ಮಾತಾಡುತ್ತಿದ್ದಾರೆನಿಸಿ ಗಂಭೀರವಾಗಿ ಭಟ್ಟರಿಂದ ಅಜ್ಜಯ್ಯ, ಅಜ್ಜ ನಿಂದ ಅಮ್ಮನ ಕಡೆ ದೃಷ್ಟಿ ಹೊರಳಿಸುತ್ತಿ ದ್ದಾನೆ.

ಒಳಗಿಂದ ರಾಮನ ಅಜ್ಜಿ ಗೂರಲು ಸ್ವರ ದಲ್ಲೇ ನಡುವೆ ಬಾಯಿ ಹಾಕಿ "ಯಾರದು– ಸದಾನಂದನೆ? ಸ್ವರ ಕೇಳಿ ಹಾಗೆಯೇ ಎಣಿ ಸಿದೆ. ಹೌದಾ, ಸದಾನಂದ–ನಿನ್ನ ತಮ್ಮ ವೆಂಕ ಟೇಶನ ಮಗಳು ಆ ಹೋಟಲಿನ ಮಾಣಿ ಯೊಟ್ಟಿಗೆ ಘಟ್ಟದ ಕೆಳಕ್ಕೆ ಓಡಿ ಹೋದಳೆಂದು ಸುದ್ದಿ. ನಿಜವಾ?" ಎನ್ನಬೇಕೆ?

ಅಮ್ಮ ಹೇಳಿದ್ದು ಸಮಾ ಆಯಿತು ಎಂದು ಸಂತೋಷವಾಗಿ ಹಲ್ಲು ಕಡಿದಳು ಪಾರ್ವತಿ.

ಮಂಜಯ್ಯನ ತಲೆ ಬಿಸಿಯಾಯಿತು. "ನೀನು ಸುಮ್ಮನೆ ಬಿದ್ದಿರಬಾರದೆ ಅಲ್ಲಿ. ನಿನ್ನ ಮಾತು ಕೇಳಿ ಕೇಳಿಯೇ ನಾನು ಸೋತದ್ದು" ಎಂದರು.

"ನನ್ನ ಮಾತು ಕೇಳಿ ಆದದ್ದಾದರೂ ಏನು?" ಎಂದಳು ಕಲ್ಯಾಣಿ ಒಳಗಿಂದ ಸಿಟ್ಟಿನಲ್ಲಿ.

"ನಾಲಿಗೆ ಸಡಿಲ ಬಿಡಬೇಡ. –ತಿಳಿಯಿತಾ?" ಎಂದು ಅಬ್ಬರಿಸಿದರು ಮಂಜಯ್ಯ.

"ಏ ಅಜ್ಜಿ, ಸುಮ್ಮನಿರು ಓಹೋ" ಎಂದ ರಾಮು–ದೊಡ್ಡ ಗಂಡಸಿನ ಹಾಗೆ ನಟಿಸುತ್ತ, ತಾಯಿಯ ಮುಖ ನೋಡಿ ನಗುತ್ತ.

ಅದೆ ಬಳಗಿಂದ ಇನ್ನೇನೋ ಅಂದಳು. ಮಂಜಮ್ಮ ಹೌಹಾರಿದರು. ಅವರಿಬ್ಬರೂ ಹೀಗೆ ಕಚ್ಚಾಡುವಾಗ ತಾಯಿಯಷ್ಟೇ ಆಸರೆ ರಾಮುವಿಗೆ ಏಕೋ ಹೆದರಿಕೆಯಾಗಿ ಮತ್ತಷ್ಟು ಮೈ ಮುದುಡಿಕೊಂಡು ಕೂತ ತಾಯಿಯ ತೊಡೆಯಲ್ಲಿ. ಕಿಸೆಯಲ್ಲಿ ಇನ್ನೂ ಉಳಿದಿದ್ದ ಬೆಂಡು ತೊಡೆಗೆ ಒತ್ತಿದ್ದಾಗ. ಅದರ ನೆನಪು ಬಂದು ದಡಕ್ಕ ಎದ್ದು ಕಿಸೆಯಿಂದ ಅದನ್ನು ತೆಗೆದು "ಅಮ್ಮ. ನೋಡು ಇಲ್ಲಿ. ಯಾರು ಕೊಡಿಸಿದ್ದು ಗೊತ್ತುಂಟ?" ಎನ್ನುತ್ತ ಅವಳಿಗೆ ತೋರಿಸಿದ. "ನಿಂಗೆ ಬೇಕಾ?" ಎಂದು ಕೇಳಿದ. ಸೇಳೆಯಿಂದ ಅವಳ ಬಾಯಿಗೆ ಬೇಡ ಬೇಡವೆಂದರೂ ಚೂರು ಬೆಂಡನ್ನು ತುರುಕಿದ. "ಎಂಥದೋ ಒಂದು ಹಾಳು ಪಿರಿಪಿರಿ" ಎನ್ನುತ್ತ ಅವಳು ಅದನ್ನು ನುಂಗಿದಳು ವಿಧಿಯಿಲ್ಲದೆ.

ಮಂಜಮ್ಮ ಗುಡುಗಿದರು. "ಇದೋ ನೋಡು ಸದಾನಂದ. ನನಗೆ ಇವೆಲ್ಲ ಇಷ್ಟವೆಂದು ತಿಳಿದೆಯಾ? ಇವೆಲ್ಲ ಗೊತ್ತಿಲ್ಲವೆಂದು ತಿಳಿದೆಯಾ? ಈ ಇವಳು ಬೇಪರ್ವಿ. ಲಗ್ನವಾದ ಮೂರೇ ಮೂರು ದಿನಕ್ಕೆ ನನ್ನಿಂದಾಗದು ಎಂದು ಅವನ ಮನೆಯಿಂದ ಓಡಿ ಬಂದವಳಲ್ಲವೆ? ನಾನು ಸಾವಿರ ಸರ್ತಿ ಹೇಳಿದೆ. ಇದು ಆಗದು. ಇದು ಕೂಡದು ಎಂದು. ಯಾರಿದ್ದಾರಂತೆ ಇಲ್ಲಿ ನನ್ನ ಮಾತು ಕೇಳಲು. ಅಮ್ಮ ಅಮ್ಮ ಎಂದು ಇವಳು ಅತ್ತಳು. ಅವಳು ಅಲ್ಲಿ ಮಲಗಿದ್ದಾಳಲ್ಲ. ಇವಳ ಅಮ್ಮ—ಇವಳು ಅದಿದ್ದಕ್ಕೆಲ್ಲ ಕೈ ಅಂದು ತಕ ಪಕ ಕುಣಿದಳು. ಒಮ್ಮೆ ಹೀಗಾದದ್ದು ಅದಕ್ಕೂ ಆಯಿತಷ್ಟೆ. ಈ ರಾಮುವ ಬಸಿರಲ್ಲಿ ಬಂದೇ ಬಿಟ್ಟಳು. ಮತ್ತೆ ಅಲ್ಲಿ ಹೋಗುವುದಿಲ್ಲವೆಂದು. ನನ್ನ ಮಗಳು ನನಗೆ ಹೊರೆಯಲ್ಲ ಎಂದಳು ಅವಳು. ಬೇಯಿಸಿ ಹಾಕಬೇಕಾದವಳು ನಾನಷ್ಟೆ. ಈ ಮೂರು ಕಾಸಿನ ಹೆಂಗಸರಿಗೆ ಏನು?"

ರಾಮುವನ್ನು ಧಡಕ್ಕ ಪಕ್ಕಕ್ಕೆ ಉರುಳಿಸಿ. ಎದ್ದಳು ಪಾರ್ವತಿ. "ಅಣ್ಣಯ್ಯ ನೀವು ಹಾಗೆಲ್ಲ ಯಾಕೆ ಮಾತಾಡುತ್ತೀರಾ? ಅವರೊಟ್ಟಿಗೆ ಇರು[illegible] ಅವರು ಕೊಟ್ಟು [illegible] ಬಂದೇ [illegible]

ಯಾವ ಹೆಣ್ಣಾದರೂ ಅವರೊಟ್ಟಿಗೆ ಇರುವುದಕ್ಕೆ ಬಂದೀತೆ? ಈಗ ಯಾಕೆ ಕಾಲ ಬಂದಿತು ಅವರವರ ತಪ್ಪು ಅವರವರಿಗೆ ತಿಳಿದೀತು" ಗಳಗಳ ಅತ್ತಳು. ಇನ್ನು ಅವಳಿಗೆ ಅಲ್ಲಿರಲು ಸಾಧ್ಯವಾಗಲಿಲ್ಲ. "ಬಾರೋ ಏ ಮಾರಿ" ಎಂದು ರಾಮನನ್ನು ದರ ದರ ಎಳೆದುಕೊಂಡು ತಾಯಿಯ ಕೋಣೆಗೆ ಹೊರಟಳು-"ಯಾರಿಗೂ ನಾವು ಹೊರೆಯಾಗುವುದು ಬೇಡ. ಹೋಗುವ-ಎಲ್ಲಾದರೂ ಹಾಳಾಗಿ" ಎನ್ನುತ್ತ. "ಅಯ್ಯೋ ಬಿಡಮ್ಮ, ಬಿಡಮ್ಮ" ಎನ್ನುತ್ತಲೇ ಇದ್ದ ರಾಮ. ತಾಯಿ, ಮಗಳು ಏನೇನೋ ಮಾತಾಡುತ್ತಿದ್ದರು ಒಳಗೆ. ಒಮ್ಮೆ ಪಾರ್ವತಿ ಎತ್ತರದ ಸ್ವರದಲ್ಲಿ ತಾಯಿಗೆ ಏನೋ ಅಂದಳು. ಕಲ್ಯಾಣಿ ಅಳುವುದೂ ಕೇಳಿಸುತ್ತಿತ್ತು. ರಾಮ ಗಾಬರಿಯಿಂದ ಹೊರಕ್ಕೋಡಿ ಬಂದು ಅಜ್ಜಯ್ಯನ ತೊಡೆಯೇರಿದ.

"ಏನೇ ಅನ್ನು ಮಂಜಯ್ಯ ನಿನ್ನ ಅಳಿಯ ನೀವೆಲ್ಲ ಭಾವಿಸುವಷ್ಟು ಕೆಟ್ಟವ, ಕ್ರೂರಿ ಎಂದು ನಾನಂತೂ ಎಣಿಸಲಾರೆ. ಇವತ್ತು ನಾನೇ ನೋಡಿದೆನಲ್ಲ. ಯಾಕೆ-ನೀನೂ ನೋಡಿದೆಯಷ್ಟೆ. ಮಗನ ಮೇಲಿನ ಮೋಹವೊಂದಿಲ್ಲದಿದ್ದಲ್ಲಿ ಅವನು ಹಾಗೆ ಮಾಡುತ್ತಿದ್ದನೇ ಎನಿಸುತ್ತದೆ ನನಗೆ. ರಾಮನನ್ನು ಮರಳಿ ಕೊಡಲು ಹೆಣವೇ ಬೀಳಬೇಕು ಅಂದನಲ್ಲವೆ? ಹೆಂಡತಿ, ಮಕ್ಕಳು ಎನ್ನುವ ಮೋಹವಿಲ್ಲದೆ ಆ ಮಾತು ಅವನ ಬಾಯಿಂದ ಹೊರಟಿತೆ? ಯಾಕೆ? ಅವನ ಹಣ ನೋಡಿ ಯಾರೂ ಮತ್ತೊಂದು ಹೆಣ್ಣು ಕೊಡಲಾರರು ಎಂದೇನಿಲ್ಲವಷ್ಟೆ."

ಯಾವುದು ನೆನಪಿಗೆ ಬಾರದಿದ್ದರೂ, ತನಗಾಗಿ ಆ ಹಿರಿಯ ಮತ್ತೆ ಅಜ್ಜ ಕೈ ಹಿಡಿದು ಬಾ ಎಂದು ಜಗ್ಗಾಡಿದ್ದು ಇನ್ನೂ ರಾಮನ ಮನಸ್ಸಿನಲ್ಲಿ ಹಸಿರು ಹಸಿರಾಗಿಯೇ ಉಳಿದಿದ್ದರಿಂದ ಹಿರಿಯನ ನೆನಪು, ಹೆಂಗಸಿನ ನೆನಪು ಜಿಂಕೆಯ ನೆನಪು, ಗಾಡಿಯ ನೆನಪು ಎಲ್ಲಾ ಒಟ್ಟೊಟ್ಟಾಗಿ ಬಂದವು. "ಹೌದು ಅಪ್ಪಯ್ಯ, ಆ ಗಾಡಿ ಎಷ್ಟು ಚಂದವೆನ್ನುತ್ತೀ. ಅಪ್ಪಯ್ಯ ಅಪ್ಪಯ್ಯ ಇಲ್ಲಿ ನೋಡು, ಅಲ್ಲಿ ಅವರ ಮನೆಯಲ್ಲಿ ಜಿಂಕೆಯುಂಟಂತೆ. ಅಪ್ಪಯ್ಯ ನಂಗೆ ಜಿಂಕೆ ಕೊಡಿಸುತ್ತೀಯಾ? ಎಂದು ಅವನ ಗಲ್ಲ ಚುಚ್ಚಿ ಹೇಳಿದ. ಆ ಹೊತ್ತಿಗೇ ಪಾರ್ವತಿ ತಾಯಿಯ ಕೋಣೆಯಿಂದ ಹೊರಕ್ಕೆ ಬಂದು "ಮಗು, ಮಾತ್ರ ಬೇಕು ಅವರಿಗೆ. ನಾನು ಬೇಡವಾದೆ. ಅಲ್ಲವೆ?" ಎಂದಳು ಸಿಟ್ಟಿನಲ್ಲಿ.

"ಈಗ ನೀವು ಹಾಗೆಲ್ಲ ಹೇಳುವವರು, ಅವನು ನಾಲ್ಕು ನಾಲ್ಕು ಸರ್ತಿ ಬಂದು ನಿನ್ನ ಅಪ್ಪನನ್ನು ಕೇಳಿದಾಗ, ಇವನೇನು ಉತ್ತರ ಕೊಟ್ಟನಂತೆ, ಹೇಳು ನೋಡುವ. ನೀನಾದರೂ ಏನು? ಬಾಗಿಲಿಗೆ ಬಂದ ಗಂಡನನ್ನು ನೀನು ಯಾವ ಊರಿನವ' ಎಂದು ಕೇಳಿದೆಯಾ? ಇದೇ ನಿನ್ನ ಅಮ್ಮ ಅವನ ಮುಖಕ್ಕೆ ಏನೆಲ್ಲ ಅಂದಳು? ಶಿವರಾಮ ನನ್ನಲ್ಲಿ ಎಲ್ಲವನ್ನೂ ಹೇಳಿದ್ದಾನೆ. ಕಣ್ಣೀರು ಸುರಿಸುತ್ತಿದ್ದಾನೆ" ಎಂದು ಸದಾನಂದ ಭಟ್ಟರು ಹೇಳುವಾಗ ಪಾರ್ವತಿಗೆ ಅವಮಾನವಾಯಿತು.

"ನೋಡಿ, ಇವರೇ, ನೀವು ನನಗೆ ಏನೂ ಅನ್ನಿ, ಆದರೆ ತ್ರಾಣವಿಲ್ಲದೆ ಮಲಗಿರುವ ನನ್ನ ಅಮ್ಮನಿಗೆ ಏನಾದರೂ ಅಂದರೆ ನಾನು ಸುಮ್ಮನಿರುವವಳಲ್ಲ" ಎನ್ನುತ್ತ ಅಪ್ಪನ ತೊಡೆಯಿಂದ ಮಗನನ್ನು ಎಳೆದು ಸೊಂಟಕ್ಕೆ ಏರಿಕೊಂಡು ಅಮ್ಮನ ಕೋಣೆಗೆ ಹೊರಟಳು. ಅಲ್ಲಿಂದ ಇಲ್ಲಿಗೆ ಇಲ್ಲಿಂದ ಅಲ್ಲಿಗೆ ಚಂಡಿನ ಹಾಗೆ ತನ್ನನ್ನು ಹಿಡಿದಾಡಿಸುವ ಹಿರಿಯರ ಬಗ್ಗೆ ಹೆದರಿಕೆಯಾಯಿತು ರಾಮನಿಗೆ. "ಬಾಯಿ ಮುಚ್ಚು ಪಾರ್ವತಿ, ಹಿರಿಯರು ಎನ್ನುವ ಗೌರವವನ್ನಾದರೂ ಕೊಡುವುದಕ್ಕೆ ಕಲಿ" ಎಂದು ಘರ್ಜಿಸಿದರು ಮಂಜಯ್ಯ, "ಹಿರಿಯರು ಹಿರಿಯರಾಗಿದ್ದರೆ ಸಲ್ಲುವ ಗೌರವ ಸಲ್ಲೇ ಸಲ್ಲುತ್ತದೆ" ಎಂದಳು ಅಪ್ಪನ ಮುಖಕ್ಕೇ. "ನಿನ್ನ ಸೊಕ್ಕಿಗೆ" ಎಂದು ಕೂಗಿದರು ಮಂಜಯ್ಯ. ಅವಳಿಗೆ ಅಳು ಬಂತು. "ಹೌದು ನನಗೆ ಸೊಕ್ಕು. ಯಾಕೆ? ನನಗೆ ಬೇಕಾದ್ದು ಎಲ್ಲ ಇಲ್ಲುಂಟು ಎಂದಲ್ಲವೆ? ಅಯ್ಯೋ ಯಾವ ಸುಖಕ್ಕೆ ಬದುಕಬೇಕೋ" ಎಂದು ರಾಮನನ್ನು ನೆಲಕ್ಕೆಸೆದು ತಲೆ ಚಚ್ಚಿಕೊಂಡಳು ಬಾಗಿಲಿಗೆ. ಸದಾನಂದ ಭಟ್ಟರು ಓಡಿ ಹೋಗಿ ಅವಳನ್ನು ತಡೆಯಲೆತ್ನಿಸಿದರು. "ಬಿಡಿ, ನನ್ನನ್ನು ಮುಟ್ಟಬೇಡಿ, ನಾನು

ಸಾಯುತ್ತೇನೆ. ನನ್ನಿಂದಲ್ಲವೆ ಇವೆಲ್ಲ" ಎನ್ನುತ್ತ ಮಿಸುಕಾಡಿದಳು. ರಾಮ ಗಡ ಗಡ ನಡುಗಿದ. "ಅಮ್ಮ ಅಮ್ಮ" ಎಂದು ರೋದಿಸಿದ. ಆದರೆ ಅವಳ ಹತ್ತಿರ ಹೋಗುವ ಧೈರ್ಯ ಮಾತ್ರ ಬರಲಿಲ್ಲ. ಮಂಜಯ್ಯನಿಗೆ ಒಟ್ಟಾರೆ ದೃಶ್ಯವೇ ಹೇಸಿಗೆಯಾಯಿತು. ತಲೆ ಬಿಸಿಯಾಯಿತು. "ಸಾಯುತ್ತೀಯಾ ರಂಡೆ, ಸಾಯುತ್ತೀಯಾ" ಎನ್ನುತ್ತ ಚಟಾರನೆ ಅವಳ ಕೆನ್ನೆಗೆರೆಡು ಬಿಗಿದರು. "ಅಯ್ಯೋ, ನಾನು ಸತ್ತೆ" ಎಂದು ಬೊಬ್ಬೆ ಹೊಡೆದಳು. "ಮಂಜಯ್ಯ ಎಂಥದು ಮಾಡುವುದು ನೀನು" ಎಂದು ಸದಾನಂದಭಟ್ಟರು ರೇಗಿದರು. ಎಲ್ಲರೂ ರಾಕ್ಷಸರಂತೆ ಕಂಡರು ರಾಮನಿಗೆ. ಅಪ್ಪಯ್ಯ ಎನ್ನುತ್ತಿದ್ದಾನೆ. ಆದರೆ ಯಾರ ಬಳಿಯೂ ಹೋಗುವ ತ್ರಾಣವಿಲ್ಲ ದಂತಾಗಿದೆ. "ಸಾಲದು, ಎಂತ ನೀನೊಬ್ಬ ನನ್ನ ಕೊರಳಿಗೆ. ನಡಿಯೋ- ಕೆರೆಗೋ ಭಾವಿಗೋ ಬಿದ್ದು ಸಾಯುವ. ಈ ನರಕ ಯಾರಿಗೆ ಬೇಕು" ಎಂದು ರಾಮನನ್ನು ಹಿಡಿಯಲು ಹೋದಳು. ರಾಮನಿಗೆ ಎಲ್ಲ ಸಂಗತಿ ಭಯಂಕರವಾಗಿ ಕಂಡಿತು. ಹೊಸತೊಂದು ರಾಜ್ಯದಲ್ಲಿ ಇರುವಂತೆ ಅನಿಸಿತು. ಅಮ್ಮ ಫೋಟು ಕತೆಯಲ್ಲಿ ಬರುವ ರಾಕ್ಷಸಿಯಂತೆ ಕಂಡಳು, ಆ ಬಿಚ್ಚಿದ ತಲೆಯಲ್ಲಿ ಸೆರಗಿಲ್ಲದ ಮೈಯಲ್ಲಿ.



ಹಿಂದಕ್ಕೆ ಹೋದ. ಅಳುತ್ತ ಬಾಗಿಲ ವರೆಗೆ ಬಂದು ಹೊಸಿಲು ದಾಟಿದ. ಕಿಸೆಗೆ ಕೈ ಹಾಕಿದ. ಬೀಡಿ ಸಿಗ ಬೇಕೆ ಅಲ್ಲಿ? ಅಪ್ಪಯ್ಯನ ನೆನಪಾಯಿತು. ಕದ್ದರೆ ರಾಕ್ಷಸರು ಬಂದು.....ತಾಯಿ ಹೇಳಿದ ಕತೆ ನೆನಪಿಗೆ ಬಂದು. ಅವನಿಗೆ ಬೀದಿ ಹಿಂತಿರುಗಿ ಸುವುದೇ ಸರಿ ಎನಿಸಿ, ಅಲ್ಲಿ ನಿಲ್ಲದೆ ಅಪ್ಪಯ್ಯನ ಮನೆ ಕಡೆ ಓಡಿದ ರಾಮು.

✡

(ಅಕಾಲ ಮೃತ್ಯುವಪ್ಪಿದ ಕತೆಗಾರ ದಿ. ಕೆ. ಸದಾಶಿವರ 'ಅಪರಿಚಿತರು' ಕಥಾಸಂಕಲನದಿಂದ ಈ ಕಥೆಯನ್ನು ಎತ್ತಿಕೊಳ್ಳಲಾಗಿದೆ. ಸದಾಶಿವರ ಬಗೆಗೆ ಪರಿಚಯ ಲೇಖನಕ್ಕಾಗಿ ನೋಡಿ 'ಕಸ್ತೂರಿ' ನವಂಬರ್ ೧೯೭೭.)

"ಹೇಡತಿಗೆ ಇಸ್ಪೀಟಾಡಲು ಕಲಿಸಿದ್ದೀಯಂತೆ ಹೌದೆ?"

"ಹೌದು ಮಹಾರಾಯ, ಹಾಗೆ ಮಾಡಿದ್ದು ಒಳೆಯದೇ ಆಯಿತು ನೋಡು. ಕಳೆದ ಶನಿವಾರ ನಾನು ಅರ್ಧ ಪಗಾರವನ್ನೇ ಅವಳಿಂದ ಗೆದ್ದೆ."

"ಪ್ರಿಯೆ, ನೀನು ನನ್ನ ಹೆಂಡತಿಯಾದ ಕನಸನ್ನ ನಿನ್ನೆ ತಾನೆ ಕಂಡೆ. ಕನಸು ನನಸಾಗಲು ನಾನು ಏನು ಮಾಡಬೇಕು ಹೇಳು?"

"ನಿದ್ದೆಯನ್ನು ಕಡಿಮೆ ಮಾಡಬೇಕು."

-ಸ್ಪುಟ್ನಿಕ್‌ನಿಂದ

ಸಂಗ್ರಹ : ಶ್ರೀನಿವಾಸ ಹಾವನೂರ

ಒಂದು ಸಂಭಾಷಣೆ


ಕ್ರಿ.ಶ. ೧೮೫೭ರ ಸಿಪಾಯಿ ದಂಗೆಯು ಭಾರತದ ಪ್ರಥಮ ಸ್ವಾತಂತ್ರ್ಯಯುದ್ಧವೆಂದು ತಿಳಿಯಲಾಗುತ್ತದೆ. ಅದೊಂದು ದೊಡ್ಡ ಪ್ರಮಾಣದ ಆಂದೋಲನವೆಂಬುದು ನಿಜವೇ. ಆದರೆ ಅದನ್ನೆ ಪ್ರಥಮವೆಂದು ಹೇಳಲಾಗದು. ಅದಕ್ಕಿಂತ ಪೂರ್ವದಲ್ಲಿ ಆಗಾಗ ಬ್ರಿಟಿಶರನ್ನು ಈ ದೇಶದಿಂದ ಹೊರಗಟ್ಟಬೇಕೆನ್ನುವ ಪ್ರಯತ್ನಗಳು ನಡೆದೇ ಇದ್ದುವು. (ಉದಾಹರಣೆಗೆ ದಿಂಡಿಗಲ್ಲಿನ ಬಳಿಯ ೧೮೦೧–೦೩ರ ಯುದ್ಧ). ಆದರೆ ವಿವಿಧ ರಾಜ್ಯಗಳಲ್ಲಿಯ ರಾಜರು ಒಟ್ಟಿಗೆ ಒಪ್ಪಂದ ಮಾಡಿಕೊಂಡು, ಇಂಗ್ಲೀಷರು ವಶಮಾಡಿಕೊಂಡಿರುವ ಎಲ್ಲಾ ಪ್ರದೇಶಗಳಿಂದ ಅವರನ್ನು ಹೊರಗೋಡಿಸಬೇಕೆಂಬ ಪ್ರಯತ್ನವೊಂದು ೧೭೮೦ರಲ್ಲಿ ಜರುಗಿತು. ಪೇಶ್ವೆ, ಭೋಸ್ಲೆ ಹಾಗೂ ಸಿಂಧೆ ಈ ಮರಾಟರು ಬಂಗಾಲದವರೆಗೆ ಸಾಗಿ ಅಲ್ಲಿಯ ಬ್ರಿಟಿಷರನ್ನು ಹೊರದಬ್ಬಬೇಕು, ನಿಜಾಮನು ಮಧ್ಯಪ್ರದೇಶ, ಉತ್ತರ ಪ್ರದೇಶಗಳಲ್ಲಿಯ ಇಂಗ್ಲೀಷರನ್ನು ಗೊತ್ತಿಗೆ ಹಚ್ಚಬೇಕು. ಅದರಂತೆ ದಕ್ಷಿಣದಲ್ಲಿ ಹೈದರಾಲಿಯು ಮದ್ರಾಸ ಪ್ರಾಂತ್ಯದಲ್ಲಿ ಅವರ ಉಚ್ಚಾಟನೆ ಮಾಡಬೇಕೆಂದು ಒಡಂಬಡಿಕೆಯಾಯಿತು. ಇದನ್ನು ತುಸು ಮಟ್ಟಿಗಾದರೂ ಕಾರ್ಯಾಚರಣೆಯಲ್ಲಿ ತಂದಿದ್ದರೆ, ಇದುವೆ ರಾಷ್ಟ್ರಮಟ್ಟದಲ್ಲಿಯ ಪ್ರಥಮ ಸ್ವಾತಂತ್ರ್ಯಯುದ್ಧವಾಗುತ್ತಿತ್ತು. ನಿಜಾಮನನ್ನು ಗವರ್ನರ್ ಜನರಲ್ ವಾರನ್ ಹೇಸ್ಟಿಂಗ್ಸನು ಒಡೆದುಕೊಂಡು ಬಿಟ್ಟನು. ಪೇಶ್ವೆಯು ಸಿಂಧೆಯ ಸಹಾಯದಿಂದ ತಾನು ಮುಂದುವರಿದನಾದರೂ ಅವನೂ ಒಪ್ಪಂದಮಾಡಿಕೊಂಡು ಹಿಂದಿರುಗಿದನು. (ಇದು ಸಾಲ್ಬಾಯಿ ಒಪ್ಪಂದವೆಂದು ಇತಿಹಾಸದಲ್ಲಿ ಪ್ರಸಿದ್ಧವಿದೆ.)

ಆದರೆ ಹೈದರ್ ಒಬ್ಬನೇ ಒಪ್ಪಂದದಂತೆ ನಡೆದುಕೊಂಡ. ಮದ್ರಾಸಿನ ಮೇಲೆ ಸಾಗಿ ಹೋಗಿ, ಎರಡು ವರ್ಷಗಳ ಪರ್ಯಂತ ಇಂಗ್ಲೀಷರೊಡನೆ ಹೋರಾಡಿದ. ಈ ಹಿನ್ನೆಲೆಯಲ್ಲಿ ನಡೆದ ಸಂಭಾಷಣೆಯಿದು.

ಮೈಸೂರಲ್ಲಿಯ ದಳವಾಯಿಗಳ ಒಳಜಗಳಗಳನ್ನು ಸದೆಬಡಿದು ಹೈದರನು ರಾಜ್ಯಸೂತ್ರಗಳನ್ನು ವಹಿಸಿದ್ದನಷ್ಟೆ. ದಂಡನ್ನು ಕೂಡಿಸಿ, ನೆರೆಯ ಪ್ರದೇಶಗಳ ಮೇಲೆ ಏರಿ ಹೋಗುವುದು, ಸದಾ ಯುದ್ಧದಲ್ಲಿ ನಿರತನಾಗಿರುವುದು ಅವನ ರಕ್ತಗುಣವೇ ಆಗಿತ್ತು.

೧೭೭೯ರ ಹೊತ್ತಿಗೆ ಅವನೊಬ್ಬ ಬಲಾಢ್ಯ ನಾಯಕನಾದನಲ್ಲದೆ, ಸಮಗ್ರ ದಕ್ಷಿಣ ಭಾರತದಲ್ಲಿ ಅವನನ್ನು ಸರಿಗಟ್ಟುವ ಯಾವ ರಾಜರೂ ಇರಲಿಲ್ಲ. ಈ ನಿಮಿತ್ತವಾಗಿ ಅವನು ಇಂಗ್ಲೀಷರೊಡನೆ ಆಗಾಗ ಸೆಣಸಾಡಬೇಕಾಯಿತು. ೧೭೬೯ರಲ್ಲಂತೂ ಮದ್ರಾಸಿನ ತನಕ ಹೋಗಿ ಅವರ ಮೇಲೆ ಎರಗಿದನು. ಐದೇ ಮೈಲು ಅಂತರದಲ್ಲಿದ್ದ ಅವನೊಡನೆ ಇಂಗ್ಲೀಷರು ಕೂಡಲೇ ಒಪ್ಪಂದಮಾಡಿಕೊಂಡರು. ಆ ಒಪ್ಪಂದದ ಪ್ರಕಾರ, ಬೇರೆಯವರು ದಾಳಿ ಮಾಡಿದಾಗ ಹೈದರನಿಗೆ ಇಂಗ್ಲೀಷರು ನೆರವಾಗಬೇಕೆಂಬ ನಿಶ್ಚಿತ ಕರಾರು ಇದ್ದಿತು. ಪೇಶ್ವೆಯವರು ಮೇಲಿಂದ ಮೇಲೆ ಇವನ ರಾಜ್ಯದ ಮೇಲೆ ಎರಗುತ್ತಿದ್ದುದರಿಂದ ಈ ಶರ್ತಿನ ಅಗತ್ಯ ಅವನಿಗಿತ್ತು.

ಆದರೆ ಇಂಗ್ಲೀಷರು ಒಮ್ಮೆಯೂ ಹಾಗೆ ಅವನಿಗೆ ನೆರವಾಗಲಿಲ್ಲ.



ಮೇಲೆ ಹೇಳಿದ ೧೭೮೦ರ ತ್ರಿಕೂಟ ಒಪ್ಪಂದದ ಪ್ರಕಾರ, ಹೈದರನು ೯೦ ಸಾವಿರದಷ್ಟು ಸುಸಜ್ಜಿತ ಸೈನ್ಯದೊಡನೆ, ಬ್ರಾಹ್ಮಣರು, ಮೌಲ್ವಿಗಳ ಪ್ರಾರ್ಥನೆಯ ಬಲದೊಡನೆ ಶ್ರೀರಂಗಪಟ್ಟಣದಿಂದ ಹೊರಟನು. ಹಲವಾರು ಯುದ್ಧರಂಗಗಳಲ್ಲಿ ವಿಜಯಶ್ರೀ ಹೈದರನ ಕೊರಳಿಗೇ ಹಾರಹಾಕಿದಳು. ಗವರ್ನರ್ ಜನರಲ್ ವಾರನ್ ಹೇಸ್ಟಿಂಗ್ಸ್ ಮದ್ರಾಸಿನ ಗವರ್ನರರನ್ನು ವರ್ಗಾಯಿಸಿದರೂ ಪ್ರಯೋಜನವಾಗಲಿಲ್ಲ. ಕೊನೆಗೆ ಯುದ್ಧನೀತಿ–ನಿಪುಣನೆಂದು ಹೆಸರು ಪಡೆದಿದ್ದ, ಜನರಲ್ ಐರ್ ಕೂಟ್ ಎಂಬುವನನ್ನು ಮುಖ್ಯ ಸೇನಾನಿಯನ್ನಾಗಿ ಮಾಡಿ ಕಳುಹಿಸಿದನು. ಸುರುವಾತಿಗೆ ಐರ್ ಕೂಟನ ಮೇಲುಗೈ ಕಂಡುಬಂದರೂ, ಅವರಿಬ್ಬರ ನಡುವೆ ಅನಿರ್ಣಯ ಬಳಿ ನಡೆದ ಯುದ್ಧದಲ್ಲಿ (ಜೂನ್ ೧೭೮೩) ಹೈದರನಿಗೆ ದೊಡ್ಡ ವಿಜಯ ಲಭಿಸಿತು. ಇದರಿಂದ ತುಸು ಧೃತಿಗೆಟ್ಟ ಕೂಟ್, ಶ್ರೀನಿವಾಸರಾವು ಎಂಬುವನನ್ನು ದೂತನೆಂದು ಹೈದರನ ಬಳಿಗೆ ಕಳಿಸಿಕೊಟ್ಟನು.

ಅವರಿಬ್ಬರ ಸಂಭಾಷಣೆಯು ೧೪ ಮತ್ತು ೧೫ನೇ ಜುಲೈ ಈ ಎರಡು ದಿನಗಳಲ್ಲಿ ನಡೆಯಿತು. ಈ ಸಂಭಾಷಣೆಯ ಪ್ರತಿಕೃತಿಯು ಮೂಲದಲ್ಲಿ ಮರಾಠಿಯಲ್ಲಿ ಇದ್ದು, ಕೂಟನ ಆಪ್ತಕಾರ್ಯದರ್ಶಿ ಗ್ರಹಾಮ್ ಎಂಬುವನು ಇಂಗ್ಲೀಷಿಗೆ ಅನುವಾದಿಸಿದ್ದಾನೆ. ಈ ಇಂಗ್ಲೀಷ್ ಪ್ರತಿಯು ಲಂಡನ್ನಿನ ಇಂಡಿಯಾ ಆಫೀಸ್ ಲೈಬ್ರರಿಯಲ್ಲಿದ್ದುದನ್ನು ಪರಿಶೀಲಿಸಿದ ಮೇಲೆ, ಇದಕ್ಕೆ ಐತಿಹಾಸಿಕ ಮಹತ್ವವನ್ನು ಗುರುತಿಸಿ ಪ್ರತಿ ಮಾಡಿಸಿ ತರಿಸಲಾಯಿತು.

ಪ್ರಸ್ತುತ ಕನ್ನಡ ರೂಪದಲ್ಲಿ, ಯಥಾವತ್ತಾಗಿ

Hyder Ally Cawn — If you think it just do the Business — Do not what is unjust.

Shinaas Rowe — It is you who talk — Injustice — In same manner as you possess Engagements, so doubtless there are Discharges.

Hyder Ally Cawn — Are you acquainted with the History of the Discharges, or not

Shinaas Rowe — I suppose you mean to tell me that it was exacted from Kutti Gopaul Rauze — That is a mistake —

Hyder Ally Cawn — That is the Fact — It is no Mistake Kutti Gopaul Rauze

ಹೈದರಲಿ ಮತ್ತು ಶ್ರೀನಿವಾಸರಾಯರ ನಡುವಣ ಸಂಭಾಷಣೆಯ ಇಂಗ್ಲೀಷ್ ಅನುವಾದದ ಒಂದು ಭಾಗದ ಫೋಟೋ-ಪ್ರತಿ.

ಅನುವಾದಿಸಿಲ್ಲ. ನೇರವಾಗಿ ಓದಬರುವಂತೆ, ಆದರೆ ಮೂಲದ ವಿಚಾರ ಬದಲು ಮಾಡದಂತೆ ಕೊಡಲಾಗಿದೆ. ನಮ್ಮ ಐತಿಹಾಸಿಕ ದಾಖಲೆಗಳಲ್ಲಿ ಸಂಭಾಷಣಾ ರೂಪದಲ್ಲಿದ್ದವುಗಳು ತೀರ ಕಡಿಮೆ. ರಾಜಕೀಯ ಸಂವಾದಗಳು ಇಂದಿಗೂ ನಡೆಯುತ್ತಲಿವೆ. ಹಾಗೆ ಮಾಡುವಾಗ ಯಾವ ಬಗೆಯ ಗತ್ತುಗಾರಿಕೆ ಇರುವದೆಂಬುದನ್ನು ಇದರಿಂದ ತುಸು ಮಟ್ಟಿಗೆ ಕಂಡುಕೊಳ್ಳಬಹುದು.

ಶ್ರೀನಿವಾಸರಾವು ಆದರದಿಂದ ಪ್ರಣಾಮ ಮಾಡಿ, ನಜರಾಣೆಯನ್ನು ಒಪ್ಪಿಸಿದ ಮೇಲೆ ಕುಶಲ ಪ್ರಶ್ನೆಗಳು ಜರುಗಿದುವು. ಅನಂತರ ಈ ರೀತಿಯಾಗಿ ಸಂಭಾಷಣೆ ಮುಂದುವರಿಯಿತು.

ಹೈದರ್:– ಇಂಗ್ಲೀಷರೊಡನೆ ಸ್ನೇಹದಿಂದಿರಲೆಂದು ಈ ಮೂರು ವರ್ಷಗಳಲ್ಲಿ ನಾನು ಮದ್ರಾಸಿನಲ್ಲಿರುವ ನಮ್ಮ ವಕೀಲರ ಮುಖಾಂತರ ನೂರು ಪತ್ರಗಳನ್ನಾದರೂ ಬರೆಸಿರಬೇಕು. ಧಿಂಡಿಗಲ್ಲಿನ ಗಡಿಯಲ್ಲಿ ಒಂದೇ ಸಮನೆ ಗಲಭೆಗಳಾಗುತ್ತಿದ್ದದನ್ನು ಕಂಡು "ಇದು ಸ್ನೇಹದ ರೀತಿಯಲ್ಲ. ಹೀಗೇ ಮುಂದುವರಿದರೆ ಕರ್ನಾಟಿಕ್* ಪ್ರದೇಶಕ್ಕೆ ಬಂದು ದಾಳಿ ಮಾಡುವೆ"ಎಂದು ತಿಳಿಸಿದೆ. ಏನೂ ಪ್ರಯೋಜನವಾಗಲಿಲ್ಲ. ಕೊನೆಗೆ ನಮ್ಮ ವಕೀಲನು ಒತ್ತಾಯಿಸಿದಾಗ (ಅರ್ಕಾಟದ) ನವಾಬರ ಕಡೆಗೆ ಹೋಗು ಎಂದರು. ನವಾಬರ ಕಡೆ ಹೋದರೆ ಇಂಗ್ಲೀಷರನ್ನೇ ಕೇಳು–ಎಂಬುದಾಗಿ ಉತ್ತರ.

ಶ್ರೀನಿವಾಸರಾವು:– ನೀವು ಎಷ್ಟೆಂದರೂ ಸರದಾರರು. ನಿಮ್ಮ ಪತ್ರದ ಮುದ್ದೆಗಳಿಗೆ ಉತ್ತರವನ್ನು ಅಪೇಕ್ಷಿಸುವುದು ನ್ಯಾಯವೇ. ನಾನೀಗ ಕೆಲವಕ್ಕೆ ಉತ್ತರ ಕೊಡಲೇ?

ಹೈ– ಅವಶ್ಯವಾಗಿ.

ಶ್ರೀ– ಇಂಗ್ಲೀಷರೊಡನೆ ವೈರ ಸಾಧಿಸುವ ಹಟದಿಂದಲೇ ನೀವು ಈ ಕರ್ನಾಟಿಕಕ್ಕೆ ಬಂದುದೆಂದು ನಮ್ಮ ಸಾಹೇಬರ ಭಾವನೆಯಾಗಿದೆ. ಗಡಿ ಜಗಳವಿದ್ದರೆ ಅದು ಒಂದೇ ಪಕ್ಷದಿಂದ ಹೇಗಾದೀತು? ಎರಡೂ ಕಡೆಗೆ ತಪ್ಪು ಘಟಿಸಿರಬೇಕು. ಚಪ್ಪಾಳೆಗೆ ಎರಡೂ ಕೈಗಳು ಕೂಡಬೇಕು ತಾನೇ, ಈಗ ನೀವಾಗಿ ಕರ್ನಾಟಿಕ್ ಪ್ರದೇಶಕ್ಕೆ ಬಂದು ಇಂಗ್ಲೀಷರ ವೈರ ಕಟ್ಟಿಕೊಂಡಿರಿ.

ಹೈ– ನನ್ನ ಮತ್ತು ಇಂಗ್ಲೀಷರ ನಡುವೆ ಆದ ಒಪ್ಪಂದದ ಕರಾರುಗಳಲ್ಲಿ ಒಂದನ್ನಾದರೂ ಅವರು ಪಾಲಿಸಲಿಲ್ಲ. ಮುಂದಿನ ನಮ್ಮ ವ್ಯವಹಾರದಲ್ಲಿ ಅವರಲ್ಲಿ ವಿಶ್ವಾಸವಿಡಲು ಸಾಧ್ಯವೇ ಇಲ್ಲ.

ಶ್ರೀ– ಕರಾರುಗಳನ್ನು ಮುರಿಯುವದರಲ್ಲಿ ನೀವೇ ಮುಂದಾದಿರಿ; ಇಂಗ್ಲೀಷರಲ್ಲ.

ಹೈ– ಹೌದೆ? ಕೇಳಿರಿ ಹಾಗಾದರೆ, ಮರಾಟರು ನನ್ನ ಮೇಲೆ ದಾಳಿ ಮಾಡಿದರೆ ನನಗೆ ನೆರವಾಗಬೇಕೆಂದು ಕರಾರು ಆಗಿದ್ದಿತು. ಸಹಾಯ ಕಳಿಸಲು ನಾನು ಬರೆದೆ. ಅದಕ್ಕೆ ಅವರ ಉತ್ತರ ಏನು ಗೊತ್ತೆ? ಇಂಗ್ಲಂಡಿಗೆ ಬರೆದು ಅಲ್ಲಿಯ ಒಪ್ಪಿಗೆ ಬಂದ ಮೇಲೆ ಸಹಾಯ ಮಾಡುವದಾಗಿ ತಿಳಿಸಿದರು. ಆಗ ನಾನು "ನಿಮ್ಮ ಇಂಗ್ಲಂಡಿನ ಒಪ್ಪಿಗೆ ಬರಲು ಒಂದು ವರ್ಷವೇ ತಗಲುವದು. ಆಮೇಲೆ ಸಹಾಯ ಬಂದದ್ದಾದರೆ ಅದರಿಂದದೇನು ಪ್ರಯೋಜನ" ಎಂದು ತಿಳಿಸಿದೆ. ಅದಕ್ಕೆ ನಿಮ್ಮ ಗವರ್ನರ್ ಕೊಟ್ಟ ಉತ್ತರ–"ಇಂಗ್ಲಂಡಿನಿಂದ ಅಪ್ಪಣೆ ಬರದೆ ಆಗದು" ಎಂದು. ಆದರೂ ನಾನು ಸಹಾಯಕ್ಕಾಗಿ ಕಾದೆನು. ಸಾಕಷ್ಟು ಕಾದು, ಕೇಳಿದರೆ "ಇಲ್ಲ. ಇನ್ನೂ ಉತ್ತರ ಬಂದೇ ಇಲ್ಲ" ಎಂದರು. ಇದು ನಿಮ್ಮ ಇಂಗ್ಲೀಷರು ನನಗೆ ನೆರವಾಗುವ ರೀತಿ! ಇನ್ನೊಂದು ವಿಷಯ. ನಮ್ಮ ಸೀಮೆಯಲ್ಲಿರುವ ಮಾಹೆ ಬಂದರಕ್ಕೆ ಬರುವದಿಲ್ಲವಾಗಿ ಆಶ್ವಾಸನೆ ಕೊಟ್ಟಿದ್ದರು. ಆದರೂ ನನಗೆ ಗೊತ್ತಿಲ್ಲದಂತೆ ಸಾಗಿಹೋದರು.

ಶ್ರೀ– ಫ್ರೆಂಚರಿಗೂ ಇಂಗ್ಲೀಷರಿಗೂ ಜಾತಿ–ವೈರ. ಹಿಂದುಸ್ತಾನದಲ್ಲಿರುವ ಫ್ರೆಂಚರ ಎಲ್ಲ ಸ್ಥಳಗಳನ್ನೂ ಆಕ್ರಮಿಸಬೇಕೆಂದು, ಇಂಗ್ಲಂಡಿನಿಂದ ಹುಕುಮು ಬಂದಿತು. ಹೀಗಾಗಿ ನಿರ್ವಾಹವಿಲ್ಲದೆ ಅವರು ನಿಮ್ಮ ಸೀಮೆಯಲ್ಲಿ ಕಾಲಿರಿಸಿ ಯುದ್ಧ ಮಾಡಬೇಕಾಯಿತು ಆದರೂ ನಿಮಗೆ ಯಾವುದೇ ಹಾನಿ ಮಾಡಿಲ್ಲ. ಇಷ್ಟಕ್ಕೂ ಆ ಫ್ರೆಂಚರೊಡನೆ ನಿಮಗೇಕೆ ನಿಕಟ ಸ್ನೇಹ? ಎಷ್ಟಾದರೂ ಅವರು

* ಇದು ನಮ್ಮ ಕರ್ನಾಟಕವಲ್ಲ ಮದ್ರಾಸದ ಸೀಮೆ. ಪೂರ್ವ ಘಟ್ಟದ ಕೆಳಗಿನ ಪ್ರದೇಶ; ಉತ್ತರದಲ್ಲಿ ನೆಲ್ಲೂರಿನಿಂದ ದಕ್ಷಿಣದ ತಿನ್ನವೆಲ್ಲಿಯ ವರೆಗೂ ಇದರ ವಿಸ್ತಾರ. ಇತಿಹಾಸಕಾಲದ ಮುಸಲ್ಮಾನರು ತಪ್ಪಾಗಿ ಹೆಸರಿಟ್ಟದ್ದನ್ನೇ ಆ ಕಾಲದ ಯುರೋಪಿಯನ್ನರು ಬಳಸುತ್ತಿದ್ದರು.

ಇಂಗ್ಲೀಷರೂ ಒಂದೇ ರಕ್ತದವರು. ಅವರ ಜಗಳದಲ್ಲಿ ನೀವೇಕೆ ಕೈಹಾಕುವಿರಿ? ಫ್ರೆಂಚರ ಪಕ್ಷ ವಹಿಸಿ ಅವರ ತಿಕ್ಕಾಟದಲ್ಲಿ ನೀವು ಪ್ರತ್ಯಕ್ಷ ಭಾಗವಹಿಸಿದರೆ, ಇಂಗ್ಲೀಷರು ಅದನ್ನು ಸಹಿಸಬೇಕೆನ್ನುವುದು ಅದಾವ ನ್ಯಾಯ?

ಹೈ- ನನ್ನ ದೇಶದಲ್ಲಿ, ಇಂಗ್ಲೀಷ್, ಫ್ರೆಂಚ್, ಡಚ್-ಮುಂತಾದ ಎಲ್ಲ ಯುರೋಪಿಯನ್ನರ ಫ್ಯಾಕ್ಟರಿಗಳಿವೆ. ಅವರಲ್ಲಿ ಒಬ್ಬರ ಮೇಲೆ ಇನ್ನೊಬ್ಬರು ದಾಳಿಮಾಡಿದರೆ ನಾನು ಸುಮ್ಮನಿರಬೇಕೆ? ಇಂಗ್ಲೀಷರ ಫ್ಯಾಕ್ಟರಿಯ ಮೇಲೇನೇ ಮತ್ತೊಬ್ಬರು ದಾಳಿ ಮಾಡಿದರೆ? ಅಲ್ಲದೆ ತೆಲ್ಲಿಚೆರಿಯಲ್ಲಿರುವ ನಿಮ್ಮವರು ನಮ್ಮ ವೈರಿಗಳಾದ ಮಲೆಯಾಳ ನಾಯಕರಿಗೆ ಬಂದೂಕು, ಕಾಡತೂಸು, ಮದ್ದಿನ ಪೌಡರ್ ಏನೆಲ್ಲ ಪೂರೈಸುವರು. ಹೀಗಾದರೆ ಸ್ನೇಹ ಹೇಗೆ ಉಳಿದೀತು? ಒಪ್ಪಂದಕ್ಕೆ ಏನಾದರೂ ಅರ್ಥವಿದ್ದೀತೆ? ಇನ್ನೊಂದು ಮಾತು. ನಿಮ್ಮ ಮದ್ರಾಸ್ ಗವರ್ನರ್ ಜನರು ವರ್ಷ ಎರಡು ವರ್ಷ ಇದ್ದು ಬದಲಾಗುತ್ತಾರೆ. ಹಿಂದಿನವರು ಏನು ಮಾಡಿದ್ದಾರೆ. ಏನು ಒಪ್ಪಿಕೊಂಡಿದ್ದಾರೆಂಬುದನ್ನು ಗಮನಿಸುವುದಿಲ್ಲ. ಪ್ರತಿಯೊಬ್ಬರೂ ತಮಗೆ ಋಷಿ ಬಂದಂತೆ ವರ್ತಿಸುತ್ತಾರೆ. ನನ್ನ ಮಟ್ಟಿಗೆ ಈಸ್ಟ ಇಂಡಿಯಾ ಕಂಪೆನಿಯೆಂಬುದು ಒಂದೇ. ಅವರು ಹೀಗೆ ಭಿನ್ನವಾಗಿ ವರ್ತಿಸತೊಡಗಿದರೆ ಮಾಡಿಕೊಂಡ ಒಪ್ಪಂದಕ್ಕೆ ನಾನು ಯಾವ ಬೆಲೆ ಕೊಡಬೇಕು? ಈ ಕಾರಣಗಳಿಂದಾಗಿ ನಾನು ಇಲ್ಲಿಗೆ ಬಂದೆ. ಒಂದು ಕೋಟಿ ರೂ. ವೆಚ್ಚವಾದರೂ ಚಿಂತಿಲ್ಲ ಈ ಪ್ರದೇಶವನ್ನು ಹಾಳುಗೆಡವಬೇಕು ಎಂದುಕೊಂಡೆ. ನನ್ನ ವಕೀಲನಿಗೆ ಪತ್ರ ಬರೆದು—ಈ ವಿಷಯವನ್ನು ಕಂಪೆನಿಯವರಿಗೆ ತಿಳಿಸಲು ಸೂಚಿಸಿದೆ. ಆಗ ಮಾತ್ರ ಒಬ್ಬ ಇಂಗ್ಲೀಷ್ ವಕೀಲ* ಬಂದ. ಇಬ್ಬರೂ ಶಾಂತತೆಯನ್ನು ಕಾಯ್ದುಕೊಂಡು ಹೋಗಬೇಕೆಂದು ಮೋಘಂ ಆಗಿ ಮಾತಾಡಿದ. "ನೀನು ಮದ್ರಾಸ್ ಮುಟ್ಟುವದರೊಳಗೇ ಈ ಪ್ರದೇಶವನ್ನು ಸುಲಿಯುವೆ" ಎಂದು ನಾನು ಅವನಿಗೆ ಸ್ಪಷ್ಟವಾಗಿ ಹೇಳಿದೆ. ಇಲ್ಲಿಗೆ ಬಂದು, ಇಡೀ ದೇಶವನ್ನು ಕೊಳ್ಳೆ ಹೊಡೆದೆ, ಇದರಲ್ಲಿ ಇನ್ನೂ ಹತ್ತು ಕೋಟಿ ರೂ. ನಷ್ಟವಾದರೂ ನನಗೆ ಚಿಂತಿಲ್ಲ.

ಶ್ರೀ- ಎರಡು ವರ್ಷಗಳಿಂದ ನೀವು ಇಲ್ಲಿ ಸುಲಿಗೆ ನಡೆಸಿದ್ದೀರಿ. ಅದರಿಂದ ನಿಮಗೇನೆ ಆದ ಹಾನಿ ಎಷ್ಟು ಎಂಬುದನ್ನು ಲೆಕ್ಕ ಹಾಕಿದ್ದೀರಾ? ಅನೇಕ ಸೈನಿಕರನ್ನೂ ಸೇನಾಪತಿಗಳನ್ನೂ ಕಳೆದುಕೊಂಡಿರಿ. ಇನ್ನೂ ಹತ್ತು ಕೋಟಿ ರೂ. ವೆಚ್ಚದ ಮಾತಾಡುತ್ತಾ ಇದ್ದೀರಿ. ಹಾಗೆ ಮಾಡಿದರೆ ಇಂಗ್ಲೀಷರು ಹೊರಟುಹೋಗುವರು ಅಥವಾ ಕರ್ನಾಟಿಕ್ ಪ್ರದೇಶವು ನಿಮ್ಮದಾಗುವದೆಂದು ತಿಳಿದಿದ್ದೀರಾ? ಇದು ಎಂದೆಂದೂ ನಿಮ್ಮಿಂದ ಆಗದ ಮಾತು ಎಂಬುದನ್ನು ಚೆನ್ನಾಗಿ ನೆನಪಿಟ್ಟುಕೊಳ್ಳಿ.

ಹೈ- ನನ್ನಿಂದ ಏನು ಆಗುವದೆಂಬುದನ್ನು ನಾನು ಮಾಡಿ ತೋರಿಸಿಯೇ ಇದ್ದೇನಲ್ಲ! ಪ್ರಸಂಗ ಬಂದರೆ ಮದ್ರಾಸನ್ನೂ ವಶಪಡಿಸಿಕೊಳ್ಳಬಲ್ಲೆ!

ಶ್ರೀ- ಇಂಥ ವಿಚಾರವೇಕೆ ಮಾಡುತ್ತೀರಿ? ಹಾಗೆ ಮಾಡಿದರೆ ಇಂಗ್ಲೀಷರು ಸುಮ್ಮನೆ ಬಿಡುವವರಲ್ಲ. ಯುರೋಪಿನಲ್ಲಿ ಸಹ ಅವರನ್ನು ಸೋಲಿಸುವ ಗಂಡರಿಲ್ಲ. ಆದಕಾರಣ ಅವರನ್ನು ಕೆಣಕುವದಕ್ಕೆ ಮೊದಲು ತುಸು ವಿಚಾರ ಮಾಡಿರಿ. ನೀವು ದೊಡ್ಡ ಸೀಮೆಯ ಸರದಾರರಿದ್ದೀರಿ. ನಿಮ್ಮ ಹೆಸರು ನಿಮ್ಮ ಪೀಳಿಗೆಯವರಲ್ಲಿ ಉಳಿಯುವಂತೆ ಆಗಬೇಕಾದರೆ, ಇಂಗ್ಲೀಷರೊಡನೆ ವೈರ ಕಟ್ಟಿಕೊಳ್ಳುವ ಧೋರಣೆ ನಿಮಗೆ ಮಾರಕವಾಗುವುದು.

ಹೈ- ಇಂಗ್ಲೀಷರೊಡನೆ ಸ್ನೇಹದಿಂದಿರುವುದು ನನಗೆ ಖಂಡಿತವಾಗಿ ಬೇಕಾಗಿದೆ. ಆದರೆ ಅವರು ಹಾಗೆ ವರ್ತಿಸದಿದ್ದರೆ ಅವರ ವೈರತ್ವ ಕಟ್ಟಿಕೊಳ್ಳುವದಕ್ಕೆ ನಾನು ಸಿದ್ಧನೇ. ಅವರಿಗೆ ಆ ಕುರಿತು ನಿಷೆ ಇಲ್ಲ.

ಶ್ರೀ-ಹಾಗೇನಿಲ್ಲ. ಎಲ್ಲ ಭಿನ್ನಾಭಿಪ್ರಾಯಗಳನ್ನು ತೊಡೆದು ಹಾಕಿ, ನಿಮ್ಮಂಥ ಸರದಾರರೊಟ್ಟಿಗೆ ಸ್ನೇಹದಿಂದಿರುವದರ ಬಗ್ಗೆ ನಮ್ಮ ಸಾಹೇಬರಿಗೆ ಅತ್ಯಂತ ಆಸಕ್ತಿ ಇದೆ.

ಹೈ- ಆದರೆ ಹಿಂದಿನ ಒಪ್ಪಂದದಲ್ಲಿಯ ಯಾವೊಂದು ಕರಾರನ್ನೂ ಅವರು ಪೂರೈಸಲಿಲ್ಲ. ಈಗ ಬಗೆಹರಿಸಬೇಕೆಂದರೆ ಏನು ಮಾಡಲಾದೀತು? ಕಂಪೆನಿ ಜನರಲ್ಲಿ ಸತ್ಯ ಬುದ್ಧಿ ಇಲ್ಲ. ಮಾಡಿಕೊಂಡ ಕರಾರನ್ನು, ಕೊಟ್ಟ ವಚನವನ್ನು ಅವರು ಪಾಲಿ

* ಈತ Schwartz ಎಂಬ ಪಾದ್ರಿ.

ಶಿಯಾರೆಂಬ ವಿಶ್ವಾಸ ಹೊರಟು ಹೋಗಿದೆ.

ಶ್ರೀ– ಕರಾರನ್ನು ಪೂರೈಸಿಲ್ಲ– ಎಂದು ಮೇಲಿಂದ ಮೇಲೆ ಹೇಳ್ತಾ ಇರ್‍ತೀರಿ? ಯಾವುದು? ಸ್ವಲ್ಪ ಹೇಳಿ ನೋಡೋಣ? ಹಾಗೆ ನೋಡಿದರೆ ಕರಾರು ಭಂಗ ನಿಮ್ಮಿಂದಲೇ ಹೆಚ್ಚಾಗಿ ಆಗಿದೆ. ನೀವು ಗುತ್ತಿಯ ಮುರಾರಿರಾವ್* ಅವರ ವಿರುದ್ಧ ಏನೂ ಮಾಡಬಾರದೆಂದು ಕರಾರು ಇದ್ದಿತು. ಆದರೆ ಅವನನ್ನು ನಿರ್ನಾಮ ಮಾಡಿದಿರಿ.

ಹೈ– ಆ ಒಪ್ಪಂದದಲ್ಲಿ ಮುರಾರಿರಾಯನ ಹೆಸರು ಒಂದೇ ಇದ್ದಿತೆ? ಪೇಶ್ವೆಯವರದೂ ಇತ್ತು. ಇಂಗ್ಲೀಷರು ತಂಜಾವೂರಿನ ರಾಜನ ಉಸಾಬರಿಗೆ ಹೋಗಬಾರದೆಂದಿತ್ತು. ಆದರೆ ನೀವು ಏನೆಲ್ಲ ಮಾಡಿದಿರಲ್ಲ!

ಶ್ರೀ– ತಂಜಾವೂರಿನ ಬಗ್ಗೆ ನೀವೇಕೆ ಕಾಳಜಿ ಮಾಡಬೇಕು? ಆ ರಾಜನು ಇಂಗ್ಲೀಷರ ಕೈ ಕೆಳಗಿದ್ದಾನೆ. ಅವರಿಗೆ ನಜರಾಣೆಯನ್ನೂ ಕೊಡುತ್ತಾನೆ.

ಹೈ– ಅದರಂತೆಯೇ ಮುರಾರಿರಾಯನು ನನ್ನ ಕೈಕೆಳಗಿನವ! ನನಗೆ ಹೇಗೆ ಬೇಕೊ ಹಾಗೆ ಅವನೊಂದಿಗೆ ನಡೆದುಕೊಂಡಿದ್ದೇನೆ.

ಶ್ರೀ– ನೀವು ಹೀಗೆಯೇ ಸಂಭಾಷಣೆ ಮುಂದುವರಿಸಿದರೆ ಏನೂ ಪ್ರಯೋಜನವಾಗಲಾರದು. ಪ್ರಕೃತ ನಮ್ಮ–ನಮ್ಮಲ್ಲಿ ಸ್ನೇಹವನ್ನು ಹೇಗೆ ಕಾಯ್ದುಕೊಳ್ಳಬೇಕೆಂಬುದನ್ನು ಪರಿಶೀಲಿಸೋಣವೆ?

ಹೈ– ಆಗಲಿ. ನಿಮ್ಮ ಜನರಲ್ಲನ ಪತ್ರದ ಪ್ರಕಾರ ನೀವು ಇನ್ನೂ ಹಲವು ವಿಷಯಗಳನ್ನು ಮುಖತಃ ತಿಳಿಸಲಿದ್ದೀರಂತೆ. ಏನದು?

ಶ್ರೀ– ಮಹಮ್ಮದ ಉಸ್ಮಾನನ (ಓರ್ವ ವಕೀಲ) ಮುಖಾಂತರ ನಮ್ಮ ಸಾಹೇಬರು ಏನನ್ನೋ ಹೇಳಿ ಕಳಿಸಿದ್ದರಂತಲ್ಲ? ಆ ಕುರಿತು ವಿಚಾರಿಸಲು ನನಗೆ ಹೇಳಿದ್ದಾರೆ.

ಹೈ– ತ್ರಿಚನಾಪಳ್ಳಿ ಹಾಗೂ ಮಧುರೆಗಳನ್ನು ಹಣ ಪಡೆದು ಇಂಗ್ಲೀಷರು ಬಿಟ್ಟುಕೊಡಬೇಕೆಂದು ಕರಾರು ಆಗಿತ್ತು. ನನ್ನ ಕಡೆ ಪಾವತಿಗಳಿವೆ. ನೀವು ನೋಡಬಹುದು.

ಶ್ರೀ– ಕಳೆದ ಬಾರಿ ಮಾಡಿಕೊಂಡ ಒಪ್ಪಂದದಲ್ಲಿ ಈ ವಿವಾದವನ್ನೇಕೆ ಬಗೆಹರಿಸಲಿಲ್ಲ?

ಹೈ–ಮುಂದೆ ಪರಿಸ್ಥಿತಿ ನೋಡಿಕೊಂಡು ಮಾಡುವಾ ಅಂತಿದ್ದೆ.

ಶ್ರೀ– ಆಗ ಕೈಗೂಡದಿದ್ದುದನ್ನು ಈಗ ಮುಗಿಸಲು ಹೇಗೆ ಸಾಧ್ಯ? ವಿವಾದವನ್ನು ಹುಟ್ಟಿಸುವುದಕ್ಕಾಗಿಯೇ ಇದರ ಪ್ರಸ್ತಾಪವಾಗುವುದಿಲ್ಲವೆ?

ಹೈ– ನಾನೇನು ಈಗ ತ್ರಿಚನಾಪಳ್ಳಿ, ಮಧುರೆಗಳನ್ನು ಕೇಳುತ್ತಿಲ್ಲ. ದಿಂಡಿಗಲ್ ಮತ್ತು ತ್ರಿಚನಾಪಳ್ಳಿ ಗಡಿ ವಿವಾದವನ್ನು ಬಗೆಹರಿಸಬಂದೀತು. ಅದಲ್ಲ–

ಶ್ರೀ–ಹಾಗಾದರೆ ಸರಿ. ಈ ವಿಚಾರವಾಗಿ ನೀವು ಕೇಳಿಕೊಳ್ಳಬೇಕಾದ್ದನ್ನು ಕಾಗದದಲ್ಲಿ ಬರೆದು ಕೊಡಿ. ನಮ್ಮ ಸಾಹೇಬರಿಗೆ ತೋರಿಸುವೆ.

ಹೈ– ಹಾಗೇ ಆಗಲಿ. ಜೊತೆಗೆ ತ್ರಿಚನಾಪಳ್ಳಿ ಮತ್ತು ಮಧುರೆಯ ಬಗ್ಗೆ ಆದ ಒಪ್ಪಂದದ ಕಾಗದವನ್ನೂ, ಹಣಸಂದಾಯದ ಪಾವತಿಗಳನ್ನು ಸಹ ಕೊಡುವೆನು.

ಶ್ರೀ– ಅಲ್ಲರೀ. ಅವುಗಳಿಂದ ಏನು ಪ್ರಯೋಜನ? ಅವರಲ್ಲಿಯೂ ಅದರ ಪ್ರತಿಗಳು ಇದ್ದೇ ಇವೆ.

ಹೈ– ಅವರಲ್ಲಿದ್ದವುಗಳು ನಕಲೀ ಕಾಗದಗಳು. ತಮಗೆ ಅನುಕೂಲವಾಗುವಂತೆ ಬರಕೊಂಡಿದ್ದಾರೆ! ಮೂಲದ ಮುದ್ರೆ ತೆಗೆದು ಬೇರೆ ಅಂಥದೇ ಒತ್ತಿಕೊಂಡಿದ್ದಾರೆ. ಅದನ್ನು ನಾನು ಒಪ್ಪಬೇಕೆ?

ಶ್ರೀ– ಹಾಗೆಂದಾದರೂ ಮಾಡಲು ಸಾಧ್ಯವೆ? ಎಲ್ಲಾದರೂ ಹೀಗೆ ನಡೀತದೆಯೆ? ಆ ರೀತಿ ನೀವು ಸಂಶಯ ವ್ಯಕ್ತಮಾಡುವದಾದರೆ ನಿಮ್ಮಲ್ಲಿರುವ ಒಪ್ಪಂದದ ಕಾಗದಗಳನ್ನೂ ಹಾಗೇ ಭಾವಿಸಬಹುದಲ್ಲ!

ಹೈ– ರ್‍ರೀ, ನನ್ನ ಬಳಿ ಇರೋ ಕಾಗದಗಳ ಮೇಲೆ ಅರ್ಕಾಟಿನ ನವಾಬ್ ಮಹಮ್ಮದ ಅಲಿಯವರ, ನಿಮ್ಮ ಗವರ್ನರ್ ಸ್ಯಾಂಡರ್ಸ್ ಅವರ ಸ್ವಹಸ್ತ ಸಹಿ ಇದೆ.

ಶ್ರೀ– ಪೇಶ್ವೆಯವರು ಮತ್ತು ಇಂಗ್ಲೀಷರ ನಡುವೆ (ಸಾಲ್ಬಾಯಿಯಲ್ಲಿ) ಒಪ್ಪಂದವಾಗಿದ್ದು, ಅದರಲ್ಲಿ ನಿಮ್ಮ ಪ್ರಸ್ತಾಪ ಇದೆ.

ಹೈ– ಅದರ ಪ್ರತಿ ತಂದಿದ್ದೀರಾ?

ಶ್ರೀ–ಇಂಗ್ಲೆಂಡಿನಲ್ಲಿದ್ದ ಅದರ ಪರ್ಶಿಯನ್

---

* ಈತ ಮೊದಲಿನಿಂದಲೂ ಇಂಗ್ಲೀಷರ ಆಶ್ರಯವನ್ನು ಹೊಂದಿದ್ದವ.

ಭಾಷಾ ಪ್ರತಿಯೊಂದನ್ನು ಹಡಗದಲ್ಲಿ ಕಳಿಸಲಾಗಿತ್ತು. ಆದರೆ ಆ ಹಡಗು ಕಾಣೆಯಾಯಿತು. ಇನ್ನೊಂದು ಪ್ರತಿ ಇಂಗ್ಲೀಷ್‌ನಲ್ಲಿ ಇದೆ. ಅದರ ಭಾಷಾಂತರದಲ್ಲಿ ಹೆಚ್ಚು ಕಡಿಮೆಯಾಗಿರಬಹುದು. ಅವಕಾರಣ ಪರ್ಶಿಯನ್ ಪ್ರತಿಗಾಗಿ ಮತ್ತೆ ಹೇಳಿ ಕಳಿಸಲಾಗಿದೆ. ಅದರ ಮುಖ್ಯ ಮುದ್ದೆಯೆಂದರೆ ನೀವು ಕರ್ನಾಟಿಕ್ ಪ್ರದೇಶದಿಂದ ಹೊರಟುಹೋಗಬೇಕು, ಎಲ್ಲ ಬಂದಿಗಳನ್ನು ಬಿಡುಗಡೆ ಮಾಡಬೇಕು ಹಾಗೂ ಇನ್ನು ಮುಂದೆ ಇಂಗ್ಲೀಷರೊಡನೆ, ನೆರೆಯವರೊಡನೆ ಜಗಳ ಬಿಡಬೇಕು. ಬೇರೆ ಹಲವಾರು ಸಂಸ್ಥಾನಿಕರು ಇಂಗ್ಲೀಷರೊಡನೆ ಸ್ನೆಹ ಮಾಡಿಕೊಂಡು ಇದ್ದಾರೆ. ಈ ಸಂಸ್ಥಾನಿಕರೊಡನೆಯೂ ನೀವು ಶಾಂತಿಯುತವಾಗಿ ನಡೆದುಕೊಳ್ಳಬೇಕು. ಇದೇ ಮೊದಲಾದ ವಿಷಯುಗಳು ನಿಮಗೆ ಸಂಬಂಧಿಸಿದಂತೆ, ಅದರಲ್ಲಿವೆ.

ಹೈ– ಹೀಗೋ ನಾನು ಎಷ್ಟೊ ಭಾಗಿಯಾಗದೇ, ನಿಮ್ಮ ಮನೆಯಲ್ಲಿಯೇ ಕುಳಿತುಕೊಂಡು, ನಿಮಗೆ ಬೇಕು ಬೇಕಾದಂತೆ ಕರಾರುಗಳನ್ನು ಹಾಕಿದ ಈ ಒಪ್ಪಂದಕ್ಕೆ ಅದಾವ ಬೆಲೆಯನ್ನು ನಾನು ಕೊಟ್ಟೇನು! ಇದರಿಂದ ನನಗೆ ಏನಾಗಬೇಕಾಗಿದೆ? ಈ ಕರಾರುಗಳನ್ನು ಹಾಕಿದವರಾದರೂ ಯಾರು?

ಶ್ರೀ– ಪೇಶ್ವೆಯವರೊಂದಿಗೆ ನಡೆದ ಒಪ್ಪಂದವಿದು.

ಹೈ–ನಾನು ಅದಕ್ಕೆ ಕವಡಿಯ ಬೆಲೆಯನ್ನೂ ಕೊಡಲಾರೆ. ನಿಮ್ಮ ಪೈಕಿಯವರು ಯಾರೆಂಬುದೂ ಗೊತ್ತು. ಬಂಗಾಲದ ಮಿಸ್ಟರ್ ಎಂಡರ್ಸನ್ ಸಿಂಡಿಯಾಕ್ಕೆ ಹೋಗಿ, ಪೇಶ್ವೆಗೆ ಸಲಾಮು ಹಾಕಿ, ಏನೆಲ್ಲ ಬರೆಸಿಕೊಂಡಿರಬೇಕು.- ನಾನು ಅದನ್ನು ಮನ್ನಿಸಬೇಕೆ? ಇವತ್ತಿಗೂ ಪೇಶ್ವೆ ಇದರ ಬಗ್ಗೆ ನನ್ನೊಡನೆ ಚಕಾರವೆತ್ತಲಿಲ್ಲ. ಅದರಲ್ಲಿ ತಥ್ಯಾಂಶವಿದ್ದಿದ್ದರೆ, ಪೇಶ್ವೆಯವರು ನನಗೆ ಖಂಡಿತವಾಗಿ ತಿಳಿಸುತ್ತಿದ್ದರು. ಕೋಟಿಗಟ್ಟಲೆ ರೂಪಾಯಿ ಈ ಯುದ್ಧದಲ್ಲಿ ಸುರಿಸಿದ್ದೇನೆ. ಎರಡು ವರ್ಷ ಇಲ್ಲಿ ಒದ್ದಾಡಿದ್ದೇನೆ. ಈಗ ನಾನು ನಿಮ್ಮ ಜನರನ್ನೆಲ್ಲ ಬಿಡುಗಡೆ ಮಾಡಿ ಏನೂ ಇಲ್ಲದೆ ಕುರಿಯ ಹಾಗೆ ತಲೆ ತಗ್ಗಿಸಿಕೊಂಡು ಹೊರಟುಬಿಡಬೇಕೇ? ಯಾರೊಡನೆ ಮಾತಾಡುತ್ತಿದ್ದೀರಿ ಎಂಬುದು ಗಮನದಲ್ಲಿರಲಿ!

ಶ್ರೀ– ವಿಷಯ ಹಾಗಲ್ಲ. ಮರಾಟರು ಇಂಗ್ಲೀಷರೊಡನೆ ಸ್ನೇಹದ ಒಪ್ಪಂದ ಮಾಡಿಕೊಂಡಿದ್ದಾರೆ. ಅದು ಕೈಗೂಡಬೇಕಾದರೆ, ನಿಮ್ಮ, ಇಂಗ್ಲೀಷರ ತಿಕ್ಕಾಟ ಬಗೆಹರಿಯಬೇಕು. ನಿಮ್ಮ ಅನುಮತಿಯಿಲ್ಲದೆ, ಅಥವಾ ತಿಳಿಸದೇನೆ ಪೇಶ್ವೆಯವರು ಅದೆಂತು ಮುಂದುವರಿದಾರು? ನಿಮ್ಮ ಬಳಿ, ಅದರ ಪ್ರತಿಯೊಂದು ಗುಪ್ತವಾಗಿ ಬಂದಿರಲೇಬೇಕು. ಹೀಗೆ ಹೇಳುವೆನೆಂಧು ಸಿಟ್ಟಿಗೆ ಬರಬೇಡಿ.

ಹೈ– ಇದು ನೋಡ್ರಿ. ನಿಜವಾಗ್ಲೂ ನನಗೆ ಈ ವಿಷಯ ಗೊತ್ತಿಲ್ಲ. ಆದ್ರೆ ಇದಕ್ಕೂ ಮುಂಚೆ ಮರಾಟರಿಗೂ ನನಗೂ ಆಗಿದ್ದ ಒಡಂಬಡಿಕೆ ಏನೆಂದು ಗೊತ್ತೆ?

ಶ್ರೀ– ಇಲ್ಲ. ಹೇಳಿ.

ಹೈ– "ನಾವು ಬಂಗಾಲದಲ್ಲಿ ಅವರ 'ಯೋಗಕ್ಷೇಮ' ತಗೊಳ್ಳುತ್ತೇವೆ. ನೀವು ಕರ್ನಾಟಿಕದಿಂದ ಅವರನ್ನು ಹೊಡೆದೋಡಿಸಬೇಕು" ಇದು ಪೇಶ್ವೆ ನಮಗೆ ಹೇಳಿದ್ದುದು. ಈ ಕರ್ನಾಟಿಕ್ ಭಾಗದಲ್ಲಿ ಇಂಗ್ಲೀಷರ ಹೆಸರೇ ಉಳಿಯುವುದಿಲ್ಲ ನೋಡುತ್ತಿರಿ. ಆ ಕಾಗದವನ್ನು ನೀವು ನೋಡಬಯಸಿದರೆ, ಬೇಕಾದರೆ ತರಿಸಿಕೊಂಡು ತೋರಿಸುವೆ. ಅಲ್ಲದೆ ಭೋಸ್ಲೆಯವರಿಂದಲೂ ಒಂಧು ಕಾಗದ ಬಂದಿದ್ದು, ಅವರು ಬಂಗಾಲದ ಕಡೆಗೆ ಹೋಗಲಿದ್ದಾರಂತೆ. ನೀವು ಹೇಳುವಂತೆ ಪೇಶ್ವೆ ಮತ್ತು ಇಂಗ್ಲೀಷರ ನಡುವೆ ಒಪ್ಪಂದವೇ ಆಗಿದ್ದರೆ ಇದು ಸಾಧ್ಯವಿತ್ತೆ? ಬೇಕಾದರೆ ಇಪ್ಪತ್ತು ಸಾವಿರ ಸೈನಿಕರನ್ನು ಕೊಡು ಎಂದು ಪೇಶ್ವೆಯವರಿಗೆ ಕೇಳಿರಲ್ಲ! ಬರಲಿ ಇಲ್ಲಿಗೆ.

ಶ್ರೀ– ಬೇರೆಯವರಿಂದ ಈ ರೀತಿ ಸಹಾಯ ಪಡೆಯಲು, ಇಂಗ್ಲೀಷರ ಬಳಿ ಸೈನ್ಯಬಲವಿಲ್ಲವೆಂದು ತಿಳಿದಿದ್ದೀರೋ ಹೇಗೆ? ನವಾಬರೇ, ನಾನು ನಿಮಗೆ ಇನ್ನೊಮ್ಮೆ ವಿನಂತಿಸುತ್ತೇನೆ. ಈ ಧಾಟಿಯ ಮಾತಿನಿಂದ ಏನೂ ಪ್ರಯೋಜನವಿಲ್ಲ. ಇಂಗ್ಲೀಷರು ಮತ್ತು ಪೇಶ್ವೆಯವರ ನಡುವೆ ಒಡಂಬಡಿಕೆ ಆದದ್ದು ನಿಶ್ಚಿತ. ಅವರನ್ನು ಒಳ ಹಾಕಿಗೊಂಡ ಮೇಲೆ ಇಂಗ್ಲೀಷರಿಗೆ ಈ ಕರ್ನಾಟಿಕದ ಸಮಸ್ಯೆ ಬಗೆಹರಿಸುವುದು ಅಸಾಧ್ಯವಲ್ಲ. ಅದಕ್ಕೆ ಮುಂಚೆಯೂ ಕೂಡ ನಿಮ್ಮೊಡನೆ ಘರ್ಷಣೆಯನ್ನು ಸುಲಭವಾಗಿ

ಬಗೆಹರಿಸಿಕೊಳ್ಳಬಹುದಿತ್ತು.

ಹೈ– ನೀವು ನಿಜಾಮರೊಂದಿಗೆ ಒಪ್ಪಂದ ಮಾಡಿಕೊಂಡು ೧೩ ವರ್ಷಗಳಾದುವು. ರಾಜ ಮಹೇಂದ್ರಿ ಮತ್ತು ಛಿಕಾಕೊಲ(?)ಗಳ ಗಡಿಪ್ರದೇಶವನ್ನು ನೀವೇ ಇಟ್ಟುಕೊಂಡಿರಿ. ಅದರ ಹಣವನ್ನು ತಿರುಗಿ ಮುಟ್ಟಿಸಲಿಲ್ಲ. ಅವರ ಪ್ರದೇಶವನ್ನಾದರೂ ಹಿಂತಿರುಗಿಸಬೇಕಿತ್ತು. ಇಂಗ್ಲೀಷರ ವ್ಯವಹಾರವೆಲ್ಲ ಮೋಸದ್ದು. ಅವರನ್ನು ನಂಬುವುದುಂಟೆ.

ಶ್ರೀ– ಮೋಸದ ವ್ಯವಹಾರವನ್ನು ನಿಮ್ಮ ಮಿತ್ರರಾದ ಫ್ರೆಂಚರು, ಇತರ ಯುರೋಪಿಯನ್ನರು ಮಾಡುತ್ತಾರಲ್ಲದೆ ಇಂಗ್ಲೀಷರಲ್ಲ. ಅವರೆಂದೂ ಈ ಹಿಂದೆ ವಂಚನೆ ಮಾಡಲಿಲ್ಲ. ಇಷ್ಟೇ ಅಲ್ಲ. ಬೇರೆಯವರು ಮೋಸಗಾರಿಕೆಯನ್ನು ತೋರಿದರೆ, ಅದನ್ನು ಉದಾರ ಬುದ್ಧಿಯಿಂದ ಸಹಿಸಿ ಕೊಳ್ಳುತ್ತಾರೆ. ಮೈಮೇಲೆ ಬಂದರೆ ಮಾತ್ರ ಪ್ರತೀಕಾರವನ್ನು ವ್ಯಕ್ತಪಡಿಸುತ್ತಾರೆ.

ಹೈ– ಶಾಂತಿಯುತ ಒಡಂಬಡಿಕೆ ಅವರಿಗೆ ಇಷ್ಟವಿದ್ದರೆ, ಅದನ್ನು ಬೇಗ ಮಾಡಿತೋರಿಸಲಿ, ಇಲ್ಲವಾದರೆ ನಾನೇ ಅದನ್ನು ಬಗೆಹರಿಸುವೆ–ವರ್ಷಾರು ತಿಂಗಳಲ್ಲಿ! ಈ ಪ್ರದೇಶವನ್ನೆಲ್ಲ ಕೊಳ್ಳೆ ಹೊಡೆದು ಸುಟ್ಟು ಹಾಕುವೆ. ನಿಮ್ಮ ಕೈಯಿಂದ ಏನಾಗುವದೋ ಮಾಡಿತೋರಿಸಿ. ಕೆಲ ವರ್ಷಗಳ ಹಿಂದೆ ನಿಜಾಮು, ಪೇಶ್ವೆಯವರ ಸಹಾಯದಿಂದ ಇಂಗ್ಲೀಷರೂ ನನ್ನ ಮೇಲೆ ಯುದ್ಧ ಹೂಡಿದರು. ಅದರಿಂದ ಏನು ಸಾಧಿಸಿದರು? ಅವರ ಸಂಯುಕ್ತ ಸೈನ್ಯಗಳು ತಂತಮ್ಮ ಊರುಗಳಿಗೆ ಹಿಂತಿರುಗಿದುವು.

ಶ್ರೀ– ನಾನು ಆಗಲೆ ಹೇಳಿದಂತೆ ಇಂಗ್ಲೀಷರಿಗೆ ಬೇರೆಯವರ ಸಹಾಯದ ಅಗತ್ಯವಿಲ್ಲ. ಈಗೂ ಅವರಿಗೆ ಬೇಡ. ನೀವಾಗಿಯೇ ಜಗಳ ಕಾಯ್ತಾ ಇದ್ದೀರಿ. ದೊಡ್ಡದನ್ನು ಸಾಧಿಸುವುದಾಗಿ ಭಾವಿಸಿದ್ದೀರಿ. ನಿಮಗೆ ಆ ಧೈರ್ಯ ಬಂದದ್ದರ ಕಾರಣ ನಮಗೆ ಚೆನ್ನಾಗಿ ಗೊತ್ತು. ಆ ಫ್ರೆಂಚರಲ್ಲಿ ನೀವು ವಿಶ್ವಾಸವಿಟ್ಟಿದ್ದೀರಿ. ಈ ಹಿಂದೆ ಚಂದಾಸಾಹೇಬನು ಫ್ರೆಂಚರನ್ನು ಅವಲಂಬಿಸಿ ತುಂಬಾ ಹಾರಾಡಿದ. ಏನು ಸಾಧಿಸಿದನೆಂದು ನಿಮಗೆ ಗೊತ್ತೇ ಇದೆ.

ಹೈ– ಚಂದಾಸಾಹೇಬನು ನಿರ್ಗತಿಕನಿದ್ದ! ನಾನು ಬೇಕೆಂದರೆ ಹತ್ತು ಕೋಟಿ ರೂಪಾಯಿಗಳನ್ನು ಖರ್ಚುಮಾಡಬಲ್ಲೆ. ಈ ಪ್ರದೇಶದಲ್ಲೇ ಗಳಿಸಿದ ಹಣವದು! ಅದರ ಸಂಪಾದನೆಯಲ್ಲಿ ನನಗೆ ಫ್ರೆಂಚರೇನು ನೆರವಾಗಿದ್ದಾರೆಯೆ? ಅವರು ಈಚೆಗೆ ಮಾತ್ರ ಇತ್ತ ಕಡೆ ಬಂದಿದ್ದಾರೆ. ನಾನೇನು ಅವರ ಸಹಾಯ ಕೇಳಲಿಲ್ಲ. ನನ್ನ ನಿಮಿತ್ತದಿಂದಾಗಿ ಅವರೇನು ಇಲ್ಲಿಗೆ ಬಂದಿಲ್ಲ.

ಶ್ರೀ– ನೀವೂ ಅವರೂ ಮಿತ್ರರೆಂಬುದು ಸುಳ್ಳೆ? ಅವರೊಂದಿಗೆ ಹಲವಾರು ವ್ಯವಹಾರಗಳನ್ನು ಮಾಡಿಯೆ ಇದ್ದೀರಿ. ಅದೆಲ್ಲ ಇಂಗ್ಲೀಷರಿಗೆ ಗೊತ್ತಾಗದೇ ಇಲ್ಲ. ಅವರು ನಿಮ್ಮೆಲ್ಲರದೂ 'ಯೋಗಕ್ಷೇಮ'ವನ್ನು ಚೆನ್ನಾಗಿ ತಗೊಳ್ಳಬಲ್ಲರು.

ಹೈ– ಹೀಗೋ? ೪೦–೫೦ ಫ್ರೆಂಚ್ ಮತ್ತು ಡಚ್ ಹಡಗುಗಳು ಮದ್ರಾಸಿಗೆ ಬರುತ್ತಲಿವೆ. ಅವರು ಇಂಗ್ಲೀಷರನ್ನು ಸಮುದ್ರದ ಮೇಲೆ ಎದುರಿಸುವರು. ನಾನು ಭೂಪ್ರದೇಶದ ಮೇಲೆ ಮುನ್ನುಗ್ಗುವೆ. ಆಗ ಮದ್ರಾಸನ್ನು ಉಳಿಸಿಕೊಳ್ಳುವದು ನಿಮಗೆ ದುಸ್ತರವಾಗುವದು.

ಶ್ರೀ– ೪೦–೫೦ ಹಡಗುಗಳು ಯುರೋಪಿನಿಂದ ಇತ್ತಕಡೆಗೆ ಹೊರಟಿದ್ದರೆ, ಅದರ ಎರಡು ಪಟ್ಟು ಹಡಗಗಳು ಇಂಗ್ಲಂಡಿನಿಂದ ಬೆಂಬತ್ತಿ ಬರುವವು.

ಹೈ– ಆ ಹಡಗುಗಳು ಬಂದರೆ ನೆಲದ ಮೇಲೆ ಯುದ್ಧಮಾಡುತ್ತಿರುವ ನನಗೇನೂ ಮಾಡಲಾರವು!

ಶ್ರೀ– ಮುಂದೇನಾಗುವುದೆಂಬುದು ದೇವರಿಗೆ ಮಾತ್ರ ಗೊತ್ತು. ಇಂಗ್ಲೀಷರಿಗೆ ಎದುರು ನಿಂತ ಫ್ರೆಂಚರು ಅಪಾರ ಹಾನಿಗೊಳಗಾದರಲ್ಲ.

ಹೈ– ಏನು ಕೇಡಾಗಿದೆ ಅವರಿಗೆ? ಇಂಗ್ಲೀಷರೊಡನೆಯ ಮೊದಲ ಯುದ್ಧದಲ್ಲೇ ಅವರು ಶಾಂತ, ಎದ್ದ ನಿಮ್ಮ ಹಡಗುಗಳನ್ನು ವಶಪಡಿಸಿಕೊಂಡರು. ಎರಡನೆಯ ತಿಕ್ಕಾಟದಲ್ಲಿ ಎರಡು ಫ್ರೆಂಚ್ ಹಡಗುಗಳ ಪಟಸ್ತಂಭ ಮಾತ್ರ ಮುರಿದುಬಿದ್ದು ಹಡಗುಗಳು [illegible]. ಅವನ್ನು [illegible] ತಂದು ಲಿಲಾವು ಮಾಡಿದರು. ಎಲ್ಲಿದೆ ಹಾನಿ ?

ಶ್ರೀ– ಅದೇನಾಯಿತೆಂಬುದಕ್ಕೆ ಇನ್ನು ೮–೧೦ ದಿನ ತಡೆಯಿರಿ. ತಾನೇ ಗೊತ್ತಾಗುವದು. ಅವ [illegible]

ಇಂಗ್ಲೀಷರಿಗೆ ಸರಿ ಬಂದಿಲ್ಲ.

ಹೈ– ಅದರಿಂದ ಇಂಗ್ಲೀಷರಿಗಾದ ಹಾನಿಯೇನು? ಕಡಪಾಕ್ಕೂ ಅವರಿಗೂ ಏನು ಸಂಬಂಧ?

ಶ್ರೀ– ಅದರಂತೆ ನೀವು ಬಿದನೂರು ಮತ್ತು ನೆರೆಯ ಪ್ರದೇಶಗಳನ್ನೂ ಪಡೆದದ್ದು ಸರಿಯಲ್ಲ.

ಹೈ– ಯಾರು ಗಟ್ಟಿಗರೋ, ಅವರು ಪಡೀತಾರೆ.

ಶ್ರೀ– ಗಟ್ಟಿಗತನದಲ್ಲಿ ಇಂಗ್ಲೀಷರೇನೂ ಕಡಿಮೆಯಲ್ಲ. ಅವರೂ ಖುಶಿ ಬಂದಂತೆ ನಡೆದುಕೊಳ್ಳಬಲ್ಲರು.

೧೫ ಜುಲೈ ೧೭೮೨

ಶ್ರೀ– ನಿನ್ನೆಯದು ನಮ್ಮ ಮೊದಲ ಭೇಟಿ ಆದ್ದರಿಂದ ನಾನು ತುಸು ಔಪಚಾರಿಕವಾಗಿ ಮಾತನಾಡಬೇಕಾಯಿತು. ನೀವೋ ದೊಡ್ಡ ಸರದಾರರು. ದೇವರು ನಿಮಗೆ ಎಲ್ಲ ಬಗೆಯ ಅನುಕೂಲತೆ ಇತ್ತು ಅನುಗ್ರಹಿಸಿದ್ದಾನೆ. ನಾನೊ ನಮ್ಮ ಸರಕಾರದ ಒಬ್ಬ ಸೇವಕ. ಹಾಗಿದ್ದರೂ ನಿಮ್ಮ ಒಳಿತನ್ನೆ ಅಪೇಕ್ಷಿಸುವವನೆಂಬುದನ್ನು ನಮ್ರವಾಗಿ ಸೂಚಿಸಬಯಸುತ್ತೇನೆ. ನಾನು ಎಷ್ಟೆಂದರೂ ಕಡಿಮೆ ದರ್ಜೆಯವ. ನೀವು ದೊಡ್ಡವರು. ನಿಮ್ಮ ಮನಸ್ಸಿಗೆ ಯಾವುದು ಸೇರಲಿಕ್ಕಿಲ್ಲವೆಂಬುದನ್ನು ತಿಳಿಯಲಾರದ ಅಲ್ಪಮತಿಯು ನಾನು. ಆದ್ದರಿಂದ–

ಹೈ– ಚಿಂತೆಯಿಲ್ಲ. ನಿಮಗೆ ಹೇಳಬೇಕೆಂದು ತೋಚಿದ್ದನ್ನು ಹೇಳಬಹುದು–ಸಂಕೋಚವಿಲ್ಲದೆ.

ಶ್ರೀ– ಇಂಗ್ಲೀಷರೊಡನೆ ನಿಮ್ಮ ವೈರವನ್ನು ಮುಂದುವರಿಸುವದರಿಂದ ನಿಮಗೆ ಹಿತವಾಗುವುದಿಲ್ಲ. ಅವರೊಡನೆ–ಎಂಥದೇ ಆಗಲಿ, ಒಡಂಬಡಿಕೆ ಮಾಡಿಕೊಳ್ಳುವುದೇ ಒಳ್ಳೆಯದು. ಮೂಲತಃ ಇದು ಸಣ್ಣ ಜಗಳ. ಇದರಲ್ಲಿ ಸಿಕ್ಕಿಕೊಂಡು, ವರ್ಷಾರು ತಿಂಗಳನ್ನು ಇಲ್ಲಿ ಕಳೆದು, ನೀವು ಹೇಳುವಂತೆ ಹತ್ತಾರು ಕೋಟಿ ರೂಪಾಯಿಗಳನ್ನು ಸುರಿದು, ಯುದ್ಧವನ್ನು ಮುಂದುವರಿಸಿದರೆ ಕೊನೆಗೆ ಏನು ಸಾಧಿಸಿದಂತಾಯಿತೆಂಬುದನ್ನು ಆಲೋಚನೆ ಮಾಡಿರಿ. ನಿಮ್ಮ ಹಣ ಹೋದದ್ದಲ್ಲದೆ, ದೊಡ್ಡ ಸಂಖ್ಯೆಯಲ್ಲಿ ಸೈನಿಕರನ್ನೂ ಕುದುರೆಗಳನ್ನೂ ವೀರ ಸೇನಾನಿಗಳನ್ನೂ ಕಳೆದುಕೊಂಡಿರಿ. ನಿಮಗೆ ಅದಕ್ಕೆ ಪ್ರತಿಯಾಗಿ ದೊರೆತ ಲಾಭ ಎಷ್ಟು? ಇದನ್ನು ಹೀಗೇ ಮುಂದುವರಿಸಿದರೆ ನಿಮ್ಮ ಹಾನಿ ಬೆಳೆಯುತ್ತ ಹೋಗುವದಲ್ಲದೆ ಇದಕ್ಕೂ ಹೆಚ್ಚಿನ ಪ್ರದೇಶ, ಹೆಚ್ಚಿನ ದುಡ್ಡು ಸಿಗುವದೆಂದು ನೀವು ತಿಳಿದಿದ್ದರೆ ಅದು ನಿಮ್ಮ ಭ್ರಮೆಯೇ ಸೈ. ಇಂಗ್ಲೀಷರೊಡನೆ ಪೇಶ್ವೆಯವರು, ನಿಜಾಮರು, ಇತರ ಸಂಸ್ಥಾನಿಕರು ಸದ್ಯ ಸ್ನೇಹಮಾಡಿಕೊಂಡೇ ಇದ್ದಾರೆ. ಸೆಣಸಾಡುವದರಿಂದ ಪ್ರಯೋಜನವಿಲ್ಲವೆಂದು ಅವರು ಮನಗಂಡಿದ್ದಾರೆ. ಈಗ ನೀವೊಬ್ಬರೇ ಯುದ್ಧದಲ್ಲಿ ತೊಡಗಿದವರು! ಇದನ್ನು ನೀವೀಗ ನಿಲ್ಲಿಸದಿದ್ದರೆ, ಇಂಗ್ಲೀಷರು ಜೋರಿನಿಂದ ನಿಮ್ಮ ಮೇಲೆ ಬೀಳುವರು. ಬೇರೆಡೆ ಯುದ್ಧದ ಪ್ರಸಂಗವಿಲ್ಲದ್ದರಿಂದ ಅವರ ಸೈನ್ಯದ ತುಕಡಿಗಳು ಸದ್ಯ ಕೆಲಸವಿಲ್ಲದೆ ಇವೆ. ಇಷ್ಟೇ ಅಲ್ಲ, ಅವರಿಗೆಲ್ಲ ಆರ್ಡರ್ ಕಳಿಸಲಾಗಿದೆ. ನಾನು ನಿಜವನ್ನೇ ಹೇಳುತ್ತಿದ್ದೇನೆ. ಬೇಕಿದ್ದರೆ ಒಂದು ತಿಂಗಳು ತಡೆದು ನೋಡಿರಿ. ನಾನು ಹೇಳುವುದು ಸತ್ಯವೆಂದು ನಿಮಗೆ ಮನವರಿಕೆಯಾಗದಿರದು. ಆದಕಾರಣ ಯಾವದಾದರೂ ರೀತಿಯಲ್ಲೇ ಆಗಲಿ, ಒಡಂಬಡಿಕೆಯನ್ನು ಮಾಡಿಕೊಳ್ಳಿರೆಂದು ಬೇಡಿಕೊಳ್ಳುತ್ತಿದ್ದೇನೆ. ನಾನು ಮತ್ತೆ ಮತ್ತೆ ಹೀಗೆ ಹೇಳುವ ಕಾರಣವಿಷ್ಟೇ, ಸಮಗ್ರ ಮೈಸೂರು ದೇಶವು ನಿಮ್ಮನ್ನು ಅವಲಂಬಿಸಿದೆ. ಅಲ್ಲದೆ ಭವಿಷ್ಯದಲ್ಲಿ ನಿಮ್ಮ ಹೆಸರು ಉಳಿಯಬೇಕೆಂದು ನಾನು ಹಾರ್ದಿಕವಾಗಿ ಅಪೇಕ್ಷಿಸುತ್ತೇನೆ. ನಿಮ್ಮ ಹಾಗೂ ಇಂಗ್ಲೀಷರ ನಡುವೆ ಸ್ನೇಹಕ್ಕೆ ಸಂಬಂಧಿಸಿದ ಯಾವದೇ ವಿಷಯವನ್ನು ನನಗೆ ಹೇಳಿರಿ. ನಾನು ಅದನ್ನು ನಮ್ಮ ಸಾಹೇಬರ ಮುಂದಿಡುವೆ. ನಾನು ಅವರ ಮನಸ್ಸನ್ನು ಚೆನ್ನಾಗಿ ಬಲ್ಲೆ. ಜಗಳ ಬೆಳೆಸಬಾರದೆಂಬ ವಿಚಾರ ಅವರ ಮನದಲ್ಲಿ ಗಟ್ಟಿಯಾಗಿ ಇದೆ. ಜಗಳ ಬೆಳೆದದ್ದೇ ಆದರೆ ಪರಿಸ್ಥಿತಿಯನ್ನು ಹತೋಟಿಗೆ ತರಲು ತುಂಬಾ ಕಠಿಣವಾಗುವುದು.

ಹೈ– ಮುಗಿಯಿತೆ ನೀವು ಹೇಳುವುದು? ಇನ್ನೇನಾದರೂ ಇದೆಯೆ?

ಶ್ರೀ– ಸದ್ಯದ ಸ್ಥಿತಿಯನ್ನೂ ಮುಂದೆ ಆಗಬಹುದಾದ್ದನ್ನೂ ತಮಗೆ ನಿವೇದಿಸಿದ್ದೇನೆ. ನೀವು ಹೇಗೆ ಹುಕುಂ ಮಾಡುತ್ತೀರೋ ಹಾಗೆ ನಡೆಯುವೆ.

ಹೈ– ಇದು ನೋಡಿ, ನೀವು ನಿಮ್ಮ ಅಭಿಪ್ರಾಯವನ್ನು ಹೇಳಿದ್ದೀರಿ. ನಮಗೆ, ನಿಮಗೆ ತೋಚಿದ್ದನ್ನು

ಮಾಡುವುದಾದರೂ ಖುದಾನ ಮನಸ್ಸಿನಲ್ಲಿ ಏನಿದೆಯೋ ಹಾಗೇ ಆಗುತ್ತದಲ್ಲವೆ. ನನ್ನ, ಇಂಗ್ಲೀಷರ ಜಗಳ ಸಂಪೂರ್ಣ ನಿಲ್ಲಬೇಕು. ನಮ್ಮಲ್ಲಿ ಸ್ನೇಹ ಬೆಳೆಯಬೇಕು–ಎಂಬುದನ್ನು ನಾನಾದರೂ ಅತ್ಯಂತ ಹಾರ್ದಿಕವಾಗಿ ಬಯಸುತ್ತೇನೆ. ಇದರಲ್ಲಿ ಸಂಶಯವೇ ಇಲ್ಲ. ನಿಮ್ಮ ಸಾಹೇಬರ ಸದಿಚ್ಛೆಯ ಬಗ್ಗೆ ನನಗೂ ವಿಶ್ವಾಸವಿದೆ. ಆದರೆ ನಮ್ಮಿಬ್ಬರಲ್ಲಿ ಸ್ನೇಹ ಬೆಳೆಯಬೇಕಾದರೆ, ಅದು ನಿಮ್ಮ ಸಾಹೇಬರಿಂದ ಪ್ರಾರಂಭವಾಗಬೇಕು. ಅವರಿಗೆ ಸರಿಸಮಾನ ಯೋಗ್ಯತೆಯವರು ಈ ಇಂಗ್ಲೀಷರಲ್ಲಿ ತೀರ ಕಡಿಮೆ. ಅವರು ಕರ್ತೃತ್ವಶಾಲಿಗಳೂ ಕೊಟ್ಟ ವಚನವನ್ನು ಪಾಲಿಸಬಲ್ಲವರೂ ಆಗಿದ್ದಾರೆ. ಅವರ ಮುಖಾಂತರ, ಇಂಗ್ಲೀಷರ ಹಾಗೂ ನಮ್ಮ ನಡುವೆ ಮೈತ್ರಿಯುಂಟಾದರೆ ಅದು ಮುರುಗಡೆಯಾಗಲಾರದು. ಹಾಗಿರುವಾಗ ನಾನೇಕೆ ಒಡಂಬಡಿಕೆಗೆ ವಿಘ್ನ ತರಲಿ?

ಶ್ರೀ– ಹೀಗೆ ನೀವು ಮಾಡಿದ್ದಾದರೆ, ನಮ್ಮ ಜನರಲ್ ಅವರಿಗೆ ತುಂಬಾ ಖುಶಿಯಾಗುವದು. ನಿಮ್ಮೊಂದಿಗೆ ಶಾಶ್ವತ ಸ್ನೇಹ ಪಡೆಯಬೇಕೆಂದು ಅವರು ಇಚ್ಛಿಸುತ್ತಾರೆ. ಅದನ್ನು ಆಗಗೊಳಿಸುವದು ನಿಮ್ಮ ಕೈಯಲ್ಲೇ ಇದೆ.

ಹೈ– ನನ್ನ ಸ್ನೇಹವು ಪೇಶ್ವೆ, ನಿಜಾವರು ಬಗೆಯದೇನಲ್ಲ. ಪೇಶ್ವೆ ಹಾಗೂ ಇಂಗ್ಲೀಷರ ಸ್ನೇಹದ ಬಗೆ ಎಂಥದೆಂಬುದು ಇನ್ನು ನಾಲ್ಕೈದು ತಿಂಗಳಲ್ಲಿ ತಾನೇ ಗೊತ್ತಾಗುವುದು. ಮರಾಟರು ನಂಬಿಕೆಗೆ ಪಾತ್ರರಲ್ಲವೆಂಬುದನ್ನು ನನ್ನ ಅನುಭವದಿಂದಲೇ ಹೇಳಬಲ್ಲೆ. ಮರಾಟರು–ಇಂಗ್ಲೀಷರ ಒಪ್ಪಂದದ ಬಗ್ಗೆ ನೀವು ಹೇಳುತ್ತ ಇದ್ದೀರಾದ್ದರಿಂದ ನಾನಿದನ್ನು ಸ್ಪಷ್ಟಪಡಿಸುತ್ತಿದ್ದೇನೆ. ಅವರ ಸ್ನೇಹ ಬೂಟಾಟಿಕೆಯದು. ನನಗೆ ಅವರಿಂದ ಮೇಲಿಂದ ಮೇಲೆ ಪತ್ರಗಳು ಬರ್‍ತಾ ಇವೆ. ಬೇಕಾದರೆ ನೋಡಿರಿ. ನಿಜಾಮರ ಸ್ನೇಹವಾದರೂ ಇದೇ ಬಗೆಯದು. ಅದರ ಬಣ್ಣ ಬಯಲಾಗುವುದಕ್ಕೆ ಬಹಳ ದಿನಗಳೇನೂ ಬೇಡ. ೧೦ ಸಾವಿರ ಕುದುರೆ ಸವಾರರ ಸಹಾಯವನ್ನು ನಿಜಾಮರಿಗೆ ಕೇಳಿ ನೋಡಿರಿ. ಅವರು ಕೊಡುವವರಲ್ಲ. ಹಾಗಿದ್ದಾಗ ಅವರ ಸ್ನೇಹಕ್ಕೇನು ಬೆಲೆ?

ಶ್ರೀ– ಈ ಮಾತಿನ ಅಗತ್ಯವೇ ಇಲ್ಲ. ಯಾಕೆಂದರೆ ಇಂಗ್ಲೀಷರು ಇದುವರೆಗೆ ಅಂಥ ಸಹಾಯವನ್ನು ಯಾರಿಂದಲೂ ಅಪೇಕ್ಷಿಸಿಲ್ಲ. ಅವರ ಬಳಿ ಬೇಕಾದಷ್ಟು ಕುದುರೆಗಳಿದ್ದಾವೆ. ಇಲ್ಲಿಯ ಸಂಸ್ಥಾನಿಕರೇ ಅವರ ನೆರವನ್ನು ಕೇಳುತ್ತಾರಲ್ಲದೆ, ಇಂಗ್ಲೀಷರು ಅವರ ಸಹಾಯವನ್ನು ಕೇಳಿಲ್ಲ. ಅವರಿಗೆ ಯಥೇಚ್ಛವಾದ ಸಂಪತ್ತಿದೆ. ಸಾಮರ್ಥ್ಯವೂ ಇದೆ. ಇಷ್ಟೇ ಅಲ್ಲದೆ ಆರು ಸಾವಿರ ಇಂಗ್ಲೀಷ ಸೈನಿಕರೂ ಯುದ್ಧ ಸಾಮಾಗ್ರಿಯಿಂದ ತುಂಬಿದ ಅನೇಕ ಹಡಗುಗಳೂ ಹೊರಟಿದ್ದು ತಿಂಗಳೊಪ್ಪತ್ತಿನಲ್ಲಿ ಇಲ್ಲಿಗೆ ಬರಲಿವೆ.

ಹೈ– ನನಗಾದರೂ ಯಾವುದರ ಕೊರತೆಯಿದೆ? ಅವರಿಬ್ಬರ ಸ್ನೇಹದಂತೆ ನನ್ನ ಸ್ನೇಹವನ್ನು ತಿಳಿಯಲಾಗದೆಂದು ಹೇಳುತ್ತಿದ್ದೇನೆ, ಅಷ್ಟೇ.

ಶ್ರೀ– ಅಲ್ಲ, ಈ ಪ್ರದೇಶದಲ್ಲಿ ಯುದ್ಧ ಹೂಡಿ, ನೀವೇ ಇಂಗ್ಲೀಷರೊಡನೆಯ ಸ್ನೇಹವನ್ನು ಗಾಳಿಗೆ ತೂರಿದ್ದೀರಲ್ಲ. ಇನ್ನೊಬ್ಬರ ಉದಾಹರಣೆಯೇಕೆ?

ಹೈ– ಅದಕ್ಕೆ ಉತ್ತರ ಹೇಳಿಯೆ ಇದ್ದೇನೆ. ಹಿಂದೆ ಆದದ್ದಾಯಿತು. ಈಗ ಹೊಂದಾಣಿಕೆಯಾಗುವ ರೀತಿಯಲ್ಲಿ ಕಾರ್ಯಪ್ರವೃತ್ತರಾಗಿರಿ.

ಶ್ರೀ– ಪೇಶ್ವೆಯವರು ಇಂಗ್ಲೀಷರೊಡನೆ ಒಪ್ಪಂದಮಾಡಿಕೊಂಡಾಗಿದೆಯಲ್ಲ! ಹಾಗೇ ನೀವೂ ಮಾಡಿಕೊಂಡು ಇಲ್ಲಿಂದ ಹೊರಟುಹೋಗಬೇಕೆಂದು...

ಹೈ– ಅಂದರೆ ಒಪ್ಪಂದ ಮಾಡಿಕೊಂಡು ಅವರಂತೆ ಹಿಂದಿರುಗಬೇಕು? ಈ ಕರ್ನಾಟಕ ಪ್ರದೇಶವನ್ನು ಗೆದೆಯಲೆಂದು ಎರಡು ವರ್ಷಗಳ ಹಿಂದೆ ನಾನು ಸುಮ್ಮನೇ ಬರಲಿಲ್ಲ. ಈಗ ಬರಿಗೈಯಿಂದ ಹಿಂತಿರುಗಲೆ? ಅದಕ್ಕೆ ನಿಮ್ಮ ಒಪ್ಪಂದದ ಅಗತ್ಯವೇನಿಲ್ಲ, ತಿಳಿಯಿತೆ? ಇನ್ನು ಒಂದೆರಡು ವರ್ಷ ಇಲ್ಲಿದ್ದು, ಇತ್ಯರ್ಥ ಮಾಡುವೆ. ಈ ಹಿಂದೆ ಇಂಗ್ಲೀಷರು ನನ್ನ ಸೀಮೆಯಲ್ಲಿ ನನ್ನ ಪರಿವೆಯಿಲ್ಲದೆ ಅನಧಿಕೃತವಾಗಿ ಪ್ರವೇಶಿಸಿ ಹಾಳುಗೆಡವಿದರು. ಅದನ್ನೇ ನಾನು ಈಗ ಇಲ್ಲಿ ಮಾಡುತ್ತಿದ್ದೇನೆ. ಯಾವುದೊಂದು ರಾಜ್ಯವು ಸ್ವಾಧೀನವಾಗಬೇಕು ಮತ್ತು ಅದರಿಂದ ಆದಾಯ ಬರಬೇಕು ಎನುವುದು ಸಹಜ. ಆದರೆ ನೀವು ನೆಲ್ಲೂರನ್ನು ಹಾಳುಗೈದು ವಶಪಡಿಸಿಕೊಂಡಿರಿ. ಆದ್ದರಿಂದ [illegible]

ಪ್ರಾಪ್ತಿ ಇದೆಯೆ? ನಿಜ ಸಂಗತಿ ಎಂದರೆ, ಆದಾಯ ಬರುವುದು ನಮ್ಮ ನಮ್ಮ ರಾಜ್ಯದಿಂದಲೇ. ಈಗ ನಾನು ಈ ರಾಜ್ಯವನ್ನು ಸುಲಿದು ಸೂರೆಗೈಯುತ್ತಿರುವ ಕಾರಣ ನಿಮಗೆ ಗೊತ್ತಿದ್ದದ್ದೇ. ಇಲ್ಲಿಯ ಮಹಮ್ಮದ ಅಲಿಖಾನನು ತ್ರಿಚನಾಪಳ್ಳಿಯನ್ನು ಇಂಗ್ಲೀಷರಿಗೆ ಬಿಟ್ಟುಕೊಡುವ ಒಪ್ಪಂದವನ್ನು ನಿಮ್ಮ ಸ್ಯಾಂಡರ್ಸ್‌ನ ಸಂಗಡ ಮಾಡಿಕೊಂಡ. ಬೇಕಿದ್ದರೆ ಅದರ ಪ್ರತಿಯನ್ನು ಕೊಡುವೆ ಮತ್ತು ಮಹಮ್ಮದ ಉಸ್ಮಾನನ್ನು ಸಂಗಡ ಕಳುಹಿಸುವೆ. ಇದರ ಪ್ರತಿ ನಿಮ್ಮ ಕಂಪನಿಯವರ ಕಡೆಗೂ ಇದ್ದೇ ಇದೆ. ಅದನ್ನು ಚೆನ್ನಾಗಿ ಓದಿಕೊಳ್ಳಿರಿ. ಅಗತ್ಯ ಕಂಡರೆ ೨–೩ ತಿಂಗಳು ಮಾತ್ರವೇ ನಾನು ಇಲ್ಲಿ ಉಳಿಯಬಹುದು. ಹಾಗೆಂದು ಬಂಗಾಲದಲ್ಲಿರುವ ಮುಖ್ಯ ಕಚೇರಿಗೆ ತಿಳಿಸಿರಿ. ನಿಮ್ಮ ಅಧಿಕಾರಿಗಳು ಬೇಕಿದ್ದರೆ ಚರ್ಚಿಸಲಿ. ಮಹಮ್ಮದ ಅಲಿಯು ಹಣ ಪಡೆದದ್ದರ ರಸೀದಿಯೂ ನನ್ನ ಕಡೆಗೆ ಇದೆ. ಅದನ್ನೂ ಬೇಕಿದ್ದರೆ ತೋರಿಸುವೆ. ಈ ಯುದ್ಧದಲ್ಲಿ ನನ್ನ ಉದ್ದೇಶವನ್ನಂತೂ ತಿಳಿಸಿದ್ದೇನೆ. ಸಾಕಷ್ಟು ಪ್ರತಿಫಲವಿಲ್ಲದೆ ಹಿಂದಿರುಗಲಾರೆ.

ಶ್ರೀ– ನೇರ ಮಾರ್ಗವನ್ನು ಬಿಟ್ಟು ಅಡ್ಡ ಹಾದಿಯನ್ನೆ ಹಿಡಿಯುವ ವಿಚಾರ ನಿಮ್ಮದು. ನಮ್ಮ ಸಾಹೇಬರು ಇದಕ್ಕೆ ಖಂಡಿತ ಒಪ್ಪುವದಿಲ್ಲ. ಈ ನಿಮ್ಮ ಪತ್ರಗಳ ನಕಲನ್ನು ಒಯ್ದು ಪ್ರಯೋಜನವಿಲ್ಲ.

ಹೈ– ಮರಾಟರು, ನಿಜಾಮರಿಗೆ ಅವರವರ ಪ್ರದೇಶಗಳನ್ನು ಬಿಟ್ಟುಕೊಟ್ಟಂತೆ ನನ್ನ ಸೀಮೆಯ ಪ್ರದೇಶಗಳನ್ನೂ ಏಕೆ ಬಿಟ್ಟುಕೊಡಬಾರದು?

ಶ್ರೀ– ಇದು ನೋಡಿ. ಮರಾಟರಿಂದ ನಾವು ಗೆದ್ದ ಪ್ರದೇಶಗಳನ್ನು ಅವರಿಗೆ ಬಿಟ್ಟುಕೊಟ್ಟಿದ್ದೇವೆ. ನಿಮ್ಮ ಪ್ರದೇಶಗಳನ್ನು ಬಿಟ್ಟುಕೊಡಲಿಕ್ಕೆ ನಾವೇನು ನಿಮ್ಮ ರಾಜ್ಯವನ್ನು ಹಾಳುಗೆಡವಲಿಲ್ಲ. ನೀವೀಗ ಮಾಡುತ್ತಿದ್ದಂತೆ, ನಿಮ್ಮದೆನ್ನುವ ಪ್ರದೇಶ ಇಂಗ್ಲೀಷರ ವಶದಲ್ಲಿ ಇಲ್ಲ. ನೀವು ಇಂಥ ಮಾತನ್ನು ಹೇಳುವದು ಆಶ್ಚರ್ಯಕರವಾಗಿದೆ.


ಹೈ– ಸ್ನೇಹವನ್ನು ನೀವು ಬಯಸುವಿರಾದರೆ, ಸ್ನೇಹಿತರಾಗುವವರಿಗೆ ಅನ್ಯಾಯವೆಸಗಲಾಗದು! ನಮ್ಮ–ಇಂಗ್ಲೀಷರ ಮೈತ್ರಿ ಬೆಳೆಯಲು, ಅದು ಹೃದಯದಿಂದ ಬರಬೇಕಾಗುವುದೆಂದು ನಿಮ್ಮ ಜನರಲ್ ಅವರಿಗೆ ಹೇಳಿರಿ. ನನಗೆ ಹೇಳಬೇಕೆಂದುದನ್ನು ಮಹಮ್ಮದ ಉಸ್ಮಾನನಿಗೆ ಹೇಳಿರುವೆನಲ್ಲದೆ, ಒಡಂಬಡಿಕೆಯ ಕಾಗದಗಳನ್ನೂ ಕಳಿಸಿಕೊಟ್ಟಿದ್ದೇನೆ. ನಿಮಗೆ ಅನಿಸಿದ್ದನ್ನು ನೀವು ಹೇಳಿದಿರಿ. ನಿಮ್ಮ ಜನರಲ್ ತಮ್ಮ ಬುದ್ಧಿಗೆ ಸರಿದೋರಿದ್ದನ್ನು ಮಾಡಲಿ.

ಶ್ರೀ–ಜನರಲ್ ಹಾಗೂ ನೀವು ಪರಸ್ಪರರ ಮಾತಿಗೆ ಬೆಲೆ ಕೊಟ್ಟರೇನೆ ಏನಾದರೂ ಸಿದ್ಧಿಸಬಹುದು. ಈಚೆಗೆ ಸಿಂಧೆಯವರೊಡನೆ ಯುದ್ಧವಿರಾಮವಾದಂತೆ, ಈ ಕರ್ನಾಟಿಕ್ ಯುದ್ಧವೂ ನಿಂತರೆ ಎಲ್ಲರಿಗೂ ಹಿತವಾಗುವುದು.

ಹೈ–ಅದೇ ಸಿಂಧೆಯವರಿಂದ ನನಗೆ ಪತ್ರಗಳು ಬರುತ್ತಲೇ ಇವೆ! ಕೇವಲ ಎರಡು ತಾಸುಗಳ ಹಿಂದೆಯೇ ಒಂದು ಬಂದಿತ್ತು. ಅದರ ಪ್ರತಿಯನ್ನು ಬೇಕಾದರೆ ಕೊಡುವೆ. "ಬಂಗಾಲದ ಎಂಡರ್ಸನ್ ಬಿಟ್ಟು ಹೋಗುವವನಿದ್ದಾನೆ. ನಿಮಗೇನು ಬೇಕೋ ಹೇಳಿರಿ. ಅದನ್ನು ಪೂರೈಸುವೆ" ಎಂದು ಅವರಲ್ಲಿ ಬರೆದಿದ್ದಾರೆ. ಅದಕ್ಕೆ "ಈ ಯುದ್ಧವನ್ನು ನಾನು ಮುಂದುವರಿಸುವೆ" ಎಂಬುದಾಗಿ ಉತ್ತರ ಬರೆಯುವವನಿದ್ದೇನೆ.

*


ಜನರಲ್ ಐರ್ ಕೂಟ್ ಅಪೇಕ್ಷಿಸಿದ್ದ ಹೈದರನ ಹಿನ್ನಡೆತ ಜರುಗಲಿಲ್ಲ. ಹೈದರನು ಯುದ್ಧವನ್ನು ಮುಂದುವರಿಸಿದನು. ಆದರೆ, ಮುಂದೆ ೩–೪ ತಿಂಗಳಲ್ಲಿಯೆ ಅವನಿಗೆ ಗಂಟುಬೇನೆ ಬಂದದ್ದರಿಂದ, ಚಿತ್ತೂರಿನ ಬಳಿ ಯುದ್ಧಕ್ಷೇತ್ರದಲ್ಲಿಯೇ ಮರಣ ಹೊಂದಿದ. ಅಲ್ಲಿಂದ ಪರಿಸ್ಥಿತಿಯೇ ಬದಲಾಯಿತು. ✡



ಕಾಷ್ಠ ಶಿಲ್ಪಿ ಶಂಕರಪ್ಪನವರು

ಮಾಧವ ನಾ. ಮಹಿಷಿ

ಸ್ವಾತಂತ್ರ್ಯೋತ್ತರ ಭಾರತದಲ್ಲಿ ಪಾರಂಪರಿಕ ವಾಗಿ ಉಳಿದುಕೊಂಡಿರುವ ಗ್ರಾಮೀಣ ಕೈಕಸುಬುಗಳು ತೀವ್ರ ವಿದ್ಯುದೀಕರಣದ ಸೆಳವಿನಲ್ಲಿ ಕೊಚ್ಚಿಕೊಂಡು ಹೋಗುತ್ತಿವೆಯೆ? ಈ ಪ್ರಶ್ನೆಯನ್ನು ಹಗುರಾಗಿ ತಳ್ಳಿಹಾಕಲು ಬರುವದಿಲ್ಲ. ಗಾಂಧೀಜಿಯವರ ಕಲ್ಪನೆಯ ಸ್ವರಾಜ್ಯ ಸಾರ್ಥಕವಾಗಿ ಸುರಾಜ್ಯವಾಗಿ ರೂಪುಗೊಳ್ಳಬೇಕಾದರೆ ನಮ್ಮ ಸಮಾಜ ಮೂಲಭೂತವಾಗಿ ಗ್ರಾಮೀಣ ಕೈಗಾರಿಕೆಗಳ ತಳಹದಿಯಮೇಲೆಯೇ ನಿಲ್ಲಬೇಕು, ನಿಂತು ಬೆಳೆಯಬೇಕು. ಹಾಗೆಂದು ಅವರು ತಮ್ಮ



ನೀತಿಯನ್ನು ಅನುಸರಿಸಿದ್ದರೆ ಆಧುನಿಕ ಪ್ರಗತಿಯ ಅರ್ಥದಲ್ಲಿ ನಮ್ಮ ದೇಶ ಹಿಂದುಳಿಯಬಹುದಿತ್ತಾದರೂ ಕೋಟ್ಯವಧಿ ಜನಸಾಮಾನ್ಯಕ್ಕೆ ನಿರುದ್ಯೋಗ ಇಂದಿನ ಪ್ರಮಾಣದಲ್ಲಿ ಸಮಸ್ಯೆಯಾಗಿ ಉಳಿಯುತ್ತಿರಲಿಲ್ಲವೆಂಬುದಂತೂ ನಿಶ್ಚಿತವೆನಿಸುತ್ತದೆ. ರಾಜಕೀಯ ಸ್ವಾತಂತ್ರ್ಯ ಬಂದು ೩೦ ವರ್ಷಗಳ ನಂತರ ಬೆಳೆಯುತ್ತಿರುವ ಜನಸಂಖ್ಯೆಯ ನೈಜ ಆರ್ಥಿಕ ಸಮಸ್ಯೆಯನ್ನು ಅದರಿಂದ ಉಂಟಾಗುವ ಅನಿವಾರ್ಯವಾದ ಮತ್ತನೇಕ ಸಮಸ್ಯೆಗಳನ್ನು ನಾವು ಬಿಡಿಸುವತ್ತ ಒಂದಾದರೂ ಅರ್ಥಪೂರ್ಣ ಹೆಜ್ಜೆಯನ್ನಿಟ್ಟಿಲ್ಲ. ರಾಮರಾಜ್ಯದ ಕನಸು ಕಂಡು ಅದಕ್ಕಾಗಿ ಕನವರಿಸಿದ ಗಾಂಧೀಜಿ ಬಲು ಬೇಗ ಕಣ್ಮುಚ್ಚಿ ಪಾರಾದರೆಂಬುದೊಂದೇ ಸಮಾಧಾನ.

ಒಂದು ಕಾಲಕ್ಕೆ ನಮ್ಮ ಗ್ರಾಮಜೀವನದ ಅವಿಭಾಜ್ಯ ಅನಿವಾರ್ಯ ಅಂಗಗಳೆಂದು ಪರಿಗಣಿತವಾಗುತ್ತಿದ್ದ ಬಡಿಗ, ಕಮ್ಮಾರ, ಕುಂಬಾರ ಮುಂತಾದ ಕೈಕಸಬುದಾರರು ಇಂದು ಹೇಳ ಹೆಸರಿಲ್ಲದಂತೆ ಕಣ್ಮರೆಯಾಗುತ್ತಿದ್ದಾರೆ. ಶತಮಾನಗಳಿಂದ ತಮ್ಮ ಕುಲಕಸುಬು ಎಂದು ಬಗೆದದ್ದನ್ನು ಇಂದು ಮೂಲೆಗೆ ತಳ್ಳಿ ಆಧುನಿಕ ಶಿಕ್ಷಣಕ್ಕೆಳಸಿ ನೌಕರಿಯ ದಾರಿ ನೋಡುತ್ತ ಕೂಡುತ್ತಿದ್ದಾರೆ. ತಲೆ ತಲಾಂತರಗಳಿಂದ ಸಂಪಾದಿಸಿ ಉಳಿಸಿಕೊಂಡುಬಂದಿದ್ದ ನೈಪುಣ್ಯವನ್ನು ಕೆಲವೊಮ್ಮೆ ನಿಸ್ಸಹಾಯಕರಂತೆ ಹಲವೊಮ್ಮೆ ಅಸಡ್ಡೆಯಿಂದ ಕೈ ಬಿಡುತ್ತಿದ್ದಾರೆ. ಇನ್ನು ಕೆಲ ತಲೆಮಾರುಗಳು ಉರುಳಿದ ನಂತರ ಹಸ್ತಕೌಶಲ ನಮ್ಮಲ್ಲಿ ತೀರ ಅಪರೂಪದ ವಸ್ತುವಾಗಿಬಿಡಬಹುದು.

ಧಾರವಾಡ ಜಿಲ್ಲೆಯ ನೈಋತ್ಯ ಗಡಿಯಲ್ಲಿ ಹುಬ್ಬಳ್ಳಿಯಿಂದ ಸುಮಾರು ೫೦ ಮೈಲು ಅಂತರದಲ್ಲಿ ಮಲಪ್ರಭೆಯ ದಂಡೆಯ ಮೇಲಿರುವ ಹಳ್ಳಿ ಹೊಳೆ ಆಲೂರು. ಅಲ್ಲಿ ಬಡಿಗತನವಿನ್ನೂ ಕಾಷ್ಠಶಿಲ್ಪವೆಂಬ ಮಟ್ಟದಲ್ಲಿ ಉಳಿದಿದೆ. ಅಲ್ಲಿ ಇರುವ ಕೆಲವರಾದರೂ ಬಡಿಗರು ಕಟ್ಟಿಗೆಯನ್ನು ಬಳಪದಂತೆ ಉಪಯೋಗಿಸಿ ತಮ್ಮ ಹಸ್ತಕೌಶಲದ ಹಿರಿಮೆಯನ್ನು ಕಲಾಕುಸುರಿನ ಮೇಲ್ಮೆಯನ್ನು ಮೆರೆಯುಬಲ್ಲವರಾಗಿದ್ದಾರೆ. ಅದನ್ನು ಪ್ರತ್ಯಕ್ಷ ನೋಡುವ ಅವಕಾಶ ನನಗಿತ್ತೀಚೆ ಸಿಕ್ಕಿತ್ತು.

ಹೊಳೆಯಾಚೆ ವಿಜಾಪುರ ಜಿಲ್ಲೆಯ ಬಾದಾಮಿ ತಾಲೂಕಿನಲ್ಲಿರುವ ಸುಳ್ಳ ಗ್ರಾಮದ ಮೂಲಿಮನಿ ರಂಕಪ್ಪ ಬಡಿಗೇರರು. ೬೦ ವರ್ಷದ ಈ ವ್ಯಕ್ತಿಗೆ ತಮ್ಮ ಕಸಬಿನ ಬಗ್ಗೆ, ತಮ್ಮ ಮನೆತನದ ಪರಂಪರೆಯ ಬಗ್ಗೆ, ತಮ್ಮ ವೃತ್ತಿ ವ್ಯವಸಾಯದ ಮೂಲವಿರುವುದು ವಿಶ್ವಕರ್ಮ ಬ್ರಹ್ಮನಲ್ಲೆಂಬ ಬಗ್ಗೆ ಭಾರಿ ವಿಶ್ವಾಸ. ಮಧ್ಯಮ ಎತ್ತರದ, ಧೋತರ ಶರ್ಟು ಟೊಪ್ಪಿಗೆ ಧರಿಸುವ ಈ ವ್ಯಕ್ತಿಯನ್ನು ನೋಡಿದಾಗ ಅವರ ಒಳಗೇನೋ ಕುದಿಯುತ್ತಿರುವುದು ಸ್ಪಷ್ಟವಾಗಿ ಗಮನಕ್ಕೆ ಬರುತ್ತದೆ. ಬದಿಯಲ್ಲೇ ಅವರು ತಮ್ಮ ಸಹಾಯಕರೊಂದಿಗೆ ಕೂಡಿಕೊಂಡು ಮಾಡಿದ ಹಲವಾರು ಕೆತ್ತನೆಯ ಕೆಲಸಗಳನ್ನು ಕಂಡಾಗ ತಮ್ಮ ಕಸಬಿನ, ಮನೆತನದ ಪರಂಪರೆಯ



ಅಪೂರ್ವವಾದ ಕಲಾವಿದನ ಕೈಚಳಕ್ಕೆ ಹೆಗ್ಗಳಿಕೆಯಲ್ಲದಿರುವುದು ನಮ್ಮ ಮನಸ್ಸಿಗೆ ನಾಟುತ್ತದೆ. ಅದನ್ನು ದಾಟಿ ತುಸುವೆ ಹೊರಟರೆ ಅವರ ಬದುಕಿನ ಜೀವನದ ಆಗು ಹೋಗುಗಳ ಮಾತೆತ್ತಿದರೆ ಬೇರೆ ಬೇರೆಯೇ ಆದ ಚಿತ್ರ ಕಣ್ಣಿಗೆ ಕಟ್ಟತೊಡಗುತ್ತದೆ.

ತಮ್ಮಲ್ಲಿ ಅದ್ಭುತ ಪ್ರತಿಭೆಯಂ ಅಡಗಿರುವಾಗಲೂ ಶಂಕರಪ್ಪನವರಾಗಲಿ, ಅವರಂಥ ಮತ್ತನೇಕ ಕಾಷ್ಠಶಿಲ್ಪಿಗಳಾಗಲಿ ಆರ್ಥಿಕವಾಗಿ ಬಡತನದ ರೇಖೆಯ ಕೆಳಗಿನವರೇ. ಅದೆಲ್ಲಕ್ಕಿಂತ ಹೆಚ್ಚಿನದೆಂದರೆ ಅವರ ಯೋಚನೆಯೆಲ್ಲ ಬಡಿಗತನ ಮತ್ತು ಅದರ ಸೂಕ್ಷ್ಮ ಗತ್ತುಗಳನ್ನು ಇನ್ನಷ್ಟು ಜನಕ್ಕೆ ಕಲಿಸಿ ಈ ಭವ್ಯ ಪರಂಪರೆಯನ್ನುಳಿಸಿ ಬೆಳೆಸಿಕೊಂಡುಬರುವುದು ಹೇಗೆಂಬುದರಲ್ಲೇ ಸುತ್ತುತ್ತದೆ ಹೊರತು ಇಂದಿನ ಜಗತ್ತಿನಲ್ಲಿ ಅದನ್ನು ಆರ್ಥಿಕವಾಗಿ ಲಾಭದಾಯಕ ವೃತ್ತಿಯಾಗಿ ಹೇಗೆ ಪರಿವರ್ತಿಸಿಕೊಳ್ಳಬೇಕೆಂಬುತ್ತ ಹರಿಯುವುದಿಲ್ಲ. ಇಂಥವರ ಕೌಶಲದ ವ್ಯಾಪಾರಿ ಲಾಭ ಮಾಡಿಕೊಳ್ಳುವ ಜನವೇ ಬೇರೆ. ಇವರು ತುಸು ದೊಡ್ಡ ಪ್ರಮಾಣದಲ್ಲಿ ಹಣ ತೊಡಗಿಸಿ ಕಟ್ಟಿಗೆ ಅಡ್ಡೆಗಳನ್ನು ನಡೆಸಬಲ್ಲ ಸಾಧಾರಣ ಗಾತ್ರದ ವ್ಯವಹಾರಸ್ಥ ಸಾಹುಕಾರರು. ಇಂಥ ಸಾಹುಕಾರರು ಇಟ್ಟುಕೊಂಡ ಹುಡುಗರು ಅಂಗಡಿ ಹೊರಗೆ ಅಲೂರಲ್ಲಿವೆ. ಇವರು ದಾಂಡೇಲಿ. [illegible] ದೊಡ್ಡ [illegible]
[illegible]

ಕೊಂಡು ಬಂದು ತಮ್ಮ ಅಡ್ಡೆಗಳಲ್ಲಿ ವಿದ್ಯುದ್ಯಂತ್ರಗಳಿಂದ ವಿವಿಧ ಆಕಾರದ ತುಂಡುಗಳಾಗಿ, ಫಳಿಗಳಾಗಿ ಕೊರೆದಿಡುತ್ತಾರೆ. ಗಿರಾಕಿಗಳಿಂದ ಆರ್ಡರುಗಳನ್ನು ಪಡೆದು ಬಡಿಗರನ್ನು ಸಂಬಳಕ್ಕಿಟ್ಟುಕೊಂಡು ದುಡಿಸಿಕೊಂಡು ಚೌಕಟ್ಟುಗಳನ್ನೊ ಮತ್ತೇನನ್ನೋ ಮಾಡಿಸಿಕೊಳ್ಳುತ್ತಾರೆ. ಬಾದಾಮಿ ಬನಶಂಕರಿ ಜಾತ್ರೆ ಸಮೀಪಿಸುತ್ತಿದ್ದಂತೆ ಹೊಳೆ ಆಲೂರಲ್ಲಿ ಇವರ ಉದ್ಯೋಗಕ್ಕೆ ಹೊಸ ಕಳೆ ಬರುತ್ತದೆ. ಹಲವಾರು ತಿಂಗಳುಗಟ್ಟಲೆ ಬಡಿಗರನ್ನು ದುಡಿಸಿಕೊಂಡು ತಯಾರಿಸಿಟ್ಟ ಚೌಕಟ್ಟುಗಳಿಗೆ ಈ ಜಾತ್ರೆ ಬಲು ದೊಡ್ಡ ಪೇಟೆ. ಅಲ್ಲಿ ಏಳೆಂಟು ನೂರು ರೂಪಾಯಿಗಳಿಂದಾರಂಭಿಸಿ ಎರಡು ಸಾವಿರದ ವರೆಗೆ ಒಂದೊಂದು ಚೌಕಟ್ಟು ಮಾರುತ್ತದೆ. ಅಡ್ಡೆಯ ಒಡೆಯನಿಗೆ ಒಂದೊಂದು ಚೌಕಟ್ಟಿನ ವ್ಯಾಪಾರದಿಂದ ೪೦೦ ರಿಂದ ೭೦೦ ರೂಪಾಯಿಗಳ ವರೆಗೂ ಲಾಭವಾಗುವುದು. ಆದರೆ ಅಲ್ಲಿ ಬೆವರು ಸುರಿಸಿ ದುಡಿಯುವ ಬಡಿಗನಿಗೆ ಸಿಕ್ಕುವುದು ಅವನ ಅಂತಸ್ತನ್ನವಲಂಬಿಸಿ ತಿಂಗಳಿಗೆ ಒಂದು ನೂರರಿಂದ ಎರಡು ನೂರರ ವರೆಗೆ ಮಾತ್ರ!



ಶಂಕರಪ್ಪ ಬಡಿಗೇರವರು

ನಾನು ಶಂಕರಪ್ಪನವರ ಬಳಿ ಹೋದಾಗ ನನಗೆ ನೋಡಸಿಕ್ಕುದು ಅದೇ ಪೂರ್ತಿಯಾಗಿ ಗಿರಾಕಿಗೆ ಕಳಿಸಲು ಸಿದ್ಧವಾಗಿದ್ದ ಒಂದು ೪' × ೮' ಆಕಾರದ ಸುಂದರ ಚೌಕಟ್ಟು (ಪುಟ ೧೧೬). ಚೌಕಟ್ಟಿನ ಅಳತೆಗೆ ಸರಿಯಾಗುವಷ್ಟು ದೊಡ್ಡದೊಂದು ಹೊಸ್ತಿಲ ಮೇಲೆ ನಿಂತ ಈ ಚೌಕಟ್ಟನ್ನು ನೋಡಿದಾಗ ಹಳ್ಳಿಗಳಲ್ಲಿ ಹಳೆಗಾಲದ ದೊಡ್ಡ ಮನೆಗಳ ತಲಬಾಗಿಲ ಚೌಕಟ್ಟನ್ನೊ ನಡುಮನೆಯ ಚೌಕಟ್ಟನ್ನೊ ನೋಡಿದಂತಾಯಿತು. ಇಂದಿನ ಕಾಂಕ್ರೀಟ್ ಯುಗದಲ್ಲಿ ಕಣ್ಮರೆಯಾಗಿಹೋಗಿದೆಯೆಂದು ನಾವು ಭಾವಿಸುವಂಥ ಕುಶಲ ಕಲೆ ಇಲ್ಲಿ ಇನ್ನೂ ಜೀವಂತವಾಗಿರುವುದನ್ನು ಕಂಡು ಮನಸ್ಸು ಸಮಾಧಾನಪಡುತ್ತದೆ.

ಸಾಗವಾನಿ ಇಮಾರತಿಗೆ ಬಲು ಗಟ್ಟಿಮುಟ್ಟಾದ ಕಟ್ಟಿಗೆಯಾಗಿರುವಂತೆಯೆ ಶ್ರೀಗಂಧವನ್ನು ಬಿಟ್ಟರೆ ಕುಸುರಿನ ಕೆಲಸಕ್ಕೂ ಅಷ್ಟೇ ನಯವಾದದ್ದು. ಈ ಚೌಕಟ್ಟಿನ ಎಡ–ಬಲ ಬದಿಗಳ ಮೂರು ಮೂರು ತುಂಡುಗಳ ಜೋಡಣೆಯಲ್ಲಿ ಸಾಮಾನ್ಯ ಸುಳುವುಗಳಿಂದ ಪ್ರಾರಂಭವಾಗುವ ಚೌಕಟ್ಟು ಮೇಲಿನ ಮೂರು ತುಂಡುಗಳಲ್ಲಿ ಶಂಕರಪ್ಪನವರ ಹಸ್ತಕೌಶಲದ ಜೀವಾಳವನ್ನೇ ಸೂರೆಗೊಂಡಂತಿದೆ. ಮೂರೂ ಬದಿಯ ಮೂರು ಮೂರು ತುಂಡುಗಳು ಏಕಜೀವವಾಗಿ ಕಾಣುವಂತೆ ನಿಖರ ಅಳತೆಯನ್ನು ಇಟ್ಟುಕೊಂಡು ಕೆಲಸ ಮಾಡುವುದರ ಜೊತೆಗೆ ಮೇಲ್ಭಾಗದ ಮಧ್ಯದಲ್ಲಿ ಎರಡು ಕಾಮಧೇನುಗಳ ನಡುವೆ ನಿಂತಿರುವ ವೆಂಕಟೇಶ ಮತ್ತು ಅವನ ಕೆಳಗಣೆಗೆ ಶಿವನ ಅರ್ಧಾಕೃತಿಯ ಮೂರ್ತಿ ಕಣ್ಸೆಳೆಯುವಂತಿದ್ದರೆ ಇವುಗಳ ಸುತ್ತಲೂ ಸುಳಿ ಸುಳಿಯಾಗಿ ಹಬ್ಬಿಕೊಂಡಿರುವ ಕುಸುರಿನ ಕೆಲಸ ಮನಸ್ಸನ್ನೇ ಸೂರೆಗೊಳ್ಳುತ್ತದೆ.

ಆದರೆ ಇದೆಲ್ಲವನ್ನೂ ನೋಡಿದಾಗ ಒಂದು ಪ್ರಶ್ನೆ ತಟ್ಟನೆ ಹೊಳೆಯುತ್ತದೆ. "ಇದನ್ನೆಲ್ಲ ನೀವು ಮೊದಲೇ ಯೋಚನೆ ಹಾಕಿಕೊಂಡು ಮಾಡುತ್ತೀರಾ? ಈ ರೀತಿ ಬೇರೆ ಬೇರೆ ದೇವತೆ

ಗಳ, ಪಕ್ಷಿಗಳ, ಹೂಬಳ್ಳಿಗಳ ಚಿತ್ರ ಕೊರೆಯುವುದಕ್ಕೆ ಏನಾದರೂ ಉದ್ದೇಶವಿರುತ್ತದೆಯೆ? ಇಂತಿಂಥ ಚಿತ್ರ ಅಥವಾ ಗುರುತನ್ನು ಕೊರೆಯಲೇಬೇಕು ಎಂದು ಶಾಸ್ತ್ರವೇನಾದರೂ ಇದೆಯೆ?"

"ಸಾಮಾನ್ಯವಾಗಿ ಚೌಕಟ್ಟು ಮಾಡಿಸುವವರೇ ತಮಗೆ ಎಂತೆಂಥ ಚಿತ್ರ ಬೇಕೆಂದು ಮೊದಲೇ ಹೇಳುತ್ತಾರೆ. ಸುಳಿವಿನ ವಿಷಯದಲ್ಲಿ ಯಾವ ನಿರ್ಬಂಧವನ್ನೂ ನಾವು ಇಟ್ಟುಕೊಂಡಿಲ್ಲ. ಒಂದೊಂದು ಚೌಕಟ್ಟು ಮಾಡುವಾಗ ಆ ಕ್ಷಣಕ್ಕೆ ಏನು ಹೊಳೆಯುತ್ತದೋ ಹಾಗೆ ಮಾಡಿಕೊಂಡು ಹೋಗುವುದೇ ಹೆಚ್ಚು. ಆದರೆ ಒಂದು ಮಾತನ್ನು ಮಾತ್ರ ಹೇಳಬಲ್ಲೆ, ನೀವು ನಿಮ್ಮ ಫೋಟೋ ತಂದುಕೊಟ್ಟರೆ ತದ್ವತ್ತಾಗಿ ನಾನು ಕಟ್ಟಿಗೆಯಲ್ಲಿ ಕೆತ್ತಿ ಕೊಡಬಲ್ಲೆ. ಚೌಕಟ್ಟುಗಳಿಗಿಂತ ತೇರು ಮುಂತಾದುವನ್ನು ಮಾಡುವಾಗ ಅದರ ಒಂದೊಂದು ಅಂಗವೂ ಹೇಗೆ ಹೇಗಿರಬೇಕೆಂಬ ಬಗ್ಗೆ ಶಾಸ್ತ್ರವಿದೆ. ಆದರೆ ನಾವು ಮೂಲತಃ ಕಲಾಕಾರರು, ಶಾಸ್ತ್ರಕ್ಕಿಂತ ಹೆಚ್ಚು ನಮ್ಮ ಕಲ್ಪನೆಯನ್ನೇ ಅವಲಂಬಿಸಬೇಕಾಗುತ್ತದೆ." ಶಂಕರಪ್ಪ ಮುಚ್ಚುಮರೆಯಿಲ್ಲದೆ ಹೇಳಿದರು. ಇವರು ಶ್ರೀಶೈಲ, ಗುಳೇದಗುಡ್ಡ, ಇಂಚಲ, ಕಿರೇಸೂರು, ಶಲವಡಿ, ಮತ್ತು ಮೆಟಗುಡ್ಡಗಳಲ್ಲಿರುವ ತೇರುಗಳನ್ನು ನಿರ್ಮಿಸಿದ್ದಾರೆ. ಅದಲ್ಲದೆ ಇನ್ನೂ ಸೂಕ್ಷ್ಮ ಕೆತ್ತನೆಯ ಪೂಜಾಮಂಟಪ ಮುಂತಾದುವನ್ನೂ ಮಾಡಿದ್ದಾರೆ. ಇವರ ಅಳಿಯ ಮಲ್ಲಪ್ಪ ಕೂಡ ಇವರ ಗರಡಿಯಲ್ಲೇ ತಯಾರಾಗುತ್ತಿದ್ದಾರೆ.

ಶಂಕರಪ್ಪನವರ ಕಲಾಕೃತಿಗಳು ದಿಲ್ಲಿಯವರೆಗೂ ಹೋಗಿವೆ, ಅನೇಕ ಪ್ರಶಸ್ತಿಪತ್ರಗಳನ್ನೂ ಗಳಿಸಿವೆ. ಆದರೆ ಬಡತನ ಇವರ ಬೆನ್ನು ಬಿಟ್ಟಿಲ್ಲ. ಅದನ್ನು ಕಳೆದುಕೊಳ್ಳುವ ಬಗೆ ಹೇಗೆಂದು ಅವರಿಗೆ ತಿಳಿಯದು. ಸರಕಾರ ವರ್ಷ ವರ್ಷವೂ ಕೆಲವರಿಗೆ ಮಾಸಾಸನವನ್ನೋ ಮತ್ತೇನನ್ನೋ ಕೊಟ್ಟು ಗೌರವಿಸುತ್ತದೆ, ಕೆಲವರಿಗೆ ಉಪಜೀವನದ ಮಾರ್ಗವನ್ನೂ ಕಲ್ಪಿಸಿಕೊಟ್ಟಿದೆ. ಆದರೆ ಶಂಕರಪ್ಪನವರಿಗೆ ಇದೆಲ್ಲ ಸಾಧಿಸಿಕೊಳ್ಳಲು ಅವಶ್ಯವಾದ "ರಾಜಕೀಯ" ಸಂಪರ್ಕವಿಲ್ಲ, ವರ್ಚಸ್ಸಿಲ್ಲ. ಅವರು ಸರಕಾರದಿಂದ ಮಾಸಾಶನವನ್ನೂ ಕೇಳುವುದಿಲ್ಲ, ಭಿಕ್ಷೆಯನ್ನೂ ಬೇಡುವುದಿಲ್ಲ. ಅಗ್ಗೆಗೇರಿ–ಹುಲಕೋಟಿ ರಸ್ತೆಯ ಬದಿಯಲ್ಲಿ ಒಂದು ಚಿಕ್ಕ ವರ್ಕ್‌ಶಾಪ್ ಹಾಕಿಕೊಳ್ಳಲು ತುಸು ಸ್ಥಳ. ಒಂದು ಶೆಡ್ಡು ಹಾಗು ನಿಯಂತ್ರಿತ ಸರಕಾರಿ ದರದಲ್ಲಿ ವರ್ಷಕ್ಕೆ ಸುಮಾರು ಎಂಟು ಘನ ಮೀಟರುಗಳಷ್ಟು ಸಾಗವಾನಿ ಕಟ್ಟಿಗೆ ಕೊಡ ಮಾಡಿದರೆ ಸಾಕು ಎನ್ನುತ್ತಾರೆ. ಅಷ್ಟಾದರೆ ತಾವು ಆಸ್ಥೆಯುಳ್ಳ ಕೆಲವು ಶಿಷ್ಯರನ್ನು ವರ್ಷ ವರ್ಷವೂ ಈ ಕಲೆಯಲ್ಲಿ ತರಬೇತಿಗೊಳಿಸುತ್ತ, ಈ ಪರಂಪರೆಯನ್ನು ಬೆಳೆಸಿಕೊಂಡುಹೋಗುತ್ತೇವೆ ಅದರಿಂದ ಉಪಜೀವನಕ್ಕೂ ಗೌರವಾರ್ಹವಾದ ಮಾರ್ಗ ಮಾಡಿಕೊಂಡಂತಾಗುತ್ತದೆ ಎನ್ನುತ್ತಾರೆ.

ಇಂಥ ಅಭಿಮಾನಧನನ ಬೇಡಿಕೆ ತಲಪಬೇಕಾದಲ್ಲಿರುವವರಿಗೆ ತಲಪೀತೆ? ಗಾಂಧೀಜಿಯ ಕಲ್ಪನೆಯ ಗ್ರಾಮರಾಜ್ಯವು ನಾವು ಇಷ್ಟೆಲ್ಲ ಔದ್ಯಮೀಕರಣ ಮಾಡಿದನಂತರವೀಗ ಸಾಧ್ಯವಾಗಲಿಕಿಲ್ಲಿ. ಆದರೆ ನಶಿಸಿಹೋಗುತ್ತಿರುವ ಗ್ರಾಮೀಣ ಕೈಗಾರಿಕೆಗಳನ್ನು ಉಳಿಸಿಕೊಳ್ಳಲು ಬಹುಶಃ ಸರಕಾರವೊಂದೇ ನೆರವಾಗಬಲ್ಲದು. ರಾಜಾಶ್ರಯವಂತೂ ಕನಸಿನ ಮಾತಾಗಿರುವ ಇಂದು ಔದ್ಯೋಗೀಕರಣ ಕರಕೌಶಲಗಳ ಸ್ವಾವಲಂಬನಕ್ಕೆ ಮಾರಕವಾಗಿದೆ. ಆದರೆ ಇಂಥವರನ್ನು ಉಳಿಸಿಕೊಳ್ಳುವುದು ಮಾನವೀಯತೆಯ ದೃಷ್ಟಿಯಿಂದ ಮಾತ್ರವಲ್ಲ. ನಮ್ಮ ರಾಷ್ಟ್ರೀಯ ಪರಂಪರೆಯಲ್ಲಿಯ ಒಳ್ಳೆಯ ಅಂಶಗಳನ್ನು ಕಾಪಾಡಿಕೊಳ್ಳುವ ದೃಷ್ಟಿಯಿಂದಲೂ ಅಗತ್ಯ; ಅಲ್ಲವೇ?

ಪುಟ: ೧೧೬ ಪೂರ್ಣ ಸಿದ್ಧ ಚೌಕಟ್ಟು. ಪುಟ: ೧೧೭ ಚೌಕಟ್ಟಿನ ಮೇಲ್ಭಾಗ. ಪುಟ: ೧೧೮ ಚೌಕಟ್ಟಿನ ಬಲಭಾಗ.

ಚಿತ್ರಗಳು: ಎಂ. ಬಿ. ಪಾಟೀಲ



ಕವಿ ನಾನಾಲಾಲ
ಗುಜರಾತಿ ಕಾವ್ಯದ 'ವಸಂತೋತ್ಸವ'

ಗೌರೀಶ ಕಾಯ್ಕಿಣಿ

ನಾನಾಲಾಲ ಗುಜರಾಥದ ಒಬ್ಬ ಯುಗ ಪ್ರವರ್ತಕ ಕವಿ. ಇಂಗ್ಲಂಡಿನಲ್ಲಿ ಶೆಲ್ಲಿ ಕವಿಯಂತೆ ನಾನಾಲಾಲ ಗುಜರಾಥದಲ್ಲಿ ಅರ್ಧ ಶತಮಾನಕ್ಕೂ ಮಿಕ್ಕಿ "ಭಾವಗೀತದ ಪ್ರಭು, ವೈಣಿಕ ಚಕ್ರವರ್ತಿ" ಎಂದು ಕರೆಯಿಸಿಕೊಂಡು ಸರಿ ದೊರೆ ಇಲ್ಲದೆ ಮೆರೆದನು. ೧೮೭೭ರಲ್ಲಿ ಈತ ಕವನ ಬರೆಯಲು ಆರಂಭಿಸಿ ೧೯೪೬ರಲ್ಲಿ ದೇಹವಿಟ್ಟನು. ಕಳೆದ ವರ್ಷ (೧೯೭೭) ನಾನಾಲಾಲನ ಕಾವ್ಯರಸವನ್ನು ಮನದಣಿ ಸವಿದು ಧನ್ಯರಾದ ಗುಜರಾಥಿ ಜನತೆ ಅವನ ಜನ್ಮ ಶತಮಾನೋತ್ಸವವನ್ನು ಆಚರಿಸಿತು.

ಕವಿಯ ಮಗನೇ ಕವಿಯಾಗುವುದು ಅಷ್ಟೇನು ಅಪರೂಪದ್ದಲ್ಲ. ಕೆಲ ಸಲ ಅಂಥ ಕವಿಪುತ್ರ ತಂದೆಯ ಮುಂದೆ "ಅಪರೂಪ"ನೇ ಆಗುವುದೂ ಉಂಟು. ವರಕವಿಗಳು ಅನೇಕ ಸಲ ನರ ಕವಿಗಳಿಗೆ ಜನ್ಮ ಕೊಡುವುದು ಒಂದು ದೈವೀ ದುರ್ವಿಪಾಕ. ಆದರೆ ನಾನಾಲಾಲರು ಈ ದೃಷ್ಟಿಯಿಂದಲೂ ಧನ್ಯರು. ಅವರ ತಂದೆ ದಲಪತರಾಮ ಗುಜರಾಥದ ಶ್ರೇಷ್ಠ ಕವಿಗಳಾಗಿದ್ದರು. ಒಂದರ್ಥದಲ್ಲಿ ಹಳಬರಲ್ಲಿ ಕೊನೆಯವರೂ ಹೊಸಬರಲ್ಲಿ ಮೊದಲಿಗರೂ ಆಗಿದ್ದರು. ಅವರ ಪ್ರತಿಭಾವೃಕ್ಷದ ಹಿರಿಯ ಫಲ ನಾನಾಲಾಲರು. ತಂದೆ ದಲಪತರಾಮ ೧೮೯೮ರಲ್ಲಿ ನಿಧನ ಹೊಂದಿದರು. ಆಗಲೇ ಕಾಲೇಜು ವಿದ್ಯಾರ್ಥಿಯಾಗಿದ್ದ ಮಗ ನಾನಾಲಾಲ ಕವಿತೆಯನ್ನು ಬರೆಯತೊಡಗಿದ್ದನು. ದಲಪತರಾಮರ ಬಗೆಗೆ ಚರಮ (ಮೃತ್ಯು) ಲೇಖ ಗುಜರಾಥಿಯ ಅಂದಿನ ಪ್ರಮುಖ ನಿಯತಕಾಲಿಕವಾದ "ಜ್ಞಾನಸುಧಾ"ದಲ್ಲಿ ಪ್ರಕಟವಾಯಿತು. ಅದೇ ಸಂಚಿಕೆಯಲ್ಲಿ ಆ ಲೇಖದ ಸಂಗಡಲೇ ನಾನಾಲಾಲರ ಪ್ರಥಮ ಸುದೀರ್ಘ ಕವನ "ವಸಂತೋತ್ಸವ"ವೂ ಪ್ರಕಟವಾಯಿತು.

ಇದೊಂದು ಗಮನಾರ್ಹವಾದ ಸೋಜಿಗದ ಯೋಗಾಯೋಗವೆನಿಸಿತು. ಗುಜರಾಥದ ಕಾವ್ಯ ಲೋಕದಲ್ಲಿ ತಂದೆಯ ಅಸ್ತದೊಂದಿಗೇ ಮಗನ ಉದಯವನ್ನು ಅದು ಘೋಷಿಸಿತು. ಕಾವ್ಯದ ದೀವಟಿಗೆ ತಂದೆಯಿಂದ ಹಸ್ತಾಂತರವಾಯಿತೆಂದು ಅದು ಸೂಚಿಸಿದಂತಿತ್ತು. ಆ ದೀವಟಿಗೆ ಇನ್ನೂ ದೇದೀಪ್ಯಮಾನವಾಗಿ ಮುಂದೆ ಮುಕ್ಕಾಲು ಶತಮಾನ ಉರಿಯಿತು. ಮ್ಯಾಥ್ಯು ಆರ್ನಾಲ್ಡ್ ಎತ್ತಿ ಹೇಳಿದ ಸಂಸ್ಕೃತಿಯ ಜೀವಾಳವಾದ ಬೆಳಕು ಮತ್ತು ಸವಿ ನಾನಾಲಾಲರ ಕಾವ್ಯಪ್ರಭೆಯು ಗುಜರಾಥದ ವಿದ್ವತ್ಪ್ರಪಂಚವನ್ನು ವ್ಯಾಪಿಸಿತು, ಆಬಾಲವೃದ್ಧರನ್ನೂ ಸೂರೆಗೊಂಡಿತು.

ನಾನಾಲಾಲರು ಅಹಮದಾಬಾದ, ಪುಣೆ, ಮುಂಬಯಿಗಳಲ್ಲಿ ಉಚ್ಚ ಶಿಕ್ಷಣ ಮುಗಿಸಿ ಮುಂಬಯಿ ವಿಶ್ವವಿದ್ಯಾಲಯದ ಸ್ನಾತಕೋತ್ತರ ಪದವೀಧರರಾದರು. ಇತಿಹಾಸ, ತತ್ತ್ವಶಾಸ್ತ್ರ

ಮತ್ತು ಇಂಗ್ಲಿಷ್ ಸಾಹಿತ್ಯಗಳಲ್ಲಿ ವ್ಯಾಸಂಗ ನಡೆದಾಗಲೇ ಅವರು] ಆ ಕಾಲೇಜು ಜೀವನ ದಲ್ಲಿ "ವಸಂತೋತ್ಸವ" ಖಂಡಕಾವ್ಯವನ್ನು ಬರೆದರು. ಅದರ ಬೆನ್ನಿಗೆ ಇನ್ನಿತರ ಕೃತಿ ಗಳೂ ಬೆಳಕು ಕಂಡವು. ಗುಜರಾಥಿ ಸಾಹಿ ತ್ಯಕ್ಕೆ ಎಂದಿಲ್ಲದ ಆಧುನಿಕತೆಯ ಹೊಸ ರಸ ಪಂಕ್ತಿಯು ಬೆಡಗು ತಂದವು.

ಅನಂತರ ನಾನಾಲಾಲ ಸದರಾದಲ್ಲಿ ಸ್ಕಾಟ್ ಕಾಲೇಜ್, ರಾಜಕೋಟದಲ್ಲಿ] ರಾಜಕುಮಾರ ಕಾಲೇಜುಗಳ ಪ್ರಿನ್ಸಿಪಾಲರಾಗಿ ಸೇವೆ ಸಲ್ಲಿ ಸಿದರು. ನಡುವೆ ಸ್ವಲ್ಪ ಕಾಲ ರಾಜಕೋಟ ಸಂಸ್ಥಾನದ ಸಿವಿಲ್ ಜಡ್ಜರಾಗಿಯೂ ಕೆಲಸ ಮಾಡಿದರು. ೧೯೧೮ರಿಂದ ಶಿಕ್ಷಣ ವೃತ್ತಿ ಬಿಟ್ಟು ಕಾಠೇವಾಡ(ಸೌರಾಷ್ಟ್ರ)ದಲ್ಲಿ ಶಿಕ್ಷ ಣಾಧಿಕಾರಿಯೂ ಆದರೂ. ಆ ಮೇಲೆ ಬಂತು ಗಾಂಧಿ ಮಹಾತ್ಮರ ರಣಭೇರಿಯ ಕರೆ. ಅದಕ್ಕೆ ಓಗೊಟ್ಟು ನಾನಾಲಾಲ ತನ್ನ ಸರಕಾರಿ ಚಾಕರಿಗೆ ಶರಣು ಹೊಡೆದು ಮುಂದೆ ಕೊನೆಯವರೆಗೂ ಕೇವಲ ತನ್ನ ಕಾವ್ಯೋದ್ಯೋ ಗದ ವರಮಾನದಿಂದಲೇ ತನ್ನ ಹಾಗೂ ತನ್ನ ಕುಟುಂಬದ ಚರಿತಾರ್ಥ ನಡೆಯಿಸಿ ಅರವತ್ತೊಂಬ ತ್ತನೆಯ ವರ್ಷದಲ್ಲಿ ಜೀವನ ಯಾತ್ರೆಯನ್ನು ಮುಗಿಸಿದರು.



ನಾನಾಲಾಲರ ಮನೆ ತನದ ಹೆಸರು ತ್ರಿವೇದಿ ಎಂದಿತ್ತು. ಆದರೆ ತಂದೆ ದಲಪತರಾಮರ ಕವಿಯೆಂಬ ಪ್ರಖ್ಯಾತಿ ಯಿಂದ ಆ ಮೂಲ ಹೆಸರು ಹಿಂದೆ ಬಿದ್ದು ಇವರಿಗೂ ಇವರ ಪೀಳಿಗೆಯವರಿಗೂ "ಕವಿ" ಎಂಬುದೇ ಅಡ್ಡ ಹೆಸ ರಾಗಿ ಅಂಟಿಕೊಂಡಿತು. ಕವಿ ನಾನಾಲಾಲರ ಕೃತಿ ಗಳ ಸಂಖ್ಯೆ ನೂರಾರು. ಹಲವಾರು ಕವನ ಸಂಗ್ರ ಹಗಳು, ವಸಂತೋತ್ಸವ, "ದ್ವಾರಕಾ ಪ್ರಳಯ" ದಂಥ ಖಂಡಕಾವ್ಯಗಳು, "ಕುರುಕ್ಷೇತ್ರ" ದಂಥ ಮಹಾಕಾವ್ಯ (೧೨ ಭಾಗ ಗಳಲ್ಲಿ) [illegible] [illegible] "[illegible]" [illegible]

ನಾನಾಲಾಲರ "ಹರಿ ಸಂಹಿತಾ" ಅಪೂರ್ಣವಾಗಿಯೇ ಉಳಿಯಿತು.

ಕಾವ್ಯವಲ್ಲದೆ ಅವರು ಹನ್ನೆರಡು ನಾಟಕಗಳನ್ನು ಬರೆದರು. ಅವುಗಳಲ್ಲಿ "ಇಂದು ಕುಮಾರ" "ಜಯಾ-ಜಯಂತ" "ಜಹಾಂಗೀರ-ನೂರಜಹಾಂ". "ಅಕಬರ". "ವಿಶ್ವಗೀತಾ" "ಮಹಾ ಸುದರ್ಶನ" ಮುಂತಾದವು ಪ್ರಮುಖ. ಹಾಗೆಯೇ ಅವರ ಎರಡು ಕಾದಂಬರಿಗಳು: "ಉಷಾ" ಮತ್ತು "ಸಾರಥಿ", ಮತ್ತೆ ಒಂದು ಕಥಾ ಸಂಗ್ರಹ "ಹಂಬಿಡಿಯಾಂ". ಉಪನ್ಯಾಸಗಳ ಎರಡು ಸಂಗ್ರಹಗಳು: "ಉದ್ಬೋಧನ" "ಸಂಸಾರ ಮಂಥನ". "ಸಾಹಿತ್ಯ ಮಂಥನ" ಇತ್ಯಾದಿ. ಹಾಗೆಯೇ ನಾಲ್ಕು ಸಂಪುಟಗಳಲ್ಲಿ ತಂದೆಯ ಚರಿತ್ರೆ "ಕವೀಶ್ವರ ದಲಪತರಾಮ". ಇದಲ್ಲದೆ ಶಾಕುಂತಲ, ಮೇಘದೂತ, ಹಾಗೂ ಭಗವದ್ಗೀತೆಗಳ ಗುಜರಾಥೀ ಅನುವಾದವನ್ನು ಜನತೆಗೆ ಕೊಟ್ಟರು. ಗುಜರಾಥದ ಹೊಸ ಕಾವ್ಯಕ್ಕೆ. ತನ್ನದೇ ಆದ ಡೋಲನ ಶೈಲಿ ಎಂಬ ಸ್ವೈರದ ಛಂದಸ್ಸನ್ನೂ ಅವರು ನೀಡಿದರು.

ಇಷ್ಟೆಲ್ಲ ವೈಪುಲ್ಯ ವೈವಿಧ್ಯಗಳೊಂದಿಗೆ ಶಕ್ತಿ, ಶೋಭೆ ಮತ್ತು ಶೈಲಿಯ ವೈಭವವೂ ಕೂಡಿದ್ದರಿಂದ ನಾನಾಲಾಲರು ಗುಜರಾಥಿ ಸಾಹಿತ್ಯ ಪ್ರಪಂಚದಲ್ಲಿ ಆರಂಭದಿಂದಲೇ ತುಂಬ ಮೆಚ್ಚುಗೆ ಮನ್ನಣೆಗಳನ್ನು ಪಡೆದರು.

೧೯೨೯ರ ಬೆಳಗಾಂವಿಯ ಸಾಹಿತ್ಯ ಸಮ್ಮೇಳನದಲ್ಲಿ ನಮ್ಮ ವರಕವಿ ಬೇಂದ್ರೆ "ಬೆಳಗು" ಕವನದಿಂದ ಒಮ್ಮೆಲೆ ಕನ್ನಡ ಕಾವ್ಯರಸಿಕರ ಹೃದಯ ಸಿಂಹಾಸನವನ್ನು ಗೆದ್ದುಕೊಂಡಂತೆಯೇ ೧೯೦೫ರಲ್ಲಿ ಗುಜರಾಥದ ಸುಪ್ರಸಿದ್ಧ ವಿಚಾರವೇತ್ತರೂ, ಕಾದಂಬರಿಕಾರರೂ ಆದ ಗೋವರ್ಧನರಾಮ ತ್ರಿಪಾಠಿಗಳ ಅಧ್ಯಕ್ಷತೆಯಲ್ಲಿ ಜರುಗಿದ ಗುಜರಾಥಿ ಸಾಹಿತ್ಯ ಸಮ್ಮೇಳನದಲ್ಲಿ "ಉದೀಯಮಾನ ಪೂರ್ಣಚಂದ್ರ" ನೆಂದು ಅಂದಿನ ಪ್ರಖ್ಯಾತ ಕವಿ ಕಾಂತ(ಮಣಿಶಂಕರ ಭಟ್ಟ)ರಿಂದ ನವ ಯುವ ಕವಿ ನಾನಾಲಾಲರು ಕೊಂಡಾಡಲ್ಪಟ್ಟರು.

ಆಗ ಅವರ ಪ್ರಾಯ ಇಪ್ಪತ್ತರ ಹಂತದಲ್ಲಿ, ಆಗಲೇ ಅವರು ಗುಜರಾಥದ ಆಧುನಿಕ ಸಾಹಿತ್ಯದ ಕೋಟೆಗೆ ಮಿಂಚಿನ ದಾಳಿಯಿಕ್ಕಿ ಅದನ್ನು ಗೆಲುವಿನಿಂದ ಪ್ರವೇಶಿಸಿದರು– ಅದೂ "ವಸಂತೋತ್ಸವ"ವೆಂಬ ಒಂದೇ ದೀರ್ಘ ಕವನದ ಕವಣೆಯಿಂದ. ನಿಜವಾಗಿಯೂ ಡಾ. ಉಮಾಶಂಕರ ಜೋಶಿಯವರು ಅಂದಂತೆ ನಾನಾಲಾಲರಿಂದ ಗುಜರಾಥೀ ಕಾವ್ಯದಲ್ಲಿ ವಸಂತೋತ್ಸವ ಆರಂಭವಾಯಿತು! ನಾನಾಲಾಲರಿಗೂ ಹಿಂದಿನ ಹಿರಿಯ ಗುಜರಾಥಿ ಕವಿಗಳಾದ ನರ್ಮದ, ನರಸಿಂಹರಾವ್, ದಿವಾಟಿಯಾ. ಕಾಂತ ಪ್ರಭೃತಿಗಳು ಒಂದು ಬಗೆಯ ಕಾವ್ಯಮಯ ರಮ್ಯ ವಿಸ್ಮಿತಿಯನ್ನೋ ನಿರಾಶಾವಾದವನ್ನೋ ದುಃಖವನ್ನೋ ತಮ್ಮ ವೀಣೆಯಲ್ಲಿ ಮಿಡಿಯುತ್ತಿದ್ದರೂ. ನುಡಿಸುತ್ತಿದ್ದರು. ಆದರೆ ಮೊಟ್ಟಮೊದಲು ನಾನಾಲಾಲರೇ ಆಶೆಯ ಆನಂದದ, ಹಾಗೂ ವಿಸ್ಮಯಯುಕ್ತ ರಮ್ಯತೆಯ 'ರೋಮ್ಯಾಂಟಿಕ್' ಭಾವವನ್ನೂ ಬಣ್ಣವನ್ನೂ ಗುಜರಾಥೀ ಕಾವ್ಯಕ್ಕೆ ತಂದವರು. ಅವರ ಅತ್ಯುತ್ತಮ ಕವಿತೆಯ ಆಕರ್ಷಣೆಯೂ ಮೋಹಕತೆಯೂ ತಡೆಯಲಾಗದ ಶಕ್ತಿಯದು. ಈ ಕವಿ ಒಂದು ದರ್ಶನದೊಂದಿಗೆ, ಒಂದು ಸಂದೇಶದೊಂದಿಗೆ ಬಂದನು. ಅದು ವಸಂತದ ಸಂದೇಶ. ಭವಿಷ್ಯತ್ತು ತನ್ನನ್ನು ವಸಂತದ ಸಂದೇಶವಾಹಕನೆಂದು ಗುರುತಿಸಿದರೆ ಸಾಕೆಂದರು ನಾನಾಲಾಲ. ವಸಂತಧರ್ಮವೇ ಕವಿ ಧರ್ಮವು ಮತ್ತು ವಸಂತ ಧರ್ಮವೆಂಬ ಅವರ ಕಲ್ಪನೆಯ ತತ್ತ್ವದಲ್ಲಿ ಕೇವಲ ವಸಂತ ಋತು ಪ್ರತಿನಿಧಿಸುವ ಎಲ್ಲ ಸಂಗತಿಗಳು ಮಾತ್ರವಲ್ಲ, ಪುನರುಜ್ಜೀವನದ ಜನಜೀವನದ ಪುನರುತ್ಥಾನದ ತತ್ತ್ವವೂ ಒಳಪಟ್ಟಿತ್ತು. ಅವರು ಗುಜರಾಥಿ ಕಾವ್ಯದಲ್ಲಿ ಹೊಸದೊಂದು ರುಚಿಮಾತ್ರ ಅಲ್ಲ, ಹೊಸದೊಂದು ಧ್ವನಿಯೇ ಆಗಿ ಹೋದರು. ತಂದೆ ದಲಪತರಾಮರ ಕಾವ್ಯ ನೆಲ ಬಿಟ್ಟು ನೆಗೆಯುತ್ತಿದ್ದಿಲ್ಲ. ಆದರೆ ಮಗನದು ಕಾಳಿದಾಸ ಬಣ್ಣಿಸುವ ದುಷ್ಯಂತನ ರಥದಂತೆ "ವಿಯತಿ ಬಹುರಾತಂ ಸ್ತೋಕಂ ನಿಮ್ನಂ ಪ್ರಯಾತಿ". ನೆಲದ ಮೇಲೆ ಸಾಗುವದೇ ಕಡಿಮೆ. ಬಹು ಪಾಲು ಬಾನಿನಲ್ಲಿಯೇ ಅವರ ಯಾನ! ಇಂಚರ ಬೆಳದಿಂಗಳು ಮತ್ತು ಕರುಳಿನ ಮಿಡಿತ ಅವರ ಕಾವ್ಯದಲ್ಲಿ–ವಸಂತಾಗಮನವನ್ನು ಸಾರುವ ಕೋಗಿ

ಲೆಯ ಕಂಠದಲ್ಲಿ ಹೇಗೋ ಹಾಗೆಯೇ–ಏಕ ರಸವಾಗಿ ಎರಕಹೊಯ್ದಿತ್ತು.

"ಸುಗ್ಗಿ ಹಿಗ್ಗುತಲಿರೆ ಬಣ್ಣಿಸದೆ ಕೋಗಿಲೆಯು?" ಎಂದು ಬೇಂದ್ರೆ ಕೇಳಿದ್ದುಂಟು. ವಸಂತಕಾಲದಲ್ಲಿ "ಸುಗ್ಗಿ ಸುಗ್ಗಿ ಸುಣ್ಣ" ಎಂದು ಗಿಳಿಗಳ ಹಸಿರು ಹಿಂಡು ತೋರಣದಂತೆ ಕೂದಿರುತ್ತದೆ. ಬಿಮ್ಮನೆ ಬಾಣಕ್ಕೆ ಸೋತು ಕಮ್ಮನೆ ಮಾಮರನೆ ಹೂತು ಕಾಮುಗಾಗಿ ಕಾದಿರುತ್ತದೆ–ಆಗ ಮಧುರಮಾಸವೇ ನಿಬ್ಬಣಕೆ ಹೊರಟಂತೆ ಎಂದಿದ್ದಾರೆ ಬೇಂದ್ರೆ. ವರಕವಿ ಕುವೆಂಪು ವಸಂತದ ಸೊಬಗು, ಸೊಗಸನ್ನು ಪರಿಪರಿಯಾಗಿ ಬಣ್ಣಿಸಿದ್ದಾರೆ. "ಅಡಿಯ ಗೆಜ್ಜೆ ನಡುಗೆ ಹೆಜ್ಜೆ ಇಡುವ ಸುಗ್ಗಿ ಬರುತಿದೆ. ಸುಗ್ಗಿ ಬರೆ ಹಿಗ್ಗಿ ತಿರೆ ಸಗ್ಗ ಸೊಗವ ತರುತಿದೆ" ವಸಂತಾಗಮದ ಬಾಹ್ಯ ಸೌಂದರ್ಯಕ್ಕೆ ಕುವೆಂಪು ಅವರು ಈ 'ಸುಗ್ಗಿ' ಕವನದಲ್ಲಿ ನಿಲುಗನ್ನಡಿಯನ್ನೇ ಹಿಡಿದಿದ್ದಾರೆ. ಇದೇ ವಸ್ತು ಒಂದು ಪುಟ್ಟ ಪದ್ಯದಲ್ಲಿ ಅಂಬಿಕಾತನಯದತ್ತರ ವಾಗೀಂದ್ರ ಜಾಲ ಸೆರೆ ಹಿಡಿದ ಅದ್ಭುತ ಉತ್ಪ್ರೇಕ್ಷೆ ನೋಡಿ "ನೂರು ಮರದ ನೂರು ಸ್ವರ–ಅದರ ವಿಧಾಹದಾ–ಗಾಳಿಗೇ ಗುಳ್ಳೆ ಒಡೆದಂತೆ! ಅಲ್ಲಿ ತುಳುಕಾಡುವ ಸಂದೇಶ ? ಬೆಳಕೆ ಬದುಕು ಎಂಬ ಮಾತಾ!"

ನಾನಾಲಾಲರು "ವಸಂತೋತ್ಸವ"ವೆಂಬ ದೀರ್ಘ ಕವಿತೆಯಲ್ಲಿ ವಸಂತದ ಹಾಗೂ ಜೀವನಾನಂದದ ತಿರುಳನ್ನೇ ಕುರಿತು ಶಾಬ್ದಿಕವಾಗಿಯೂ ಲಾಕ್ಷಣಿಕವಾಗಿಯೂ ಹಾಡಿದ್ದಾರೆ. ಅವರಿಗೂ ಮುಂಚೆ ಕಾಂತ ಕವಿಯು "ವಸಂತ ವಿಜಯ" ಕವಿತೆ ಬರೆದಿದ್ದರು. ಅದರಂತೆಯೇ ನಾನಾಲಾಲರು ಬರೆಯಲು ಹೊರಟಿದ್ದರು. ಅದೇ ರೀತಿ ಟೆನ್ನಿಸನ್ ಕವಿಯು "[illegible]" ಕಾವ್ಯದ ಗೆರೆಯನ್ನು ತನ್ನ ಈ ಕವಿತೆಯಲ್ಲಿ [illegible] ಅದರ [illegible]. ಆದರೆ [illegible] [illegible] ಮತ್ತು [illegible] ನಾನಾಲಾಲರಿಗೆ [illegible]. ಅವರು ವಸಂತೋತ್ಸವ ತನ್ನದೇ [illegible] [illegible].

[illegible]

ವಸಂತ ಋತುವಿನ ಕುರಿತು ಅದರ ಉತ್ಸಾಹ ಉಲ್ಲಾಸ ಜತೆಗೆ ವಿಯೋಗ ಸಂಯೋಗಗಳ ಶೃಂಗಾರ ಭಾವ, ವಿರಹ ಮಿಲನಗಳ ಆರ್ತತೆ, ಉತ್ಕಟತೆ ಎಲ್ಲವನ್ನೂ ಅನೇಕ ಸಲ ಅನೇಕ ರೀತಿ ಚಿತ್ರಿಸಿದ್ದುಂಟು. ಗುಜರಾಥಿ ಕಾವ್ಯ ಇದನ್ನೇ "ಫಾಗು" ಮತ್ತು "ಬಾರಾಮಾಸಿ" ಎಂಬ ಪ್ರಕಾರಗಳಲ್ಲಿ ಸಾಧಿಸಿತು. ಆದರೆ ಇದೆಲ್ಲ ನಿರೂಪಣೆ ತಟಸ್ಥ ವ್ಯಕ್ತಿ ನಿರಪೇಕ್ಷ ಪ್ರಾಸಂಗಿಕ ಮತ್ತು ಆನುಷಂಗಿಕವಾಗಿತ್ತು. ಆದರೆ ಕವಿ ನಾನಾಲಾಲರ 'ವಸಂತ' ಅಂದು ಹತ್ತೊಂಭತ್ತನೆಯ ಶತಮಾನದ ಮಧ್ಯಭಾಗದಲ್ಲಿ ನಮ್ಮ ದೇಶವನ್ನೇ ವ್ಯಾಪಿಸಿದ ಸಾಂಸ್ಕೃತಿಕ ಪುನರುಜ್ಜೀವನದ ಹೊಸ ಪ್ರಚೋದನೆಯ ಪ್ರೇರಣೆ ಪ್ರಭಾವಗಳಿಗೆ ಪ್ರತೀಕವಾಗಿ ಕಳೆದುಂಬಿಕೊಂಡಿತು.

ಶೆಲ್ಲಿ ತನ್ನ Ode to the west wind (ಪಶ್ಚಿಮ ಪವನ ಸೂಕ್ತ)ದಲ್ಲಿ ವಸಂತವು ತನ್ನ ಕಹಳೆಯನ್ನು ಕನವರಿಸುವ ಪೃಥ್ವಿಯ ಮೇಲಿಂದ ಊದುವದು ಎಂದು ಬಣ್ಣಿಸಿರುವನು. ವಸಂತವು ಮಧುರವಾದ ಮೊಗ್ಗೆಗಳನ್ನು ಕುರಿಹಿಂಡಿನಂತೆ ಹವೆಯಲ್ಲಿ ಮೇಯಲಿಕ್ಕೆ ಅಟ್ಟುವದು. ಬಯಲನ್ನೂ ಬೆಟ್ಟವನ್ನೂ ಜೀವಂತ ಬಣ್ಣಗಳಿಂದ ತುಂಬುವುದು ಎಂದಿರುವನು. ವಸಂತೋತ್ಸವದ ಪ್ರಸ್ತಾಪನೆಯಲ್ಲೂ ನಾನಾಲಾಲರು ಇದೇ ಬಗೆಯ ಮಾತನ್ನು ಆಡಿದ್ದಾರೆ. "ವಸಂತವು ಪುನರುಜ್ಜೀವನದ ಪ್ರತೀಕ. ಚಳಿಯ ಹೊಡೆತಕ್ಕೆ ಹಾಳಾಗಿಹೋದುದೆಲ್ಲದರಲ್ಲಿಯೂ ಅದು ಹೊಸ [illegible] [illegible]."

'ವಸಂತೋತ್ಸವ' ಕಾವ್ಯದಲ್ಲಿ ಕವಿಯು [illegible]ತ್ತಿರುವುದು ಒಂದು ಪ್ರಣಯ ಕಥೆ–[illegible] [illegible] ಕೈಯಲ್ಲಿ ಕೊಳಲು ಹಿಡಿದ [illegible] [illegible]ರು. (ರಾಧಾಕೃಷ್ಣರ ಪ್ರತಿಬಿಂಬ?) ಅವರ [illegible]ತಕ್ಕೆ ವಸಂತಕಾಲದ ಪ್ರಕೃತಿ ಸೌಂದರ್ಯವೇ ಹಿನ್ನೆಲೆ. ಈ ನಾಯಕ ನಾಯಿಕೆ [illegible] [illegible] ಈ ಕಾವ್ಯದ [illegible] [illegible]ಣೆಯ ಜೋಕಟ್ಟು ದೊರೆಯುತ್ತವೆ.

ಕಾವ್ಯದ ಆರಂಭ ವಸಂತ ಮಾಸದಲ್ಲಿ ಒಂದು ಮುಂಜಾವು. ನಾಯಕಿ ತನ್ನ ಸಖಿಯೊಂದಿಗೆ ಹೂವು ಕಲೆ ಹಾಕಲು ತುಂಬಿ ಅರಳಿದ ಹೂದೋಟ ವಾಟಿಕೆಗಳುಳ್ಳ ವನಪ್ರದೇಶದಲ್ಲಿ ಅಲೆದಾಡು ತ್ತಾಳೆ. ಗುಲಾಬಿ ಹೂವು ಇನ್ನೂ ಇಬ್ಬನಿ ಗಳಿಂದ ಒದ್ದೆಯಾಗಿದೆ. ಹಕ್ಕಿಯು ಮನೆಗಳ ಮಾಡುಗಳು ಹೊಬಿಸಿಲ ಬಂಗಾರದ ಲೇಪ ತಳೆದು ಇನ್ನೂ ತೊಳಗುತ್ತಿವೆ. ಸ್ವಲ್ಪವೇ ದೂರ ದಲ್ಲಿ ಒಂದು ಮಾವಿನ ತೋಪು. ಅಲ್ಲಿ ಒಂದು ಕೊಳ. ತೋಪಿನ ತೊಂಗಲಲ್ಲಿ ಕೋಗಿಲೆ ಕುಹೂ ಎಂದು ಕುಕಿಲಿ ವಸಂತಾಗಮನವನ್ನು ಸ್ವಾಗತಿಸು ತ್ತದೆ. ಅಲ್ಲಿ ನಾಯಕ-ನಾಯಕಿಯರ ಕಣ್ಣು ಕೂಡುತ್ತವೆ. ಅವರು ಅನ್ಯೋನ್ಯ ಅನುರಕ್ತ ರಾಗಿಯೇ ಬಿಡುತ್ತಾರೆ. ಆಗ ನಾಯಕಿ ನಾಯಕ ನಿಗೆ ಒಂದು ಹೂವು ನೀಡುತ್ತಾಳೆ ಅದರ ಜತೆಗೆ ತನ್ನ ಹೃದಯವನ್ನು ಕೂಡಿಟ್ಟು. ಈ ಯುಗಲಕ್ಕೆ ಒದಗಿದ್ದೇ ಆ ಇನ್ನೊಂದು ಜೋಡಿಗೂ ಒದಗು ತ್ತದೆ. ಆದರಿಂದ ಈ ಪ್ರೇಮ ವಿನ್ಯಾಸಕ್ಕೆ ಭಾವದ ಒಂದು ವಿಶಾಲ ವ್ಯಾಪಕತೆ ಉಂಟಾಗುತ್ತದೆ.

ಕವಿಯು ಈ ಕಾವ್ಯದಲ್ಲಿ ಪ್ರೇಮ ಮತ್ತು ವಿವಾಹಗಳ ಬಗೆಗೆ ತನ್ನ ನೋಟ, ನಿಲುವೆ ಗಳನ್ನು ಅನೇಕ ಸೂಕ್ತಿಗಳಲ್ಲಿ ಪೋಣಿಸಿ ದ್ದಾನೆ. ಪ್ರೀತಿಯಲ್ಲಿ ತೊಡಗುವುದೆಂದರೆ ಸ್ವರ್ಗದಲ್ಲಿಯೂ ಇದ್ದಂತೆ. ಸ್ವರ್ಗ ಮತ್ತು ಪ್ರೇಮ ಇವೆರಡೂ ಬೇರೆ ಬೇರೆ ಸಂಗತಿಗಳೇ? ಪ್ರೇಮವು ಆತ್ಮದ ಪರಮ ಸ್ಫುಲಿಂಗ. ಪ್ರೇಮದ ಮಂದಿರವೇ ದೇವರಸ್ಥಾನ. ದೇವರ ಆ ಸ್ಥಾನ ದಲ್ಲಿ ಒಂದು ಆತ್ಮ ಇನ್ನೊಂದು ಆತ್ಮಕ್ಕೆ ತನ್ನನ್ನು ಸರ್ವಾರ್ಪಣ ಭಾವದಿಂದ ವಶವಾಗುವುದೇ ವಿವಾಹ-ಪರಿಶುದ್ಧ ನೈಜ ಹಾಗೂ ಉದಾತ್ತ ವಾದ ಲಗ್ನ ಬಂಧನ. ಪ್ರೇಮದ ಕಥೆಯೇ ಆತ್ಮದ ಕಥೆಯು, ಪರಿಶುದ್ಧ ಪಾವಿತ್ರ್ಯದ ಅತ್ಯುನ್ನತ ಸತ್ಯಗಳು- ಪ್ರೇಮಿಕರಿಗೇ ವ್ಯಕ್ತ ವಾಗುವವು. ಹೀಗೆ ಪ್ರೀತಿ ವಿವಾಹವೇ ಜೀವ ನದ ಪರಮ ಶ್ರೇಷ್ಠ ಮುಹೂರ್ತವು-ಅದುವೇ ದಿವ್ಯತೆಯ ದೈವಿಕತೆಯ ಉಷಃಕಾಲ!

ಅಂಬಿಕಾತನಯದತ್ತರು, "ಇದು ಬರಿ ಬೆಳ ಗಲ್ಲೊ ಅಣ್ಣಾ!" ಅಂದರು ಮುಂಜಾವಿಗೆ. ಅಲ್ಲಿ ಅವರಿಗೆ "ಶಾಂತಿರಸವೇ ಪ್ರೀತಿಯಾಗಿ ಮೈದೋ ರಿತು!" ನಾನಾಲಾಲರಿಗೆ ವಸಂತ ಬರೇ ಒಂದು ಸೊಬಗಿನ ಸುಗ್ಗಿ ಅಲ್ಲ. ಪ್ರೇಮದ, ಪವಿತ್ರ ಜೀವನದ ದೈವೀ ಕೃಪೆಯ ಕಲ್ಯಾಣ ಮಾಸ ಬರೇ ಶೃಂಗಾರ ಮಾಸವಲ್ಲ.

ಅಕ್ಷರಶಃ ಹಾಗೂ ಪ್ರತೀಕಾತ್ಮವಾಗಿ ಹೂವಿನ ಕತೆ ಈ ವಸಂತೋತ್ಸವ. ಆದರ ಹಿನ್ನೆಲೆ ಗುಜರಾಥದ ಶ್ರೀಮಂತ ಪ್ರಕೃತಿ ಸೌಂದರ್ಯ. ಸಂದರ್ಭದಲ್ಲಿ ಈ ಕಾವ್ಯ ಈ ಸೌಂದರ್ಯಕ್ಕೆ ಹಾಡಿದ ಹೆಮ್ಮೆಯ ಹಿಗ್ಗಿನ ಸೂಕ್ತ.

ಈ ಕಾವ್ಯದ ಇನ್ನೊಂದು ವೈಶಿಷ್ಟ್ಯವೆಂದರೆ ಈ ಪ್ರಥಮ ಕೃತಿಯಲ್ಲೇ ನಾನಾಲಾಲರು ಗುಜರಾಥೀ ಕಾವ್ಯಕ್ಕೆ ಕೊಟ್ಟ ಹೊಸ ಛಂದಸ್ಸು. ಅವರ ತಂದೆಯು ಸಮಕಾಲೀನರಾದ ಹಿರಿಯ ಕವಿ ನರ್ಮದ 'ಮಹಾ ಛಂದಸ್ಸು' ಇಂಗ್ಲೀಷ್ ಬ್ಲ್ಯಾಂಕ್ ವ್ಹರ್ಸ್‌ಗೆ ಸಮ ರೂಪವಾಗಿ ಗುಜರಾಥಿಗೆ ನೀಡಿದ್ದರು. (ನಮ್ಮ ಕನ್ನಡದಲ್ಲಿ 'ಸರಳರಗಳೆ' ಆ ಸ್ಥಾನಮಾನವನ್ನು ಪಡೆದಿದ್ದು ಅದರಲ್ಲಿಯೇ ಕವಿ ಕುವೆಂಪು ತಮ್ಮ 'ಶ್ರೀ ಮದ್ರಾಮಾಯಣ ದರ್ಶನಂ'ದಲ್ಲಿ ತಮ್ಮದೇ ಆದ 'ಮಹಾಛಂದಸ್ಸು' ಒಂದನ್ನು ಆವಿಷ್ಕರಿಸಿದ್ದಾರೆ).

ಆದರೆ ನಾನಾಲಾಲ ಇದಕ್ಕೂ ಮುಂದೆ ಹೋಗಿ ಅಮೇರಿಕದ ಮಹಾಕವಿ ವಾಲ್ಟ್ ವ್ಹಿಟ್ಮನ್ನನಂತೆ ಫ್ರೆಂಚ್ ಕವಿಗಳ ಮುಕ್ತ ಛಂದಸ್ಸಿನಂತೆ ಪದ್ಯ ಗಂಧಿಯಾದ ಅಪೂರ್ವ ಗದ್ಯಶೈಲಿಯೊಂದನ್ನು ಕಂಡುಕೊಂಡರು. ಅದುವೇ 'ದೋಲನ ಶೈಲಿ'. 'ವಸಂತೋತ್ಸವ'ದಲ್ಲಿಯೇ ಈ ಶೈಲಿಯ ಮೊದ ಲನೆಯ ಯಶಸ್ವೀ ಪ್ರಯೋಗ. ಮುಂದೆ ತಮ್ಮ ಇತರ ಅನೇಕ ಕಾವ್ಯಗಳಲ್ಲಿಯೂ ನಾನಾಲಾಲ ಈ ಶೈಲಿಯನ್ನು ತುಂಬ ಪ್ರಭುತ್ವದಿಂದ ಹಾಗೂ ಪ್ರಭಾವದಿಂದ ಪ್ರಯೋಜನಕಾರಿಯಾಗಿ ಬಳಸಿ ಕೊಂಡರು.

ಈ ಕವಿಯು ಅಚ್ಚು ಮೆಚ್ಚಿನ ಒಂದು ವಸ್ತು ಹುಣ್ಣಿಮೆಯ ಚಂದ್ರ-"ತುಂಬುದಿಂಗಳ ಬಿಂಬ" "ಬೆಳದಿಂಗಳ ಸುಧೆಯಂಗಳ ತುಂಬಿ ತುಳುಕಿ ಹರಿದಿರು"ವಾಗ ನಾನಾಲಾಲರೂ ನಮ್ಮ ಆನಂದಕಂದರೊಂದಿಗೆ ದನಿಗೂಡಿಸಿ ಕೇಳಬಹುದು.

ತುಂಬುದಿಂಗಳ ಬಿಂಬವೇ ನೀ
ಕಾಂಬೆಯೇಕೊಂದೇ ದಿನ?
ಅಂಬರದಿ ನಗುತಿರ್ದರಾಗದೇ
ಇಂಬುಗೊಡುವೆಯೆ ದಿನ ದಿನ? ("ವಿರಹಿಣಿ").

ಅದೊಂದು ಹುಣ್ಣಿಮೆಯ ರಾತ್ರಿ. ನಾನಾಲಾಲ ಆ ಕುರಿತು ಗುಜರಾಥಿ ಕಾವ್ಯದಲ್ಲಿಯೇ ಅತ್ಯಂತ ಮಧುರವೂ ಸುಂದರವೂ ಆದ ನುಡಿಗಳನ್ನು ಆಡಿದ್ದಾರೆ. ಚಂದ್ರನ ಪೂರ್ಣ ಬಿಂಬ ತುಂಬ ವೈಭವ ಹಾಗೂ ಸೌಂದರ್ಯದಲ್ಲಿ ತೋರಿಬರುತ್ತಿದೆ. ಮುಗಿಲುಗಳನ್ನೂ ಭೇದಿಸಿ ತನ್ನ ತಂಪಿನ ಪೊಪಿನ ಬಿಳಿಯ ಸವಿ ಸೊಬಗಿನ ಅಮೃತಮಂಥ ಬೆಳಕನ್ನು ತೂರಾಡುತ್ತ ಏರಿ ಬರುತ್ತಿದೆ. ಅದನ್ನು ನಾನಾಲಾಲ ಕಣ್ಣು ಕಟ್ಟುವಂತೆ ಚಿತ್ರಿಸಿದ್ದಾರೆ.

ಇಂದು ಹುಣ್ಣಿಮೆಯ ಹಿಗ್ಗಿನ ದಿನ
ಅಕೋ ನೋಡು,
ಕೋಗಿಲೆಯ ಹಾಡು
ಪರಿದೊಗೆದಿದೆ
ಮುಗಿಲಿನ ಕರಿ ಪರದೆ
ಮತ್ತೆ ಆ ಅಂತರಾಳದಿಂದ
ಏರಿ ಬರುತ್ತಿದ್ದಾನೆ ಬಾನು ಕಣ್ಣು ತೆರೆದಂಪ
ಅಮೃತ ವರ್ಷಣ ಪೂರ್ಣಚಂದ್ರ!

ಈ ನುಡಿಯಿಂದಲೇ ಎತ್ತಿಕೊಂಡು ೧೯೦೫ರ ಗುಜರಾಥಿ ಸಾಹಿತ್ಯ ಸಮ್ಮೇಳನದಲ್ಲಿ ಕವಿ ಕಾಂತ ನಾನಾಲಾಲರನ್ನು 'ಪೂರ್ಣಚಂದ್ರ' ನೆಂದು ಕರೆದುದು.

ಬೆಳದಿಂಗಳಿಂತೆಯೇ ಕೊಳಲು "ವಸಂತೋತ್ಸವ"ದ ನಾಯಕನ ಕೈಯಲ್ಲಿ ಪ್ರೇಮ-ಪ್ರೇರಣೆಯ ಪ್ರತೀಕ:

ಅದ್ಭುತ ಕೊಳಲು ಕೇಳುತಿದೆ!
ನನ್ನನು ನಿದ್ದೆಯಿಂದೆಬ್ಬಿಸಿದೆ.
ಅದರಿಂಚರ ಅಲೆ ಅಲೆ ತೇಲಿ ಬಂದಿದೆ.
ಎನ್ನೆದೆಯಾಳವ ಮುಟ್ಟಿ ಮೀಟಿದೆ
ನನ್ನನು ನಿದ್ದೆಯಿಂದೆಬ್ಬಿಸಿದೆ
ಅದ್ಭುತ ಕೊಳಲು ಕೇಳುತಿದೆ!

ಒಮ್ಮೆ ನಾನಾಲಾಲರು ಒಬ್ಬ ಕವಿಮಿತ್ರ (ಶ್ರೀ ಆರ್. ವಿ. ಪಾಠಕ)ರೊಂದಿಗೆ ಸಾಬರಮತಿಯ ತಡಿಯಲ್ಲಿ ತಿರುಗಾಡುತ್ತಿದ್ದರು. ಆಗ ವಸಂತ ಋತು ಆರಂಭವಾಗಿತ್ತು. ನಾನಾಲಾಲರು ಒಮ್ಮೆಲೆ ಕೂಗಿದರು: "ವಸಂತದ ಸೊಬಗನ್ನು ಇಲ್ಲಿ ನೋಡಿ." ಒಂದು ಕ್ಷಣ ತಡೆದು ಅವರು ಮುಂದುರಿದವರು: "ನಾನು ವಸಂತ ಮಾಸವನ್ನು ಅನಗತ್ಯವಾಗಿ ಮಿತಿ ಮೀರಿ ಕೊಂಡಾಡುತ್ತಿರುತ್ತೇನೆ ಎಂದು ಆಡಿಕೊಳ್ಳುತ್ತಾರೆ ಮಂದಿ. ನಾನು ಅದನ್ನೆಲ್ಲ ಕೇಳಿದ್ದೇನೆ. ಹೌದು. ನಾನು ತುಸು ಅತಿಶಯೋಕ್ತಿಯಾಗಿ ಬಣ್ಣಿಸುತ್ತೇನೆ–ಕವಿಗಳು ಕೆಲ ಸಲ ಹಾಗೆ ಮಾಡುವುದು ವಾಡಿಕೆ. ಆದರೆ ನಾನು ಹೇಳುವುದು ತತ್ತ್ವತಃ ಸತ್ಯವಿರುತ್ತದೆ. ಮತ್ತು ನಾನು ಕಂಡಿದ್ದನ್ನು ಕುರಿತೇ ಬರೆಯುತ್ತೇನೆ."

ಮತ್ತು ಈ ಕವಿಯಷ್ಟು ವರ್ಣರಂಜಿತವಾಗಿ ಕರ್ಣಮಧುರವಾಗಿ ಗುಜರಾಥದ ಪ್ರಕೃತಿಯ ಚೆಲುವು ಬೆಡಗುಗಳನ್ನು ಇನ್ನಾವ ಕವಿಯೂ ಚಿತ್ರಿಸಿಲ್ಲ. ಆದ್ದರಿಂದಲೇ ವಸಂತೋತ್ಸವ ಉಲ್ಹಾಸಗಳನ್ನು ಎಲ್ಲಿಲ್ಲದ ಉತ್ಸಾಹದಿಂದ ಕೊಂಡಾಡುವುದರಲ್ಲಿ ಅವರಿಗೆ ಎಂದೂ ದಣಿವಿದ್ದಿಲ್ಲ, ತಣಿವಿದ್ದಿಲ್ಲ. ಜನತೆಯ ಅಂದಿನ ಪುನರುಜ್ಜೀವನಕ್ಕೆ ವಸಂತೋತ್ಸವವು ತನ್ನ ಸ್ಫೂರ್ತಿ ಮೂರ್ತತೆ ಮತ್ತು ವರ್ಣವೈವಿಧ್ಯದಿಂದ ಉಜ್ವಲ ಪ್ರತೀಕವಾಯಿತು. ಆ ಕೃತಿಯ ಪ್ರೇರಣೆಯಿಂದ ಆಧುನಿಕ ಗುಜರಾಥೀ ಕಾವ್ಯ ಪ್ರವಾಹವೇ ಕೊನರಿ ಅರಳಿ ಕಂಗೊಳಿಸಿದರೆ ಸೋಜಿಗವೇ. ✡

ಸರ್ವಾಧಿಕಾರಿಗಳು ಹುಲಿಗಳ ಬೆನ್ನೇರಿ ಕುಳಿತು ಅತ್ತಿತ್ತ ಅಲೆಯುತ್ತಿದ್ದಾರೆ; ಆದರೆ ಅಲ್ಲಿಂದಿಳಿಯಲು ಅವರಿಗೆ ಧೈರ್ಯ ಸಾಲುತ್ತಿಲ್ಲ. ಹುಲಿಗಳ ಹಸಿವು ಮಾತ್ರ ದಿನದಿನಕ್ಕೆ ಹೆಚ್ಚಾಗುತ್ತಿದೆ

—ವಿನ್‌ಸ್ಟನ್ ಚರ್ಚಿಲ್

ವಿಜ್ಞಾನದ ಲೇಖಕನಿಗೆ ಸಾಹಿತ್ಯದ ಸ್ಫೂರ್ತಿರಸ ಹರಿದುಬಂದಾಗ ಓದುಗರಿಗೆ ಒಂದು ವಿಶೇಷ ರಸದೌತಣ. ಇಂಥ ಒಂದು ಅಮೋಘವಾದ ಔತಣವನ್ನು ನೀಡಿರುವ ವಿಜ್ಞಾನಿಗಳಲ್ಲಿ ಫ್ರಾನ್ಸಿನ ಜಾನ್ ಹೆನ್ರಿ ಫೇಬ್ರ್ (೧೮೨೩-೧೯೧೫) ಹೆಸರಾಂತವನು. ತನ್ನ ಜೀವನವನ್ನೇ ಈತ ಕೀಟಜೀವನದ ಅನೇಕ ಗೂಢಗಳನ್ನು ಒಡೆದು ತೋರಿಸಲು ಮುಡಿಪಾಗಿಟ್ಟ. ತಾನು ಮಾಡಿದ ಪ್ರಯೋಗಗಳ ದಾಖಲೆಗಳನ್ನು ಆತ್ಮಕಥನದ ರೂಪದಲ್ಲಿ ಬರೆದು ಒಂದು ವಿಶೇಷ ಸಾಹಿತ್ಯಕೃತಿಯನ್ನೇ ರಚಿಸಿದ್ದಾನೆ. ರಸಿಕತನ, ತಿಳಿ ಹಾಸ್ಯ, ಆತ್ಮೀಯತೆ, ಅತಿ ಕ್ಲಿಷ್ಟ ವಿಷಯಗಳನ್ನೂ ಸರಳವಾಗಿ ತಿಳಿಸಬಲ್ಲ ಅಭಿವ್ಯಕ್ತಿತ್ವ ಇವುಗಳಿಂದಾಗಿ ಅವನ ಬರವಣಿಗೆ ರಸವತ್ತಾಗಿ, ಸುಲಭವಾಗಿ ಓದಿಸಿಕೊಂಡು ಹೋಗುತ್ತದೆ.

ಅವನ ಈ ವೈಜ್ಞಾನಿಕ ಆತ್ಮಕಥನದ ಹೆಸರು : "ಸೂವಿನೀರ್ ಎಂಟೋಮೋಲೋಜಿಕ್ಸ್" ಎಂದು. ಇದು ಹತ್ತು ಸಂಪುಟಗಳಲ್ಲಿದ್ದು ಕೀಟ ಜೀವನದ ಮಹಾಕಾವ್ಯ ಎನಿಸಿಕೊಂಡಿದೆ. ಇದರಿಂದ ಕೆಲವು ಭಾಗಗಳನ್ನು 'ಕಸ್ತೂರಿ'ಯ ಆಗಸ್ಟ್ ೧೯೭೧ ರ ಸಂಚಿಕೆಯಲ್ಲಿ ಕೊಡಲಾಗಿತ್ತು. ಇನ್ನೂ ಕೆಲವು ಭಾಗಗಳನ್ನು ಈ ಕೆಳಗೆ ಕೊಡಲಾಗಿದೆ.

ಫ್ರೆಂಚ್ ಮೂಲ : **ಜಾನ್ ಹೆನ್ರಿ ಫೇಬ್ರ್**
ಕನ್ನಡಕ್ಕೆ : **ಟಿ. ಎಸ್. ಸಂಜೀವರಾವ್**

ಆ ರಾತ್ರಿಯನ್ನು ನಾನು ಹೇಗೆ ಮರೆಯಲಿ? ಅದಕ್ಕೆ "ಮಯೂರಾಕ್ಷಿಯ ರಾತ್ರಿ" ಎಂದೇ ನಾಮಕರಣ ಮಾಡುತ್ತೇನೆ! ಮಯೂರಾಕ್ಷಿಯನ್ನು ಯಾರು ತಾನೆ ಕಂಡಿಲ್ಲ? ನಮ್ಮ ದೇಶದ * ಚಿಟ್ಟೆಗಳಲ್ಲೆಲ್ಲಾ ಇದೇ ಅತಿ ದೊಡ್ಡದು. ಒಂದು ಪುಟ್ಟ ಪಕ್ಷಿಯೋ ಎಂಬಷ್ಟು ಗಾತ್ರದ ಈ ಸುಂದರ ಪಾತರಗಿತ್ತಿಯನ್ನು ಎಲ್ಲರೂ ನೋಡೇ ಇರುತ್ತಾರೆ. ವಿಶಾಲವಾದ ರೆಕ್ಕೆಗಳ ನಟ್ಟ ನಡುವೆ ತೆರೆದ ದೊಡ್ಡ ದೊಡ್ಡ ನವಿಲುಗಣ್ಣುಗಳು! ಒಮ್ಮೆ ನೋಡಿದರೆ ಮತ್ತೆ ಮರೆಯುವಂತಿಲ್ಲ. ಈ ಸುಂದರಿಯ ಮೈ ಬಣ್ಣ ಕಡು ಕೆಂಗಂದು. ಕೊರಳ ಸುತ್ತ ಬಿಳೀ ತುಪ್ಪಟದ ಹಾರ. ಕಂದು ಬೂದು ಮಿಶ್ರ ಬಣ್ಣಗಳ ರೆಕ್ಕೆ. ಅವರ ಮೇಲೆ ಅದೇ ಬಣ್ಣದ ತಿಳಿ ವಕ್ರರೇಖೆಗಳು. ರೆಕ್ಕೆಗಳ ಅಂಚಿನ ಸುತ್ತ ಬಿಳೀ ಹೊಗೆಯಂಥ ಚಿತ್ತಾರ. ರೆಕ್ಕೆಗಳ ಮೇಲೆ ಎದ್ದು ಕಾಣುವ ನವಿಲುಗಣ್ಣಿನ ಪಾಪೆ ಕಡು ಕಪ್ಪಾದರೆ ಅದರ ಸುತ್ತಲಿನ

* ಫ್ರಾನ್ಸಿನ

ಬಣ್ಣಗಳೋ ಹಲವಾರು. ಕಪ್ಪು, ಬಿಳುಪು, ಕಂದು, ಕೆಂಪು ಬಣ್ಣಗಳ ಜಿಲ್ಲಿನಾಕೃತಿಯ ವಕ್ರ ರೇಖೆಗಳು ಒಂದರೊಳಗೊಂದು. ಈ ಬೆಡಗಿನ ವಸ್ತ್ರವನ್ನು ಹೊದ್ದು ಕಂಗೊಳಿಸುತ್ತಿದ್ದಾಳೆ ಮೋಹನಾಕೃತಿಯ ಸುಂದರಿ ಮಯೂರಾಕ್ಷಿ!

ಈಕೆ ತನ್ನ ಪೂರ್ವಾವಸ್ಥೆಯಲ್ಲಿ ಮರಿ ಹುಳು ವಾಗಿರುವಾಗಲೂ ಸುಂದರಿಯೇ. ಮಸುಕು ಹಳದಿಯ ಬಣ್ಣ; ಮೈ ಮೇಲೆ ತೆಳುವಾಗಿ ಎದ್ದು ಕಾಣಿಸುವ ಗುಬಟೆಗಳ ಸುತ್ತ ಕಪ್ಪು ಕೂದಲಿನ ಬೇಲಿ; ಪ್ರತಿ ಬೇಲಿಯ ಮಧ್ಯೆ ಮರಕತದ ಮಾಣಿಕ್ಯಗಳಂತೆ ಥಳಥಳಿಸುವ ಹಸಿರು ವರ್ತುಲಗಳು! ಕಂದು ಬಣ್ಣದ ಇದರ ಗೂಡು ಸಹ ಕುತೂಹಲ ಹುಟ್ಟಿಸುವಂಥಾದ್ದು. ಈ ಗೂಡುಗಳಿಗೆ ವಿಚಿತ್ರ ರೀತಿಯ ಸುರಂಗದಂಥ ಬಾಗಿಲುಗಳಿವೆ. ಒಳಗಿಂದ ಹೊರಗೆ ಹೋಗ ಬಹುದು. ಆದರೆ ಹೊರಗಿಂದ ಒಳಕ್ಕೆ ಪ್ರವೇಶವಿಲ್ಲ. ಈ ಗೂಡುಗಳು ಸಾಮಾನ್ಯವಾಗಿ ಬಾದಾಮಿ ಮರಗಳ ಬುಡದಲ್ಲಿ ತೊಗಟೆಗೆ ಅಂಟಿ ಕೊಂಡಿರುವುದನ್ನು ಕಂಡಿದ್ದೇನೆ.

ಮೇ ತಿಂಗಳ ಆರನೇ ತಾರೀಖು. ಬೆಳಗಿನ ಜಾವ. ನನ್ನ ಪ್ರಯೋಗಶಾಲೆಯಲ್ಲಿ ಮೇಜಿನ ಮೇಲೆ ನನ್ನ ಕಣ್ಣೆದುರಿನಲ್ಲೇ ಒಂದು ಹೆಣ್ಣು ಮಯೂರಾಕ್ಷಿ ಗೂಡಿಂದ ಹೊರಗೆ ಬಂತು. ಇನ್ನೂ ಒದ್ದೆ ಮುದ್ದೆಯಾಗಿದ್ದ ಆಕೆಯನ್ನು ತಕ್ಷಣವೇ ನಾನು ಒಂದು ತಂತಿಯ ಬುಟ್ಟಿಯಲ್ಲಿ ಮುಚ್ಚಿಟ್ಟೆ. ವಿಶೇಷ ಉದ್ದವೇನೂ ಇರಲಿಲ್ಲ!



ಅಭ್ಯಾಸಬಲದಿಂದ ಕೂಡಿಟ್ಟೆ ಅಷ್ಟೇ. ಚಿಟ್ಟೆ ಗಳ ಪರೀಕ್ಷೆಯಲ್ಲಿ ಆಸಕ್ತಿ ಇದ್ದ ನನಗೆ ಕಂಡ ಕಂಡ ಚಿಟ್ಟೆಗಳನ್ನೆಲ್ಲಾ ಕೂಡಿಡುವುದು ಒಂದು ಅಭ್ಯಾಸವಾಗಿ ಹೋಗಿತ್ತು. ಈ ಅಭ್ಯಾಸಕ್ಕೆ ಕಾರಣ ಎಂದಾದರೊಂದು ದಿನ ಒಂದು ಅದ್ಭುತ ಸಂಗತಿ ಜರುಗಬಹುದು ಎಂಬ ನನ ಮನಸ್ಸಿನಲ್ಲಿನ ಆಸೆ !

ಆ ಆಸೆ ಈ ಸಾರಿ ನಾನು ನಿರೀಕ್ಷಿಸಿದ್ದ ಕ್ಕಿಂತ ಹೆಚ್ಚಾಗಿ ಕೈಗೂಡಿತು. ಆ ರಾತ್ರಿ ಸುಮಾರು ಒಂಬತ್ತು ಗಂಟೆಯ ಹೊತ್ತಿಗೆ ನಾವೆಲ್ಲ ಮಲಗಲು ತಯಾರಾಗುತ್ತಿದ್ದ ಹಾಗೆ, ನನ್ನ ಪಕ್ಕದ ಕೋಣೆಯಲ್ಲಿ ಏನೋ ಗಡಿಬಿಡಿ ಸದ್ದು ಕೇಳಿಸಿತು. ಅರ್ಧಂಬರ್ಧ ಬಟ್ಟೆ ಕಳಚಿದ್ದ ನನ್ನ ಚಿಕ್ಕ ಮಗ ಪಾಲ್ ದೆವ್ವ ಹಿಡಿದವನಂತೆ ಕೋಣೆಯುದ್ದಕ್ಕೂ ಹಾರಾಡು ತ್ತಿದ್ದ. ಕುರ್ಚಿಗಳನ್ನು ಎಡವಿ ಕೆಳಗೆ ಬೀಳಿಸಿ ಧಾಂ ಧೂಂ — ಮಾಡುತ್ತಿದ್ದ. "ಅಪ್ಪಾ, ನೋಡು ಬಾ! ಎಂಥ ಭಾರಿ ಚಿಟ್ಟೆಗಳು! ಕೋಣೆ ತುಂಬಾ ಬಂದಿವೆ!" ಎಂದು ಅವನು ಅರಚಿಕೊಳ್ಳುತ್ತಿದ್ದುದು ಕೇಳಿಸುತ್ತಿತ್ತು.

ನಾನು ಅಲ್ಲಿಗೆ ಓಡಿದೆ. ಪಾಲನ ಉತ್ಸಾಹದ ಕೂಗಾಟ, ಹಾರಾಟಗಳಿಗೆ ಸಕಾರಣವಿತ್ತೆಂದು ತೋರಿಸುವ ದೃಶ್ಯ ನನ್ನ ಕಣ್ಣಿಗೆ ಬಿತ್ತು. ಕೋಣೆಯಲ್ಲಿ ಅನೇಕ ರಾಕ್ಷಸಾಕಾರದ ಮಯೂ ರಾಕ್ಷಿ ಚಿಟ್ಟೆಗಳು ಹಾರಾಡುತ್ತಿದ್ದವು. ಇಂತಹ ದಾಳಿ ನಾವು ಕಂಡದ್ದೇ ಇಲ್ಲ. ಕೈಗೆ ಸಿಕ್ಕಿದ ನಾಲ್ಕು ಪತಂಗಗಳನ್ನು ಹಿಡಿದು ಪಕ್ಷಿಗಳಿಗೋಸ್ಕರ ಎಂದಿಟ್ಟಿದ್ದ ಒಂದು ಖಾಲೀ ಪಂಜರದಲ್ಲಿ ಬಿಟ್ಟಿ ದ್ದಾಯಿತು. ಮಿಕ್ಕವು ಛಾವಣಿಯ ಗೋಡೆಗೆ ರೆಕ್ಕೆಗಳನ್ನು ಬಡಿಯುತ್ತಾ ಪರದಾಡುತ್ತಿದ್ದವು.

ಈ ಪತಂಗ ದಾಳಿಯ ದೃಶ್ಯ ಕಂಡು ನನ್ನ ಮನಸ್ಸಿಗೆ ಥಟ್ಟನೆ ಬೆಳಗಿನ ಜಾವ ನಾನು ಸೆರೆ ಹಿಡಿದಿದ್ದ ಮಯೂರಾಕ್ಷಿಯ ನೆನಪು ಬಂತು. "ಪಾಲ್, ಬೇಗೊಂದಿಷ್ಟು ಬಟ್ಟೆ ತಗುಲಿಸಿಕೋ, ನನ್ನ ಜೊತೆ ಬಾ, ಒಂದು ತಮಾಷೆ ತೋರಿ ಸುತ್ತೇನೆ!" ಎಂದು ಮಗನನ್ನು ಕರೆದೊಯ್ದೆ.

ನಾವು ವಾಸ ಮಾಡುತ್ತಿದ್ದುದು ಮಹಡಿ ಮೇಲೆ; ನನ್ನ ಪ್ರಯೋಗಶಾಲೆ ಇದ್ದುದು ಕೆಳ

ಕಟ್ಟಡದಲ್ಲಿನ ಮಹಡಿ ಮೇಲೆ. ಕೆಳಗಿಳಿದು ಮತ್ತೆ ಮೇಲಕ್ಕೆ ಹೋಗಬೇಕಾಗಿತ್ತು. ಮೆಟ್ಟಿಲು ಇಳಿದು ಹೋಗುತ್ತಿರುವಾಗ ಕೆಲಸದವಳು ಓಡಿ ಓಡಿ ಬರುತ್ತಿದ್ದಳು! ಎರಡೂ ಕೈಗಳಿಂದ ತನ್ನ ಏಪ್ರನ್ನನ್ನು* ಸುತ್ತಲೂ ಬೀಸುತ್ತ ಏರಿ ಬರುತ್ತಿದ್ದ ಪತಂಗಗಳನ್ನು ಓಡಿಸುತ್ತಿದ್ದಳು. ಅವು ಬಾವುಲಿಗಳು ಎಂದು ತಿಳಿದು ಗಾಬರಿ ಯಾಗಿದ್ದಳೇನೋ!

ಈ ಭಾರಿ ಚಿಟ್ಟೆಗಳು ನನ್ನ ಮನೆಯನ್ನು ಪೂರ್ಣ ಆಕ್ರಮಿಸಿದಂತೆ ಕಾಣುತ್ತಿತ್ತು. ಇಲ್ಲಿಯೇ ಇಷ್ಟಿದ್ದರೆ ಮಯೂರಾಕ್ಷಿಯನ್ನು ಕೂಡಿಟ್ಟಿದ್ದ ಕೋಣೆಯಲ್ಲಿ ಹೇಗಿರಬೇಕು ಎಂದು ಊಹಿಸಿ ಕೊಳ್ಳುತ್ತಿದ್ದೆ. ಬಾಗಿಲು ಹಾಕಿದ್ದರೂ ಕೋಣೆಯ ಕಿಟಕಿಗಳನ್ನು ತೆರೆದುಬಿಟ್ಟಿದ್ದೆ. ಕೋಣೆಯ ಒಳಗೆ ಚಿಟ್ಟೆಗಳು ಧಾವಿಸಿ ಬರಲು ಅಡ್ಡಿ ಆತಂಕಗಳೇನೂ ಇರಲಿಲ್ಲ.

ಮದುವಣಿಗರ ದಾಳಿ

ಕೈಯಲ್ಲಿ ಉರಿವ ಮೋಂಬತ್ತಿ ಹಿಡಿದು ನಾನು, ಪಾಲ್ ಪ್ರಯೋಗಶಾಲೆಯ ಕೋಣೆಯಲ್ಲಿ ಕಾಲಿಟ್ಟೆವು. ನಾವು ಕಂಡ ದೃಶ್ಯ ಮರೆಯಲಾರ ದಂತಹದು. ಸಟ್-ಸಟ್ ಎಂದು ಮೃದುವಾಗಿ ಸಪ್ಪಳ ಮಾಡುತ್ತ. ಅನೇಕ ರಾಕ್ಷಸ ಚಿಟ್ಟೆ ಗಳು ಮಯೂರಾಕ್ಷಿಯನ್ನು ಬಚ್ಚಿಟ್ಟಿದ್ದ ತಂತಿ ಬುಟ್ಟಿಯ ಸುತ್ತ ಹಾರಾಡುತ್ತಿದ್ದುವು. ಕೆಲ ಹೊತ್ತು ಬುಟ್ಟಿಯ ಮೇಲೆ ರೆಕ್ಕೆ ಬಡಿ ಯುತ್ತ ಕೂಡುವವು; ಮತ್ತೆ ಮೇಲೆ ಹಾರಿ ಧಾವಣಿಗೆ ಏಡತಾಕುವವು. ಪುನಃ ಕೆಳಗಿಳಿದು ಬುಟ್ಟಿಯನ್ನು ಮುತ್ತಿಬರುವವು. ನಾವು ತಂದಿದ್ದ ಮೋಂಬತ್ತಿಯ ಬೆಳಕಿಂದ ಆಕರ್ಷಿತ ವಾಗಿ ಅದರ ಮೇಲೆ ದಾಳಿಯಿಟ್ಟು ರೆಕ್ಕೆಯ ಬಡಿತದಿಂದ ಅದನ್ನು ಆರಿಸಿಯೇ ಬಿಟ್ಟವು. ಕೆಲವೊಂದು ನಮ್ಮ ಭುಜದ ಮೇಲೆ ಬಂದು ಕೂತು ರೆಕ್ಕೆಗಳನ್ನು ರಪರಪನೆ ಬಡಿಯುತ್ತ ಅಂಗಿಯ ಮೇಲೆಲ್ಲ ಹರಿದಾಡಿದವು. ಮತ್ತೆ ಇನ್ನು ಕೆಲವು ನಮ್ಮ ಮುಖದ ಮೇಲೆ ಮುಳ ಮುಳನೆ ಓಡಾಡಿದವು. ನನ್ನ ಪ್ರಯೋಗಶಾಲೆ ಆ ರಾತ್ರಿ ಯಾವನೋ ಯಕ್ಷಿಣಿಗಾರನ ಗುಹೆಯಂತಾ ಗಿತ್ತು. ಮೆಲ್ಲನೆ ರಪ್ ರಪ್ ಸದ್ದು ಮಾಡುತ್ತ ಹಾರಾಡುತ್ತಿದ್ದ ಈ ನಿಶಾಚರ ಚಿಟ್ಟೆ ಗಳಿಂದ ಕಗ್ಗತ್ತಲು ಸ್ಪಂದಿಸುತ್ತಿತ್ತು. ಪಾಲ್ ನಿಗೆ ಭಯವಾಯಿತೇನೋ, ನನ್ನ ತೋಳು ಗಳನ್ನು ಬಲವಾಗಿ ಹಿಡಿದುಕೊಂಡ!

ಎಷ್ಟು ಚಿಟ್ಟೆಗಳು ಬಂದಿರಬಹುದೆಂದು ಎಣಿಕೆ ಮಾಡಿದೆ. ಒಟ್ಟು ನಾಲ್ವತ್ತು ಪ್ರೇಮಿ ಗಳು ನನ್ನ ಪ್ರಯೋಗಶಾಲೆಯ ಪವಿತ್ರ ಆವರ



ದಲ್ಲಿ ಅದೇ ವೇಳೆಗೆ ಹುಟ್ಟಿ ಬಂದ ಮಯೂ ರಾಕ್ಷಿ ರಾಜಕುಮಾರಿಯ ಸ್ವಯಂವರಕ್ಕಾಗಿ ಎಲ್ಲಿಂ ದಲೋ ಹೇಗೋ ಬಂದು ಸೇರಿದ್ದವು.

ಹಮೇ ಹಮೇ ಆ ಬೆಪ್ಪು ತಕ್ಕಡಿಗಳು ಮೋಂಬತ್ತಿಯ ಉರಿಯನ್ನು ತಡಕಿ ಪಕ್ಕ ಗಳನ್ನು ಸುಟ್ಟುಕೊಂಡು ಕೆಳಗೆ ಬಿದ್ದು ಹೊರಳಾಡುವುದನ್ನು ಕಂಡು ನನ್ನ ಮನಸ್ಸು ಅಳುಕಿತು. ಈಗ ಏನು ಮಾಡುವುದೂ ಬೇಡ, ಬೆಳಗ್ಗೆ ಸಾವಧಾನವಾಗಿ ಪರೀಕ್ಷೆ ಮಾಡಿದರೆ ಆಯಿತು ಎಂದು ನನ್ನ ಕೋಣೆಗೆ ಹಿಂದಿರುಗಿದೆ.

ಬೆಳಗಾದ ಮೇಲೆ ಕೋಣೆಗೆ ಹೋಗಿ ನೋಡಿ ದಾಗ ರಾತ್ರಿ ಬಂದಿದ್ದ ಮದುವಣಿಗರಲ್ಲಿ ಎಂಟು ಮಾತ್ರ ಉಳಿದುಕೊಂಡಿದ್ದವು. ಅವು ಮುಚ್ಚಿದ್ದ ಒಂದು ಕಿಟಕಿಯ ಸಲಾಕೆಯ ಮೇಲೆ ಅಲ್ಲಾಡದೆ

* ಉಡುಪು ಕೊಳೆಯಾಗದಂತೆ ಕೆಲಸ ಮಾಡುವವರು ಮುಂದೆ ಕಟ್ಟಿಕೊಳ್ಳುವ ಬಟ್ಟೆಯ ತುಂಡು.

ಕುಳಿತಿದ್ದವು. ಮಿಕ್ಕವು ಬಂದ ದಾರಿಗೆ ಸುಂಕವಿಲ್ಲವೆಂದು ಅರ್ಧ ರಾತ್ರಿಯಲ್ಲೇ ತೆರೆದಿದ್ದ ಕಿಟಕಿಯ ಮೂಲಕ ಹಾರಿ ಹೋಗಿರಬೇಕು.

ವಧುವನ್ನು ಹುಡುಕಿಕೊಂಡು ಹಲವಾರು ಮೈಲು ದೂರದಿಂದ ಬಂದ ಈ ಪತಂಗಗಳಿಗೆ ಈಕೆ ಇಲ್ಲೇ ಅಡಗಿದ್ದಾಳೆಂದು ಹೇಗೆ ಗೊತ್ತಾಯಿತು? ಈ ವಿಷಯವನ್ನು ಪ್ರಯೋಗಮಾಡಿ ಪರೀಕ್ಷಿಸಬೇಕು ಎನಿಸಿತು.

ಒಂದು ವಿಷಯ ಮುಂಚೆಯೇ ತಿಳಿಸಿಬಿಡುತ್ತೇನೆ. ಅಲ್ಲಿಂದಾಚೆ ಎಂಟು ದಿನ, ಪ್ರತಿ ರಾತ್ರಿ ತೀರ ಕತ್ತಲಾದ ಮೇಲೆ ಈ ಮಹಾ ಪತಂಗಗಳು ಒಂದಾದ ಮೇಲೊಂದರಂತೆ ಬರುತ್ತಿದ್ದವು. ಬಿರುಗಾಳಿ, ಕಗ್ಗತ್ತಲು, ಇವು ಯಾವವೂ ಅವಕ್ಕೆ ಅಡ್ಡಿಯಾಗಲಿಲ್ಲ. ಮನೆ ಸುತ್ತ ಮರ, ಗಿಡ, ಪೊದೆಗಳು ಬೇಕಾದ ಹಾಗೆ ಬೆಳೆದುಕೊಂಡಿದ್ದವು. ಇವುಗಳೆಲ್ಲದರ ತೊಡಕು ಬಳಸನ್ನು ಹಾದು ಈ ಧೀರ ಗಂಡುಗಳು ವಧುವನ್ನರಸಿ ನನ್ನ ಕೋಣೆಯೊಳಗೆ ಬರುತ್ತಿದ್ದವು.

ಇಷ್ಟೊಂದು ಅಡಚಣೆಗಳನ್ನು ಅವು ಸುಲಭವಾಗಿ ದಾಟಿಕೊಂಡು ಬರಬೇಕಾದರೆ ಬರೀ ಕಣ್ಣಿನ ಸಹಾಯದಿಂದ ಅದು ಸಾಧ್ಯವಾಗಿರಲಾರದು. ಪತಂಗಗಳ ದೃಷ್ಟಿ ತುಂಬಾ ಸೂಕ್ಷ್ಮ ಇದ್ದು, ಕಗ್ಗತ್ತಲಿನಲ್ಲೂ ಇರುವ ಅಲ್ಪ ಸ್ವಲ್ಪ ಬೆಳಕಿನಲ್ಲೂ ಅವು ದಾರಿ ಕಂಡು ಹಿಡಿಯಬಲ್ಲವಾದರೂ ದೃಷ್ಟಿಯ ಸಹಾಯದಿಂದಲೇ ಅವು ಹೆಣ್ಣು ಇರುವ ಜಾಗವನ್ನು ಕಂಡುಹಿಡಿದವು ಎನ್ನುವಂತಿರಲಿಲ್ಲ. ದೃಷ್ಟಿಗೂ ಅವುಗಳ ಅನ್ವೇಷಣಾ ಸಾಮರ್ಥ್ಯಕ್ಕೂ ಸಂಬಂಧ ಇರಲಿಲ್ಲವೆಂಬುದು ಒಂದು ವಿಷಯದಿಂದ ತಿಳಿದು ಬಂದಿತು. ಪತಂಗಗಳು ಹೆಣ್ಣಿನ ಹತ್ತಿರದ ವರೆಗೂ ಸರಿಯಾಗಿ ಬಂದುವು ನಿಜ; ಆದರೆ ತಮ್ಮನ್ನು ಬಹು ದೂರದಿಂದ ಸೆಳೆದು ತಂದ ಕುಮಾರಿಯ ಹತ್ತಿರ ಹತ್ತಿರ ಬಂದಾಗ ಅವಕ್ಕೆ ಆಕೆ ಇಂಥ ನಿರ್ದಿಷ್ಟವಾದ ಸ್ಥಳದಲ್ಲೇ ಇದ್ದಾಳೆ ಎಂಬ ಅರಿವು ಆಗಲಿಲ್ಲ. ಹುಳು ಚಿಟ್ಟೆಯನ್ನು ಇಟ್ಟಿದ್ದ ಜಾಗದಲ್ಲಿ ಮಾತ್ರವಲ್ಲ; ಬೇರೆ ಕಡೆಯೂ ಅವು ಬಂದು ತಡಕಾಡುತ್ತಿದ್ದುವು. ಬೆಳಕಿನ ಆಕರ್ಷಣದಿಂದ ಅವು ಕೆಲವೊಂದು ಕಡೆ ನುಗ್ಗಿರಬಹುದು ಎಂದರೆ ಕತ್ತಲು ಕವಿದ ಬೇರೆ ಅನೇಕ ಕಡೆಗಳಲ್ಲೂ ಈ ಪ್ರೇಮಪೂಜಾರಿಗಳು ನುಗ್ಗಿ ಬಂದಿದ್ದವಲ್ಲ. ಅಲ್ಲದೆ ಕಿಟಕಿಯ ಪಕ್ಕದಲ್ಲೇ ಮಯೂರಾಕ್ಷ ಕುಮಾರಿಯನ್ನು ತಂತಿ ಬುಟ್ಟಿಯಲ್ಲಿ ಎಲ್ಲರಿಗೂ ಕಾಣುವ ಹಾಗೆ ಇಟ್ಟಿದ್ದರೂ, ಈ ಪತಂಗಗಳು ನೇರವಾದ ದಾರಿಯಾದ ಕಿಟಕಿಯ ಮೂಲಕ ಬರಲಿಲ್ಲ. ಕೆಲವು ಕೆಳಗಿನ ಕೋಣೆಗಳಿಗೆ ನುಗ್ಗಿದವು; ಕೆಲವು ನಡುಮನೆಯಲ್ಲಿ ಹಾರಾಡುತ್ತಿದ್ದವು. ಇನ್ನೂ ಕೆಲವು ಪ್ರಯೋಗಶಾಲೆಗೆ ಹೋಗುವ ಮೆಟ್ಟಿಲು ಸಾಲನ್ನು ದಾಟಿಕೊಂಡು ಕೋಣೆ ಬಾಗಿಲು ಹಾಕಿದ್ದುದರಿಂದ ಅಲ್ಲೇ ತಡಕಾಡುತ್ತಿದ್ದವು.



ಮೀಸೆ ಕತ್ತರಿಸಿದೆ!

ಇದರಿಂದ ಒಂದು ವಿಷಯ ಖಚಿತವಾಯಿತು. ದೃಷ್ಟಿಗೆ ಗೋಚರವಾಗುವ ಯಾವುದೇ ರೀತಿಯ ಚಿಹ್ನೆಗಳಿಗೆ ಮೀರಿರುವ ಅಥವಾ ಇನ್ನೂ ಬೇರೆಯೇ ಇರುವ ಪ್ರಕಾರದಿಂದ ಮಾರ್ಗದರ್ಶನ ಇವು ಪ್ರಾಯೋಗಿಕವಾಗಿ ಪತಂಗಗಳಿಗೆ ತಿಳಿದುಬಂದಿರಲಾರದು. ಈ ಪತಂಗಗಳ

ರಿಗೆ ಪ್ರಿಯಕರಳ ಸಾನ್ನಿಧ್ಯವನ್ನು ಬಹು ದೂರದಿಂದಲೇ ತಿಳಿಸಿಕೊಟ್ಟ ಸಾಧನ ಯಾವುದೋ ಬೇರೆ ಆಗಿರಬೇಕು. ಅದು ನಮ್ಮ ಮನೆಯನ್ನು ತೋರಿಸಬಲ್ಲದ್ದಾಗಿರದಿದ್ದರೂ ಮಯೂರಾಕ್ಷಿ ಕುಮಾರಿ ಇದ್ದ ನಿರ್ದಿಷ್ಟವಾದ ಜಾಗವನ್ನು ಅವುಗಳಿಗೆ ತಿಳಿಸಿಕೊಡಲು ಅಸಮರ್ಥವಾಗಿತ್ತು. ತಮ್ಮ ಪ್ರೇಯಸಿ ಇದ್ದ ನಿರ್ದಿಷ್ಟವಾದ ಜಾಗವನ್ನು ಅವು ಹುಡುಕಿ ತಡಕಾಡಿ ಕಂಡು ಹಿಡಿಯಬೇಕಾಗಿ ಬಂತು. ನಮ್ಮ ಕಿವಿ ಮತ್ತು ಘ್ರಾಣೇಂದ್ರಿಯಗಳಾದರೂ ಹೀಗೇ ಕೆಲಸ ಮಾಡುವುವು. ಶಬ್ದ ಕೇಳಿಬರುತ್ತದೆ. ವಾಸನೆ ಹೊಡೆಯುತ್ತದೆ. ಅವು ಬರುತ್ತಿರುವ ದಿಕ್ಕು ಗೋಚರವಾಗುವುದೇ ಹೊರತು ಇಂಥ ನಿರ್ದಿಷ್ಟ ಜಾಗದಿಂದಲೇ ಬರುತ್ತಿವೆ ಎಂಬುದು ಅಷ್ಟು ಖಚಿತವಾಗಿ ತಿಳಿಯುವುದಿಲ್ಲ.

ಹಾಗಾದರೆ ಪ್ರೇಯಸಿ ಇಂಥಾ ಜಾಗದಲ್ಲಿದ್ದಾಳೆ ಎಂದು ಸುದ್ದಿ ಕೊಟ್ಟು ಆ ಮಹಾ ಪತಂಗಗಳನ್ನು ನಮ್ಮ ಮನೆಯ ಬಳಿಗೆ ದಾರಿ ತೋರಿಸಿ ತಂದ ಜ್ಞಾನೇಂದ್ರಿಯ ಯಾವುದಾಗಿರಬಹುದು? ಪತಂಗಗಳಿಗೇ ಮೀಸೆಯಂತಿರುವ ಸ್ಪರ್ಶಾಂಗವೆ? ತುಪ್ಪುಳು ತುಂಬಿದ ಗರಿಯಂತಿರುವ ಈ ಮೀಸೆಗಳು ಗಾಳಿಯಲ್ಲಿ ಬಳ್ಳಿಯ ತಂತುಗಳಂತೆ ತಡಕಾಡುತ್ತ ಹುಡುಕಾಡುತ್ತ ಇರುತ್ತವೆಯಷ್ಟೆ. ಈ ಮೀಸೆ ಪ್ರೇಯಸಿಯನ್ನು ಬೆರಗುಗೊಳಿಸಲಿರುವ ಬರೀ ಸೌಂದರ್ಯೋಪಕರಣವೋ ಅಥವಾ ಸೂಕ್ಷ್ಮ ಜ್ಞಾನೇಂದ್ರಿಯವೋ? ಇದನ್ನು ಖಚಿತಪಡಿಸಿಕೊಳ್ಳಲು ಮಾಡಬೇಕಾಗಿದ್ದ ಪ್ರಯೋಗ ಸುಲಭವಾಗೇ ಇತ್ತು.

ಹರಿತವಾದ ಕತ್ತರಿ ತೆಗೆದುಕೊಂಡು ಆ ಎಂಟು ಪತಂಗಗಳ ಮೀಸೆಗಳನ್ನು ಬುಡಮಟ್ಟ ಕತ್ತರಿಸಿ ಹಾಕಿದೆ. ಈ ಚಿಕಿತ್ಸೆಯಿಂದ ಅವುಗಳಿಗೆ ಸ್ವಲ್ಪವೂ ನೋವಾದ ಹಾಗೆ ಕಾಣಲಿಲ್ಲ. ಅವು ಅಲ್ಲಾಡಲಿಲ್ಲ; ರೆಕ್ಕೆ ಬಡಿಯಲಿಲ್ಲ. ಅವು ಹಾಗೆಯೇ ಕತ್ತಲಾಗುವ ವರೆಗೂ ಕಿಟಕಿಯ ಸಲಾಕೆಗಳನ್ನು ಅಪ್ಪಿಯಸಿ ನಿಶ್ಚೇತನವಾಗಿ ಕುಳಿತಿದ್ದುವು. ಹೆಣ್ಣು ಚಿಟ್ಟೆಯನ್ನು ಮನೆಯ



ಬೇರೊಂದು ಭಾಗದ ಕೈಸಾಲೆಯಲ್ಲಿ ತಂತಿ ಬುಟ್ಟಿಯಲ್ಲಿಟ್ಟಿದ್ದೆ.

ಚೆನ್ನಾಗಿ ಕತ್ತಲಾದ ಮೇಲೆ ನನ್ನ ಅಪ್ಪುವರಗಳ ಪರೀಕ್ಷಣಕ್ಕಾಗಿ ಕೋಣೆಗೆ ಹೋದೆ..

ಆರು ಚಿಟ್ಟೆಗಳು ಪರಾರಿ! ಉಳಿದೆರಡು ನಿಶ್ಚೇತನಾವಸ್ಥೆಯಲ್ಲಿ ಕೆಳಗುರುಳಿ ನೆಲದ ಮೇಲೆ ಬಿದ್ದಿದ್ದವು! ಪ್ರಾಣ ಬಸಿದು ಹೋಗಿ ಸಾಯುತ್ತಿದ್ದವು! ಅವುಗಳ ಮೀಸೆಗಳನ್ನು ಕತ್ತರಿಸಿ ಹಾಕಿದ್ದರಿಂದ ಹಾಗಾಯ್ತೆಂದು ನನ್ನನ್ನು ಬಯ್ಯಬೇಡಿ. ನಾನು ಏನೂ ಮಾಡದೇ ಇದ್ದರೂ ಕೆಲ ಚಿಟ್ಟೆಗಳು ಹೀಗೆಯೇ ಸತ್ತು ಬೀಳುತ್ತಿದ್ದುದು ಪದೇ ಪದೇ ನಾನು ಮಾಡಿದ ಪ್ರಯೋಗಗಳಲ್ಲಿ ಕಂಡುಬಂತು.

ಸತ್ರಾಣರಾಗಿ ಹಾರಿ ಹೋಗಿದ್ದ ಪತಂಗ ಪ್ರಿಯಕರರು ಪುನಃ ತಮ್ಮ ಪ್ರೇಯಸಿಯನ್ನು ಅರಸಿಕೊಂಡು ಬರುವರೆ? ಮೀಸೆಗಳನ್ನು ಕಳೆದುಕೊಂಡ ಅವು ಬೇರೆ ಸ್ಥಳಕ್ಕೆ ರವಾನಿಸಲ್ಪಟ್ಟಿದ್ದ ವಧುವನ್ನು ಹುಡುಕಲು ಸಮರ್ಥರಾಗುವರೆ? ಕಾದು ನೋಡಬೇಕಿತ್ತು.

ರಾತ್ರಿ ಸ್ವಲ್ಪ ಹೊತ್ತಾದ ಮೇಲೆ ಲಾಂದ್ರ, ಚಿಟ್ಟೆ ಹಿಡಿಯುವ ಬಲೆಗಳಿಂದ ಸಜ್ಜಿತನಾಗಿ ನಾನು ಮಯೂರಾಕ್ಷಿಯನ್ನಿಟ್ಟಿದ್ದ ಜಾಗಕ್ಕೆ ಹೋದೆ. ಅನೇಕ ಚಿಟ್ಟೆಗಳು ಅಲ್ಲಿ ಹಾರಾಡುತ್ತಿದ್ದವು. ಅವುಗಳನ್ನೆಲ್ಲ ಬಲೆಯಲ್ಲಿ ಹಿಡಿದು ತಂದು ಒಂದು ಕೋಣೆಯಲ್ಲಿ ಬಿಟ್ಟು ಕದ ಮುಚ್ಚಿದೆ. ಮತ್ತೆ ಮೂರು ನಾಲ್ಕು ಬಾರಿ ಅಲ್ಲಿಗೆ ಹೋಗಿ ಬಂದೆ. ಪ್ರತಿ ಸಾರಿ ಅಲ್ಲಿ ಬಂದು ಮುತ್ತಿದ್ದ ಚಿಟ್ಟೆಗಳನ್ನು ಬಲೆಯಲ್ಲಿ ಹಿಡಿದು ತಂದು ಕೋಣೆಯೊಳಗೆ ಬಿಡುತ್ತಿದ್ದೆ. ರಾತ್ರಿ ೧೦–೩೦ ಆದ ಮೇಲೆ ಚಿಟ್ಟೆಗಳು ಬರುವುದು ನಿಂತಿತು. ದಿಬ್ಬಣ ಮುಗಿದಿತ್ತು. ಇಪ್ಪತ್ತೈದು ಮದುವಣಿಗರು ಸಿಕ್ಕಿ ಬಿದ್ದಿದ್ದರು.! ಪ್ರತಿಯೊಂದನ್ನೂ ಬೆರಳ ಮಧ್ಯೆ ಹಿಡಿದು ಪರೀಕ್ಷೆ ಮಾಡಿದೆ. ಎಲ್ಲಕ್ಕೂ ಮೀಸೆ ಇದ್ದುವು. ಒಂದೇ ಒಂದಕ್ಕೆ ಮಾತ್ರ ಮೀಸೆ ಇರಲಿಲ್ಲ. ಅಂದರೆ ಮೀಸೆ ಕತ್ತರಿಸಿಕೊಂಡು ನನ್ನ ಕೋಣೆಯಿಂದ ಹಾರಿ ಹೋಗಿದ್ದ ಆರು ಜನ ವೀರರಲ್ಲಿ ಒಬ್ಬನೇ ಒಬ್ಬನಿಗೆ ವಾಪಸ್ಸು ಬರಲು ಸಾಧ್ಯವಾಗಿತ್ತು. ಇನ್ನೂ ಏನೂ ಖಚಿತವಾದ ಹಾಗೆ ಆಗಲಿಲ್ಲ. ಪ್ರಯೋಗವನ್ನು ದೊಡ್ಡ ಪ್ರಮಾಣದಲ್ಲಿ ಮಾಡಬೇಕು.

ಬೆಳಿಗ್ಗೆ, ಕೋಣೆಯಲ್ಲಿ ಕೂಡಿಹಾಕಿದ್ದ ಹಿಂದಿನ ರಾತ್ರಿಯ ಮದುವಣಿಗರನ್ನು ಕಾಣಲು ಹೋದೆ. ಅಲ್ಲಿನ ದೃಶ್ಯ ಸಂತೋಷ ತರುವಂಥದಿರಲಿಲ್ಲ. ಅನೇಕ ಚಿಟ್ಟೆಗಳು ನಿಶ್ಚೇತನವಾಗಿ ಕೆಳಗೆ ಉರುಳಿ ಬಿದ್ದಿದ್ದುವು. ಬೆರಳುಗಳಲ್ಲಿ ಹಿಡಿದು ನೋಡಿದರೆ ಅವು ಒಂದಿಷ್ಟೂ ಮಿಸುಕಾಡಲಿಲ್ಲ. ಇವು ನನ್ನ ಪ್ರಯೋಗಕ್ಕೆ ಬರುವುದಿಲ್ಲ ಎನಿಸಿತು. ಆದರೂ ಒಂದು ಕೈ ನೋಡೋಣ ಎಂದುಕೊಂಡೆ.

ಮೀಸೆ ಹೋದವರು ಬರಲೇ ಇಲ್ಲ

ಆ ಇಪ್ಪತ್ತನಾಲ್ಕು ಮದುವಣಿಗರ ಮೀಸೆಗಳನ್ನು ಮೊದಲಿನಂತೆಯೇ ಕತ್ತರಿಸಿ ಹಾಕಿದೆ! ಹಿಂದಿನ ದಿನ ನನ್ನ ಶಸ್ತ್ರಕ್ರಿಯೆಗೊಳಗಾಗಿ ಮತ್ತೆ ಹಿಂದಿರುಗಿದ್ದ ಚಿಟ್ಟೆ ಸಾಯುವ ಹಾಗೆ ಬಿದ್ದಿತ್ತು. ಅದನ್ನು ಹಾಗೆಯೇ ಬಿಟ್ಟೆ. ಹೋಗುವವರು ಹೊರಟು ಹೋಗಲಿ, ತ್ರಾಣ ಇರುವವರು ಪ್ರೇಯಸಿಯನ್ನರಸಿ ಮತ್ತೆ ಬರಲಿ ಎಂದು ಕೋಣೆಯ ಕದಗಳನ್ನು ತೆರೆದು ಬಿಟ್ಟಿದ್ದೆ. ಮಯೂರಾಕ್ಷಿ ಕುಮಾರಿಯ ಜಾಗವನ್ನು ಮತ್ತೆ ಬದಲಾಯಿಸಿದೆ, ಹಿಂದಿನ ಗುರುತಿನಿಂದ ಹುಡುಕುವುದು ಸುಲಭವಾಗದಿರಲೆಂದು. ಈ ಸಾರಿ ಆಕೆಯನ್ನು ಬಯಲಿನಲ್ಲಿ ಬಿಡದೆ ಕಟ್ಟಡದ ಇನ್ನೊಂದು ತುದಿಯಲ್ಲಿದ್ದ ಕೋಣೆಯಲ್ಲಿ ತಂದಿಟ್ಟೆ. ಆ ಕೋಣೆಗೆ ಪ್ರವೇಶ ಸುಲಭವಾಗಿರಲೆಂದು ಕದ ಕಿಟಕಿಗಳನ್ನು ಹಾರ ಹೊಡೆದೆ.

ಕತ್ತಲಾಗುತ್ತಲೆ ಹದಿನಾರು ಚಿಟ್ಟೆಗಳು ಹಾರಿ ಹೋದುವು. ಇನ್ನೆಂಟು ತ್ರಾಣವಿಲ್ಲದೆ ಸಾಯುತ್ತ ಬಿದ್ದಿದ್ದವು. ಮತ್ತೆ ಮಯೂರಾಕ್ಷಿ ಕುಮಾರಿಯನ್ನು ಹುಡುಕಿಕೊಂಡು ಬಂದವರೆಷ್ಟು ಮಂದಿ? ಅನೇಕ! ಆದರೆ ಅವರಲ್ಲಿ ಮೀಸೆ ಕತ್ತರಿಸಿಕೊಂಡ ನನ್ನ ಗೆಳೆಯರಲ್ಲಿ ಒಬ್ಬನಾದರೂ ಇರಲಿಲ್ಲ. ಆ ರಾತ್ರಿ ನನಗೆ ಸಿಕ್ಕ ಚಿಟ್ಟೆಗಳೆಲ್ಲ ಆಗಂತುಕರೇ ! ಪ್ರತಿಯೊಂದೂ


ಮೀಸೆಯನ್ನು ಬೀಸಿಕೊಂಡು ಬಂದಿತು! ಇದರಿಂದೇನು ತಿಳಿದ ಹಾಗಾಯಿತು? ಚಿಟ್ಟೆಗಳ ಮೀಸೆಗೂ ಅವುಗಳ ವಧ್ವನ್ವೇಷಣ ಶಕ್ತಿಗೂ ಸಂಬಂಧವಿದೆ ಎಂದು. ಆದರೂ ಇಷ್ಟರಿಂದಲೇ ಅದು ಖಚಿತ ಎಂದು ಹೇಳಲಾಗದು. ಒಂದು ಅನುಮಾನ ಇದ್ದೇ ಇತ್ತು.

ಅಂದವಾಗಿರಲೆಂದು ಒಬ್ಬ ನಿಷ್ಕರುಣಿ ತನ್ನ ನಾಯಿ ಕುನ್ನಿಯ ಕಿವಿಯನ್ನು ಮೊಂಡು ಮಾಡಿದನಂತೆ. ಅದು ಮಿಕ್ಕ ನಾಯಿಗಳ ಮುಂದೆ ಹೋಗಲು ನಾಚಿಕೊಂಡು ಮನೆ ಬಿಟ್ಟೇ ಹೋಗುತ್ತಿರಲಿಲ್ಲವಂತೆ. ನನ್ನ ಶಸ್ತ್ರ ಕ್ರಿಯೆಗೊಳಗಾದ ಚಿಟ್ಟೆಗಳಿಗೂ ಹೀಗೆಯೇ ಆಯಿತೆ? ತಮ್ಮ ಸೌಂದರ್ಯೋಪಾಂಗನ್ನು ಕಳೆದುಕೊಂಡ ಅವು, ಮೀಸೆಗಳುಳ್ಳ ಮಿಕ್ಕ ಮದು ವಣಿಗರ ಜೊತೆಯಲ್ಲಿ ಬರಲು ನಾಚಿದವೆ? ಅಥವಾ ಸ್ಪರ್ಶೇಂದ್ರಿಯ ಹೋದದ್ದರಿಂದ ಅವು ತಬ್ಬಿಬ್ಬಾದವೋ? ದಾರಿ ತಪ್ಪಿದುವೋ? ಅಥವಾ ಒಂದೇ ರಾತ್ರಿಯ ಅನ್ವೇಷಣಾ ಚಟುವಟಿಕೆ ಯಿಂದ ಅವುಗಳ ಕ್ಷಣಿಕ ಕಾಮು ತಣ್ಣಗಾಯಿ ತೊ? ಏನೇ ಇರಲಿ, ನನ್ನ ಪ್ರಯೋಗಗಳಿಂದ ಇದನ್ನು ಖಚಿತಪಡಿಸಬೇಕು.

ಕಾಮುದ ಕಾವು ಬೇಗ ಆರಿತು

ನಾಲ್ಕನೆಯ ರಾತ್ರಿ ಬಂದ ಹದಿನಾಲ್ಕು ಮದುವಣಿಗರನ್ನು ಬೇರೆ ಕೋಣೆಯಲ್ಲಿ ಕೂಡಿ ಹಾಕಿದ್ದೆ. ಬೆಳಿಗ್ಗೆ, ಅವು ಯಥಾ ಪ್ರಕಾರ ನಿಶ್ಚೇತನವಾಗಿ ಬಿದ್ದಿದ್ದಾಗ ಅವುಗಳ ಮೀಸೆ ಕತ್ತರಿಸಲಿಲ್ಲ, ಬರೀ ಚೌಲ ಮಾಡಿದೆ! ಅವುಗಳ ಕೊರಳ ಸುತ್ತಿನ ತುಪ್ಪುಳವನ್ನು ಕತ್ತಿನ ಹತ್ತಿರ ಸ್ವಲ್ಪ ಕತ್ತರಿಸಿ ಹಾಕಿದೆ! ಈ ನವ್ಯ ರಾವ ಹಜಾಮತಿಯಿಂದ ಚಿಟ್ಟೆಗಳಿಗೇನೂ ಅಪಾಯವಾಗುವಂತಿರಲಿಲ್ಲ. ಕನ್ಯಾನ್ವೇಷಣೆಗೆ ಸಹಾಯವಾಗಬಹುದಾದಂಥ ಯಾವ ಅಂಗ ವನ್ನೂ ತೆಗೆದು ಹಾಕಿದಂತಾಗಲಿಲ್ಲ. ಅವು ಗಳಿಗೆ ಬರೀ ಕೇಶಕರ್ತನ ಆಯಿತು; ನನಗೆ ಅವುಗಳನ್ನು ಮತ್ತೆ ಗುರುತು ಹಚ್ಚಲು ಸಹಾಯ ವಾಗುವ ಚಿಹ್ನೆ ಸಿಕ್ಕಿತು.

ಈ ಸಾರಿ, ಕತ್ತಲಾದೊಡನೆ ಹದಿನಾಲ್ಕು ಜೋಡಿಗರೂ ಹೊರಗೆ ಹಾರಿ ಹೋದರು! ಮಯೂರಾಕ್ಷಿ ಕುಮಾರಿಯನ್ನು ಬಂಧಿಸಿಟ್ಟಿದ್ದ ತಂತಿ ಬುಟ್ಟಿಯನ್ನು ಈ ಸಾರಿಯೂ ಸ್ಥಳ ಬದ ಲಾಯಿಸಿ ಬೇರೆ ಕಡೆ ಇಟ್ಟಿದ್ದೆ. ಕೇವಲ ಎರಡು



ತಾಸುಗಳಲ್ಲಿ ಇಪ್ಪತ್ತು ಗಂಡು ಚಿಟ್ಟೆಗಳನ್ನು ಅಲ್ಲಿ ಹಿಡಿದೆ. ಅವುಗಳಲ್ಲಿ ಎರಡು ಮಾತ್ರ ನನ್ನ ಹಜಾಮತಿ ಕಲೆಯನ್ನು ಎತ್ತಿ ತೋರಿಸುತ್ತಿದ್ದುವು. ಮಿಕ್ಕವೆಲ್ಲ ಹೊಸವು. ಮಿಕ್ಕ ಹನ್ನೆರಡು ಚಿಟ್ಟೆಗಳು ಬರಲಿಲ್ಲವೇಕೆ? ನನಗೆ ಹೊಳೆದ ಕಾರಣ ಒಂದೇ ಒಂದು. ಅವುಗಳ ಕಾಮದ ಕಾವು ಅಷ್ಟು ಹೊತ್ತಿಗೆ ಆರಿಹೋಗಿದ್ದಿರಬೇಕು. ಒಂದೇ ರಾತ್ರಿಯ ಹಾರಾಟ ಮತ್ತು ಕಾಟಗಳಲ್ಲಿ ಅವು ನಿತ್ರಾಣರಾಗಿ ಸೋತು ಎಲ್ಲೋ ಬಿದ್ದಿರಬೇಕು.

ಮೈಥುನವೇ ಈ ಚಿಟ್ಟೆಗಳ ಜೀವನದ ಏಕೈಕ ಗುರಿ. ಅದನ್ನು ಸಾಧಿಸಲೆಂದು ಅವುಗಳಿಗೆ ಅಸಮಾನ್ಯ ಶಕ್ತಿ ಕೊಡಲ್ಪಟ್ಟಿದೆ. ಎಷ್ಟೇ ದೂರ ಇರಲಿ. ಎಷ್ಟೇ ಆತಂಕಗಳಿರಲಿ. ತನ್ನ ಪ್ರೇಯಸಿ ಇರುವ ಜಾಗವನ್ನು ಪತ್ತೆ ಹಚ್ಚಿ ಹೋಗಲು ಈ ಕಾಮಿಗಳಿಗೆ ಸಾಧ್ಯವಿದೆ. ಆದರೆ ಕೀಟದ ಹಾರಾಟಕ್ಕೋಸ್ಕರ ಅವುಗಳಿಗಿರುವ ಸಮಯ ಒಂದೆರಡು ರಾತ್ರಿ ಮಾತ್ರ. ಆ ರಾತ್ರಿಗಳಲ್ಲೂ ಅವು ಕೆಲವೇ ಗಂಟೆಗಳ ಕಾಲ ತಮ್ಮ ಚಟುವಟಿಕೆಗಳಲ್ಲಿ ಆಸಕ್ತರಾಗಬಹುದು. ಆ ಸಮಯ ಹಾರಾಯಿತೆಂದರೆ ಎಲ್ಲ ಮುಗಿಯಿತು. ಅವುಗಳ ಸೂಕ್ಷ್ಮೇಂದ್ರಿಯ ಕೆಲಸ ಮಾಡಲಾರದು. ಕತ್ತಲಲ್ಲಿ ಕೈ ಹಿಡಿದು ಅವುಗಳನ್ನು ಪ್ರೇಯಸಿಯ ಬಳಿ ಕರೆತರುವ ಕಂದರ್ಪ ಆಗ ನಿರ್ದಯನಾಗುತ್ತಾನೆ. ಇಂಥ ಪತಂಗಗಳ ಜೀವನದ ಏಕೈಕ ಆಸೆ ಗೋರಿಯಾಗಿ ಅವು ಯಾವುದೋ ಮೂಲೆ ಸೇರಿ, ಭಗ್ನ ಜೀವನದ ನೋವು ತಿನ್ನುತ್ತ ತಮ್ಮ ಕೊನೆಯುಸಿರೆಳೆಯುತ್ತವೆ.

ಮಯೂರಾಕ್ಷಿ ಹುಳದಿಂದ ಪತಂಗವಾಗಿ ಮಾರ್ಪಾಟಾಗುವ ಉದ್ದೇಶ ಸಂತಾನಾಭಿವೃದ್ಧಿ. ಈ ಪತಂಗಗಳಿಗೆ ಆಹಾರ ಸಹಿತ ಬೇಕಿಲ್ಲ. ಮಿಕ್ಕ ಅನೇಕ ಪಾತರಗಿತ್ತಿಯರು ಹೂವಿಂದ ಹೂವಿಗೆ ಹಾರುತ್ತ ಅವುಗಳ ಮಧು ತುಂಬಿದ ಬಸಿರೊಳಗೆ ತಮ್ಮ ನೀಳ ನಾಲಗೆಗಳನ್ನು ನುಗ್ಗಿಸಿ



ಮೃಷ್ಟಾನ್ನ ಭೋಜನ ಮಾಡಿ ಆನಂದದಿಂದ ವಿಹರಿಸುತ್ತಿರುವಾಗ ಈ ತಾಪಸಿ ಮಯೂರಾಕ್ಷಿ ಭೋಜನ ಸೌಖ್ಯವನ್ನು ತ್ಯಾಗ ಮಾಡಿ, ತನ್ನ ಶಕ್ತಿಯನ್ನು ಬೆಳೆಸಿಕೊಳ್ಳಲಾರದೆ ನವೆದು ಹೋಗುತ್ತದೆ. ಇವುಗಳಿಗೂ ಮೂತಿ, ನಾಲಗೆ ಇವೆ ನಿಜ. ಆದರೆ ಅವು ಕೇವಲ ಅವಶೇಷಾಂಗಗಳು, ಅಪ್ರಯೋಜಕ ನಕಲುಗಳು! ಒಂದು ತೊಟ್ಟು ಮಧುವೂ ಅವುಗಳ ಮೂಲಕ ಮಯೂರಾಕ್ಷಿಯ ಹೊಟ್ಟೆಗೆ ಹರಿಯಲಾರದು. ದೇವತೆಗಳಂತೆ ಹಸಿವು ಮಯೂರಾಕ್ಷಿಯನ್ನು ಪೀಡಿಸಲಾರದಾದರೂ ಈ ಅದ್ಭುತ ಭಾಗ್ಯ ಕ್ಷಣಮಾತ್ರ ಪ್ರಯೋಜನವುಳ್ಳದ್ದು. ದೀಪ ಉರಿಯುತ್ತಿರಬೇಕಾದರೆ ಎಣ್ಣೆ ಸುರಿಯುತ್ತಲೇ ಇರಬೇಕು. ಜಿಹ್ವಾನಂದವನ್ನು ತೊರೆದು ಈ ಸಂನ್ಯಾಸಿ ಮಹಾಪತಂಗ ದೀರ್ಘ ಜೀವಿತದ ಅನುಕೂಲವನ್ನು ತೊರೆಯಬೇಕಾಗಿ ಬಂತು. ಹೆಚ್ಚೆಂದರೆ ಎರಡು ಮೂರು ರಾತ್ರಿಗಳಲ್ಲಿ ತನ್ನ ಜೀವನೋದ್ದೇಶವನ್ನು ಈಡೇರಿಸಿಕೊಳ್ಳಬೇಕು. ಆ ಸಮಯ ಕಳೆಯಿತೆಂದರೆ ಎಲ್ಲವೂ ಮುಗಿಯಿತು. ಈ ಸುಂದರ ಸೃಷ್ಟಿ ಸತ್ತು ಮಣ್ಣಾಗುತ್ತದೆ.

ನನ್ನಿಂದ ಗುರುತಿಸಲ್ಪಟ್ಟ ಪತಂಗಗಳು ಮತ್ತೆ ಪ್ರಿಯ ಸಮಾಗಮಕ್ಕೋಸ್ಕರ ಬರದೇ ಇರುವುದಕ್ಕೆ ಇದೇ ಕಾರಣವಿದ್ದಿರಬೇಕು. ಆದರೂ ಮೀಸೆಗಳಿಂದ ಪತಂಗಗಳಿಗೇನು ಪ್ರಯೋಜನ ಎಂಬುದು ಇನ್ನೂ ಅನುಮಾನವಾಗೇ ಉಳಿಯಿತು.

ಅವು ಸೂಕ್ಷ್ಮ ಘ್ರಾಣೇಂದ್ರಿಯಗಳಿರಬಹುದೆ? ಕುಮಾರಿ ಮಯೂರಾಕ್ಷಿ ಸೂಸುತ್ತಿರಬಹುದಾದ ವಾಸನೆಯ ಜಾಡನ್ನು ಹಿಡಿದು ಅವು ತಮ್ಮ ಪ್ರೇಯಸಿ ಇರುವ ಜಾಗವನ್ನು ಗುರುತು ಹಚ್ಚುತ್ತಿದ್ದವೆ? ಇದನ್ನು ಇನ್ನೂ ಪರೀಕ್ಷೆ ಮಾಡಬೇಕು ಎನಿಸಿತು. ಮಯೂರಾಕ್ಷಿ ಕನ್ಯೆ ದ್ರವಿಸುತ್ತಿರಬಹುದಾದ ಸೂಕ್ಷ್ಮ ವಾಸನೆಯನ್ನು ಬೇರೊಂದು ಘನ ನಾತದಲ್ಲಿ ಮುಚ್ಚಿ ಅದರ ಸುಳಿವು ಗಂಡು ಪತಂಗಗಳಿಗೆ ತಿಳಿಯದಂತೆ ಮಾಡಿದರೂ ಆಗಲೂ ಅವು ಬರುವವೋ?

ಮೊದಲು ನಾನು ಮಾಡಿದ್ದೇನೆಂದರೆ ಘನ ವಾಸನೆ ಹೊಡೆಯುವ ನ್ಯಾಫ್ತಲೀನ್ ದ್ರವವನ್ನು ಹೆಣ್ಣು ಚಿಟ್ಟೆಯನ್ನಿಟ್ಟಿದ್ದ ಕೋಣೆಯಲ್ಲೆಲ್ಲ ಚುಮುಕಿಸಿದೆ. ಮಯೂರಾಕ್ಷಿ ಕುಮಾರಿಯನ್ನು ಸೆರೆಯಲ್ಲಿಟ್ಟಿದ್ದ ತಂತಿ ಬುಟ್ಟಿ ಒಳಗೆ ಅದೇ ದ್ರವ ತುಂಬಿದ ಅಗಲವಾದ ಬಟ್ಟಲನ್ನಿರಿಸಿದೆ. ರಾತ್ರಿ ಗಂಡು ಪತಂಗಗಳ ದಾಳಿ ಬರುವ ಸಮಯದಲ್ಲಿ ಆ ಕೋಣೆಯ ಬಾಗಿಲ ಹತ್ತಿರ ನಿಂತಿದ್ದ ನನಗೆ ಮೂಗು ಒಡೆದು ಹೋಗುವ ಹಾಗೆ ನ್ಯಾಫ್ತಲೀನ್ ವಾಸನೆ ಹೊಡೆಯುತ್ತಿತ್ತು. ಈ ವಾಸನೆಯ ಮಧ್ಯೆ ಇನ್ನಾವ ವಾಸನೆಯನ್ನೂ ಗುರುತಿಸಲು ಅಸಾಧ್ಯವಾಗಿತ್ತು, ಅಥವಾ ನಾನು ಹಾಗೆ ತಿಳಿದುಕೊಂಡಿದ್ದೆ. ನನ್ನ ನಿರೀಕ್ಷಣೆ ತಪ್ಪಾಗಿಹೋಯಿತು! ಎಂದಿನಂತೆ ಆ ಮಹಾ ಪತಂಗಗಳು ಕೋಣೆಯ ವರೆಗೂ ನಂತರ ಒಳಗೂ ಬಂದವು. ವಾಸನೆ ತುಂಬಿದ್ದ ಕೋಣೆಯಲ್ಲಿ ಎಂದಿನಂತೆ ತಡಕಾಡಿದುವು; ಕೊನೆಗೆ ಎಂದಿನಂತೆ ಕನ್ಯಾಮಣಿಯಿದ್ದ ತಂತಿ ಬುಟ್ಟಿಯ ಕಡೆಗೆ ಧಾವಿಸಿ ಅದನ್ನು ಮುತ್ತಿಕೊಂಡವು! ಅಂದರೆ ವಾಸನೆ ಹಿಡಿದಲ್ಲವೇ ಈ ಪತಂಗಗಳು ಇಲ್ಲಿಗೆ ಬಂದದ್ದು?

ರೇಡಿಯೋ ತರಂಗ ಸಂವೇಗಿಯೋ?

ಇನ್ನೊಂದು ಅನುಮಾನ ಉಳಿದಿತ್ತು. ಭೌತಶಾಸ್ತ್ರದ ಪ್ರಯೋಗಗಳಿಂದ ನಮಗೆ ವಾಹಕ ಮಾಧ್ಯಮವಿಲ್ಲದೆ ಒಂದು ಕಡೆಯಿಂದ ಇನ್ನೊಂದು ಕಡೆಗೆ ಹೋಗಬಲ್ಲ ಹರ್ಟ್ಜ್ ಸ್ಪಂದನಗಳ * ಪರಿಚಯ ಆಗಿದೆಯಷ್ಟೆ. ಮನುಷ್ಯ ಈ ಸ್ಪಂದನಗಳನ್ನು ಕಂಡುಹಿಡಿಯುವ ಮುನ್ನವೇ ಚಿಟ್ಟೆಗಳು ಅವುಗಳ ಉಪಯೋಗವನ್ನು ಕಲಿತಿದ್ದವೆ? ಸುತ್ತುಮುತ್ತಲಿನ ಅವಕಾಶವನ್ನೆಲ್ಲ ಸ್ಪಂದಿಸಿ, ಮೈಲಿಯಷ್ಟು ದೂರವಿದ್ದ ಗಂಡು ಚಿಟ್ಟೆಗಳಿಗೆ ಮಧುಚಂದ್ರದ ಆಹ್ವಾನವನ್ನೀಯುವ ವಿದ್ಯುತ್ ಅಥವಾ ಅಯಸ್ಕಾಂತ ಅಥವಾ ನಮಗೂ ಇನ್ನೂ

---

* ರೇಡಿಯೋ ತರಂಗಗಳು.

ತಿಳಿಯದೇ ಇರುವ ಬೇರೆ ಯಾವುದೋ ರೀತಿಯ ತರಂಗಗಳನ್ನು ಮಯೂರಾಕ್ಷಿ ಕನ್ಯೆ ಹೊರಸೂಸುತ್ತಿರಬಹುದೇ? ಅಂದರೆ ಮಯೂರಾಕ್ಷಿ ಚಿಟ್ಟೆ ತಾನೂ ಒಂದು ರೀತಿಯ ರೇಡಿಯೋ ವಾರ್ತೆಗಳನ್ನು ಕಳಿಸುತ್ತಿರಬಹುದೆ?

ಇದನ್ನು ಪರೀಕ್ಷೆ ಮಾಡಲೆಂದು ನಾನು ಹೆಣ್ಣು ಚಿಟ್ಟೆಯನ್ನು ಬೇರೆ ಬೇರೆ ಪದಾರ್ಥಗಳಿಂದ ಮಾಡಿದ ಡಬ್ಬಿಗಳಲ್ಲಿ ಇಟ್ಟು ನನ್ನ ಪ್ರಯೋಗಗಳನ್ನು ಮುಂದುವರೆಸಿದೆ. ತಗಡಿನ ಡಬ್ಬಿ, ಮರದ ಪೆಟ್ಟಿಗೆ, ರಟ್ಟಿನ ಪೆಟ್ಟಿಗೆ ಇವುಗಳನ್ನೆಲ್ಲಾ ಉಪಯೋಗಿಸಿದೆ. ಇವುಗಳ ಒಳಗಿಂದ ಗಾಳಿ ಬೆಳಕು ಒಂದಿಷ್ಟೂ ಹೋಗದಂತೆ ಭದ್ರಪಡಿಸಿದೆ. ಅಂಚುಗಳ ಸಂದಿಗಳನ್ನು ಅಂಟು ಹಿಟ್ಟಿನಿಂದ ಬಂದು ಮಾಡಿದೆ. ಇನ್ನೊಂದು ಪ್ರಯೋಗದಲ್ಲಿ ಹೆಣ್ಣು ಚಿಟ್ಟೆಯನ್ನು ಗಾಜಿನ ತಟ್ಟೆಯ ಮೇಲೆ ಬಿಟ್ಟು ಅದನ್ನು ಘಂಟಾಕೃತಿಯ ಗಾಜಿನ ಬುರುಡೆಯಲ್ಲಿ ಮುಚ್ಚಿಟ್ಟೆ.

ಈ ಎಲ್ಲ ಪ್ರಯೋಗಗಳಲ್ಲೂ ಹವಾಮಾನ ಅನುಕೂಲವಾಗಿದ್ದರೂ ಒಂದಾದರೂ ಗಂಡು ಚಿಟ್ಟೆ ಬರಲಿಲ್ಲ. ಇನ್ನೊಂದು ಬಾರಿ ಹೆಣ್ಣು ಚಿಟ್ಟೆಯನ್ನು ದೊಡ್ಡ ಗಾಜಿನ ಶೀಶೆಯಲ್ಲಿಟ್ಟು ಅದರ ಮೂತಿಯನ್ನು ತೆಳುವಾದ ಅರಳೆಯ ಹಂಜಿಯಿಂದ ಬಂದುಮಾಡಿದೆ. ಇದೂ ಕುಮಾರಿಯ ಗುಟ್ಟನ್ನು ಬಚ್ಚಿಡಲು ಸಾಕಾಗಿತ್ತು. ಆಗಲೂ ಒಂದು ಗಂಡು ಚಿಟ್ಟೆಯೂ ಬರಲಿಲ್ಲ.

ಆದರೆ ಸ್ವಲ್ಪ ಸಂದಿಯಿರುವ, ಭದ್ರವಾಗಿ ಮುಚ್ಚಿದ ಪೆಟ್ಟಿಗೆಯೊಳಗೆ, ಅಥವಾ ನನ ಮೇಜಿನ ಡ್ರಾಯರಿನಲ್ಲಿ ಹೆಣ್ಣು ಚಿಟ್ಟೆ ಇಟ್ಟಾಗ ಮೊದಮೊದಲು ಬಂದ ಹಾಗೇ ಗಂಡು ಚಿಟ್ಟೆಗಳು ಹಿಂಡಾಗಿ ಬಂದುವು.

ಒಂದು ರಾತ್ರಿ ಹೆಣ್ಣು ಚಿಟ್ಟೆಯನ್ನು ಗೋಡೆಯೊಳಗಿನ ಅಲ್ಮಾರದ ಕೆಳ ಖಾನೆಯಲ್ಲಿ ಒಂದು ಹ್ಯಾಟ್ ಪೆಟ್ಟಿಗೆಯೊಳಗೆ ಮುಚ್ಚಿಟ್ಟಿದ್ದೆ. ಅಲ್ಮಾರಾದ ಬಾಗಿಲು ಮುಚ್ಚಿದ್ದರೂ ಗಂಡು ಚಿಟ್ಟೆಗಳು ಬಂದು ಮುಚ್ಚಿದ ಬಾಗಿಲಿನ ಮೇಲೆ ಮೇಲೆ ರಪರಪನೆ ತಮ್ಮ ರೆಕ್ಕೆಗಳನ್ನು ಬಡಿಯುತ್ತಾ ಒಳಗೆ ಹೋಗಲು ಪ್ರಯತ್ನಪಡುತ್ತಿದ್ದವು. ಕಾಡು ಮೇಡುಗಳನ್ನು ದಾಟಿಕೊಂಡು ಎಲ್ಲಿಂದಲೋ ಬಂದ ಈ ಪ್ರಣಯ ಕಾತುರರಿಗೆ ಮುಚ್ಚಿದ ಅಲ್ಮಾರಾದ ಒಳಗೆ ಹ್ಯಾಟ್ ಡಬ್ಬಿಯಲ್ಲಿ ಯಾರಿದ್ದಾರೆಂದು ಹೇಗೋ ತಿಳಿದುಹೋಗಿತ್ತು! ✡

(ಬೇರೆ ಚಿಟ್ಟೆಗಳ ಮೇಲೆ ಮಾಡಿದ ಪ್ರಯೋಗಗಳ ಫಲವಾಗಿ ಫೇಬ್ರ್ ಕೊನೆಗೆ ಕಂಡುಕೊಂಡದ್ದೇನೆಂದರೆ ಹೆಣ್ಣು ಚಿಟ್ಟೆ ಸಮಾಗಮ ಕಾತುರಳಾಗಿದ್ದಾಗ ಗಂಡು ಚಿಟ್ಟೆಗೆ ತಿಳಿಸುವ ವಸ್ತು ಒಂದು ತರಹ ವಾಸನಾ ದ್ರವ್ಯವೇ. ಆದರೆ ಅದು ತೀರ ಸೂಕ್ಷ್ಮ ರೀತಿಯದ್ದು. ನಮ್ಮ ಮೂಗಿಗೆ ಗೋಚರವಾಗುವುದಿಲ್ಲ. ಹೆಣ್ಣು ಚಿಟ್ಟೆ ಸ್ವಲ್ಪ ಕಾಲ ಕೂತ ಜಾಗದಲ್ಲೆಲ್ಲ ಈ ವಾಸನೆ ಸೇರಿಕೊಂಡು ಗಾಳಿಯಲ್ಲಿ ಹರಡುತ್ತದೆ. ಈ ವಾಸನೆ ಇರುವ ಜಾಗಕ್ಕೆ—ಚಿಟ್ಟೆ ಇರುವ ಜಾಗಕ್ಕಲ್ಲ—ಗಂಡು ಚಿಟ್ಟೆಗಳು ಧಾವಿಸಿ ಬರುತ್ತವೆ. ಹೆಣ್ಣು ಚಿಟ್ಟೆಯನ್ನು ಒಂದು ಕಾಗದದ ಮೇಲೆ ಬಹುಕಾಲ ಕೂಡಿಸಿ ನಂತರ ಅದನ್ನು ಬೇರೆ ಕಡೆಗೆ ಸಾಗಿಸಿದಾಗ ಗಂಡು ಚಿಟ್ಟೆಗಳು ಅಮರಿಕೊಂಡದ್ದು ಆ ಕಾಗದಕ್ಕೆ!)

ಬೆಲೆಯೇರಿಕೆಯ ಈ ದಿನಗಳಲ್ಲಿ ದಿನೇ ದಿನೇ ಬೆಲೆಯಿಳಿಯುತ್ತಿರುವ ವಸ್ತು ಎಂದರೆ ಹಣವೊಂದೆ.

ಸೌಜನ್ಯದಿಂದ ನೀವು ಏನನ್ನೂ ಕಳೆದುಕೊಳ್ಳಬೇಕಾಗಿಲ್ಲ ಬಸ್ಸಿನಲ್ಲಿ ನಿಮ್ಮ ಸೀಟೊಂದನ್ನು ಬಿಟ್ಟು.

ಎಸ್. ವಿ. ಎಂ.

ಬಿಂದಾಸ ಹೀಯಾಳಿಕೆ

ಕಳ ತನದಲ್ಲಿ ಕೊಳೆ ಕೂಗುತ್ತಾ ಛತ್ರಿ ಇದ್ದಂತೆ ಹಾಗೆ –
ದೋಸದಿಂದ ಖುಷಿಯನ್ನು ಅಳಿ ಮಾಡುವದಿಲ್ಲ.
ನಾನಿನ ಸಮುದ್ರದಲ್ಲಿ ನನ್ನ ಬಳ ಸಾಗಯುತ್ತದೆ.
ತಾಳ ಬಗಿದ ಪಕ್ಷಿಯ ರಾತ್ರಿಯಲ್ಲಿ ಆ ಅವನ ಹಾಗೆ –
ಛಾವಣಿಲ್ಲ ಬಿಟ್ಟು ನನ್ನನ್ನು ಸಡಿಲಿಸುವದಿಲ್ಲ.
ಮುಂಜಾವಿನ ಮಂಜಿನಲ್ಲಿ ನನ್ನೆದೆಯ ಮಾತೆ ಸರಿಯುತ್ತದೆ.
ತಪಿಸಿದ ಪದದ ಮಾನುವಿನ ಹಾಗೆ –
ಗಿರಿಗಿರಿಯುತ್ತಾ ಕುಣಿತ ಓಡುತ್ತ ನನ್ನ ನಿದ್ದೆ ಕದಿಯುವುದಿಲ್ಲ.
ಸೂರ್ಯನಿಷ್ಠುರ ನರಳಿಸುತ್ತ ನರಳಿನಲ್ಲಿ ಮುಳುಗಿಸುವದಿಲ್ಲ.
ಛಳಿಗೆ ತರತರಗುಟ್ಟುವ ನನ್ನ ಮೈ ಬೆವರಿನ್ನಷ್ಟು ನನಗೆ ಬಾಗುತ್ತವೆ:
ಪ್ರತಿದಿನ ಸೂರ್ಯಕಿರಣದ ಮಿಣ ಮಿಣ ಗಮ ಗಮಿಸುವ ಬೆಳಕು ಸೂಸುತ್ತದೆ.
ಬೇರೆಯ ಇಲ್ಲದ ಅರ್ಥ ಸಾರುವ ಬಾರು ಕಿರಣ ಮಾರಿದ ಹಾಗೆ
ಬರಿ ಕಣಿ ಹಸಿರ ಬಯಲು ಗಾಳಿ ಆಗುವ ಹಾಗೆ
ನನ್ನ ತನುಮನವನ್ನು ನನ್ನ ತಾಯಿಗೆ ಅರ್ಪಿಸುತ್ತಾ
ಸಾಗಿಸುತ್ತದೆ.
ರೂಪವನ್ನು ಮರೆಸುತ್ತಾ ಶಕ್ತಿಯನ್ನು ಸುರಿಸುತ್ತಾ
ಸ್ವಾಭಿಮಾನದ ಸ್ವಾದವನ್ನು ತಲೆಯಲ್ಲಿ ಹೊತ್ತು ಮರೆಯಾಗುತ್ತದೆ.
ಬರುತಿರುವ ಛಳಿ ಮಳೆ ಬಿಸಿಲಿನ ಜೀವನ
ಸಾಗುವ ಛಳಿ ಬಿಸಿಲು ನಾನು ಮನದಲ್ಲಿ ಅರಳುತ್ತದೆ. — ದೇವಿ ಕಾಂಚನ

ದ್ವೇಷ

ಬರುತ್ತವೆ. ಬರುತ್ತವೆ. – ಹೀಗೆ – ಬರುತ್ತಲೇ ಇರುತ್ತವೆ
ನನಗೆ ಸಮುದ್ರದೊಳ. ಅವರೆ
ತೀರದ ರಾತ್ರಿಗಳು – ಸವರಿದ ಹಗಲುಗಳು.
ಅವನಿಗೆ ತುಂಬಾನಿನ್ನ ತಿಳಿ ಆವೇಶಗಳು ತಿಳಿದಿಲ್ಲ
ಸಂಬಂಧದ ಪ್ರಮುಖ ಅಂಶಗಳ ಅರಿವೇ ಇಲ್ಲ
ಅನುಕರಣದ ಮಿಣ ಅವನಿಗೆ ತಿಳಿದಿಲ್ಲ
ಸಂಬಂಧಗಳು ಇಲ್ಲಿ ಮಿಣ ಬಾಳ್ವೆಯದೇ ಇಲ್ಲ.
ಅಂದಿನಿಂದ. ಸಮಗ್ರತೆ. ತತ್ತ್ವಸಮರ್ಪಣದ ದಾರಿ

ವಿದೇಶಗಳ ಬಾಂಧವ್ಯ, ಅಪಮೌಲ್ಯದಂಥ ಪದಪುಂಜಗಳು
ಅರ್ಥವಾಗದ ಭಾಷೆ ಇವರಿಗೆ.

ಕುಡಿಯುತ್ತಾರೆ. ಕುಣಿಯುತ್ತಾರೆ. ಅಕ್ಕ ಪಕ್ಕದ ಅಟ್ಟು ಉಗ್ಗುತ್ತಾರೆ.
ಇಲ್ಲವೇ ತಾರೆಗಳ ನಸು ಬೆಳಕಲ್ಲಿ ನಾಗರ ನೆರಳಲ್ಲೇ
ಸ್ವಪ್ನವಿಲ್ಲದ ನಿದ್ರೆ ಮಾಡುತ್ತಾರೆ.
ಒಂದು ದಿನ ಸದ್ದಿರದೆ ಇಲ್ಲವಾಗುತ್ತಾರೆ.

ನಾನೋ – ಹೊಟ್ಟೆ ತುಂಬಿದ ಮೇಲೂ ಸಮಸ್ಯೆಗಳ ನೆನೆಯುತ್ತ
ನಿದ್ರೆಯಿಲ್ಲದೆ ರಾತ್ರಿ ಕಳೆಯುತ್ತೇನೆ
ಸತ್ತೂ ಸಮಸ್ಯೆಯಾಗುತ್ತೇನೆ.
ತತ್ವಗಳೆಲ್ಲ ಸ್ವಯಂಬಂಧಿತವಾಗಿ ಕೆಡೆದುಬಿದ್ದಿರುವ ಇಲ್ಲಿ
ಘೋಷಣೆಗಳೆಲ್ಲ ಮೂಕವಾಗಿರುವ ಇಲ್ಲಿ
ಅರ್ಥವಿಲ್ಲದ, ಸ್ವಾರ್ಥವಿಲ್ಲದ ಬದುಕೊಂದೇ ಬಿಮ್ಮು ನಲಿಯುತ್ತಿದೆ:
ಚಿಲ್ಲುವರಿಯುತ್ತಿದೆ.

ಹೇಗೆ ಪಡೆಯಲಿ ಇವರ ನಿಶ್ಚಿಂತೆ, ನಿರ್ಮೋಹವ?
ಹೇಗೆ ಪಡೆಯಲಿ ಇವರ ಸರಳವಾದ ಉತ್ಸಾಹವ?
ಹೇಗೆ ಸಮರದ ಕಥೆಯ ಇವರೆದುರು ಹಾಡಲೇ?
ಅಧಿಕಾರದುನ್ಮತ್ತತೆಯ, ದೋಷಗಳ ಬಿತ್ತಲೇ?
ಜೀವನದ ಮೌಲ್ಯಗಳ ತಂತ್ರಗಳ ಬೋಧಿಸಲೇ?
ಅಥವ ಬಿಟ್ಟು ಮರೆತು ಇವರೊಡನೆ ಕೂಡಲೇ?
ತಿಳಿಸಬೇಕಿದೆ ಬದುಕ ಘನವಾದ ಸಂಸ್ಕಾರವ?
ತಿಳಿಸಬೇಕಿದೆ ಇವರು ಕಂಡಿರದ ಆಯಾಮವ?

ಸಂಶಯದ ಕಣ್ಣುಗಳು ನೋಡುತ್ತಿವೆ. ಗೊತ್ತು.
ಅಪರಿಚಿತ ತೆರೆಯೊಳಗದು ಸರಿಯುತ್ತವೆ, ಗೊತ್ತು.
ಮಣ್ಣು ನೀರಿನ ಬೆರಕೆ ಹಂಗಾಮು. ಗೊತ್ತು.

ಬರಿದೇ ಮಳಮಳಿಸುವೆ
ಅಸೂಯೆಯಿಂದ ತಿರಸ್ಕರಿಸುವೆ.

ಅಬ್ಬರಿಸಿ ಕುಣಿವ. ಕುಣಿಯುತ್ತ, ನಿಶ್ಚಲ ನಿಂತ
ದಡದೊಡನೆ ಘರ್ಜಿಸುತ ಹಿಂಜರಿವ
ತೆರೆಗಳ ಹಾಗೆ ಇವರು
ನಿಧಾನ ಇಷ್ಟಿಷ್ಟೇ ಕರಗುತ್ತ ಬಯಲಾಗುವ
ಒಂಟಿ ದ್ವೀಪ ನಾನು. —ಸುಬ್ರಾಯ ಚೊಕ್ಕಾಡಿ

ಆಕಾಶಯಾನ ಅಂದು ಇಂದು

ಜಿ. ಟಿ. ನಾರಾಯಣರಾವ್

ಅಂದು

ಕಲ್ಪನೆ

ಮನುಷ್ಯ ಕಣ್ಣು ಬಿಟ್ಟಾಗ ಅವನ ದೃಷ್ಟಿಯನ್ನು ಸೆಳೆದ ಕೆಲವು ಜ್ಯೋತಿಗಳೆಂದರೆ ಸೂರ್ಯ ಚಂದ್ರ ನಕ್ಷತ್ರ. ಆಕಾಶ ಇವುಗಳ ವಿಹಾರಕ್ಷೇತ್ರ. ಕೈಗೆ ಎಂದೂ ಎಟುಕದ ಈ ಆಕಾಶರಾಜ್ಯದ ಬಗ್ಗೆ ಮನುಷ್ಯನಿಗೆ ಅಧಿಕ ಕುತೂಹಲ ಮತ್ತು ಆಸಕ್ತಿ [illegible].

ಆಕಾಶ ಗೋಳಾಕಾರವಾಗಿ ಕಾಣುತ್ತದೆ. [illegible] ಅದಕ್ಕೆ [illegible] [illegible] ಶಾಸ್ತ್ರವಿದು. [illegible] ಖಗೋಳಶಾಸ್ತ್ರ ಎನ್ನುವುದುಂಟು.

ಖಗೋಳಶಾಸ್ತ್ರ ಮುಖ್ಯವಾಗಿ ಆಕಾಶಕಾಯ [illegible] ಪರಿಣಾಮಗಳನ್ನೂ ತಿಳಿದು [illegible] ಕಂಡದ್ದನ್ನು [illegible] ನಿರೂಪಿಸುವ ತಂತ್ರ ಮಾತ್ರ ಇದಕ್ಕೆ ಲಭ್ಯವಿತ್ತು. [illegible]

[illegible] ಆಕಾಶದ [illegible] ಸೀಮಿತ ಪರಿಸರದಲ್ಲಿ ತೀರ ಸಂಕ್ಷೇಪ ರೂಪದಲ್ಲಾದರೂ ಅನುಕರಿಸಿ ಕೆಲವೊಂದು ಸೂತ್ರ ಇಲ್ಲವೇ ತತ್ವಗಳನ್ನು ಕಂಡುಕೊಳ್ಳಲಾದೀತೇ ಎಂಬುದು ಅಂದಿನ ಮನುಷ್ಯನ ಕಲ್ಪನೆಯಲ್ಲಿ ಕೂಡ ಮೂಡಿರಲಾರದು. ಕಲ್ಪನೆ ಏನಿದ್ದರೂ ರೆಕ್ಕೆಯೊಡನೆ ಮುಗಿಲಗೆರೆ ಮೀರಿ ಶಶಿ–ರವಿಗಳನ್ನು [illegible] ತಾರಾಲೋಕವಿಹಾರಿ ಆಗಿರುವುದರಲ್ಲಿ ಸಾರ್ಥಕ್ಯ ಕಾಣುತ್ತಿತ್ತು.

ವಿಜ್ಞಾನ

ತಲೆಮಾರುಗಳು ಸಂದಂತೆ [illegible] ಬೆಳೆಯಿತು– ಸುಗ್ಗಿ ಕೊಯ್ಲು [illegible] [illegible] ಕಸ ಮುಲ್ಲು ಮಣ್ಣು [illegible] ಇಲ್ಲದೆ ಸೇರಿಕೊಂಡಿದ್ದುವು. ಪ್ರತಿಭಾವಂತನೊಬ್ಬ ಈ [illegible] ಹೊರತೆಗೆಯಲು ಸಮರ್ಥನಾದ. ಅವನೇ ಮೊದಲ ಅಜ್ಞಾತ ವಿಜ್ಞಾನಿ. ಖಗೋಳ [illegible] ರಂಗದಲ್ಲಿನ ಕೆಲವೊಂದು ಘಟನೆಗಳನ್ನಾದರೂ ಅವನ

ಸಮಾಧಾನವಾಗಿ ವಿವರಿಸಲು ಶಕ್ತನಾಗಿದ್ದ. ಈ ವಿವರಣೆಯ ಆಧಾರದ ಮೇಲೆ ನಾಳೆ ಏನಾಗುತ್ತದೆಯೆಂಬುದನ್ನು ಮುನ್ನುಡಿಯುವುದು ಅವನಿಗೆ ಸಾಧ್ಯವಾಗುತ್ತಿತ್ತು.

ಇಂಥ ಎಲ್ಲ 'ಕಾಳು'ಗಳೂ ಸಾಚಾ ಮಾಲುಗಳೇ ಆಗಿದ್ದುವು ಎಂದು ಭಾವಿಸಲಾಗದು. ಅಂದಿನ ತಿಳಿವಳಿಕೆಯ ಪರಿಮಿತಿಯೊಳಗೆ ಅವು ಸರಿಹೊಂದುತ್ತಿದ್ದುವು. ಕ್ರಮೇಣ ಇನ್ನಷ್ಟು ಮಾಹಿತಿ ಒಟ್ಟುಗೂಡಿದಂತೆ ಅವನ್ನು ಹಿಂದಿನ ವಿವರಣೆಯ ಅನುಸಾರ ಅರ್ಥವಿಸುವುದು ಕಷ್ಟವಾಯಿತು. ಹೀಗಾಗಿ ಈ ನೂತನಾವಿಷ್ಕಾರಗಳನ್ನು ಒಳಗೊಳ್ಳುವಂಥ, ಅಂದರೆ ಇವನ್ನು ಸಮರ್ಪಕವಾಗಿ ವಿವರಿಸುವಂಥ, ನವಸಿದ್ಧಾಂತಗಳು ಆವಶ್ಯವೆನ್ನಿಸಿದುವು.

ಹೀಗೆ ಬೆಳೆಯುತ್ತದೆ ವಿಜ್ಞಾನ – ಇರುವೆ ಗೂಡು ಕಟ್ಟುವಂತೆ. ಒಂದು ನೆಲೆ ಗಟ್ಟಿ ಆದ ಬಳಿಕ ಮುಂದಿನದಕ್ಕೆ ಜಾರುವಂತೆ.

ತಂತ್ರವಿದ್ಯೆ

ಗಟ್ಟಿ ವಸ್ತುಗಳ ತಿಕ್ಕಾಟದಿಂದ ಶಾಖೋತ್ಪತ್ತಿ ಆಗಿ ಮುಂದೆ ಬೆಂಕಿಕಿಡಿ ಸಿಡಿಯುವುದೆಂದು ಅರಿಯುವುದು ವಿಜ್ಞಾನ. ಈ ತಿಳಿವಳಿಕೆಯ ಅನ್ವಯದಿಂದ ಅಗ್ನಿಯನ್ನು ಉತ್ಪಾದಿಸುವುದು ತಂತ್ರವಿದ್ಯೆ. ಆದ್ದರಿಂದ "ಇತಿಹಾಸ ದೃಷ್ಟಿಗಸ್ಪಷ್ಟ ಪ್ರಾಚೀನದಲ್ಲಿ" ವನಾಂತರದ ಏಕಾಂತದಲ್ಲಿ ಚಕಮುಕಿ ಕಲ್ಲುಗಳನ್ನು ಬಡಿದು ಬೆಂಕಿ ಮಾಡಿದ ಆ ಅಜ್ಞಾತ ಮಾನವನೇ ಮೊದಲ ತಂತ್ರವಿದ.

ವಿಜ್ಞಾನದ ಸಿದ್ಧಾಂತಗಳನ್ನು ಆಧರಿಸಿ ತಂತ್ರ

"ಕಸ್ತೂರಿ" ವಸಂತ ಸಂಚಿಕೆ ಮೇ ೧೯೬೭ ರಲ್ಲಿ ಪ್ರಕಟವಾದ

ಆಕಾಶಯುಗದ ಹತ್ತು ವರ್ಷ

ಲೇಖನದ ಕೊನೆಯ ಪರಿಚ್ಛೇದವನ್ನು ಇಲ್ಲಿ ಉಲ್ಲೇಖಿಸಿದೆ

ಭವಿಷ್ಯ

ಜ್ಞಾನಪ್ರವಾಹ ಸದಾ ಹರಿಯುತ್ತಲೇ ಇರುವುದು. ತಡೆ ಇದಿರಾದಾಗ ಅದು ನಿಂತಂತೆ ತೋರಬಹುದು. ಆದರೆ ಮುಂದೊಂದು ದಿನ ಅವನ್ನು ಉತ್ತರಿಸಿ ದಾಟುವ ಕೌಶಲ ಪ್ರವಾಹಕ್ಕೆ ಇದ್ದೇ ಇದೆ.

ಭವಿಷ್ಯದಲ್ಲಿ ಸಾಧಿಸಬೇಕಾದ ಸಾಹಸ ಹೀಗಿದೆ

೧) ಚಂದ್ರನಲ್ಲಿಳಿದ ನೌಕೆಯನ್ನು ಭೂಮಿಗೆ ವಾಪಸು ಕರೆಸಿಕೊಳ್ಳಬೇಕು
೨) ಪ್ರಾಣಿಗಳ ಚಂದ್ರಲೋಕ ದರ್ಶನ ಮತ್ತು ಪುನರಾಗಮನ
೩) ಮನುಷ್ಯನ ಚಂದ್ರಲೋಕ ದರ್ಶನ ಮತ್ತು ಪುನರಾಗಮನ
೪) ಅಂತರ್ಗ್ರಹಯಾನ.

೧೯೭೦ ರಲ್ಲಿ ಪ್ರಥಮ ಮಾನವ ಚಂದ್ರನ ಮೇಲಿಳಿದು ಅಲ್ಲಿ ಸ್ವಲ್ಪ ಕಾಲ ತಂಗಿದ್ದು ಸುರಕ್ಷಿತನಾಗಿ ಭೂಮಿಗೆ ಮರಳುವುದು ಸಾಧ್ಯವಾಗಬಹುದು. "ಚಂದ್ರಲೋಕಕ್ಕೆ ಬಾ ಚಕೋರಿ" ಎಂದು ಅವನು ಅಲ್ಲಿಂದ ತನ್ನ (ಭೂಮಿಯ ಮೇಲಿನ) ಪ್ರೇಯಸಿಗೆ ಪ್ರೇಮಾಹ್ವಾನ ನೀಡಬಹುದು !

ವಿದ್ಯೆ ನೀಡುತ್ತದೆ. ತಂತ್ರವಿದ್ಯೆ ಒಡ್ಡುವ ಹೊಸ ಸವಾಲುಗಳನ್ನು ಸಮರ್ಪಕವಾಗಿ ಅರ್ಥವಿಸುವ ದಿಶೆಯಲ್ಲಿ ವಿಜ್ಞಾನ ಮತ್ತೆ ಹೊಸ ಹೆಜ್ಜೆ ಇಡುತ್ತದೆ. ಹೀಗೆ ಜ್ಞಾನಮಾರ್ಗ ವಿಜ್ಞಾನ ಮತ್ತು ತಂತ್ರವಿದ್ಯೆ ಎಂಬ ಎರಡು ಕಾಲುಗಳ ಮೇಲೆ ಸದಾ ಸಂಚಾರಿ ಆಗಿರುತ್ತಾನೆ.

ಒಂದೊಂದು ಯುಗದ ವಿಜ್ಞಾನವಾತಾವರಣವನ್ನು ಅವಲಂಬಿಸಿ ಆ ಯುಗದ ತಂತ್ರವಿದ್ಯೆ ಅಭಿವರ್ಧಿಸಿರುತ್ತದೆ. ಅಂಥಾ ಯುಗದ ತಂತ್ರವಿದ್ಯಾವಿಕಾಸಕ್ಕೆ ಅನುಗುಣವಾಗಿ ವಿಜ್ಞಾನದ ಎದುರು ನೂತನ ಸಮಸ್ಯೆಗಳು ಇರುತ್ತವೆ. ಸಾಹಿತ್ಯದಲ್ಲಿ ಹಾಗೂ ವಿಜ್ಞಾನ ತಂತ್ರವಿದ್ಯೆ ಎರಡರಲ್ಲೂ ಹಾಗೆ ಸಮಕಾಲೀನಪ್ರಜ್ಞೆ ಅಚ್ಚೊತ್ತಿರುತ್ತದೆ. ಉದಾಹರಣೆಗೆ ಆರ್ಕಿಮಿಡೀಸ್ (ಕ್ರಿ.ಪೂ. ಸು. ೨೮೭–೨೧೨), ಐಸಾಕ್ ನ್ಯೂಟನ್ (ಕ್ರಿ.ಶ. ೧೬೪೨–೧೭೨೭) ಮತ್ತು ಆಲ್ಬರ್ಟ್ ಐನ್‌ಸ್ಟೈನ್ (೧೮೭೯–೧೯೫೫) ಈ ಸಾರ್ವಕಾಲಿಕ ಶ್ರೇಷ್ಠ ವಿಜ್ಞಾನಿಗಳನ್ನು ಬೌದ್ಧಿಕವಾಗಿ ಒಂದೇ ಮಟ್ಟದವರು ಎಂದು ವರ್ಣಿಸುವುದುಂಟು. ಹಾಗಾದರೆ ಆರ್ಕಿಮಿಡೀಸ್ ಏಕೆ ವಿಶ್ವ ಗುರುತ್ವಾಕರ್ಷಣ ನಿಯಮವನ್ನು ಆವಿಷ್ಕರಿಸಲಿಲ್ಲ? ನ್ಯೂಟನ್ ಏಕೆ ರಿಲೆಟಿವಿಟಿ (ಸಾಪೇಕ್ಷತಾ ಸಿದ್ಧಾಂತವನ್ನು) ಮಂಡಿಸಲಿಲ್ಲ? ಈ ಪ್ರಶ್ನೆಗಳಿಗೆ ಉತ್ತರ ಸಮಕಾಲೀನ ಪ್ರಜ್ಞೆ. ಆರ್ಕಿಮಿಡೀಸ್ ಆ ಕಾಲದ ಮಟ್ಟಕ್ಕೆ ಅನುಗುಣವಾಗಿ ಮೇಲೆ ಎತ್ತರ ಏರಿದ; ನ್ಯೂಟನ್ ಆ ತನಕ ಬೆಳೆದು ಬಂದಿದ್ದ ವಿಜ್ಞಾನ ಹಾಗೂ ತಂತ್ರವಿದ್ಯೆಗಳ ಗೋಡೆ ಮೇಲೆ ನಿಂತು ಇನ್ನಷ್ಟು ಎತ್ತರಕ್ಕೆ ಏರಿದ. ಈ ಇಬ್ಬರು ಹಿರಿಯರ ಹೆಗಲ ಮೇಲೆ ನಿಂತು ಐನ್‌ಸ್ಟೈನ್ ಹೆಜ್ಜೆಯ ಹರವನ್ನು ಗಮನಿಸಿದ.

ಆಕಾಶಯುಗದ ಆರಂಭ

ಮನುಷ್ಯ ಅಥವಾ ಮನುಷ್ಯಕೃತ ವಸ್ತು ಆಕಾಶದಲ್ಲಿ ಸಂಚರಿಸಲು ತೊಡಗಿದಂದು ಆಕಾಶಯುಗ ಆರಂಭವಾಯಿತು.

ವಾಸ್ತವವಾಗಿ ನಮ್ಮ ಭೂಮಿ ಆಕಾಶವೆಂಬ ಸಮುದ್ರದಲ್ಲಿ ಸೂರ್ಯನೆಂಬ ದ್ವೀಪಸ್ತಂಭದ ಸುತ್ತು ತಿರುಗುತ್ತಿರುವ ಒಂದು ನೌಕೆ. ಆದ್ದರಿಂದ ಮನುಷ್ಯನ ಜನನದೊಡನೆ ಆಕಾಶಯುಗದ ಉಗಮವೂ ಆಯಿತು ಎಂದು ಹೇಳಬಹುದು



ಅವನೆಸೆದ ಕಲ್ಲು. [illegible] ಆಕಾಶ ಯಾನಗವನ್ನು ಆವಾಹಿಸಿದುವು [illegible] ನೆಗೆದು ದಾಟಿದಾಗ ಸ್ವತಃ ಅವನೇ ಆಕಾಶಗಾಮಿ ಆಗಿದ್ದ.


ಆದರೆ ಇವೆಲ್ಲ 'ದೊಂಬರಾಟ'ಗಳೂ ಈ ಗಟ್ಟಿ ನೆಲದವು. [illegible] ಗುರುತ್ವದ [illegible] ಯನ್ನು ಕೂಡ 'ಏಕ್‌ದಂ' ಜಿಗಿದು ದಾಟಿದವಲ್ಲ. ಆ ವಿಶೇಷ ಮುಹೂರ್ತದ ಆಗಮನಕ್ಕಾಗಿ ಮಾನವ ಜನಾಂಗ ಇಪ್ಪತ್ತನೆಯ ಶತಮಾನದ ಉತ್ತರಾರ್ಧದ ವರೆಗೂ ಕಾಯಬೇಕಾಯಿತು.

ಕಲ್ಪನೆಗೆ ವಿಜ್ಞಾನ ಉಸಿರನ್ನು ಊಡುತ್ತದೆ, ತಂತ್ರವಿದ್ಯೆ ಒಡಲನ್ನು ನೀಡುತ್ತದೆ. ಆಗ ಮಾತ್ರ ಕಲ್ಪನೆ ಪೂರ್ಣ ಜೀವಂತವ್ಯಕ್ತಿಯಾಗಿ ವ್ಯವಹರಿಸಬಲ್ಲದು. ಆಕಾಶಯಾನದ ಕಲ್ಪನೆಗೆ ವಾಸ್ತವ ರೂಪ ಪಡೆಯಲು ಇಪ್ಪತ್ತನೆಯ ಶತಮಾನದ ಹದ ಅಗತ್ಯವಾಗಿತ್ತು.

ನಡೆದುಬಂದ ಜಾಡು

ಭೂಮಿ ಮತ್ತು ಇತರ ಆಕಾಶಕಾಯಗಳ ಸಂಬಂಧವನ್ನು ಕುರಿತಂತೆ ವಿಜ್ಞಾನಿಗಳು ಹದಿನಾರನೆಯ ಶತಮಾನದ ಆರಂಭದ ವರೆಗೂ ಭೂಮಿ ಕೇಂದ್ರವಾದವನ್ನು ಪುರಸ್ಕರಿಸಿಕೊಂಡು ಬಂದಿದ್ದರು. ಇದರ ಸಾರವಿಷ್ಟು: ಭೂಮಿಯೇ ವಿಶ್ವದ ಕೇಂದ್ರ. ಇದಕ್ಕೆ ಚಲನೆ ಇಲ್ಲ. ಇದರ ಸುತ್ತ ಬೇರೆ ಬೇರೆ ವೃತ್ತಕಕ್ಷೆಗಳಲ್ಲಿ ಚಂದ್ರ ಸೂರ್ಯ ಗ್ರಹ ನಕ್ಷತ್ರಗಳೆಲ್ಲವೂ ಪರಿಭ್ರಮಿಸುತ್ತವೆ. ಆದರೆ ವಿಜ್ಞಾನದ ವಿವಿಧ ಅಂಗಗಳು ಬೆಳೆದು ವಿಶ್ವವನ್ನು ಕುರಿತಂತೆ ಹೊಸ ಹೊಸ [illegible] ಭೂಮಿಕೇಂದ್ರವಾದ [illegible] ಮುಗ್ಗರಿಸತೊಡಗಿತು.

ಈ [illegible] ನಿಕೊಲಾಸ್ ಕೊಪರ್ನಿಕಸ್ (೧೪೭೩-೧೫೪೩). ಇವನು ಸೂರ್ಯಕೇಂದ್ರವಾದದ [illegible] ವಿಜ್ಞಾನರಂಗದಲ್ಲಿ ಮಾತ್ರವಲ್ಲ [illegible] ಸಕಲ ಕ್ಷೇತ್ರಗಳಲ್ಲೂ ಕ್ರಾಂತಿಯನ್ನೇ ಸೃಷ್ಟಿಸಿದ. ಆ ತನಕ 'ಅಚಲ ಪೃಥ್ವಿ'ಯಾಗಿದ್ದ [illegible] ಇತರ ಸಮಸ್ತ ಆಕಾಶಕಾಯಗಳಂತೆ [illegible]



ಭೂಮಿ ಬಹಳ ಉನ್ನತ ಸ್ಥಾನದಿಂದ ಉಚ್ಚಾಟನೆಗೊಂಡು ಸೂರ್ಯಪ್ರಭುವಿನ ಸುತ್ತ ಪರಿಭ್ರಮಿಸುವ ಮೂರನೆಯ ಗ್ರಹವಾಗಿ ಹೋಯಿತು! ಹೀಗೆ ಸೌರವ್ಯೂಹದ ಮೊದಲ [illegible] ಚಿತ್ರವನ್ನು ರೂಪಿಸಿದವ ಮತ್ತು ಆಕಾಶಯುಗದ [illegible] ನಾಂದಿಹಾಡಿದವ ಕೊಪರ್ನಿಕಸ್.

ಗ್ರಹಗಳು ಸೂರ್ಯನ ಸುತ್ತ ಪರಿಭ್ರಮಿಸುತ್ತವೆ ಎಂದು ಒಪ್ಪಿಕೊಂಡ ಬಳಿಕ ಈ ಚಲನೆಯಲ್ಲಿ [illegible] ಕೆಪ್ಲರ್ (೧೫೭೧-೧೬೩೦). [illegible] ಪ್ರತಿಯೊಂದು ಗ್ರಹವೂ ಸೂರ್ಯನ ಸುತ್ತ ದೀರ್ಘವೃತ್ತಾಕಾರದ ಕಕ್ಷೆಯಲ್ಲಿ ಪರಿಭ್ರಮಿಸುತ್ತದೆ. [illegible] ಗ್ರಹದ ಕಕ್ಷೆಯ [illegible]

ಹೀಗೆ ಭೂಮಿ ಸಹ ಸೇರಿದಂತೆ ಪ್ರತಿಯೊಂದು

ಗ್ರಹವೂ ಸೂರ್ಯನ ಮಾಂಡಲಿಕ. ಈ ಎಲ್ಲ ಮಾಂಡಲಿಕ ಗ್ರಹಗಳೂ ಕೆಪ್ಲರನ ನಿಯಮಗಳ ಅನುಸಾರ ವರ್ತಿಸುವುದರ ರಹಸ್ಯ ಏನು? ಸೂರ್ಯ ಇವನ್ನು ಯಾವುದೋ ಅಗೋಚರ ಪಾಶದಿಂದ ಬಂಧಿಸಿ ತನ್ನ ಇಚ್ಛಾನುಸಾರ ವರ್ತಿಸುವಂತೆ ವಿಧಿಸುವುದಾಗಿರಬೇಕು – ಅಯಸ್ಕಾಂತದ ಮರ್ಜಿಯನ್ನು ಅನುಲಕ್ಷಿಸಿ ಕಬ್ಬಿಣದ ರೇಕುಗಳು ಕುಣಿಯುವುದಿಲ್ಲವೇ, ಅಗೊ ಹಾಗೆ. ಇವೆಲ್ಲ ಸಂದೇಹಗಳಿಗೆ ನಿಖರ ಪರಿಹಾರ ನೀಡಿ ವಿಜ್ಞಾನೇತಿಹಾಸದಲ್ಲಿ ನವಮನ್ವಂತರವನ್ನು ಪ್ರವರ್ತಿಸಿದವ ಐಸಾಕ್ ನ್ಯೂಟನ್ (೧೬೪೨–೧೭೨೭). ಆತ ಪ್ರತಿಪಾದಿಸಿದ ವಿಶ್ವಗುರುತ್ವಾಕರ್ಷಣ ನಿಯಮ ಸಮಸ್ತ ಆಕಾಶಕಾಯಗಳ ಅಸ್ತಿತ್ವಕ್ಕೂ ಪರಸ್ಪರ ವರ್ತನೆಗೂ ಸರಳ ಸುಂದರ ಸ್ಪಷ್ಟ ವಿವರಣೆ ನೀಡಿದೆ. ವಿಶ್ವದ ಪ್ರತಿಯೊಂದು ವಸ್ತು– ಅಣು ರೇಣು ತೃಣಕಾಷ್ಠದಿಂದ ತೊಡಗಿ ಗುರು ಸೂರ್ಯ ಆಕಾಶಗಂಗೆ ಬ್ರಹ್ಮಾಂಡದ ವರೆಗೆ ಎಲ್ಲವೂ ಸೇರಿವೆ–– ಇತರ ಎಲ್ಲ ವಸ್ತುಗಳನ್ನು ತನ್ನೆಡೆಗೆ ಸೆಳೆಯುವುದೆಂದೂ ಈ ಸೆಳೆತದ ಬಲವನ್ನು ಗಣನೆ ಮಾಡಿ ತಿಳಿಯಬಹುದೆಂದೂ ನ್ಯೂಟನ್ನನ ನಿಯಮದಿಂದ ವೇದ್ಯವಾಯಿತು.


ನೆಲದಿಂದ ಮೇಲಕ್ಕೆ ಬೀರಿದ ಕವಣೆಕಲ್ಲು ಹಾಗೆಯೇ ಗಗನಕ್ಕೆ ಎಗರಿ ಹೋಗದೆ ನೆಲಕ್ಕೆ ಬೀಳಬೇಕೇಕೆ ? ಫಿರಂಗಿಗುಂಡನ್ನು ನಿಶ್ಚಿತ ಬಲದಿಂದ ನಿಶ್ಚಿತ ದಿಶೆಯೆಡೆಗೆ ಹೊಟ್ಟಿಸಿದಾಗ ಆ ಗುಂಡಿನ ಪಥವನ್ನೂ ಪತನಸ್ಥಳವನ್ನೂ ಗಣಿಸಿ ಹೇಳಬಹುದೇ? ಸಾಕಷ್ಟು ಸುದೃಢ ವಿಮಾನವನ್ನು ನಿರ್ಮಿಸಿ ಅದಕ್ಕೆ ಯಥೇಚ್ಛ ಇಂಧನವನ್ನು ತುಂಬಿಸಿ ಊರ್ಧ್ವಾಭಿಮುಖವಾಗಿ ಹಾರಲು ಬಿಟ್ಟಾಗ್ಯೂ ಅದು ಭೂಮಿಯ ಸರಹದ್ದಿನಿಂದ ಆಚೆಗೆ ಹೋಗಲಾರದೇಕೆ ? ಮನುಷ್ಯ ಸದಾ ಭೂಮಿತುರಂಗಕ್ಕೆ ಬಂಧಿತನಾಗಿ ಇರುವುದು ಅನಿವಾರ್ಯವೇ? ಚಂದ್ರ ಮಂಗಳ ಮೊದಲಾದ ಅನ್ಯಲೋಕಗಳಿಗೆ ತೆರಳಿ ಹೊಸ ಹಸಿರನ್ನು ಅರಸುವುದು ಅಸಂಭಾವ್ಯವೇ ? ಭೂಮ್ಯೇತರ ಬುದ್ಧಿವಂತ ಜೀವಿಗಳೊಡನೆ ಸಂಪರ್ಕ ಕಲ್ಪಿಸಿ ನಿಜವಾದ ವಿಶ್ವಬಾಂಧವ್ಯವನ್ನು ಬೆಸೆಯುವುದು ಕೂಡಿ ಬಂದೀತೇ?

ಈ ತೆರನಾದ ಹಲವು ಹನ್ನೊಂದು ಪ್ರಶ್ನೆ ಸಂದೇಹ ಮತ್ತು ಕಲ್ಪನಾವಿಲಾಸಗಳಿಗೆ ನ್ಯೂಟನ್‌ತರುವಾಯದ ಶತಮಾನಗಳಲ್ಲಿ. ವಿಜ್ಞಾನ ಮತ್ತು ತಂತ್ರವಿದ್ಯೆ ಅಭಿವರ್ಧಿಸಿದಂತೆ, ಪ್ರಾಯೋಗಿಕ ಪರಿಹಾರಗಳು ಲಭಿಸಿವೆ.

ಆಕಾಶಯಾನದ ಮೂಲಾವಶ್ಯಕತೆ

ಭೂಮಿ ನಮ್ಮ ಮೇಲೆ ಹೊದಿಸಿರುವ ಗುರುತ್ವಾಕರ್ಷಣದ ಅಪ್ಪುಗೆ ಊಹಾತೀತ ಎನ್ನಿಸುವಷ್ಟು ಸುಭದ್ರವಾಗಿದೆ: ನೆಲದಿಂದ ನೇರ ಮೇಲಕ್ಕೆ ಕನಿಷ್ಠ ಪಕ್ಷ ಸೆಕೆಂಡಿಗೆ (ಗಮನಿಸಿ– ಸೆಕೆಂಡಿಗೆ, ಗಂಟೆಗೆ ಅಲ್ಲ) ೧೨ ಕಿಮೀ ವೇಗದಿಂದ ಜಿಗಿಯಲು ಶಕ್ತರಾದರೆ ಮಾತ್ರ ನಾವು ಈ ಕೋಟೆಯನ್ನು ಭೇದಿಸಿ ವಿಶಾಲಾಕಾಶವನ್ನು ಐದಬಲ್ಲೆವು. ವೇಗದ ಈ ಕನಿಷ್ಠಮಿತಿಗೆ ಅರ್ಥಪೂರ್ಣವಾಗಿ ವಿಮೋಚನವೇಗವೆಂಬ ಹೆಸರಿದೆ. ಇಂದು (೧೯೭೮) ಅತ್ಯಧಿಕ ವೇಗದಿಂದ ಹಾರಬಲ್ಲ ವಿಮಾನವೆಂದರೆ ಕಾನ್‌ಕರ್ಡ್. ಇದರ ಗರಿಷ್ಠ ವೇಗ ಎಷ್ಟು ಗೊತ್ತೇ? ಸೆಕೆಂಡಿಗೆ ಕೇವಲ ೦.೬ ಕಿಮೀ! ಆದರಿಂದ ವಿಮಾನವನ್ನು ಹಾರಿಸುವಲ್ಲಿ ಸಲ್ಲುವ ಯಾವ ತಂತ್ರವಿದ್ಯೆಯೂ ಆಕಾಶಯಾನದ ಸವಾಲನ್ನು ಎದುರಿಸುವಲ್ಲಿ ಸಲ್ಲದು.

ವಿಮಾನದಲ್ಲಿ, ಅಂತೆಯೇ ನೆಲದ ಮತ್ತು ಜಲದ ಮೇಲೆ ಸಾಗುವ ಸ್ವಯಂಚಲಿಗಳಲ್ಲಿ. ಉರುವಲು ಉರಿದು ಶಕ್ತಿ ಬಿಡುಗಡೆ ಆಗುತ್ತದೆ. ಈ ಉರಿತಕ್ಕೆ ಅಗತ್ಯವಾಗುವ ಆಮ್ಲಜನಕ ಮುಕ್ತ ವಾಯುಮಂಡಲದಿಂದ ಹೇರಳವಾಗಿ ಒದಗುವುದು. ಆದ್ದರಿಂದ ದಟ್ಟ ವಾಯುಮಂಡಲದಿಂದ ಆಚೆಗೆ ವಿಮಾನ ಕೆಲಸ ಮಾಡದು. ಇಷ್ಟೇ ಅಲ್ಲ, ವಿಮಾನ ಹಾರಲು ವಾಯುಮಂಡಲದ ಸಾಂದ್ರ ಮಾಧ್ಯಮ ಅವಶ್ಯ. ದೋಣಿ ಸಾಗಲು ಆಳ ನೀರಿನ ತೇಲು ಮಾಧ್ಯಮ ಅವಶ್ಯವಿರುವಂತೆ. ಭೂಮಿಯಿಂದ ಮೇಲೆ ಮೇಲೆ ಏರಿದಂತೆ ವಾಯುಮಂಡಲ ವಿರಳ ವಿರಳ ಆಗಿ ಸುಮಾರು ೧೫೦ ಕಿಮೀನಿಂದ ಅತ್ತಲಾಗಿ ನಿರ್ವಾತ ಪ್ರದೇಶ ಎದುರಾಗುವುದು. ಅಲ್ಲಿ ಇಂಧನದಹನಕ್ಕೆ ಆಮ್ಲಜನಕ ದೊರೆಯದು. ವಾಹನ 'ಈಸಲು' ಅಥವಾ 'ತೇಲಲು'



ಮಾಧ್ಯಮ ಇರದು. ಆದರೆ ಶಕ್ತಿ ಒದಗಬೇಕಾದರೆ ಇಂಧನದಹನ ಅತ್ಯವಶ್ಯ. ಆದ್ದರಿಂದ ನಿರ್ವಾತದಲ್ಲಿ ಉರಿಯಬಲ್ಲ ಉರುವಲನ್ನೂ ಅದರಿಂದ ಒದಗುವ ಶಕ್ತಿಯನ್ನು ಬಾಹ್ಯ ಮಾಧ್ಯಮದ ನೆರವಿಲ್ಲದೆ ತಳ್ಳುಬಲವಾಗಿ ಮಾರ್ಪಡಿಸುವ ವಿಧಾನವನ್ನೂ ಶೋಧಿಸುವುದು ವಿಜ್ಞಾನಿಗಳ ಎದುರು ಹೊಸ ಸವಾಲಾಗಿ ಎದ್ದು ನಿಂತಿತು. ಇದಕ್ಕೆ ಉತ್ತರವಾಗಿ ಅವತರಿಸಿದ್ದು ರಾಕೆಟ್.

ಆಕಾಶಯಾನದ ವಾಹನ ರಾಕೆಟ್. ಮನುಷ್ಯ ಭೂಮಿಯ ಮೇರೆ ಮೀರಲು ಏರಬೇಕಾದ ನೂತನ ವಾಹನ ರಾಕೆಟ್. ಸಾಗರೋಲ್ಲಂಘನ ಮಾಡಲು ಹೇಗೆ ಹನುಮಂತನೋ ಆಕಾಶೋಲ್ಲಂಘನ ಮಾಡಲು ಹಾಗೆ ರಾಕೆಟ್. ಇದರಲ್ಲಿ ಶೇಖರಿಸಿ ಇರುವ ಇಂಧನದ ಅವಿಭಾಜ್ಯ ಅಂಗವಾಗಿ ದಹನಕ್ಕೆ ಬೇಕಾಗುವ ಆಮ್ಲಜನಕವೂ ಇರುತ್ತದೆ. ಆದ್ದರಿಂದ ರಾಕೆಟ್ ಆಮ್ಲಜನಕಕ್ಕಾಗಿ ವಾಯುಮಂಡಲಾವಲಂಬಿ ಅಲ್ಲ. ಇಂಧನದಹನದಿಂದ ಅತಿ ಸಂಮರ್ದಯುತ ಅನಿಲರಾಶಿ ಉತ್ಪನ್ನವಾಗುವುದು. ಇದು ಕಿರಿಬಾಯಿ ಸೂಸು-ಮೂತಿಯ ಮೂಲಕ ಬಲಾತ್ಕಾರವಾಗಿ ಬಾಹ್ಯ ಪರಿಸರಕ್ಕೆ ಧಾವಿಸುವಾಗ ಉಂಟಾಗುವ ವಿರುದ್ಧ ದಿಶೆಯ ಅಗಾಧ ಬಲ – ಗುಂಡು ಹೊಡೆಯುವಾಗ ತುಪಾಕಿ ಹಿಂದಕ್ಕೆ ಒದೆಯುವಂತೆ – ರಾಕೆಟನ್ನು ಅತಿ ವೇಗದಿಂದ ಓಡಿಸುತ್ತದೆ. ಈ ನೂಕುಬಲದ ವರ್ತನೆಗೆ ಪರಿಸರದ ಮಾಧ್ಯಮ ಬೇಕಾಗಿಲ್ಲ. ಇಷ್ಟೇ ಅಲ್ಲ, ಅದಿದ್ದರೆ ಉತ್ಪನ್ನವಾಗುವ ಘರ್ಷಣೆಯಿಂದ ರಾಕೆಟಿನ ಬಲ ಕುಂಠಿತವಾಗುವುದು. ಹಾಗೆಂದೇ ರಾಕೆಟ್ ವಾಯುಮಂಡಲಕ್ಕಿಂತ ಹೆಚ್ಚು ಸಲೀಸಾಗಿ ನಿರ್ವಾತದಲ್ಲಿ ಕಾರ್ಯ ನಿರ್ವಹಿಸಬಲ್ಲುದು.

ರಾಕೆಟಿನ ಮೂಲಪುರುಷರು

ರಾಕೆಟ್ ತಂತ್ರವಿದ್ಯೆಯನ್ನು ಹರಿಃ ಶ್ರೀ ಓಂ ನಾಮದಿಂದಲೇ ಪ್ರಾರಂಭಿಸಬೇಕಾಯಿತು. ಈ ಇಬ್ಬರು ಹೊಸ ದಾರಿ ತುಳಿದು ಪರಸ್ಪರ ಸ್ವತಂತ್ರವಾಗಿ ಅದನ್ನು ಅಭಿವೃದ್ಧಿಗೊಳಿಸಿದವರು ರಷ್ಯದ ಕಾನ್‌ಸ್ಟಾಂಟಿನ್ ತ್ಸಿಯೋಲ್ಕೊವ್‌ಸ್ಕಿ (೧೮೫೭–೧೯೩೫) ಮತ್ತು ಅಮೆರಿಕದ ರಾಬರ್ಟ್ ಹಚಿಂಗ್ಸ್ ಗೊಡಾರ್ಡ್ (೧೮೮೨–೧೯೪೫).

ತ್ಸಿಯೋಲ್ಕೊವ್‌ಸ್ಕಿ ಇನ್ನೂ ಒಂಬತ್ತರ ಬಾಲಕನಾಗಿದ್ದಾಗ ತೀವ್ರ ಸೋಂಕುರೋಗದಿಂದ ಬಾಧಿತನಾಗಿ ಕಿವುಡನಾದ. ಹತ್ತೊಂಬತ್ತನೆಯ ಶತಮಾನದ ಝಾರರ ರಷ್ಯ ಎಲ್ಲ ರಂಗಗಳಲ್ಲಿಯೂ ಹಿಂದೆ ಉಳಿದಿತ್ತು. ಆದರೂ ಜ್ಞಾನ

ರಾಹಿ ತ್ಸಿಯೊಲ್ಕೊವ್ಸ್ಕಿ ಬಡವ ಅತ್ಯಂತ [illegible] ಸ್ವಂತ ಪ್ರಯತ್ನದಿಂದ ವಿದ್ಯಾರ್ಜನೆ ಮಾಡಿ ಶಾಲಾಧ್ಯಾಪಕನಾಗಿ ನೇಮಕಗೊಂಡ. ರಸಾಯನ ಮತ್ತು ಭೌತ ಶಾಸ್ತ್ರಗಳ [illegible] ಮಾಡಲು ತೊಡಗಿದ ಇವನು ಬಲು ಬೇಗ [illegible] ರಾಕೆಟ್ ವಿಜ್ಞಾನ ಕ್ಷೇತ್ರದಲ್ಲಿ ಇಳಿದ. ಆಕಾಶಯಾನದ ಬಗ್ಗೆ ವೈಜ್ಞಾನಿಕವಾಗಿ ಬರೆದ, [illegible] ಸಂಶೋಧನಾ ಪ್ರಬಂಧಗಳನ್ನು ಪ್ರಕಟಿಸಿದ (೧೮೯೫). ನಿಷ್ಕೃಷ್ಟ ಗಣಿತ ಗಣನೆಗಳನ್ನು ಆಧರಿಸಿ ರಾಕೆಟ್ ತಯಾರಿಕೆಯ ಸಾಧ್ಯತೆಯನ್ನು ಚಿತ್ರಿಸಿದ (೧೯೦೩).

ಸೋವಿಯತ್ ಒಕ್ಕೂಟದ ಸರ್ಕಾರ (೧೯೧೭ರಿಂದ ಪ್ರಾರಂಭ) ತ್ಸಿಯೊಲ್ಕೊವ್ಸ್ಕಿಯ ಸಾಧನೆಯನ್ನು ಗಮನಿಸಿ ಅವನಿಗೆ ಯೋಗ್ಯ ಪುರಸ್ಕಾರ ನೀಡಿ ಪ್ರೋತ್ಸಾಹಿಸಿತು. ೧೯೩೫ರಲ್ಲಿ ಅವನು ಮಡಿದಾಗ ಸಮಸ್ತ ರಾಷ್ಟ್ರಗೌರವ ಸಮೇತ ಅವನನ್ನು ದಫನ ಮಾಡಲಾಯಿತು. "ಮನುಷ್ಯನಿಗೆ ಭೂಮಿ ತೊಟ್ಟಿಲು ನಿಜ. ಆದರೆ ಸದಾ ಅವನು ಈ ತೊಟ್ಟಿಲಿಗೆ ಬಂಧಿತನಾಗಿ ಇರಬೇಕಾಗಿಲ್ಲ" – ತ್ಸಿಯೊಲ್ಕೊವ್ಸ್ಕಿ ಪ್ರವಾದಿಯ ತೆರದಲ್ಲಿ ಈ ಶತಮಾನದ ಆದಿಯಲ್ಲಿ ನುಡಿದ ಉದ್ಗಾರವಿದು. ೧೯೫೭ರಲ್ಲಿ ಅವನ ಜನ್ಮಶತಾಬ್ದಿಯ ವೇಳೆಗೆ ಸರಿಯಾಗಿ ಆಧುನಿಕ ರಷ್ಯ ಸ್ಪುಟ್ನಿಕ್–೧ನ್ನು ಉಡಾಯಿಸಿ, ಆಕಾಶ ಯುಗದ ಈ ಆಚಾರ್ಯ ಪುರುಷನಿಗೆ ಗೌರವ [illegible].

[illegible] ಗಳಲ್ಲಿ ಗೊಡಾರ್ಡ್ ಅಧಿಕ ಯಶಸ್ಸು ಗಳಿಸಿದ. ಎರಡನೆಯ ಮಹಾಯುದ್ಧದ ಕೊನೆಯ ಹಂತದಲ್ಲಿ ಜರ್ಮನರು ವಿ–೨ ಎಂಬ ಹೆಸರಿನ ರಾಕೆಟ್‌ಚಾಲಿತ ಮಾರಕಾಸ್ತ್ರವನ್ನು ಸಮರ್ಥವಾಗಿ ಹೂಡಿ ಮಿತ್ರರಾಷ್ಟ್ರಗಳಲ್ಲಿ ತೀವ್ರ ಕ್ಷೋಭೆಯನ್ನೇ ಉಂಟುಮಾಡಿದರು. ಯುದ್ಧಾನಂತರ ಜರ್ಮನ್ ರಾಕೆಟ್ ವಿಜ್ಞಾನಿಗಳ ಒಂದು ತಂಡ [illegible] ವನ್ನು ಸೇರಿತು. ಸಹಜವಾಗಿ ಈ ಪರಿಣತರನ್ನು ಅವರ ರಾಕೆಟ್ ಸಾಧನೆಯ ರಹಸ್ಯ ಏನೆಂದು [illegible] ಆದು ಗೊಡಾರ್ಡನ ಪ್ರಯೋಗಫಲ ಎಂದರಂತೆ! ಹೀಗೆ ಶತ್ರುಪಕ್ಷದ ವಿಜ್ಞಾನಿಗಳು ಸಹ ಗೊಡಾರ್ಡನ ನಿಶಿತಮತಿಗೆ [illegible]. ಆದರೆ ಸರ್ಕಾರದ [illegible] ಯಂತ್ರ ಇವನನ್ನು ತಿರಸ್ಕಾರದಿಂದ ಅಲ್ಲದಿದ್ದರೆ ಅನಾಸಕ್ತಿಯಿಂದ ತಾತ್ಸಾರ ಮಾಡಿದ್ದಂತೂ ನಿಜ. [illegible] ವಾದದಿಂದ ಮತ್ತು ವಿಜ್ಞಾನ ವಿಚಾರಗಳನ್ನು [illegible] ಬಲ್ಲವರೇ ಇವನ ಚಿಂತನ ಮತ್ತು ಪ್ರಯೋಗಗಳನ್ನು ಕುಚೇಷ್ಟೆಯ ಮನೋಭಾವದಿಂದ ಟೀಕಿಸಿದ್ದರಿಂದ ಇವನು ಸದಾ ಅಪರಾಧೀಭಾವದಿಂದ ಜನವಿದೂರನಾಗಿ ಪ್ರಸಿದ್ಧಿ ಪ್ರಚಾರಗಳಿಗೆ ಆಸೆ ಪಡದೇ ತಾನು ಹಿಡಿದ ಸತ್ಯವನ್ನು ಅನ್ವೇಷಿಸುವ ದಿಶೆಯಲ್ಲಿ ಒಂಟಿ ಹಾದಿ ತುಳಿಯುವುದು ಅನಿವಾರ್ಯವಾಯಿತು. ಚಂದ್ರಾಭಿಮುಖವಾಗಿ ಇವನು ರಾಕೆಟ್ ಹಾರಿಸಿದಾಗ (೧೯೨೯) ಪ್ರಸಿದ್ಧ ವೃತ್ತಪತ್ರಿಕೆಯೊಂದರಲ್ಲಿ ಪ್ರಕಟವಾದ ಶೀರ್ಷಿಕೆ ಹೀಗಿತ್ತು: "ಚಂದ್ರರಾಕೆಟ್ ಗುರಿಯನ್ನು (ಕೇವಲ) ೨,೩೮,೭೯೯ ಮೈಲುಗಳಿಂದ ತಪ್ಪಿತು!" (ಭೂಮಿ–ಚಂದ್ರ ಸರಾಸರಿ ಅಂತರ ಸುಮಾರು ಇಷ್ಟೇ.)

[illegible] ಬಲ್ಲ ರಾಕೆಟುಗಳನ್ನು ಗೊಡಾರ್ಡ್ ಪ್ರಯೋಗಿಸಿದ. [illegible] ರಾಕೆಟಿನ [illegible] ಹಾರಿದ ವಿಸ್ತೃತದ ಶೋಧವನ್ನು ಮಾಡಲು ವಿಧಿಸಿದ. ರಾಕೆಟ್ ಹಾರುವಂತೆ [illegible] ಆಗುವಂತೆ ಅದಕ್ಕೆ [illegible] ತಂತ್ರವನ್ನು ಅಳವಡಿಸಿದ. [illegible] ಜೋಡಿಸಿದ [illegible] ರಾಕೆಟನ್ನು [illegible]

ಬಿಂದ ತೆರಳಲು ಅವಶ್ಯವಾದ ತಂತ್ರವನ್ನು ರೂಪಿಸಿದ. ಗೊದಾರ್ಡನ ಕನಸು ಮತ್ತು ಸಿದ್ಧ [illegible]. ಅವರ [illegible] ಇದ್ದರೆ [illegible] (೧೯೪೫). ಆಕಾಶಯುಗದ ಈ [illegible] ಅಮೆರಿಕ ಸರ್ಕಾರ ತಡವಾಗಿ ಆದರೂ ಉಚಿತ ಗೌರವವನ್ನು ಸಲ್ಲಿಸಿತು. ಮೇರಿಲೆಂಡಿನಲ್ಲಿರುವ ಗೊದಾರ್ಡ್ ಸ್ಪೇಸ್ ಫ್ಲೈಟ್ ಸೆಂಟರ್ (೧೯೬೦) ಅವನ ಹೆಸರನ್ನು ಚಿರಸ್ಥಾಯಿಗೊಳಿಸಿದೆ, ಮನುಷ್ಯಸಾಹಸಕ್ಕೆ ಆಕಾಶವೇ [illegible] ಭವ್ಯ ಸ್ಮಾರಕವಾಗಿ ನಿಂತಿದೆ.

ಪಥವೀಕ್ಷಣೆ

ರಾಕೆಟ್ ಹಾರುತ್ತದೆ. [illegible] ಮೇಲೇರಿ ಸಾಗುತ್ತದೆ. ಮನುಷ್ಯ ಕಾಣದ ಲೋಕದ ತಪಾಸಣೆ ಮಾಡುತ್ತದೆ – ಎಲ್ಲವೂ ನಿಜ. ಆದರೆ ಆ ಅಜ್ಞಾತ [illegible] ವಿಜ್ಞಾನಿಗೆ ಗೊತ್ತಾಗದಿದ್ದರೆ ಏನು ಪ್ರಯೋಜನ? ನೆಲದ ಮೇಲೆ ಬಂಧಿತನಾಗಿರುವ ವಿಜ್ಞಾನಿ [illegible] ಸುವ ಸಂಜಯ ಬೇಕೇ ಬೇಕು. ಇನ್ನು ರಾಕೆಟ್ [illegible] ಮತ್ತೆ [illegible] ಹೋಗಿ ಅಲ್ಲಿ ಏನು ಮಾಡಬೇಕು [illegible] ಅದಕ್ಕೆ! ಹೊರಡಾಗ್ಗೆಯೇ [illegible] ಆದೇಶ [illegible] ಅಷ್ಟೆ.

ರಾಕೆಟಿನ ಒಳಗಿರುವ [illegible] – ಇದಕ್ಕೆ ಪಾವತಿಮೊರೆ ([illegible]) [illegible] ಧಾತುಗಳಿಂದ [illegible] ಪಾವತಿಮೊರೆಗೆ ಪ್ರೇಷಿಸಲು ಹಾಗೂ ಅದರಿಂದ ಪ್ರೇಷಿತವಾಗಿ ಧರೆಗೆ ಮರಳುವ ಸ್ಪಂದಗಳನ್ನು ಸಂಗ್ರಹಿಸಿ ಅರ್ಥವಿಸಲು ಗಣಕಗಳನ್ನೂ ಬಳ

ಗೊಂಡಂತೆ [illegible] ಉಂಟು. ಪಾವತಿಮೊರೆ [illegible] ಕೇಂದ್ರಗಳಿವೆ.

ಹೀಗೆ ಮನುಷ್ಯ ತನ್ನ [illegible] ಈ ನೆಲದಿಂದ [illegible] ಬಾಹ್ಯಾಕಾಶಕ್ಕೆ ತೆರಳಿ ಅಲ್ಲಿನ ಪರಿಸರವನ್ನು ಅನುಭವಿಸಿ ಮತ್ತೆ ಸ್ವಸ್ಥಾನಕ್ಕೆ ಸುಕ್ಷೇಮವಾಗಿ ಮರಳಬೇಕಾದರೆ ವಿವಿಧ ವಿಜ್ಞಾನ ಹಾಗೂ ತಂತ್ರವಿದ್ಯಾ ವಿಭಾಗಗಳು [illegible] ಅಭಿವರ್ಧಿಸಿರುವುದು ಮೊದಲ ಅಗತ್ಯ. ಇದಾದ ಬಳಿಕ ಅವನ್ನು ಸಂಯೋಜಿತವಾಗಿ ಬಳಸಿಕೊಂಡು [illegible] ಪ್ರಾಯೋಗಿಕ [illegible] ಕೂಡ ಅಷ್ಟೇ ಅಗತ್ಯ.

ಆಕಾಶಯುಗದ ಆವಾಹನೆ

ಪ್ರಪಂಚದ ಮೊತ್ತಮೊದಲ ಕೃತಕ ಉಪಗ್ರಹದ* [illegible] ಆಕಾಶಯುಗ [illegible]

* ನಕ್ಷತ್ರವನ್ನು ಪರಿಭ್ರಮಿಸುವ ಕಾಯ ಗ್ರಹ; ಗ್ರಹವನ್ನು ಪರಿಭ್ರಮಿಸುವ ಕಾಯ ಉಪಗ್ರಹ. ಆದ್ದರಿಂದ ಭೂಮಿ ಸೂರ್ಯನಕ್ಷತ್ರದ ಒಂದು ಗ್ರಹ; ಚಂದ್ರ ಭೂಗ್ರಹದ ಉಪಗ್ರಹ. ಉಪಗ್ರಹ ಮತ್ತು ಚಂದ್ರ ಪದಗಳನ್ನು ಪರ್ಯಾಯ ಪದಗಳಾಗಿ ಬಳಸುವುದುಂಟು. ಭೂಮಿ ಅಥವಾ ಬೇರೆ ಯಾವುದೇ ಆಕಾಶಕಾಯವನ್ನು ಪರಿಭ್ರಮಿಸಲು ಮನುಷ್ಯ ಉಡಾಯಿಸುವ ವಸ್ತು ಕೃತಕ ಉಪಗ್ರಹ (ಕೃತಕ ಚಂದ್ರ). ಸಂದರ್ಭ ಸ್ಪಷ್ಟವಾಗಿದ್ದಲ್ಲಿ ಕೃತಕ ಎಂಬ ವಿಶೇಷಣವನ್ನು ಬಿಡಬಹುದು [illegible]. ಆಕಾಶನೌಕೆ (ಸರಳವಾಗಿ ನೌಕೆ) ಎಂದರೆ ರಾಕೆಟ್ ವಾಹನದ ಶಿರದಲ್ಲಿ ಅಳವಡಿಸಿರುವ ಉಪಕರಣಸಂಪುಟ, ಮನುಷ್ಯವಸತಿಯ ಕೋಶ ಮುಂತಾದ ಪ್ರಯೋಗ ಸಲಕರಣೆಗಳು. ನೌಕೆಯನ್ನು ಹೊತ್ತ ರಾಕೆಟ್ ಸಾಗುವ ಹಾದಿಗೆ ಪಥ

ಪ್ರಪಂಚಕ್ಕೆ ಅವತರಿಸಿತು. ರಷ್ಯ ದೇಶದ ಸ್ಪುಟ್ನಿಕ್–೧ (ಸಹಪ್ರಯಾಣಿ ಎಂದು ಅರ್ಥ) ಆಕಾಶಯುಗವನ್ನು ಆರಂಭಿಸಿದ ಮನುಷ್ಯನಿಂದ. ೧೯೫೭ರ ಅಕ್ಟೋಬರ್ ೪ರಂದು ಗಗನಕ್ಕೆ ಏರಿದ ಈ ಕೃತಕ ಉಪಗ್ರಹ ಪ್ರತಿ ೯೬.೨ ನಿಮಿಷ ಗಳಿಗೆ ಒಮ್ಮೆ ಭೂಪರಿಭ್ರಮಣೆಯನ್ನು ಮುಗಿಸುತ್ತಿತ್ತು. ಭೂಮಿಗೆ ಅತಿ ಸಮೀಪ ವಾದಾಗ ಇದರ ದೂರ ೨೨೮ ಕಿಮೀ. ಅತಿ ದೂರವಾದಾಗ ೯೪೭ ಕಿಮೀ. ಇದರ ಬೀಪ್ ಬೀಪ್ 'ಸುಮಧುರ ನಾದ'ವನ್ನು ಆ ದಿನಗಳಂದು ತನ್ನ ರೇಡಿಯೊ ಮೂಲಕ ಆಲಿಸಿದ ಪ್ರತಿಯೊಬ್ಬ ಸಾಮಾನ್ಯ ವ್ಯಕ್ತಿಯೂ. ಆ ಪ್ರಪಂಚದ ಯಾವ ಮೂಲೆಯಲ್ಲಿಯೇ ಇರಲಿ. ಸಾಕ್ಷಾತ್ ತನ್ನ ಗುಂಡಿಗೆ ಮಿಡಿತವನ್ನೇ ಆ ಆಲಿಸಿದ ಕೇಳಿದಂತೆ ಭಾವಿಸಿ ಪುಳಕಾನ್ವಿತನಾಗಿದ್ದ. ನಿಜಕ್ಕೂ ಅದು ಮಾನವಜನಾಂಗದ ಹಿರಿ ಹೆಜ್ಜೆಯೇ ಸೈ.

ಅಮೆರಿಕ ಪ್ರಯತ್ನಕ್ಕೆ ಕಾಲಿಟ್ಟದ್ದು ಕೊಂಚ ತಡವಾಗಿ. ಆದರೆ ಅದು "ಇಟ್ಟ ಒಂದೊಂದು ಹೆಜ್ಜೆಯೂ ಸಿಂಹದಾ ಗುರುತು" ಆಗಿತ್ತು. ೧೯೫೮ ರ ಫೆಬ್ರುವರಿ ೧ರಂದು ಆ ರಾಷ್ಟ್ರದ ಪ್ರಥಮ ಉಪಗ್ರಹ ಎಕ್ಸ್‌ಪ್ಲೋರರ್—೧ ಭೂಮಿಯನ್ನು ಪರಿಭ್ರಮಿಸುವ ಇನ್ನೊಂದು ಚಂದ್ರ ಆಯಿತು. ಅದಕ್ಕೆ ಮೊದಲೇ ರಷ್ಯದ ಲೈಕಾ ಎಂಬ ಹೆಸರಿನ ನಾಯಿ ಮೊದಲ ಆಕಾಶಜೀವಿಯಾಗಿ ಅಲ್ಲಿಯೇ ಗೋರಿ ಕಂಡಿತ್ತು.

"[illegible] ಹಾರಿ ಯಾವುದಾದರೂ [illegible]" ಎಂಬ [illegible] ಮೊದಲ ಸಂಭಾವ್ಯ ಗುರಿ ಚಂದ್ರ. ಆಕಾಶ ದಲ್ಲಿ ಚಂದ್ರ, [illegible] ಭೂಮಿ–ಚಂದ್ರರ ಸರಾಸರಿ ಅಂತರ ೩,೮೪,೪೦೩ ಕಿಮೀ. ಪ್ರಪಂಚದ ಎರಡು ಪ್ರಬಲ ರಾಷ್ಟ್ರಗಳು ಚಂದ್ರಾನ್ವೇಷಣೆಗಾಗಿ ನೌಕೆಗಳನ್ನು ಉಡಾಯಿ ಸಲು ಉದ್ಯುಕ್ತವಾದುವು. ರಷ್ಯದ ಲ್ಯೂನಾ–೨ ಸುಮಾರು ೩೩.೫ ಗಂಟೆಗಳನ್ನು ತೆಗೆದು ಕೊಂಡು ಪಯಣಿಸಿ ಚಂದ್ರನ ಮೇಲೆ ಬಿದ್ದು ನಾಶವಾಯಿತು (೧೩–೯–೧೯೫೯). ಇದರ ಯಾವುದೇ ಆಕಾಶಕಾಯವನ್ನು ಮೊಟ್ಟಮೊದ ಲಿಗೆ ಸ್ಪರ್ಶಿಸಿದ ಮನುಷ್ಯನಿರ್ಮಿತ ಇದೇ. ರಷ್ಯದ ಯೂರಿ ಗಗಾರಿನ್‌ಅವರಿಗೆ ಪ್ರಥಮ ಆಕಾಶಪುರುಷ (೧೨–೪–೧೯೬೧) ಮತ್ತು ಅದೇ ರಾಷ್ಟ್ರದ ವಾಲೆಂಟಿನಾ ತೆರೆಶ್ಕೋವಾ ಅವ ರಿಗೆ ಪ್ರಥಮ ಆಕಾಶಮಹಿಳೆ (೧೬–೬–೧೯೬೩) ಎಂಬ ಗೌರವಗಳು ಸಲ್ಲುತ್ತವೆ. ಮನುಷ್ಯ ಆ ತನಕ ಎಂದೂ ಅರಿಯದಿದ್ದಂಥ ಭಿನ್ನ ಪರಿ ಸರಕ್ಕೆ ಗಂಟೆಗೆ ೪೦,೦೦೦ ಕಿಮೀಗಿಂತಲೂ ಹೆಚ್ಚಿನ ವೇಗದಲ್ಲಿ ಹೋಗಿ ಅಲ್ಲಿ ಸಾಕಷ್ಟು ಕಾಲ ಏಕಾಂಗಿ ಆಗಿದ್ದು ವಿವಿಧ ಪ್ರಯೋಗ ಗಳಲ್ಲಿ ಭಾಗವಹಿಸಿ ಆರೋಗ್ಯ ಧೃತಿ ಕೆಡದೆ ಧರೆಗೆ ಸುರಕ್ಷಿತವಾಗಿ ಮರಳಬಲ್ಲ ಎಂಬುದಾಗಿ ಈ ಪ್ರಾಯೋಗಿಕ ಹಾರಾಟಗಳು ತೋರಿಸಿಕೊಟ್ಟವು.

ರಷ್ಯದ ಲ್ಯೂನಾ–೯ ವಾಯುರಹಿತ ಚಂದ್ರನ ಮೇಲೆ ಕೇವಲ ದೂರನಿಯಂತ್ರಣದ ಮೂಲಕ ಮೆತ್ತಗೆ ಇಳಿದು (೩೧–೧–೧೯೬೬) ಜಟಿಲ ತಂತ್ರವಿದ್ಯೆಯಲ್ಲಿ ಮನುಷ್ಯ ಸಾಧಿಸಿದ ಹಿರಿಮೆಗೆ ಸಾಕ್ಷಿಯಾಯಿತು. ಇನ್ನು ಉಳಿ ದದ್ದೇನು? ಖುದ್ದು ಮನುಷ್ಯನನ್ನು ಚಂದ್ರನ ಮೇಲೆ ಇಳಿಸುವುದು ಮತ್ತು ಹಿಂದಕ್ಕೆ ಕರೆಸಿ ಕೊಳ್ಳುವುದು. ಈ ದಿಶೆಯಲ್ಲಿ ಸಿಂಹ ವಿಕ್ರಮ ಸಾಧಿಸಿದ್ದು ಅಮೇರಿಕ. ಈಗ ಇತಿಹಾಸದ ಹಿರಿ ದಾಖಲೆಗಳ ಸಾಲಿಗೆ [illegible] "ಮಾನವ ಚಂದ್ರನ ಮೇಲೆ" [illegible] ಕ್ಕೆ ಹೊಸ ಆಯಾಮ ನೀಡಿದ: "ಇದು ಒಬ್ಬ ಮನುಷ್ಯನಿಗೆ ಬಲು ಪುಟ್ಟ ಹೆಜ್ಜೆ. ಆದರೆ ಮಾನವಜನಾಂಗಕ್ಕೆ ಹನುಮಂತ ನೆಗೆತ" ಎಂಬುದಾಗಿ ಚಂದ್ರನ ಮೇಲೆ ೧೯೬೯ ಜುಲೈ ೨೧ರಂದು ಹೆಜ್ಜೆ ಊರಿದ ನೀಲ್ 'ಆರ್ಮ್‌ಸ್ಟ್ರಾಂಗ್

ನೆಂದೂ ನೌಕೆ ಇತರ ಕಾಯದನ್ನು ಪರಿಭ್ರಮಿಸು ವಾಗ— ಆಗ ನೌಕೆಯನ್ನು ಉಪಗ್ರಹ ಎನ್ನು ತ್ತೇವೆ— ತೆರಳುವ ದಾರಿಗೆ ಕಕ್ಷೆಯೆಂದೂ ಹೆಸರು. ಒಂದು ಕಾಯ ಇನ್ನೊಂದು ಕಾಯದ ಸುತ್ತ— ಉದಾಹರಣೆಗೆ ಭೂಮಿ ಸೂರ್ಯನ ಸುತ್ತ — ತಿರ ಗುವ ಚಲನೆಯನ್ನು ಪರಿಭ್ರಮಣೆ ಎಂದೂ ಯಾವುದೇ ಕಾಯ ತನ್ನ ಸುತ್ತ — ಉದಾಹರಣೆಗೆ ಭೂಮಿ ಸ್ವಂತಾಕ್ಷದ ಮೇಲೆ— ಗಿರಕಿಸುವ ಚಲನೆ ಯನ್ನು ಆವರ್ತನೆ ಎಂದೂ ಹೇಳುವೆವು.

ಸ್ಟ್ಯಾಂಗ್ (ಮತ್ತು ಅವರ ಸಂಗಾತಿ ಎಡ್ವಿನ್ ಆಲ್ಡ್ರಿನ್) ಅರ್ಥಪೂರ್ಣವಾಗಿ ಉದ್ಗರಿಸಿದರು. ನಿಜಕ್ಕೂ ಅದು ಮನುಕುಲದ ಆಕಾಶ ವಿಜಯವೇ ಆಗಿತ್ತು.

ಇಂದು

ಇಂದಿನ ಪರಿಸ್ಥಿತಿ

೧೯೫೭ರಿಂದ ೧೯೭೮ರ ತನಕದ ಇಪ್ಪತ್ತೊಂದು ವರ್ಷಗಳಲ್ಲಿ ಆಕಾಶಯುಗ ಪ್ರೌಢಾವಸ್ಥೆಗೆ ಏರಿದೆ ಎಂಬುದಾಗಿ ಮನುಷ್ಯನ ಬೆಳವಣಿಗೆಯ ಮಾಪಕವನ್ನು ಹಿನ್ನೆಲೆಯಲ್ಲಿ ಇರಿಸಿಕೊಂಡು ತೀರ್ಮಾನಿಸಿದರೆ ಆಕಾಶ ಗಹಗಹಿಸಿ ನಕ್ಕೀತು. ನಮ್ಮ ಸಾಧನೆಯನ್ನು ವಸ್ತುನಿಷ್ಠವಾಗಿ ನೋಡಬಲ್ಲ ಒಬ್ಬ ವಿಶ್ವವೀಕ್ಷಕನನ್ನು ಸೌರವ್ಯೂಹದಿಂದ ಹೊರಗಿನ ಒಂದು ತಾಣದಲ್ಲಿ ನೆಲೆಗೊಳಿಸಿದ್ದೇವೆ ಎಂದು ಭಾವಿಸೋಣ. ಅವನ ದಫ್ತರದಿಂದ ಈ ಮುಂದಿನ ಕೆಲವು ಮುಖ್ಯ ಟಿಪ್ಪಣಿಗಳನ್ನು ಉದ್ಧರಿಸುವುದು ಸಾಧ್ಯವಿದೆ.

* ಸುಮಾರು ೫೦೦ ಕೋಟಿ ವರ್ಷಗಳ ಹಿಂದೆ. ಅಂತರನಾಕ್ಷತ್ರಿಕ ಅನಿಲ ಹಾಗೂ ಧೂಳು ಸಂಚಯನಗೊಂಡು ಭೂಮಿ ಮೈದಳೆಯುತ್ತದೆ.
* ಸುಮಾರು ೪೧೫ ಕೋಟಿ ವರ್ಷಗಳು ಉರುಳುತ್ತವೆ. ಅಂದರೆ ಸುಮಾರು ೧೫೦ ಕೋಟಿ ವರ್ಷಗಳ ಹಿಂದೆ ಕಾದು ಕೆಂಪಾಗಿದ್ದ ಭೂಮಿ ಹಲವು ಬಗೆಯ ಭೌತ ಪರಿಣಾಮಗಳಿಗೆ ಈಡಾಗಿ ಕ್ರಮೇಣ ತಣಿದು ಅದರ ಮೇಲೆ ಮಳೆ ಸುರಿದು ಕಡಲುಗಳು ಉಂಟಾಗುತ್ತವೆ. ಮೋಡ ಗಾಳಿ ಮಳೆ ಕಡಲು ಮೊದಲಾದ ಈ ಚಕ್ರ ಉರುಳುತ್ತ ಭೂಮಿಯ ಮೇಲೆ ಹೊಸ ಚಿತ್ರಗಳನ್ನು ಬಿಡಿಸುತ್ತದೆ. ಅಂತಿಮ ಘಟ್ಟದಲ್ಲಿ ಭೂಮಿ [illegible] ಜೀವಿಗಳು ಮೈದಳೆಯುತ್ತವೆ.
* ಸುಮಾರು ೧೪೫.೯ ಕೋಟಿ ವರ್ಷಗಳು ಸಂದಾಗ ಅಂದರೆ ಸುಮಾರು ಹತ್ತು ಲಕ್ಷ ವರ್ಷಗಳ ಹಿಂದೆ ಇತರ ಎಲ್ಲ ಪ್ರಾಣಿಗಳಿಗಿಂತ ಬೇರೆ ಆದ ದ್ವಿಪಾದಿ ಮನುಷ್ಯನ ಅವತಾರವಾಗುತ್ತದೆ.
* ಸುಮಾರು ೯.೯೯.೯೮೦ ವರ್ಷಗಳು ಉರುಳುತ್ತವೆ, ಅಂದರೆ ಸುಮಾರು ಇಪ್ಪತ್ತು ವರ್ಷಗಳ ಹಿಂದೆ. ಚೆನ್ನಾಗಿ ಒಣಗಿದ ಹರಳುಕಾಯಿ ಬಿಸಿಲಿನಿಂದ ಕಾದು ಬಿರಿದಾಗ ಅದರಿಂದ ಬೀಜಗಳು ಚಟಪಟನೆ ನಾಲ್ದೆಸೆಗೆ ರಟ್ಟುವಂತೆ ಭೂಮಿಯಿಂದ ಪುಟ್ಟ ಕಣಗಳು ಸೌರವ್ಯೂಹದ ವಿವಿಧ ಪ್ರದೇಶಗಳಿಗೆ ಹಾರತೊಡಗುತ್ತವೆ. ಇದೊಂದು ಹುಡುಗಾಟ. ವಿಶ್ವದ, ಏಕೆ ಸೌರವ್ಯೂಹದ ಅನಂತಾಂಶವನ್ನು ಕೂಡ ಈ ಕಣಗಳು ಅರಸಲಾರವು.

ಅದರಿಂದ ಮೇರೆ ಇರದ ಕಾಲದಲ್ಲಿ ಸೀಮೆ ಇರದ ದೇಶದಲ್ಲಿ ನಾವು ಸಾಧಿಸಿರುವ ಪ್ರಗತಿ, ನಮ್ಮ ದೃಷ್ಟಿಯಿಂದ ಎಷ್ಟೇ ಹಿರಿದಾಗಿದ್ದರೂ ಆಕಾಶಾನ್ವೇಷಣೆಯಲ್ಲಿ ಇನ್ನೂ ಮೊದಲ ಹೆಜ್ಜೆ ಕೂಡ ಅಲ್ಲ ಎನ್ನುವುದನ್ನು ಮರೆಯಬಾರದು. ಕೇವಲ ನಮ್ಮ ದೃಷ್ಟಿಯಿಂದ ಮಾತ್ರ ಪರಿಶೀಲಿಸಿದ್ದಾದರೆ ಈ ಅಲ್ಪಕಾಲೀನ ಸಾಧನೆ ಏನೂ ಅಲ್ಪವಾದದ್ದಲ್ಲ. ಈ ಅವಧಿಯಲ್ಲಿ ನಮಗೆ ಲಭಿಸಿರುವ ವಿಜ್ಞಾನ ಗತ ಶತಮಾನಗಳಲ್ಲಿ ಸಂಗ್ರಹಿತವಾದ ಜ್ಞಾನಕ್ಕಿಂತ ಎಷ್ಟೋ ಪಟ್ಟು ಜಾಸ್ತಿ. ಕಾರಣ, ಆಗ ಮನುಷ್ಯ ಭೂಮಿಬಂಧಿತನಾಗಿ ವಾಯುಮಂಡಲದ ದಪ್ಪ ಗಾಜು ಬಳಿಚಿಟ್ಟ ಸೀಮಿತ ವಿಕಿರಣಗಳನ್ನು ಮಾತ್ರ ತನ್ನ ಮುರುಕು ಸಲಕರಣೆಗಳ ಮೂಲಕ ಸಂಗ್ರಹಿಸಿ ವಿಶ್ಲೇಷಿಸಿ ಅರ್ಥವಿಸುತ್ತಿದ್ದ. ಈಗಲಾದರೋ ಅವನ ಅನ್ವೇಷಣೆಯ ಹಕ್ಕಿ ಹಾರಿ "ಮುಟ್ಟಿದೆ ವಿಜ್ಞಂಡಲಗಳ ಅಂಚ, ಆಚೆಗೆ ಚಾಚಿದೆ ತನ್ನಯ ಚುಂಚ. ಬ್ರಹ್ಮಾಂಡಗಳನು ಒಡೆಯಲು ಹಿಂದೋ, ಮುಂದೂ ಮಾಡಿದೆ ಹೊಂಚ!"

ರಟ್ಟುಗಳಿಕೆಗಳು

ಆಕಾಶಯುಗದಲ್ಲಿ ಪ್ರಧಾನ ಲಕ್ಷ್ಯ ಇರುವುದು

ಸಹಜವಾಗಿ ಆಕಾಶಯಾನ, ಗ್ರಹಶೋಧ, ವಿಶ್ವ ವಿಸ್ಮಯಗಳ ಅನ್ವೇಷಣೆ ಮುಂತಾದವುಗಳತ್ತ. ಆದರೆ ಇವನ್ನು ಸಾಧಿಸುವ ಹಾದಿಯಲ್ಲಿ ಬಗೆ ಬಗೆಯ ಉಪೋತ್ಪನ್ನಗಳು ಲಭಿಸುವುವು – ಕ್ಷೀರ ಸಾಗರಮಥನದ ಉದ್ದೇಶ ಅಮೃತವನ್ನು ಪಡೆಯುವುದಾದರೂ ಮಥನಲಾಭಗಳಾಗಿ ಐರಾವತ ಉಚ್ಚೈಃಶ್ರವಸ್ಸು ಮೊದಲಾದವುಗಳ ಗಳಿಕೆ ಆದಂತೆ. ಆಕಾಶಸಾಹಸಕ್ಕೆ ಹೂಡಿದ ಬಂಡವಾಳದ ಮೇಲೆ ಸಿಕ್ಕುವ ಬೋನಸ್ ಇವು. ಇವುಗಳಿಗೆ ರತ್ನಗಳಿಕೆಗಳು (ಸ್ಪಿನ್‌ಆಫ್ ಬೆನಿಫಿಟ್ಸ್) ಎಂದು ಹೆಸರು. ಕೆಲವು ಮುಖ್ಯ ರತ್ನಗಳಿಕೆಗಳನ್ನು ಇಲ್ಲಿ ನಿರೂಪಿಸಿದೆ.

ಭೂಸಂಪನ್ಮೂಲಗಳ ಶೋಧನೆ. ಉಪಗ್ರಹ ಭೂಮಿಯನ್ನು ಕ್ಷಿಪ್ರವಾಗಿ ಎತ್ತರದಲ್ಲಿ ಪರಿಭ್ರಮಿಸುವುದರಿಂದ ಅದಕ್ಕೆ ಯುಕ್ತವಾಗಿ ಅಳವಡಿಸಿದ ಕೆಮರಾದ ನೆರವಿನಿಂದ ಸಮಗ್ರ ಭೂಮಿಯ ಆಕಾಶಚಿತ್ರಣವನ್ನು ಪಡೆಯುವುದು ಸುಲಭ. ಈ ಸರ್ವೇಕ್ಷಣ ಚಿತ್ರದ ಅಧ್ಯಯನದಿಂದ ನಮ್ಮ ನೆಲ ಜಲ ಸಂಪತ್ತನ್ನು ವೈಜ್ಞಾನಿಕವಾಗಿ ಅನ್ವೇಷಿಸಿ ಕ್ರಮಬದ್ಧವಾಗಿ ಬಳಸಬಹುದು. ನೂತನ ತೈಲಾಕರಗಳನ್ನು ಪತ್ತೆ ಹಚ್ಚಿ ಪ್ರಪಂಚದ ಏರುತ್ತಿರುವ ತೈಲ ದಾಹವನ್ನು ಶಮನಗೊಳಿಸಬಹುದು. ಸುಂಟರ ಗಾಳಿ ಚಂಡಮಾರುತ ಇತ್ಯಾದಿ ಉತ್ಪಾತಕಾರಕ ಪ್ರಕೃತಿಬಲಗಳ ಉಗಮ ತೀವ್ರತೆ ಸಂಚಾರ ಪಥ ಮೊದಲಾದವನ್ನು ಗಮನಿಸಿ ಜನರಿಗೆ ಮುನ್ನೆಚ್ಚರಿಕೆ ನೀಡಿ ಯೋಗ್ಯ ರಕ್ಷಣೋಪಾಯಗಳನ್ನು ಕೈಗೊಳ್ಳುವಂತೆ ಮಾಡಿ ಅಪಾರ ಜನ ಧನ ನಷ್ಟವನ್ನು ತಪ್ಪಿಸಬಹುದು. ಅದೇ ರೀತಿ ಪ್ರವಾಹ ಕಾಳ್ಗಿಚ್ಚು, ಮರುಭೂಮಿಯ ಮಿಡತೆಗಳ ದಂಡು ಮುಂತಾದವುಗಳಿಂದ ಒದಗುವ ಗಾಸಿಯನ್ನು ಬಲು ಮಟ್ಟಿಗೆ ಕಡಿಮೆ ಮಾಡಬಹುದು. ಮನುಷ್ಯನ ಸಂವೇದನಾಂಗವಾಗಿ ಆ ಎತ್ತರದಲ್ಲಿ ಗಸ್ತು ತಿರುಗುತ್ತಿರುವ ಉಪಗ್ರಹ ಹೀಗೆ ಆತನಿಗೆ ಬಹೂಪಯುಕ್ತ ಸೇವೆ ಸಲ್ಲಿಸಬಲ್ಲದು.

ಸಂಪರ್ಕ ಸಾಧನ. ನಾಗರಿಕ ಜೀವನದ ಒಂದು ಮುಖ್ಯ ಅವಶ್ಯಕತೆ ಎಂದರೆ ಕ್ಷಿಪ್ರ ಜ್ಞಾನಪ್ರಸಾರ. ಪ್ರಪಂಚದ ಯಾವುದೇ ಮೂಲೆಯಿಂದ ಬೇರೆ ಯಾವುದೇ ಮೂಲೆಗೆ ಬೆಳಕಿನ ವೇಗದಿಂದ ಸುದ್ದಿ ಹಾಗೂ ಚಿತ್ರಗಳನ್ನು ಪ್ರೇಷಿಸಲು ಸಂಪರ್ಕೋಪಗ್ರಹಗಳು ನೆರವಾಗುತ್ತವೆ. ದೂರದರ್ಶನ ರೇಡಿಯೊ ಹಾಗೂ ದೂರವಾಣಿ ಸಂಪರ್ಕಮಾಧ್ಯಮಗಳಲ್ಲಿ ಸಂಪರ್ಕೋಪಗ್ರಹಗಳು ನವಕ್ರಾಂತಿಯನ್ನೇ ಪ್ರವರ್ತಿಸಿ ಪ್ರಪಂಚದ ಅಖಂಡತೆಗೆ ಹೊಸ ಅರ್ಥ ನೀಡಿವೆ. ಭಾರತದ ಅತಿ ದುರ್ಗಮ ಪ್ರದೇಶಗಳ ತೀರ ಹಿಂದುಳಿದ ಜನರೂ ಸಂಪರ್ಕೋಪಗ್ರಹದ ಮೂಲಕ ದೂರದರ್ಶನ ಚಿತ್ರಗಳನ್ನು ನೋಡಿ ತಮ್ಮ ಜೀವನ ಮತ್ತು ವ್ಯವಸಾಯಗಳಲ್ಲಿ ವೈಜ್ಞಾನಿಕ ವಿಧಾನಗಳನ್ನು ಹೊಂದಿಸಿಕೊಳ್ಳುವುದು ಸಾಧ್ಯವಾಗಿದೆ. ಗಗನದ ಈ ವಿಜ್ಞಾನ ದೂತ ನಿಜವಾಗಿಯೂ ಬೃಹಸ್ಪತಿಯ ಅವತಾರವೇ.

ಬಾನ್‌ಕಮ್ಮಟ. ಭೂಮಿಗಿಂತ ತೀರ ಭಿನ್ನವಾದ ಪರಿಸರದಲ್ಲಿ ವಿಜ್ಞಾನದ ವಿವಿಧ ಪ್ರಯೋಗಗಳನ್ನು ಮಾಡಲು ಬಾನ್‌ಕಮ್ಮಟಗಳನ್ನು (ಸ್ಕೈಲ್ಯಾಬ್ಸ್) ಕಕ್ಷೆಗೆ ಹೂಡಲಾಗಿದೆ. ಆ ಎತ್ತರದಲ್ಲಿ ವಾಯುಮಂಡಲವಿಲ್ಲ. ಆದ್ದರಿಂದ ಭೂಮಿಯಲ್ಲಿ ಲಭ್ಯವಿಲ್ಲದ ನಿರ್ವಾತ ಪ್ರದೇಶ ಅಲ್ಲಿ ವಿಜ್ಞಾನಿಗೆ ಸುಲಭವಾಗಿ ಲಭಿಸುತ್ತದೆ. ಭೂಗುರುತ್ವಬಲದ ತೀವ್ರತೆ ಅಲ್ಲಿ ಬಲು ಕಡಿಮೆ. ಅಂದರೆ ಬಾನ್‌ಕಮ್ಮಟದ ಒಳಗೆ ವಸ್ತುಗಳು ಹಗುರಾಗುವವು. ನಿರ್ದಿಷ್ಟವಾದ ಒಂದು ಎತ್ತರದಲ್ಲಿ ಅವು ತೂಕವಿಲ್ಲದವೇ ಆಗಿಬಿಡುವವು. ನುರಿತ ವಿಜ್ಞಾನಿಗಳು ಬಾನ್‌ಕಮ್ಮಟಗಳ ಒಳಗೆ ಯುಕ್ತ ಆಕಾಶಪೋಷಾಕುಗಳಿಂದ ಸಜ್ಜಾಗಿ ಕುಳಿತು ತಮ್ಮ ಮೇಲೂ ಇತರ ಜೀವಿಗಳ ಮೇಲೂ ತೂಕರಾಹಿತ್ಯ ಅತಿವೇಗ ಏಕಾಂತತೆ ಮುಂತಾದವುಗಳಿಂದ ಆಗುವ ಪರಿಣಾಮಗಳನ್ನು ಗಮನಿಸುತ್ತಾರೆ. ೧೯೭೩ರಲ್ಲಿ ಅಮೆರಿಕದ ವಿಲಿಯಮ್ ಪೋಗ್, ಗೆರಾಲ್ಡ್ ಕಾರ್ ಮತ್ತು ಎಡ್ವರ್ಡ್ ಗಿಬನ್ ಎಂಬ ಮೂವರು ಖೇಚರರು ನೆಲದಿಂದ ಪ್ರತ್ಯೇಕ ನೌಕೆಯಲ್ಲಿ ಗಗನಕ್ಕೆ ನೆಗೆದು ಆ ಮೊದಲೇ ೪೩೦ ಕಿಮೀ ಎತ್ತರದಲ್ಲಿ ಕಕ್ಷೆಗೆ ತೂರಲಾಗಿದ್ದ ಬಾನ್‌ಕಮ್ಮಟವನ್ನು ಹಿಂಬಾಲಿಸಿ ಅದರ ಬೆನ್ನ

ಹಿಡಿದು ಒಳಕ್ಕೆ ಎಚ್ಚರಿಕೆಯಿಂದ ಪ್ರವೇಶಿಸಿದರು. ಉಡಾವಣೆಯ ವೇಳೆ ಬಾನ್‌ಕಮ್ಮಟಕ್ಕೆ ಸ್ವಲ್ಪ ಗಾಸಿ ಆಗಿತ್ತು. ಅದನ್ನು ದುರಸ್ತಿ ಮಾಡಿ ಈ ಖೇಚರರು ಎಂಬತ್ತನಾಲ್ಕು ದಿವಸಗಳ ಕಾಲ ಅದರೊಳಗೆ ಸುಖವಾಗಿ ಇದ್ದರು. ವಿವಿಧ ನಿಯೋಜಿತ ಪ್ರಯೋಗಗಳಲ್ಲಿ ಉತ್ಸಾಹದಿಂದ ಭಾಗಿಗಳಾಗಿ ಮನುಷ್ಯದೇಹ ಹಾಗೂ ಮನಸ್ಸು ಆಕಾಶದ ಪ್ರತಿಕೂಲ ಸನ್ನಿವೇಶದಲ್ಲಿಯೂ ಸುಟಿಯಾಗಿ ವರ್ತಿಸಬಲ್ಲವು ಎಂದು ಇದರಿಂದ ಸಿದ್ಧವಾಯಿತು. ನಕ್ಷತ್ರಲೋಕಗಳ ಬಗ್ಗೆ ಭೂತಳದಿಂದ ಎಂದೂ ದೊರೆಯದ ಹೊಸ ಮಾಹಿತಿಗಳನ್ನು ಅವರು ವಾಯುರಹಿತವಾದ ಆ ನೆಲೆಯಿಂದ ಸಂಗ್ರಹಿಸಿದರು. ಅಮೆರಿಕದ ಖೇಚರರ ಎಂಬತ್ತನಾಲ್ಕು ದಿವಸಗಳ ನಿರಂತರ ಆಕಾಶವಾಸದ ಈ ದಾಖಲೆಯನ್ನು ರಷ್ಯದ ಖೇಚರರಾದ ಯೂರಿ ರೊಮಾನೆಂಕೊ ಮತ್ತು ಜಾರ್ಜಿ ಗ್ರೆಜ್ಕೊ ತೀರ ಈಚೆಗೆ ಮುರಿದಿದ್ದಾರೆ. ೧೯೭೭ ಡಿಸೆಂಬರ್ ೧೧ರಂದು ಸಲ್ಯೂತ್–೬ರಲ್ಲಿ ಕುಳಿತು ಭೂಪರಿಭ್ರಮಣೆಯಲ್ಲಿ ನಿರತರಾದ ಅವರು ೧೯೭೮ರ ಮಾರ್ಚ್ ೧೬ರಂದು ಭೂಮಿಗೆ ಮರಳಿದರು.

ಆಕಾಶ ಲಾಳಿ. ನೆಲದಿಂದ ಮೇಲೆ ಜಿಗಿದು ಗಗನವಿಹಾರಿಗಳಾಗಲು ಆಸಕ್ತರಾದ ಸಾಹಸಪ್ರಿಯರಿಗೆ ಉಪಗ್ರಹಗಳು ಹೊಸ ಅವಕಾಶಗಳನ್ನು ಒದಗಿಸಲಿವೆ. ಜನಸಹಿತವಾದ ಬಾನ್‌ಕಮ್ಮಟಗಳೂ ವಿಹಾರಧಾಮಗಳೂ ಹೆಚ್ಚು ಹೆಚ್ಚು ಬಳಕೆಗೆ ಬರುತ್ತಿದ್ದಂತೆ – ಸದ್ಯಕ್ಕೆ ಬಾನ್‌ಕಮ್ಮಟಗಳು ಪ್ರಯೋಗಾರ್ಥವಾಗಿ ಮಾತ್ರ ಕಕ್ಷೆಸುತ್ತಿವೆ ಅಷ್ಟೆ – ಅವುಗಳಿಗೂ ಭೂಮಿಗೂ ನಡುವೆ ಭೌತಸಂಪರ್ಕ ಏರ್ಪಡಿಸುವುದು ಅವಶ್ಯವಾಗುತ್ತದೆ. ಪ್ರತಿ ಸಲವೂ ಹೊಸತೊಂದು ಕಮ್ಮಟವನ್ನು ಕಕ್ಷೆಗೆ ಹೂಡಿ ಮತ್ತೆ ಅದನ್ನು ಒಂದಕ್ಕೆ ತರಿಸುವುದು ಅತಿ ದುಬಾರಿಯ ಪ್ರಯೋಗವಾಗುತ್ತದೆ. ಹೀಗಾಗಿ ನೆಲಕ್ಕೂ ಕಮ್ಮಟಕ್ಕೂ ನಡುವೆ ಸಲೀಸಾಗಿ ಅಡ್ಡಾಡುವ ಹೊಸ ನಮೂನೆಯ ಆಕಾಶವಾಹನಗಳನ್ನು ಯೋಜಿಸಿ ತಯಾರಿಸಲಾಗಿದೆ. ಇವುಗಳಿಗೆ ಆಕಾಶ ಲಾಳಿಗಳು (ಸ್ಪೇಸ್ ಶಟಲ್ಸ್) ಎಂದು ಹೆಸರು. (ಬಟ್ಟೆ ನೇಯ್ಗೆಯಲ್ಲಿ ಹಾಸು ಎಳೆಗಳ ನಡುವೆ ಹೊಕ್ಕು ಎಳೆಗಳನ್ನು ಚಾಕಚಕ್ಯದಿಂದ ಹಾಯಿಸಿ ಬಟ್ಟೆಯನ್ನು ರೂಪುಗೊಳಿಸುವ ಅತಿ ಚುರುಕಿನ ಸಲಕರಣೆಯೇ ಲಾಳಿ). ಆಕಾಶ ಲಾಳಿಯ ಪ್ರಯೋಗಿಕ ಹಾರಾಟ ೧೯೭೭ರಲ್ಲಿ ಪ್ರಾರಂಭವಾಯಿತು. ಇದು ಆಕಾಶನೌಕೆಯೂ ಹೌದು, ವಿಮಾನವೂ ಹೌದು: ಮೇಲಕ್ಕೆ ನೆಗೆಯುವಾಗ ರಾಕೆಟ್‌ನ ನೆರವಿನಿಂದ ಇದನ್ನು ಪ್ರವರ್ತಿಸುತ್ತದೆ: ಹಿಂದಕ್ಕೆ ಮರಳುವಾಗ ಇದು ವಿಮಾನದಂತೆ ಚಲಿಸಿ ನಿಲ್ದಾಣದ ನಿಶ್ಚಿತ ಓಡುದಾರಿಯ ಮೇಲೆ ಮೆಲ್ಲಗೆ, ಹಗುರವಾಗಿ ಇಳಿದು ತಂಗುತ್ತದೆ.

ಮುಂದೇನು ?

ಮನುಷ್ಯನ ಏರಿಕೆಗೆ ಎವರೆಸ್ಟ್ ಶಿಖರವೇ ಮಿತಿ ಆಗಿದ್ದ ಕಾಲವೊಂದಿತ್ತು. ಪ್ರಸಕ್ತ ಶತಮಾನದ ಪೂರ್ವಾರ್ಧದಲ್ಲಿ ವಿಮಾನಯುಗ ಆರಂಭವಾದೊಡನೆ ಆ ಮಿತಿ ಹತ್ತು ಪಟ್ಟು ಮೇಲಕ್ಕೆ ಜಿಗಿಯಿತು. ಉತ್ತರಾರ್ಧದ ಆಕಾಶಯುಗ ಆರಂಭವಾದಾಗ ಅದು ಊಹಾತೀತ ಔನ್ನತ್ಯಕ್ಕೆ ವಿಸ್ತರಿಸಿಬಿಟ್ಟಿತು. ಸದ್ಯ ಮನುಷ್ಯ ಚಂದ್ರನಿಂದ ಆಚೆಗೆ ಹೋಗಿಲ್ಲ. ಆದರೆ ಅವನು ತೇಲಿಬಿಟ್ಟಿರುವ ಆಕಾಶನೌಕೆಗಳು ಗುರುಗ್ರಹದ ಸರಹದ್ದನ್ನು ದಾಟಿ ಶನಿಸಾಮ್ರಾಜ್ಯದತ್ತ ಹೋಗುತ್ತಿವೆ. (ಸೂರ್ಯ–ಭೂಮಿ ಸರಾಸರಿ ಅಂತರ ೧೪,೯೬,೦೦,೦೦೦ ಕಿಮೀ; ಸೂರ್ಯ–ಗುರು ಅಂತರ ಇದರ ೫.೨೦೨೮ ಪಟ್ಟು, ಸೂರ್ಯ–ಶನಿ ಅಂತರ ೯.೫೫೪೭ ಪಟ್ಟು ಹಿರಿದಾಗಿವೆ.)

ಮನುಷ್ಯ ಆಕಾಶದಲ್ಲಿ ಎಷ್ಟು ದೂರದವರೆಗೆ ಹೋಗಿ ಎಷ್ಟು ದೀರ್ಘಕಾಲ ಇದ್ದು ಭೂಮಿಗೆ ಮರಳುವುದು ಸಾಧ್ಯವೇ? ಭೂಮಿಯ ಹೊರಗಿನ ಮನುಷ್ಯ ಅನ್ಯ ಗ್ರಹೋಪಗ್ರಹಗಳ ಅತಿ ಪ್ರತಿಕೂಲ ಪರಿಸರಗಳಲ್ಲಿ ಬಾಳುವುದು ಹೇಗೆ? ಇಂಥ ಆಕಾಶಪ್ರಶ್ನೆಗಳು ಇಂದು ವಿಜ್ಞಾನಕಥಾಸಾಹಿತ್ಯದ ಅನಂತ ಆಯಾಮದಿಂದ ತಂತ್ರವಿದ್ಯೆಯ ಸಾಂತಸೀಮೆಗೆ ಇಳಿದಿವೆ.

೪೦ನೇ ಪುಟದಿಂದ ಮುಂದುವರಿದುದು

ಸಾರ್ವಜನಿಕ ರಸ್ತೆ ಅಲ್ಲ

ಬಂದಿದೀನಿ...

ಪೋ : ನನ್ನ ಪ್ರಶ್ನೆಗೆ ಉತ್ತರ ಕೊಡಲಿಲ್ಲ ನೀವು...ಮೊದಲೇ ಯಾಕೆ....

(ರಾಜಿ ತಲೆ ತಗ್ಗಿಸಿ ಮೌನವಾಗಿ ನಿಂತಿರುತ್ತಾಳೆ.)

ವಿ : ನಾನು ಹೇಳ್ತೀನಿ ಉತ್ತರ.

(ರಾಜಿ ತಕ್ಷಣ ಕತ್ತೆತ್ತಿ ವಿಶ್ವನಾಥನನ್ನು ನೋಡುತ್ತಾಳೆ.)

ಪೋ : ನೀನು?

ವಿ : ನಮ್ಮಕ್ಕನಿಗೆ ಇಪ್ಪತ್ತು ವರ್ಷ... ನನಗೆ ಹದಿನೆಂಟು ವರ್ಷ. ಈಗ ಮತ್ತೆ ನಮ್ಮಮ್ಮ ಬಸುರಿ... ನಾಚಿಕೆಯಾಗದೆ ಇರುತ್ತದೆಯೇ ನೀವೇ ಹೇಳಿ...

ಪೋ : ನಿಮ್ಮ ಮಗ ಹೇಳೋದು ನಿಜಾನೇ ?

(ರಾಜಿ ಮತ್ತೆ ತಲೆ ತಗ್ಗಿಸಿ ನಿಲ್ಲುತ್ತಾಳೆ.)

ವಿ : ಹದಿನೆಂಟು ವರ್ಷಗಳ ಕಾಲ ನಮ್ಮಪ್ಪ ನಮ್ಮಮ್ಮನ ಜೊತೆ ದಾಂಪತ್ಯ ಜೀವ ನಡೆಸದೆ ಇದ್ದಕ್ಕಿದ್ದಂತೆ... ಈಗ...

ರಾ : ಸಾಕು ಬಾಯಿ ಮುಚ್ಚು...

ವಿ : ಕಾಯದೆ ಪ್ರಕಾರ ನಾನು ಪೋಲೀಸರೊಂದಿಗೆ ಸಹಕರಿಸ್ತಾ ಇದ್ದೇನೆ, ಅಷ್ಟೆ.

ಪೋ : ನಿಮ್ಮ ಮಗ ಬಹಳಷ್ಟು ಕಾಯದೆ ತಿಳ್ಕೊಂಡಿದಾನೆ...ಆದ್ರೆ ಅದನ್ನ ಪಾಲಿಸೋಕ್ಕಿಂತ ಮುರಿಯೋದೇ ಹೆಚ್ಚು ಪ್ಲೆಷರ್ ಅವನಿಗೆ...

ರಾ : ಈಗ ಅವರನ್ನು ಪತ್ತೆ ಹಚ್ಚೋದು ಸುಲಭ ಅಲ್ಲವೇ?

ಪೋ : ನೋಡೋಣ... ಈ ವಿಷಯದಿಂದ ಎಷ್ಟರ ಮಟ್ಟಿಗೆ ಪ್ರಯೋಜನ ಆಗುತ್ತೋ.

(ಗೌರಮ್ಮನ ಪ್ರವೇಶ)

ಗೌ : ನಾನೇ ಹೇಳಿ ಕಳಿಸಿದೆ... ಎಲ್ಲಾ ಹೇಳಿದಳು ತಾನೆ?

ರಾ : ಎದುರಿಗೆ ಬಂದು ನಿಂತಿರುವಾಗ ಬಾಯಿ ಬಿಟ್ಟು ಹೇಳೋ ಅಗತ್ಯವೇನಿದೆ?

ವಿ : ಆದ್ರೂ, ನಿನ್ನ ಬಾಯಿಂದ ಶಬ್ದ ರೂಪದಲ್ಲಿ ಬರೋವರೆಗೆ ಅದು ಹೇಳಿಕೆ ಆಗೋದಿಲ್ಲ. ಪೋಲೀಸರು ಅದನ್ನ ಗಮನಕ್ಕೆ ತೆಗೆದುಕೊಳ್ಳೋದಿಲ್ಲ.

ಪೋ : ಕರೆಕ್ಟ್.

ಗೌ : ಹೇಳಿಬಿಡು ಬೇಗ ... ಅವ್ರಲ್ಲೇನಿದೆ ನಾಚ್ಕೊಳ್ಳೋಕೆ...

ಪೋ : ಇದರಲ್ಲಿ ನಾಚಿಕೊಳ್ಳೋ ಅವಶ್ಯಕತೆ ಏನೂ ಇಲ್ಲ... ಹದಿನೆಂಟು ವರ್ಷ ಆದ್ರೇನಾಯ್ತು? ನಿಮಗೆ ಅದಕ್ಕೂ ಮುಂಚೆ ಮದುವೆಯಾಗಿದೆ ಅನ್ನೋದು ಮುಖ್ಯ... ಅದೇ ನಿಮ್ಮ ಡಿಫೆನ್ಸ್.

ವಿ : ಅದೂ ಅಲ್ಲದೆ, ನಮ್ಮಪ್ಪ ಮನೆ ಬಿಟ್ಟು ಹೋದದ್ದು ನಿನ್ನೆ ತಾನೆ...

ಗೌ : ನೀನು ಸುಮ್ಮನೆ ಇರು... ತಲೆಹರಟೆ ಮಾಡಬೇಡ.

ಪೋ : ನನಗೆ ನಿಮ್ಮ ಹೇಳಿಕೆಗಳಷ್ಟೇ ಬೇಕು. ನಿಮ್ಮ ಮನೆ ಜಗಳ ಅಲ್ಲ.

ಗೌ : ಜಗಳ – ಗಿಗಳ ಏನೂ ಇಲ್ಲ... **(ವಿಶ್ವನಾಥನತ್ತ ಬೊಟ್ಟು ಮಾಡಿ)** ಇವನು ನೆಟ್ಟಗಿದ್ದಿದ್ರೆ ನನ್ಮಗ ಮನೆ ಬಿಟ್ಟು ಹೋಗೋ ಪರಿಸ್ಥಿತಿ ಬರ್‍ತಾನೇ ಇರಲಿಲ್ಲ...ಪೋಲಿ ಸಹವಾಸಕ್ಕೆ ಬಿದ್ದು ಕೆಟ್ಟು ಹೆಸರು...

ವಿ : **(ನಗುತ್ತಾ)** ಎ ಬ್ಲ್ಯಾಕ್ ಆಸ್ ದಿ ಫ್ಯಾಮಿಲಿ ಎಸ್ಕಚನ್...

(ಪೋಲೀಸ್ ತಕ್ಷಣ ಬರೆದುಕೊಳ್ಳುತ್ತಾನೆ)

ರಾ : ನೀನು ರಾತ್ರಿ ಮನೇಗೆ ಸರಿಯಾಗಿ ಬರದೇ ಇರೋದೇ ಅವರಿಗೆ ದೊಡ್ಡ ಚಿಂತೆಯಾಗಿತ್ತು.

ವಿ : ಅಪ್ಪನಿಗಿಂತ ನಿನಗೇ ಜಾಸ್ತಿ ಚಿಂತೆಯಾಗಿತ್ತು...ಅದೂ ಈಗ ನಾನು ಏನು ಏನು ಹೇಳಿಕೆ ಕೊಟ್ಟಿದೀನಿಂದ್ರೆ ...

ಪೋ : "ಶ್ರೀಮಾನ್ ರಾಜಣ್ಣನವರನ್ನು ಹುಡುಕುವ ಶ್ರಮವನ್ನು ತಾವು ತೆಗೆದುಕೊಳ್ಳಬೇಕಾಗಿಲ್ಲ..."

ವಿ : ಮತ್ತು, ಅವರನ್ನು ಒಬ್ಬ ಮನುಷ್ಯರಂತೆ ನೋಡುವುದು ಅಗತ್ಯ. ಮನೇಲಿ ಏನು ನಡೀತಿತ್ತು ಅಂತ ನನಗ್ಗೊತ್ತು. ಅದನ್ನು ನೋಡಲಾರದೆ ಕಾಣಲಾರದೆ ನಾನು ಸಾಧ್ಯವಿದ್ದಷ್ಟು ಹೊತ್ತು ಮನೆಯಿಂದ ಹೊರಗಿರ್‍ತಿದ್ದೆ.

ರಾ : ನಾನು ಅವರನ್ನು ದೇವರೂಂತ ಪೂಜಿಸ್ತಿದ್ದೆ.

ವಿ : ಮನೇಲಿ ಜೋರಾಗಿ ಉಸಿರಾಡೋದಕ್ಕೂ ಅಪ್ಪಂಗೆ ಅವಕಾಶ ಇರಲಿಲ್ಲ.

ಗೌ : ಧಾರಾಳವಾಗಿ ಉಸಿರಾಡ್ತಿದ್ದ... ಒಂದೊಂದ್ಸಲ ಅವನು ಗೊರಕೆ ಹೊಡೆಯೋ ಶಬ್ದಕ್ಕೆ ನಮಗ್ಯಾರಿಗೂ ನಿದ್ದೆ ಬರ್ತಿರ್ಲಿಲ್ಲ.

ರಾ : ನಾನಂತೂ ತುಂಬಾ ಸ್ವಾತಂತ್ರ್ಯ ಕೊಟ್ಟಿದ್ದೆ... ಪ್ರತಿ ದೀಪಾವಳಿಗೆ ಒಂದು ಜೊತೆ ಎಕ್ಕಡ, ಒಂದು ಶರ್ಟು, ಒಂದು ಪಂಚೆ ತೆಗೆದುಕೊಡ್ತಿದ್ದೆ.

ಗೌ : ಆಫೀಸ್ ಟೈಮ್‌ಗೆ ಸರಿಯಾಗಿ ಅಡಿಗೆ ಮಾಡಿ ಊಟ ಬಡಿಸ್ತಿದ್ದೆ.

ರಾ : ರಜಾ ದಿನ ಬೆಳಿಗ್ಗೆ ಉಪ್ಪಿಟ್ಟೋ ದೋಸೆನೋ ಮಾಡಿ ಕೊಡ್ತಿದ್ದೆ...ಕಾಲರ್ ಹರಿದ ಶರ್ಟನ್ನು ಹೊಲಿದು ಕೊಡ್ತಿದ್ದೆ. ಗುಂಡಿ ಕಿತ್ತೋಗಿದ್ರೆ ಅದನ್ನೂ ಹಾಕ್ಕೊಡ್ತಿದ್ದೆ.

ಗೌ : ನಮ್ಮ ಜೊತೆ ಸುಖವಾಗಿದ್ದ...

(ವಿಶ್ವನಾಥ ನಗುತ್ತಾನೆ.)

ರಾ : ನಾವೆಲ್ಲಾ ಹಗಲೂ ಇರುಳೂ ಅವರ ಸುಖಕ್ಕೇ ದುಡೀತಿದ್ವು.

ವಿ : ಪಾಪ, ಲಭ್ಯವಿಲ್ಲ... ನಮ್ಮಪ್ಪನ ಹಣೇಲಿ ಬರೆದಿರಲಿಲ್ಲ ಸುಖ ಪಡೋದು.

ಪೋ : ನೀವೇನೂ ಯೋಚಿಸಬೇಡಿ...ಆದಷ್ಟು ಬೇಗ ಅವರೆಲ್ಲಿದ್ರೂ ಕಂಡುಹಿಡೀತೀವಿ. ನಮ್ಮ ಇಲಾಖೆಯ ಒಳ್ಳೆ ಹೆಸರನ್ನು ಉಳಿಸಿಕೊಳ್ಳೋದಕ್ಕಾದ್ರೂ ಕಂಡುಹಿಡೀಲೇಬೇಕು.

(ರತ್ನ ಓಡಿಬರುತ್ತಾಳೆ. ಎಲ್ಲರೂ ಅವಳತ್ತ ಗಮನ ಹರಿಸುತ್ತಾರೆ)

ರ : (ಏದುಸಿರು ಬಿಡುತ್ತಾ) ಸಾರ್, ಸಾರ್... ಮನೇಲೆಲ್ಲೂ ಇಲ್ಲ ಸಾರ್ ಫೋಟೊ. ಗೋಡೆ ಮೇಲಿದ್ದ ಬಿಳೀ ಚೌಕ ಕೂಡ ಮಾಯವಾಗಿದೆ. ಫೋ...ಟೋ...ಹಾಕಿದ ಗುರುತು ಕೂಡ ಇಲ್ಲ...

ರಾ : (ವಿಶ್ವನಾಥನನ್ನು ನಿರ್ದೇಶಿಸಿ) ಎಲ್ಲಾ ಇವನದ್ದೇ ಕೆಲಸ, ಸಂಗೊತ್ತು.

ಪೋ : ನಿಮ್ಮ ಮಗ ಮೊದಲಿಂದಲೂ ಅಡ್ಡ ಮಾತ್ನೇ ಆಡ್ತಿದಾನೆ...ಸ್ವಲ್ಪಾನೂ ಸಹಕಾರ ಕೊಡ್ತಾ ಇಲ್ಲ. ಬೇಜವಾಬ್ದಾರಿ.

ಗೌ : ಏನು ದುರ್ಬುದ್ಧಿ ಬಂತೋ ಮಗು ನಿಂಗೆ...ಹೀಗ್ಯಾಕೆ ಮಾಡ್ತೀಯೋ ನನ್ನ ಹೊಟ್ಟೆ ಉರಿಸೋಕೆ...

ಪೋ : ನೀವೇನೂ ಚಿಂತಿಸಬೇಡೀಮ್ಮ... ನಾನು ಕಂಡುಹಿಡೀತೀನಿ ಅಂತ ಹೇಳಿದ ಮೇಲೆ ಮುಗಿದುಹೋಯ್ತು. ಎಲ್ಲಿದ್ರೂ ಸರಿ....

ವಿ : ಆತ್ಮಹತ್ಯೆ ಮಾಡಿಕೊಂಡಿದ್ರೆ?

ರಾ :
ಗೌ : } ಆಂ!
ರ :

ರಾ : ಅಪಶಕುನದ ಮುಂಡೇದೆ!

(ರತ್ನ, ರಾಜಿ, ಗೌರಮ್ಮ ಮುಸಿ ಮುಸಿ ಅಳಲು ಶುರು ಮಾಡುತ್ತಾರೆ. ಪೋಲೀಸ್ ವಿಶ್ವನಾಥನನ್ನೇ ದುರುಗುಟ್ಟಿಕೊಂಡು ನೋಡುತ್ತಾನೆ. ನಿಧಾನವಾಗಿ ಕತ್ತಲು ಆವರಿಸುತ್ತದೆ.)

ವಿಶ್ವನಾಥನ ಧ್ವನಿ: ಇನ್ಸ್‌ಪೆಕ್ಟರೇ, ನಮ್ಮಕ್ಕನ ಹೊಟ್ಟೆ ಕಡೆ ನಿಮ್ಮ ದೃಷ್ಟಿ ಹರಿಯದಿದ್ದದ್ದು ಪರಮಾಶ್ಚರ್ಯ.

(ಸಂಪೂರ್ಣ ಕತ್ತಲು)

ಪೋಲೀಸನ ಧ್ವನಿ : ಅನ್ಯಾಶ್ಚಿಂತಯಂತೋ ಮಾಂ ಯೋಜನಾಃ ...

೩

ಮಬ್ಬು ಬೆಳಕು. ರಂಗದ ಎಡ ಭಾಗದಿಂದ ರಾಜಣ್ಣ ಮೂಟೆಯನ್ನು ಎಡಗೈಲಿ ಹಿಡಿದು ನಿಧಾನವಾಗಿ ಕಾಲೆಳೆದುಕೊಂಡು ಬರುತ್ತಾನೆ. ರಂಗದ ಮಧ್ಯಭಾಗದಲ್ಲಿ ಮೂಟೆಯನ್ನು ಬಲಗೈಗೆ ಬದಲಾಯಿಸುತ್ತಾನೆ. ಭಾರ ತಾಳಲಾರದೆ ಒಂದೆರಡು ಹೆಜ್ಜೆ ಇಡುವಷ್ಟರಲ್ಲೇ ಸುಸ್ತಾಗಿ, ಎರಡೂ ಕೈಗಳಿಂದ ಎತ್ತಿಕೊಂಡು ಹೆಗಲಿನ ಮೇಲಿಟ್ಟುಕೊಂಡು ರಂಗದ ಮತ್ತೊಂದು ಪಾರ್ಶ್ವದಲ್ಲಿ ನಿರ್ಗಮಿಸುತ್ತಾನೆ. ಬಲ ಪಾರ್ಶ್ವದಿಂದ ಮತ್ತೆ ಬಂದಾಗ ಮೂಟೆ ಹೆಗಲಿನ

ಮೇಲಿದೆ. ಭಾರದಿಂದ ಕುಗ್ಗಿ ಬಳಲಿದ್ದಾನೆ. ಎಡ ಭಾಗದ ರಂಗದ ಮೇಲು ಭಾಗದ ಮೂಲೆಯಲ್ಲಿ ಮೂಟೆಯನ್ನಿಟ್ಟು ಮೈ ಮುರಿದು ತೃಪ್ತಿಯಿಂದ ರಂಗದ ಬಲಕ್ಕೆ ತಿರುಗಿ ನಡೆಯಲಾರಂಭಿಸುತ್ತಾನೆ. ಮುಕ್ಕಾಲು ಭಾಗ ದೂರ ಕ್ರಮಿಸಿದ್ದಾಗ ತಟಕ್ಕನೆ ನಿಲ್ಲುತ್ತಾನೆ ಕಪ್ಪು ಕನ್ನಡಕ ಧರಿಸಿದ ನಾಲ್ವರು ವ್ಯಕ್ತಿಗಳು ಅವನ ದಾರಿಯಲ್ಲಿ ಅಡ್ಡ ನಿಂತಿದ್ದಾರೆ. ವ್ಯಕ್ತಿಗಳು ಅವನು ಮುಂದೆ ಹೋಗಲು ಸಾಧ್ಯವಿಲ್ಲದಂತೆ ನಿಧಾನವಾಗಿ ಅವನತ್ತ ಹೆಜ್ಜೆ ಹಾಕುತ್ತಾ ಅವನು ಭೀತಿಯಿಂದ ಹಿಂದೆ ಸರಿಯುವಂತೆ ಮಾಡುತ್ತಾರೆ. ರಾಜಣ್ಣ ತನ್ನ ಮುಂದೆ ಬರುತ್ತಿರುವವರನ್ನು ಎದುರಿಸಲಾರದೆ ಹಿಂದೆ ಹಿಂದೆ ಸರಿಯುತ್ತಾನೆ. ವ್ಯಕ್ತಿಗಳು ಅವನನ್ನು ಮೂಲೆಯಲ್ಲಿದ್ದ ಮೂಟೆಯ ಸಮೀಪಕ್ಕೆ ಒತ್ತಲಿಸುತ್ತಾರೆ. ಇಬ್ಬರು ವ್ಯಕ್ತಿಗಳು ಮೂಟೆಯನ್ನು ಎತ್ತಿ ಅವನ ತಲೆಯ ಮೇಲಿಡುತ್ತಾರೆ. ಮತ್ತಿಬ್ಬರು ಅವನ ಕೈಗಳನ್ನು ಎತ್ತಿ ಅವನು ಮೂಟೆಯನ್ನು ಭದ್ರವಾಗಿ ಹಿಡಿದುಕೊಳ್ಳುವಂತೆ ಮಾಡುತ್ತಾರೆ. ಒಬ್ಬ ರಂಗದ ಮಧ್ಯೆ ಬಂದು ಸಂಚಾರವನ್ನು ನಿಯಂತ್ರಿಸುವ ಪೋಲೀಸನಂತೆ ಎಡಗೈಯನ್ನೆತ್ತಿ ಬಲಗೈಯನ್ನು ನೀಡಿ ಮಾರ್ಗದರ್ಶನ ಮಾಡುತ್ತಾನೆ. ಉಳಿದ ಮೂವರು ರಾಜಣ್ಣನ ಬೆನ್ನಿನ ಮೇಲೆ ತಮ್ಮ ಕೈಯನ್ನಿಟ್ಟು ನೂಕುತ್ತಾರೆ. ರಾಜಣ್ಣ ನಿಧಾನವಾಗಿ ನಿರ್ದೇಶಿತ ದಿಕ್ಕಿನಲ್ಲಿ ಹೆಜ್ಜೆ ಹಾಕುತ್ತಾನೆ. ಕತ್ತಲು.

೪

ಮತ್ತೆ ಮಬ್ಬು ಬೆಳಕು. ಆದರೆ ಹಿಂದಿನ ದೃಶ್ಯಕ್ಕಿಂತ ಹೆಚ್ಚು ಸ್ಪಷ್ಟವಾಗಿದೆ. ರಾಜಣ್ಣ ರಂಗದ ಮುಂಭಾಗದ ಬಲ ತುದಿಯಲ್ಲಿ ಮೂಟೆಯನ್ನು ಇಳಿಸಿ ಸರಸರನೆ ಹೆಜ್ಜೆ ಹಾಕಿ ಎಡಗಡೆಗೆ ನಡೆಯುತ್ತಾನೆ. ನಾಲ್ಕಾರು ಹೆಜ್ಜೆ ಹಾಕಿರುವಷ್ಟರಲ್ಲಿ ಹತ್ತಾರು ಅಡಿ ಉದ್ದದ ತುದಿಯಲ್ಲಿ ಪರಚಲು ಸಿದ್ಧವಾಗಿರುವಂತೆ ಬೆರಳುಗಳನ್ನು ಬಿಡಿಸಿದ ಮರದ ಕೈಯನ್ನು ಜೋಡಿಸಿರುವ ಬೊಂಬೊಂದು ಬಲ ಪಾರ್ಶ್ವದಿಂದ ಹೊರಟು ಅವನ ಶರ್ಟಿನ ಕಾಲರಿಗೆ ಸಿಕ್ಕಿಕೊಳ್ಳುತ್ತದೆ. ರಾಜಣ್ಣ ಬೆಚ್ಚಿ ನಿಲ್ಲುತ್ತಾನೆ. ಬೊಂಬು ಅವನನ್ನು ಸಾವಕಾಶವಾಗಿ ಹಿಂದಕ್ಕೆ ಎಳೆದು ಅವನು ಮೂಟೆಯ ಸಮೀಪ ಬಂದಾಗ ಅವನನ್ನು ಬಿಟ್ಟು ಒಳಕ್ಕೆ ಸರಿಯುತ್ತದೆ. ಈಗ ಬೆಳಕು ಹೆಚ್ಚು ಪ್ರಖರವಾಗುತ್ತಿದೆ. ರಾಜಣ್ಣ ಮತ್ತೊಮ್ಮೆ ಮೂಟೆಯನ್ನು ಎತ್ತಿ ತಲೆಯ ಮೇಲಿಟ್ಟುಕೊಂಡು ಎಡ ದಿಕ್ಕಿಗೆ ಹೊರಡುತ್ತಾನೆ. ರಂಗದ ಮಧ್ಯ ಹಿಂತುದಿಯಲ್ಲಿ ಮೂಟೆಯನ್ನಿಳಿಸಿ ಅದರೊಳಗಿಂದ ಒಂದು ಸೀರೆಯನ್ನು ತೆಗೆದು ಮೂಟೆಗೆ ಹೊದಿಸುತ್ತಾನೆ. ಪೂರ್ತಿ ಮುಚ್ಚಿದೆಯೆಂದು ಒಮ್ಮೆ ಚೆನ್ನಾಗಿ ಪರೀಕ್ಷಿಸಿ ರಂಗದ ಬಲ ಪಾರ್ಶ್ವದಿಂದ ನಿರ್ಗಮಿಸುತ್ತಾನೆ. ಈಗ ಮೂಟೆಯ ಮೇಲೆ ಬೆಳಕು ಕೇಂದ್ರೀಕೃತವಾಗಿದೆ. ರಂಗದುದ್ದಕ್ಕೂ ಎಡದಿಂದ ಬಲಕ್ಕೆ ನೆಲದಿಂದ ಸುಮಾರು ಐದು ಅಡಿ ಎತ್ತರದಲ್ಲಿ ಹಾಯ್ದಿರುವ ಹಗ್ಗ ಕಾಣಿಸುತ್ತದೆ. ಹಗ್ಗ ಬಲದಿಂದ ಎಡಕ್ಕೆ ಸರಿಯುತ್ತಿದೆ. ರಂಗದ ಎಡ ಭಾಗದಿಂದ ಕುತ್ತಿಗೆಗೆ ಕುಣಿಕೆ ತೊಟ್ಟಿರುವ ರಾಜಣ್ಣ ಹಿಂದು ಮುಂದಾಗಿ ರಂಗದ ಮೇಲಕ್ಕೆ ಎಳೆಯಲ್ಪಡುತ್ತಿದ್ದಾನೆ. ಈಗ ರಾಜಣ್ಣನ ಮೇಲೆ ಬೆಳಕು ಪ್ರಖರವಾಗಿ ಬೀಳುತ್ತದೆ. ಅವನು ನಿಲ್ಲುತ್ತಾನೆ. ನೇರವಾಗಿ ಮುಖದ ಮೇಲೆ ಬೀಳುವ ಬೆಳಕನ್ನು ಎದುರಿಸಲಾರದೆ ಕಣ್ಣು ಮುಚ್ಚಿಕೊಳ್ಳುತ್ತಾನೆ. ಹಿಂದೆ ತಿರುಗಿ ಮೂಟೆಯನ್ನು ನೋಡುತ್ತಾನೆ. ಮತ್ತೆ ಪ್ರೇಕ್ಷಕರತ್ತ ತಿರುಗಿದಾಗ ಹಗ್ಗ ಅವನ ಎದೆಯ ಸುತ್ತ ಸುತ್ತಿಕೊಂಡಿದೆ. ಹೀಗೆ ನಾಲ್ಕಾರು ಬಾರಿ ತಿರುಗಿ ಅವನ ಎದೆಯ ಭಾಗದಲ್ಲಿ ಹಗ್ಗ ಬಲವಾಗಿ ಸುತ್ತಿಕೊಳ್ಳುತ್ತದೆ. ಮೊಣಕಾಲೂರಿ ಕುಳಿತುಕೊಂಡು ಪ್ರಯಾಸಪಟ್ಟು ಜೇಬಿನಿಂದ ಒಂದು ಕೊಳಲು ತೆಗೆದು ಬಾರಿಸಲು ಪ್ರಾರಂಭಿಸುತ್ತಾನೆ. ನಾಲ್ಕಾರು ಅಪಸ್ವರಗಳು ಮೂಡುತ್ತವೆ. ಕ್ರಮೇಣ ಕತ್ತಲಾಗುತ್ತದೆ.

೫

ಕಪ್ಪು ಕನ್ನಡಕ ಧರಿಸಿದ ನಾಲ್ಕು ವ್ಯಕ್ತಿಗಳು ಚಚ್ಚೌಕವಾಗಿ ಒಬ್ಬರ ಕೈಯನ್ನೊಬ್ಬರು ಹಿಡಿದು ರಂಗದ ಬಲ ಭಾಗದಲ್ಲಿ ನಿಂತಿದ್ದಾರೆ. ಅವರ ಮಧ್ಯೆ ಹಗ್ಗ ಸುತ್ತಿಕೊಂಡ ರಾಜಣ್ಣ ನಿಂತಿದ್ದಾನೆ. ರಂಗದ ಮಧ್ಯಭಾಗದಲ್ಲಿ ಒಂದು ಮೇಜಿನ ಮೇಲೆ ಮೂಟೆ ಇದೆ.

ಬಲ ಭಾಗದಿಂದ ಪೋಲೀಸ್, ಗೌರಮ್ಮ, ರಾಜಿ. ರತ್ನ ಮತ್ತು ವಿಶ್ವನಾಥ–ಒಬ್ಬರ ಹಿಂದೊಬ್ಬರು ಪ್ರವೇಶಿಸುತ್ತಾರೆ. ಪೋಲೀಸ್ ಮೂಟೆಯಲ್ಲಿದ್ದ ವಸ್ತುಗಳನ್ನು ಮೇಜಿನ ಮೇಲೆ ಚೆಲ್ಲಿ ಹರಡುತ್ತಾನೆ.

ಪೊ : ಗೌರಮ್ಮನವರೇ, ಈ ವ್ಯಕ್ತೀನ ನೀವು ಹಿಂದೆ ಎಲ್ಲಾದರೂ ನೋಡಿದ್ರಾ?

ಗೌ : ಇದೇನಪ್ಪ ಹೀಗೆ ಕೇಳ್ತೀರಿ...ರಾಜಣ್ಣ ನನ್ನ ಮಗನಲ್ಲವೇ?

ಪೋ : ಇರಬಹುದು...ಆದ್ರೂ ನನ್ನ ಪ್ರಶ್ನೆಗೆ ಉತ್ತರ ಹೇಳಿ: ನೋಡಿದ್ರಾ ಅಥವಾ ನೋಡಿಲ್ಲವಾ?

ಗೌ : ನೋಡದೆ ಇರ್ತೀನೇ? ನೋಡಿದೀನಿ.

ಪೋ : ಎಲ್ಲಿ ನೋಡಿದ್ರಿ?

ಗೌ : ಎಲ್ಲೀಂದ್ರೆ? ದಿನಾ ಮನೇಲಿ ನೋಡ್ತಾ ಇದ್ದೆ.

ಪೋ : ಈ ಹಿಂದೆ ಕಡೇ ಸಲ ಯಾವಾಗ ನೋಡಿದ್ರಿ?

ಗೌ : ಮೂರು ದಿನದ ಹಿಂದೆ. ರಾತ್ರಿ ಊಟ ಮಾಡಿ ಮಲಕ್ಕೊಳ್ಳೋಕೆ ಮುಂಚೆ... ಬೆಳಗಾನೆದ್ದು ನೋಡಿದ್ರೆ ...ಇರಲಿಲ್ಲ.

ಪೋ : ಒಳ್ಳೇದು...ನಿಮಗೂ ಇವರಿಗೂ ಏನು ಸಂಬಂಧ?

ಗೌ : ಆಗ್ಲೇ ಎಲ್ಲಾ ಹೇಳಿದ್ನಲ್ಲಪ್ಪಾ...ನನ್ನ ಮಗ...ಸ್ವಂತ ಮಗ.

ಪೋ : ಹೊರಗೇ ಹೇಳಿರಬಹುದು....ಆದ್ರೆ ಕೋರ್ಟ್‌ನಲ್ಲಿ ಪುನಃ ಹೇಳಬೇಕಾಗುತ್ತೆ... ಚೆನ್ನಾಗಿ ನೋಡಿ ಹೇಳಿ...ಇವರೇ ತಾನೆ ನಿಮ್ಮ ಮಗ? ಮೂರು ದಿನದಿಂದ ಪತ್ತೆ ಇಲ್ಲದೆ ಹೋದೋರು?

ಗೌ : ಹೌದ್ದಾದು. ಇವನೇ ರಾಜಣ್ಣ... ಏನೂ ಸಂಶಯ ಇಲ್ಲ.

ಪೋ : ಒಳ್ಳೇದು...ಇವರೇ ನಿಮ್ಮ ಮಗ ಅನ್ನೋದಕ್ಕೆ ಏನಾದ್ರೂ ಸಾಕ್ಷಿ ಇದೆಯಾ?

ಗೌ : ಸಾಕ್ಷಿ? ಇದಕ್ಕೆಲ್ಲಾ ಸಾಕ್ಷಿ ಯಾಕಪ್ಪಾ? ನಾನು ಹೇಳಿದ್ರೆ ಸಾಲದೆ?

ಪೋ : ಉಹುಂ. ಎಲ್ಲಾದಕ್ಕೂ ಸಾಕ್ಷೀ ಬೇಕೇ ಬೇಕು.

(ಮೇಜಿನ ಮೇಲೆ ಹರಡಿದ್ದ ಸಾಮಾನುಗಳಲ್ಲಿ ಹುಡುಕಿ ಕಟ್ಟು, ಗಾಜು ಹಾಕಿದ್ದ ಒಂದು ಫೋಟೋ ತೆಗೆದು ಗೌರಮ್ಮನ ಮುಂದೆ ಹಿಡಿದು)

ನೋಡಿ, ಚೆನ್ನಾಗಿ ನೋಡಿ. ಈ ಫೋಟೋ

ಪಕ್ಕದೋ ವ್ಯಕ್ತಿ ಯಾರು ಹೇಳಿ.

(ಗೌರಮ್ಮ ಫೋಟೋವನ್ನು ಕೈಲಿ ಹಿಡಿದು. ಕೊಂಡು ನೋಡುತ್ತಾಳೆ.)

ಗೌ : ಅಯ್ಯೋ ಹೌದು...ಇದೇ ಫೋಟೊ ನಮ್ಮಗೂದು. ಮನೇಲಿ ಗೋಡೇ ಮೇಲೆ ಹಾಕಿದ್ನಲ್ಲ. ಅಲ್ವೇನೇ ರಾಜಿ?

(ರಾಜಿ ಹೌದೆಂದು ತಲೆ ಹಾಕುತ್ತಾಳೆ.)

ಚಿಕ್ಕ ಹುಡುಗ ಆಗಿದ್ದಾಗ ತೆಗೆಸಿದ್ದು, ನೋಡಿ, ಟೋಪಿ ಹಾಕ್ಕೊಂಡಿದ್ದಾನೆ. ಚಪ್ಪಲಿ ಹಾಕ್ಕೊಂಡಿದಾನೆ. ಸ್ಲೇಟು ಪುಸ್ತಕದ ಚೀಲ...ಹೌದ್ಹೌದು, ಅನುಮಾನವೇ ಇಲ್ಲ... ರಾಜಣ್ಣನೇ.

ಪೋ : ಫೋಟೋಗ್ರಾಫರ್ ಬರಲಿ.

(ಮುದಿ ವಯಸ್ಸಿನ ಒಬ್ಬ ವ್ಯಕ್ತಿ ಬರುತ್ತಾನೆ.)

ಪೋ : ನಿಮ್ಮ ಹೆಸರೇನು? ನಿಮ್ಮ ಉದ್ಯೋಗ?

ಫೋಟೋಗ್ರಾಫರ್ : ನನ್ನ ಹೆಸರು ಫೋಟೋವಾಲಾ. ನಾನೊಬ್ಬ ನುರಿತ ಫೋಟೋಗ್ರಾಫರ್.

ಪೋ : ಈ ಫೋಟೋ ನೀವು ತೆಗೆದದ್ದಾ?

ಫೋ : (ಫೋಟೋವನ್ನು ತುಂಬಾ ತೀಕ್ಷ್ಣವಾಗಿ ಪರೀಕ್ಷಿಸುತ್ತಾ.) ಹೌದು, ಹೌದು... ಇಂಥಾ ಫೋಟೋ ನಾನಲ್ಲದೆ ಬೇರೆ ಯಾರು ತೆಗೆಯೋಕೆ ಸಾಧ್ಯ...! ಬಹಳ ಹಿಂದೆ ತೆಗೆದದ್ದು ... ಆದ್ರೂ ಮೊನ್ನೆ ಮೊನ್ನೆ ತೆಗೆದ ಹಾಗಿದೆ...

ಪೋ : ಫೋಟೋ ತೆಗೆಸಿಕೊಂಡ ವ್ಯಕ್ತಿ ಇವರೇನಾ?

(ಫೋಟೋಗ್ರಾಫರ್ ರಾಜಣ್ಣ ಮತ್ತೆ ಫೋಟೋವನ್ನು ಹೋಲಿಸುವಂತೆ ನೋಡುತ್ತಾನೆ.)

ಫೋ : ಅನುಮಾನವೇ ಇಲ್ಲ.

ಪೋ : ಬಹಳ ಥ್ಯಾಂಕ್ಸ್.

(ಫೋಟೋವನ್ನು ವಾಪಸ್ ಪಡೆದು ಮೇಜಿನ ಮೇಲಿಡುತ್ತಾ)

ರಾಜಮ್ಮ, ಈ ವ್ಯಕ್ತೀನ ನೀವು ಹಿಂದೆ ನೋಡಿದ್ರಾ?

(ಫೋಟೋಗ್ರಾಫರ್ ಎಲ್ಲರಿಗೂ ವಂದಿಸಿ ನಿರ್ಗಮಿಸುತ್ತಾನೆ.)

ರಾ : ನೋಡಿದೀನಿ.

ಪೋ : ಎಲ್ಲಿ?

ರಾ : ನಮ್ಮನೇಲಿ.

ಪೋ : ನಿಮಗೂ ಅವರಿಗೂ ಏನು ಸಂಬಂಧ?

ರಾ : ...ಅವರು ನಮ್ಮೆಜಮಾನ್ರು.

ಪೋ : ಇವರೇ ನಿಮ್ಮ ಯಜಮಾನ್ರು ಅನ್ನೋದಕ್ಕೆ ಏನಾದ್ರೂ ಸಾಕ್ಷಿ ಇದೆಯಾ?

ರಾ : ನಾವು ಇಪ್ಪತ್ತೊರ್ಷದಿಂದ ಒಟ್ಟಿಗೆ ಸಂಸಾರ ಮಾಡ್ತಿದ್ದದ್ದೇ ಸಾಕ್ಷಿ.

(ರಾಜಿ ತನ್ನ ಮುಕ್ಕಳತ್ತ ನೋಡಿ ಸೂಕ್ಷ್ಮವಾಗಿ ಹೊಟ್ಟೆ ಮುಟ್ಟಿ ನೋಡಿಕೊಳ್ಳುತ್ತಾಳೆ.)

ಪೋ : ಬೇರೇನೂ ಸಾಕ್ಷಿ ಇಲ್ಲವೇ?

ರಾ : **(ಅಸಹಾಯಕಳಾಗಿ)** ಬೇರೆ...ಏನು ಬೇಕು?

(ಪೋಲೀಸ್ ಮೇಜಿನ ಹರದದಿಂದ ಒಂದು ಲಗ್ನಪತ್ರಿಕೆಯನ್ನು ಹುಡುಕಿ ತೆಗೆದು ರಾಜಿಯ ಕೈಲಿ ಕೊಡುತ್ತಾನೆ.)

ಪೋ : ಓದಿ.

ರಾ : ಲಗ್ನಪತ್ರಿಕೆ..."ಚೈತ್ರ ಶುದ್ಧ ದಶಮಿಯಂದು ಸೂರ್ಯೋದಯಾದಿ ಎರಡೂವರೆ ಘಳಿಗೆಗೆ ಸಲ್ಲುವ ಶುಭ ಮಿಥುನ ಲಗ್ನದಲ್ಲಿ ನನ್ನ ದ್ವಿತೀಯ ಪುತ್ರ ಚಿ। ರಾ। ರಾಜಣ್ಣ ಮತ್ತು ಲೇಟ್ ನಾರಣಪ್ಪನವರ ಜ್ಯೇಷ್ಠ ಪುತ್ರಿ ಹ। ಕುಂ। ಸೌ। ರಾಜೇಶ್ವರಿ ಇವರ ಶುಭ ವಿವಾಹವನ್ನು ಭಗವತ್ಪ್ರೇರಣೆಯಿಂದ ಗುರು ಹಿರಿಯರು......"

ಪೋ : ಹುಂ...ಸಾಕು...ಇದೇ ನಿಮ್ಮ ಸಾಕ್ಷಿ.

ರಾ : ನಮ್ಮ ಮದುವೆ ಲಗ್ನ ಪತ್ರಿಕೆ!

(ಲಗ್ನಪತ್ರಿಕೆಯನ್ನು ಅವಳ ಕೈಯಿಂದ ಇಸಿದುಕೊಂಡು ಮೇಜಿನ ಮೇಲಿದ್ದ ಫೋಟೋದ ಮೇಲಿಡುತ್ತಾನೆ.)

ಪೋ : ರತ್ನ...ಮಿಸ್ ರತ್ನ...

ರ : **(ಉತ್ಸುಕತೆಯಿಂದ ಮುಂದೆ ಬಂದು)** ಎಸ್ಸರ್?

ಪೋ : ಈ ವ್ಯಕ್ತಿ ಪರಿಚಯ ಇದ್ಯಾ ನಿಮಗೆ?

ರ : ಇವರು ನಮ್ಮ ತಂದೆ ಸಾರ್.

ಪೋ : ಈ ವಿಷಯ ನಿಮಗೆ ಹೇಗೆ ಗೊತ್ತು?

ರ : ಇದೇನ್ ಸಾರ್ ಹೀಗೆಲ್ಲಾ ಕೇಳ್ತೀರಿ?

ಪೋ : ಇದು ಕೋರ್ಟ್...ಕೇಳಿದ ಪ್ರಶ್ನೆಗೆ ಸರಿಯಾಗಿ ಉತ್ತರ ಹೇಳಬೇಕು.

ರ : ಆಗ್ಲಿ ಸಾರ್, ಪ್ರಯತ್ನ ಪಡ್ತೀನಿ.

ಪೋ : ಹೂಂ...ಹೇಳಿ...ಇವರು ನಿಮ್ಮ ತಂದೆ ಅಂತ ನಿಮಗೆ ಯಾರಾದ್ರೂ introduce ಮಾಡಿಕೊಟ್ಟಿದ್ರಾ?

ರ : **(ಪೆಚ್ಚಾಗಿ)** ಇಲ್ಲಾ ಸಾರ್.

ಪೋ : ನಿಮ್ಮ ತಾಯಿ, ಅಜ್ಜಿ ಯಾರೂ ಹೇಳಲೇ ಇಲ್ಲವೇ?

ರ : ಅಂಥ ಪರಿಸ್ಥಿತಿ ಇದುವರೆಗೂ ಬಂದೇ ಇಲ್ಲ ಸಾರ್...ಈಗ ಕೇಳ್ತೀನಿ... **(ತಾಯಿಯ ಕಡೆ ತಿರುಗಿ)** ಏನಮ್ಮಾ, ನೀನು ಹೇಳಿದೆ ಅಂತ ಸಾಕ್ಷಿ ಹೇಳಲೇ?

ರಾ : ಹೇಳಮ್ಮ, ಪರವಾಗಿಲ್ಲ.

ರ : ಹೌದು ಸಾರ್, ನಮ್ಮ ತಾಯಿ ಹೇಳಿದ್ರು.

ಪೋ : ಏನಂತ?

ರ : ಇವರೇ ನಮ್ಮ ತಂದೆ ಅಂತ.

ಪೋ : ಒಳ್ಳೇದು...ನಿಮ್ಮ ತಾಯಿ ಸಾಕ್ಷ್ಯಾನ ನಾವು ಆಗಲೇ ಒಪ್ಪಿಕೊಂಡಿರೋದ್ರಿಂದ ನಿಮ್ಮ ಸಾಕ್ಷ್ಯಾನೂ ಒಪ್ಪಿಕೋತೀವಿ.

ರ : ಥ್ಯಾಂಕ್ಯೂ ಸರ್.

ಪೋ : ವಿಶ್ವನಾಥ್, ನಿಮ್ಮದೂ ಮುಗಿಸಿಬಿಟ್ರೆ ಕೇಸ್ ಈಗ್ಲೇ ಡಿಸೈಡ್ ಮಾಡಬಹುದು.

ವಿ : ನಾನು ಏನು ಹೇಳಬೇಕು?

ಪೋ : ಈ ವ್ಯಕ್ತೀನ ನೀವು ಗುರುತಿಸ್ತೀರಾ?

ವಿ : ಹೌದು. ...ನಾವು ಬಹಳ ದಿನ ಒಂದೇ ಮನೇಲಿ ವಾಸವಾಗಿದ್ವಿ.

ಪೋ : ನಿಮ್ಮ ಅವರ ಸಂಬಂಧ?

ವಿ : ಗೊತ್ತಿಲ್ಲ.

ಪೋ : ನೀವು ಈ ವ್ಯಕ್ತಿಯ ಮಗ ಅಲ್ಲವೇ?

ವಿ : ಗೊತ್ತಿಲ್ಲ.

ಗೌ : ಇದೇನೋ ಪ್ರಾರಬ್ಧವೇ ಹೀಗೆ ಮಾತಾಡ್ತಿದಿ?

ಪೋ : ನಿಮ್ಮಕ್ಕ ರತ್ನ ಹೇಳಿದ ಹಾಗೆ ನೀವು ಹೇಳಬಹುದು.

ವಿ : ಇದು ವರೆಗೆ ಯಾರೂ ಈತ ನನ್ನ ತಂದೆ ಅಂತ ಪರಿಚಯ ಮಾಡಿಕೊಟ್ಟಿಲ್ಲ

ಪೋ : ಈಗ ಮಾಡಿಕೊಡಬಹುದು.

ವಿ : ಆದ್ರೆ ನನಗೆ ಹೇಗೆ ನಂಬಿಕೆ ಬರಬೇಕು?

ರಾ : ನಾನು ಹೇಳ್ತೀನಿ...ಹೇಳೋ...

ವಿ : ನಂಗೆ ಗೊತ್ತಿರೋವಷ್ಟು ವಿಷಯ ಮಾತ್ರ ಹೇಳ್ತೀನಿ...ನಮ್ಮಪ್ಪ ಅಂತ ನೀವೆಲ್ಲಾ ಹೇಳ್ತಾ ಇರೋ ಈ ವ್ಯಕ್ತೀನೂ ಒಬ್ಬ ಮನುಷ್ಯ ಅಂತ ನೋಡಬೇಕು ಅಂತ

ನಾನಾಗ್ಲೇ…

ಪೋ : ಆ ವಿಷ್ಯ ನಮಗೆ ಬಿಡು.

ವಿ : ಅದಕ್ಕಿಂತ ಹೆಚ್ಚಿಗೆ ಹೇಳೋದೇನಿಲ್ಲ. ನನಗೆ.

ಪೋ : (ಮುಂದೆ ಬಂದು ಪ್ರೇಕ್ಷಕರನ್ನು ದ್ದೇಶಿಸಿ.)

My Lord, this witness has turned hostile. I seek your permission to suppress this witness.

(ಕಪ್ಪು ಕನ್ನಡಕದ ವ್ಯಕ್ತಿಗಳು ತಕ್ಷಣ ವಿಶ್ವನಾಥನ ಮೇಲೆ ಆಕ್ರಮಣ ನಡೆಸಿ ಅವನನ್ನು ಬಲವಂತವಾಗಿ ಹೊತ್ತುಕೊಂಡು ರಂಗದ ಎಡ ಬದಿಯಲ್ಲಿ ನಿರ್ಗಮಿಸುತ್ತಾರೆ. ಅವರು ಮೇಲೆ ಬಿದ್ದು ಹೊತ್ತುಕೊಂಡು ಹೋಗುವಾಗ ವಿಶ್ವನಾಥ ಪ್ರತಿಭಟಿಸುತ್ತಾ ಕಿರಚಾಡುತ್ತಾನೆ. ವ್ಯಕ್ತಿಗಳು ಕೈ ಕೊಡವಿಕೊಂಡು ಸಾವಕಾಶವಾಗಿ ಬಂದು ರಾಜಣ್ಣನ ಸುತ್ತ ಮೊದಲಿನಂತೆ ಕಟಕಟೆಯನ್ನು ನಿರ್ಮಿಸುತ್ತಾರೆ.)

ಗೌ : ಹಾಗೇ ಆಗಬೇಕು, ಅನಿಷ್ಟ ಮುಂಡೇದಕ್ಕೆ.



ರ : ವಿಶ್ವ ಏನಾದ್ರೂ ಸಾಕ್ಷಿ ಕೊಟ್ಟಿದ್ರೆ ನಮ್ಮ ಕೇಸ್ ಬಿದ್ ಹೋಗ್ತಾ ಇತ್ತು.

ರಾ : ಅವನೇನು ಮಾತಾಡ್ತಿದ್ನೋ ನನಗಂತೂ ಅರ್ಥವೇ ಆಗಲಿಲ್ಲ. ಒಟ್ನಲ್ಲಿ ನಮ್ಮನ್ನು ಕಾಪಾಡೋದಕ್ಕೆ ಹುಟ್ಟಿದಾನೆ ಅಂತ ಕಾಣುತ್ತೆ.

ಪೋ : ನೀವೇನೂ ಯೋಚನೆ ಮಾಡಬೇಡಿ. ಈಗ ಎಲ್ಲಾ ಬಂದೋಬಸ್ತ್ ಮಾಡ್ತೀನಿ. (ರತ್ನಳ ಕಡೆ ನೋಡುತ್ತಾ) ಆದ್ರೂ ನೀವು ಸ್ವಲ್ಪ ಕೇರ್‌ಫುಲ್ ಆಗಿರಬೇಕು. ಈಗ ಬಿಡಿ, ನಾನೆಲ್ಲಾ ನೋಡ್ಕೋತೀನಿ.

ರಾ : ಏನೋ ನಿಮ್ಮಂಥ ಪುಣ್ಯಾತ್ಮರು ಇರೋದ್ರಿಂದ ನಮಗೆ ಒಂದು ನೆಮ್ಮದಿ.

ರ : ನೆಕ್ಸ್ಟ್ ಟೈಂ ತುಂಬಾ ಕೇರ್‌ಫುಲ್ ಆಗಿರ್ತೀನಿ ಅಂತ ಪ್ರಾಮಿಸ್ ಮಾಡ್ತೀನಿ ಸಾರ್.

ಗೌ : ಇದೊಂದ್ಸಲ ಪಾರು ಮಾಡಿಬಿಡಿ. ನಿಮ್ಮ ಹೆಸರು ಹೇಳಿ ದೇವರ ಮುಂದೆ ತುಪ್ಪದ ದೀಪ ಹಚ್ಚಿಡ್ತೀವಿ.

ಪೋ : ಆಗ್ಲಿ. ಹೋಗ್ಲಿ, ಸ್ವಲ್ಪ ಸುಮ್ನಿರಿ ನೀವೆಲ್ಲಾ ಈಗ (ಗಡಿಯಾರದ ಕಡೆ ನೋಡುತ್ತಾ) ತೀರ್ಪು ಕೊಡೋ ವೇಳೆ…

(ಪೋಲೀಸ್ ರಂಗದ ಮೇಲೆಲ್ಲಾ ಸುತ್ತಾಡಿ ರಾಜಣ್ಣ, ಅವನ ಮೂಟೆ ಮತ್ತು ಅವನ ಪರಿವಾರವನ್ನೆಲ್ಲಾ ಟೀಕಿಯಿಂದ ನಿರೀಕ್ಷಿಸುತ್ತಾನೆ. ಢಣ್ ಢಣ್ ಎಂದು ಗಂಟೆ ಹೊಡೆದ ಸದ್ದು. ಎಲ್ಲಿದ್ದರಲ್ಲೆ ಎಲ್ಲರೂ ಸೆಟೆದು ಗಂಭೀರವಾಗಿ ನಿಲ್ಲುತ್ತಾರೆ.)

"ಈ ಮೊಕದ್ದಮೆಯ ವಿಚಾರಣೆ ಕೊನೆಗೊಂಡು ಆರೋಪಿ ರಾಜಣ್ಣನಿಗೆ ಅಜೀವ ಪರ್ಯಂತ ಸಶ್ರಮ ಶಿಕ್ಷೆ ವಿಧಿಸಲಾಗಿದೆ" ಎಂಬ ತೀರ್ಪು ರಂಗದ ಮೇಲೆ ಮೊಳಗುತ್ತದೆ.

(ರಾಜಿ, ರತ್ನ, ಗೌರಮ್ಮ ಒಬ್ಬರನ್ನೊಬ್ಬರು ತಬ್ಬಿಕೊಂಡು ತಮ್ಮ ಸಂತೋಷ ಸಂತೃಪ್ತಿಗಳನ್ನು ವ್ಯಕ್ತಪಡಿಸುತ್ತಾರೆ.)



ರಾ : ಕೊನೆಗೂ ನ್ಯಾಯ ಸಿಕ್ಕಿಲ್ಲಾ...ಸದ್ಯ!
ರ : (ಪೋಲೀಸ್‌ಗೆ) ಸಾರ್, ನೀವು ಇಷ್ಟೊಂದು ಶ್ರಮವಹಿಸದೆ ಇದ್ರೆ ನಮ್ಮ ಗತಿ ಏನಾಗ್ತಿತ್ತೋ ... ತುಂಬಾ ಥ್ಯಾಂಕ್ಸ್.
ಪೋ: ಯು ಆರ್ ವೆಲ್‌ಕಂ.
ರ : ಯೆಸ್ಸರ್.

(ಮೇಲಿನ ಮಾತುಗಳು ನಡೆಯುತ್ತಿರುವಾಗ ಕಪ್ಪು ಕನ್ನಡಕದ ವ್ಯಕ್ತಿಗಳು ರಾಜಣ್ಣನ ಶರೀರಕ್ಕೆ ಸುತ್ತಿದ ಹಗ್ಗವನ್ನು ಬಿಚ್ಚುತ್ತಾರೆ. ಅವನ ಶರ್ಟು, ಪ್ಯಾಂಟುಗಳನ್ನು ಬಿಚ್ಚಿ ಕಾಲರ್ ಇಲ್ಲದ, ಅರ್ಧ ತೋಳಿನ ಪಟ್ಟಾಪಟ್ಟಿ ಅಂಗಿ ಟೋಪಿ ಮತ್ತು ಅದೇ ಬಟ್ಟೆಯ ಚಡ್ಡಿಗಳನ್ನು ತಂದು ತೊಡಿಸುತ್ತಾರೆ. ಒಟ್ಟೆ ಬದಲಾಯಿಸುವಾಗ ರಾಜಣ್ಣನ ಕೊಳಲು ಕೆಳಗೆ ಬೀಳುತ್ತದೆ. ಒಬ್ಬ ವ್ಯಕ್ತಿ ಅದನ್ನು ಆಕಸ್ಮಾತ್ ತುಳಿದು, ಮುರಿದ ತುಂಡುಗಳನ್ನು ತಂದು ಮೇಜಿನ ಮೇಲಿಡುತ್ತಾನೆ.)

ರಾ : ಬರ್ತೀವಿ, ನಾವು ನಮಸ್ಕಾರ...ತುಂಬಾ ಉಪಕಾರ ಆಯ್ತು.

(ವ್ಯಕ್ತಿಗಳು ಸಾಲಾಗಿ ನಿರ್ಗಮಿಸುತ್ತಾರೆ.)

ರ: ಬರ್ತೀವಿ ಸಾರ್...ಜ್ಞಾಪಕ ಇರಲಿ ಮರೆತುಬಿಡಬೇಡಿ....
ಗೌ: (ಟೇಬಲ್ ಮೇಲಿದ್ದ ಫೋಟೋವನ್ನು ಎತ್ತಿಕೊಳ್ಳುತ್ತಾ) ಇನ್ಮೇಲೆ ಜೋಪಾನವಾಗಿ ನೋಡ್ಕೊಳ್ತೇನೆ.

ಎಲ್ಲರೂ ಹೊರಡುತ್ತಾರೆ. ಪೋಲೀಸ್ ರಾಜಣ್ಣನತ್ತ ತಿರುಗುತ್ತಾನೆ. ಇದಾವುದರ ಪರಿವೆಯೂ ಇಲ್ಲದಂತೆ ರಾಜಣ್ಣ ಕಣ್ಣು ಮುಚ್ಚಿ ನಿಂತಿದ್ದಾನೆ. ನಿಧಾನವಾಗಿ ಕತ್ತಲಾಗುತ್ತದೆ. ಇನ್ನೂ ಯಾರೂ ರಂಗದಿಂದ ಪೂರ್ತಿ ನಿಷ್ಕ್ರಮಿಸದೆ ಇರುವಾಗ ಕತ್ತಲು, ಒಬ್ಬ ಫೋಟೋಗ್ರಾಫರ್ ಓಡಿ ಬಂದು ಕ್ಲಿಕ್ ಮಾಡುತ್ತಾನೆ. ಫ್ಲಾಷ್‌ನಲ್ಲಿ ರಾಜಣ್ಣನೊಳಗೊಂಡು ಅವನ ಪರಿವಾರ (ವಿಶ್ವನಾಥ ಇಲ್ಲ). ಅವರ ಹಿಂದೆ ಪೋಲೀಸ್ ಅಧಿಕಾರಿ ಪೋಸ್ ಕೊಟ್ಟಿದ್ದಾರೆ. ✡

ಪೆನ್ (ಲೆಕ್ಕಣಿಕೆ) ಎನ್ನುವುದು ಪೆನ್ನಾ ಎಂಬ ಲ್ಯಾಟಿನ್ ಪದದಿಂದ ಬಂದಿದೆ. ಪೆನ್ನಾ ಎಂದರೆ ಗರಿ ಎಂದರ್ಥ. ಪಕ್ಷಿಯ ಗರಿಗಳಿಂದ ಬರವಣಿಗೆ ಆರಂಭಗೊಂಡಿತೆನ್ನುವುದರಿಂದಲೆ ಈ ಶಬ್ದ ಬಳಕೆಗೆ ಬಂತು.

•

ರಾಕೆಟ್ಟುಗಳು ಭಾರತಕ್ಕೆ ಹೊಸತೇನಲ್ಲ. ೧೭೮೫ರಲ್ಲಿ ಹೈದರಾಲಿಯೂ ೧೭೯೯ರಲ್ಲಿ ಟಿಪ್ಪುಸುಲ್ತಾನನೂ ರಾಕೆಟ್‌ಗಳನ್ನು ತಯಾರಿಸಿ ಬ್ರಿಟಿಶ್ ಸೈನ್ಯದ ಮೇಲೆ ಪ್ರಯೋಗಿಸಿದ್ದರು ಎನ್ನುವುದಕೆ ಐತಿಹಾಸಿಕ ದಾಖಲೆಗಳಿವೆ.



ಒಂದು ಅ-ನೀತಿ ಕಥೆ

ಪಾ ವೆಂ

ಕ್ರಿಸ್ತುದಾಸ ಪಾದ್ರಿಗಳ ಹೆಸರು ಕೇಳದವರು ಸುತ್ತಮುತ್ತಲ ಹತ್ತೂರಿನಲ್ಲಿ ಯಾರೂ ಸಿಗರು. ಕಿರಿಸ್ತಾನರು ಅವರನ್ನು ದೇವರೇ ಕಳಿಸಿದ ದೂತ ಅಂತ ಎಣಿಸುವರು. ನರಕುರಿಗಳನ್ನು ದಾರಿ ತಪ್ಪದ ಹಾಗೆ ಕಾಯುವುದಕ್ಕೆ ಬಂದ ಕುರುಬ ಅವರು ಎಂದು ಮುದುಕರು ಹೇಳುವರು. ಅವರನ್ನು ಹೊಗಳುವವರು ಕಿರಿಸ್ತಾನರು ಮಾತ್ರ ಅಲ್ಲ. ಹಿಂದುಗಳೂ ಅವರನ್ನು ಮಹಾ ಪುಣ್ಯಾತ್ಮ ಎಂದು ತಿಳಿದುಕೊಂಡಿದ್ದಾರೆ. ಕ್ರಿಸ್ತುದಾಸರನ್ನೇ ಕೇಳಿದರೆ ಅವರು "ಅಯ್ಯೋ ನಾನೆಂಥಾ ಕುರುಬ! ಲೋಕಕ್ಕೆಲ್ಲ ಇರುವವನು ಒಬ್ಬನೇ ಕುರುಬ. ಅವನೇ ಏಸು ಕ್ರಿಸ್ತ. ನಾವೆಲ್ಲರೂ ಅವನ ಕುರಿಗಳು. ಇನ್ನು ಪುಣ್ಯಾತ್ಮ ಅನ್ನುತ್ತೀರಾ? ನಮ್ಮ ಕ್ರಿಸ್ತ ಧರ್ಮದಲ್ಲಿ ಪುಣ್ಯ ಅನ್ನುವುದೇ ಇಲ್ಲ. ಜನಗಳಿಗೆ ಒಳ್ಳೇದು ಮಾಡುವುದು ಲೋಕದಲ್ಲಿ ಹುಟ್ಟಿದ ನರಮನುಷ್ಯನ ಕರ್ತವ್ಯ. ಅದು ದೇವರ ಅಪ್ಪಣೆ. ಒಳ್ಳೇದು ಮಾಡಿದವನಿಗೆ ಪುಣ್ಯ ಅನ್ನುವ ಬೇರೆ ಸಂಬಳ ಇಲ್ಲ. ಒಳ್ಳೇದು ಮಾಡದಿದ್ದರೆ ಪಾಪ ಬರುತ್ತದೆ. ಕೆಟ್ಟದು ಮಾಡಿದರೆ ಮಹಾಪಾಪ ಬರುತ್ತದೆ. ನಾನು ನರಮನುಷ್ಯನು ಮಾಡಬೇಕಾದ ಕೆಲಸವನ್ನು ಮಾತ್ರ ನನಗೆ ತಿಳಿದಷ್ಟು ಮಾಡುತ್ತೇನೆ. ಮಹಾ ಕುರುಬನಾದ ಏಸು ನನಗೆ ತೋರಿಸಿದ ದಾರಿಯಲ್ಲಿ ನಡೆಯುವ ಪ್ರಯತ್ನ ಮಾಡುತ್ತೇನೆ," ಎಂದು ಹೇಳಿ ಆ ದೇವರಿಗೆ ಕೈ ಮುಗಿಯುವರು. ಅವರ ಎರಡೂ ಕಣ್ಣುಗಳಲ್ಲಿ ಯಾವಾಗಲೂ ಕರುಣೆಯ ತಿಂಗಳು ಬೆಳಕು ಸುರಿಯುತ್ತಿರುವುದು. ಪಾಪಿಷ್ಠರನ್ನು ಕಂಡರೆ ಆ ಕರುಣೆ ಹುಣ್ಣಿಮೆಯ ತಿಂಗಳು ಬೆಳಕಿನಂತೆ ದಟ್ಟವಾಗುವುದು. ಅವರ ಸಹಾಯ, ಉಪದೇಶ ಪಡೆದು ಎಷ್ಟೋ ಕಳ್ಳರು ಸಜ್ಜನರಾಗಿದ್ದಾರೆ. ಪಾಪಿಗಳು ಒಳ್ಳೆಯವರಾಗಿದ್ದಾರೆ. ದೇವರಿಲ್ಲ ಎನ್ನುವವರು ಭಕ್ತರಾಗಿದ್ದಾರೆ.

ಆದರೆ ಕ್ರಿಸ್ತುದಾಸರ ಮನಸಿನ ಮೇಲೆ ಒಂದು ಭಾರಿ ಭಾರ ಉಂಟು. ಅವರ ಇಗರ್ಜಿಯ ನೆರೆಯಲ್ಲೇ ಜಸ್ಟಿಂ ಫ್ರೋಯರ್ ಎಂಬೊಬ್ಬ ಇದ್ದಾನೆ. ಅವನಿಗೆ ಮಾತ್ರ ಪಾದ್ರಿಗಳ ಯಾವ ಉಪದೇಶವೂ ನಾಟಿಲ್ಲ. ಅವನು ಶುದ್ಧ ನಾಸ್ತಿಕ. ಬುದ್ಧಿ ತಿಳಿದ ನಂತರ ಅವನು ಒಮ್ಮೆಯೂ, ರವಿವಾರ ಕೂಡ, ಇಗರ್ಜಿಗೆ ಬಂದವನಲ್ಲ. ಹಾಗೆ ಕೇಳಿದರೆ ಮನುಷ್ಯ ಅಂಥಾ ಕೆಟ್ಟವನಲ್ಲ. ಅಕ್ಕತ್ತಲವರಿಗೆ ಕೈಲಾದ ಸಹಾಯ ಮಾಡುವವನು. ಆದರೆ ದೇವರು ಇಲ್ಲ: ಸ್ವರ್ಗ ನರಕ ಸುಳ್ಳು—ಹೀಗೆಲ್ಲ ಬೊಗಳಿ ಮಾತಾಡುವ ಚಟ ಅವನಿಗೆ. ಒಂದೊಂದು ಆದಿತ್ಯವಾರ ಕ್ರಿಸ್ತುದಾಸ ಪಾದ್ರಿಗಳು ಇಗರ್ಜಿಯ ಒಳಗೆ ಉಪ

ಈ ಕಥೆಯು ಸ್ಥೂಲ ರೇಖೆಗಳನ್ನು ನಲವತ್ತೈದು ವರ್ಷಗಳ ಹಿಂದೆ ನನ್ನ ಯಜಮಾನರಾಗಿದ್ದ (ದಿವಂಗತ) ಶ್ರೀನಿವಾಸ ಉಪಾಧ್ಯಾಯ ಪಣಿಯಾಡಿಯವರು ನನಗೆ ಹೇಳಿದ್ದರು. ಅಮೇರಿಕದಲ್ಲಿ ವಿವೇಕಾನಂದರು ಈ ಕಥೆಯನ್ನು ಹುಟ್ಟಿಸಿ ಹೇಳಿದ್ದೆಂದು ಪಣಿಯಾಡಿ ನನಗೆ ಹೇಳಿದ್ದರೂ ಇದಕ್ಕೆ ನಿಜವಾಗಿ ಆ ಅಥವಾ ಬೇರೆ ಮೂಲ ಉಂಟೋ ಸ್ವತಃ ಪಣಿಯಾಡಿಯವರೇ ಅದನ್ನು ಹುಟ್ಟಿಸಿದರೊ ನಾನರಿಯೆ. ಪಣಿಯಾಡಿಯವರು ತುಳು ಭಾಷಾಭಿಮಾನಿಗಳು, ಅದಕ್ಕಾಗಿ ತುಂಬಾ ಕೆಲಸ ಮಾಡಿದವರು. ಅದರಿಂದ ಮೊದಲು ಇದನ್ನು ತುಳುವಿನಲ್ಲಿ ಬರೆದೆ. ಅದರ ಕನ್ನಡ ತರ್ಜುಮೆ ಇದು. —ಪಾ. ವೆಂ. ಆಚಾರ್ಯ

ದೇಶ ಮಾಡುವಾಗ ಬಸ್ತ್ಯಾಂ ಫ್ರೊಯರ್ ಹೊರಗೆ ಹತ್ತು ಪೋಲಿ ಹುಡುಗರನ್ನು ಕೂಡಿಸಿ, ಹರಕು ದೇವದಾರದ ಪೆಟ್ಟಿಗೆಯ ಮೇಲೆ ನಿಂತುಕೊಂಡು ಕೈಯೆತ್ತಿ ತಾನೂ ಉಪದೇಶ ಶುರು ಮಾಡುವ. ಪಾದ್ರಿಗಳು "ಓ ಕುರಿಜನಗಳೇ, ನಿಮಗೆ ಬುದ್ಧಿ ಇಲ್ಲ!" ಎನ್ನುತ್ತಿರುವಾಗ ಫ್ರೊಯರ್‌ನೂ "ಓ ಕುರಿಜನಗಳೇ, ನಿಮಗೆ ಬುದ್ಧಿ ಇಲ್ಲ!" ಎನ್ನುವ. ಅವರು "ಕ್ರಿಸ್ತನನ್ನು ನಂಬಿರಿ! ದೇವರನ್ನು ನೆನೆಯಿರಿ!" ಎನ್ನುತ್ತಿರುವಾಗ ಇವನು "ದೇವರನ್ನು ನಂಬಬೇಡಿ, ನಿಮ್ಮನ್ನೇ ನಂಬಿಕೊಳ್ಳಿರಿ! ಯಾವ ದೇವರೂ ನಿಮಗೆ ದಿನದ ರೊಟ್ಟಿ ಕೊಡಲಾರ; ನಿಮ್ಮ ರಟ್ಟೆ ಕೊಟ್ಟೀತು! ನಿಮ್ಮ ಕೈಗಳು ಕೊಟ್ಟಾವು!" ಎಂದು ಬಾಯಿ ಮಾಡಿ ಕೂಗುವ. ಅವನ ಮಾತು ಕೇಳುವುದಕ್ಕೆ ಕೆಲ ಬಿಸಿ ನೆತ್ತರ ಜವ್ವನಿಗರು ಸೇರುವುದು ನೋಡಿ ಕ್ರಿಸ್ತದಾಸರಿಗೆ ತಾಳಲಾರದ ದುಃಖ ಆಗುವುದು.

"ದೇವರೇ, ಈ ಮನುಷ್ಯನಿಗೆ ಒಳ್ಳೇ ಬುದ್ಧಿ ಕೊಡು!" ಎಂದು ಕ್ರಿಸ್ತದಾಸರು ದಿನಾ ರಾತ್ರಿ ಮಲಗುವಾಗ ಪ್ರಾರ್ಥನೆ ಮಾಡುವರು. ಎಷ್ಟೋ ಸಲ ಅವರು ಫ್ರೊಯರ್‌ನ ಮನೆಗೂ ಹೋದದ್ದುಂಟು. ಅವನು ಅವರನ್ನು ಕೂಡಿಸಿಕೊಂಡು, "ಏನು ಪಾದ್ರಿಗಳೇ, ಏನು ಈ ಪಾಪಿಯ ಮನೆಗೆ ಸವಾರಿ ಬಿಟ್ಟಿರಿ? ನನ್ನಲ್ಲಿಗೆ ಬಂದರೆ ಕಡೆಗೆ ನೀವೂ ನರಕಕ್ಕೆ ಹೋಗಬೇಕಾದೀತು ನೋಡಿಕೊಳ್ಳಿ!" ಎಂದು ತಮಾಷೆ ಮಾಡುವ.

"ಫ್ರೊಯರ್, ನಿನ್ನದು ಮತ್ತದೇ ಹಟ. ನೀನು ದೇವರನ್ನೊಂದು ನಂಬಿದರೆ ನಿನಗೆ ಸ್ವರ್ಗದ ಬಾಗಿಲು ಖಂಡಿತ ತೆರೆಯುವುದು. ನೀನು ದೇವರಿಲ್ಲವೆಂದು ಯಾಕೆ ಹೇಳುವಿ? ದೇವರು ಇಲ್ಲದಿದ್ದರೆ ಲೋಕದಲ್ಲಿ ಮನುಷ್ಯನಿಗೆ ಏನು ಅರ್ಥ ಇದ್ದೀತು? ಒಳ್ಳೇದು-ಕೆಟ್ಟದ್ದಕ್ಕೆ ಏನು ಬೆಲೆ ಇದ್ದೀತು? ಮನುಷ್ಯನ ಮನಸ್ಸಿಗೆ ಮೊಗುದಾರ ಎಲ್ಲಿದ್ದೀತು? ಮನುಷ್ಯ ಎನ್ನುವವ ಬಹಳ ಬಲವಿಲ್ಲದ ಪ್ರಾಣಿಯಲ್ಲವೆ? ದೇವರೇ ಅವನಿಗೆ ಬಲವಲ್ಲವೆ? ದೇವರು ಇಲ್ಲದಿದ್ದರೆ ಬಲವಿಲ್ಲದವನ ತಲೆ ಕಾಯುವವರು ಯಾರು?" ಎಂದು ವಾದಿಸುವರು.

ಫ್ರೊಯರ್ ಹೋಹೋ ಎಂದು ನಗುವ. "ಪಾದ್ರಿಗಳೇ, ನನಗೆ ನಿಮ್ಮ ಸ್ವರ್ಗ ಬೇಡ. ದೇವರನ್ನು ಕೈ ಬಿಟ್ಟರೆ ಮನುಷ್ಯಪ್ರಾಣಿ ಈ ಲೋಕವನ್ನೇ ಸ್ವರ್ಗ ಮಾಡಬಲ್ಲ. ನಿಮ್ಮ ದೇವರು ಈ ಲೋಕದಲ್ಲಿ ಒಳಿತು-ಕೆಡುಕು ಯಾಕೆ ಇಟ್ಟನಾನೆ? ರಾತ್ರಿ ಪಾಪ ಮಾಡಿ ಬೆಳಗ್ಗೆ ದೇವರೊಡನೆ ಕ್ಷಮೆ ಕೇಳಿ, ರಾತ್ರಿ ಮತ್ತೆ ಪಾಪ ಮಾಡಲಿಕ್ಕೆ ನೀವು ಜನರಿಗೆ ಪ್ರೋತ್ಸಾಹ ಕೊಡುತ್ತೀರಲ್ಲ. ಮನುಷ್ಯ ತನಗೆ ತಾನು ಜವಾಬ್ದಾರನಾಗಿ ತನ್ನ ಮೊಗುದಾರ ತಾನು ಹಿಡಿಯಲಿಕ್ಕೆ ಕಲಿತರೆ ದೇವರು ಯಾಕೆ? ಕಲಿಯದಿದ್ದರೆ ದೇವರು ಇದ್ದೂ ಏನು ಲಾಭ? ನಿಮಗೆ ಬುದ್ಧಿಯಿಲ್ಲ ಪಾದ್ರಿಗಳೇ. ಮನುಷ್ಯ ತನ್ನ ಅಂಗಳದ ಕಸ ಹೊಲಸು ತಾನು ಗುಡಿಸಿ ತೆಗೆಯಬೇಕು. ದೇವರನ್ನು ನಂಬಿ ಕೂತರೆ ಅವನ ಬೆನ್ನ ಕೊಳೆ ಎಂದೂ ನೆಟ್ಟಗಾಗದು. ಅದು ನೆಟ್ಟಗಾಗದೆ ಅವನಿಗೆ ಗತಿ ಇಲ್ಲ!" ಎಂದು ಫ್ರೊಯರ್ ಅವರ ಬಾಯಿ ಮುಚ್ಚಿಸಿ, ಒಂದು ಕಪ್ಪು ಬಿಸಿ ಕಾಫಿ ಕೊಟ್ಟು "ಪೀನಾ ಪಾದ್ರಿಗಳೇ, ನಿಮ್ಮ ನರಕದಲ್ಲಿ ಕಾಫಿ ಸಿಗುತ್ತದಲ್ಲ? ಅದು ಇಲ್ಲದಿದ್ದರೆ ನಾನು ಇಲ್ಲಿಂದ ಓಡಿಯೇ ಹೋದೇನು!" ಎನ್ನುವ. ಪಾದ್ರಿಗಳು ಇಗರ್ಜಿಗೆ ತಿರುಗಿ ಬಂದು, ವೇದಿಕೆಯ ಮುಂದೆ ಮೊಣಕಾಲೂರಿ, ಕ್ರೂಜಿಯ ಗುರುತು ಮಾಡಿ, "ದೇವರೇ, ಈ ಮನುಷ್ಯನ ಮಾತಿನ ಹೊಂಡದಲ್ಲಿ ನಾನೇ ಜಾರಿ ಬೀಳದಂತೆ ಕಾಪಾಡಪ್ಪಾ!" ಎಂದು ಪ್ರಾರ್ಥನೆ ಮಾಡುವರು.

ಹೀಗಿರುತ್ತಾ ಒಂದು ದಿನ ಒಂದು ಸುದ್ದಿ ಕೇಳಿ ಪಾದ್ರಿಗಳಿಗೆ ಸಿಡಿಲು ಬಡಿದ ಹಾಗಾಯಿತು. ಬಸ್ತ್ಯಾಂ ಫ್ರೊಯರ್ ಆವೊತ್ತು ಬೆಳಗು ಮುಂಜಾನೆ ಥಟ್ಟನೆ ಬಿದ್ದು ಥಟ್ಟನೆ ಜೀವ ಬಿಟ್ಟನಂತೆ. "ಅಯ್ಯೋ ದೇವರೇ! ಅವನು ಸಾಯುವುದು ನನಗೆ ತಿಳಿಯದೆ ಹೋಯಿತಲ್ಲ. ಗೊತ್ತಾಗಿದ್ದರೆ ಅವನು ಕೊನೆಯ ಶ್ವಾಸ ಎಳೆಯುವಾಗಲಾದರೂ ಹೋಗಿ ಉಪದೇಶ ಕೊಟ್ಟು ಪವಿತ್ರ ಜಲ ಪ್ರೋಕ್ಷಣೆ ಮಾಡಿ ಅವನ ಮನಸ್ಸು ಬದಲಾಯಿಸಲು ಪ್ರಯತ್ನ ಮಾಡುತ್ತಿದ್ದೆ. ಅಯ್ಯೋ! ಈ ಒಳ್ಳೇ ಮನುಷ್ಯ,

ಅನ್ಯಾಯವಾಗಿ ನರಕಕ್ಕೆ ಹೋಗುವನಲ್ಲಾ!" ಎಂದು ಪಾದ್ರಿಗಳು ಕಣ್ಣೀರು ಸುರಿಸಿದರು. ಅವ ಸರದಲ್ಲಿ ಅವನ ಮನೆಗೆ ಹೋದರು. ಅಲ್ಲಿ ಅವನ ಉಯಿಲನ್ನು ಓದುತ್ತಿದ್ದರು. "ನಾನು ಸತ್ತರೆ ನನ್ನನ್ನು ಸುಮ್ಮನೆ ಒಯ್ದು ಹುಗಿದು ಬಿಡಬೇಕು. ಯಾವ ಪಾದ್ರಿಗಳೂ ಯಾವ ಮಂತ್ರ ಓದುವುದು ಬೇಡ!" ಎಂದು ಉಯಿಲಿನಲ್ಲಿ ಅವನು ಬರೆದಿಟ್ಟದ್ದನು. ಪಾದ್ರಿಗಳು, "ಕಡೆಗೂ ಈ ಕುರಿ ನನ್ನ ಕೈ ಮೀರಿ ಸೈತಾನನೆಂಬ ತೋಳನ ಬಾಯಿಗೆ ಬಿತ್ತಲ್ಲಾ !" ಎಂದು ದುಃಖಿಸಿದರು.

ಬಹಳ ವರ್ಷ ಕಳೆಯಿತು. ಪಾದ್ರಿಗಳ ಉಪದೇಶದಿಂದ ಸುತ್ತ ಮುತ್ತ ಒಬ್ಬ ನಾಸ್ತಿಕನೂ ಇಲ್ಲದಂತಾಯಿತು. ಒಂದು ದಿನ ಪಾದ್ರಿಗಳಿಗೂ ದೇವರ ಕರೆ ಬಂತು. ಸಾಯುವಾಗ ಅವರ ಮನಸ್ಸಿನ ಒಂದು ಮಗ್ಗುಲಲ್ಲಿ ಬಸ್ತ್ಯಾಂ ಪೊರ್ಬುವನ್ನು ತಾನು ಬಚಾವು ಮಾಡದೆ ಹೋದೆನಲ್ಲಾ ಅನ್ನುವ ನೋವು ಉಳಿದೇ ಇತ್ತು.

ಕ್ರಿಸ್ತುದಾಸರನ್ನು ಸೀದಾ ಸ್ವರ್ಗಕ್ಕೆ ಕರೆದುಕೊಂಡು ಹೋದರು. ಬಾಗಿಲಲ್ಲಿ ಸಂತ ಪೇತ್ರರು ಅವರಿಗೆ ಸ್ವಾಗತ ಮಾಡಿದರು. ಆದರೆ ಪಾದ್ರಿಗಳು ಮೊದಲು ಪೇತ್ರರಿಗೆ "ಸಂತರೇ, ನನ್ನ ಒಂದು ಆಸೆ ಉಂಟು. ಬಸ್ತ್ಯಾಂ ಪೊರ್ಬು ಅಂಬುವ ನನ್ನ ನೆರೆಮನೆಯವನೊಬ್ಬ ಬುದ್ಧಿ ಸಾಲದೆ ನಮ್ಮ ದೇವರನ್ನು ನಂಬದೆ ನರಕಕ್ಕೆ ಹೋಗಿದ್ದಾನೆ. ನರಕದಲ್ಲಾದರೂ ಅವನನ್ನು ಇನ್ನೊಮ್ಮೆ ಕಂಡು ಅವನ ಮನಸ್ಸನ್ನು ನಮ್ಮ ದೇವರ ಕಡೆಗೆ ತಿರುಗಿಸುವ ಕಡೇ ಪ್ರಯತ್ನ ಮಾಡಬೇಕೆಂದಿದೆ. ಅದಕ್ಕೆ ತಮ್ಮ ಅಪ್ಪಣೆ ಬೇಕು" ಎಂದರು. ಸಂತ ಪೇತ್ರರಿಗೆ ಸೋಜಿಗವಾಯಿತು. ಸ್ವಲ್ಪ ನಗುವೂ ಬಂತು. "ಆಗಲಿ, ನೀವು ಭೂಲೋಕದಲ್ಲಿ ನಮ್ಮ ದೇವರಿಗಾಗಿ ಬಹಳ ಕೆಲಸ ಮಾಡಿದ್ದೀರಿ. ನಿಮ್ಮ ಕೊನೆಯ ಆಸೆಗೆ ನಾನು ಅಡ್ಡ ಬರಲಾರೆ. ಹೋಗಿಬನ್ನಿ" ಎಂದು ಒಬ್ಬ ದೂತನನ್ನು ಜತೆ ಮಾಡಿ ಕ್ರಿಸ್ತುದಾಸರನ್ನು ನರಕಕ್ಕೆ ಕಳಿಸಿದರು.


ಕ್ರಿಸ್ತುದಾಸರು ನರಕಕ್ಕೆ ಹೋದರು. ಹೊರಗಿನ ಆವರಣದಲ್ಲಿ ಬಹಳ ಪುರಾತನ ಕಾಲದ ಒಳ್ಳೆ ಆತ್ಮಗಳು ನರಕವನ್ನು ಭೋಗಿಸುತ್ತಾ ಇರುವುದನ್ನು ಕಂಡರು. ಆದರೆ ಅವರಿಗೆ ನರಕದ ಅಧಿಕಾರಿಗಳು ಕಡು ದಂಡನೆಗಳನ್ನು ಕೊಡುತ್ತಿರಲಿಲ್ಲ. ಕ್ರಿಸ್ತ ದೇವರು ಹುಟ್ಟುವ ಮುಂಚೆ ಭೂಮಿಯಲ್ಲಿ ಹುಟ್ಟಿ ಸತ್ತದ್ದರಿಂದ ಸತ್ಯ ಧರ್ಮವನ್ನು ಸೇರಿ ಬಚಾವಾಗುವುದಕ್ಕೆ ಆಸ್ಪದವೇ ಸಿಗದೆ ನರಕದ ಹೊರ ಮಗ್ಗುಲಲ್ಲಾದರೂ ಇರುವ ಅವಸ್ಥೆ ಅವರಿಗೆ ಒದಗಿತ್ತು. ಪಾಪ, ಏನು ಮಾಡುವುದು? ಇವರು ಹುಟ್ಟಲು ಸಾಯಲು ಅವಸರ ಮಾಡಿ ಕೆಟ್ಟರು ಎಂದು ಪಾದ್ರಿಗಳಿಗೆ ತೋರಿತು. ಆದರೆ ಅವರಿಗೆ ಬಸ್ತ್ಯಾಂ ಪೊರ್ಬುವಿನದೇ ಧ್ಯಾನ. ಅವರಿಗೆ ನರಕಾಧಿಕಾರಿಗಳು ಒದಗಿಸಿದ ಮಾರ್ಗದರ್ಶಕನು, ದಾಖಲೆಗಳನ್ನು ತಿರುವಿ ಹಾಕಿ, "ಅಯ್ಯೊ ಪಾದ್ರಿಗಳೇ, ನಿಮಗೆ ಆತನ ಗೋಜು ಯಾಕೆ? ಅವನು ಅತಿ ಕೆಳಗಿನ ಅತಿ ಭಯಂಕರ ನರಕದಲ್ಲಿ ದಾಖಲಾಗಿ ಸುಮಾರು ವರ್ಷವಾಯಿತು. ಅಷ್ಟು ಕೆಟ್ಟ ನರಕವೇ ಬೇರೆ ಇಲ್ಲ. ನಾವು ಯಾರೂ ಆ ಕಡೆಗೆ ಹೋಗುವುದು ಬಹಳ ಕಮ್ಮಿ. ಪೊರ್ಬುವನ್ನು ಅಲ್ಲಿಗೆ ತಳ್ಳಿದ ಮೇಲೆ ಅಲ್ಲಿಗೆ ಹೋದ ಮನುಷ್ಯರು ಇಲ್ಲವೆಂದೇ ಹೇಳಬಹುದು. ದೇವರೇ ಇಲ್ಲ ಅಂತ ಕಡೇ ತನಕ ಸಾಧನೆ ಮಾಡಿದ ಪಾಪಿಗಳು ಬಹಳ ಕಡಿಮೆ, ತಿಳಿಯಿತೆ?" ಎಂದು ವಿವರಿಸಿದನು. ಪಾದ್ರಿಗಳು ಹಟ ಬಿಡಲಿಲ್ಲ. ಹಾಗಾದರೆ ನಿಮ್ಮಿಷ್ಟ ಎಂದು ಅವನು ಅವರನ್ನು ಕರೆದುಕೊಂಡು ಹೊರಟನು.

ಒಳ ಒಳಗಿನ ಕೆಳ ಕೆಳಗಿನ ಸುತ್ತುಗಳಿಗೆ ಹೋದಂತೆ ಘೋರ ಸನ್ನಿವೇಶಗಳನ್ನು ಪಾದ್ರಿಗಳು ಕಂಡರು. ದುರ್ನಾತದಲ್ಲಿ ಮೂಗು ಬಿಡುಮುಕೊಂಡು ಇರಬೇಕ್ಕೇ ಆಗದು ಹಸ್ಸುವ ಹಾಗಾಯಿತು. ಎಲ್ಲ ಕಡೆ ಉರಿಯುವ ಬೆಂಕಿಯಿಂದ ಸೆಕೆ ತಾಳದಂತಾಯಿತು. ಕಲ್ಲು ಮುಳ್ಳುಗಳು ದಾರಿಯನ್ನು ದುರ್ಗಮವಾಗಿ ಮಾಡಿದ್ದವು. ಪಾದ್ರಿಗಳ ಮೈ ಬೆವರಿತು. ಪಾದಗಳಲ್ಲಿ ರಕ್ತ ಸೋರಿತು. ಮೂಗು ಒತ್ತಿ ಹಿಡಿದು ಮುಂದುವರಿದರು. ಇನ್ನೂ ಕೆಳಗೆ ಒಳಗೆ ಹೋದರೆ ಕಗ್ಗತ್ತಲೆ ಕವರಿತ್ತು. ಆದರೆ

ಶಾಖ ಮಾತ್ರ ಅಸಾಧ್ಯವಾಗುತ್ತಿತ್ತು. ಯಾಕೆಂದರೆ ಹಿಂದಿನ ನರಕಗಳಲ್ಲಿದ್ದ ಹಾಗೆ ಅಷ್ಟು ಕೆಂಪು. ಹಳದಿ. ಅಥವಾ ಬಿಳಿ ಬೆಂಕಿ ಉರಿಯದೆ ಕಪ್ಪು ಬೆಂಕಿ ಉರಿಯುತ್ತದೆಂದು ಮಾರ್ಗದರ್ಶಕನು ವಿವರಿಸಿದನು. ನರಕವಾಸಿ ಆತ್ಮಗಳು ತಾಳಲಾರದೆ ಆರ್ತನಾದ ಮಾಡುವುದು ಕೇಳಿಸುತ್ತಿತ್ತೇ ಹೊರತು ಕಾಣಿಸುತ್ತಿರಲಿಲ್ಲ. ಪಾದ್ರಿಗಳ ಸಂಗಡ ಬಂದ ದೂತ. "ಇನ್ನು ಸಾಕು ಪಾದ್ರಿಗಳೇ, ವಾಪಸು ಹೋಗುವ. ಇಲ್ಲೇ ಇರುವ ನನಗೇ ತಡೆದುಕೊಳ್ಳುವುದು ಕಷ್ಟವಾಗುತ್ತದೆ. ನೀವು ಹೇಗೆ ಸಹಿಸುತ್ತೀರಿ!" ಎಂದು ಹೇಳಿಕೊಂಡನು. ಆದರೆ ಕ್ರಿಸ್ತುದಾಸರ ಮನಸ್ಸು ದೃಢವಾಗಿತ್ತು.

ಕೆಲವು ಫರ್ಲಾಂಗ್ ಮುಂದೆ ಹೋದಾಗ ಮಾತ್ರ ಆ ನರಕದ ಮಾರ್ಗದರ್ಶಿಗೇ ಭಾರೀ ಆಶ್ಚರ್ಯವಾಗತೊಡಗಿತು. ದುರ್ನಾತ ಕಮ್ಮಿಯಾಯಿತು. ಮಸುಕುಮಸುಕು ಬೆಳಕು ಕಾಣಿಸಿದಂತಾಯಿತು. ಸೆಕೆ ಹೋಗಿ ತಂಪು ಹವೆ ಬಂತು. ಇನ್ನೂ ಮುಂದೆ ಹೋದರೆ ಗುಲಾಬಿ ವಾಸನೆ ಮೂಗಿಗೆ ತಟ್ಟಿತು. ಮತ್ತೂ ಮುಂದೆ ರಸ್ತೆಗಳು ಅಗಲವಾಗಿ ಸ್ವಚ್ಛವಾಗಿ ಎರಡೂ ಕಡೆ ಹೂ ಬಿಡುವ ಸಾಲು ಮರಗಳು. ಎರಡೂ ಕಡೆ ಇಲೆಕ್ಟ್ರಿಕ್ ದೀಪಗಳು. ಅನಂತರ ಕಂಪೌಂಡುಗಳು. ಹೂತೋಟಗಳು, ಅಚ್ಚುಕಟ್ಟಾದ ಮನೆ ಮಠಗಳು. ಎಲ್ಲಿಂದಲೋ ಪಿಟೀಲುಗಳು, ಗಿತಾರುಗಳು. ಪಿಯಾನೋಗಳ ವೃಂದಗೀತಗಳು. ಹೋ! ಇದು ಮೊತ್ಸಾರ್ಟ್, ಇದು ಬಾಕ್, ಇದು ವಾಗ್ನರ್ ಎಂದು ಪಾದ್ರಿಗಳು ಸಂಗೀತವನ್ನು ಗುರುತಿಸಿದರು. ಪಾರ್ಕುಗಳಲ್ಲಿ ಚಂದ ಚಂದದ ಹೆಣ್ಣು ಗಂಡು ವಿಹರಿಸುವುದನ್ನು ಕಂಡರು.

ದೂತನೂ ಪಾದ್ರಿಗಳೂ ಇದನ್ನೆಲ್ಲ



ನೋಡುತ್ತ ಸಾಗಿದ್ದಾಗ ಎದುರಿಗೆ ದೂತನ ಪರಿಚಯದ ನರಕದ ಜವಾನನೊಬ್ಬ ಬರುತ್ತಿದ್ದ. ದೂತ. "ಏನು ಮಾರಾಯ! ಇದು ಕಟ್ಟಕಡೆಯ ನರಕ ಹೌದೋ ಅಲ್ಲವೋ? ಇಲ್ಲಿ ಸ್ವರ್ಗದಲ್ಲಿಯೂ ತೋರದ ಆನಂದದ ಸುಖ ಸೌಕರ್ಯ ಹೇಗೆ ಬಂತು?" ಎಂದು ವಿಚಾರಿಸಿದ.

"ಅವರ ಕತೆ ಕೇಳುತ್ತೀಯಾ ಮಾರಾಯ? ಸುಮಾರು ವರ್ಷ ಆಯಿತು. ಭೂಲೋಕದಿಂದ ಬಸ್ತ್ಯಾಂ ಪ್ರೊಯರ್ನ ಅನ್ನುವ ಒಬ್ಬ ಮನುಷ್ಯನನ್ನು ಎಳಕೊಂಡು ಬಂದು ಇಲ್ಲಿ ತಳ್ಳಿದರು. ಅವನು ಬಂದವನೇ, "ಇಶ್ಶಿಶ್ಶಿ ಇದೆಂಥ ಗಲೀಜು! ಇಲ್ಲಿರುವ ಯಾರಿಗೂ ಮೂಗು ಅನ್ನೋದು ಇಲ್ಲವೇ! ಕೈಕಾಲು ಇಲ್ಲವೇ! ಇದನ್ನೆಲ್ಲ ತಡೆದುಕೊಂಡು ಯಾಕೆ ಕೂತಿದ್ದೀರಿ? ಬನ್ನಿ. ನಾನು ಹೇಳುವುದು ಕೇಳಿರಿ," ಎಂದು ನರಕದ ಪಾಪಿಗಳನ್ನೆಲ್ಲ ಒಟ್ಟು ಮಾಡಿದನು. ಹಾರೆ. ಗುದ್ದಲಿ. ಬುಟ್ಟಿ. ಹಿಡಿಗೆ ತಂದರು. ಕಸ ಕೊಳಕು ಗೋರಿದರು. ದೂರ ಒಯ್ದು ರಾಶಿ ಹಾಕಿದರು. ನರಕದಲ್ಲಿ ಬೆಂಕಿಗೇನು ಕಮ್ಮಿಯೆ? ಬೆಂಕಿ ಹಚ್ಚಿ ಸುಟ್ಟರು. ಆ ಮೇಲೆ ನೆಲ ಸಮ ಹಸನು ಮಾಡುವುದು ಸುರು. ಹೆಣ್ಣು ಗಂಡು ಹಿಡಿದ ಎಲ್ಲರೂ ಪ್ರೊಯರ್ನ ಮಾತು ಕೇಳಿ ದೆವ್ವ ಹಿಡಿದವರ ಹಾಗೆ ಗೆಯ್ದರು. ಹಗಲು ರಾತ್ರಿ ಒಂದು ಮಾಡಿದರು. ರಸ್ತೆ ಕಡಿದರು. ಮನೆ ಕಟ್ಟಿದರು. ತೋಟ ಬೆಳೆಸಿದರು. ಮರ ನೆಟ್ಟರು. ಬಾವಿ ತೋಡಿದರು. ಅದಕ್ಕೆ ಏನೋ ಪಂಪು ಅಂತೆ. ಅದನ್ನು ಜೋಡಿಸಿದರು. ಏನೇನೋ ಯಂತ್ರ ಅಂತೆ ಅವುಗಳನ್ನು ತಯಾರು ಮಾಡಿ. ಇಲೆಕ್ಟ್ರಿಕ್ ದೀಪವಂತೆ, ಅದನ್ನು ಹಾಕಿ ಕತ್ತಲೆಯನ್ನು ಹೋಗಲಿಸಿದರು. ಈಗ ಅವರಿಗೆ ಹೆಚ್ಚು ಕೆಲಸ ಇಲ್ಲ. ಪಿಟೀಲು, ಗಿಟಾರ್. ಹಾರ್ಪ್, ಪಿಯಾನೊ ಅಂತ ಏನೇನೋ ಸದ್ದು ಮಾಡುವ ತಂತಿಯ, ಗಾಳಿಯ. ಚರ್ಮದ ಸಾಮಾನು ತಯಾರಿಸಿ ಹಾಡುತ್ತ ಕುಣಿಯುತ್ತ......"

ಹೇಳುತ್ತ ಹೋದಂತೆ ಪಾದ್ರಿಗಳ ಸಿಟ್ಟು ಮೂಗಿಗೇರಿತು. ಅಷ್ಟರಲ್ಲೇ ಎದುರಲ್ಲಿ ಯಾರು ಬರಬೇಕು ಅಂತೀರಿ! ಸ್ವತಃ ಬಸ್ತ್ಯಾಂ ಪ್ರೊಯರ್ನ್! "ಆರೆರೇ ಕ್ರಿಸ್ತದಾಸ ಪಾದ್ರಿಗಳು! ನಮಸ್ಕಾರ! ನಮಸ್ಕಾರ! ಈ ನರಕದಲ್ಲಿ ನೀವು ಹೇಗೆ! ಛೇಛೇ ಎಂಥದ ಘಟನೆ. ಬನ್ನಿ, ಬನ್ನಿ!" ಎಂದು ಕೈ ಹಿಡಿದು ಬಂದು ಮನೆಯೊಳಗೆ ಅವರನ್ನು ಕರೆದುಕೊಂಡು ಹೋದನು. ಗಮಗಮ ಕಾಫಿ ಬಂತು. ಪಾದ್ರಿಗಳು ವಿಸ್ಮಯಪಡುತ್ತಿದ್ದಂತೆ. "ಪಾದ್ರಿಗಳೇ ನನಗೆ ಭೂಲೋಕದಲ್ಲಿದ್ದಾಗ, ಕಾಫಿಯ ಹುಚ್ಚು ಜೋರು ಅಲ್ಲವೆ? ಅಲ್ಲಿಂದ ಬರುವಾಗ ಹೇಗೋ ಒಂದಿಷ್ಟು ಉತ್ತಮ ಕಾಫಿ ಬೀಜ ಕದ್ದು ತಪ್ಪಿಸಿ ತಂದಿದ್ದೆ. ಅದನ್ನು ಇಲ್ಲಿ ಬಿತ್ತಿ ಕಾಫಿ ತೋಟ ಮಾಡಿದೆವು. ಅದರದ್ದೇ ಕಾಫಿ ಇದು. ರುಚಿ ನೋಡಿ ಹೇಳಿ ಹೇಗಿದೆ!" ಎಂದನು.

ಕ್ರಿಸ್ತದಾಸ ಪಾದ್ರಿಗಳು ಕಾಫಿ ಕುಡಿದರು. ನರಕದ್ದೇ ಆದರೂ ದಿವ್ಯವಾಗಿತ್ತು ಅನ್ನದೆ ನಿರ್ವಾಹವಿರಲಿಲ್ಲ. ಗುಣಕ್ಕೆ ಮತ್ಸರವೆ?

ಹೊರಡುವಾಗ ಪಾದ್ರಿಗಳು ಪ್ರೊಯರ್ನನಿಗೆ ಹೇಳಿದರು. "ಪ್ರೊಯೆರ್ನ್. ನೀನು ಇದೆಲ್ಲ ಮಾಡಿದ್ದು ನನಗೆ ಸಂತೋಷವೇ. ಆದರೂ ದೇವರನ್ನು ಧಿಕ್ಕಾರ ಮಾಡಿ ಇದೆಲ್ಲ ಸಾಧಿಸಿದ್ದು ನನಗೆ ಸರಿ ಕಾಣುವುದಿಲ್ಲ."

ಹೀಗೆಂದು ಪಾದ್ರಿಗಳು ಪ್ರೊಯರ್ನನಿಗೆ ಇನ್ನಾದರೂ ಸದ್ಬುದ್ಧಿ ಕೊಡುವಂತೆ ಪ್ರಾರ್ಥನೆಗೆಂದು ಮೊಣಕಾಲು ಊರಿದರು. ಪ್ರೊಯರ್ನ ನಗುತ್ತ ಅವರ ಕೈ ಹಿಡಿದೆಬ್ಬಿಸಿ, "ಪಾದ್ರಿಗಳೇ. ಈ ನರಕದಲ್ಲಿ ಬೇರೆ ಏನು ಮಾಡಲಿಕ್ಕೂ ನಮಗೆ ಸ್ವತಂತ್ರ ಉಂಟು. ಆದರೆ ದೇವರಿಗೆ ಪ್ರಾರ್ಥನೆ ಮಾಡುವುದು ಮಾತ್ರ ಇಲ್ಲಿ ನಿಷಿದ್ಧ!" ಎಂದು ಹೇಳಿದನು. ✡



ವಸಂತದಲ್ಲೊಂದು ಶಿಶಿರಗೀತ

ಗಾಳಿ ಬೀಸುತ್ತದೆ;
ಮಾಸುತ್ತದೆ,
ಯಾರೋ ತುಳುಕಿಸಿದ ಅರಳಿದ ಮುಗುಳ್ನಗೆ
ಯಾರೋ ಅಲುಕಿಸಿದ ಹೃದಯದ ಸ್ಪಂದನ
ಹೊರ ಹೊರಳಿ ನೋಡಿದ ಮರಳದ ಚೇತನ.
ಕೊಟಿವ ಪಾಪ ಪಾಟುತ್ತದೆ:
ಆಟದ ರಭಸಕ್ಕೆ ಅದರುತ್ತದೆ. ಬದುಕು,
ಮುದುರುತ್ತದೆ
ಮಾಂದ್ಯ. ಉದುರುವ ಆಸೆಗಳ ಮಧ್ಯ
ಮರಗಟ್ಟಿದ ಜೀವದ ಸುತ್ತ
ತೆರೆಗಟ್ಟುತ್ತದೆ ವಿಶಾಲ ನೀರವ.
ಗಾಳಿ ಮತ್ತೆ ಮತ್ತೆ ಬೀಸುತ್ತದೆ;
ಗಾಳಿಗೊಳ್ಳದ ಕಾಲನ ಕಲ್ಲೆದೆ ಮಾತ್ರ
ಕೆತ್ತುತ್ತಲೇ ಹೋಗುತ್ತದೆ;
ಅಳಿದ ಬರಹದಲ್ಲಿ ಅಳಿಯದ ರೋದನ
ವಿಷಾದದ ನಿರ್ವಿಣ್ಣ್ಯದಲ್ಲಿ ನಿರರ್ಥದ ಶೋಧನ
ಅಮಾಯಕ ಬದುಕುಗಳ ನಿರಂತರ ಮಥನ.
ಗಾಳಿ ಮತ್ತೆ ಮತ್ತೆ ಬೀಸುತ್ತದೆ.

ದೇಶಪಾಂಡೆ ಸುಬ್ರಾಯ

[illegible]

ಗೀತಾ ಕುಲಕರ್ಣಿ

[illegible]



ನರ ನರಗಳಲ್ಲಿ ಮಿಂಚಿನಂತೆ ಓಡಾಡುತ್ತಿದ್ದರೂ, ಕಣ್ಣು ಕುಣಿಯುತ್ತಿದ್ದರೂ, ಬೆರಳು ಪುಟ ತೆರೆಯಲು ಆತುರಪಟ್ಟರೂ ಅವಳು ಕೈದಿಯಂತೆ ಎದುರಿಗೆ ನಿಂತಿರೋ ಕಸ್ಟಮರ್ ಜೊತೆಯಲ್ಲಿ ಗುದ್ದಾಡಬೇಕು!

ಆಶಾ ಮೆಲ್ಲನೆ ಅವಳ ತೋಳು ಚಿವುಟುತ್ತಾಳೆ. ರಶ್ಮಿ ಅಲ್ಲೇ ಆಶಾನ ತೊಡೆ ಚಿವುಟಿ, "ಏ...ಸುಮ್ಮನಿರೆ ಮಹಾಂಕಾಳಿ... ಎದುರಿಗೆ ನಿಂತಿದ್ದಾರಲ್ಲ ಒಂದಲ್ಲ...ಹತ್ತು ಯಮದೂತರು! ಅಕಾ...ಅಕಾ ಅಲ್ಲೇ ಮ್ಯಾನೇಜರ್ ಕನ್ನಡಕದಲ್ಲೇ ಕಣ್ಣುಗುಡ್ಡೆ ಹೊರಬೀಳೋ ಹಾಗೆ ಕೆಕ್ಕರಿಸಿ ನೋಡೋದು ಕಾಣೋದಿಲ್ವ? ಹಿಂದೆ ಕೂತಿರೋ ರೆಡ್ಡಿ ಈಗ ಒಂದು ಗುಡುಗಿದ್ರೆ ನೀನು, ನಿನ್ನ ಬೆಂಚಿನ ಪಾರ್ಟನರು ಆಚೆ! ಈಚೆ ನೋಡು ಪೆಟ್ಟಿನ ಸಿದ್ಧ ರಾಮ ಎದುರಿಗೇ ಸ್ಥಾಪನೆಯಾಗಿದ್ದಾನೆ... ತೆಕೋ ಅವನ ಸಿಗ್ನೇಚರ್!"

ಈ ಮುಂಡಾಸಿನ ಸಿದ್ಧರಾಮ ವಾರಕ್ಕೆರಡು ಸಾರಿಯಾದರೂ ಆಫೀಸಿಗೆ ಬಂದು ತೋರಿಸ



ದಿದ್ರೆ ಅವನಿಗೆ ನಿದ್ದೆ ಬರುವಂತೆ ಕಾಣೋದಿಲ್ಲ. ಅವನ ಹೆಬ್ಬೆಟ್ಟಿಗೆ ಇಂಕು ತಾಗಿಸಿ ಆಶಾಗೆ ಬೇಜಾರು ತರಿಸಿದ್ರೂ ಸಿದ್ಧರಾಮ ಮುಂಡಾಸನ್ನು ಹಿಂದಕ್ಕೊಮ್ಮೆ, ಮುಂದಕ್ಕೊಮ್ಮೆ ಎಳೆದಾಡಿ, ಮೀಸೆ ಹುರಿಮಾಡಿ ನಿಲ್ಲುತ್ತಾನೆ. ಆಶಾ ಯಜ್ಞಪಶುವಾಗಿ ಹೆಬ್ಬೆರಳು ಹಿಡಿಯುತ್ತಾಳೆ.

ಹೀಗೆ ಸಹೋದ್ಯೋಗಿಗಳಿಂದ ಪಾರಾಗಿ ಬಸ್ಸನ್ನೇರಿದರೆ ಅಲ್ಲೂ ಇದೇ ಮಾತು! "ಏನು ನಿಶ್ಚಯದ ಕಾರ್ಯ ಆಯ್ತು; ಇನ್ನು ಮದುವೆ ಆಗಿ ಹೋಗೋಳು. ಅಮ್ಮ, ತಮ್ಮ, ನಾವೆಲ್ಲ ಎಲ್ಲಿ ನೆನಪು? ಇನ್ನು ಉಳಿಯೋ ನೆನಪು ಕೈ ಹಿಡಿಯೋ ಮನ್ಮಥನದ್ದೇ...ಹುಡುಗ ಮಾತ್ರ ಬಂಗಾರದ ತುಣುಕು!" ಪ್ರೇಮಾ ಆಂಟಿ ಬಸ್ಸಿನಲ್ಲೇ ಕೂತು ಅಂದಾಗ ರಶ್ಮಿ ನಾಚಿಕೆಯಲ್ಲಿ ಹಿಡಿಯಾಗುತ್ತಾಳೆ.

ತಮ್ಮ ರಾಜೇಶ್ ಕಂಡ ಕ್ಷಣ ಸಿಳ್ಳು ಹೊಡೆಯುತ್ತಾನೆ. ಅದೇ ಹಾಡು "ವಿರಹಾ... ನೂರು ನೂರು ತರಹಾ..." ಈಗ ನಿಜಕ್ಕೂ ಈ ವಿರಹವೇ ಇರಬೇಕು! ಇಲ್ಲಿ...ಇಲ್ಲಿ ಸುಡುತ್ತಿದೆಯಲ್ಲ! ರಶ್ಮಿ ತನ್ನೆದೆಯನ್ನು ಮುಟ್ಟಿಕೊಳ್ಳುತ್ತಾಳೆ. ಮನಸು ಮುಟ್ಟಿರುತ್ತಾಳೆ.

ಅವಳು ಬರುವ ದಾರಿಯಲ್ಲೇ ಕಣ್ಣಿಟ್ಟ ಅಮ್ಮನ ಕಣ್ಣುಗಳಲ್ಲಿ ತಳಮಳ ಎದ್ದು ಕಾಣುತ್ತದೆ. "ಅಮ್ಮಾ...ಇಕಾ ...ನಿನ್ನಳಿಯನ ನೀಲಿ ಕಾಗ್ದ!" ಎಂದು ಕುಪ್ಪಳಿಸಿ ಹೇಳಲು ತೆರೆದಿದ್ದ ತುಟಿ ಅಲ್ಲೇ ಮುಚ್ಚಿಕೊಳ್ಳುತ್ತದೆ. ಉಕ್ಕಿ ಬಂದ ಮನಸ್ಸನ್ನು ಸ್ವಲ್ಪ ಕುಗ್ಗಿಸಿಕೊಳ್ಳುತ್ತಾಳೆ.

"ಯಾಕೆ ಕೆಲ್ಸ ಜಾಸ್ತಿ ಇತ್ತಾ? ಮುಖ ಬಾಡಿದೆಯಲ್ಲ? ಹೋಗು, ಮುಖಕ್ಕಿಷ್ಟು ತಣ್ಣೀರು ಹಾಕಿಕೋ...ಮನಸ್ಸು ಖುಶಿಯಾಗ್ತದೆ... ಇವೊತ್ತು ಬಟಾಟೆ ಅಂಬೋಡೆ ಮಾಡಿದ್ದೇನೆ."

ರಶ್ಮಿ ಮುಖ ಮತ್ತೆ ಅರಳಿಕೊಳ್ಳುತ್ತದೆ. ಪರ್ಸಿನಲ್ಲಿದ್ದ ನೀಲಿ ಕಾಗದ ಬ್ಲೌಜ್‌ನಲ್ಲಿ ಸೇರಿಕೊಳ್ಳುತ್ತದೆ. ಬಾತ್‌ರೂಮಿನ ಬಾಗಿಲು ಭದ್ರಪಡಿಸಿ, ನೀಲಿ ಕಾಗದ ಕೈಗೆತ್ತಿಕೊಳ್ಳುತ್ತಾಳೆ. ಓದುತ್ತಾಳೆ. ಹಾಗೇ ಓದುತ್ತಾಳೆ. ತುಟಿಯಲ್ಲಿ ನಗು! ಕಣ್ಣಲ್ಲಿ ನೀರು! ಎದೆಯಲ್ಲಿ

"ಏನಮ್ಮ ಇಷ್ಟು ದೊಡ್ಡವಳಾದ್ರೂ ಅಕ್ಕನ್ನ ಹಾಲು ಕುಡಿಯೋ ಮಗೂನ ಹಾಗೆ ಮಡಿಲಲ್ಲೇ...ಛೆ...ಛಿ...ಛೆ...ಅವಳು ನಾಳೆ ಭಾವನ ಜೊತೆ ಓಡ್ತಾಳೆ. ಇವೆಲ್ಲ ಕಣ್ಣೀರು ನಿಂಗಲ್ಲಮ್ಮಾ...ಭಾವ ಇಲ್ಲಿಲ್ಲವಲ್ಲಾ ಬಂದು! ಅಕ್ಕನ ಮನೆಗೆ ಈ ಅಂಜೋದೆ? ಭಾವನ ಲವ್ ಲೆಟರಿನಿಂದ್ಲೇ ಅವಳ ಹೊಟ್ಟೆ ತುಂಬಿರುತ್ತದೆ. ಅಮ್ಮಗೆ ನೀನಿದ್ರೆ ಆಯ್ತು... ನನ್ನ ಇಲ್ಲಿ ಯಾರು ಕೇಳ್ತಾರೆ? ನಾನೊಂದು ಹೊರಗೆ ಮೇಯುವ ಗೂಳಿ."

ರಶ್ಮಿ ಅಭಿಮಾನದಿಂದ ತಮ್ಮನನ್ನು ನೋಡ್ತಾಳೆ. ನಾಳೆ ಇವನೂ ಒಂದು ಹೆಣ್ಣನ್ನು ಈ ಮನೆಗೆ ತರ್ತಾನೆ. ...ತಾನು ನಲಿದಾಡಿದ ಸ್ಥಳವನ್ನು ಅವಳು ತುಂಬುತ್ತಾಳೆ.!

ರಾತ್ರಿಯಲ್ಲಿ ಕಾಗದದ ಮಾತುಗಳು ಅವಳ ಪಕ್ಕದಲ್ಲಿ ಬಂದು ಕುಳಿತು ಕಚಕುಳಿ ಇಡುತ್ತವೆ. ಅಮ್ಮನ ಮಡಿಲಲ್ಲಿ ತಲೆ ಇಟ್ಟಾಗ ಅವಳು ತೀರ ಎಳೆಯ ಮಗು! ಆದರೆ ಈಗ ಮೈ. ಮನಸ್ಸು, ಯೌವ್ವನ ಚಿಮ್ಮುವ ಚಿಲುಮೆ! ಥಿಯೇಟರಿನಲ್ಲಿ, ಪಾರ್ಕಿನಲ್ಲಿ, ತೋಟದ ಮಾವಿನ ಮರದ ಕೆಳಗೆ. ಹುಲ್ಲು ಹಾಸಿಗೆಯಲ್ಲಿ ಬೆನ್ನಿಗೆ ಬೆನ್ನು ಆನಿಸಿ. ಪಿಸುಗುಟ್ಟಿದ ಮಾತುಗಳು. ಬರಸೆಳೆದು ಅಪ್ಪಿದ ಹಿಡಿತದಲ್ಲಿ ಅವಳ ಮೈ ಎಲುಬು ಪುಡಿಯಾಗುತ್ತದಲ್ಲಾ ಎನ್ನುವ ಭಯದಲ್ಲೂ ಎಂಥ ಸುಖ! ಅದನ್ನೇ ಮತ್ತೆ ಬರೆದು ತನ್ನ ಹಿಂಸಿಸಬೇಕೇ? ನಾಚಿಕೆಯಲ್ಲಿ ಹೊದಿಕೆ ಎಳೆದುಕೊಳ್ಳುತ್ತಾಳೆ. ಚಾಚಿದ ತೋಳುಗಳಲ್ಲಿ ಬಂದಿಯಾಗಿ ಕಣ್ಣಲ್ಲಿ ಕಣ್ಣಿಟ್ಟ ನೆನಪು! ಇನ್ನು ನಾಲ್ಕಾರು ತಿಂಗಳಲ್ಲಿ ನೆನಪುಗಳೆಲ್ಲ...ದಿನದ ಊಟ!

ಓ! ಎದ್ದು ಕೆಲಸಕ್ಕೆ ಓಡಬೇಕು. ತಟ್ಟನೆ ಜವಾಬ್ದಾರಿಯ ಭಾರ ಅವಳ ಕುಣಿತದ ಕಾಲುಗಳನ್ನು ಹಿಡಿದೆಳೆಯುತ್ತದೆ. ಮಲಗಿದ್ದ ರಶ್ಮಿ ಚಟ್ಟನೆದ್ದು ಕೂತುಕೊಳ್ಳುತ್ತಾಳೆ.

ಬ್ಯಾಂಕಿನಲ್ಲಿ ಟೀ ಟಾಯಿಮ್‌ನಲ್ಲಿ ಮಿಸೆಸ್ ರೂಬೆನ್ ಹೇಳಿದ್ದರು: "ಅತ್ತೆ ಮನೆ ಅಂದ್ರೆ... ಅಮ್ಮನ ಮನೆ ಅಂದುಕೊಂಡ್ರಾ ರಶ್ಮಿ? ನಾನೂ ನಿಮ್ಮ ಹಾಗೇ ಕುಣಿದಿದ್ದೆ. ಅದ್ರೆ ಅತ್ತೆ ಮನೇಲಿ ಎಲ್ಲ ಸುಖ ಕಕ್ಕಿಬಿಟ್ಟೆ- ಇಲ್ಲಿ ನಿಂತ್ರೆ ತಪ್ಪು ...ಅಲ್ಲಿ ನೋಡಿದ್ರೆ ತಪ್ಪು...ಕಣ್ಣೀರೂ ಇಂಗಿ ಹೋಗಿತ್ತು. ನಮ್ಮ ಮಿಸ್ಟರ್ ಅವಸ್ಥೆ ಅಡಕೊತ್ತಿನಲ್ಲಿ ಅಡಿಕೆ ಸಿಕ್ಕ ಸ್ಥಿತಿ! ಹೊತ್ತ ದೊಡ್ಡ ಕುಟುಂಬ-ದವರನ್ನ ಹ್ಯಾಗೆ ಮೆಚ್ಚಿಸಬೇಕು? ಅದಕ್ಕೆ ನಮ್ಮವರು ಒಂದು ಉಪಾಯ ಮಾಡಿದ್ರು... ಹ್ಯಾಗೂ ಕಲ್ತಿದ್ದೀಯಾ ಇಲ್ಲಿ ಯಾಕೆ ಬಿಡಿಯಾಗೋದು? ಕೆಲ್ಸಕ್ಕೆ ಸೇರಿಬಿಡು ಅಂದ್ರು. ಈಗ ಕೈಗೆ ಬಂದ ಸಂಬಳ ಸ್ವಲ್ಪ ನನ್ನ ಕೈಯಲ್ಲಿ ಇಟ್ಟುಕೊಂಡು ಉಳಿದುದನ್ನು ಅತ್ತೆ ಕೈಯಲ್ಲಿ ಕೊಟ್ಟುಬಿಡ್ತೇನೆ. ಈಗ ಮನೇಲಿ ಯಾರೂ ಬಿಟ್ಟೆನ್ನುತ್ತಿಲ್ಲ...ಅಷ್ಟೇ ಸಾಕು... ಎಲ್ಲಕ್ಕೂ ಮಿಗಿಲು ಇವರ ಪ್ರೀತಿ ಇದೆ...ನನಗೆ ಇನ್ನೇನು ಬೇಕು?

ರಶ್ಮಿಗೆ ಮತ್ತೆ ಉಸಿರು ಸರಾಗವಾಗಿ ಆಡುತ್ತದೆ. ಚಾಚಿದ ಕೈಯಲ್ಲಿ ಮೈ ಚೆಲ್ಲಿಕೊಳ್ಳುವಾಸೆಯಲ್ಲಿ ಎದುರಿಗಿದ್ದ ಗೋಡೆಗೆ ತಲೆ ಜಜ್ಜಿಕೊಳ್ಳುತ್ತದೆ. ನೋವಿನಲ್ಲಿ ಮೆಲ್ಲನೆ ಕನಲಿಕೊಳ್ಳುತ್ತ ...ಇಂಥ ಮೈ ಮರೆಸುವ ಆ ಬಲಾಢ್ಯ ತೋಳುಗಳಲ್ಲಿವೆಯೋ? ಕಾಣದ್ದ ಮನೆ! "ಒಮ್ಮೆ ಹುಡುಗೀನ್ನ ಮನೆಗೆ ಕರೆತಂದುಬಿಡು...ಇನ್ನು ಎಷ್ಟಂತ ನಿನ್ನ ನೋಡಿಕೊಳ್ಳಬೇಕು...ಹುಟ್ಟಿದಾಗಿನಿಂದ ನನ್ನ ಕಣ್ಣ ನಿದ್ದೆ ಓಡಿಸಿದ್ದಿ. ಇನ್ನಾದ್ರೂ ಕಣ್ತುಂಬ ನಿದ್ದೆ ಮಾಡುವ ಆಸೆ ನನಗೆ" ಎಂದು ಅರಳಿನಿಂತ ಅತ್ತೆಯ ಮುಖ ನೋಡುವ ಆಸೆಯಾಗುತ್ತದೆ.

ಎದುರಿಗೆ ಮಸುಕಾಗಿ ಮುಖ ಕಾಣುತ್ತದೆ. ಇದು ಅಮ್ಮ! ಅಮ್ಮ ಇನ್ನೇನು ಈಗ ನೆಲಕೆ ಕುಸಿಯುತ್ತಾಳೆ. ಬಾಡಿ ಬಸವಳಿದ ಅಮ್ಮನ್ನ ಎತ್ತಿ ಹಿಡಿಯಬೇಕು!

ಆಶಾ ಹೇಳಿದಳು, "ಏ ಮಂಕೇ, ಯಾಕೆ ಕೆಲ್ಸ ಅಂತ ಬಡ್ಕೋತೀಯಾ? ಇಷ್ಟು ದಿನಾ ನೀನು ಅಮ್ಮನೊಟ್ಟಿಗೆ ಇರೋದಿಲ್ವ? ಇರೋವಷ್ಟು ಕಾಲ ಅವರಿಗೆ ಕಂಪ್ನಿ ಕೊಡಬಾರ್ದಾ? ಹಣದ ತಾಪತ್ರಯವಿಲ್ಲ... ಮನೆ ನಡೆಸೋ ಜವಾಬ್ದಾರಿ ಉಂಟಾ? ಅದೂ ಇಲ್ಲ. ನನ್ನಮ್ಮ ಆರು ಮಕ್ಕಳನ್ನ ಬೆಳೆಸೋ

ಮರಳ್ತೀ ಎಂಗೇಜ್ ಆಗಿದ್ದಾಳೆ. ನನ್ನ ಬಗ್ಗೆ ಯೋಚಿಸುವುದಕ್ಕೂ ಪಾಪ ಅವಳಿಗೆ ಟೈಮಿಲ್ಲ. ಹಾಗಾಗಿ ನಮ್ಮ ಮದುವೆ ತಪ್ಪುವುದೂ ಇಲ್ಲ! ನಾವು ಕನಸಿನಲ್ಲೇ ಎಲ್ಲ ಕಾಣ್ತೀವಿ... ನನಗೆ ಇಂಥ ಛಾನ್ಸ್ ಬಂದರೆ, ...ಕೆಲ್ಸ ಛೂಮಂತರ್ ಎಂದು ಗಾಳಿಗೆ ಊದಿ ಅಮ್ಮನ ಪಕ್ಕ ಗಂಟಿಕೊಳ್ಳುತ್ತಿದ್ದೆ. ನಿಂದು ಎಂಥ ಕಲ್ಲು ಮನಸ್ಸೇ? ಎಂದಾಗ ರಘುಗೆ ಚಾಟಿಯಿಂದ ಹೊಡೆದಷ್ಟು ನೋವಾಗುತ್ತದೆ. ಅಮ್ಮನ ಹೊಟ್ಟೆಯಲ್ಲಿ ಮತ್ತೆ ಸೇರಿಕೊಳ್ಳಬೇಕೆನಿಸುತ್ತದೆ. ಇನ್ನು ಹೋಗಲಿರುವ ಮನೆಯು ನನ್ನ ಉಕ್ಕುತ್ತಿರುವಂತೆ ಕಾಣಿಸುವ ಬೇಡ ಸಿಕ್ಕಿಸಿಕೊಳ್ಳಬಾರದೆ ಮನೆಯ ಗೋಡೆ ಕಿಟಕಿ–ಮನೆಯ ಪ್ರತಿಯೊಂದು ವಸ್ತು ವಸ್ತು ಅಗಲಬೇಕಾದ ಪ್ರಸಂಗ ಎದುರಿಸಬಾರದು. ಯಾರಲ್ಲೂ ಕೂಡಿಕೊಳ್ಳಬಾರದು ಮೌನಿಯಾಗುತ್ತೇನೆ ಎನಿಸುತ್ತದೆ. ಅಮ್ಮನ್ನ ಒಂದೇ ಬಾರಿಗೆ ಬಿಟ್ಟು ಹೊರಟರೆ ... ಅದನ್ನು ತಡೆದುಕೊಳ್ಳಲಾರದೇ ಎಂದೇ ಕೆಲಸದ ನೆಪದಲ್ಲಿ ಹೊರಗೆ ಉಳಿದಿದ್ದಾಳೆ!

ಗಡಿಯಾರದಲ್ಲಿ ಸದ್ದು ಕೇಳುತ್ತದೆ ಒಂದು... ಎರಡು...ನಡುರಾತ್ರಿ ಬೀದಿ ನಾಯಿಗಳು ಬೊಗಳುತ್ತವೆ. ರಘು ಹಾಸಿಗೆಯಲ್ಲಿ ಹೊರಳಾಡುತ್ತಾನೆ. ಹೊಯ್ದಾಡುವ ಮನಸ್ಸು. ಕಣ್ಣು ಮುಚ್ಚಿದರೆ ಅವಳ ಮುಂಗುರುಳು!

ಬೆಳಗ್ಗೆ ಸ್ನಾನಕ್ಕೆ ಇಳಿದಾಗ ನೀರೆ ಕಾಲ್ಗೆ ಚುಚ್ಚಿದ ಕೆಳಕ್ಕೆ ಬಿತ್ತು. ಓ...ಸೀರೆಗೆ ಬಿದ್ದರೆ! ನಾಯಿಯಂತಿತ್ತು ಕಣ್ಣೊರೆಸುತ್ತಾಳೆ. ರಘು... ಬಿಕ್ಕಳಿಸಿ ಇನ್ನೂ ನಿಂತು ಬಿಟ್ಟಿತ್ತು. ಕಾಗದದ ಅಕ್ಷರಗಳಲ್ಲಿ ಅದೇ ನಗು! ಅದೇ ಮುಖ! ಬದಗಣ್ಣು ಬೀರಿ ಮಾತಾಡಿದಂತೆ. ಬಿಕ್ಕಿದ ನಗು ಬಂತೆಮಗೆ.

ಕಿಟಕಿ ಬಳಿ ಬಂದ ನೋಡುತ್ತಾನೆ... ಮತ್ತೊಮ್ಮೆ ಅವನ ಕೈಯಲ್ಲಿ ಸಿಕ್ಕ ಬಟ್ಟೆಯ ಬೇಕು? ಬರೆಯುವ ಛಾಯ–ನಾಚಿಕೆಯಲ್ಲಿ ಬೆಟ್ಟದ ಬಳಿಗೆ ಕಾಗದ ಚಿಕ್ಕಗೆ ಕೊಡುತ್ತ ರಾತ್ರಿಯಲ್ಲಿ ತನ್ನ ನಿದ್ದೆ ಕೆಡಿಸಿದ್ದು ನೆನೆದು ಪ್ರೀತಿಯಲ್ಲಿ ಖುಷಿಯಲ್ಲಿ ಕುಣಿಯಿತು.

ದಿನದ ಗಡಿಬಿಡಿಯಲ್ಲಿ ಪರ್ಸ್ ಕೈಗೆತ್ತಿ ಹೊರಡುತ್ತಿರುವಂತೆ ಅವನ ಅಪ್ಪ. ಅಮ್ಮ ಮುಖಚಿಕೊಂಡು ಬಸ್ಸಿನಲ್ಲಿ ಬಾಯಿಗಿಟ್ಟಿದ್ದನ್ನು ತಿನ್ನುತ್ತ. "ಮಗೂ...ನಿನ್ನೆ ನಿನ್ನ ಕಾಗದ ಬಂದಿದೆಯಂತಲ್ಲ? ಇವರು...ನಿನ್ನ ರಾತ್ರಿಯಲ್ಲೇ ಗಂಗೆಯನ್ನ ಇಲ್ಲೇ ಬಿಟ್ಟ ಕರೆತಂದು ಬಿಟ್ಟರೇ ಎಂದು ಗಾಬರಿಯಾಗಿದ್ದೆ. ನಂಗೂ ಇಷ್ಟು ಬೇಗ ಈ ಮನೆಯಿಂದ ನೀನು ಹೋಗ್ತೀ ಎಂದು ಯೋಚನೆ ಬಂದ್ರೆ, ಗಂಡಾಗಿಯೂ ಅಳು ತಡೆಯೋದಕ್ಕೆ ಆಗೋದಿಲ್ಲ. ...ನಿನ್ನಮ್ಮನೂ ಹೀಗೆ. ಆ ದಿನ! ಅಪ್ಪ–ಅಮ್ಮನ್ನ...ಆ ಮನೆಯನ್ನ ಬಿಟ್ಟು ಬರುವಾಗ ಕಣ್ಣಿಗೆ ನೀರ ಹಾಕಲು ಕೆರಳಬೇಕು...ಅಳುವಿನ ಹೊಳೆಯಲ್ಲೇ ಇವಳನ್ನ ಬಿಟ್ಟು ತಂದದ್ದು ಇನ್ನು! ಅದ್ರ...ಮತ್ತೊಮ್ಮೆ ಅವಳು ತವರಿಗೆ ಹಾ ಮಗೂ ಎಂದು ಕರೆದ್ರೆ...ಏನು ಹೇಳ್ಬೇಕು ಗೊತ್ತಾ?. 'ನಾನಿಲ್ಲದೆ...ಇವರು ಊಟಮಾಡೋದಿಲ್ಲ' ಅಂತ ಹೀಗೆ ಹೇಳ್ತಾಳೆ...ನನ್ನ ಈಗ ಮಂಗ ಕುಣಿಸಿದಂತೆ ಕುಣಿಸ್ತಾಳೆ."

ರಘುಗೆ ಅಪ್ಪನ ಮಾತು ಮನಸ್ಸಿನೊಂದು ಕೇಳುತ್ತ ತಿಂಡಿಯೇ ಇಲ್ಲ! ಎಂದುಕೊಂಡು ಅಮ್ಮನ ಮುಖ ನೋಡುತ್ತಾನೆ. ಕಣ್ಣಿ ತುಂಬಿದ ನೀರು! ತುಟಿಯಂಚಿನಲ್ಲಿ ನಗು ಹೊರ ಬಿದ್ದು ಮತ್ತೆ ಬಚ್ಚಿ ಬಿಡುತ್ತೆ. ಅಮ್ಮ ಮುಖ ಕೆಳಕ್ಕೆ ಹಾಕಿ ರಘುವಿನ ಕೆನ್ನೆ ತಟ್ಟಿ ತುಟಿ ಕಚ್ಚಿಕೊಂಡಾಗ, "ಅಮ್ಮ ಬರುತ್ತಾಳೆ ...ನಿನ್ನಮ್ಮ ಬರುತ್ತಾಳೆ..." ಎಂದು ಉಳಿದನಲ್ಲೇ ಅವನ ಕೈ ಪರ್ಸ್ ಮುಟ್ಟಿಕೊಳ್ಳುತ್ತದೆ.

ಅಲ್ಲಿಯ ಮಾತುಗಳು ನೆನಪಾಗುತ್ತದೆ. "ನನ್ನ ಮಾತೃವ ನೆನಪಿದೆ ಈ ಜಗವು... ಈ ರಾತ್ರಿ...ಓ! ನಾ ಬರುಕೊಂಡಿಲ್ಲ" ರಘುಗೆ ಅಮ್ಮನ ಕೆನ್ನೆ ಮುತ್ತು ಒಂದು ಬೇಕು... ಮನಸ್ಸಿಗೆ ಉತ್ತರ ತರುತ್ತದೆ. ನಾಳೆ ನೋಡಿಕೊಂಡು "ಹೊತ್ತಾಗಿ ಏಳ್ತೀನಿ" ಎಂದು ಮುಚ್ಚಿಕೊಳ್ಳುತ್ತಾನೆ. ✡



ಅಶ್ವತ್ಥ

ಹೊಟ್ಟೆ ಜಗಳ

ಜಯನಗರದಲ್ಲಿ ಸ್ವಂತ ಹೊಸ ಮನೆಗೆ ನಾವು ಹೋದಾಗ ಲಲಿತಳ ಸಡಗರ ಹೇಳತೀರದು. ನಮ್ಮ –ಮುಖ್ಯವಾಗಿ ಅವಳ–ಇಷ್ಟದಂತೆ ಕಟ್ಟಿಸಿದ ಅಚ್ಚುಕಟ್ಟಾದ ನವೀನ ಮಾದರಿ ಮನೆ. ಸುತ್ತಲೂ ಸಾಕಾದಷ್ಟು ಕೈತೋಟಗಾರಿಕೆಗೆ ಜಾಗ. ತಿಳಿ ಹಸಿರು ಡಿಸ್ಟೆಂಪರ್, ಕೊಳವೆ ದೀಪ, ಹಾಲು ಬಿಳುಪಿನ ದೀಪ, ಶೋಕೇಸ್‌ಗಳ ಮುಂದೊಳಗೆ ಚಿಟ್ಟೆ ನೈಲಾನ್ ತೆರೆ. ಹೂಹೂವು ಕೈಮಗ್ಗದ ಬಾಗಿಲ ತೆರೆ. ಪ್ರಕೃತಿ - ಚಿತ್ರಪಟ. ಹೂದಾನಿ. ರೇಡಿಯೋಗ್ರಾಂ, ಸೋಫಾ. ಮೆತ್ತಮೆತ್ತೆ ಪೀಠೋಪಕರಣ, ಮಹಾಗನಿ ಮರದ ಫೋಮ್ ಶಯನೋಪಕರಣ, ಭೋಜನೋಪಕರಣ. 'ಪ್ರೆಸ್ಟೀಜ್ ಕುಕರ್', 'ಅಮೃತ್ ಗ್ರೈಂಡರ್'. ಆದರೆ 'ಫ್ರಿಜ್' ಇಲ್ಲದ–ಅನುಕೂಲ ಸ್ಥಿತಿಯ ನವದಂಪತಿಗಳ ವಿಚಕ್ಷಣೆಯನ್ನು ನೀವೇ ಊಹಿಸಿಕೊಳ್ಳಿ. [illegible] ಒಳ ಏರ್ಪಾಡು ಮುಗಿದ ಕೂಡಲೆ ನಾವು, ಮಾಲಿಯೂ ಸೇರಿ, ಲಲಿತಳ ಮುಂದಾಳುತನದಲ್ಲಿ, ಹೊರಗ ತೋಟಗಾರಿಕೆಗೆ ಕಾಲಿಟ್ಟೆವು. ಪರಿಣಾಮ: ವಾರದೊಳಗಾಗಿ ಬಗೆ ಬಗೆ ಎಲೆ ಬಣ್ಣಗಳ ಕ್ರೋಟನ್ [illegible] ಸಾಲು. [illegible] [illegible]. ಹಲವು ಜಾತಿ ಗುಲಾಬಿ ಅಂಟು, [illegible] ಬಳ್ಳಿಯಾಗಿ [illegible] [illegible], [illegible] ಮಲ್ಲಿಗೆ, ಇರುವಂತಿಗೆ. ವಿವಿಧಾಕಾರದ ಪಾತಿಗಳಲ್ಲಿ ಕುಂಡಗಳಲ್ಲಿ ಬೀಜ ಚೆಲ್ಲಿ ಕರ್ಣಕುಂಡಲ ಕುಲ, ಫ್ಲಾಕ್ಸ್, ಪಾಪೀಸ್, ಡಾಲಿಯಾ ಇತ್ಯಾದಿ ಪಾಶ್ಚಾತ್ಯ ಗೋತ್ರ. ಸಂಪಿಗೆ ಸಸಿ, ಹಿತ್ತಲಿನಲ್ಲಿ ಸಪೋಟ ನಿಂಬೆ ಕರಿಬೇವು [illegible]–ತರಕಾರಿಗಳಂತೂ ಹಲವಾರು ಬಗೆ– ತೋಟಗಾರಿಕೆ ಇಲಾಖೆ, ಸ್ನೇಹಿತರ ಮನೆಗಳಿಂದ ತಂದು ತಂದು ನಮ್ಮ ತೋಟವನ್ನು ಮಹೋತ್ಸಾಹದಿಂದ ಮಟ್ಟುಹಾಕಿ ನೀರು ಹಾಕಿ [illegible] ಗರ್ಭಿಣಿಯ ಪ್ರೀತಿ ಕುತೂಹಲಗಳಿಂದ ದಿನಕ್ಕೆ [illegible] ಎಲೆ ಕವಲು ಪುಷ್ಪ ಫಲ ಶೋಭೆಯನ್ನು ನಿರೀಕ್ಷಿಸುತ್ತಿದ್ದೆವು.

ಆದರೆ–ಆದರೆ... ನಾವೊಂದು ನೆನೆಸಿದರೆ... ದೇವರೊಂದು ನೆನೆಸುತ್ತದೆ–ನಡೆಸುತ್ತದೆ!

ಸೋಮಾರಿ ರಾಜಕುಮಾರ–ರಾಜಕುಮಾರಿ ದಂಪತಿಗಳಂತೆ ನಾವು ರಾತ್ರಿ ಎಷ್ಟೋ ಹೊತ್ತಿಗೆ ಮಲಗಿ ಆ ಸೋಮವಾರ ಬೆಳಿಗ್ಗೆಯೂ ಎಷ್ಟೋ ಹೊತ್ತಿಗೆ ಎದ್ದು ಜೋಡಿಯಾಗಿ ಕೈ ಕೈ ಹಿಡಿದು ವಾಡಿಕೆಯ ಆತುರದಿಂದ ನಮ್ಮ ಭಾವಿ ನಂದನಕ್ಕೆ ಬಂದು ವನಾಭಿವೃದ್ಧಿಯನ್ನು ನೋಡುತ್ತೇವೆ–ನಡುಗಿದೆವು! ಹಾಗಾಗಿದ್ದು... [illegible] [illegible] ಅನಾಹುತ. ಅಬ್ಬ. ಸರ್ವನಾಶ!

[illegible] [illegible] ಹತ್ತೆ! ಹತ್ತೆ! [illegible]. ತರಕಾರಿ [illegible]



ತಾನೆ ಕುಕ್ಕಿ ಕುಕ್ಕಿ ಅಗೆದಂತೆ ತಳಮೇಲಾಗಿದೆ. ಅಲ್ಲೊಂದು ಇಲ್ಲೊಂದು ಬಾಯಿ ಬಿರಿದ ಬೀಜ ಕಾಣುತ್ತಿದೆ. ಕ್ರೋಟನ್ ಕಡ್ಡಿಗಳು ಮಲಗಿದೆ. ಸಂಪಿಗೆಯ ಸಸಿಯೊಂದು ಮೂವತ್ತು ಡಿಗ್ರಿ ಕೋನದಲ್ಲಿ ನಿಂತು ನಿಲ್ಲಲಾರದೆ ಒದ್ದಾಡುತ್ತಿದೆ. ಮಲ್ಲಿಗೆಯ ಬಳ್ಳಿಗಳು ಮೇಲೆದ್ದು ಇಟ್ಟಾಡುತ್ತಿದೆ. ಹೆಚ್ಚು ವಿವರಗಳೇಕೆ? ಸಪೋಟ ಸೀಬೆ ಅಲ್ಲೊಂದು ಸಸಿ ಇಲ್ಲಿ ಸ್ವಲ್ಪ ಪಾತಿ ಬಿಟ್ಟರೆ ಬಟ್ಟೆಲ್ಲವೂ ಭೂತ ಚೇಷ್ಟೆಗೆ, ಬಾಂಬ್‌ದಾಳಿ ಹಾವಳಿಗೆ ಒಳಗಾಗಿತ್ತು. ಭೂತದಲ್ಲಿ ನಂಬಿಕೆಯಿಲ್ಲದ, ಯುದ್ಧಕಾಲವಾಗದ, ಭೂಕಂಪವಾದದ್ದೂ ತಿಳಿಯದ –ಹಾಗಿದ್ದರೂ ಮಲಗಿಬಿಟ್ಟರೆ ಹಾಗೇಕೋ– ಈ ರಂಪಕ್ಕೆ ಕಾರಣ ವೇನು, ಕಾರಣರು ಯಾರು ಎಂದು ಕೆಂಗಣ್ಣನ್ನು ಸುತ್ತಲೂ ಆಡಿಸುತ್ತೇವೆ...

ಕ್ಕೊಕ್ಕೊಕ್ಕೋ...! ಕಾಂಪೌಂಡು ಗೋಡೆಯ ಮೇಲೆ ಕೇಳಿಸಿದವು ಕಾಣಿಸಿದವು. ಕೋಳಿ ದಂಪತಿಗಳು. ಕಪ್ಪು ಹಳದಿ ಪುಕ್ಕ ಭರ್ಜರಿ ಕೆಂಪು ಕಿರೀಟದ ಹುಂಜ ಮಹಾರಾಜ ರೆಕ್ಕೆಯನ್ನು ಮುರಿಸುತ್ತ, ಕೆದರು ಪುಕ್ಕದ ಉದ್ದ ಕತ್ತನ್ನು ಅದಷ್ಟೂ ಚಾಚುತ್ತಾ, ಕೂಗುತ್ತಿದ್ದಾನೆ– 'ಇದು ನನ್ನ ಸಾಮ್ರಾಜ್ಯ! ಹತ್ತಿರ ಯಾರಾದರೂ ಬಂದೀರಿ! ಬಂದಿರೋ ನೋಡಿಕೊಳ್ಳಿ!' ಎಂದು. ಪಕ್ಕದಲ್ಲೇ ನಿಂತಿದ್ದಾಳೆ. ಶ್ವೇತ ಪುಕ್ಕವನ್ನುಟ್ಟು ತಾನೂ ಸಾ ಕೆಂಪು ಕಿರೀಟವನ್ನಿಟ್ಟು. ಬಿಂಕದ ಕತ್ತನ್ನು ಸುತ್ತಲೂ ತಿರುಗಿಸುತ್ತ, ದುಂಡು ಕಣ್ಣಿನ ವಿಹಂಗಮ ನೋಟವನ್ನು ತನ್ನ ರಾಜ್ಯದ ಮೇಲೆ ಬೀರುತ್ತ. ಹೇಂಟೆ



ರಾಣಿ. ಇವರನ್ನು ನೋಡಿದೊಡನೆ ನಮ್ಮ ನೆರೆ ಕಾಂಪೌಂಡು. ನೆರೆ ಮನೆ, ಸುತ್ತು ಮುತ್ತಲಿನ ಮನೆ ಜಾಗಗಳೆಲ್ಲ ಇವರ ಸಾಮ್ರಾಜ್ಯಕ್ಕೇ ಸೇರಿದುವೆಂದು ಖಚಿತವಾಗುತ್ತದೆ. ನಾವು ಬಾಡಿಗೆದಾರರಾಗಿರಬಹುದೇನೋ. ಅಂದಮೇಲೆ ಅವರ ಸ್ವೇಚ್ಛಾ ಪ್ರವೃತ್ತಿಗೆ—ನಾವು ನಮ್ಮದೆಂದುಕೊಂಡಿದ್ದ ತೋಟದಲ್ಲೇ ಆಗಲಿ—ಅಡೆತಡೆಗಳೇನು? ಕೋಳಿ ರಾಣಿ ನಮ್ಮನ್ನು ನ್ಯಾಯವಾಗಿಯೇ ನಿರ್ಲಕ್ಷಿಸಿ ತನ್ನ ಸಾಮಂತರನ್ನು ಪೊರೆಯುತ್ತ, ದೂರದ ಶತ್ರುರಾಜರಿಗೆ—ಮುಖ್ಯವಾಗಿ ನಾಲ್ಕು ಕಾಂಪೌಂಡ್ ಆಚೆ ಇದ್ದ ಸೌದೆ ಅಂಗಡಿ ಅಂಗಳದಿಂದ ಕೇಳಿ ಬರುತ್ತಿದ್ದ ಕೋಳಿ ಕೂಗಿಗೆ—ಇನ್ನೂ ಸವಾಲು ಹಾಕುತ್ತಲೇ, ಕಾಳಗಕ್ಕೆ ಕಾಲು ಕೆರೆಯುತ್ತಲೇ ಇರುವಾಗ ರಾಣೀಸಾಹೇಬಳು ತನ್ನ ಪಾಡಿಗೆ ತಾನು ಹೆಮ್ಮೆಯಿಂದ ತನ್ನ ವಸ್ತ್ರಾಲಂಕಾರವನ್ನು ವೀಕ್ಷಿಸುತ್ತ ಅಲ್ಲಲ್ಲೇ ಸರಿಪಡಿಸಿಕೊಳ್ಳುತ್ತಿದ್ದಾಳೆ. ಟಾಯಿಲೆಟ್ ಪ್ರಕರಣದಲ್ಲಿ. ಮಹಾರಾಜ ಮಹಾರಾಜ್ಞಿಯರು ಪ್ರಾತರ್ವಿಧಿಯನ್ನು ಪದೇ ಪದೇ ತೀರಿಸಿಕೊಂಡ ಕುರುಹುಗಳು ಕಾಂಪೌಂಡ್ ಮೇಲೆ. ನಮ್ಮ—ಛೆ. ಅವರ—ನಂದನವನದ ನೆಲದ ಮೇಲೆಯೂ ಕಂಗೊಳಿಸುತ್ತಿವೆ.

ನಿಜ. ಬೆಳಗಿನ ಜಾವದಲ್ಲಿ ಯಾವಾಗಲೋ—ಬೆಳಗಾದ ಮೇಲೆಯೂ ಇರಬಹುದು— ಕೋಳಿ, ಕೂಗು ಕೇಳಿಸಿತ್ತೇನೋ ಎನ್ನಿಸುತ್ತಿದೆ, ಈಗ. ಆಗ ಕನಸಿನ ನಂದನದಲ್ಲಿ ಮಯೂರನಾದ ಆದಂತಿರಬೇಕು. ಆ ಗಾನಮಾತ್ರತೆ ನಮ್ಮ ಮತ್ತಷ್ಟು

ಜೊಂಪಿಗೆ ಕಾರಣವಾಗಿರಬೇಕು. ಇರಲಿ.

ಇವರನ್ನು, ಇದನ್ನೆಲ್ಲ ಈಗ ಪ್ರತ್ಯಕ್ಷವಾಗಿ ಕಂಡ ನಮಗೆ ಹೇಗಾಗಿರಬೇಡ! ಎದೆಯಲ್ಲಿ. ಹೊಟ್ಟೆಯಲ್ಲಿ ಕಿಚ್ಚಿಟ್ಟಿತು, ಕಣ್ಣು ಕೆಂಡ ಕಾರಿತು, ಕಿವಿಯೊಳಗೆ ಕಾಯ್ದ ಸೀಸ ಸುರಿಯಿತು, ನಾವು ಒಳ್ಳೊಳಗೆ ಉರಿಯುತ್ತಿದ್ದೆವು. ನಾವು ಋಷಿಗಳಾಗಿದ್ದರೆ ನಮ್ಮ ನೋಟ ಮಾತ್ರದಿಂದಲೇ, ದೂರ್ವಾಸರಾಗಿದ್ದರೆ ಶಾಪ ಮಾತ್ರದಿಂದಲೇ, ಲಲಿತ ಪೂರ್ವ ಕಾಲದ ಪತಿವ್ರತಾ ಶಿರೋಮಣಿಯಾಗಿದ್ದರೆ ಅವಳ ಇಚ್ಛಾಮಾತ್ರದಿಂದಲೇ ಆ ಕೋಳಿ ದಂಪತಿಗಳು ಕೂಡಲೇ ಉರಿದು ಬೆಂದು–ಹದವಾಗಿ–ಸಾರು, ಪುಲಾವ್ ದಾರಿ ಹಿಡಿಯುತ್ತಿದ್ದವು. ಆದರೆ ಆಗ ಅದ ಹಾಗೆ ಅಂಥಾದ್ದೇನೂ ಆಗಲಿಲ್ಲ. ನಾವು 'ಹಾಳು ಕೋಳಿಗಳು! ಥೂ, ಅವುಗಳದ್ದೇ ಈ ಅನರ್ಥ, ಹೊಲಸು! ಪ್ರಾರಬ್ಧ ಮುಂಡೇವು! ನಾಯಿಗಳಾದವೆ!' ಎಂದು ವೃಥಾ ಶಾಪ ಹಾಕಿದೆವು ಅಷ್ಟೆ. ಆಗ 'ಸಮ್ರಾಟ, ಸಾಮ್ರಾಜ್ಞಿ, ಸಾಮ್ರಾಜ್ಯ' ಇವ್ಯೊಂದೂ ಇನ್ನೂ ನಮಗೆ ಹೊಳೆದಿರಲಿಲ್ಲ ಅನ್ನಿ.

ಈ ಕೋಳಿಗಳು ಈಗ ಎಲ್ಲಿಂದ ಬಂದವು–ನಿನ್ನೆಯವರೆಗೂ ಇಲ್ಲದಿದ್ದುವು? ಇನ್ನೆಲ್ಲಿಂದ, ಆ ಕಾಂಪೌಂಡ್ ಗೋಡೆಯ ಆಚೆಗಿದ್ದ ನೆರೆಯಾತ, ನೆರೆಯಾಕೆ ಅಂಡ್ ಕಂಪನಿಯಿಂದಲೇ. ನಾವು ನೂತನ ಗೃಹ ಪ್ರವೇಶಮಾಡಿದಾಗಿನಿಂದ ಪಟ್ಟಣಿಗರ ಎಂದಿನ ಶ್ರೀಮದ್ಗಾಂಭೀರ್ಯ ಯಥಾ ಬಿಗುಮಾನಗಳಿಂದ ಅವರ ಬಳಕೆ ಮಾಡಿಕೊಂಡಿರಲಿಲ್ಲ. ಮನೆ ಕೈತೋಟಗಳು ಚೆನ್ನಾಗಿ ಹದಕ್ಕೆ ಬಂದ ಮೇಲೆ ನಿಧಾನವಾಗಿ ಎಂದಾದರೊಂದು ದಿನ ಔಪಚಾರಿಕವಾಗಿ ಭೇಟಿಗಾಗಿ ಹೋಗಿ ಪರಿಚಯ ಮಾಡಿಕೊಂಡರಾಯಿತೆಂದು ನಮ್ಮ ಯೋಚನೆ. ಅವರಾದರೂ ಪಟ್ಟಣಿಗರೇ–ಈ ವಿಚಾರದಲ್ಲಿ, ಹೀಗೆ ಅದೇ ಮಾಡಿದ್ದರು. ಹಾಗಿದ್ದು ಅಲ್ಲಿನವರೆಗೂ ಅವರು ನೆರೆಯಾತ, ನೆರೆಯಾಕೆ ಅಂಡ್ ಕೊ ಆಗಿಯೇ ಉಳಿದಿದ್ದರು. ನಾವು ಯಾರ ಗೋಜಿಗೆ ಒಬ್ಬರು ಹೋಗಿಯೇ ಇರಲಿಲ್ಲ. ಆಗ ಕೋಳಿಗಳೂ ಇರಲಿಲ್ಲ. ಈಗ ಎಲ್ಲೋ ನಿನ್ನೆ ನಡುವೆ ಕೋಳಿಗಳನ್ನು ತಂದ ಮೇಲೆ. ಹೀಗೆ ನಮ್ಮ ಜೀವನವು ತಿಂದ ಮೇಲೆ ಹೊರಬೀಳುತ್ತಿದೆಯೇ [illegible] ಆಯಿತು. ಲಲಿತ ಕೋಳಿಗಳನ್ನು ಬೆದರಿಸಲು ಸಣ್ಣ ಮಣ್ಣು ಹೆಂಟೆಯೊಂದನ್ನು ಅವಕ್ಕೆ ತಗಲದಂತೆ ಬೀಸಿದಳು. ತಗಲುವಂತೆ ಬೀಸಿದ್ದರೂ ಪರಿಣಾಮವೊಂದೇ ಆಗುತ್ತಿತ್ತು. ಬೆದರಿದ ಕೋಳಿಗಳು ಕ್ಕೊಕ್ಕೊಕ್ ಎಂದು ರೆಕ್ಕೆಯನ್ನು ಬಿಚ್ಚಿ ನೆರೆಯ ಹಿತ್ತಲಿಗೆ ಇಳಿಯುವ ಬದಲು ಮೇಲೆ ಹಾರಿ ಇನ್ನೂ ನಾಲ್ಕು ಅಡಿ ಹೆಚ್ಚು ಎತ್ತರದ ನಮ್ಮ ಹಿತ್ತಲ ಗೋಡೆಯನ್ನು ಅಲಂಕರಿಸಿ ನಮ್ಮನ್ನು ಅಣಕಿಸಿದವು. ಅನುಭವಸ್ಥ ಕೋಳಿಗಳು, ಅನುಮಾನವೇ ಇಲ್ಲ. ಇದು ನಮ್ಮನ್ನು ಕೆರಳಿಸಿತೆಂದು ಹೇಳಲೇಬೇಕಾಗಿಲ್ಲ. ಕೋಳಿಗಳ ಈ ವರ್ತನೆಗೆ ಪ್ರತಿಕ್ರಿಯೆಯಾಗಿ ಲಲಿತಳ ಸೀರೆ ನೆರಿಗೆಯನ್ನು ಜೋಡಿಸಿ ಸ್ವಲ್ಪ ಎತ್ತಿ ಸುತ್ತಿ ಕಟ್ಟಿ ಸೊಂಟದ ಮೇಲೆ ಕೈಯಿಟ್ಟು ಕಾಂಪೌಂಡು ಕಡೆಗೆ ಕಾಲಿಟ್ಟು 'ರೀ!' ಎಂದ ಸ್ವರದಲ್ಲಿ ಮುಂದೆ ಕವಿಯುತ್ತಿದ್ದ ಪ್ರಚಂಡ ಮಾರುತ ವಾತಾವರಣವನ್ನು ಕಂಡು, ಇವಳೊಬ್ಬಳೇ ಕಾಳಗಕ್ಕೆ ಸಾಕೆಂಬ ಭರವಸೆಯಿಂದ ನಾನು ಕಾಲ್ತೆಗೆದು ಮನೆಯೊಳಕ್ಕೆ ಬಂದೆ.

'ಲಲಿತಾ'ಗೆ ಪರ್ಯಾಯ ನಾಮವೊಂದು 'ದುರ್ಗೆ' ಯಂತೆ, ಲಲಿತಾ ಸಹಸ್ರನಾಮದಂತೆ. ಲಲಿತ ಎಷ್ಟು ಲಲಿತವಾಗಿ ಇರಬಲ್ಲಳೋ ಸಮಯ ಬಂದಾಗ ಕನಲಿ ಅಷ್ಟೆ ದುರ್ಗೆಯೂ ಆಗಬಲ್ಲ ಳೆಂದು ಈ ಬಡ ಗಂಡನ ಅನುಭವ. ಇಷ್ಟಕ್ಕೂ ಮಹಾವೀರ ಶ್ರೀ ರಾಮಚಂದ್ರನಿಗೂ ಸಾಧ್ಯವಾಗದ ಅಹಿರಾವಣ–ಮಹಿರಾವಣರನ್ನು ಆನಂದ ರಾಮಾಯಣವಾಗಿ ವಧಿಸಿದುದು ಕುಸುಮಗಾತ್ರಿ ಸೀತಾದೇವಿಯ ರೌದ್ರಾವತಾರವಲ್ಲವೆ? ಮಹಿಷಾಸುರನನ್ನು ಮರ್ದಿಸಿದವಳೂ ಶ್ರೀ ಚಾಮುಂಡೇಶ್ವರಿಯೇ– ಶಿವನಿಗೆ ಆಗಲಿಲ್ಲವೆಂದು ಸ್ಪಷ್ಟವಾಗಿ ಹೇಳಿಲ್ಲವಾದರೂ ಪೂರ್ವ ಶ್ರೇಷ್ಠ ಸಂಪ್ರದಾಯವೇ ಇಂಗಿದ್ದು ನಾನು ಈ ಕೋಳಿ ಕದನ ಕ್ಷೇತ್ರವನ್ನು ಲಲಿತಳಿಗೇ ಪೂರ್ತಿಯಾಗಿ ಗುತ್ತಿಗೆ ಕೊಟ್ಟು ಹಿಂದೆ ಸರಿದದ್ದು ಸಹಜವಾಗಿಯೇ ಇತ್ತು. ಆದರೆ ನನ್ನ ವಿಚಾರಲಹರಿಯಲ್ಲಿ ಆಗ ಒಂದು ವಿಷಯವನ್ನು ಮರೆತಿದ್ದೆ. ಅದು 'ಅಹಿರಾವಣ–ಮಹಿರಾವಣ ಮಹಿಷಾಸುರರು ಮಹಾರಾಕ್ಷಸರೇ ಆದರೂ ಕೇವಲ ಬಡ ಗಂಡಸರು, ಹೆಂಗಸರಲ್ಲ;

ಇಂದಿರಾ ಗಾಂಧಿ ಯುಗದಲ್ಲಿ; ಭಾರತದ ಪ್ರತಿಯೊಂದು ಮನೆಯಲ್ಲಿಯೂ ಒಬ್ಬೊಬ್ಬ ಇಂದಿರಾ ಗಾಂಧಿ ಇರುವುದು ಸಾಧ್ಯ' ಎನ್ನುವುದು.

"ರೀ! ರೀ!" ಎಂದು ಮತ್ತೆ ಎರಡು ಬಾರಿ ದುರ್ಗೆ ಸಿಂಹನಾದ–ಸಿಂಹಿಣಿನಾದವೆನ್ನುವುದು ಸರಿಯಾಗದು–ಮಾಡಿದ ಮೇಲೆ 'ರೀ' ಹೊರಗೆ ಬಂದದ್ದು ನನಗೆ ಕಿಟಕಿಯಿಂದ ಕಂಡಿತು. ಆಶ್ಚರ್ಯವೇನೆಂದರೆ–ಆಶ್ಚರ್ಯವಿಲ್ಲವೋ–ರೀಯುವರೂ (ಗೌರವವಾಚಕ) ಅದೇನು ಮಾಡುತ್ತಿದ್ದರೋ ಇನ್ನು ಹೇಗೋ, ಲಲಿತಳಂತೆಯೇ ಸೀರೆಯನ್ನು ಕಟ್ಟಿಕೊಂಡು ಸೊಂಟದ ಮೇಲೆ ಕೈಯಿಟ್ಟುಕೊಂಡಿರಬೇಕೇ? ಹಾಗೆಯೇ ಹೆಜ್ಜೆಯಿಟ್ಟು ಬಂದು ಇವಳನ್ನು ಎದುರಿಸಬೇಕೇ? ಇವಳಿಗಿಂತಲೂ ಗಡುಸಾಗಿಯೇ 'ಏನ್ರೀ?' ಎನ್ನಬೇಕೇ?

ಇವರಿಬ್ಬರ ಮಧ್ಯೆ ಆಗಲಿದ್ದ Battle Royal (ರಾಣೀ ಕದನ) ಭಯದಿಂದಿದ್ದ ನಾನು ಆಗಲೇ ಫಲಿತಾಂಶವನ್ನೂ ಲೆಕ್ಕ ಹಾಕುತ್ತಿದ್ದೆ.

"ನಮಸ್ಕಾರ!"

"ನಮಸ್ಕಾರ!"

ನಿಜ, ಸುಪ್ರಭಾತ ವಿನಿಮಯವೇ; ಆದರೆ ವಾಡಿಕೆಯಷ್ಟೋ ಅಷ್ಟೇ, ಮೊಟಕಾಗಿ, ತಣ್ಣಗೆ. ನಿಜದಲ್ಲಿ ಮೊನಚಾದ ಅಸ್ತ್ರಪ್ರತ್ಯಸ್ತ್ರ ಪ್ರಯೋಗದಂತೆಯೇ.

"ಏನ್ರೀ, ನೀವು ಕೋಳಿ ತಂದಿದೀರಾ?" ಲಲಿತಳ ಧ್ವನಿಯಲ್ಲಿ ಆಕ್ಷೇಪಣೆ ಅಸಮಾಧಾನ ಸ್ಪಷ್ಟವಾಗಿ ಎದ್ದು ಕಾಣುತ್ತಿದ್ದವು. ಅವಳ ಕೋಪ ಏರುತ್ತಿತ್ತೆನ್ನುವಂತಿತ್ತು.

ಅಯ್ಯಯ್ಯೋ ತಪ್ಪಾಯಿತು. ಮೊದಲ ಮಾತಿನಲ್ಲೇ ಕೋಳಿ ಜಗಳಕ್ಕೆ ಶುರುಮಾಡಿಬಿಟ್ಟಳಲ್ಲ. ಸ್ವಲ್ಪ ಪರಿಚಯ ಸ್ನೇಹ ವಿನಿಮಯ ಮುಂತಾಗಿ ಅದೂ ಇದೂ ಬಳಸಿ ಅಡಿ ಮಾಡಿ ಅನಂತರ ನಯ ನಮ್ರತೆ ಜಾಣತನಗಳಿಂದ ಕೋಳಿಯ ಮಾತೆತ್ತಬಾರದಾಗಿತ್ತೇ ಎಂದು ನಾನು ಒಳಗೊಳಗೇ ಹೇಳಿಕೊಳ್ಳುತ್ತ ಕೈ ಕೈ ಹಿಸುಕಿಕೊಂಡೆ, ನನ್ನ ಕೋಪ ಸ್ವಲ್ಪ ಆಗಲೇ ಆರುತ್ತ ಬಂದಿದ್ದುದರಿಂದ.

"ಹೌದ್ರಿ, ನಮ್ಮ ಯಜಮಾನ್ರು ನಿನ್ನೆ ಹಳ್ಳಿಯಿಂದ ತಂದ್ರು, ಯಾಕೆ?" ಆಕೆಯ ನಿರ್ಲಕ್ಷ್ಯಬಿಟ್ಟ ಸ್ವರದಲ್ಲಿ 'ಅದನ್ನೆಲ್ಲ ಕಟ್ಟಿಕೊಂಡು ನಿಮಗೇನು?' ಎನ್ನುವ ಧ್ವನಿಯನ್ನು ಗುರುತಿಸಬಹುದಾಗಿತ್ತು.

ಲಲಿತ. ಕಾಲು ಕೆರೆದು ನಿಂತ ಲಲಿತ, ಗುರುತಿಸದಿರುತ್ತಾಳೆಯೇ? ಅವಳ ಉರಿಗೆ ತುಪ್ಪ ಸುರಿದಂತಾಗಿರಬೇಕು.

"ಯಾಕೇಂದ್ರೆ, ದಯವಿಟ್ಟು ನೋಡಿ, ಅವು ನಮ್ಮ ತೋಟಾನೆಲ್ಲ ಹೇಗೆ ಕುಕ್ಕಿ ಕೆದರಿ ಸಂಪೂರ್ಣವಾಗಿ ಹಾಳುಮಾಡಿಬಿಟ್ಟಿವೆ ಅಂತ, ಗೋಡೆಯ ಮೇಲೆ ಎಲ್ಲೆಲ್ಲೂ ಹೊಲಸು ಬೇರೆ. " ಲಲಿತಳ 'ದಯವಿಟ್ಟು' ಅನ್ನುವುದು ನೆರೆಯಾಕೆಯನ್ನು ಆದಷ್ಟು ಇರಿಯುವುದಕ್ಕೇ ಪ್ರಯೋಗಿಸಿದ ಸಮಾಧಾನ ಪದವಾಗಿದ್ದಂತಿತ್ತು. "ಅಷ್ಟೊಂದು ದಿನ ಅಗೆದೂ, ಮಡಿ ಮಾಡೀ, ಬೀಜ ಹಾಕೀ, ಗೊಬ್ಬರ ಹಾಕೀ, ಸಸಿ ನೆಟ್ಟೂ, ನೀರು ಹಾಕೀ, ಕಷ್ಟಪಟ್ಟೂ ಬೆವರು ಹರಿಸೀ, ಸೊಂಟ ಮೈ ಕೈ ನೋವು ಮಾಡಿಕೊಂಡೂ…" ಲಲಿತ ರೇಗಿರೇಗಿ ನಿಂತ ರಾಗರಾಗವಾಗಿ ಅನಂತವಾಗಿ ಮಾತುಗಳನ್ನು ಮಾಲೆಮಾಲೆಯಾಗಿ ಸೇರಿಸುತ್ತಿದ್ದಳು.

"ಏನು ಮಾಡೋದ್ರೀ!, ಕೋಳಿಗಳೇ ಹಾಗೆ" ಆಕೆ 'ಬ್ರೇಕ್(ತಡೆ) ಹಾಕಿದರು–ಒಂದೇ ಮಾತಿನಲ್ಲಿ. "ಅವಕ್ಕೇನು ತಿಳಿಯುತ್ತೆ, ತೋಟ ತುಡಿಕೆ ಅದು ಇದು ಅಂತ," ಕೆಣಕು ಬೇರೆ.

"ಅದು ನಿಜಾನ್ನಿ…" ಲಲಿತಳ ಹಿಡಿ ಮಾತು, ಮುಂದೆ ಹಾರುವುದಕ್ಕೆ. "ಆದ್ರೆ, ನೀವು ಕೊಂಚ ದಯವಿಟ್ಟು ಅವನ್ನು ನಿಮ್ಮ ಕಾಂಪೌಂಡ್‌ನಲ್ಲೇ ಇರೋ ಹಾಗೆ ನೋಡಿಕೊಂಡ್ರೆ ಬಹಳ ಉಪಕಾರವಾಗುತ್ತೆ ಕಣ್ರೀ. ಅಲ್ಲಾದ್ರೆ ತೋಟ ತುಡಿಕೆ ಏನೂ ಮಾಡಿಲ್ಲ ನೀವು. ಪರವಾಗಿಲ್ಲ," ಪ್ರತಿ ಕೆಣಕು, ತೋರಿಕೆ ಬೇಡಿಕೆಯ ಜತೆಗೆ.

"ಅಯ್ಯೋ, ಅವು ನಾವು ಹೇಳಿದರೆ ಕೇಳುತ್ವೇ, ಇಲ್ಲೇ ಇರಿ ಅಲ್ಲೇ ಇರಿ ಅಂತ? ಅವೇನು ಮನುಷ್ರೇ?"

"ಕಟ್ಟಿ ಹಾಕಿಕೊಳ್ಳೋದಕ್ಕೆ ಆಗೋದಿಲ್ವೆ?"

"ಕಟ್ಟಿ ಹಾಕಿದರೆ ದಾರ ಕಿತ್ತುಕೊಂಡು ಬಿಡುತ್ವೆ ಕಣ್ರೀ, ಬಿಡುತ್ವೇ? ಬಿಡಿಸಿಕೊಳ್ಳೋವರೆಗೂ ಒದ್ದಾಡ್ತಾಲೇ ಇರುತ್ವೆ."

"ದಪ್ಪ ದಾರದಿಂದ ಕಟ್ಟಿದರೆ?" ಲಲಿತಳಿಗೆ

ಕೋಳಿಯ ಉಪ್ಪಾಟದ ಮೇಲೆ ಗಮನವಿಲ್ಲ. ನೆರೆಯಾಕೆಗೆ ತೋಟದ ಮೇಲೆ ಗಮನವಿಲ್ಲದಂತೆ.

"ದಪ್ಪನೇ ದಗ್ಗ ಕಟ್ಟೀ. ಅವು ಉಪ್ಪಾಡೀ. ಕಾಲು ಮುರ್ಕೊಂಡ್ರೆ ಏನು ಮಾಡೋದು. ಯಾರು ಕೊಡ್ತಾರೆ ಬೇರೆ ಕೋಳೀನ?" ಆಕೆಯ ದಿಟ್ಟ ಪ್ರಶ್ನೆ. "ಇಷ್ಟಕ್ಕೂ ಕೋಳಿ ಕೊಕ್ಕರೆ ಅಂದ್ರೆ ಅವು ಕಾಲಾಡಬೇಡವೆ. ಹುಡುಕಿಕೊಂಡು ಅಲ್ಲಿ ಇಲ್ಲಿ ಕೆದಕಿ ಮಾಡಿ ಹುಳಹುಬಟೆ ಕಾಳುಗೀಳ ನಲ್ಲಿ ಹೊಟ್ಟೆ ತುಂಬಿಕೊಳ್ಳಬೇಡ್ವೆ, ನಾವು ಏಷ್ಟು ಏನು ಹಾಕೋಕಾಗುತ್ತೆ—ಅವಕ್ಕೆ ಬೇಕು ಬೇಕಾದ್ದನ್ನೆಲ್ಲ. ಅದಕ್ಕೆ ಅಡ್ಡಿ ಮಾಡೋದಕ್ಕಾಗುತ್ತೆ?!" ಆಕೆಯ ಟ್ರಂಪು.

"ಅದೇನೋಮ್ಮಾ, ನಿಮ್ಮ ಜಾಗದಲ್ಲಿ ಏಷ್ಟಾದರೂ ಓಡಾಡಲಿ. ಏಷ್ಟಾದರೂ ಕೆದಕಲಿ. ಏನಾದರೂ ಹುಡುಕಿಕೊಂಡು ತಿನ್ನಲಿ; ನಾವೇನು ಬೇಡ ಅನ್ನೋದಿಲ್ಲ. ನಮ್ಮ ಕಡೆ ಬರದೆ ಇದ್ದ ಹಾಗೆ ನೋಡಿಕೊಳ್ಳಿ ಸ್ವಲ್ಪ. ಆಗಿದ್ದಾಗಿಹೋಯ್ತು. ಮುಂದಾದರೂ ನಾವು ನಮಗೆ ಬೇಕಾದ ಹಾಗೆ ಏನಾದರೂ ಬೆಳೆದು ಮಾಡಿ…"

"ಏನೋ ಆಗ ಈಗ ಅಷ್ಟು ಬಂದ್ರೆ ಹುಷ್ ಅಂತ ಸ್ವಲ್ಪ ಓಡಿಸಿದರಾಯ್ತು. ಏನು ದೊಡ್ಡ ವಿಷಯ!

"ದೊಡ್ಡ ವಿಷಯ ಅಲ್ವೆ ಇಷ್ಟೆಲ್ಲ ಹಾಳಾಗಿರೋದು? ನಮಗೆಲ್ಲ ನಮ್ಮನಮ್ಮದೇ ದೊಡ್ಡ ವಿಷಯ. ಕೋಳಿಗಳೇನು ಬರ್ತಾಲೇ ಇರುತ್ವೆ ಹಾಗೆ ಓಡಿಸಿದರೆ ಹೇಗೆ. ಏಷ್ಟೂಂತ ಓಡಿಸ್ತಾನೇ ಕೂತಿರೋದು. ಬೆಳಗ್ಗೆಯಿಂದ ಸಂಜೆಯವರೆಗೂ? ನಮಗೆ ಬೇರೆ ಕೆಲಸ ಇರೋದಿಲ್ವೆ—ಎಲ್ಲರಿಗೂ ಇರೋ ಹಾಗೆ. ಸಂಸಾರ ಅಂದ ಮೇಲೆ? ನಮಗೇನು ಮಕ್ಕಳು ಮರಿ ಇವಾರೇ. ನಿಮಗೆ ಇರೋ ಹಾಗೆ. ಓಡಿಸ್ತಾ ಇರ್ರೋ ಅನ್ನೋದಕ್ಕೆ? ಇದೂ ಅದು ಸಾಧ್ಯಾನೋ?"

"ಮಕ್ಕಳು ಮರಿ ಇರೋದು ಬಿಡೋದು ಅವರವರ ಪುಣ್ಯ. ಪಾಪ. ಆ ಮಾತು ಯಾಕೆ? ನಿಮಗೆ ಅಷ್ಟು ಕಷ್ಟ ನಷ್ಟ ಆದ್ರೆ ಗೋಡೆ ಎತ್ತರಿಸಿಕೊಳ್ಳಿ. ಮೇಲೆ ಮುಳ್ಳು ತಂತಿ ಬೇಲಿ ಹಾಕಿಸಿಕೊಳ್ಳಿ. ಇನ್ನೇನು ಮಾಡೋದು?"

"ಏನು ಗೋಡೆ ಎತ್ತರಿಸೋದೆ—ಹತ್ತಿಪ್ಪತ್ತು ರೂಪಾಯಿ ಕೋಳಿಗೋಸ್ಕರ ಸಾವಿರಾರು ರೂಪಾಯಿ ಖರ್ಚುಮಾಡಿ! ಚೆನ್ನಾಯ್ತು, ನೀವು ಹೇಳೋದು. ಇಷ್ಟಕ್ಕೂ ಅಲ್ಲಿ ನೋಡಿ, ಏಷ್ಟು ಎತ್ತರ ಗೋಡೆ ಮೇಲೆ ಕುಳಿತಿವೆ, ನಿಮ್ಮ ಕೋಳಿ, ಅಂತ. ಅವೇನು ಮನೆ ಮೇಲಕ್ಕೂ ಹಾರುತ್ವೇನೋ. ಅಷ್ಟೊಂದು ಖರ್ಚು ಮಾಡ್ತೀವಿ ಅಂದುಕೊಂಡ್ರೂ ಏಷ್ಟು ಎತ್ತರ ಗೋಡೆ ಆದರೆ ಏನು ಫಲ?"

"ಅದು ಇಷ್ಟವಿಲ್ಲದೆಯಿದ್ರೆ ಪಾತಿ ಮೇಲೆ ಸಸಿ ಮೇಲೆ ಮುಳ್ಳು ಕವಿಚಿಕೊಳ್ಳಿ ಬೇಕಾದರೆ."

"ಆ! ಮುಳ್ಳು ಕವಿಚೋದೆ ಎಲ್ಲೆಲ್ಲೂ? ಮನೆ ಸುತ್ತ ಮುಳ್ಳಿನ ಕಾಡು ಮಾಡಿಕೊಂಡೂ? ಬಹಳ ಚೆನ್ನಾಗಿರುತ್ತೇರೀ. ಅದೇನು ನಮಗೆ ಹಣೆ ಬರಹ ಹೇಳಿ. ಯಾವ ಪಾಪ ಮಾಡಿದ್ದಕ್ಕೆ? ನೀವೇ ಸ್ವಲ್ಪ ಯೋಚಿಸಿ."

"ಅಂದ್ರೆ, ನಿಮಗೆ ಏನು ಮಾಡಿಕೊಳ್ಳೋದಕ್ಕೂ ಇಷ್ಟವಿಲ್ಲ ಅಂತ ಆಯ್ತು. ಏಷ್ಟೊಂದು ಸಲಹೆ ಕೊಟ್ಟೂವೆ. ನಾವು ಇನ್ನೇನು ಮಾಡಬೇಕು ಅಂತೀರಾ? ನಿಮ್ಮ ಬಿಹಾಮತ್ತಿನ ತೋಟಕ್ಕೆ ಅಂತ ನಮ್ಮ ಕೋಳಿ ಕತ್ತು ಮುರಿ ಅಂತೀರಾ?"

"ಛೆ ಛೆ. ಹಾಗನ್ನಲಿಲ್ಲಾಮ್ಮಾ. ಇಲ್ಲದ್ದನ್ನು ಹೇಳಬೇಡಿ. ಅವನ್ನು ಸ್ವಲ್ಪ ನೋಡಿಕೊಳ್ಳಿ. ಇಲ್ಲಿಗೆ ಬರದ ಹಾಗೆ ಅಷ್ಟೆ."

"ನೋಡಿಕೊಂಡೇ ನೋಡಿಕೋತೀವಿ, ಬಿಡ್ತೀವೆ? ಹಾಗಾದ್ರೂ ಅಷ್ಟಿಷ್ಟು ಬಂದ್ರೆ ನಾವು ಹೊಣೆಯೇ ಅದಕ್ಕೆ? ಕೋಳಿ ಇಟ್ಕೊಳ್ಳಲೇಬಾರದೇನು ನಾವು. ನೀವು ನೆರೇಲಿ ಇದ್ದೀರಿ ಅಂತ?"

"ಹಾಗೆಲ್ಲಿ ಹೇಳಿದೇರೀ? ನೀವು ಹುಟ್ಟಿಸಿಕೋತಾ ಇದ್ದೀರಿ. ಮುಖ್ಯವಾಗಿ ನಿಮಗೆ ಇಷ್ಟವಿಲ್ಲ ಅಂತ ಕಾಣುತ್ತೆ. ನಮಗೆ ಎಳ್ಳಷ್ಟೂ ಸಹಾಯ ಮಾಡೋಲಿಕ್ಕೆ."

"ಏನು ಸಹಾಯಾ? ಅದೇನೋ. ನಾವು ಮಾಡೋದನ್ನೆಲ್ಲ ಮಾಡೇ ಮಾಡ್ತೀವಿ. ನಿಮ್ಮ ಕೈಯಲ್ಲಿ ಹೇಳಿಸಿಕೊಳ್ಳಬೇಕೆ? ಇಷ್ಟಕ್ಕೂ ಇದು ನಮ್ಮ ಮನೆ: ಬಿಟ್ಟಿ ಇರ್ತಾ ಇಲ್ಲ: ಬಾಡಿಗೆ ಕೊಡ್ತೀವಿ: ಬೇಕಾದ್ದು ಮಾಡ್ತೀವಿ. ನಮ್ಮ ಮನೇಲಿ ಅಂಗಳದಲ್ಲಿ. ಕೋಳೀನೇ ಸಾಕ್ತೀವಿ. ಹಂದೀನೇ ಸಾಕ್ತೀವಿ. ನೀವು ಯಾರು ಕೇಳೋದಕ್ಕೆ ಹೇಳೋ

ದಕ್ಕೆ? ಒಳ್ಳೇ ಚೆನ್ನಾಯ್ತು ಕಣ್ರೀ. ನಿಮ್ಮದನ್ನ ನೀವು ಭದ್ರಮಾಡಿಕೊಳ್ಳಿ ಹ್ಯಾಗೋ ಏನೋ–ಯಾರು ಬೇಡ ಅಂತಾರೆ. ಆಗ್ಲೇ ಅನ್ನಲಿಲ್ವೆ ನಾನೂ? ಬೇಕಾದ್ರೆ ಓಡ್ಸಿ. ಸಾಕಾದ್ರೆ ಬಿಡಿ. ನಾವೇನೂ ಮಾಡೋದಕ್ಕೆ ಆಗೋದಿಲ್ಲ. ಇನ್ನು ನಮ್ಮ ತಂಟೆಗೆ ಮಾತ್ರ ಬರಬೇಡಿ, ಹೇಳೋದಿಕ್ಕೆ ಮಾಡೋದಿಕ್ಕೆ. ನಿಮ್ಮ ತಂಟೇಗೇನಾದ್ರೂ ನಾವು ಬಂದಿದೀವೇ? ನಮಗೆಲ್ಲ ಗೊತ್ತು. ಚೆನ್ನಾಗಿ ಗೊತ್ತು. ತಿಳೀತೇ? ಅದೆಲ್ಲ ನಡೆಯೋದಿಲ್ಲ ನಮ್ಮಲ್ಲಿ. ಹುಂ. ಏನೋ ನೆರೆಹೊರೆ, ಹೋಗಲಿ, ಅಂತ ನಾಲ್ಕು ಮಾತು ಕೇಳಿದರೆ. ನಮಗೇ ಆರ್ಡರ್ ಮಾಡ್ತಾ ಇದೀರಿ. ಹಾಗೆ ಮಾಡಿ ಹೀಗೆ ಮಾಡಿ ಅಂತ. ಲಕ್ಷಣವಾಯ್ತು. ನೆರೆಹೊರೆ ಅಂದ್ರೆ ಹೀಗೂ ಉಂಟೇ?"

"ಏನ್ರೀ ನಾನು ಆರ್ಡರ್ ಮಾಡಿದ್ದೂ? ಬೇಡಿಕೊಂಡೆ ಅಷ್ಟೆ–ನಮಗೆ ಇಷ್ಟು ಕಷ್ಟ ನಷ್ಟ..."

"ಹೂಂ, ಬೇಡಿಕೋತೀರಿ! ಬೆಳಗಾಗೆದ್ದು ಜಗಳ ಕಾಯೋದಕ್ಕೆ ಬಂದಿದೀರಿ ದೊಡ್ಡದಾಗಿ, ಇಷ್ಟು





ಸಣ್ಣ ವಿಷಯಕ್ಕೆ. ನಿಮಗೆ ಮನೆಗೆಲಸ ಅದೂ ಇದೂ ಇಲ್ವೇನೋ? ಕೆಲಸಕ್ಕೆ ಯಾರು ಯಾರೋ ಕೈಯಿಗೆ ಒಬ್ಬರು ಕಾಲಿಗೆ ಒಬ್ಬರು ಇದಾರೇನೋ. ನಮಗೆ ಯಾರೂ ಇಲ್ಲಾಮ್ಮಾ. ನಿಮ್ಮ ಹತ್ರ ಸಣ್ಣ ಪುಟ್ಟದ್ದಕ್ಕೆಲ್ಲ ವಾದಿಸ್ತಾ ಇರೋದಕ್ಕೆ. ಹೊತ್ತಾಯ್ತು ಹೋಗಬೇಕು. ಅಯ್ಯೋ, ಅವರಿಗೆ ಮಕ್ಕಳಿಗೆ ತಿಂಡಿ ಕಾಫಿ ಆಗಬೇಕು. ಹುಂ. ಬೆಳಗಾಗೆದ್ದು ಯಾರ ಮುಖ ನೋಡಿದೆನೋ ಏನೋ. ಹೀಗಾಯ್ತು" ಆಕೆ ತಿರುಗಿದಳು.

"ಏನ್ರೀ, ನೆರೆಹೊರೆ ಅಂದ್ರೆ ಇಷ್ಟೇನಾ?"

"ಇಷ್ಟೆ. ಬೇಕಾದಷ್ಟಾಯ್ತು." ಒಂದು ಹೆಜ್ಜೆ ಇಟ್ಟರು.

"ಅಂತೂ ನಿಮಗೆ ನಿಮ್ಮ ಕೋಳಿಯೇ ಹೆಚ್ಚಾಯ್ತಲ್ಲ."

"ಹೌದೇ ಹೌದು. ನಮಸ್ಕಾರ!"

ಲಲಿತಳಿಗೆ ಪ್ರತಿನಮಸ್ಕಾರಕ್ಕೆ ತಾಳ್ಮೆಯಾಗಲೀ ತ್ರಾಣವಾಗಲೀ ಇರಲೇ ಇಲ್ಲವೇನೋ, ಅಥವ ದಂಗು ಬಡಿದಿರಬೇಕು. ಅಂತೂ ಮೊದಲ ರೌಂಡಿನಲ್ಲಿ ಸೋತು ತಲೆ ತಗ್ಗಿಸಿಕೊಂಡು ಮುಸುಮುಸುಗುಟ್ಟುತ್ತ ಹಿಂದಿರುಗಿದಳು. ನಿಜ. ಅಂಥ ವಿಷಮ ಸಮಯದಲ್ಲಿ ಅವಳನ್ನು ನಾನು ಮಾತಾಡ

ಏನಿದ್ದರೇ ಸರಿಯಾಗಿರುತ್ತಿತ್ತು. ಹಾಗೆ ನೋಡಿದರೆ ಸಂತಾಪ ಸಹಾನುಭೂತಿಗಳೂ ಅವನ್ನ ರೇಗಿಸುತ್ತಿದ್ದುವೇನೋ. ಆದರೆ ನಾನು ಪಟ್ಟಿಂಕೆಯಿಲ್ಲದೆ "ನೀನು ಇನ್ನಷ್ಟು ಡಿಪ್ಲೋಮ್ಯಾಟಿಕ್ ಆಗಿ ಜಾಣತನದಿಂದ ಆಕೆಯನ್ನು..." ಎನ್ನುತ್ತಿದ್ದಂತೆಯೇ ಲಲಿತಳಿಗೆ ಹುಣ್ಣಿನ ಮೇಲೆ ಬರೆ ಎಳೆದಂತಾಗಿರಬೇಕು.

"ಏನೂ!..." ಅವಳು ನನ್ನನ್ನು ದುರುಗುಟ್ಟಿಕೊಂಡು ನೋಡಿ ಗುರುಗುಟ್ಟಿದಳು. "ಇನ್ನೂ ಜಾಣತನದಿಂದಲೇ? ಸರಿಯಾಯ್ತು ಸರಿಯಾಯ್ತು. ನಾನು ಸೆರಗೊಡ್ಡಿ ಬೇಡೋದು, ಕಣ್ಣೀರು ಹಾಕೋದು ಒಂದು ಬಾಕಿ. ಆಕೆಯ ರೀತಿ ನಿಮಗೆ ಗೊತ್ತಾಗಲಿಲ್ವೆ? ಸಹನೆಯಿಲ್ಲ, ಸಂಸ್ಕೃತಿಯಿಲ್ಲ. ಮಾತಾಡಿದರೆ, ಆಡದಿದ್ದರೂ ಮೇಲೇ ಬೀಳ್ತಾಳೆ. ಇನ್ನೆರಡು ಮಾತಾಡಿದ್ದರೆ ಕೈ ಕೈ ಕೂಡ ಹತ್ತಿಕೊಳ್ತಾ ಇತ್ತೋ ಏನೋ. ಹುಂ, ಇನ್ನೂ ಡಿಪ್ಲೋಮ್ಯಾಟಿಕ್ ಅಂತೆ! ಅದೇನೋ ನಿಮ್ಮ ವ್ಯವಹಾರಕೌಶಲ್ಯಾನ ಆತನ, ಆಕೆ ಗಂಡನ ಹತ್ರ ತೋರಿಸಿ. ಅವರ ಮುಂದೇ ಸುತ್ತಾ ಕುಣಿದೂ ಕುಪ್ಪಳಿಸೀ ಕಾಲು ಹಿಡಿದೂ, ಪೂಜೆ ಭಜನೆ ಪ್ರಾರ್ಥನೆ ಮಾಡೀ, ಹೇಗಾದರೂ ಕೆಲಸ ಅಷ್ಟು ಸಾಧಿಸಿಕೊಂಡು ಬನ್ನಿ, ನೋಡೋಣ. ಆಮೇಲೆ ನಂಗೆ ಜಾಣತನ ಕಲಿಸೋರಂತೆ! ಆತ ಆಕೆಯ ಗಂಡ ನಲ್ಲವೆ! ಜಾಣತನವಂತೆ ಜಾಣತನ! ಯಾರಲ್ಲಿ ಜಾಣತನ? ಇನ್ನೆಂಥ ಜಾಣತನ? ನಂಗೆ ಗೊತ್ತಿಲ್ಲ. ಆಕೆ ಮುಖದ ನೀರು ಇಳಿಸೋಣ ಅಂತ ಇದ್ದೆ. ಆದರೆ ನೀವೇನು ಅಂತೀರೋ—ಈಗಲೇ ಅಂದಿರಲ್ಲ—ಏಲ್ಲ ಹಾಳು ಮಾಡಿಬಿಟ್ಟೆ ಅಂತ ಅರ್ಥ. ಅವರಿಂದ ನಮ್ಮ ಕೆಲಸ ಆಗಬೇಕಾಗಿದೆಯಲ್ಲ ಅಂತ ಅರ್ಥ, ಹೇಗೋ ತಡೆದುಕೊಂಡೆ—ನಂಗೇ ಅತ್ಯಾರ್ಥ ಆಗೋ ಹಾಗೆ... ಆಕೆ ಏನಾಡಿದರೆ ಏನು ನಮಗೆ ಬೇಜಾರಾಗಿದೆ ಅಂತ ಗೊತ್ತೇ ಆಗಿದೆ, ತಿದ್ದಿಕೊಂಡಾರು. ಯಾವುದಕ್ಕೂ ದಾರಿಗೆ ಬರದೇ ಇದ್ದರೆ ಬಿಡ್ತೀನೆ? ಇಷ್ಟೇ ಇದೆ. ಆ ಹಾಳು ಕೋಳಿ ನಮ್ಮ ಕಾಂಪೌಂಡಿಗೆ ಕಾಲು ಹಾಕಲಿ, ಕಲ್ಲು ಹೊಡೆದು ಕಾಲು ಕುಂಟು ಮಾಡದೆ ಇದ್ದರೆ ನನ್ನ ಹೆಸರು ಲಲಿತಾನೇ ಅಲ್ಲ. ಹುಂ. ಆದದ್ದಾಗಲಿ, ನೋಡೋಣ. ಕೋರ್ಟಿಗೆ ಹೋಗಲಿ, ಠಾಣೆಗೆ ಹೋಗಲಿ—ಯಾರು ಬೇಡ ಅಂತಾರೆ."

"ಅಯ್ಯೋ, ಮಹಾರಾಯಿತಿ ಹಾಗೆಲ್ಲಾದರೂ ಮಾಡಿಬಿಟ್ಟೀಯೆ. ಭಾರಿ ರಂಪವೇ ಆಗುತ್ತೆ. ನಾನಂತೂ ಪೋಲೀಸ್ ಸ್ಟೇಷನ್ನಿಗೆ, ಕೋರ್ಟಿಗೆ ಅಲೆಯಲಾರೆ, ನಿನ್ನನ್ನೂ ಕಟ್ಟಿಕೊಂಡು. ನೋಡಿದರೆ ಅವರು ಕೋರ್ಟಿಗೆಳೆಯೋ ಜನದ ಹಾಗೇ ಕಾಣ್ತಾರೆ. ಬೇಕಾದರೆ ನಾವೇ ದೂರು ಕೊಡೋಣ; ನಮಗೆ ನಷ್ಟ ಆಗಿದೆ ಅಂತ ದಾವಾ ಮಾಡೋಣ ನಷ್ಟ ಭರ್ತಿಗೆ. ಕೋರ್ಟಿಗೆ ಹೋಗಲೇಬೇಕಾದರೆ ಅದೇ ವಾಸಿ. ಹಾಗೂ ಆಕೆಯೇ ತಿದ್ದಿಕೊಂಡಾರು ನೀನು **ಹೇಳಿದ ಹಾಗೆ—ಅದರ** ಆಸೆಯೇನು ಇರದ್ಕೆ ಇದ್ದರೂ ಆತನನ್ನೂ ನೋಡೋಣ. ಇಷ್ಟಕ್ಕೂ ಏನಾದರೂ ಪಾಪ, ಆ ಬಡ ಕೋಳಿಗಳು ಏನು ಮಾಡುತ್ತವೆ ಕಾಲು ಕಳೆದುಕೊಳ್ಳೋದಕ್ಕೆ, ನಿನ್ನ ಕಲ್ಲಿನಿಂದ,"ನಾನು ವಾದಿಸಿದೆ.

"ಅವೂ ಅಪರಾಧಿಯೇ, ಅವರ ಅಲಕ್ಷ್ಯದಿಂದ. ಅನುಭವಿಸಲಿ!" ಪಟ್ಟು ಬಿಡಲಿಲ್ಲ.

ಅವಳನ್ನು ಸಂತೈಸಿ. ಶಾಂತಳನ್ನಾಗಿಸಿ, ನಾಗರಿಕಳನ್ನಾಗಿಸಿ—ಒಂದು ಮಾತಿನಲ್ಲಿ ದುರ್ಗೆಯನ್ನು ಲಲಿತೆಯನ್ನಾಗಿಸಿ—ಅವಳ ಕೋಳಿ ಶಿಕ್ಷೆಯನ್ನು ಮುಂದಕ್ಕೆ ಹಾಕಿಸುವಷ್ಟರಲ್ಲಿ ನನಗೆ ಸಾಕುಸಾಕಾಯಿತು. ಕಡೆಗೆ ನಾವು ಇನ್ನೂ ಕಾಫಿ ಕುಡಿದಿಲ್ಲವೆಂದೂ ನೆನಪು ಕೊಡಬೇಕಾಯಿತು.

ಆ ದಿನವೆಲ್ಲ ನಮ್ಮ ಭೂಗಾಣ ಉಪವನ ಅನಾಥವಾಗಿತ್ತು, ರುದ್ರಭೂಮಿಯಾಗಿತ್ತು. ನಾವು ಕೈ ಹಾಕಲಿಲ್ಲ. ಕೋಳಿಗಳನ್ನು ಅವರು ತಡೆಯಲಿಲ್ಲ. ಅವು ಅದೆಷ್ಟು ಬಾರಿ ಬಂದವ್ರೋ, ಅದೆಷ್ಟು ನಮ್ಮನ್ನು ಕುಕ್ಕಿದವ್ರೋ, ಅದೆಷ್ಟು ಜೋರಾಗಿ 'ಕೊ ಕ್ಕೊ ಕ್ಕೋ' 'ಕೊಕ್ಕೊಕ್'ಎಂದು ಹುಂಜ ಹೇಂಟೆಗಳು ಅಣಕಿಸಿ ನಕ್ಕವ್ರೋ. ಆಕೆ ಹೇಗೆಂದರೂ ಪಶ್ಚಾತ್ತಾಪದಿಂದ ಬೇಸರದಿಂದಲಾದರೂ ಅವರು ಕೋಳಿಗಳನ್ನು ತಡೆಯಬಹುದೆಂದುಕೊಂಡಿದ್ದ ನಮಗೆ ನಿರಾಶೆಯಾಯಿತು. ಆದರೆ ನಾವು ನಮ್ಮಿಬ್ಬರ ಮಧ್ಯದ ಒಪ್ಪಂದದಂತೆ ಹೇಗೋ ಸುಮ್ಮನಿದ್ದೆವು.

ಆ ಮಧ್ಯಾಹ್ನದಲ್ಲಿ ಬಹಳ ಹೊತ್ತು ಹೊಂಚು ಹಾಕಿ, ಸಮಯ ಸಾಧಿಸಿ, ನೆರೆಯಾತ ತಮ್ಮ ಮನೆ ಗೇಟಿನ ಬಳಿ ನಿಂತಿದ್ದಾಗ ನಾನು ಹೇಗೋ ಏಕೋ

ಹೋದಂತೆ ನನ್ನ ಗೇಟಿಗೆ ಹೋಗಿ ನಿಂತು ಎಲ್ಲೋ ನೋಡುವಂತೆ ಅವರ ಕಡೆಗೆ ನೋಡಿ, 'ನಮಸ್ಕಾರಾ!' ಎಂದು ಹಲ್ಲು ಕಿರಿದು ಕಣ್ಣು ಕಿರಿದು ಮಾಡಿ ನನಗಾದಷ್ಟೂ ಸವಿಯಾಗಿ ನಕ್ಕೆ. ಅವರು ಗಂಭೀರವಾಗಿ ನಮಸ್ಕಾರ ಹೇಳಿದ ಮೇಲೆ ನಾನು ಅವರ ಕಡೆಗೆ ಮಧ್ಯದ ಕಾಂಪೌಂಡ್ ಗೋಡೆಯ ಬಳಿಗೆ ಸಾಗಿ ನಗುತ್ತಲೇ ಅವರೂ ಅಲ್ಲಿಗೆ ಬರಲೇ ಬೇಕಾಯಿತು.

"ಹ್ಹ! ನಾವು ಇಲ್ಲಿಗೆ ಬಂದು ಇಷ್ಟು ದಿನವಾದರೂ ತಮ್ಮ–ತಮ್ಮಗಳ–ಪರಿಚಯ ಮಾಡಿಕೊಂಡೇ ಇಲ್ಲ. ನಮ್ಮ ತಪ್ಪು. ಹೊಸ ಮನೆ ಅವ್ಯವಸ್ಥೆ ತುರ್ತು ಕೆಲಸ ಅದು ಇದು. ಇಂದು ನಾಳೆ ಅಂತ ದಿನ ಕಳೆದೇಹೋಯ್ತು. ನಾವು–ನನ್ನ ಹೆಂಡತಿ, ನಾನು–'ಫಾರ್ಮಲ್' ಆಗಿಯೇ ತಮ್ಮ ಮನೆಗೆ ಭೇಟಿ ಕೊಡಬೇಕು ಅಂತ ಅಂದುಕೋತಾ ಇದ್ದೆವು. ಇಂದು ಈಗ ಅಕಸ್ಮಾತ್ತಾಗಿ ನೀವೂ ಗೇಟ್‌ನಲ್ಲಿ ನಿಂತಿದ್ದು ನಾನೂ ಅಕಸ್ಮಾತ್ತಾಗೇ ಮುಂದಕ್ಕೆ ಬಂದ ಮೇಲೆ ಈಗಲೇ ಮಾತಾಡಿಸಿಬಿಟ್ಟೆ. ತಾವೆಲ್ಲ ಚೆನ್ನಾಗಿದ್ದೀರಿ ತಾನೆ?" ನಾನು ನನಗೇ ನಾಟಕೀಯವಾಗಿ ಕಂಡೆ.

"ಹೀಗೇ ನೋಡಿ ಸಾರ್."

ನಾನು ಕೈ ಚಾಚಿದೆ. ಅವರು ನೀಡಿದ ಕೈಯನ್ನು ಆದಷ್ಟು ಬಲವಾಗಿ ಒತ್ತಿ, ಸ್ವಲ್ಪ ಹೊತ್ತು ಬಿಡದೆ ನನ್ನ ಸ್ನೇಹಪ್ರಿಯತೆಯನ್ನು ತೋರಿಸಿಕೊಂಡೆ. ಸರಿ, ಅಲ್ಲಿಂದ ಅವರ ನಾಮಧೇಯ (ಶ್ರೀಮಾನ್ ಶಾಂತಪ್ಪ) 'ಕೆಲಸ ಜೋಶ'(ಜಮೀನ್ದಾರ್, ಲಾಯರ್), ಯಜಮಾನ ಯಜಮಾನಿಯರ ಊರು ಕೇರಿ (ಕೊಳ್ಳೇಗಾಲ, ತರೀಕೆರೆ), ಎರಡೂ ಕಡೆಯ ವಂಶಾವಳಿಯ ವಿವರ (ಮರೆತುಹೋಗಿದೆ), ಇಲ್ಲಿಗೆ ಬರುವುದಕ್ಕೆ ಮುಂಚೆ ಇದ್ದ ಸ್ಥಳಗಳು (ಮೈಸೂರಿನಲ್ಲೇ ನಜರ್‌ಬಾದ್, ಕೆಸರೆ, ವಿದ್ಯಾರಣ್ಯಪುರ, ಒಂಟಿಕೊಪ್ಪಲು, ಸರಸ್ವತೀಪುರ, ಹಳೇ ಅಗ್ರಹಾರ, ಕನ್ನೇಗೌಡನ ಕೊಪ್ಪಲು ಅಷ್ಟೇ ಎಂದು ನೆನಪು), ಮಕ್ಕಳು ಮರಿ, ಅವರ ಓದು, ಶಾಲೆಗಳು ಇತ್ಯಾದಿ (ಎಲ್ಲ ಕಲಸಿಹೋಗಿವೆ), ನಂಟರು ಇಷ್ಟರು ಮನೆ ಮನೆಯ ಮಾಲಿಕರು ಬಾಡಿಗೆ ಬಂಕ ಮಾಲಿಕರ ನಡೆನುಡಿ ಎಲ್ಲವನ್ನೂ ಆಮೂಲಾಗ್ರವಾಗಿ ಅವರ ಹೆಂಡತಿ ವಿಷಯವನ್ನೊಂದನ್ನು ಬಿಟ್ಟು. ಅತ್ಯಂತ ಆಸಕ್ತಿಯಿಂದ ಕೇಳಿದೆ–ಕೇಳಿದೆ. ಅವರು ಸೌಜನ್ಯದಿಂದ "ತಾವು ಹಿಂದೆ ಎಲ್ಲಿದ್ರಿ?" ಎಂದಾಗ ನಾನು ಅತ್ಯುತ್ಸಾಹದಿಂದ ವಂಶಪಾರಂಪರ್ಯ ರೀತಿಯಿಂದ ನನ್ನ ಆತ್ಮಕಥೆಯನ್ನು ಪೂರ್ತಿಯಾಗಿ ನಿವೇದಿಸಿಕೊಂಡೆ. ತದನಂತರ ಮತ್ತೆ ಅವರ ಕಷ್ಟ ಸುಖವನ್ನು ಕೆದಕಿ ದೀರ್ಘವಾಗಿ ವಿಚಾರಿಸಿಕೊಂಡು ಸೂಕ್ತವಾಗಿ ಸಹಾನುಭೂತಿ ಸಂತೋಷಗಳನ್ನು ವ್ಯಕ್ತಪಡಿಸಿದೆ. ಕಷ್ಟವೆಂದೊಡನೆ ಈಗ ಸೀಮೆ ಎಣ್ಣೆಗೆ ಹನುಮಂತ ಬಾಲ ಕ್ಯೂ ಬರದಿರುತ್ತಯೆದೆ, ಗೋಧಿ, ಇನ್ನೇನು ಅಕ್ಕಿಯೂ– ಸಿಮೆಂಟ್, ಎಣ್ಣೆ ಪೆಟ್ರೋಲ್, ಅದರ ಅಭಾವ, ಇದರ ಅಭಾವ, ಸರ್ವಾಭಾವ,–ಬರದಿರುತ್ತದೆಯೆ, ಗರೀಬಿ ಹಟಾವೋ ಘರಾಟೆಯಲ್ಲಿ ಗರೀಬ ಮಧ್ಯಮ ಸಿರಿ ವರ್ಗಗಳನ್ನು ಒಂದುಮಾಡಿರುವ ಸೋಷಿಯಲಿಸ್ಟ್ ಗಗನಗಾಮಿ ಬೆಲೆಯೇರಿಕೆ ಬರದಿರುತ್ತದೆಯೆ, ಕಾಂಗ್ರೆಸ್ ವಿಭಜನೆ ಕುರಿ–ತೋಳ–ಸೋಷಿಯಲಿಸಂ–ಸಕ್ಕರೆ ಚುನಾವಣೆ ಬರದಿರುತ್ತದೆಯೆ. ಗರೀಬ ರಾಷ್ಟ್ರಾಧ್ಯಕ್ಷ ಗರೀಬ ಪ್ರಧಾನಿ ಗರೀಬ ಮಂತ್ರಿಕೋಟಿಯ ನುಡಿ ನಡೆ ಉದ್ಧಾರ ಪಟು ಪಟಿಕೆಗಳು ಬರದಿರುತ್ತವೆಯೆ, ಸರ್ವವ್ಯಾಪಿ ಕಾಳ ಸಂತೆ ಬಹು ಸಾಮಾನ್ಯ ಬಾಹ್ಯಾಂತರ್ಯಾಮಿ ಲಂಚ ಕೋರತನ ಬರದಿರುತ್ತವೆಯೋ? ಎಲ್ಲವೂ ಬಂದವು. ನಾವು ಮಂತ್ರಿಮಹೋದಯ ಮಹಾಜಿಪ್ವರನ್ನೂ ಮೀರಿಸಿ ಮಾತನಾಡಿದೆವು, ಸಿಗಿಸಿಗಿದೆವು ಅಗಿದಗಿದೆವು, ಉಗಿದುಗಿದೆವು, ಉಸಿರು ಮೆತ್ತಗಾಗುವವರೆಗೂ.

ಹೀಗೆ ಕ್ಷೇತ್ರವನ್ನು ಹದಮಾಡಿಕೊಂಡು ಕ್ರಮೇಣ ಹೇಗೋ ಮಾತನ್ನು ಮೆತ್ತಗೆ ವೈಯುಕ್ತಿಕ ವಿಷಯ, ನಮ್ಮ ನಮ್ಮ ಅಭಿರುಚಿ ಇಷ್ಟಾನಿಷ್ಟಗಳ ಕಡೆಗೆ ತಿರುಗಿಸಿ ಇಲಿಯ ಹಿಂದಿನ ಬಾಲದಂತೆ ವಿಪರೀತ ಚಾತುರ್ಯದಿಂದ ಪ್ರಸ್ತುತ ವಿಷಯಕ್ಕೆ ಬಂದೆ, ಏನೋ ಲೋಕಾಭಿರಾಮವಾಗಿ ಆಡುವಂತೆ.

"ಇದೇನು, ನೀವು ಗಿಡಗಂಟೆ ಏನೂ ಹಾಕೇ ಇಲ್ಲವಲ್ಲ?" ಅವರ ಕಾಂಪೌಂಡಿನತ್ತ ಆಗ ತಾನೆ ನೋಡುತ್ತಿದ್ದಂತೆ ಕೇಳಿದೆ.

"ಏನೋ ನಮಗೆ ಅವರ ಖಯಾಲಿ ಇಲ್ಲ ಸಾರ್."

"ನಮಗೆ ಬಹಳ ಆ ಖಯಾಲಿ—ಹೂವು ಹಣ್ಣು ತರಕಾರಿಗಿಡಗಳು ಅಂದರೆ. ನಾವು ಇದ್ದ ಬಾಡಿಗೆ ಮನೆಗಳಲ್ಲೂ ಕೂಡ ಭರ್ಜರಿ ತೋಟ ಮಾಡ್ತಾ ಇದ್ದೆವು. ಇದು ಅಂದರೆ ಇನ್ನೂ ಒಂದು ಕೈ ಹೆಚ್ಚು. ನಮ್ಮ ಸ್ವಂತ ಮನೆ ನೋಡಿ. ಬಹಳ ಬಹಳ ಮಾಡ ಬೇಕು ಅಂತ ಏನೇನೆಲ್ಲ ಹುಟ್ಟಿಹಾಕೋದಕ್ಕೆ ಶುರು ಮಾಡಿಬಿಟ್ಟಿದ್ದಿವಿ ಆಗಲೇ—ಕಾಣುತ್ತಲ್ಲ. ಹ್ಞ!" ನನ ಸ್ಮಶಾನದ ಕಡೆಗೆ ಅವರ ಗಮನ ಸೆಳೆದೆ. "ಏನೋ ಸ್ವಲ್ಪ ಅಲ್ಲಿ ಇಲ್ಲಿ ಕೊಟ್ಟುಹೋಗಿದೆ ಇವತ್ತು. ಯಾವುದೋ ಹಕ್ಕಿ ಪಕ್ಷಿಯೇನೋ—ಕೋಳಿಯಿದ್ದರೂ ಇರಬಹುದು ಅಂತ ಕಾಣುತ್ತೆ—ಬೆಳಿಗ್ಗೆ ಕೆದಕಿ ಕೆತ್ತು ನೋಡಿ. ಅದೇನು ದೊಡ್ಡ ಮಾತಲ್ಲ ಅನ್ನಿ" ಎಂದು ಸೇರಿಸಿದೆ ಬೆಣ್ಣೆಯಲ್ಲಿಯ ಕೂದಲು ತೆಗೆದಂತೆ ನಯವಾಗಿ ಸೂಕ್ಷ್ಮವಾಗಿ.

"ಹೌದು, ಅದೇನು ದೊಡ್ಡ ವಿಷಯ ಸಾರ್. ಸರಿಮಾಡಿಕೊಂಡರಾಯ್ತು." ಅದೇನು. ಅವರು ಯಾವ ಅರ್ಥದಲ್ಲಿ ಹೇಳಿದರೋ. ಸರಿಮಾಡಿಕೊಳ್ಳುವುದು ತೋಟವನ್ನೋ ನಾವು. ಕೋಳಿಯನ್ನೋ ಅವರು. ಅಥವಾ ಎರಡನ್ನೂಯೇನೋ. ಅಂತೂ ಸಂದಿಗ್ಧ.

"ನಿಜ ನಿಜ. ತಾವು ಹೇಳೋದು ಸರಿ. ಹ್ಞ! ಹ್ಞ! ಸರಿಮಾಡಿಕೊಂಡರಾಯ್ತು. ಅದೇನು ಮಹಾ? ಹ್ಞ! ಸರಿಮಾಡಿಕೊಳ್ಳೋಣ" ಅವರಿಗೂ ನಮಗೂ ಇಬ್ಬರಿಗೂ ಅನ್ವಯಿಸುವಂತೆ ಹೇಳಿ ಅಷ್ಟರಿಂದಲೇ ತೃಪ್ತಿಪಟ್ಟುಕೊಂಡೆ—ನನ್ನ ಜಾಣ. ಮಕಮಲ್ ಜಾಣರೇ ಅವರೂ. ಗುರಿ ಮುಟ್ಟಿತೆಂದು. "ಅಂತೂ ನಮಗೆ ಬಹಳ ಒಳ್ಳೇ ನೆರೆ ಸಿಕ್ಕಿದಂತಾಯ್ತು" ಎಂದು ಹೊಗಳಿ ನಾಲಗೆ ಕಚ್ಚಿಕೊಂಡೆ— ಅವರು ಹೇಗೆ ತಿಳಿದುಕೊಂಡರೋ ಎಂದು. ಕೂಡಲೇ ನೆರೆ—ಹೊರೆಯ ವಿಶ್ಲೇಷಣೆಗೆ ತೊಡಗಿ ಬೊಂಬಾಯಿನ ಜಂಟಿ ಮನೆಯಲ್ಲಿ ಒಂದೇ ಗೋಡೆ ಆಚೆಗಿದ್ದ ಛತ್ರಲೋಮನ್ ಶ್ರೀಮಾನ್ ಮೋಹಾಭಾಯಿ ನಿತ್ಯ ರಾತ್ರಿ ಆವೇಳೆಯ ಪೂಜೆ ಭಜನೆ ಗುರು ಘಂಟೆ ಗಲಾಟೆಗಳಿಂದ ನರೆಗೆ ಕೊಟ್ಟ ಕಿರುಕಳ. ಬನಾರಸ್‌ನಲ್ಲಿ ಸೀಬೆಯ ಗಿಡದ ಕೊಂಬೆಯೊಂದು ಆಚೆಯ ಕಡೆಗೆ ಬಗ್ಗಿದ್ದುದರಿಂದಲೇ ಮರ ಹತ್ತಿ ಮರದ ಮನೆಯವರಿಗೇ ಬೀಜೊಂದನ್ನೂ ಬಿಡದೆ ಕೇಳುತ್ತಿದ್ದ ಪ್ರೊಫೆಸರ್ ಸಿನ್ಹಾ ಸಾಹೇಬರು, ಬೆಂಗಳೂರಿನ ಕೆಂಪಣ್ಣನ ನಿರಂತರ ಆರಾಧನಾ, ಅಖಂಡ 'ಸಪ್ತಾಹ'ಗಳ ಭರಾಟೆಯನ್ನು ತಾಳಲಾರದೆ ಮನೆಯನ್ನೇ ಮಾರಿಕೊಂಡ ಮೇಷ್ಟ್ರ ಪಾಡು, ಮೈಸೂರಿನಲ್ಲಿ ಕಂಟ್ರಾಕ್ಟರ್ ನರಸಿಂಗಯ್ಯನ ಜಲ್ಲಿ ಮರಳು ಡಾಮ್ರು ಡ್ರಮ್ ತಗಡಿನ ಮೂರು ಲಾರಿಗಳ, ಇಪ್ಪತ್ತು ಕೂಲಿ ಕಾರಕೂನರ ಹೊತ್ತು ಗೊತ್ತಿಲ್ಲದ ಹೊಂದು ಅಪರಾತ್ರಿ ವಿಪರೀತ ಚಟುವಟಿಕೆಗೆ ಬಲಿಯಾಗಿ ಸ್ವಂತ ಮನೆ ಬಿಟ್ಟ ಬಡಪಾಯಿ ಲೇಖಕ, ಹೀಗೆ ತಿಳಿದಿದ್ದ ಎಷ್ಟೋ ಪ್ರಸಂಗಗಳನ್ನು ವಿವರಿಸಿ, "ಮನೆ ಅಂದರೆ ಗೋಡೆ ಛಾವಣಿಗಳೇ ಅಲ್ಲ. ಸುತ್ತ ಮುತ್ತಲಿನ ವಾತಾವರಣ ಸನ್ನಿವೇಶಗಳನ್ನೂ ಸೇರಿಸಲೇಬೇಕು. ಮನೆ ನಿಜವಾದ ಮನೆಯಾಗಬೇಕಾದರೆ, ನೆರೆಮನೆ ರಣರಂಗ ಸ್ಮಶಾನ ಆಗದಿರಬೇಕಾದರೆ ಒಳ್ಳೇ ನೆರೆಯ ಪುಣ್ಯ ಪಡೆದುಕೊಂಡು ಬಂದಿರಬೇಕು, ನೋಡಿ. ಅಲ್ವೆ?" ಎಂದು ವ್ಯಾಖ್ಯಾನಿಸಿ ಕೇಳಿದೆ. ಅವರು ಏನನ್ನೂ ಹೇಳಲಿಲ್ಲ.

ಇಷ್ಟಷ್ಟು ನನ್ನಿಂದ ಸಿಹಿಸಿಹಿ ಸ್ನೇಹದ ಮಾತು. ಮತ್ತಷ್ಟು ಇಬ್ಬರಿಂದಲೂ ರಾಜಕೀಯ. ಸ್ವಲ್ಪ ಹವಾಗುಣ ಆದ ಮೇಲೆ 'ಮತ್ತೆ ಸೇರುವ' ಭರವಸೆಯಿಂದ ನಾವು ಬೀಳ್ಕೊಂಡೆವು.

ಲಲಿತಳಿಗೆ ನನ್ನ ವಿಜಯವನ್ನು ಉತ್ಸಾಹದಿಂದ ತಿಳಿಸಿದಾಗ ಅವಳು ಕೂಲಂಕಷವಾಗಿ ಪಾಟೀ ಸವಾಲು ಮಾಡಿ, "ಸರಿಮಾಡಿಕೊಂಡರಾಯ್ತು ಅಂದದ್ದು ಅಷ್ಟೇ ತಾನೇ? ನೋಡೋಣ" ಎಂದು ಮೋಗಮ್ಮಾಗಿ ನಿರುತ್ಸಾಹದಿಂದ ಹೇಳಿದಳು.

"ನಾವು ಗಂಡಸರು ಆಡೋದು ಒಂದೇ ಮಾತು. ಹೆಂಗಸರ ಹಾಗಲ್ಲ."

"ಹೂಂ, ಹೌದು. ಪಾಪ. ಎರಡು ಗಂಟೆಯಿಂದಲೂ ಒಂದೇ ಒಂದು ಮಾತು ಆಡ್ತಾ ಇದ್ದಿರೇನೋ. ಅದೂ ಅಂಥ ಅನುಮಾನದ್ದು" ಲಲಿತ ದಬಾಯಿಸಿದಳು.

ಅನಂತರ ಹ್ಯಾಮ್‌ಲೆಟ್‌ನ 'To Be Or Not To Be' ಹಾಗೆ ಸಂಜೆ ತೋಟವನ್ನು ಸರಿಮಾಡಬೇಕೇ ಬೇಡವೇ ಎಂದು ನಮ್ಮಲ್ಲಿ ಬಿಸಿ ಬಿಸಿ ಚರ್ಚೆಯಾಯಿತು. ಬೇಡವೇ ಬೇಡವೆಂದು ಲಲಿತ. ನೆರೆಯಾತನ ಭರವಸೆಯ ಬೆಳಕಿನಲ್ಲಿ ಮಾಡ ಬಯಸಿದ್ದೂ ಇಲ್ಲದಿದ್ದರೆ ಕಿತ್ತ ಸಸಿ ಕೆದಕಿದ ಬೀಜ



ಪೂರ್ತಿ ಹಾಳಾಗುವುದೆಂದು ನಾನು. ಅಂತೂ ಲಲಿತಳ ಮೊಂಡುತನವನ್ನು ಸಡಿಲಿಸಿ ಆ ಪರಮ ಶಿಕ್ಷೆಗೆ ಅವಳನ್ನೂ ಎಳೆದುಕೊಳ್ಳುವುದರಲ್ಲಿ ಸಮರ್ಥ ನಾದೆ.

ಎಂಬಲ್ಲಿಗೆ ಕುಕ್ಕುಟ ಯುದ್ಧ ಪ್ರಥಮಾಧ್ಯಾಯಂ ಸಂಪೂರ್ಣಂ.

೩

ಮಾರನೆಯ ಮುಂಜಾನೆ ಕನಸಿನಲ್ಲಿ ಕೇಳಿಸಿದ್ದು ನಂದನ ನವಿಲಿನ ಕೇಕೇಕೇ ಕೇಕೆಯಲ್ಲ. ಸ್ಪಷ್ಟವಾಗಿ ಅದೇ ಕೊಕ್ಕೊಕ್ಕೋ ಕೋಳಿ ಕೂಗು— ನಮ್ಮ ಕಿಟಕಿಯ ಮುಂದೆ. ಕೂಡಲೇ ಎದ್ದು ಓಡಿಸಬೇಕೆಂದು ಇಷ್ಟ. ಆದರೆ. 'The spirit is willing, but the flesh is weak' (ಆತ್ಮ ಒಪ್ಪುತ್ತದೆ. ಆದರೆ ದೇಹ ದುರ್ಬಲ) ಅಂದ ಹಾಗೆ ಕಣ್ಣು ಬಿಡಲೊಲ್ಲದು. ಕನಸೂ ಮುಗಿಯಲೊಲ್ಲದು. ಎಂಟು ಗಂಟೆಗೆ ಎದ್ದು ನೋಡಿದರೆ ಅದೇ ದೃಶ್ಯ ಹಿಂದಿನ ಬೆಳಗಿನ—ಅದೇ ರಣಭೂಮಿ. ಅದೇ ಕಾಂಪೌಂಡ್ ಗೋಡೆಯ ಮೇಲೆ ಅದೇ ಕುಕ್ಕುಟ ಸಮ್ರಾಟ ಸಾಮ್ರಾಜ್ಞಿ ಸಂಗ. ಅದೇ ಪ್ರಾತರ್ವಿಧಿ, ಟಾಯ್ಲೆಟ್, ಸವಾಲು ಕೂಗು ಎಲ್ಲ. ನಮ್ಮ ನಿನ್ನೆ ಸಂಜೆಯ ಮರಳಿ ಯತ್ನವೆಲ್ಲ ವ್ಯರ್ಥ. ಗ್ರೀಕರ ಪ್ರಕಾರ ನರಕದಲ್ಲಿ ಸಿಸಿಫಸ್ ಎಂಬ ಮುದುಕ ಪಾಪಿ ಬಹಳ ಕಷ್ಟಪಟ್ಟು ದೊಡ್ಡ ಬಂಡೆಯೊಂದನ್ನು ಬೆಟ್ಟದ ಮೇಲಕ್ಕೆ ತಳ್ಳುತ್ತಿದ್ದನಂತೆ, ಕೂಡಲೇ ಅದು ಕೆಳಗೆ ಉರುಳಿ ಬಂದುಬಿಡುತ್ತಿತ್ತಂತೆ. ಯಮದೂತರು ಕೆಳಗೆ ತಳ್ಳುತ್ತಿದ್ದರೇನೋ. ಅನಂತರ ಮುದುಕ ಮತ್ತೆ ಬೆಟ್ಟದ ಮೇಲಕ್ಕೆ ತಳ್ಳಬೇಕು. ಮತ್ತೆ ಮತ್ತೆ ಅದೇ ಶಿಕ್ಷೆ. ನಮಗೂ ಈ ಸಿಸಿಫಸ್ ಶಿಕ್ಷೆ—ಯಾವ ಪಾಪಕ್ಕೋ—ಕೋಳಿ ಯಮದೂತರಿಂದ.

ನಮಗೆ ಹೇಗಾಗಿರಬೇಕು. ನಾವೇನೇನನ್ನು ಮಾತನಾಡಿಕೊಂಡೆವು. ಹೇಗೆ ಹೇಗೆ ಶಪಿಸಿದೆವು ಎಂಬುದನ್ನು ನಿಮ್ಮ ಊಹೆಗೇ ಬಿಡುತ್ತೇನೆ. ಬರೆಯಲಾರೆ. ಈ ದಿನದ ವೈಶಿಷ್ಟ್ಯವೆಂದರೆ ನೆರೆಯಾತನ ಬಗ್ಗೆ ನಿರಾಶೆ.

ನೆರೆಯಾತ. ನೆರೆಯಾಕೆ ಎಲ್ಲೂ ಕಾಣಿಸುತ್ತಿಲ್ಲ. ನನ್ನ ಒಳ್ಳೆಯದೇ ಆಯಿತೇನೋ.

"ನೋಡಿ ನಿಮ್ಮ ಅಪ್ರತಿಮ ವಿಜಯ, ನಿನ್ನೆ ಕೊಚ್ಚಿಕೊಂಡ್ರಲ್ಲ. ನಂಗೆ ಅನುಮಾನ ಇದ್ದೇ ಇತ್ತು. 'ಸರಿ ಮಾಡಿಕೊಂಡರಾಯ್ತು' ಅಂತ ಆತ ಅಂದದ್ದು ನಿಮ್ಮ ಅರ್ಥದಲ್ಲಿ ಅಲ್ಲ ಅಂತ ಕಾಣುತ್ತೆ. ಒಂದು ವೇಳೆ ಹಾಗೇ ಅಂದಿದ್ರೂ ಆತನ ಮಾತೇನೂ ನಡೆಯೋದಿಲ್ಲ ಆ ಮನೇಲಿ ಅಂತ ಗೊತ್ತಾಯ್ತೊ? ಆ ಜಗಳಗಂಟಮ್ಮನ ಗಂಡ henpecked (ಕೋಳಿ ಕುಕ್ಕ) ಇರಬೇಕು." ಲಲಿತಳ ಕುಕ್ಕ ತಿವಿತ. ಅವಳ ಕೋಪ ಆರುವಂತಿರಲಿಲ್ಲ. ದುರ್ಗೆ ತನ್ನ ಹಿಂದಿನ ದಿನದ ಪ್ರತಿಜ್ಞಾಪಾಲನೆಗಾಗಿ ಪಾತಿಯ ಸುತ್ತದ ದೊಡ್ಡ ಇಟ್ಟಿಗೆಯನ್ನು ಕಿತ್ತು ಕೈಗೆತ್ತಿಕೊಂಡಳು ಕುಕ್ಕಟ ಮಾರಕಾಸ್ತ್ರವಾಗಿ.

"ಶಾಂತಳಾಗು! ಶಾಂತಳಾಗು ಪ್ರಿಯೆ! ಆ ಬಡ ಜಂತುಗಳಿಗೆ ಪ್ರಾಣದಾನಮಾಡು!" ನನ್ನ ಕೋಪದಲ್ಲಿಯೂ ನಾನು ನಾಟಕೀಯವಾಗಿ ಹೇಳುತ್ತ ಅವಳ ಎತ್ತಿದ ಕೈ ತಡೆದೆ. ಕೋಳಿಗಳು ಅಷ್ಟಕ್ಕೇ ಬೆದರಿ ಇನ್ನೂ ಉನ್ನತ ಪ್ರಾಕಾರ ಸಿಂಹಾಸನವನ್ನೇರಿ ಕುಳಿತವು. ಅದೇ ಸಮಯದಲ್ಲಿ ಆ 'ಜಗಳಗಂಟಮ್ಮ'ನವರು 'ಹಿತ್ತಲಿಗೆ ಬರುತ್ತ ದುರ್ಗಾವತಾರವನ್ನು ಕಂಡರು. ನಾನು ಅಲ್ಲಿಂದ ಕೂಡಲೇ ಕಾಲು ಕಿತ್ತೆನೆಂದು ಹೇಳಬೇಕಾಗಿಲ್ಲ. ಮುಂದೆ ಅನಿವಾರ್ಯವಾಗಿ ಜರುಗಿದ ದ್ವಿತೀಯ ವಾಗ್ ಮಹಾಯುದ್ಧದಲ್ಲಿ ಅದ್ವಿತೀಯೆ ದುರ್ಗಾದೇವಿಯ ಕೈ ಮೇಲಾಗಿತ್ತೆಂದು–ಒಂದು ಕೈ ಮಾತ್ರ ಆದರೂ–ನಿವೇದಿಸಲು ಸಂತೋಷಿಸುತ್ತೇನೆ. ಲಲಿತ ಅಂದಿನ ಅರೆ ಸೋಲಿಗೆ ಈಗ ಸೇಡನ್ನು ತೀರಿಸಿಕೊಂಡಳು. ಸ್ಪರ್ಧಿಗಳು 'ಸರಿಸಮ' ಆದರು. ಆದರೇನು, ಕೋಳಿ ಸಮಸ್ಯೆಯಾಗಲೀ ತೋಟದ ಸಮಸ್ಯೆಯಾಗಲೀ ಇದರಿಂದ ಬಗೆಹರಿಯಲಿಲ್ಲ. ನೆರೆಹೊರೆಯ ಬಿಕ್ಕಟ್ಟು ಇನ್ನೂ ಬಲವಾಗಿ ಕಗ್ಗಂಟು ಬಿದ್ದಿತು.

ಕೋಳಿ ಸಾಯಲಿಲ್ಲ, ತೋಟ ಉಳಿಯಲಿಲ್ಲ. ಇಂಥಾದ ಮೇಲೆ ನಾವು ಬಹಳ ಬಹಳ ಮಂತ್ರಾಲೋಚನೆ ಮಾಡಿದೆವು. ಲಲಿತ 'ಮುಳ್ಳಿನ ತೋಟ'ದ ಮಾರ್ಗ ಬೇಡವೆಂದು ಹಟ ಹಿಡಿದಳು. 'ಪೋಲೀಸಿಗೆ ದೂರು' ದಾರಿಯನ್ನು ನಾನು ವಿಶೇಷಾಧಿಕಾರ ಚಲಾವಣೆಯಿಂದ 'ವೀಟೋ' ಮಾಡಬೇಕಾಯಿತು. ನಾನು ಮನೆಯನ್ನು ಮಾರಿ ಕೋಳಿ ಕೊಕ್ಕರೆಗಳಿಲ್ಲದ ಕೇರಿಯೊಂದರಲ್ಲಿ ಮನೆ ಕೊಂಡುಕೊಳ್ಳುವ ಪ್ರಸ್ತಾಪವೆತ್ತಿದೆ. ಕೂಡಲೇ ಲಲಿತ ಈಗ ತಾನೆ ಕೊಂಡುಕೊಂಡ ಮನೆಯನ್ನು ಇಷ್ಟಕ್ಕಾಗಿ ಮಾರುವ ಪ್ರಶ್ನೆಯೇ ಉದ್ಭವಿಸುವುದಿಲ್ಲವೆಂದು ವಿರೋಧಿಸಿ, ಕೋಳಿಕೊಕ್ಕರೆ ಇಲ್ಲದ ಕೇರಿಗಳೇ ಈಗ ಇಲ್ಲದಿರಬಹುದೆಂದೂ ಎಚ್ಚರಿಸಿ, ದಾಸಪಂಥದ ನಾವು ಇದ್ದು ಜೈಸಬೇಕೆಂದು ಉಪದೇಶಿಸಿದಳು. 'ಇದ್ದು ಜೈಸು'ವುದು ಹೇಗೆಂದು ಕೂಡಿಸಿದ ಎರಡು ತಲೆಗಳೂ ಬಗೆಬಗೆದು ತೆಗೆದು ಖಾಲಿಯಾದ ಮೇಲೆ ನೆರೆಗೆ ಅದರಲ್ಲಾಗಿಯೂ ಆ ಇನ್ನೊಬ್ಬರು ಜಗಳಗಂಟಮ್ಮನಿಗೆ ಸದ್ಬುದ್ಧಿ ಬರಲೆಂದು ದೇವರಲ್ಲಿ ಮೊರೆಯಿಡುವ, ಹರಕೆ ಹಾಕಿಕೊಳ್ಳುವ ಮಾರ್ಗವೊಂದೇ ಉಳಿದಿರುವುದೆಂದುಕೊಂಡೆವು. ಆದರೆ ಮರುಕ್ಷಣದಲ್ಲಿಯೇ ನಮ್ಮ ನಾಸ್ತಿಕತೆಯ ನೆನಪು ಬಂದು ಆ ಪ್ರಾರ್ಥನೆ ಲಂಚಗಳು ವ್ಯರ್ಥವಾಗುವವೆಂದು ತೋರಿತು. ಕಡೆಗೆ, ಕಟ್ಟಕಡೆಗೆ, ತೋಟಗಾರಿಕೆಯನ್ನು ಸದ್ಯಕ್ಕಾದರೂ–ಮತ್ತಷ್ಟು ಬೆಳಕು ಕಾಣುವವರೆಗೆ–ಕೈ ಬಿಡಬೇಕೆಂದು ಸರ್ವಾನುಮತದಿಂದ ಠರಾವು ಪಾಸು ಮಾಡಿ ನಿಶ್ಚಿಂತೆಯ ಚಿತೆಯ ಮೇಲಿದ್ದೆವು. ಹೀಗಾದರೂ ಕುಳಿತಾಗ ನಿಂತಾಗ ನೆರೆಹೊರೆಯ ಮಾತಾಡುವುದಾಗಲೀ, ಕೋಳಿ ಕಂಡಾಗ ಕೂಗು ಕೇಳಿದಾಗ ಲಲಿತ 'ಥೂ!' ಎಂದು ನೆಟಿಕೆ ಮುರಿಯುವುದಾಗಲೀ, ನಾವು ಮಣ್ಣಿನ ಹೆಂಟೆ–ಗಜ್ಜುಗ ಗಾತ್ರದವು–ಹತ್ತಿರ ಎಸೆದು 'ಹುಶ್! ಹುಶ್!' ಎನ್ನುತ್ತ ಕ್ಷಣ ಕ್ಷಣಕ್ಕೂ ಕೋಳಿಗಳನ್ನು ಓಡಿಸುತ್ತಿರುವುದಾಗಲೀ ತಪ್ಪಲಿಲ್ಲ. ನಾಲ್ಕಾರು ದಿನಗಳಲ್ಲೇ ನಮ್ಮ ಕನಸಿನ ನಂದನ ಅಲ್ಲೊಂದು ಇಲ್ಲೊಂದು ಓಯಾಸಿಸ್ ಇರುವ ಸಹರಾ ಸುಡುಗಾಡಾಯಿತು. ಒಂದು ಕಾಲವಲ್ಲಿ ನಮ್ಮ ಕಾಂಪೌಂಡ್ ಎನ್ನಿಸಿಕೊಂಡಿದ್ದದ್ದು–ಹಿಂದು ಮುಂದಿನ ಮೆಟ್ಟಲೂ ಸೇರಿ ಈಗ ಕುಕ್ಕಟ ರಾಜದಂಪತಿಗಳ ವಿಹಾರಸ್ಥಾನ, ಅವಿರತ ರತಿಕ್ರೀಡಾಸ್ಥಾನ, ಭೋಜನಗೃಹ, ಶಯನಗೃಹ, ಅಲಂಕಾರಗೃಹ, ವಿಶಾಲ ಶೌಚಗೃಹವೂ ಆಗಿತ್ತು. ನಮ್ಮ ಒಡೆತನವನ್ನು ಕಳೆದುಕೊಂಡಿದ್ದೆವು. ಪರಿಸ್ಥಿತಿ ಶಾಂತವಾಗಿತ್ತು.

ಇಂಥ ದಿನಗಳಲ್ಲಿ ಒಂದು ರಾತ್ರಿ ಅಪರೇಳಕ್ಕೆ ಕೋಳಿಯ ಕರ್ಕಶ ಆರ್ತಸ್ವರ ನಮ್ಮನ್ನೂ ಎಚ್ಚರಿಸಿಬಿಟ್ಟಿತು. ಆ ಸ್ವರದೊಂದಿಗೇ ಪಟಪಟ ದೊಡ್ಡ



ರೆಕ್ಕೆ ಬಡಿದು ಸಮ್ಮತನಗೆ ಹಾರಿ ಬಂದ ಇನ್ನೊಂದು ಶಬ್ದ. ನಾನು ಬೆಡ್‌ಸ್ವಿಚ್ ಹಾಕಿ ಏಳಬೇಕೆನ್ನುವಷ್ಟರಲ್ಲೇ ಪಕ್ಕದ ಮನೆ ಹಿಂದಿನ ಬಾಗಿಲು ತೆಗೆದ ಶಬ್ದ. ಶಾಂತಪ್ಪ ದಂಪತಿಗಳು ಏತ್ತಲತ್ತ ಮಾತಾಡಿಕೊಳ್ಳುತ್ತಿದ್ದುದೂ ಕೇಳಿಸಿತು. ಅಸ್ಪಷ್ಟವಾಗಿ. ಇನ್ನೇನು ಜವಾಬ್ದಾರರೇ ಇದ್ದಾರಲ್ಲ ಎಂದು ದೀಪ ಆರಿಸಿ ಮತ್ತೆ ಮಲಗಿಬಿಟ್ಟೆವು. ಸಾಮಾನ್ಯ ಸ್ಥಿತಿಯಾಗಿದ್ದರೆ ಹಾಗೂ ಎದ್ದು ಏನು ಎತ್ತ ಎಂದು ವಿಚಾರಿಸಿಕೊಳ್ಳುತ್ತಿದ್ದೆವೇನೋ:–ಒಳ್ಳೆಯ ನೆರೆ ಬಂತೆ. ಅಂತೂ ಬೆಳಿಗ್ಗೆ ಕುಕ್ಕುಟ ಸಮ್ರಾಟ ಬಿಟ್ಟೇ ಕಾಂಪೌಂಡ್ ಗೋಡೆಯ ಮೇಲೆ ನಿಂತು ನಿತ್ಯಕ್ಕಿಂತಲೂ ಬಹಳ ಜೋರಾಗಿಯೂ ಗಂಟಲು ಬಿರಿದುಕೊಳ್ಳುತ್ತಿದ್ದುದನ್ನು ಕಂಡು ಶ್ರೀ ಶಾಂತಪ್ಪನವರಲ್ಲಿಗೇ ಹೋಗಿ ವಿಚಾರಿಸಿದೆ. ಅವರ ಪ್ರಕಾರ ಯಾರೋ ಕೋಳಿ ಗೂಡಿನ ಬಿಗಿದ ಬಾಗಿಲನ್ನು ಸ್ವಲ್ಪ ಸರಿಸಿ ಒಳಗಿದ್ದ ಬುಟ್ಟಿಯನ್ನು ಕೊಕ್ಕೆಯಿಂದ ಎಳೆದು ಕೂಗಿಕೊಳ್ಳುತ್ತಿದ್ದ ಹೇಂಟೆಯನ್ನು ಕದ್ದುಕೊಂಡು ಹೋಗಿದ್ದರಂತೆ. ಹುಂಜ ಹಾರಿ ತಪ್ಪಿಸಿಕೊಂಡಿದ್ದಿತಂತೆ. ನಾನು ಪ್ರತ್ಯೂರ್ವಕ ಸಂತಾಪ ಹೇಳಿದೆ. ಪೋಲೀಸರಿಗೆ ದೂರು ಕೊಡಬೇಕೆಂದೂ ಹಾಗೆ ಮಾಡದಿದ್ದರೆ ಮತ್ತೆ ಹುಂಜವನ್ನೂ ಹೊಡೆದುಕೊಂಡು ಹೋಗಬಹುದೆಂದೂ ಹೇಳಿದೆ. ಅವರು "ಅಯ್ಯೋ ಅವರೇನೂ ಮಾಡೋದಿಲ್ಲ, ಇಪ್ಪತ್ತು ಸಾರಿ ಪೋಲೀಸ್ ಸ್ಟೇಷನ್ನಿಗೆ ಅಲೆಯಬೇಕಾಗುತ್ತೆ ಅಷ್ಟೆ" ಎಂದು "ಯಾರೋ ಎಲ್ಲ ಚೆನ್ನಾಗಿ ಕಂಡುಕೊಂಡಿರೋರೇ ನಡೆಸಿರೋ ಕೆಲಸ" ಎಂದು ಸೇರಿಸಿದರು. "ಹೌದು ಹೌದು" ಎಂದು ನಾನು ಒಪ್ಪಿಗೆಯನ್ನು ಸೂಚಿಸಿದೆ. ಮನೆಗೆ ಬಂದು ಹೇಳಿದಾಗ ಲಲಿತ ಮಾತಾಡದೆ ಸುಮ್ಮನಿದ್ದಳು. ಅರ್ಥಪೂರ್ಣ ಮೌನ.

ಊಟದ ಹೊತ್ತಿನಲ್ಲಿ ಲಲಿತ ಮುಮುಮುಮು ಗುಟ್ಟುತ್ತಿದುದಕ್ಕೆ ಕಾರಣವನು ಕೇಳಿದಾಗ

"ನೋಡ್ರೀ, ಏನೋ ಏನಾದರೂ ನೆರೆಹೊರೆ, ನಾನೂ ವಿಚಾರಿಸೇ ಬಿಡೋಣ ಅಂತ ಹಿತ್ತಲಲ್ಲಿ ಆಕೇನ ಕಂಡಾಗ ಅಂದುಕೊಂಡ್ರೆ ಅವರು ನೋಡಿಯೂ ನೋಡದಂತೆ ಮುಖ ತಿರುಗಿಸಿಕೊಂಡು ಬಿಟ್ರು. ಏನೋ ಗೊಣಗಿಕೊಂಡ್ರು ಅಂತಾಲೂ ಅನ್ನಿಸ್ತು" ಎಂದು ಆಕ್ಷೇಪಿಸಿದಳು—ಸಿಟ್ಟಿನಿಂದ.

ಸಂಜೆ ನಾನು ಮನೆ ತಲುಪಿದಾಗ ಹಿತ್ತಲಲ್ಲಿ ಮೂರನೆಯ ಮಹಾಯುದ್ಧ ಜರುಗುತ್ತಿತ್ತು. ಯುದ್ಧವಿರಾಮವಾಗಿ ಲಲಿತ ಒಳಗೆ ಬಂದಾಗ ವಿಚಾರಿಸಿದೆ.

"ಕೇಳಿದ್ರಾ! ಈ ನೆರೆಮನೆಯಾಕೆ ಆ ಪಕ್ಕದ ನರಸಮ್ಮನೋರ ಹತ್ತಿರ ಅಂದರಂತೆ 'ಆ ಕೋಳಿ ಕಳ್ಳತನದಲ್ಲಿ ಅವರ ಕೈವಾಡ ಏನೋ ಇರಬೇಕು: ಆ ಹೊತ್ತಿನಲ್ಲಿ ಅವರ ಮನೇಲಿ ದೀಪ ಹಾಕಿತ್ತು: ಅವರಿಗೆ ನಮ್ಮ ಕೋಳಿ ಕಂಡರೆ ಆಗ್ತಾ ಇರಲಿಲ್ಲ' ಅಂತ ಏನೇನೋ. ನರಸಮ್ಮನೋರೇ ಖುದ್ದಾಗಿ ಬಂದು ಹೇಳಿದರು. ಅದೇನು ಅಂತ ಸ್ವಲ್ಪ ಆ ಜಗಳಗಂಟಮ್ಮನ್ನ ಚೆನ್ನಾಗಿ ವಿಚಾರಿಸಿ ಮುಖದ ನೀರು ಇಳಿಸೋಣ ಅಂತ ಹೋಗಿದ್ದೆ, ಅಷ್ಟೆ" ಎಂದಳು ಈ ಜಗಳಗಂಟಮ್ಮ. "ನಾನು ನೇರವಾಗೇ ಕೇಳಿದ್ದಕ್ಕೆ ಆಕೆ ಏನಂದರು ಅಂತ? 'ನಾನೇನು ಹಾಗೆ ಹೇಳಲಿಲ್ಲಾಮ್ಮಾ; ಸುಮ್ಮನೆ ಯಾಕೆ ಯಾರ ಯಾರ ಮಾತೋ ಕೇಳಿಕೊಂಡು ಮತ್ತೆ ಜಗಳಕ್ಕೆ ಬರ್ತೀರಿ? ನಿಮಗೆ ಕೋಳಿ ಕಂಡರೆ ಆಗ್ತಾ ಇರಲಿಲ್ಲ, ಅದಕ್ಕೆ ಸರಿಯಾಗೇ ಆಯ್ತು, ಅಂದೆ ಅಷ್ಟೆ. ಅದು ತಪ್ಪೇ' ಎಂದರು. ಅದಕ್ಕೆ ನಾನು ನಮಗೆ ಕೋಳಿ ಕಂಡರೆ ಅಲ್ಲ. ಅದರ ಹಾವಳಿ ಯಾಕೆ ಆಗ್ತಾ ಇರಲಿಲ್ಲ ಅಂತ ಮತ್ತೆ ಅದೇ ಆ ಹಳೇ ಕೋಳಿ ಪುರಾಣಾನೆಲ್ಲ ಒಂದು ಚೂರೂ ಬಿಡದೆ ಬಿಚ್ಚಿ ಆಡಿದೆ, ಈಗಲಾದರೂ ತಿಳಿದುಕೊಳ್ಳಲಿ ಅಂತ. ಬಿಡ್ತೀನೇ ಸಮಯ ಸಿಕ್ಕಾಗ? 'ಹಾಗೇಂತ ನಿಮ್ಮ ಕೋಳಿ ಹಾಳಾಗಲಿ ಅನ್ನೋ ಜನ ನಾವಲ್ಲ. ನಮ್ಮ ತೋಟ ಎಷ್ಟೇ ಹಾಳಾದ್ರೂವೆ; ಏನೋ ಸ್ವಲ್ಪ ನೋಡಿಕೊಳ್ಳಿ ಅಂದೆವು, ಅದು ತಪ್ಪೆ? ನಿಮ್ಮ ಕೋಳಿ ಕಳವು ಮಾಡಿಸೋದಕ್ಕೆ ಮಸಲತ್ತು ಮಾಡೋ ಅಂಥಾ ಕೀಳು ಜನ ಅಲ್ಲಮ್ಮಾ ನಾವು. ನಮಗೇಕೆ ಆ ಕೆಟ್ಟ ವಿದ್ಯೆ; ನಾನೇನು ಆ ಕೋಳಿ ತಿನ್ನಬೇಕಾಗಿದೆಯೋ? ನಿಮ್ಮ ಕೋಳಿ ಬದುಕಿ ಬಾಳಲಿ; ಅವರ ಸಂತತಿ ಬೆಳೆಯಲಿ; ಸಾವಿರವಾಗಲಿ ನಾವು ಹೇಗೂ ತೋಟ ಕೈ ಬಿಟ್ಬಿದ್ದೀವಲ್ಲ, ಮಾಡೋದಿಲ್ಲ ಅಂತ'..."

ಲಲಿತ ಹೇಳಿದ್ದೆಲ್ಲವನ್ನೂ ಸಾವಧಾನವಾಗಿ ಕೇಳಿ, ಗುಡುಗು ಸಿಡಿಲಿನ ಮಳೆ ನಿಂತಾಗ ನಾನು, "ಅಯ್ಯೋ ಹೋಗ್ಲಿ ಬಿಡು. ಅವರು ಆಪಾದನೆ ಮಾಡಿದ ಮಾತ್ರಕ್ಕೇ ನಾವು ಅಪರಾಧ ಮಾಡಿದ ಹಾಗಾಯ್ತೆ? ಆ ಶ್ರೀಕೃಷ್ಣಪರಮಾತ್ಮನಿಗೇ ತಪ್ಪಲಿಲ್ಲವಂತೆ ಏನೆಲ್ಲ. ಆ ಸ್ಯಮಂತಕೋಪಾಖ್ಯಾನ ಕೇಳಿಲ್ವೆ? ಇನ್ನು ನಮ್ಮ ಪಾಡೇನು—ಬಡಪಾಯಿಗಳದ್ದು. ನಾವು ಸರಿಯಾಗಿದ್ದರೆ ಸರಿ, ಅಷ್ಟೆ. ಅದಕ್ಕೆ ಯಾಕೆ ಕೆದಕಿಕೊಂಡು ಹೋದೆ? ಮೊದಲೇ ನಮ್ಮ ನಮ್ಮ ಸಂಬಂಧ ಸಾಕಾದಷ್ಟು ಕೆಟ್ಟಿದೆ" ಅಂದೆ.

"ಅಯ್ಯೋ ಬಿಡ್ರೀ! ನಿಮ್ಮ ಹಾಗೆ ಯಾರು ಏನಂದ್ರೂ ಅನ್ನಿಸಿಕೊಂಡು ಏನು ಮಾಡಿದರೂ ಮಾಡಿಸಿಕೊಂಡು ತಣ್ಣಗೆ ಕೂತುಕೊಂಡು ಅನುಕೂಲ ವೇದಾಂತ ಹೇಳಿಕೊಂಡಿರೋದಕ್ಕೆ ನಂಗೆ ಆಗೋದಿಲ್ಲಾಪ್ಪಾ. ನನ್ನದು ಹುಳಿ ಉಪ್ಪು ಕಾರ ತಿನ್ನೋ ಜೀವ. ಮನಸ್ಸಿಗೆ ಬಂದದ್ದನ್ನು ಬಂದಾಗ ಆಡಿಬಿಡಬೇಕು ಮಾಡಿಬಿಡಬೇಕು. ತಡೆದುಕೊಳ್ಳಲಾರೆ."

"ಈಗ ಏನಾಯ್ತು ನೋಡು ಅದರಿಂದ. ಸ್ಥಿತಿ ಇನ್ನಷ್ಟು ಹದಗೆಟ್ಟಿತು. ಅವರು ಹಟದಿಂದಲೆ ಇನ್ನಷ್ಟು—ಎಂಟೋ ಹತ್ತೋ ಕೋಳಿ ತಂದು ಅವು ನೂರಾರು ಮರಿ ಹಾಕಿ ಎಲ್ಲವೂ ಗೋಡೆಗೆ ಹಾರಿ ಬಂದು ನಮ್ಮ ಕಾಂಪೌಂಡ್‌ನಲ್ಲಿ ಯಾವಾಗ್ಲೂ ಚಿಂಯು ಪಿಂಯು ಕೊಕ್ಕೊಕ್ ಕೊಕ್ಕೋಕ್ಕೋ ಅಂತ..."

"ಆಗ್ಲಿ ಬಿಡ್ರೀ—ನಮ್ಮ ಕಾಂಪೌಂಡ್ ಒಂದು ದೊಡ್ಡ ಕೋಳಿ ಸಾಕಣೆ ಕೇಂದ್ರ ಆಗ್ಲಿ. ಇಷ್ಟಕ್ಕೂ ಅಲ್ಲಿ ನಾವು ಮಾಡ್ತಾ ಇರೋದು ಅಷ್ಟರಲ್ಲೇ ಇದೆ. ನೀರಿನಲ್ಲಿ ಮುಳುಗಿದೋರಿಗೆ ಚಳಿಯೇನು ಮಳೆಯೇನು!" ಲಲಿತ ಹೇಳುತ್ತ ಭರ್ರನೆ ಹೊರಟು ಹೋದಳು ಅಡಿಗೆಮನೆಗೆ.

ಮಾರನೆಯ ದಿನ ಕುಕ್ಕುಟ ಸುಪ್ರಭಾತದಿಂದ ಎಚ್ಚೆತ್ತು ಕಿಟಕಿಯಿಂದ ನೋಡಿದಾಗ ಬಡಪಾಯಿ ಸಮ್ರಾಟ ಏಕಾಂಗಿಯಾಗಿ ಕಾಂಪೌಂಡ್ ಗೋಡೆಯ

ಮೇಲೆ ನಿಂತು ಎಂದಿಗಿಂತ ಜೋರಾಗಿ ಬೇಗ ಬೇಗ ಕೂಗುತ್ತಿದ್ದ. ಆ ಸ್ವರದಲ್ಲಿ ಇಂದು ವಿರಹ ಪ್ರಲಾಪ ಏತ್ತೆ? ಹೌದು. ಇತ್ತು—ಹಾಗೆನ್ನಿಸಿತು ನನಗೆ. ಇದನ್ನು ಸಮರ್ಥಿಸುವಂತೆ ಆ ದಿನಸೆಲ್ಲ ಹೊತ್ತಲ್ಲದ ಹೊತ್ತಿನಲ್ಲೂ ಆ ಒಂಟಿ ಸಮ್ರಾಟ ಅಲ್ಲಿ ಇಲ್ಲಿ ಎಲ್ಲೆಲ್ಲೂ ನಿಂತು ನಿಂತು ಒಂದೇ ಸಮನಾಗಿ ಗಂಟಲನ್ನು ಕಿತ್ತುಕೊಳ್ಳುತ್ತಿದ್ದ. ನೆಲವನ್ನು ಹೆಚ್ಚು ಕುಕ್ಕುತ್ತಲೂ ಇರಲಿಲ್ಲ. ಸಂಜೆಯವರೆಗೂ ಕೇಳಿ ಕೇಳಿ ನನಗೆ ಅಯ್ಯೋ ಪಾಪ ಎನ್ನಿಸಿಬಿಟ್ಟಿತು. ಅದು ಮಾಡಿದ್ದ ನಷ್ಟವನ್ನೂ ಸ್ವಲ್ಪ ಒಂದೆ ತಳ್ಳಿಹಾಕಿ, ನನ್ನ ಮಾತಷ್ಟೇ ಏಕೆ. ಲಲಿತ ಕೂಡ ನಾನು ಅವಳ ಗಮನವನ್ನು ಮತ್ತೆ ಮತ್ತೆ ಸೆಳೆದಾಗ "ಹುಂ. ಬಡ ಮುಂಡೇದು, ಸುಮ್ಮನೆ ಒಂದೇ ಸಮ ಹೊಡೆದುಕೋತಾ ಇದೆ" ಎಂದಳೆಂದರೆ! ಎಷ್ಟಾದರೂ ನಾವು ಪ್ರಣಯಿಗಳಲ್ಲವೆ?

ಹುಂಜ ಪ್ರಲಾಪಿಸುತ್ತಿದ್ದುದಷ್ಟೇ ಅಲ್ಲ, ಒಂದು ಬಾರಿ ಮೂರನೆಯ ಮನೆಯ ಕಾಂಪೌಂಡ್ ಗೋಡೆಯ ಮೇಲಕ್ಕೂ ಹೋಗಿದ್ದ ಪ್ರೇಯಸಿಯನ್ನು ಅರಿಸಿಕೊಂಡೇ ಇರಬೇಕು, ಶಾಂತಪ್ಪನವರ ಮಗ ಹೋಗಿ ಹಿಡಿದುಕೊಂಡು ಬಂದಿದ್ದ. ಮುಂದೆಯೂ ಹೀಗೆ ಎಷ್ಟೋ ಬಾರಿ ಆಗುತ್ತಿದ್ದುದನ್ನು ಕಂಡಿದ್ದೆವು. ಮರುಗಿದ್ದೆವು.

ರಾತ್ರಿ ಮಲಗಿದ್ದಾಗಲೂ ನಮ್ಮ ನಮ್ಮ ವಿಶೇಷ ಮಾತಿನ ಮಧ್ಯೆ ಹುಂಜ ಸಂಕಟದ ಮಾತೂ ಬಂದು ಹೋಗದೆ ಇರಲಿಲ್ಲ.

"ಮೂರು ಹೊತ್ತೂ ಹತ್ತಿರ ಹತ್ತಿರವೇ ಇರ್‍ತಾ ಇದ್ದವು, ಒಂದನ್ನೊಂದು ಎಡಬಿಡದೆ, ಕೊಕ್ಕಿಗೆ ಕೊಕ್ಕು ತಗಲುವ ಹಾಗೇ ನೆಲ ಕುಕ್ತಾ ಇದ್ದವು. ಬಿಸಿಲ ಹೊತ್ತು ಗೋಡೆ ನೆರಳಲ್ಲಿ ಪಕ್ಕ ಪಕ್ಕದಲ್ಲಿ ಒತ್ತೊತ್ತಿಕೊಂಡು ಕೂತಿರ್‍ತಾ—ಮಲಗಿರ್‍ತಾ ಅನ್ನು—ಇದ್ದವು...ದಿನದಲ್ಲಿ ಅದೆಷ್ಟು ಬಾರಿ ಕೊಕ್ ಕೊಡ್ತಾ ಇತ್ತೋ ಹುಂಜ ಆ ಹೇಂಟೆಗೆ— ಅದಕ್ಕೆ ತೃಪ್ತಿಯೇ ಇಲ್ಲ, ಎಷ್ಟು ಕೊಟ್ಟರೂ."

"ಹುಂ, ಸದಾಶಿವನಿಗೆ ಅದೇ ಧ್ಯಾನ ಅಂತ. ಗಂಡು ಹುಟ್ಟಲ್ವೆ ಎಷ್ಟಾದರೂ. ಅದರಿಂದ ಕೆದರಿದ ಪುಕ್ಕಾನ ಆ ಹೆಣ್ಣು ಕೋಳಿ ಸರಿಮಾಡಿಕೊಂಡರೂ ಮಾಡಿಕೊಂಡದ್ದೇ. ದಿನವೆಲ್ಲ: ಅದಕ್ಕೆ ಅದೇ ಒಂದು ಕೆಲಸ; ಹುಂಜ ಕುಕ್ಕಿ ಹಿಡಿದ ನೆತ್ತಿ ಪುಕ್ಕವಂತೂ ಕೆದರಿ ನಿಂತೇ ಇರ್‍ತಾ ಇತ್ತು. ಯಾವಾಗಲೂ ಪಾಪ."

ನಾವು ನಕ್ಕೆವು.

"ಹುಂಜ ಈಗ ಹೇಗಿದೆಯೋ ಪಾಪ, ಇವತ್ತೆಲ್ಲ ಹೇಗೆ ಕಳೀತೋ. ಅಂಥ ಸಂಸ್ಕಾರವಲ್ಲ."

"ಅದು ನಿಮಗೆ ಗೊತ್ತು!"

"ಹುಂ, ಇನ್ನೂ ಎಷ್ಟು ದಿನ ಪಡಬಾರದ ಪಾಡು ಪಡಬೇಕೋ ಆ ಬಡಪಾಯಿ ಗಂಡು!... ಇವತ್ತು ಯಾವ ದಿನ, ಬುಧವಾರ ಅಲ್ವೆ, ಗುರು ಶುಕ್ರ ಶನಿ, ಇನ್ನೂ ಮೂರು ದಿನ ಪಾಪ!... ಲಾಯರು ಭಾನುವಾರ ಅವರ ಹಳ್ಳಿಗೆ ಹೋದಾಗ ಹೆಣ್ಣು ಕೋಳಿ ತಂದೇ ತರ್‍ತಾರೆ—ಒಂದು ಭಾರಿ 'ಹೇರಂ'ನೇ (ಜನಾನ) ತರಬಹುದು. ಆಮೇಲೆ ಸರಿಯಾಗುತ್ತೆ, ಮತ್ತೆ, ಎಲ್ಲ."

"ಅ...! ...ಏನು?...ಹುಂ... ಏನಾದ್ರೂ ಆಗಲಿ."

ನಮ್ಮ ಪಿಸಿಪಿಸಿ ಗುಜುಗುಜು ನಿಲ್ಲಿಸಿ ದೀಪ ಆರಿಸಿದಾಗ ನೆರೆಯ ಮಲಗು ಕೋಣೆಯ ದೀಪ ನಮ್ಮ ಕಿಟಕಿ ಗಾಜಿನ ಮೇಲೆ ಬೀಳುತ್ತಿದ್ದುದು ಕಂಡಿತು. ಆ ಜೋಡಿಯ ಗುಜುಗುಜುವೂ ಕೇಳಿಸುತ್ತಿತ್ತು.

"ಕೇಳಿದೆಯ? ಆ ಜೋಡಿಯ ಸರಸ ಸಲ್ಲಾಪ ಇನ್ನೂ ನಡೆಯುತ್ತಿದೆ!... ನಾವು ಜೋಡಿಗಳು ಹೀಗಿರುವಾಗ ಆ ಕೋಳಿ ಮಾತ್ರ ಒಂಟಿಯಾಗಿ ಚಳಿಯಲ್ಲಿ... "

"ಸಾಕು ಸಾಕು, ನಿಮ್ಮ ಸಂತಾಪ!"

ನಾವು ಬಾಯಿ ಮುಚ್ಚಿಕೊಂಡೆವು!

ಗುರುವಾರ ಮುಂಜಾನೆಗೆ ಮುಂಚೆಯೇ ಮೊದಲಾಗಿದ್ದ ಕೋಳಿ ಪ್ರಣಯಿಯ ವಿರಹ ಪ್ರಲಾಪ ಸಂಜೆಯಲ್ಲಿಯೂ ಮುಂದುವರಿಯುತ್ತಲೇ ಇದ್ದಾಗ ಲಲಿತ, "ಅಯ್ಯೋ. ನಿನ್ನೆಗಿಂತ ಜೋರಾಗಿ ಅರಚಿಕೋತಾ ಇದೆ. ಕೇಳೋದಕ್ಕಾಗೋದಿಲ್ಲಪ್ಪ; ಅದನ್ನು ನೋಡೋದಕ್ಕೂ ಆಗೋದಿಲ್ಲ. ಅದು ನೀವು ಅನ್ನೋ ಹಾಗೆ ಹೆಣ್ಣು ಕೋಳಿಗೋಸ್ಕರವೇ ಗೋಳು ಕರೀತಾ ಇದ್ರೆ, ಒಂದನ್ನು ತರೋದೇ ಅಂದ ಮೇಲೆ. ನಾಳೆಯೋ ಇಲ್ಲೇ ಎಲ್ಲಿಂದಾದ್ರೂ ಅವರು ತಂದರಾದೀತು, ಇನ್ನೂ ಎರಡು ದಿನ ತಡವಾಗೋದು ಬಿಟ್ಟು" ಎಂದಳು. "ಹೌದು"


ಕರ್ನಾಟಕ ರಾಜ್ಯ ಲಾಟರಿ
ಕಲ್ಪತರು ಬಂಪರ್ ಡ್ರಾ
10-5-78
ಬಂಪರ್ ಬಹುಮಾನ
ಲಕ್ಷ ರೂ.ಗಳು
(ಎಲ್ಲಾ ಶ್ರೇಣಿಗಳಿಗೂ ಅನ್ವಯ)
5 ಮೊದಲನೆಯ ಬಹುಮಾನಗಳು
ರೂ. 1,00,000
6 ಎರಡನೆಯ ಬಹುಮಾನಗಳು
ರೂ. 10,000
10 ಮೂರನೆಯ ಬಹುಮಾನಗಳು
ರೂ. 5,000
50 ನಾಲ್ಕನೆಯ ಬಹುಮಾನಗಳು
ರೂ. 1,000
140 ಐದನೆಯ ಬಹುಮಾನಗಳು
ರೂ. 500
700 ಆರನೆಯ ಬಹುಮಾನಗಳು
ರೂ. 100
7,000 ಏಳನೆಯ ಬಹುಮಾನಗಳು
ರೂ. 20
70,000 ಎಂಟನೆಯ ಬಹುಮಾನಗಳು
ರೂ. 10
ಅತ್ಯಾಕರ್ಷಕವಾದ ರೂ. 26,30,000
ಮೌಲ್ಯದ 77,911 ಬಹುಮಾನಗಳು
(5 ಶ್ರೇಣಿಗಳಲ್ಲಿ)
ರೂ.2/-
ಪ್ರತಿ ಟಿಕೆಟ್ಟಿಗೆ
ಮೈಸೂರು ಸೇಲ್ಸ್ ಇಂಟರ್‌ನ್ಯಾಶನಲ್ ಲಿಮಿಟೆಡ್ ಬೆಂಗಳೂರು-560 052.

ಎಂದು ಒಪ್ಪಿದೆ ನಾನು. ಈಗ ನಮಗೆ ತೋಟದ ವಿಚಾರ ಹಿಂದಾಗಿ ಕೋಳಿಯ ವಿಷಯ ಮುಂದಿದ್ದಂತಿತ್ತು.

ಲಲಿತಳಿಗಾಗಿ ಶುಕ್ರವಾರ ಬೆಳಿಗ್ಗೆ ಎಂಟು ಗಂಟೆಗೆ ಡಾಕ್ಟರು ಲಕ್ಷ್ಮ ಹೊತ್ತು ಕೊಟ್ಟಿದ್ದರು. ಅದಕ್ಕಾಗಿ ನಾವು ಏಳೂಕಾಲರ ಬಸ್ ಹಿಡಿಯಲು ಹೋಗುತ್ತಿದ್ದಾಗ, ಆರು ಕಾಂಪೌಂಡ್ ಆಚೆ ಸೌದೆ ಅಂಗಡಿಯ ಅಂಗಳದಲ್ಲಿ ಹುಂಜಗಳ ಕಾಳಗ ಕಣ್ಣಿಗೆ ಬಿದ್ದಿತು. ಇನ್ನೂ ನಾಲ್ಕು ಜನ ನೋಡುತ್ತಿದ್ದರು. ಒಂದು ಕಪ್ಪು ಕಂತ್ರಿ ಹುಂಜ, ಇನ್ನೊಂದು ಹಳದಿ–ಹೌದು, ಶಾಂತಪ್ಪನವರದೇ, ಇಲ್ಲಿಯವರೆಗೂ ಬಂದುಬಿಟ್ಟಿತ್ತು. ಎರಡೂ ನೆಗೆನೆಗೆಯುತ್ತ ಹಾರುಹಾರುತ್ತ ಒಂದನ್ನೊಂದು ಕುಕ್ಕುತ್ತಿದ್ದವು. ಪುಕ್ಕ ಹರಿದು ಹಾರುತ್ತಿತ್ತು. ರಕ್ತ ಸೋರುತ್ತಿತ್ತು. ಭೀಕರ ಕಾಳಗ. ಪತ್ತಿರದಲ್ಲೇ ಬಿಳಿಯ ಹೇಂಟೆ ಕಂದು ಹೇಂಟೆಗಳೆರಡು ಆರಾಮವಾಗಿ ತಮ್ಮ ಪಾಡಿಗೆ ತಾವು ಎನ್ನುವಂತೆ ನೆಲ ಕುಕ್ಕಿ ಕಾಳು ಹುಳ ಅರಸುತ್ತ ನುಂಗುತ್ತಿದ್ದವು.

ನಮ್ಮ ಕಾಲು ನಿಧಾನಿಸಿತು. ಆ ಕ್ಷಣದಲ್ಲೇ ಕಾಳಗ ಮುಗಿದುಹೋಯಿತು. ಕಪ್ಪು ಹುಂಜ ವೈರಿ ದಾಳಿಯನ್ನು ತಡೆದುಕೊಳ್ಳಲಾರದೆ ಹಿಂತಿರುಗಿ ಓಟ ಕಿತ್ತಿತು. ಹಳದಿ ಹುಂಜ ಅದನ್ನು ಸ್ವಲ್ಪ ದೂರ ಅಟ್ಟಿಸಿಕೊಂಡು ಹೋಗಿ ಅದು ದೂರ ಫರಾರಿಯಾಗುತ್ತಿದ್ದಂತೆ ತಟ್ಟನೆ ದಿಕ್ಕನ್ನು ಬದಲಾಯಿಸಿ ಈಗ ಹೇಂಟೆಗಳ ಕಡೆಗೆ ತಿರುಗಿತು. ಅದನ್ನರಿತು ಕೊಕ್‌ಕೊಕ್ ಎನ್ನುತ್ತ ದಿಕ್ಕು ಕೆಟ್ಟು ಓಡುತ್ತಿದ್ದ ಹೇಂಟೆಗಳಲ್ಲಿ ಬಿಳಿಯದನ್ನು ಹುಂಜ hundred meters dashನಂತೆ ವೇಗವಾಗಿ ಹಿಂಬಾಲಿಸಿ ಹಾರಿ ಕುಕ್ಕಿ ಹಿಡಿದು ಅದರ ಮೇಲೆ ಅತ್ಯಾಚಾರ–ಕುಕ್ಕುಟಾಚಾರವೆಸಗಿ ಕ್ಷಣದಲ್ಲಿ ತನ್ನ ಕಾಮಬಾಧೆಯನ್ನು ನೀಗಿಕೊಂಡಿತು. ಅದರ ದೃಷ್ಟಿ ಇನ್ನೊಂದು ಕಡೆಗೆ ತಿರುಗುವಷ್ಟರಲ್ಲಿ ಶಾಂತಪ್ಪನವರ ಮಗ ಬಂದು, "ಓಹೋ, ಇವತ್ತು ಇಲ್ಲಿವರೆಗೂ ಬಂದುಬಿಟ್ಟಿದೇ!" ಎನ್ನುತ್ತ ಬಡ ಹುಂಜವನ್ನು ಓಡಾಡಿ ಹಿಡಿದುಕೊಂಡು ಹೋದ– ಈವರೆಗಾಗಲೆ ಎಷ್ಟೋ ಬಾರಿ ಅಲ್ಲಿಂದ ಇಲ್ಲಿಂದ ಎಲ್ಲೆಲ್ಲಿಂದಲೋ ಹಿಡಿದುಕೊಂಡು ಹೋಗಿದ್ದನಂತೆ. ಹಾಗೆ ಕಾದಾಡಿ ರಕ್ತ ಸುರಿಸಿ ವಿಜಯ ಗಳಿಸಿದ್ದ ಕುಕ್ಕುಟ ಸಮ್ರಾಟನಿಗೆ ಸಿಕ್ಕಿದ್ದು ಒಂದು ಗುಟುಕು ಮಾತ್ರ.

ನಾವು ಡಾಕ್ಟರಲ್ಲಿಂದ ಇಂದ್ರಭವನಕ್ಕೆ ಭೇಟಿ ಕೊಟ್ಟು 'ಚಾಮುಂಡೇಶ್ವರಿ'ಯಲ್ಲಿ ಬೆಳಗಿನ ಪ್ರದರ್ಶನ 'ಬಂಗಾರದ ಮನುಷ್ಯ' ನೋಡಿಕೊಂಡು ಬಸ್‌ಗೆ ಕಾಯ್ದು ಮತ್ತೆ ಜಯನಗರವನ್ನು ತಲುಪುವ ಹೊತ್ತಿಗೆ ಮಧ್ಯಾಹ್ನ ಒಂದೂ ಐವತ್ತು ಆಗಿತ್ತು. ಮನೆಯ ಕಡೆಗೆ ಬರುತ್ತಿದ್ದಾಗ ನನ್ನ ದೃಷ್ಟಿ ಅದೇ ಸೌದೆ ಅಂಗಡಿಯ ಅಂಗಳಕ್ಕೆ ಹೋಯಿತು. ಅಲ್ಲಿ ಕಪ್ಪು ಹುಂಜ ತನ್ನ ಪ್ರೇಯಸಿಯರೊಂದಿಗೆ ವಿಜೃಂಭಿಸುತ್ತಿತ್ತು. ಕೂಡಲೆ ನನಗೆ ಬೆಳಿಗ್ಗೆಯ ಕಾಳಗ, ನಮ್ಮ ಹಳದಿ ಹುಂಜದ ಮಹಾವಿಜಯ, ಅದಕ್ಕೆ ಸಿಕ್ಕಿದ್ದ ಕ್ಷಣಿಕ ಸುಖ ಮನಸ್ಸಿಗೆ ಬಂದವು.

"ಹ್ಹಾ!" ನಾನು ತಟ್ಟನೆ ನಿಂತೆ ಅಲ್ಲೆ.

"ಏನು? ಏನಾಯ್ತು?" ಲಲಿತ ನನ್ನನ್ನೇ ನೋಡುತ್ತ ಪ್ರಶ್ನಿಸಿದಳು.

"ನಂಗೆ ಒಂದು 'ಬ್ರೇನ್ ವೇವ್(ಮಿದುಳು ಮಿಂಚು)' ಬಂದಿದೆ!"

"ಅಂದ್ರೆ? ಯಾವ ವಿಚಾರದಲ್ಲಿ?"

"ನಮ್ಮ ಹಳದಿ ಹುಂಜ, ನೆರೆಹೊರೆ ವಿಚಾರದಲ್ಲಿ."

"ಏನು ಅಂಥಾದ್ದು?"

"ಇಲ್ಲಿ ಬೆಳಗಿನ ಕಾಳಗ ನೆನಪಿದೆಯಲ್ಲ?"

"ಹುಂ."

"ನಿನ್ನೆ ನೀನು ಅಂದದ್ದೂ ನೆನಪಿದೆಯೆ?"

"ಏನು?"

"ಹುಂಜ ಅರಚಿಕೊಳ್ಳೋದು ಕೇಳೋದಕ್ಕಾಗೋದಿಲ್ಲಾಪ್ಪಾ, ಅದನ್ನು ನೋಡೋದಕ್ಕೂ ಆಗೋದಿಲ್ಲ. ಹೆಣ್ಣು ಕೋಳಿಗೆ ಗೋಳಾಡ್ತಾ ಇದ್ರೆ, ಅದನ್ನು ಇಲ್ಲೇ ಎಲ್ಲಿಂದಾದ್ರೂ ಅವರು ಬೇಗ ತಂದರಾದೀತು–ಇನ್ನೂ ಎರಡು ದಿನ ತಡ ಮಾಡೋದು ಬಿಟ್ಟು ಅಂತ."

"ಹುಂ, ತರೋದೇ ಅಂತ ಆದ ಮೇಲೆ ಭಾನುವಾರ ಹಳ್ಳಿಗೆ ಹೋಗಿ ಬರೋವರೆಗೂ ಕಾಯುವ ಮುಂಚೆಯೇ ತಂದ್ರೆ ಆ ಬಡ ಮುಂಡೇಮುಹುಂಜದ ಗೋಳನ್ನಾದ್ರೂ ಅಷ್ಟು ತಪ್ಪಿಸಬಹುದಲ್ಲ ಅಂತ ಅಂದೆ."

"ನಾವೇ ಈಗ ಒಂದು ಹೆಣ್ಣು ಕೋಳೀನ ತಗೊಂಡು ಹೋಗಿ..."

"ಆ!"

"ಹುಂ, ಅವರಿಗೆ ಉಡುಗೊರೆ ಕೊಟ್ಟರೋ?"

"ನಾವೇ! ಕೋಳಿ ತಗೊಂಡು ಹೋಗೋದೇ!"

"ಯಾಕೆ? ಬರಿ ತಗೊಂಡು ಹೋಗಬಾರದೇ?"

"ಅವರಿಗೆ, ಅವರಂಥೋರಿಗೆ ಉಡುಗೊರೆ ಕೊಡೋದೇ! ಚೆನ್ನಾಯ್ತು, ಚೆನ್ನಾಯ್ತು!"

"ಹುಂ, ಏನು ತಪ್ಪು? ನಾವು ಹೇಗೂ ಗಾಂಧೀ ವಾದಿ ಕ್ರೈಸ್ತವಾದಿಗಳು, ಹೌದಲ್ವೊ?..."

"ಅದೇನೋ ಕಾಣೆ."

"ನೀನಲ್ಲ-ಗೊತ್ತು; ನಾನು ಅಂತ ಇಟ್ಟುಕೊ."

"ಬೇಡ್ರಿ ಕಣ್ರಿ, ಅವರ-ಆ ಜಗಳಗಂಟಮ್ಮನ ಹತ್ರ ಅಷ್ಟು ಕಾದಾಡಿ..."

"ನೀನೇನು ಕಡಿಮೆ ಅವರಿಗೆ? ಪೀಟಿಪೀಟಿ ಆಯ್ತು ಅಂದುಕೊ."

"ಈಗ ನಾವು ಸೋತೋರ ಹಾಗೆ ತಪ್ಪು ಕಾಣಿಕೆ ತಗೊಂಡು ಅವರ ಮನೆ ಬಾಗಿಲಿಗೆ ಹೋಗಿ..."

"ಛಿ ಛಿ. ಅದೆಲ್ಲ ಸರಿಯಲ್ಲ, ಯೋಚನೆ. ಸ್ನೇಹ ದಲ್ಲಿ ಸೋಲು ಅನ್ನೋದು ಎಲ್ಲಿ? ಸೋಲು ಅಂದರೂ ಸ್ನೇಹಕ್ಕಾಗಿ ಸೋಲೋದರಲ್ಲಿ ಅವಮಾನ ವಿಲ್ಲ, ತಿಳಿದುಕೊ. ಅವರು ಹೇಗೆ ಬೇಕಾದರೂ ತಿಳಿದುಕೊಳ್ಳಲಿ. ನಮ್ಮದು ಸರಿಯಾದ ದಾರಿ. ಡ್ರಾಮ್ಯಾಟಿಕ್ ಆಗಿಯೂ-ವಿಶಿಷ್ಟ ಅನ್ನೋಣ- ಇರುತ್ತೆ, ಚೆನ್ನಾಗಿ!"

"ಏನೋಪ್ಪ. ನಂಗಂತೂ ಇದು ಹಾಗೆ ಹಾಗೇ."

"ನೀನು ಸರಿಯಾಗಿ ಯೋಚಿಸಿಲ್ಲ. ಆ ಇದರ ಸುತ್ತ ಮುತ್ತ ನೋಡು, ಇದರಿಂದ ಒಂದೇ ಏಟಿಗೆ ಎರಡು ಕಾಯಿ-ಉಹುಂ, ಮೂರು, ಕಾಯಿ ನಾಲ್ಕು, ಎಷ್ಟೋ ಏನೋ, ಉದುರಿಸಿದ ಹಾಗೆ ಆಗುತ್ತೆ- ಕೇವಲ ವ್ಯಾವಹಾರಿಕವಾಗೇ ನೋಡಿದರೂ... ಒಂದು, ಅವರು ಎಷ್ಟಾದರೂ ನೆರೆಹೊರೆ, ಅವರ ಸ್ನೇಹ ಸಂಪಾದಿಸಿದಂತೆ ಆಗುತ್ತೆ..."

"ಹೂಂ, ಅವರೇ, ಇದನ್ನು ತಿಳಿದುಕೊಂಡು ಸ್ನೇಹವಾಗಿರೋರೂ? ಅವರಲ್ಲೂ ಆಕೆ? ನಿಮಗೆ ಭ್ರಾಂತಿ."

"ಏನಾದರೂ ಈಗಿನ ಮನಸ್ತಾಪ ಎಷ್ಟೋ ಕಡಿಮೆ ಆಗೇ ಆಗುತ್ತೆ, ನೋಡ್ತಾ ಇರು."

"ಏನೋ, ನಂಗಂತೂ ಅನುಮಾನ."

"ಎರಡನೆಯದಾಗಿ ನಮ್ಮ ರೀತಿಯಿಂದ ಅವರು ನಾಚಿ ಕರಗಿ ಇನ್ನು ಮುಂದಾದರೂ ಕೋಳಿಗಳು ನಮ್ಮ ಕಾಂಪೌಂಡಿಗೆ ಬರದಂತೆ ನೋಡಿಕೊಳ್ಳ ಬಹುದು. ಆಗ ನಾವು ತೋಟಾನ ಮತ್ತೆ..."

"ಹೂಂ ಹುಂ. ನೀವು ಮಾಡಿದ್ದಕ್ಕೆ ಸುಮ್ಮನೆ ಅವರು ಕರಗಿ ನಾಚಿ ನೀರಾಗಿ ನೋಡಿಕೋತಾರೆ, ಬಾ ಅಂತ. ಅಂಥ ಜನವೇ ಸರಿ! ನೋಡ್ತಾ ಇರಿ. ಕೋಳಿಗಳು ಯಥಾಪ್ರಕಾರ..."

"ಬಂದು ಹೋಗಲಿ ಬಿಡು. ಹೇಗೂ ಈಗ ತೋಟದ ಯೋಗವಿಲ್ಲವೋ? ನಾಳೆ ಅವರು ಒಂದು ಹೆಣ್ಣು ಕೋಳಿ ಬದಲು ನಾಲ್ಕು ತಂದರೆ? ಆಗ ಹೊಲಸು ತೊಂದರೆ ಇನ್ನೂ ಹೆಚ್ಚೋ? ಅದನಾ ದರೂ ಅಷ್ಟು ತಪ್ಪಿಸಬಹುದೋ-ಹೆಚ್ಚೇನೂ ಆಗದಿದ್ದರೂ?"

"ಹುಂ... ಅದೇನೋ ಆಗಬಹುದು ಅನ್ನಿ" ಲಲಿತ ರಾಗ ಎಳೆದಳು.

"ಮತ್ತೆ ಸ್ಯಮಂತಕಮಣಿ ತಂದು ಹಿಂತಿರುಗಿಸಿ' ಈಗ ಬಂದಿರೋ ಅಪವಾದದಿಂದಲೂ ತಪ್ಪಿಸಿ ಕೊಂಡ ಹಾಗೆ ಆಗುತ್ತೋ?"

"ಪ್ಶ! ಅದಕ್ಕೆಲ್ಲ ಹೆದರ್ತೀನೇ? ಆಗಲೇ ದಬಾಯಿಸಿದೀನಿ."

"ಆದರೇನು, ಅವರು ಅಲ್ಲಲ್ಲಿ ಹೇಳಿ ಆಗೋದು ಆಗಿಹೋಗಿದೆಯೋ,"

"............"

"ಅದನ್ನು ಅಷ್ಟು ಸರಿಪಡಿಸಬಹುದೋ- ಎಲ್ಲರಿಗೂ, ಇದು ಈ ನಮ್ಮ ನಡತೆ, ಉಡುಗೊರೆ ಗೊತ್ತಾದರೆ?"

"ಗೊತ್ತಾಗಬೇಕಲ್ಲ-ಅವರು ಹೇಳಿಕೊಂಡಾರೇ?"

"ನಾವೇ ಪ್ರಚಾರ ಮಾಡಿದರಾಯ್ತು."

"ಅದೇನೋ ಮಾಡಬಹುದು, ಅನ್ನಿ."

"ನೋಡಿದೆಯಾ ಎಷ್ಟು ಲಾಭ!"

"ಹೌದು ಹೌದು! ಬಹಳ ಬಹಳ! ಹುಂ!" ಲಲಿತಳ ವ್ಯಂಗ್ಯ ಹೂಂಕಾರ.

"ಏನೂ ಲಾಭವೇ ಇಲ್ಲ, ಏನೇನೂ ಆಗೋದೇ ಇಲ್ಲ ಅಂತಲೇ ಇಟ್ಟುಕೋ. ನಾವು ನೆರೆಹೊರೆ ಯಲ್ಲಿ ಮಾಡಬಹುದಾದಷ್ಟು ಪ್ರಯತ್ನವನ್ನೆಲ್ಲ- ಇನ್ನು ಯಾರೂ ಮಾಡದಿರುವಷ್ಟು-ಮಾಡಿ


ನಮ್ಮ ನೆರೆಮನೆಯವರು, ಇಡೀ
ಮನೆಗೆ ಇಮಲ್ಶನ್ ಪೇಂಟ್
ಮಾಡಿಸಿದರು; ನಾವೂ ಮಾಡಿಸಿದೆವು—
ಆದರೆ, ನಾವು ಮಾತ್ರ 20% ಕ್ಕಿಂತ
ಹೆಚ್ಚು ಹಣ ಉಳಿಸಿದೆವು.
ಸುಪರ್ ಡೆಕೋಪ್ಲಾಸ್ಟ್—
ಉತ್ತಮ ಇಮಲ್ಶನ್ ಫಿನಿಶ್
ತರುವ ಜಾಣ ಉಪಾಯ.
DECOPLAST
"ಮೋಜು ಕೇಳಿ. ನಮ್ಮ ಹಾಗೂ ನಮ್ಮ ನೆರೆಯವರ ಮನೆ ಅಷ್ಟೇ ದೊಡ್ಡವಿವೆ. ಅಷ್ಟೇ ಅಂದರೆ— 120 ಚದುರ ಮೀಟರ್ ಇವೆ. ಅವರು ಯಾರನ್ನೂ ಕೇಳದೇ ಪೇಂಟ್ ಮಾಡಿಸಿದರು. ನಾವು ಸ್ವಲ್ಪ ಚೌಕಶಿ ಮಾಡಿ ಪೇಂಟ್ ಮಾಡಿಸಿದೆವು. ಅವರು ಹೆಚ್ಚು ಹಣ ವೆಚ್ಚ ಮಾಡಿದರು. ನಾವು ಮಾತ್ರ 20% ಕ್ಕಿಂತ ಹೆಚ್ಚು ಉಳಿತಾಯ ಮಾಡಿದೆವು. ಬಲ್ಲವರಿಂದ ಕೇಳಿದ್ದರಿಂದಲೇ ನಾವು ಸುಪರ್ ಡೆಕೋಪ್ಲಾಸ್ಟೇ ಬೇಕು ಅಂದದ್ದು."
ಏಶಿಯನ್ ಪೇಂಟ್ಸ್
ಸುಪರ್
ಡೆಕೋಪ್ಲಾಸ್ಟ್

ವಂತಾಯಿತೋ? ಆ ತೃಪ್ತಿಯಾದರೂ ಇರುತ್ತೊ?

"ಅದೇನೋ ನಂಗೆ ಗೊತ್ತಿಲ್ಲ. ಬೇಕಾದರೆ ಮಾಡಿ. ಇಷ್ಟಕ್ಕೂ ಅವರು ಕೋಳೀನ ತಗೋತಾರೇ ನಮ್ಮಿಂದ?"

"ಯಾಕಿಲ್ಲ ಯಾಕಿಲ್ಲ. ನಾನು ಕೊಟ್ಟೇ ಕೊಡ್ತೀನಿ, ಅವರು ತಗೊಳ್ಳೋ ಹಾಗೆ ಮಾಡೇ ಮಾಡ್ತೀನಿ, ನೋಡ್ತಾ ಇರು."

ನಾವು ಸೌದೆ ಅಂಗಡಿಯವನ ಆಶ್ಚರ್ಯ ಕುತೂಹಲ ಪ್ರಶ್ನೆಗಳಿಗೆ ಉತ್ತರ ಕೊಟ್ಟು, ಬಿಳಿ ಹೇಂಟೆಯನ್ನು ಹನ್ನೆರಡು ರೂಪಾಯಿಗೆ ವ್ಯಾಪಾರ ಮಾಡಿ, ಅದರ ಕಾಲು ಕಟ್ಟಿಸಿ, ಅವನ ಕೈಚೀಲವೊಂದಕ್ಕೆ ಹಾಕಿಸಿಕೊಂಡು ಹೊರಟೆವು.

ಶಾಂತಪ್ಪನವರ ಮನೆಯನ್ನು ಸಮೀಪಿಸಿದಾಗ ಅವರು ವರಾಂಡಾದಲ್ಲಿ ಎಲೆಯಡಿಕೆ ಜಗಿಯುತ್ತ ನಿಂತಿದ್ದು ಕಾಣಿಸಿತು. ಅವರೇನು ಇನ್ನೂ ಕೋರ್ಟಿಗೆ ಹೋಗಿಯೇ ಇರಲಿಲ್ಲವೋ, ಹೋಗಿ ಆಗಲೆ ಬಂದುಬಿಟ್ಟಿದ್ದಾರೋ ಹೇಗೊ.

"ಬಾ, ಹೋಗೋಣ" ತಗ್ಗು ಸ್ವರದಲ್ಲಿ ಲಲಿತಳಿಗೆ ಹೇಳಿದೆ–ಅವರ ಗೇಟಿನ ದಿಕ್ಕಿಗೆ ನಡೆಯುತ್ತ.

"ಇಲ್ಲಾಪ್ಪ, ನೀವೇ ಹೋಗಿಬನ್ನಿ" ಅವಳ ಮೊಂಡಾಟ.

"ನೋಡು, ಬಾ ಅಂದ್ರೆ ಬರಬೇಕು ಇಬ್ಬರೂ ಹೋದರೆ ಚೆನ್ನ" ಅವಳ ಕೈ ಜಗ್ಗಿ ಎಳೆದುಕೊಂಡೇ ಹೋದೆ.

"ನಮಸ್ಕಾರಾ!" ನಾನು ಹಲ್ಲು ಬಿಟ್ಟು ನಗುತ್ತ ನಿಜವಾದ ಸ್ನೇಹದಿಂದ ಹೇಳಿದೆ.

"ನಮಸ್ಕಾರ. ಬನ್ನಿ ಸಾರ್" ಶಾಂತಪ್ಪನವರೂ ನಸುನಗುತ್ತಲೇ ಆಹ್ವಾನಿಸಿದರು.

ಒಳಗೆ ಹಾಲ್ ನಡುಮನೆಗಳ ಮಧ್ಯದ ಬಾಗಿಲಲ್ಲಿ ನಿಂತಿದ್ದ ಶ್ರೀಮತಿ ಶಾಂತಪ್ಪನವರು ಲಲಿತಳ ಕಡೆಗೆ ನೋಡಿ, "ಬನ್ರೀ" ಎಂದಾಗ ನನಗೇ ಆಶ್ಚರ್ಯವಾಯಿತೆಂದರೆ ಲಲಿತಳಿಗೆ ಹೇಗಾಗಿರಬೇಡ?

ನಾವು ಹಳೆಯ ಬೆತ್ತದ ಕುರ್ಚಿಗಳ ಮೇಲೆ ಕುಳಿತುಕೊಳ್ಳುತ್ತ ನಾನು ಕೈಚೀಲವನ್ನು ಕೆಳಗಿಟ್ಟಾಗ ಅದರೊಳಗೆ ಕೋಳಿ ರೆಕ್ಕೆ ಬಡಿದು ಕ್ಕೊಕ್ಕೊಕ್ ಎಂದು ಒದ್ದಾಡಿತು.

"ಆ! ಇದೇನು ಸಾರ್, ನೀವು ಇದನ್ನು..." ಪಕ್ಕದಲ್ಲಿದ್ದ ಶಾಂತಪ್ಪ ಅನುಮಾನ ಕುತೂಹಲಗಳಿಂದ ಕೇಳಲು ಬಾಯಿ ತೆಗೆದರು.

ಶ್ರೀಮತಿ ಶಾಂತಪ್ಪನವರೂ ಹುಬ್ಬು ಹತ್ತಿರ ತಂದು ತೀಕ್ಷ್ಣವಾಗಿ ನೋಡಿದರು. ಅವರ ಮಗ ರಾಜಪ್ಪ ಹತ್ತಿರ ಬಂದು ಚೀಲದೊಳಗೇ ಇಣಿಕಿ "ಓ, ಹೆಣ್ಣು ಕೋಳಿ!" ಎಂದ.

"ಹುಂ, ಹೌದು" ಎಂದು ನಸುನಕ್ಕು ಚೀಲವನ್ನು ಶಾಂತಪ್ಪನವರ ಹತ್ತಿರಕ್ಕೆ ಸರಿಸುತ್ತ "ನಿಮಗೆ, ಅಲ್ಲ. ನಿಜವಾಗಿ ನಿಮ್ಮ ಹುಂಜನಿಗೆ ಒಂದು ಉಡುಗೊರೆ ತಂದಿದೀವಿ–ಆ ಹೆಣ್ಣು ಕೋಳಿ ಕಳುವಾದ ಮೇಲೆ ನಿಮ್ಮ ಒಂಟಿ ಹುಂಜದ ಸಂಕಟ ನೋಡಿ ಸಹಿಸಲಾರದೆ ಅದಕ್ಕೊಂದು ಜತೆಗಾತಿ ಇರಲಿ ಅಂತ ಈ ಹೇಂಟೇನ, ಹ್ಹ! ದಯವಿಟ್ಟು ಸ್ವೀಕರಿಸ..."

ಶಾಂತಪ್ಪ, ಶ್ರೀಮತಿ ಶಾಂತಪ್ಪ ಅಗಲವಾಗಿ ಕಣ್ಣು ಬಿಟ್ಟು ಒಬ್ಬರನ್ನೊಬ್ಬರು ನೋಡಿಕೊಂಡು ನಸುನಕ್ಕರು, ಮರು ಕ್ಷಣದಲ್ಲಿ ಗಂಭೀರವಾದರು. ನನ್ನ ಮಾತು ಪೂರ್ತಿಯಾಗದೆ ನಿಂತಿತು.

"ಅಪ್ಪ ಹುಂಜಾನ ಕುಯ್ದುಬಿಟ್ರು ಇವತ್ತು, ಹುಟ್ಟಿದ ಹಬ್ಬಕ್ಕೇಂತ.

"ಆ!" ನಾನು ಬಾಯಿ ಬಿಟ್ಟುಕೊಂಡು ಉದ್ಗರಿಸಿದೆ.

"ಏನೂ!–ಅಯ್ಯೋ!" ಲಲಿತಳಿಂದ ಅಂತೆಯೇ.

ಏನೂ ಅರಿಯದಂತೆ ರಾಜ ಸಮಾಚಾರ ಕೊಟ್ಟಾಗ ಬೆರಗಾಗಿ ಅಗಲ ಕಣ್ಣು ಬಿಟ್ಟು ಒಬ್ಬರನ್ನೊಬ್ಬರು ನೋಡಿಕೊಳ್ಳುವುದು ನಮ್ಮಿಬ್ಬರ ಸರದಿಯಾಯಿತು. ಮುಂದಿನ ಕ್ಷಣ ಮೌನದಲ್ಲಿ ನಾನು. 'ಛಿ, ಆ ಬಡ ಮುಂಡೇದರ ಪಾಡು ಕಡೆಗೂ ಹೀಗಾಯಿತೇ' ಅಂದುಕೊಂಡೆ. ಲಲಿತಳೂ ಹಾಗೆಯೇ ಮರುಗಿರಬೇಕು. ಆದರೆ ಅದನ್ನು ಅವರ ಮುಂದೆ ಹೇಳುವುದು ಸೌಜನ್ಯವಾಗಿರಲಿಲ್ಲ.

"ಹೌದು ಸಾರ್. ನೆರೆಹೊರೇಲಿ ಮನಸ್ತಾಪ ಆಗೋದು ಸರಿಯಲ್ಲ, ಹೆಣ್ಣು ಕೋಳಿ ಕಳುವಾದ್ದು ಒಳ್ಳೇದೇ ಆಯ್ತು, ಇನ್ನು ಯಾವ ಕೋಳೀನೂ ಇಟ್ಟುಕೊಳ್ಳೋದೇ ಬ್ಯಾಡ ಅಂತ ನಾನು ನನ್ನ ಹೆಂಡತಿ ಮಾತಾಡಿಕೊಂಡು..."

"ಹೌದ್ರೀ, ನಾವು ಏನೇನು ಮಾಡಿದ್ರೂ ಹೇಗೋ ಹಾಳಾದೋವು ನಿಮ್ಮ ಕಡೇಗೆ ಬಂದುಬಿಡ್ತಾ ಇದ್ವು. ಏನು ಮಾಡೋದ್ರಿ." ಶ್ರೀಮತಿ ಶಾಂತಪ್ಪ ಲಲಿತಳ ಕಡೆಗೆ ನೋಡುತ್ತ ಹೇಳಿದರು.

"ಅಯ್ಯೋ, ಅದೇನು ಮಹಾ ಬಿಡಿ. ಬಂದ್ರೆ ಬರ್ತಾ ಇದ್ವು. ಇಷ್ಟಕ್ಕೂ ನಾವು ಅಂಥಾ ತೋಟ ತುಡಿಕೆ ಮಾಡಿ ಏನಾಗಬೇಕಾಗಿತ್ತು?" ಲಲಿತಳ ಮಾತನ್ನು ಕೇಳಿ ನನಗೆ ಆಶ್ಚರ್ಯವಾಯಿತು. ಅದೇನು ಜಾಣತನವೋ, ನಿಜವಾಗಿ ತಟ್ಟನೆ ಇಳಿದುಹೋಗಿದ್ದಳೋ ಕಾಣೆ. "ಅಷ್ಟಕ್ಕೆಲ್ಲ, ಆ ಕೋಳಿ ಹಾಗೇ ಜಗಳ ಕಾದೆನಲ್ಲ ಅಂತ ಬೇಜಾರಾಗ್ತಾ ಇದೇರಿ" ಲಲಿತಳ ಸಂಧಾನ, ಸಮಾಧಾನ.

"ನಂಗೂ ಅಷ್ಟೇರೀ... ನಿಮಗೆ ತೊಂದ್ರೆ ಆಯ್ತು ಪಾಪ. ನಮ್ಮ ಯಜಮಾನ್ರೂ ಅಂದ್ರು, ಹೋದ ಹೋದ ಕಡೇಲೆಲ್ಲ ಸಣ್ಣ ಪುಟ್ಟದ್ದಕ್ಕೆ ನೆರೆಹೊರೇಲಿ ಜಗಳ, ಕದನ ಮಾಡೋದು ಸರಿಯಿಲ್ಲ ಅಂತ. ಅದು ಸರಿಯೇ ಸರಿ ಅನ್ನಿ."

"ಇವರೂ ಮೊದಲಿಂದಲೂ ಹಾಗೇ ಅನ್ನಾತ ಇದ್ರು. ಎನಾಗ್ಲಿ ಹೋಗ್ಲಿ ನೆರೆಹೊರೆ ಸ್ನೇಹಸಂಬಂಧಕ್ಕಿಂತ ಹೆಚ್ಚೇನೂ ಇಲ್ಲ ಅಂತ. ಅದಕ್ಕೇ ಈ ಹೆಣ್ಣು ಕೋಳಿ ಕೊಡೋಣ, ಎಲ್ಲ ಸರಿಮಾಡಿಕೊಳ್ಳೋಣ ಅಂದಾಗ ನಾನೂ ಒಪ್ಪಿಕೊಂಡೆ, ಸರಿ ಅಂತ."

ಈ ಹೆಂಗಸರ 'ಟಾಪ್ಸಿಟರ್ವಿ' ಮಾತು ಮುಗಿಯುವುದಿಲ್ಲವೆಂದು ಅದೇ ಸಮಯವನ್ನು ಸಾಧಿಸಿ "ಈ ಹೆಣ್ಣು ಕೋಳಿ ತಂದೆವಲ್ಲ ಮತ್ತೆ ಅದಕ್ಕೇನು ಮಾಡೋದು? " ಎಂದೆ ಶಾಂತಪ್ಪನವರನ್ನು ನೋಡುತ್ತ.

"ಅದಕ್ಕೇನು, ಅದನ್ನೂ ಉಪಯೋಗಿಸಿಕೊಂಡು ಬಿಡ್ತೇವೆ, ಇನ್ನೇನು ದುರ್ಗಾಷ್ಟಮಿ ಬಂತಲ್ಲ" ಶ್ರೀಮತಿ ಶಾಂತಪ್ಪನವರಿಂದ ಬಂದಿತು ಉತ್ತರ.

"ಹುಂ, ಹುಂ. ಅಷ್ಟೆ. ಅದಕ್ಕೆ ಎಷ್ಟು ಕೊಟ್ರಿ ತಾವು?" ಶಾಂತಪ್ಪ ಕೇಳಿದರು.

ಮುಂದೆ ನಾವು ಆಡಿದ್ದು, ನಡೆದದ್ದು ಎಲ್ಲ ಸದ್ಯಕ್ಕೆ ಅಪ್ರಕೃತ...


ಈಗ ಒಂದಲ್ಲ ಎರಡು ನಂದನವನವಾಗಿವೆ. ನಾವು ಹುರುಳಿಕಾಯಿ ಕೊಟ್ಟರೆ ಅವರು ಬೆಂಡೆಕಾಯಿ ಕೊಡುತ್ತಾರೆ. ಲಲಿತ ಒಂದೆರಡು ಗುಲಾಬಿ ಕೊಟ್ಟರೆ ಶ್ರೀಮತಿ ಶಾಂತಪ್ಪ–ಚೆನ್ನಮ್ಮ–ದುಂಡು ಮಲ್ಲಿಗೆ ದಂಡೆಯ ಚೂರನ್ನೇ ಇವಳಿಗೆ ಕೊಡುತ್ತಾರೆ. ಮಧ್ಯದ ಗೋಡೆಯ ಆಚೀಚೆಯೇ ನಿಂತು-ಸಂಜೆ ಮನೆಗಳಲ್ಲಿ ಭೇಟಿಯಿಲ್ಲದೆ–ಹೆಂಗಸರ ಹರಟೆ ಹೊತ್ತು ಗೊತ್ತಿಲ್ಲದೆ ಸಾಗಿಯೇ ಸಾಗುತ್ತದೆ. ನಾನು ಆಕ್ಷೇಪಿಸಿದರೆ, ನಾನು ಶಾಂತಪ್ಪ ಅವರಿಗೇನೇನೂ ಕಡಿಮೆಯಿಲ್ಲ, ಇನ್ನೂ ಒಂದು ತೂಕ ಹೆಚ್ಚೇಯೆ ಎಂದು ಲಲಿತಾ ದಬಾಯಿಸುತ್ತಾಳೆ... ಇಂದೂ ಕೋಳಿ ನೆನಪು ನಿಟ್ಟುಸಿರು ತರುತ್ತಿರುತ್ತದೆ.

ಎಂಬಲ್ಲಿಗೆ ಕುಕ್ಕುಟ ಯುದ್ಧ ದ್ವಿತೀಯಾಧ್ಯಾಯಂ ಸಂಪೂರ್ಣಂ. ✡



Printed & published by P. S. Bhat for the Jayakarnataka News Printers Private Ltd. at the Samyukta Karnataka Press, Koppikar Road, Hubli, 580020. Rep: Bombay: V. Satyamurthy Phone: 522412; Calcutta: H. Muzamdar 46-4233; Madras: A. K. Subramaniam Phone: 842201 New Delhi: P. R. Chopra Phone: 224130.

ಸಂಗೀತವು ಭಾರತೀಯ ಸಮಾಜದ ಹಾಸುಹೊಕ್ಕುಗಳಲ್ಲಿ ಬೆಳೆದಿದೆ. ಮತ್ತು ಸಾವಿರಾರು ವರ್ಷಗಳಿಗೂ ಹೆಚ್ಚಿನ ಪರಂಪರೆಹೊಂದಿದೆ. ಒಂದು ಸಂಸ್ಕೃತಿಯು ಯಾವುದನ್ನು ಆರಾಧಿಸುವುದೋ ಅದರಲ್ಲಿ ಹೇಗೆ ವ್ಯಕ್ತವಾಗುವುದೋ ಅದೇ ರೀತಿ ಭಾರತದಲ್ಲಿ ಪಕ್ಷಿ ಮತ್ತು ಪ್ರಾಣಿಗಳನ್ನು ಉಳಿದು ಎಲ್ಲ ಆರಾಧ್ಯ ದೇವತೆಗಳು ಅವರ ಸಂಗೀತದ ಉಪಕರಣಗಳೊಂದಿಗೆ ಗುರುತಿಸಲ್ಪಡುತ್ತಾರೆ. ಲೋಕರಕ್ಷಕ ವಿಷ್ಣುವಿನ ನಾಲ್ಕು ಕೈಗಳಲ್ಲಿ ಒಂದರಲ್ಲಿ ಶಂಖ, ವಿದ್ಯೆ ಮತ್ತು ಕಲೆಗಳ ಅಧಿದೇವಿ ಸರಸ್ವತಿಯ ಕೈಗಳಲ್ಲಿ ವೀಣೆ, ಕೃಷ್ಣನ ಕೈಯಲ್ಲಿ ಕೊಳಲು ಮತ್ತು ಶಿವನ ಕೈಯಲ್ಲಿ ಡಮರು ತಪ್ಪಿದ್ದಿಲ್ಲ.



ಡಮರು ಶಿವದೇವನೊಂದಿಗೆ ತಪ್ಪಿದ್ದಲ್ಲ. ಶಿವನು ತಾಂಡವನೃತ್ಯ ಮಾಡುವಾಗ ತನ್ನ ಡಮರುವನ್ನು ಹದಿನಾಲ್ಕು ಸಲ ಬಾರಿಸಿದ್ದನ್ನು. ಇದರ ಪರಿಣಾಮವಾಗಿ ವ್ಯಾಕರಣ ಶಾಸ್ತ್ರದ ಬಗ್ಗೆ ಪಾಣಿನಿ ಮಾಡಿದ ಕೆಲಸದ ಮೂಲಾಧಾರವಾದ ಹದಿನಾಲ್ಕು ಮಹೇಶ್ವರ ಸೂತ್ರಗಳು ಹುಟ್ಟಿದುವು. ಇಲ್ಲಿ ತೋರಿಸಿದ ತಬ್ಲಾದ ಮೂಲ ರೂಪ ಡಮರು.

ದಾವಣಗೆರೆ

ಉತ್ಕೃಷ್ಟ ಬಟ್ಟೆಗಳು—ಭವ್ಯ ಪರಂಪರೆ
ದಿ ದಾವಣಗೆರೆ ಕಾಟನ್ ಮಿಲ್ಸ್ ಲಿಮಿಟೆಡ್ ದಾವಣಗೆರೆ 577 002

ಶೋರೂಮ್‌ಗಳು:
ಚಿತ್ರದುರ್ಗ ರೋಡ್, ದಾವಣಗೆರೆ-577 002.
ಕಾವೇರಿ ಭವನ್, ಬೆಂಗಳೂರು-560 009.
ದಾಜಿಬನ ಪೇಟೆ, ಹುಬ್ಬಳ್ಳಿ-580 020.

THOMAS,DCM/77,B/KAN

KASTURI PRICE: 2-00 Regd. No. KRNG 43
Registered with the Registrar of Newspapers for India under No. 3633/57